ಕಲ್ಯಾಣ ಚಾಳುಕ್ಯ

ಮೂರನೆಯ ಸೋಮೇಶ್ವರನ ಜೀವನ ಮತ್ತು ಸಾಧನೆ

(ಕ್ರಿ.ಶ. ೧೧೨೬ ರಿಂದ ಕ್ರಿ.ಶ. ೧೧೩೮)

Cover Page

ಸಂಶೋಧಕರು

ಶ್ರೀ ಮಹಾಂತೇಶ ಎಂ.ಅಕ್ಕಿ

ಮಾರ್ಗದರ್ಶಕರು

ಡಾ. ಈರಣ್ಣ ಪತ್ತಾರ

ಪ್ರವಾಚಕರು
ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗದ
ಪಿಹೆಚ್.ಡಿ. ಪದವಿಗಾಗಿ ಸಾದರ ಪಡಿಸಿದ ಸಂಶೋಧನ ಮಹಾಪ್ರಬಂಧ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೨೦೦೬

ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಪ್ರಮಾಣ ಪತ್ರ

Certificate

ಶ್ರೀ ಮಹಾಂತೇಶ ಮಲ್ಲಪ್ಪ ಅಕ್ಕಿ., ಇವರು ಪಿಎಚ್.ಡಿ. ಪದವಿಗಾಗಿ ಬರೆದು ಸಾದರಪಡಿಸಿದ ''**ಕಲ್ಯಾಣ ಚಾಳುಕ್ಯ ಮೂರನೆಯ ಸೋಮೇಶ್ವರನ ಜೀವನ ಮತ್ತು ಸಾಧನೆ (ಕ್ರಿ.ಶ. ೧೧೨೬ ರಿಂದ ಕ್ರಿ.ಶ. ೧೧೩೮)**'' ಎಂಬ ಸಂಶೋಧನ ಮಹಾಪ್ರಬಂಧವು ಅವರು ಕೈಕೊಂಡ ಕ್ಷೇತ್ರಕಾರ್ಯದ ಮೇಲೆ ರಚಿತವಾದ ಮೂಲ ಸಂಶೋಧನಾ ಕೃತಿಯಾಗಿದೆ.

ಶ್ರೀ ಮಹಾಂತೇಶ ಮಲ್ಲಪ್ಪ ಅಕ್ಕಿ ಇವರು ನನ್ನ ಮಾರ್ಗದರ್ಶನದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗದಲ್ಲಿ ಸಂಶೋಧನೆ ನಡೆಸಿ ಈ ಮಹಾಪ್ರಬಂಧವನ್ನು ಸಿದ್ಧಪಡಿಸಿದ್ದಾರೆ. ಈ ಸಂಶೋಧನ ಮಹಾಪ್ರಬಂಧವು ಇಡಿಯಾಗಿ ಇಲ್ಲವೆ ಬಿಡಿಯಾಗಿ ಈ ಮೊದಲು ಎಲ್ಲಿಯೂ ಪ್ರಕಟವಾಗಿಲ್ಲವೆಂದು ಈ ಮೂಲಕ ಪ್ರಮಾಣಪತ್ರ ನೀಡುತ್ತೇನೆ.

ಮಾರ್ಗದರ್ಶಕರು

(ಡಾ.ಈರಣ್ಣ ಕೆ. ಪತ್ತಾರ)
ಪ್ರವಾಚಕರು
ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಸ್ಥಳ : ಧಾರವಾಡ
ದಿನಾಂಕ : ೦೧-೦೨-೨೦೦೬

ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಘೋಷಣಾ ಪತ್ರ

Declaration.

"ಕಲ್ಯಾಣ ಚಾಳುಕ್ಯ ಮೂರನೆಯ ಸೋಮೇಶ್ವರನ ಜೀವನ ಮತ್ತು ಸಾಧನೆ (ಕ್ರಿ.ಶ. ೧೧೨೬ ರಿಂದ ಕ್ರಿ.ಶ. ೧೧೩೮)" ಎಂಬ ಮಹಾಪ್ರಬಂಧವನ್ನು ನಾನು ಪಿಎಚ್.ಡಿ. ಪದವಿಗಾಗಿ ಡಾ. ಈರಣ್ಣ ಕೆ. ಪತ್ತಾರ., ಪ್ರವಾಚಕರು, ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ., ಇವರ ಮಾರ್ಗದರ್ಶನದಲ್ಲಿ ಸಂಶೋಧನೆ ಕೈಗೊಂಡಿದ್ದು, ಮಹಾಪ್ರಬಂಧವು ಈ ಮೊದಲು ಯಾವುದೇ ಪದವಿಗಾಗಿ ಇಡಿಯಾಗಿ ಇಲ್ಲವೇ ಬಿಡಿಯಾಗಿ ಸಾದರಪಡಿಸಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ : ಧಾರವಾಡ
ದಿನಾಂಕ : ೦೧-೦೨-೨೦೦೬

ಶ್ರೀ ಮಹಾಂತೇಶ ಮ. ಅಕ್ಕಿ
ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ನಿವೇದನೆ Acknowledgement

ಚಿಕ್ಕಂದಿನಿಂದಲೂ ನನಗೆ ಇತಿಹಾಸವೆಂದರೆ ತುಂಬಾ ಆಸಕ್ತಿದಾಯಕ ವಿಷಯವಾಗಿತ್ತು. ಇದಕ್ಕೆ ಗಳಗನಾಥರ, ತ.ರಾ.ಸು. ರವರ ಐತಿಹಾಸಿಕ ಕಾದಂಬರಿಗಳೇ ಸ್ಫೂರ್ತಿ. ಈ ಸ್ಫೂರ್ತಿಗೆ ನೀರೆರೆದವರು ನನ್ನ ತಂದೆಯವರಾದ ದಿವಂಗತ ಶ್ರೀ ಮಲ್ಲಪ್ಪನವರು. ಹೀಗಾಗಿ ಇತಿಹಾಸ ವಿಷಯದಲ್ಲಿ ಆಸಕ್ತಿ ಹುಟ್ಟಿ ಬಿ.ಎ. ತರಗತಿಯಲ್ಲಿ ಇತಿಹಾಸ ವಿಷಯವನ್ನು ಒಂದು ಐಚ್ಛಿಕ ವಿಷಯವನ್ನಾಗಿ ತೆಗೆದುಕೊಂಡು ಅಭ್ಯಾಸ ಮಾಡಿದೆನು. ಮುಂದೆ ನನ್ನ ಹಿರಿಯ ಸಹೋದರ ಶ್ರೀ ಚನ್ನಬಸಪ್ಪ ಅಕ್ಕಿಯವರ ಪ್ರೋತ್ಸಾಹದಿಂದ ಎಂ.ಎ. ಮಾಡುವ ಸದವಕಾಶ ದೊರೆಯಿತು. ಎಂ.ಎ. ತರಗತಿಗೆ ಬಂದಾಗ ಇತಿಹಾಸದ ಹೃದಯ ಭಾಗದಂತಿರುವ ಕಲೆ ಮತ್ತು ವಾಸ್ತುಶಿಲ್ಪ ವಿಷಯವನ್ನು ಅಧ್ಯಯನ ಮಾಡುವ ಮತ್ತು ಅದೇ ವಿಷಯದಲ್ಲಿ ಎಂ.ಫಿಲ್. ಮಾಡುವ ಸುವರ್ಣಾವಕಾಶ ದೊರೆಯಿತು. ನಂತರ ವಸ್ತುನಿಷ್ಠ ಸಂಶೋಧನೆಯಲ್ಲಿ ತೊಡಗಬೇಕೆಂಬ ಉತ್ಕಟಾಪೇಕ್ಷೆಯಿಂದ ನನ್ನ ಪೂಜ್ಯ ವಿದ್ಯಾಗುರುಗಳಾದ ಡಾ. ಈರಣ್ಣ . ಕೆ. ಪತ್ತಾರರವರಲ್ಲಿ ವಿನಂತಿಸಿಕೊಂಡಾಗ ಅವರು ಶಾಸನಗಳ ಕುರಿತಾಗಿ ಅಭ್ಯಾಸ ಮಾಡುವಂತೆ ನನ್ನನ್ನು ಪ್ರೋತ್ಸಾಹಿಸಿದರು. ಹೀಗಾಗಿ ನಾನು ಪಿಎಚ್.ಡಿ. ಸಂಶೋಧನಾ ಕಾರ್ಯದಲ್ಲಿ ತೊಡಗಲು ಸಾಧ್ಯವಾಯಿತು. ಅಲ್ಲದೆ ಅವರು ಈ ಸಂಶೋಧನಾ ಕಾರ್ಯ ಸುಗಮವಾಗಿ ಮುನ್ನಡೆಯಲು ಮಾರ್ಗದರ್ಶಕರಾಗಿ ಪ್ರೇರಕಶಕ್ತಿಯಾಗಿ ನಿಂತುದಲ್ಲದೇ ಸಂಶೋಧನಾ ಸಮಯದುದ್ದಕ್ಕೂ ಸೂಕ್ತವಾದ ಮಾರ್ಗದರ್ಶನ ಮತ್ತು ಸಲಹೆಗಳನ್ನು ನೀಡಿ ಸಂಶೋಧನಾ ಪ್ರಬಂಧವು ಅಂತಿಮ ಸ್ವರೂಪ ಹೊಂದಲು ಕಾರಣೀಭೂತರಾಗಿದ್ದಾರೆ. ಅವರಿಗೆ ನನ್ನ ಅನಂತ ಹೃತ್ಪೂರ್ವಕ ಕೃತಜ್ಞತೆಗಳು.

ಪ್ರಸ್ತುತ ಈ ಸಂಶೋಧನಾ ಪ್ರಬಂಧವನ್ನು ರಚಿಸುವಲ್ಲಿ ಅನೇಕ ವ್ಯಕ್ತಿಗಳ ಮತ್ತು ಸಂಸ್ಥೆಗಳ ನೆರವನ್ನು ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಪಡೆದಿರುತ್ತೇನೆ. ಅವರನ್ನು ಸ್ಮರಿಸುವುದು ಸಹ ನನ್ನ ಆದ್ಯ ಕರ್ತವ್ಯವಾಗಿದೆ.

ಈ ಸಂಶೋಧನಾ ಕಾರ್ಯದ ಸಮಯದಲ್ಲಿ ಅನೇಕ ಸೂಕ್ತ ಸಲಹೆಗಳನ್ನು ನೀಡಿದ ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗದ ಹಿಂದಿನ ಮುಖ್ಯಸ್ಥರಾದ ಡಾ.ಎಸ್.ರಾಜಶೇಖರವರು ಮತ್ತು ಇಂದಿನ ಮುಖ್ಯಸ್ಥರಾದ ಡಾ.ಎಂ.ಟಿ.ಕಾಂಬಳೆ., ಹಾಗೂ ಇತರೇ ಪ್ರಾಧ್ಯಾಪಕವರ್ಗದವರಾದ ಡಾ. ರವಿ ಕೋರಿಶೆಟ್ಟರ, ಶ್ರೀಮತಿ ವಾರಿಜಾ ಬೋಳಾರ, ಶ್ರೀ ಅಶೋಕ ಶೆಟ್ಟರ, ಡಾ.ಎಸ್.ಕೆ.ಕಲ್ಲೊಳಿಕರ, ಶ್ರೀ ಶೀಲಾಧರ ಮುಗಳಿ, ದಿವಂಗತ ಶ್ರೀ ಎಚ್.ಬಿ.ಸುಂಕದರವರಿಗೂ ಮತ್ತು ಪ್ರಾಚೀನ ಭಾರತೀಯ ಇತಿಹಾಸ ಮತ್ತು ಶಾಸನವಿಜ್ಞಾನ ವಿಭಾಗದ ಮುಖ್ಯಸ್ಥರಾದ ಡಾ.ಎಸ್.ವ್ಹಿ.ಪಾಡಿಗಾರ ಹಾಗೂ ಕನ್ನಡ ಸಂಶೋಧನಾ ಸಂಸ್ಥೆಯ ಕಾರ್ಯನಿರ್ವಾಹಕ ನಿರ್ದೇಶಕರಾದ ಡಾ. ಋ.ಮ.ಷಡಕ್ಷರಯ್ಯ ಹಾಗೂ ಶ್ರೀ ಸಿ.ಬಿ.ಕಡಕೋಳ, ಶ್ರೀ ಎಸ್.ಬಿ.ಹಿರೇಮಠ ಗುರುಗಳನ್ನು ಹೃತ್ಪೂರ್ವಕವಾಗಿ ನೆನೆಯುವೆ. ಅಲ್ಲದೇ ಇದೇ ವಿಭಾಗದ ಶಿಕ್ಷಕೇತರ ಸಿಬ್ಬಂದಿಗಳು ವರ್ಷದುದ್ದಕ್ಕೂ ನೀಡಿದ ಸಹಕಾರಕ್ಕೆ ಧನ್ಯವಾದಗಳು.

ಮೈಮೇಲೆ ಹರಕು ಬಟ್ಟೆಯಿದ್ದರೂ ಚಿಂತೆಯಿಲ್ಲ ಕೈಯಲ್ಲಿ ಒಂದು ಪುಸ್ತಕವಿರಲಿ ಎಂಬ ವಿವೇಕಾನಂದರ ವಾಣಿಯಂತೆ ಈ ಒಂದು ಸಂಶೋಧನಾ ಪ್ರಬಂಧ ರಚನೆಗೆ ಹಲವಾರು ಗ್ರಂಥಗಳನ್ನು ನೀಡಿ ಪ್ರೋತ್ಸಾಹಿಸಿದ ಪ್ರೊ.ಶಿ.ಶಿ.ಬಸವನಾಳ ಗ್ರಂಥಾಲಯದ ಸಿಬ್ಬಂದಿಗೂ ಹಾಗೂ ಕನ್ನಡ ಸಂಶೋಧನಾ ಸಂಸ್ಥೆಯ ಗ್ರಂಥಾಲಯದ ಸಿಬ್ಬಂದಿಯವರಾದ ಶ್ರೀ ಹೊಸಮನಿ, ಶ್ರೀ ಸುನೀಲ ಸೂರ್ಯವಂಶಿಯವರಿಗೂ ನನ್ನ ತುಂಬು ಹೃದಯದ ಧನ್ಯವಾದಗಳು.

ನನ್ನ ಸಂಶೋಧನಾ ಅವಧಿಯುದ್ದಕ್ಕೂ ಸಹಕರಿಸಿ ಸೂಕ್ತ ಸಲಹೆಗಳನ್ನು ನೀಡಿದ ನನ್ನ ಮಿತ್ರರಾದ ಶ್ರೀ ಎಂ.ಆರ್.ಜರಕುಂಟಿ, ಶ್ರೀ ಪ್ರಕಾಶ ನೆರ್ಲೆಕರ, ಶ್ರೀ ಎ.ಬಿ.ವಗ್ಗರ, ಶ್ರೀ ಚಂದ್ರು ತಾಬೋಜಿ, ಶ್ರೀ ಎಸ್.ಬಿ.ಶಂಕಿನಮಠ, ಶ್ರೀ ಈರಣ್ಣ.ಬಿ.ಬಿರಾದಾರ, ಶ್ರೀ ವಿಜಯಕುಮಾರ.ಎಸ್.ಶೇಕದಾರ, ಶ್ರೀಮತಿ ಮಹಾದೇವಿ ಹಾಗರಗಿ, ಶ್ರೀಮತಿ ರಾಜೇಶ್ವರಿ ಸಾಲಿ, ಕು.ನೂತನ ದೇಸಾಯಿಯವರಿಗೆ ಉಪಕೃತನಾಗಿದ್ದೇನೆ.

ಈ ಸಂಶೋಧನಾ ಪ್ರಬಂಧ ರಚನೆಗಾಗಿ ವಿಶ್ವವಿದ್ಯಾಲಯದ ಸಂಶೋಧನಾ ಶಿಷ್ಯವೇತನ ಮಂಜೂರು ಮಾಡಿದ ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಗಳು, ಕುಲಸಚಿವರು ಹಾಗೂ ಇತರ ಎಲ್ಲ ಸಿಬ್ಬಂದಿವರ್ಗದವರಿಗೂ ನಾನು ಋಣಿಯಾಗಿದ್ದೇನೆ.

'ಮನೆಯೇ ಮೊದಲ ಪಾಠಶಾಲೆ, ಜನನಿ ತಾನೆ ಮೊದಲ ಗುರು' ಎಂಬ ನಾಣ್ಣುಡಿಯಂತೆ ಮನೆಯಲ್ಲಿ ಈ ಸಂಶೋಧನಾ ಪ್ರಬಂಧ ರಚನೆಗೆ ಪ್ರೋತ್ಸಾಹವನ್ನಿತ್ತ ನನ್ನ ತಾಯಿ ಶ್ರೀಮತಿ ಗಂಗಮ್ಮ ರವರಿಗೂ ಹಾಗೂ ನನ್ನ ಸಹೋದರರಿಗೆ, ಅತ್ತಿಗೆಯವರಿಗೆ, ಮಾವನವರಿಗೆ, ಅಕ್ಕಂದಿರಿಗೆ, ಮಾವನವರಾದ ಶ್ರೀ ಶಿವಪುತ್ರಪ್ಪ ಧಬ್ಬಿ ಶ್ರೀಮತಿ ಅನ್ನಪೂರ್ಣ ಧಬ್ಬಿ ಮತ್ತು ನನ್ನ ಅನುಪಸ್ಥಿತಿಯಲ್ಲಿ ಮನೆಯನ್ನು ನಿಭಾಯಿಸಿ ತನ್ನ ತಾಳ್ಮೆ, ಸಹನೆ ತೋರಿಸಿದ ನನ್ನ ಧರ್ಮಪತ್ನಿ ಶ್ರೀಮತಿ ಉಮಾದೇವಿ ಮತ್ತು ಸಹೋದರನ ಮಗಳಾದ ವಿದ್ಯಾಳನ್ನು ನೆನೆಯದೆ ಇರಲಾರೆ.

ನನ್ನ ಪಿಎಚ್.ಡಿ. ಸಂಶೋಧನಾ ಪ್ರಬಂಧವನ್ನು ಅತ್ಯಂತ ಕಡಿಮೆ ಅವಧಿಯಲ್ಲಿ ಅಚ್ಚುಕಟ್ಟುತನದಿಂದ ಗಣಕೀಕರಣಗೊಳಿಸಿ ಗ್ರಂಥರೂಪದಲ್ಲಿ ತರುವಲ್ಲಿ ಸಹಕರಿಸಿದ ಮಹಾಗಣಪತಿ ಕಂಪ್ಯೂಟರ್ಸ್‌ನ ವಿನಾಯಕ ಹಾಗೂ ನಾಗರಾಜ ಸಹೋದರರಿಗೆ ಹಾಗೂ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಸಹಾಯ ಮಾಡಿದ ಎಲ್ಲರಿಗೂ ನನ್ನ ಅನಂತ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಎಲ್ಲರ ಪ್ರೀತಿ ಮತ್ತು ಸಹಕಾರಗಳಿಂದ ರೂಪಗೊಂಡ ಈ ಸಂಶೋಧನಾ ಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಸಾದರಪಡಿಸಲು ನನಗೆ ತುಂಬಾ ಸಂತೋಷವೆನಿಸುತ್ತದೆ.

ಮಹಾಂತೇಶ. ಮಲ್ಲಪ್ಪ. ಅಕ್ಕಿ

ಪರಿವಿಡಿ

Content

ಅಧ್ಯಾಯ-ಒಂದು Chapter-1

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಸೃಷ್ಠಿಯಲ್ಲಿ ಅನಾದಿಕಾಲದಿಂದ ಮಾನವನು ಜ್ಞಾನಪಿಪಾಸಿ, ಜಿಜ್ಞಾಸೆಯ ಪ್ರವೃತ್ತಿಯೇ ಆತನ ಸಾಧನೆಗೆ ಮೂಲಾಧಾರವಾಗಿದೆ. ಹಳೆಯ ಅನುಭವದೊಡನೆ ಮುಂದಿನ ಭವಿಷ್ಯವನ್ನು ರೂಪಿಸಿಕೊಳ್ಳುವ ಶಕ್ತಿಯನ್ನು ಮಾನವನು ಪಡೆದಿದ್ದಾನೆ. ತನ್ನ ಗತಕಾಲದ ಬಗ್ಗೆ ವಿಚಾರ ಮಾಡಿ ಉಲ್ಲೇಖಿಸುವ ಅವಶ್ಯಕತೆ ಸಾರ್ವತ್ರಿಕವಾಗಿದೆ. ಭೂತಕಾಲದ ಪ್ರತಿಯೊಂದು ಪ್ರಯೋಗವೂ ಕಾಲಗರ್ಭದಲ್ಲಿ ಅಡಗಿಹೋದ ವಿಷಯಗಳ ಬಗ್ಗೆ ಕುತೂಹಲವನ್ನು ಕೆರಳಿಸುತ್ತವೆ. ಸೈದ್ಧಾಂತಿಕವಾಗಿ ಹೇಳುವುದಾದರೆ ನಾವು ಪರ್ಯಾಲೋಚಿಸುವ ಪ್ರತಿಯೊಂದು ವಿಷಯಕ್ಕೂ ಒಂದು ಚರಿತ್ರೆ ಇರುತ್ತದೆ. ಅದು ಮಾನವನ ಇತಿಹಾಸಕ್ಕೆ ಸೇರುವ ಅಂಶವಾಗಿರುತ್ತದೆ.

ಇಂತಹ ವಿಶಿಷ್ಟ ಇತಿಹಾಸಗಳನ್ನೊಳಗೊಂಡ ಕರ್ನಾಟಕವನ್ನು ಅನೇಕ ರಾಜಮನೆತನಗಳು ಆಳ್ವಿಕೆಯನ್ನು ಮಾಡಿವೆ. ಪ್ರಾರಂಭದಿಂದ ಮೌರ್ಯರು, ಶಾತವಾಹನರು, ಬನವಾಸಿಯ ಕದಂಬರು, ಬಾದಾಮಿಯ ಚಾಳುಕ್ಯರು, ಮಾನ್ಯಖೇಟದ ರಾಷ್ಟ್ರಕೂಟರು, ಕಲ್ಯಾಣದ ಚಾಳುಕ್ಯರು, ದೋರಸಮುದ್ರದ ಹೊಯ್ಸಳರು, ವಿಜಯನಗರದ ಅರಸರು. ರಾಷ್ಟ್ರಕೂಟರನ್ನು ಬದಿಗೊತ್ತಿ ಕಲ್ಯಾಣದ ಚಾಳುಕ್ಯರು ತಮ್ಮ ಸಾಮ್ರಾಜ್ಯವನ್ನು ಸ್ಥಾಪಿಸಿ ದಕ್ಷಿಣ ಭಾರತದ ರಾಜಕೀಯ ರಂಗವನ್ನು ಪ್ರವೇಶಿಸಿದರು. ಪ್ರಪಂಚದಲ್ಲಿಯೇ ಶ್ರೇಷ್ಠ ನಗರವೆಂದು ಪ್ರಖ್ಯಾತಿ ಪಡೆದ ಕಲ್ಯಾಣಪುರವನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡು ರಾಜ್ಯಭಾರ ನಿರ್ವಹಿಸಿದರು. ಈ ಮನೆತನವು ಕ್ರಿ.ಶ. ೯೭೩ ರಿಂದ ೧೧೮೯ ರವರೆಗೆ ಸುಮಾರು ೨೦೦ ವರ್ಷಗಳ ದೀರ್ಘ ಆಳ್ವಿಕೆಯ ಕಾಲದಲ್ಲಿ ೧೩ ಜನ ಅರಸರು ಆಡಳಿತವನ್ನು ನಿರ್ವಹಿಸಿದರು. ಆರನೆಯ ವಿಕ್ರಮಾದಿತ್ಯನ ಕಾಲದಲ್ಲಿ ಈ ಮನೆತನವು ದಕ್ಷಿಣ ಭಾರತದ ಇತಿಹಾಸದಲ್ಲಿಯೇ ಒಂದು ಪ್ರಮುಖವಾದ ರಾಜಮನೆತನವಾಗಿತ್ತು. ಚೋಳ, ಹೊಯ್ಸಳ, ಯಾದವರನ್ನು ಸೋಲಿಸಿ ಸಾರ್ವಭೌಮನಾಗಿದ್ದ ಆರನೆಯ ವಿಕ್ರಮಾದಿತ್ಯನ ಮಗನಾದ ಈ ಮೂರನೆಯ ಸೋಮೇಶ್ವರನು ತನ್ನ ಪಾಂಡಿತ್ಯದಿಂದಾಗಿ ಭಾರತದ ಇತಿಹಾಸದಲ್ಲಿಯೇ ಸರ್ವಜ್ಞ, ಚಕ್ರವರ್ತಿ, ವಿದ್ವಾಂಸ ದೊರೆಯೆಂದು ಕರೆಯಿಸಿಕೊಂಡಿರುವುದು ಅತಿಶಯೋಕ್ತಿಯೇನಲ್ಲ.

ಹನ್ನೆರಡನೆಯ ಶತಮಾನ ಕರ್ನಾಟಕದ ಇತಿಹಾಸದಲ್ಲಿ ಒಂದು ವಿಶಿಷ್ಟವಾದ ಕಾಲಘಟ್ಟ. ಈ ಶತಮಾನದ ಮಧ್ಯಭಾಗದಲ್ಲಿ ಶಿವಶರಣರಿಂದ ಪ್ರಜಾಸತ್ತೆಯ ಕ್ರಾಂತಿಯೊಂದು ಸ್ಫೋಟಗೊಂಡಿತು. ಈ ಪ್ರಜಾಸತ್ತೆಯ ಕ್ರಾಂತಿ ಕಣ್ಣು ತೆರೆಯುವುದಕ್ಕೆ ಈ ಹಿಂದಿನ ರಾಜಸತ್ತೆ, ವರ್ಣಸತ್ತೆ, ಧರ್ಮಸತ್ತೆಗಳ ತೆರೆ ಕಾರಣೀಭೂತವಾಗಿತ್ತು. ಇಂತಹ ಸಂದಿಗ್ಧದ ಕಾಲದಲ್ಲಿ ರಾಜ್ಯಭಾರ ಮಾಡುತ್ತಿದ್ದವನು ಈ ಮೂರನೆಯ ಸೋಮೇಶ್ವರ. ಈತ ಕ್ರಿ.ಶ. ಸು. ೧೧೦೬ ರಿಂದ ಕ್ರಿ.ಶ.ಸು. ೧೧೨೭ ರವರೆಗೆ (ಸು. ೨೧ ವರ್ಷ) ಪ್ರಾರಂಭದಲ್ಲಿ ಕುಮಾರ ವೃತ್ತಿಯಿಂದ, ಮಹಾಮಂಡಳೇಶ್ವರನಾಗಿ

ಆಡಳಿತವನ್ನು ನಿರ್ವಹಿಸಿ ಕ್ರಿ.ಶ.ಸು. ೧೧೨೭ ರಲ್ಲಿ ಸಿಂಹಾಸನವನ್ನೇರಿ ಮುಂದೆ ಕ್ರಿ.ಶ.ಸು. ೧೧೩೮ರ ವರೆಗೆ ಚಕ್ರವರ್ತಿಯಾಗಿ ಆಳಿದನು. ಇವನು ಅರಸನಾಗಿ ರಾಜಕೀಯ ಸಾಧನೆಯನ್ನು ಮಾಡಿರುವುದಕ್ಕಿಂತ ಅವನೊಬ್ಬ ಸಾಹಿತಿಯಾಗಿ ಬರೆದಿರುವ ಮಾನಸೋಲ್ಲಾಸ ಮತ್ತು ವಿಕ್ರಮಾಂಕಾಭ್ಯುದಯ ಎಂಬ ಕೃತಿಗಳು ಅವನನ್ನು ಇತಿಹಾಸದ ಪುಟಗಳಲ್ಲಿ ಅಜರಾಮರವನ್ನಾಗಿಸಿವೆ. ಅಲ್ಲದೇ ಅವನನ್ನು ಸರ್ವಜ್ಞ ಚಕ್ರವರ್ತಿಯೆಂದೇ ಕರೆದಿವೆ. ಇಂತಹ ಸಮರ್ಥ ವಿದ್ವಾಂಸ ದೊರೆ ಭಾರತದ ಇತಿಹಾಸದಲ್ಲಿ ಸಿಗುವುದು ವಿರಳ. ಇಂತಹ ವಿದ್ವಾಂಸನನ್ನು ಕುರಿತು ಈವರೆಗೆ ಸಮಗ್ರವಾಗಿ ಅಧ್ಯಯನ ಮಾಡದೇ ಇರುವುದು ವಿಷಾದಕರ ಸಂಗತಿ. ಇವನ ಸಮಗ್ರವಾದ ವ್ಯಕ್ತಿತ್ವವನ್ನು ಪರಿಚಯಿಸುವ ಉದ್ದೇಶದಿಂದ "ಕಲ್ಯಾಣ ಚಾಲುಕ್ಯ ಮೂರನೆಯ ಸೋಮೇಶ್ವರನ ಜೀವನ ಮತ್ತು ಸಾಧನೆ" ಎಂಬ ಈ ವಿಷಯವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

ಈ ವಿಷಯವನ್ನು ನಮ್ಮ ಸಂಶೋಧನೆಗೆ ಆಯ್ಕೆ ಮಾಡಿಕೊಂಡಿರುವ ಮತ್ತೊಂದು ಉದ್ದೇಶವೆಂದರೆ "ಕಲ್ಯಾಣದಂತಹ ಮತ್ತೊಂದು ನಗರ ಈ ಭೂಮಿಯ ಮೇಲೆ ಈ ಹಿಂದೆ ಇರಲಿಲ್ಲ, ಇಂದೂ ಇಲ್ಲ, ಮುಂದೆಯೂ ಹುಟ್ಟುವುದಿಲ್ಲ. ವಿಕ್ರಮಾದಿತ್ಯನಂತಹ ಚಕ್ರವರ್ತಿ ಪ್ರಪಂಚದಲ್ಲಿ ಬೇರೆ ಯಾರೂ ಇಲ್ಲ" ಎಂದು ವಿಜ್ಞಾನೇಶ್ವರನು ಮಿತಾಕ್ಷರ ಎಂಬ ತನ್ನ ಗ್ರಂಥದಲ್ಲಿ ಹೇಳಿದ್ದಾನೆ. ಇಂತಹ ಮಹಾನ್ ಚಕ್ರವರ್ತಿಯ ಮಗ ಮತ್ತು ಈತನ ನಂತರ ಅಧಿಕಾರಕ್ಕೆ ಬಂದ ಮೂರನೆಯ ಸೋಮೇಶ್ವರನು ತನ್ನ ಸೈನಿಕ ಸಾಧನೆಗಳಿಗಿಂತಲೂ ಮಿಗಿಲಾಗಿ ಒಬ್ಬ ವಿದ್ವಾಂಸ, ದೊರೆಯಾಗಿ ಪ್ರಸಿದ್ಧಿ ಪಡೆದಿದ್ದು ಭೂಲೋಕಮಲ್ಲ ಸರ್ವಜ್ಞ ಚಕ್ರವರ್ತಿ, ಸರ್ವಜ್ಞನೃಪ ಎಂಬ ಬಿರುದನ್ನು ಹೊಂದಿದ್ದನು. ಇಂತಹ ಮಹಾನ್ ಚಕ್ರವರ್ತಿಯ ಶಾಸನಗಳನ್ನು ಮೂಲ ಆಧಾರವಾಗಿಟ್ಟುಕೊಂಡು ಸಮಕಾಲೀನ ಸಾಹಿತ್ಯವನ್ನು ಅನುಷಂಗಿಕ ಆಧಾರವನ್ನಾಗಿ ಮಾಡಿಕೊಂಡು ಅವನ ಕಾಲದ ರಾಜಕೀಯ, ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ ಕ್ಷೇತ್ರಗಳ ಮೇಲೆ ಬೆಳಕನ್ನು ಚೆಲ್ಲುವುದೇ ಪ್ರಸ್ತುತ ಈ ಪ್ರಬಂಧದ ಮೂಲ ಉದ್ದೇಶವಾಗಿದೆ.

ಈವರೆಗೆ ನಡೆದ ಅಧ್ಯಯನಗಳು :

ಕಲ್ಯಾಣದ ಚಾಲುಕ್ಯರನ್ನು ಕುರಿತು ಈವರೆಗೆ ಹಲವಾರು ಅಧ್ಯಯನಗಳು ನಡೆದಿರುವುದು ಕಂಡುಬರುತ್ತದೆ. ಅದರಲ್ಲಿ Gopal. B.R. ಅವರ *"Chalukyas of Kalyana and the Kalachuries"*, ಗ್ರಂಥದ ೮ನೆಯ ಅಧ್ಯಾಯವಾದ The Last Rulers ಎಂಬುವುದರಲ್ಲಿ ಮೂರನೆಯ ಸೋಮೇಶ್ವರ ಕುರಿತಾಗಿ ಮತ್ತು ಅವನ ಸೈನಿಕ ಸಾಧನೆಗಳ ಕುರಿತಾಗಿ ಹೇಳಿದ್ದಾರೆ. ಇವರ ಮತ್ತೊಂದು ಕೃತಿಯಾದ 'Minor Dynasties' ದಲ್ಲಿ ಸಾಮಂತ ಅರಸುಮನೆತನಗಳಾದ ಹಾನಗಲ್ಲ ಕದಂಬರು, ಬೆಳಗುತ್ತಿಯ ಸಿಂಧರು, ಯಲಬುರ್ಗ ಸಿಂಧರು, ರಂಜೇರುವಿನ ಸಿಂಧರು, ಕುರಗೋಡು ಸಿಂಧರು, ಉತ್ತರ ಕೊಂಕಣದ ಶಿಲಾಹಾರರು, ಕೊಲ್ಹಾಪುರದ ಶಿಲಾಹಾರರು, ಏಳಮೇಲದ ಶಿಲಾಹಾರ, ಭಾಸವೂರು-೧೪೦ ಶಿಲಾಹಾರರು ಮುಂತಾದವರ ಬಗ್ಗೆ ವಿವರಿಸಲಾಗಿದ್ದು ಅದರಲ್ಲಿ ಮೂರನೆಯ ಸೋಮೇಶ್ವರನ

ಕಾಲದಲ್ಲಿ ಸಾಮಂತರಾಗಿದ್ದ ತೈಲಪ, ಮಲ್ಲಿಕಾರ್ಜುನ, ಜಯಕೇಶಿ, ಎರಡನೆಯ ಚಟ್ಟರಸ, ಬಾಚರಸ, ನಾಯಿಗರ ಕುರಿತಾಗಿ ಮಾಹಿತಿಯನ್ನು ನೀಡಿದ್ದಾರೆ. Krishnamurari ಅವರ *"Chalukyas of Kalyani"*[AD 943 - AD 1200], ಕೃತಿಯಲ್ಲಿ ಚಾಳುಕ್ಯರ ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ ವಿಷಯಗಳನ್ನು ಚರ್ಚಿಸುತ್ತ, ಮೂರನೆಯ ಸೋಮೇಶ್ವರನ ರಾಜಕೀಯ, ಸೈನಿಕ ಸಾಧನೆಗಳ ಕುರಿತಾಗಿಯೂ ಸಂಕ್ಷಿಪ್ತವಾಗಿ ತಿಳಿಸಿದ್ದಾರೆ. Dinakar Desai ಅವರ *"Mahamandalesvaras Under the Chalukyas"* ಗ್ರಂಥದಲ್ಲಿ ಕಲ್ಯಾಣದ ಚಾಳುಕ್ಯರ ಸಾಮಂತ ಅರಸುಮನೆತನಗಳ ವಿವರವನ್ನು ನೀಡಲಾಗಿದೆ. ಇದರಲ್ಲಿಯೂ ಸಹ ಮೂರನೆಯ ಸೋಮೇಶ್ವರನ ಕಾಲದಲ್ಲಿ ಸಾಮಂತರಾಗಿದ್ದ ಚಟ್ಟರಸ (ಬೆಳಗುತ್ತಿ ಸಿಂಧರು), ಪೆರ್ಮಾಡಿದೇವ - I (ಯಲಬುರ್ಗ ಸಿಂಧರು), ತ್ರಿಭುವನ ಮಲ್ಲರಾಯ ಪಾಂಡ್ಯ (ಉಚ್ಚಂಗಿ ಪಾಂಡ್ಯರು), ಮಲ್ಲಿದೇವ (ಗುತ್ತಲದ ಗುತ್ತರು) ಇವರ ಕುರಿತಾಗಿ ತಿಳಿಸಲಾಗಿದೆ. ನಾಗಯ್ಯ. ಜಿ.ಎಂ. ಅವರ "ಆರನೆಯ ವಿಕ್ರಮಾದಿತ್ಯನ ಶಾಸನಗಳು ಒಂದು ಅಧ್ಯಯನ" (ಆಡಳಿತಕ್ಕೆ ಸಂಬಂಧಿಸಿದಂತೆ) ಎಂಬ ಕೃತಿಯ ಎರಡನೆಯ ಅಧ್ಯಾಯದಲ್ಲಿ ಆರನೆಯ ವಿಕ್ರಮಾದಿತ್ಯನ ಪರಿವಾರದ ಕುರಿತಾಗಿ ವಿವರಣೆ ನೀಡುವಾಗ ಇವನ ಮಗನಾದ ಮೂರನೆಯ ಸೋಮೇಶ್ವರನ ಕುರಿತಾಗಿಯೂ ಮಾಹಿತಿಯನ್ನು ಕೊಡುತ್ತಾರೆ. Basavaraja. K.R., ಅವರ *"Administration Under the Chalukyas of Kalyana"*ದಲ್ಲಿ ಕಲ್ಯಾಣ ಚಾಳುಕ್ಯರ ಕಾಲದಲ್ಲಿನ ಆಡಳಿತ ಪದ್ಧತಿಯ ಕುರಿತಾಗಿ ಸಮಗ್ರವಾಗಿ ವಿವರಿಸಲಾಗಿದೆ. Yazdani ಅವರ *"The Early History of the Deccan-Part I-VI"* ಗ್ರಂಥದ ಆರನೆಯ ಅಧ್ಯಾಯದಲ್ಲಿ ಮೂರನೆಯ ಸೋಮೇಶ್ವರನ ಕುರಿತು ಹೇಳಲಾಗಿದೆ. ದೇಸಾಯಿ.ಎಚ್.ಆರ್. ಅವರ *"ಕಲ್ಯಾಣ ಚಾಳುಕ್ಯರ ಕಾಲದ ಶಿಕ್ಷಣ ಪದ್ಧತಿ"* (ಅಪ್ರಕಟಿತ ಪಿಎಚ್.ಡಿ. ಪ್ರಬಂಧ) ಇದರಲ್ಲಿ ಕಲ್ಯಾಣದ ಚಾಳುಕ್ಯರ ಶಿಕ್ಷಣ ಪದ್ಧತಿಯ ಕುರಿತು ಸಂಪೂರ್ಣ ವಿವರವನ್ನು ನೀಡಲಾಗಿದೆ. Nagaraja Rao M.S. ಅವರ *"The Chalukyas of Kalyana"*[Seminar Papers] ದಲ್ಲಿ ಹಲವಾರು ವಿದ್ವಾಂಸರು ಕಲ್ಯಾಣದ ಚಾಳುಕ್ಯರ ಹತ್ತಾರು ವಿಷಯಗಳನ್ನು ಕುರಿತು ಬರೆದಿರುವ ಲೇಖನಗಳ ಮೂಲಕ ಕೆಲವು ಹೊಸ ವಿಚಾರಗಳು ಬೆಳಕು ಕಂಡಿವೆ. Hiremath.V.R. ಅವರ *"Religious Conditions During the Period of the Chalukyas of Kalyana"* (ಅಪ್ರಕಟಿತ ಪಿಎಚ್.ಡಿ. ಪ್ರಬಂಧ) ಇದರಲ್ಲಿ ಕಲ್ಯಾಣದ ಚಾಳುಕ್ಯರ ಕಾಲದಲ್ಲಿನ ಧಾರ್ಮಿಕ ಪರಿಸ್ಥಿತಿ ಮತ್ತು ಯಾವ ಯಾವ ಅರಸರ ಕಾಲದಲ್ಲಿ ಯಾವ ಯಾವ ದೇವಾಲಯಗಳು ನಿರ್ಮಾಣವಾದವು ಎಂಬುದರ ಚಿತ್ರಣವನ್ನು ನೀಡಿದ್ದಾರೆ. Katkar, E.N. ಅವರ *"Art and Architecture of the Chalukyas of Kalyana"* (ಅಪ್ರಕಟಿತ ಪಿಎಚ್.ಡಿ. ಪ್ರಬಂಧ) ಇದರಲ್ಲಿ ಕಲ್ಯಾಣದ ಚಾಳುಕ್ಯರ ಕಾಲದ ದೇವಾಲಯಗಳ ವ್ಯಾಪಕ ಪರಿಚಯ ಮಾಡಿಕೊಡುವಲ್ಲಿ ಸಮರ್ಥವಾಗಿದೆ. ಗೋಪಾಲರಾವ್.ಎಚ್.ಎಸ್. ರವರ *"ಶಾಸನಗಳ ಹಿನ್ನೆಲೆಯಲ್ಲಿ ಕಲ್ಯಾಣ ಚಾಳುಕ್ಯರ ದೇವಾಲಯಗಳ ಸಾಂಸ್ಕೃತಿಕ ಅಧ್ಯಯನ"* ಕೃತಿಯಲ್ಲಿ ದೇವಾಲಯಗಳ ನಿರ್ವಹಣೆ, ಪೂಜಾವಿಧಿ, ವಿದ್ಯಾಭ್ಯಾಸ

ಮುಂತಾದವುಗಳ ಬಗೆಗೆ ಚರ್ಚಿಸಲಾಗಿದೆ. ರಾಜಶೇಖರ್.ಎಸ್ ಅವರ ''*ಕರ್ನಾಟಕದ ಕಲೆ ಮತ್ತು ವಾಸ್ತುಶಿಲ್ಪ*'' ಎಂಬ ಕೃತಿಯ ನಾಲ್ಕನೆಯ ಅಧ್ಯಾಯದಲ್ಲಿ ಕಲ್ಯಾಣದ ಚಾಲುಕ್ಯರ ಕಾಲದ ದೇವಾಲಯಗಳ ಲಕ್ಷಣಗಳನ್ನು ಕುರಿತು ವಿವರಿಸಲಾಗಿದೆ.

ಇನ್ನೂ ಹಲವು ಇತಿಹಾಸಕಾರರು ವಿಶೇಷವಾಗಿ ಮೂರನೆಯ ಸೋಮೇಶ್ವರ ರಚಿಸಿದ 'ಮಾನಸೋಲ್ಲಾಸ' ಅಥವಾ 'ಅಭಿಲಷಿತಾರ್ಥ ಚಿಂತಾಮಣಿ' ಗ್ರಂಥದ ಕುರಿತಾಗಿಯೇ ಆಳವಾದ ಅಧ್ಯಯನವನ್ನು ಮಾಡಿದ್ದಾರೆ. ಅವರುಗಳೆಂದರೆ Shamasastry.R., *"Abhilashitartha Chintamani of Someswara Deva Part-I"*, Shrigondekar, G.K, (Ed.) *"Manasollasa of King Bhulokamalla Somesvara* Vol-I and Manasollasa of King Somesvara Vol-III, Joshi, M.N. and Bebballi, B.S., *"Manasollasa and Ayurveda"*, Joshi, M.N. "Treatment of Secular Arts and Science in Somesvara's Manasollas", S.S. Mishra ರವರ *"Somesvara's Manasollasa : A Cultural Study"*, ಕಲಬುರ್ಗಿ.ಎಂ.ಎಂ. ''*ಕಲ್ಯಾಣ ಚಾಲುಕ್ಯ ಸರ್ವಜ್ಞ ಚಕ್ರವರ್ತಿ ಸೋಮೇಶ್ವರ ವಿರಚಿತ ಮಾನಸೋಲ್ಲಾಸ*'' ಸಂಪುಟ೧ ಮತ್ತು ೨ ಅವರೆ ಸಂಪಾದಿಸಿರುವ ''*ಮಾನಸೋಲ್ಲಾಸ ಪರಿಚಯ*''.

ಈ ಮೇಲಿನ ಕೃತಿಗಳು ಕಲ್ಯಾಣದ ಚಾಳುಕ್ಯರ ಕಾಲದ ರಾಜಕೀಯ ಮತ್ತು ಸಾಂಸ್ಕೃತಿಕ ಇತಿಹಾಸವನ್ನು ಪರಿಚಯಿಸುತ್ತವೆ. ಆದರೆ ಮೂರನೆಯ ಸೋಮೇಶ್ವರನ ಸಮಗ್ರ ಜೀವನ ಮತ್ತು ಅವನ ಸೈನಿಕ ಸಾಧನೆಗಳನ್ನು ಅಷ್ಟಾಗಿ ಪರಿಚಯಿಸುವುದಿಲ್ಲ. ಹೀಗಾಗಿ ಅವನನ್ನು ಕುರಿತು ಸಮಗ್ರವಾದ ಅಧ್ಯಯನದ ಅವಶ್ಯಕತೆ ಕಂಡುಬಂದುದರಿಂದ ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಸಾಮಗ್ರಿ :

ಒಂದು ನಾಡಿನ ಚರಿತ್ರೆಯಾಗಲಿ ಅಥವಾ ಒಂದು ಅರಸುಮನೆತನದ ಚರಿತ್ರೆಯಾಗಲಿ, ಅದನ್ನರಿಯಲು ಸಾಧನ ಸಾಮಗ್ರಿಗಳ ಮೊರೆ ಹೋಗಬೇಕಾದುದು ಅನಿವಾರ್ಯ. ಹೀಗಾಗಿ ಚರಿತ್ರೆಯ ರಚನೆಗೆ ಸಂಬಂಧಪಟ್ಟ ಆಧಾರಗಳನ್ನು ಪ್ರಾಕ್ತನ ಹಾಗೂ ಸಾಹಿತ್ಯವೆಂಬೆರಡು ವಿಭಾಗಗಳಲ್ಲಿ ವಿಭಾಗಿಸಿ ನೋಡಲಾಗುತ್ತದೆ. ಪ್ರಾಕ್ತನ ಆಧಾರಗಳಲ್ಲಿ ಶಾಸನ, ನಾಣ್ಯ, ಭೂ ಉತ್ಖನನ ಹಾಗೂ ಸ್ಮಾರಕಗಳು ಸೇರ್ಪಡೆಯಾದರೆ, ಸಾಹಿತ್ಯದಲ್ಲಿ ದೇಶೀಯ ಹಾಗೂ ವಿದೇಶಿಯ ಬರಹಗಾರರ ಬರವಣಿಗೆಗಳನ್ನು ಹೊಂದಿರುತ್ತವೆ. ಪ್ರಸ್ತುತ ನಮ್ಮ ಈ ಅಧ್ಯಯನವು ಎಲ್ಲ ಸಾಮಗ್ರಿಗಳ ನೆರವನ್ನು ಪಡೆದುಕೊಂಡಿದೆಯಾದರೂ, ಶಾಸನಗಳನ್ನು ನಿಖರವಾದ ದಾಖಲೆಗಳೆಂದು ತಿಳಿದು ಅವುಗಳ ಆಧಾರದಿಂದ ರಚಿಸಲಾಗಿದೆ. ಆದರೂ ಸಂದರ್ಭಕ್ಕನುಸಾರವಾಗಿ ಸಮಕಾಲೀನ ಸಾಹಿತ್ಯವನ್ನು ಉಪಯೋಗಿಸಿಕೊಳ್ಳಲಾಗಿದೆ.

ಶಾಸನಗಳು :

ಚರಿತ್ರೆಯ ಪುನಃ ರಚನೆಯಲ್ಲಿ ಶಾಸನಗಳು ವಹಿಸಿದ ಮತ್ತು ವಹಿಸುತ್ತಿರುವ ಪಾತ್ರ ತುಂಬಾ ಮಹತ್ವದ್ದು. ಆದ್ದರಿಂದಲೇ ನಮ್ಮ ನಾಡಿನ ಚರಿತ್ರೆಯ ರಚನಾ ಸ್ವರೂಪಕ್ಕೆ ಶಾಸನ ಸಾಮಗ್ರಿಯೇ ಜೀವನಾಡಿಯಾಗಿದೆ. ಅವು ಪ್ರಾಚೀನ ಜನರ ಬದುಕಿನ ಸಮಸ್ತ ಸಂವೇದನೆಗಳ ಪ್ರಾಮಾಣಿಕ ಧ್ವನಿಗಳಾದುದರಿಂದ ನಮ್ಮ ನಾಡಿನ ಜನಜೀವನವು ಶಾಸನಗಳಲ್ಲಿ ಅಭಿವ್ಯಕ್ತಗೊಂಡಿರುವಂತೆ ಪ್ರಾಯಶಃ ಇನ್ನೆಲ್ಲೂ ವ್ಯಕ್ತಗೊಂಡಿಲ್ಲ. ಅಂತೆಯೇ ಶಾಸನಗಳು ಐತಿಹಾಸಿಕ ಸಂಶೋಧನಾ ಅಧ್ಯಯನದ ಪ್ರತಿ ಹಂತದಲ್ಲಿಯೂ ಅಧಿಕೃತವಾಗಿ ನಿಲ್ಲುತ್ತವೆ.

ಇದುವರೆಗೆ ಮೂರನೆಯ ಸೋಮೇಶ್ವರನ ಕುರಿತಾಗಿ ಕರ್ನಾಟಕ, ಆಂಧ್ರಪ್ರದೇಶ, ಮಹಾರಾಷ್ಟ್ರಗಳಲ್ಲಿ ದೊರೆತ ಸುಮಾರು ೧೬೨ ಶಾಸನಗಳು ಈವರೆಗೆ ಪ್ರಕಟಗೊಂಡಿದ್ದು ಅವುಗಳಲ್ಲಿ ಮುಖ್ಯವಾಗಿ South Indian Inscription - Vol. IX P. I ಮತ್ತು P. II, XV, XVIII, XX, Mysore Archaeological Report, Epigrapia Carnataka Vol I to XII, Karnataka Incription Vol- I to VI, Epigrapia Indica, Archaeological Report Indian Epigraphy, H.A.R., ಕನ್ನಡ ವಿಶ್ವವಿದ್ಯಾಲಯ ಹಂಪಿಯವರು ಪ್ರಕಟಿಸಿರುವ ಉಪಾಧ್ಯ, ಜಿ.ಎನ್. (ಸಂ.) 'ಮಹಾರಾಷ್ಟ್ರ ಕನ್ನಡ ಶಾಸನಗಳು', ಗಣೇಶ, ಕೆ.ಆರ್. (ಸಂ.) 'ಆಂಧ್ರಪ್ರದೇಶದ ಕನ್ನಡ ಶಾಸನಗಳು ಭಾಗ -೧ ಮತ್ತು ಭಾಗ -೨', ದೇವರಕೊಂಡಾರೆಡ್ಡಿ (ಸಂ.) 'ಬಳ್ಳಾರಿ ಜಿಲ್ಲೆಯ ಶಾಸನಗಳು', 'ರಾಯಚೂರು ಜಿಲ್ಲೆಯ ಶಾಸನಗಳು', 'ಕೊಪ್ಪಳ ಜಿಲ್ಲೆಯ ಶಾಸನಗಳು', ಶ್ರೀಮತಿ ಹನುಮಾಕ್ಷಿ ಗೋಗಿಯವರು ಪ್ರಕಟಿಸಿರುವ 'ಕಲ್ಬುರ್ಗಿ ಜಿಲ್ಲೆಯ ಶಾಸನಗಳು', 'ಸುರಪುರ ತಾಲೂಕಿನ ಶಾಸನಗಳು' ಎಂಬ ಗ್ರಂಥಗಳಲ್ಲಿ ಕಾಣುತ್ತೇವೆ.

ಮೂರನೆಯ ಸೋಮೇಶ್ವರನನ್ನು ಉಲ್ಲೇಖಿಸುವ ಮೊಟ್ಟ ಮೊದಲ ಶಾಸನ ಕ್ರಿ.ಶ. ೧೦೮೩ ಕ್ಕೆ ಸೇರಿದ ಧಾರವಾಡ ಜಿಲ್ಲೆಯ ರೋಣ ತಾಲೂಕಿನ ಸವಡಿ ಶಾಸನವಾದರೆ ಈಗ ತಿಳಿದಮಟ್ಟಿಗೆ ಕ್ರಿ.ಶ. ೧೧೩೮ ರ ಮತ್ತೂರು ಶಾಸನವೇ ಕೊನೆಯ ಶಾಸನವಾಗಿದೆ. ಈ ಶಾಸನಗಳಲ್ಲಿ ಪಟಾನ್‌ಚೆರು, ಕೋಲನುಪಾಕ ಶಾಸನಗಳು, ಔರಾದ, ಕಡ್ಲೇವಾಡ, ಕರಾಡಖೇಡ, ಏರಿಗೆ, ನಿಂಬರಗಿ ಮುಂತಾದ ಶಾಸನಗಳು ಪ್ರಮುಖವಾದವುಗಳಾಗಿವೆ. ಅವುಗಳ ವಿವರಗಳನ್ನು ಅನುಬಂಧದಲ್ಲಿ ಕೊಡಲಾಗಿದೆ.

ನಾಣ್ಯಗಳು :

ಚರಿತ್ರೆಯ ರಚನೆಯಲ್ಲಿ ಶಾಸನಗಳಿಗಿರುವಷ್ಟೇ ಮಹತ್ವ ನಾಣ್ಯಗಳಿಗಿದೆ. ಗದ್ಯಾಣ, ಪೊನ್ನು, ಹಾಗ ಎಂಬ ಹೆಸರಿನ ನಾಣ್ಯಗಳು ಮೂರನೆಯ ಸೋಮೇಶ್ವರನ ಕಾಲದ ಶಾಸನಗಳಲ್ಲಿ ಉಲ್ಲೇಖಗೊಂಡಿವೆ. ಆದರೆ ಇವುಗಳ ವಿಷಯದಲ್ಲಿ ಹೆಚ್ಚಿನ ಮಾಹಿತಿ ದೊರೆಯುವುದಿಲ್ಲ. ಮೂರನೆಯ ಸೋಮೇಶ್ವರನ ಕಾಲದ ಶಾಸನಗಳು ಅಂದಿನ ಕಾಲದಲ್ಲಿ

ಪ್ರಚಲಿತವಿದ್ದ ನಾಣ್ಯಗಳನ್ನು ಹೆಸರಿಸಿವೆಯಾದರೂ ಅವನ್ನು ಬೇರೆ ಬೇರೆ ಪ್ರದೇಶಗಳಲ್ಲಿ ದೊರೆತ ನಾಣ್ಯಗಳು ವಿಭಿನ್ನವಾಗಿರಬೇಕೆಂಬ ಸಂದೇಹಕ್ಕೆ ಅವಕಾಶವಿದೆ. ಆದಾಗ್ಯೂ ಮೂರನೆಯ ಸೋಮೇಶ್ವರನ ಕಾಲದ ಆರ್ಥಿಕ ವ್ಯವಸ್ಥೆಗೆ ಸಂಬಂಧಿಸಿದಂತೆ ಈ ನಾಣ್ಯಗಳು ತುಂಬಾ ಸಹಕಾರಿಯಾಗಿವೆ.

ಸ್ಮಾರಕಗಳು :

ಒಂದು ನಾಡಿನ ಸಂಸ್ಕೃತಿಯ ಪ್ರತಿಬಿಂಬಗಳೆಂದರೆ ಅಲ್ಲಿರುವ ಸ್ಮಾರಕಗಳು. ಕೆಲವೊಮ್ಮೆ ಶಾಸನ-ನಾಣ್ಯ ಹಾಗೂ ಸಾಹಿತ್ಯ ಕೃತಿಗಳು ತಿಳಿಸದೆ ಇರುವ ಸಂಗತಿಗಳನ್ನು ಸ್ಮಾರಕಗಳು ತಿಳಿಸುತ್ತವೆ. ದೇವಾಲಯ ಹಾಗೂ ಇತರ ಸ್ಮಾರಕಗಳ ಅಧ್ಯಯನ ಬೇರೆ ಬೇರೆ ಧರ್ಮಗಳ ಪ್ರಭಾವ ಅಂದಿನ ಜನಜೀವನ, ಆಯಾ ಕಾಲದ ಕಲಾಭಿರುಚಿ, ಕಲಾಕುಶಲತೆ, ಉಡುಗೆ ಆಭರಣಗಳು ಮೊದಲಾದ ವಿಷಯಗಳ ಚಿತ್ರಣವನ್ನೊದಗಿಸುತ್ತವೆ. ಮೂರನೆಯ ಸೋಮೇಶ್ವರನ ಕಾಲದ ದೇವಾಲಯಗಳು ಕಾಮಧೇನು, ಸಿದ್ದಾಪುರ, ಅಸುಂಡಿ, ನರಗುಂದ, ಲಕ್ಷ್ಮೇಶ್ವರ, ಬಂಕಾಪುರ, ಹಾವೇರಿ, ಮುಂತಾದ ಗ್ರಾಮಗಳಲ್ಲಿ ಇವೆ. ಅವುಗಳಲ್ಲದೆ ವೀರಗಲ್ಲು, ನಿಷಧಿಗಲ್ಲುಗಳು ಮುಂತಾದವು ಅವರ ಕಾಲದ ಸಾಮಾಜಿಕ ಜೀವನವನ್ನು ತಿಳಿದುಕೊಳ್ಳಲು ಉತ್ತಮ ಆಕರಗಳಾಗಿವೆ.

ಸಾಹಿತ್ಯ :

ಸಾಹಿತ್ಯವು ಅಂದಿನ ಜನರ ಸಂಸ್ಕೃತಿಯ ಪ್ರತಿಬಿಂಬವಾದುದರಿಂದ ಇತಿಹಾಸದ ರಚನೆಯಲ್ಲಿ ಅವುಗಳ ಬಳಕೆ ಇಂದು ಹೆಚ್ಚಾಗುತ್ತಲಿದೆ. ಮೂರನೆಯ ಸೋಮೇಶ್ವರನ ವೈಭವಪೂರ್ಣ ಆಳ್ವಿಕೆಯ ಕಾಲದಲ್ಲಿ ಕನ್ನಡ ಮತ್ತು ಸಂಸ್ಕೃತಗಳೆರಡೂ ಹೆಚ್ಚಿನ ಪ್ರೋತ್ಸಾಹ ದೊರಕಿತು. ಈ ಎರಡು ಭಾಷೆಗಳಲ್ಲಿ ಅನೇಕ ಉದ್ಗ್ರಂಥಗಳು ರಚನೆಯಾದವು. ಸ್ವತಃ ಮೂರನೆಯ ಸೋಮೇಶ್ವರನೇ ಆ ಕಾಲದ ಪ್ರಸಿದ್ಧ ಕವಿ ಅಲ್ಲದೆ ಬಿಲ್ಹಣ, ನಯಸೇನ, ವಿಜ್ಞಾನೇಶ್ವರ ಇನ್ನೂ ಅನೇಕ ಕವಿವರ್ಯರು ಆ ಕಾಲದಲ್ಲಿ ಸಂಸ್ಕೃತ-ಕನ್ನಡದಲ್ಲಿ ಶ್ರೇಷ್ಠ ಕಾವ್ಯಗಳನ್ನು ಬರೆದರು. ಇವರು ಸಾಹಿತ್ಯ ಕವಿಗಳಾದರೆ ಅವನ ಕಾಲದಲ್ಲಿ ಅನೇಕ ಶಾಸನ ಸಾಹಿತ್ಯ ರಚನೆ ಮಾಡಿದ ಕವಿಗಳಿದ್ದಾರೆ. ಹೀಗೆ ಇವರ ಬರಹಗಳು ಅವನ ಕಾಲದ ರಾಜಕೀಯ ಹಾಗೂ ಸಾಮಾಜಿಕ ವಿಷಯಗಳನ್ನರಿಯಲು ಉಪಯುಕ್ತ ಆಧಾರಗಳಾಗಿವೆ.

'ವಿಕ್ರಮಾಂಕದೇವ ಚರಿತಂ' :

ಬಿಲ್ಹಣ ಹನ್ನೊಂದನೆಯ ಶತಮಾನದಲ್ಲಿ ಇದ್ದ ಕವಿ. ಅವನೊಬ್ಬ ಸರಸ ಕವಿಯೆಂದು ಪ್ರಸಿದ್ಧನಾಗಿದ್ದಾನೆ. ಇವನ ಪ್ರಸಿದ್ಧವಾದ ಕೃತಿಯೆಂದರೆ *'ವಿಕ್ರಮಾಂಕದೇವ ಚರಿತಂ'*. ಇದು ಹದಿನೆಂಟು ಅಧ್ಯಾಯಗಳ ಕೃತಿ. ಇದರಲ್ಲಿ ಪ್ರಧಾನವಾಗಿ ವರ್ಣಿತವಾದ ವಸ್ತುಗಳೆಂದರೆ ವಿವಾಹ ಹಾಗೂ ಯುದ್ಧ. ಇವನ್ನು ಬಿಲ್ಹಣನು ಅತ್ಯಂತ ಕಾವ್ಯಮಯವಾಗಿ ವರ್ಣಿಸಿದ್ದಾನೆ. ಕಾವ್ಯದುದ್ದಕ್ಕೂ ದೀರ್ಘ ಸಮಾಸಗಳ ಗೊಂದಲವಿಲ್ಲದೆ ಅನುಪ್ರಾಸಗಳ ಮೋಹಕ್ಕೆ ಒಳಗಾಗದೆ, ಪ್ರಸಾದಿಕತೆಯಿಂದ ತುಂಬಿ ಹರಿಯುತ್ತದೆ. ಕೊನೆಯ ಅಧ್ಯಾಯದಲ್ಲಿ ಕವಿ ತನ್ನ ವಿಚಾರವನ್ನು ಹೇಳಿಕೊಂಡಿದ್ದಾನೆ.

ಚಾಳುಕ್ಯವಂಶದ ಚರಿತ್ರೆಯಾದ 'ವಿಕ್ರಮಾಂಕದೇವ ಚರಿತಂ' ದ ಪ್ರಾರಂಭದಲ್ಲಿ ಚಾಳುಕ್ಯವಂಶದ ಆರಂಭದ ಬಗೆಗೆ ಇರುವ ಪೌರಾಣಿಕ ಅಂಶಗಳನ್ನು ಹೇಳಿ ರಾಷ್ಟ್ರಕೂಟರ ಬಲಶಾಲಿಯಾದ ಅರಸರನ್ನು ಸೋಲಿಸಿ ಹೇಗೆ ಎರಡನೆಯ ತೈಲಪನು ರಾಜ್ಯವನ್ನು ಸ್ಥಾಪಿಸಿದನೆಂದು ಹೇಳುವುದರೊಂದಿಗೆ ಆಹವಮಲ್ಲನವರೆಗಿನ ಕುಟುಂಬದ ಇತಿಹಾಸದ ವರ್ಣನೆಯಿದೆ. ನಂತರ ಆಹವಮಲ್ಲನ ಮಗನಾದ ವಿಕ್ರಮಾದಿತ್ಯನ ವಿವಾಹದ ವರ್ಣನೆ, ಅವನು ಚಂದಲದೇವಿಯೊಂದಿಗೆ ಕಳೆದ ಚಳಿಗಾಲ, ಮಳೆಗಾಲ, ಬೇಸಿಗೆ ಕಾಲಗಳ ವಿವರಣೆ ಇದೆ. ಬಿಲ್ಹಣನು ತನ್ನ ಕಾವ್ಯದಲ್ಲಿ ಹೆಚ್ಚಿನ ಭಾಗವನ್ನು ಇವರೀರ್ವರ ವಿವಾಹ, ಮಧುಚಂದ್ರ, ವಿಹಾರ ಇತ್ಯಾದಿಗಳಿಗಾಗಿ ಮೀಸಲಿಟ್ಟಿದ್ದಾನೆ. ಅಲ್ಲದೆ ವಿಕ್ರಮಾದಿತ್ಯನು ಚೋಳ ಹಾಗೂ ಇನ್ನಿತರ ದೊರೆಗಳ ಮೇಲೆ ಸಾಧಿಸಿದ ವಿಜಯಗಳು ಇಲ್ಲಿ ಪ್ರಮುಖವಾಗಿ ವರ್ಣಿತವಾಗಿವೆ. ಒಟ್ಟಿನಲ್ಲಿ 'ವಿಕ್ರಮಾಂಕದೇವ ಚರಿತಂ' ಪ್ರಧಾನವಾಗಿ ಇತಿಹಾಸವೇ ಆಗಿದ್ದರೂ ಉತ್ತಮ ಮಟ್ಟದ ಕಾವ್ಯಸೌಂದರ್ಯವನ್ನು ಸಹ ನಾವು ಅದರಲ್ಲಿ ನೋಡಬಹುದು.

'ಮಿತಾಕ್ಷರ' :

ಈ ಗ್ರಂಥವನ್ನು ಅಪ್ರತಿಮ ಪ್ರತಿಭಾಶಾಲಿಗಳೂ, ಮಹಾಜ್ಞಾನಿಗಳೂ, ವಿನಯಶೀಲರೂ, ದಾರ್ಶನಿಕರೂ ಆದ ವಿಜ್ಞಾನೇಶ್ವರರು ರಚಿಸಿದ್ದಾರೆ. ಇದು ಯಾಜ್ಞವಲ್ಕ್ಯಸ್ಮೃತಿಗೆ ಬರೆದ ವ್ಯಾಖ್ಯಾನವಾಗಿದೆ. ಇದರಲ್ಲಿ ನ್ಯಾಯ ವಿತರಣೆ, ಅವಿಭಕ್ತ ಕುಟುಂಬದ ಆಸ್ತಿಯಲ್ಲಿ ಅದರ ಸದಸ್ಯರ ಹಕ್ಕು, ಪಿತ್ರಾರ್ಜಿತ ಆಸ್ತಿಯು ನಷ್ಟವಾಗದಿರುವಂತೆ ನಿಯಮಗಳ ಮೂಲಕ ಹಾಕಿದ ನಿಯಂತ್ರಣ, ಹಣ ಸಂಪಾದಿಸಲು ಅಶಕ್ತರಾದ ಕುಟುಂಬದ ಸದಸ್ಯರಿಗೆ ಸಾಮಾಜಿಕ ರಕ್ಷಣೆ, ಸ್ತ್ರೀ ಧನದ ಬಗ್ಗೆ ಸ್ತ್ರೀಯರಿಗೆ ಇರುವ ಸಂಪೂರ್ಣ ಹಕ್ಕುಗಳು, ಕರ್ತವ್ಯದೊಂದಿಗೆ ಬರುವ ಹಕ್ಕುಗಳು, ಹಿರಿಯರಿಗೆ ನೀಡಬೇಕಾದ ಗೌರವ ಹೀಗೆ ಕಾನೂನಿನ ಪ್ರತಿಯೊಂದು ವಿಷಯದ ಬಗ್ಗೆಯೂ ಅತ್ಯಂತ ಸ್ಪಷ್ಟವಾಗಿ ಮಿತವಾದ ಭಾಷೆಯಲ್ಲಿ ಅರ್ಥನಿರೂಪಣೆ ಮಾಡಿರುವುದು ಮಿತಾಕ್ಷರದ ಒಂದು ವಿಶೇಷತೆ.

'ಮಾನಸೋಲ್ಲಾಸ' ಅಥವಾ 'ಅಭಿಲಾಷಿತಾರ್ಥಚಿಂತಾಮಣಿ' :

ಮೂರನೆಯ ಸೋಮೇಶ್ವರನ 'ಮಾನಸೋಲ್ಲಾಸ' ಕೃತಿಯು ಕ್ರಿ.ಶ. ೧೧೨೯ ರಲ್ಲಿ ರಚನೆಯಾಯಿತೆಂದು, ಇದರ ದ್ವಿತೀಯ ವಿಂಶತಿಯು ಅಮಾತ್ಯಾಧ್ಯಾಯದ ಪಂಚಾಂಗನಿರ್ಣಯ ವಿಭಾಗದಲ್ಲಿ ಕಂಡುಬರುತ್ತದೆ. ಈ ಕೃತಿಯು ಐದು ವಿಂಶತಿಗಳಾಗಿ ವಿಭಾಗಿಸಲ್ಪಟ್ಟಿವೆ. ಪ್ರತಿಯೊಂದು ವಿಂಶತಿಯಲ್ಲಿ ೨೦ ಅಧ್ಯಾಯಗಳಿವೆ. ಹೀಗೆ ಇದು ಐದು ವಿಂಶತಿ, ನೂರು ಅಧ್ಯಾಯಗಳಲ್ಲಿ ವಿನ್ಯಾಸಗೊಂಡಿದೆ. ಎಲ್ಲಾ ಅಧ್ಯಾಯ ಸೇರಿ ಒಟ್ಟು ಸುಮಾರು ೮೦೦೦ ಶ್ಲೋಕಗಳು ಈ ಕೃತಿಯಲ್ಲಿವೆ. ಪ್ರಥಮ ವಿಂಶತಿಯಲ್ಲಿ ೩೦೮ ಶ್ಲೋಕ, ದ್ವಿತೀಯ ವಿಂಶತಿಯಲ್ಲಿ ೧೩೦೦ ಶ್ಲೋಕ, ತೃತೀಯ ವಿಂಶತಿಯಲ್ಲಿ ೧೮೨೦ ಶ್ಲೋಕ, ಚತುರ್ಥ ವಿಂಶತಿಯಲ್ಲಿ ೩೨೧ ಶ್ಲೋಕ, ಪಂಚಮ ವಿಂಶತಿಯಲ್ಲಿ ೧೩೭೫ ಶ್ಲೋಕಗಳಿವೆ.

ಮಾನಸೋಲ್ಲಾಸ ವಿಷಯ ವೈವಿಧ್ಯದಲ್ಲಿ ಅಸಾಧಾರಣವೆನಿಸಿದ್ದರೂ ಅದನ್ನು ಸಾಂಪ್ರದಾಯಿಕ ನಿರೂಪಣೆಗಳು, ಕಲ್ಪನಾ ಲಹರಿಗಳು, ವಾಸ್ತವಿಕ ಆಚರಣೆಗಳು ಎಂದು ವಿಭಾಗಿಸಬಹುದಾಗಿದೆ. ಈ ಗ್ರಂಥವು ಅಂದಿನ ಸಾಮಾಜಿಕ, ಆರ್ಥಿಕ, ಆಡಳಿತ, ಧಾರ್ಮಿಕ, ಉಡುಗೆ, ಅಲಂಕಾರ, ಆಭರಣ ಮುಂತಾದವುಗಳನ್ನು ತಿಳಿಯಲು ತುಂಬಾ ಉಪಯುಕ್ತ ಗ್ರಂಥವಾಗಿದೆ.

'ವಿಕ್ರಮಾಂಕಾಭ್ಯುದಯಂ' :

ಮೂರನೆಯ ಸೋಮೇಶ್ವರನ ಮತ್ತೊಂದು ಕೃತಿಯಾದ ವಿಕ್ರಮಾಂಕಾಭ್ಯುದಯಂದಲ್ಲಿ ಚಾಲುಕ್ಯವಂಶದ ವರ್ಣನೆ, ತೈಲಪ, ಆಹವಮಲ್ಲರ ವರ್ಣನೆ ಮತ್ತು ಆಹವಮಲ್ಲನ ಪುತ್ರಶೋಕದಿಂದ ಕೊರಗಿ ತಪಸ್ಸನ್ನು ಆಚರಿಸಿ ವರ ಪಡದು ಪುತ್ರಪ್ರಾಪ್ತಿಯನ್ನು ಮಾಡಿಕೊಂಡಿದುದನ್ನು ಮತ್ತು ವಿಕ್ರಮಾದಿತ್ಯನ ಜನನ, ಅವನ ನಾಮಕರಣ ಸಂಸ್ಕಾರ, ಬಾಲಲೀಲೆ, ಯುವರಾಜ ಪಟ್ಟಾಭಿಷೇಕ ಮುಂತಾದ ವಿಷಯಗಳನ್ನು ತಿಳಿಸುತ್ತದೆ.

ಈ ಮೇಲ್ಕಾಣಿಸಿದ ಕೃತಿಗಳು ಮೂರನೆಯ ಸೋಮೇಶ್ವರನ ಕಾಲದ ಇತಿಹಾಸವನ್ನು ತಿಳಿದುಕೊಳ್ಳಲು ಸಹಕಾರಿಯಾಗಿವೆ.

ಅಧ್ಯಯನದ ರೀತಿ :

ಕನ್ನಡ ನಾಡಿನ ಇತಿಹಾಸದಲ್ಲಿ ಕಲ್ಯಾಣದ ಚಾಳುಕ್ಯರ ಯುಗವು ಉಜ್ವಲಯುಗ. ಕನ್ನಡಿಗರ ಕೀರ್ತಿ ಪ್ರತಾಪಗಳು ಭಾರತದ ಮೂಲೆ ಮೂಲೆಗಳಿಗೆ ಹಬ್ಬಿ ಪ್ರತಿಧ್ವನಿತವಾದ ಯುಗ. ಅಖಿಲಭಾರತ ಚರಿತ್ರೆಯಲ್ಲಿ ಅದನ್ನು 'ಕಲ್ಯಾಣದ ಚಾಳುಕ್ಯರ ಯುಗ'ವೆಂದು ಇತಿಹಾಸದ ತಜ್ಞರೊಬ್ಬರು ಕರೆದುದು ನ್ಯಾಯಯುತವಾಗಿಯೇ ಇದೆ. ಬಾದಾಮಿ ಚಾಳುಕ್ಯರು ಕರ್ನಾಟಕ ಸಾಮ್ರಾಜ್ಯದ ಸಂಘಟಿಕರಾದರೆ ಕಲ್ಯಾಣದ ಚಾಳುಕ್ಯರು ಅದನ್ನು ವೈಭವದ ಪರಾಕಾಷ್ಠತೆಗೇರಿಸಿದ ಕೀರ್ತಿಶಾಲಿಗಳು. ಕ್ರಿ.ಶ.ಸು. ೯೭೩ ರಲ್ಲಿ ಪ್ರಾಬಲ್ಯಕ್ಕೆ ಬಂದು ಎರಡು ಶತಮಾನಕ್ಕಿಂತ ಹೆಚ್ಚುಕಾಲ ಸಾರ್ವಭೌಮಾಧಿಕಾರವನ್ನು ಅನುಭವಿಸಿ, ದಕ್ಷಿಣ ಭಾರತದ ಹಲವಾರು ಪ್ರಬಲ ರಾಜಮನೆತನಗಳು ತಮಗೆ ತಲೆಬಾಗುವಂತೆ ಮಾಡಿ, ಅಂದಿನ ರಾಜಕೀಯ ಪರಿಸ್ಥಿತಿಯ ಸ್ಥಿರತೆಗೆ ಹವಣಿಸಿದ ಕಲ್ಯಾಣದ ಚಾಳುಕ್ಯರ ಮನೆತನಕ್ಕೆ ಹಲವು ಶತಮಾನಗಳ ಹಿನ್ನೆಲೆಯುಂಟು. ಇಂತಹ ಮಹಾನ್ ಅರಸೊತ್ತಿಗೆಯ ಶ್ರೇಷ್ಠ ಚಕ್ರವರ್ತಿಗಳಲ್ಲೊಬ್ಬನಾದ ಮೂರನೆಯ ಸೋಮೇಶ್ವರನ ಕಾಲದ ಸಮಗ್ರ ಚಿತ್ರವನ್ನೊದಗಿಸಲು ಪ್ರಸ್ತುತ ಅಧ್ಯಯನಕ್ಕೆ ಶಾಸನ, ಸಾಹಿತ್ಯ ಮತ್ತು ಇತರ ಗ್ರಂಥಗಳನ್ನು ಆಕರಗಳನ್ನಾಗಿ ಬಳಸಿಕೊಳ್ಳಲಾಗಿದೆ. ಈ ಅಧ್ಯಯನಕ್ಕೆ ಶಾಸನಗಳೇ ಮೊದಲ ಪ್ರಮಾಣೀಭೂತ ಆಕರಗಳಾಗಿರುವುದರಿಂದ ಪ್ರತಿಯೊಂದು ವಿಷಯದ ವಿವರಣೆಗಾಗಿ, ವಿಷಯದ ಸಂಗ್ರಹಣೆಗಾಗಿ ಪಟ್ಟಿಕೆ ಮಾದರಿಯನ್ನು ಅನುಸರಿಸಲಾಗಿದೆ. ಪೋಸ್ಟ್ ಕಾರ್ಡಿಗಿಂತ ಸ್ವಲ್ಪ ದೊಡ್ಡದಾಗಿರುವ ಪ್ರತಿ ಪಟ್ಟಿಕೆಗೆ ಒಂದೊಂದು ವಿಷಯದೊಂದಿಗೆ

ಶಾಸನ ದೊರೆತು ಪ್ರಕಟವಾದ ಗ್ರಂಥ, ಶಾಸನ ದೊರೆತ ಸ್ಥಳ, ತಾಲ್ಲೂಕು, ಜಿಲ್ಲೆ, ತೇದಿ (ಕಾಲಮಾನ) ಮುಂತಾದ ವಿವರಗಳನ್ನೊಳಗೊಂಡಿರುವಂತೆ ನೋಡಿಕೊಳ್ಳಲಾಗಿದೆ. ಈ ಪಟ್ಟಿಕೆಗಳ ಮರುವಿಂಗಡಣೆ ಮಾಡಿಕೊಳ್ಳುವುದಕ್ಕೆ, ಸಹಕಾರಿಯಾಗುವುದಕ್ಕೆ ರಾಜಕೀಯ, ಆಡಳಿತ,ಸಾಮಾಜಿಕ, ಧಾರ್ಮಿಕ, ಆರ್ಥಿಕ, ಕಲೆ, ವಾಸ್ತುಶಿಲ್ಪ ವಿಭಾಗಗಳ ಸೂಚನಾ ವಿವರಗಳನ್ನು ಈ ಪಟ್ಟಿಕೆಗಳು ಒಳಗೊಂಡಿರುವಂತೆ ನೋಡಿಕೊಳ್ಳಲಾಗಿದೆ. ಆಮೇಲೆ ಇವೆಲ್ಲವುಗಳನ್ನು ಒಮ್ಮೆ ಕಾಲಾನುಕ್ರಮವಾಗಿ ಹೊಂದಿಸಿ ಇನ್ನೊಮ್ಮೆ ಪ್ರದೇಶಾನುಕ್ರಮವಾಗಿ ಹೊಂದಿಸಿ ಮತ್ತೊಮ್ಮೆ ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ, ಶೈಕ್ಷಣಿಕ ದೃಷ್ಟಿಯಿಂದ ಕ್ರಮವಾಗಿ ಹೊಂದಿಸಿ ಎಲ್ಲ ನಿಟ್ಟಿನಿಂದಲೂ ನೋಡಲಾಯಿತು.

ವ್ಯಾಪ್ತಿ :

ಕಲ್ಯಾಣದ ಚಾಳುಕ್ಯ ಚಕ್ರವರ್ತಿ ಮೂರನೆಯ ಸೋಮೇಶ್ವರನ ಕಾಲವಾದ ಕ್ರಿ.ಶ. ೧೧೨೬ ರಿಂದ ೧೧೩೮ ರವರೆಗಿನ ಅವಧಿಯು ನಮ್ಮ ಅಧ್ಯಯನದ ವ್ಯಾಪ್ತಿಯಾಗಿದ್ದರೂ ಸಹ ಅಧ್ಯಯನದ ಅನುಕೂಲಕ್ಕಾಗಿ ಅವನ ತಂದೆ ಆರನೆಯ ವಿಕ್ರಮಾದಿತ್ಯ ಮತ್ತು ಮಗನಾದ ಎರಡನೆಯ ಜಗದೇಕಮಲ್ಲ, ಮೂರನೆಯ ತೈಲಪನ ಶಾಸನಗಳನ್ನೂ ಸಹ ಆಧಾರವಾಗಿ ತೆಗೆದುಕೊಳ್ಳಲಾಗಿದೆ. ಹೀಗೆ ಶಾಸನಗಳಿಂದ ತಿಳಿದುಬರುವ ವಿಷಯಗಳನ್ನು ಮೂಲಸಾಮಗ್ರಿಗಳನ್ನಾಗಿಟ್ಟುಕೊಂಡು ಆ ವಿಷಯದ ಸ್ಪಷ್ಟನೆಗಾಗಿ ಸಮಕಾಲೀನ ಸಾಹಿತ್ಯ ಕೃತಿಗಳಾದ ವಿಜ್ಞಾನೇಶ್ವರನ 'ಮಿತಾಕ್ಷರ', ನಯಸೇನನ 'ಧರ್ಮಾಮೃತ', ಚಾವುಂಡರಾಯನ 'ಲೋಕೋಪಕಾರಕಂ', ಭೂಲೋಕಮಲ್ಲನ 'ವಿಕ್ರಮಾಂಕಾಭ್ಯುದಯಂ' ಮತ್ತು 'ಮಾನಸೋಲ್ಲಾಸ', ಬಿಲ್ಹಣನ 'ವಿಕ್ರಮಾಂಕದೇವ ಚರಿತ' ಗ್ರಂಥಗಳ ನೆರವನ್ನು ಸಹ ಪಡೆಯಲಾಗಿದೆ.

ಇದಲ್ಲದೆ ಆಧುನಿಕ ವಿದ್ವಾಂಸರು ಬರೆದು ಬೇರೆ ಬೇರೆ ನಿಯತಕಾಲಿಕೆಗಳಲ್ಲಿ ಪ್ರಕಟಿಸಿದ ಲೇಖನಗಳನ್ನು, ಗ್ರಂಥಗಳನ್ನು ಪೂರಕ ಆಧಾರವಾಗಿ ಬಳಸಿಕೊಂಡು ಈ ಮಹಾಪ್ರಬಂಧವನ್ನು ರಚಿಸಲಾಗಿದೆಯಲ್ಲದೆ ಅಧ್ಯಯನದ ಅನುಕೂಲತೆಗಾಗಿ ಹತ್ತು ಅಧ್ಯಾಯಗಳನ್ನಾಗಿ ವಿಂಗಡಿಸಿಕೊಂಡು ಪ್ರಸ್ತುತಪಡಿಸಲಾಗಿದೆ.

ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ವ್ಯಾಪ್ತಿ, ಸ್ವರೂಪ, ಆಕರಗಳು ಮತ್ತು ಅಧ್ಯಯನದ ರೀತಿ ಮತ್ತು ಈವರೆಗೆ ಆಗಿರುವ ಅಧ್ಯಯನಗಳನ್ನು ಕುರಿತು ವಿವೇಚಿಸಲಾಗಿದೆ.

ಸೋಮೇಶ್ವರದ ಜೀವನ ಮತ್ತು ಸಾಧನೆ ಎಂಬ ಎರಡನೆಯ ಅಧ್ಯಾಯದಲ್ಲಿ ಮೂರನೆಯ ಸೋಮೇಶ್ವರನ ಪೂರ್ವದ ರಾಜಕೀಯ ಇತಿಹಾಸವನ್ನು ಪ್ರಾರಂಭದಲ್ಲಿ ಹೇಳಿ ಅವರ ಉಗಮ, ಸ್ಥಾಪನೆ, ಪ್ರಾರಂಭದ ಅರಸರುಗಳಾದ ಎರಡನೆಯ ತೈಲಪ, ಸತ್ಯಾಶ್ರಯ, ಎರಡನೆಯ ಜಯಸಿಂಹ, ಐದನೆಯ ವಿಕ್ರಮಾದಿತ್ಯ, ಒಂದನೆಯ ಸೋಮೇಶ್ವರ, ಎರಡನೆಯ ಸೋಮೇಶ್ವರ, ಆರನೆಯ ವಿಕ್ರಮಾದಿತ್ಯ ಇವರ ಕಾಲದ ಘಟನೆಗಳನ್ನು ಸಂಕ್ಷಿಪ್ತವಾಗಿ ಹೇಳಿ ಮೂರನೆಯ ಸೋಮೇಶ್ವರನ ಜೀವನ ಮತ್ತು ಸಾಧನೆಗಳನ್ನು ಕುರಿತು ಸಮಗ್ರವಾಗಿ ವಿವೇಚಿಸಲಾಗಿದೆ. ಈ ಅಧ್ಯಾಯವು ನಮ್ಮ ಮಹಾಪ್ರಬಂಧದ ಮಹತ್ವಪೂರ್ಣ ಭಾಗವಾಗಿದೆ.

ಆಡಳಿತ ವಿಭಾಗಗಳು ಎಂಬ ಮೂರನೆಯ ಅಧ್ಯಾಯದಲ್ಲಿ ಮೂರನೆಯ ಸೋಮೇಶ್ವರನು ಆಡಳಿತದ ಅನುಕೂಲತೆಗಾಗಿ ಸಾಮ್ರಾಜ್ಯವನ್ನು ನಾಡು, ಕಂಪಣ, ಮಂಡಳ, ಗ್ರಾಮ ಎಂಬ ವಿಭಾಗಗಳನ್ನು ಮಾಡಿಕೊಂಡು ಆಡಳಿತವನ್ನು ನಿರ್ವಹಿಸುತ್ತಿದ್ದನು. ಮೂರನೆಯ ಸೋಮೇಶ್ವರನ ಕಾಲದ ಶಾಸನಗಳಲ್ಲಿ ಅಣಂದೂರು-೩೦೦, ಅವರವಾಡಿ-೨೦೦, ಸಕ್ಕರಿಗ-೮೦, ಬೋಧನ-೨೦೦, ಬೆಳ್ವಲ-೩೦೦, ಪುಲಿಗೆರೆ-೩೦೦, ಬೆಣ್ಣೆದಡಿ-೨೦, ಕೊಳನೂರು-೩೦, ಬತ್ತಗಾವೆ-೧೮, ಕೆಳವಾಡಿ-೩೦೦, ಪಾನಂಗಲ್ಲು-೫೦೦, ಸಿಂಧವಾಡಿ-೧೦೦೦, ಆದವಾನಿ-೫೦೦, ಗರುಜೆ-೨೦, ಕರಡಿಕಲ್ಲು-೩೦೦, ಸಬ್ಬಿ-೧೦೦೦, ಕೊಂಕಣ-೯೦೦ ಮುಂತಾದ ಆಡಳಿತ ವಿಭಾಗಗಳನ್ನು ಕುರಿತು ವಿವೇಚಿಸಲಾಗಿದೆ.

ನಾಲ್ಕನೆಯ ಅಧ್ಯಾಯವು ಮೂರನೆಯ ಸೋಮೇಶ್ವರನ ಕಾಲದ ಸಾಮಂತರು ಹಾಗೂ **ಅಧಿಕಾರಿವರ್ಗ**ದವರನ್ನು ಅರಸರನ್ನು ಕುರಿತಿರುವದಾಗಿದೆ. ಇದರಲ್ಲಿ ಸಾಮಂತರು, ಮಹಾಮಂಡಳೇಶ್ವರರು, ಗಾವುಂಡರು, ಮಹಾಸಾಮಂತಾಧಿಪತಿಗಳು, ಮಹಾಪ್ರಚಂಡ ದಂಡನಾಯಕರು, ದಂಡನಾಯಕರು, ಪೆರ್ಗ್ಗಡೆಗಳು ಇವರನ್ನು ಕುರಿತು ಪ್ರಸ್ತಾಪಿಸಲಾಗಿದೆ.

ಆರ್ಥಿಕ ಪರಿಸ್ಥಿತಿ ಎಂಬ ಐದನೆಯ ಅಧ್ಯಾಯದಲ್ಲಿ ಮೂರನೆಯ ಸೋಮೇಶ್ವರನ ಕಾಲದ ಶಾಸನಗಳಲ್ಲಿ ಅಭಿವ್ಯಕ್ತವಾಗಿರುವ ಭೂಮಿಯ ಪ್ರಕಾರಗಳು, ಬೆಳೆಗಳು, ನೀರಾವರಿ ವ್ಯವಸ್ಥೆ, ತೆರಿಗೆಗಳು, ವಾಣಿಜ್ಯ, ವ್ಯಾಪಾರ, ಕೈಗಾರಿಕೆಗಳು, ನಾಣ್ಯಗಳು, ತೂಕ - ಅಳತೆಗಳು ಮುಂತಾದ ವಿಷಯಗಳನ್ನು ಚರ್ಚಿಸಲಾಗಿದೆ.

ಸಾಮಾಜಿಕ ಪರಿಸ್ಥಿತಿ ಎಂಬ ಆರನೆಯ ಅಧ್ಯಾಯದಲ್ಲಿ ಚತುರ್ವರ್ಣಗಳಾದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರನ್ನು ಕುರಿತು ಹೇಳಿ ಅಂದಿನ ಸಮಾಜದಲ್ಲಿದ್ದ ವೃತ್ತಿಕಾರರಾದ ಕಮ್ಮಾರ, ಕುಂಬಾರ, ಅಕ್ಕಸಾಲಿಗ, ಬಡಿಗ, ಮಾಲೆಗಾರ, ಕಂಚುಗಾರ ಮುಂತಾದ ವೃತ್ತಿಗಾರರನ್ನು ಕುರಿತು ಚರ್ಚಿಸಿ, ಅಂದಿನ ಸಮಾಜದಲ್ಲಿ ಸ್ತ್ರೀಯರಿಗೆ ಇದ್ದ ಸ್ಥಾನಮಾನಗಳನ್ನು ಕುರಿತು ವಿವೇಚಿಸಲಾಗಿದೆ.

ಏಳನೆಯ ಅಧ್ಯಾಯವು **ಶಿಕ್ಷಣ** ಮತ್ತು **ಸಾಹಿತ್ಯ**ವನ್ನು ಒಳಗೊಂಡಿರುವಂತಹದ್ದಾಗಿದೆ. ಇದರಲ್ಲಿ ಶಿಕ್ಷಣ ಕೇಂದ್ರಗಳಾದ ಅಗ್ರಹಾರ, ಘಟಿಕಸ್ಥಾನ, ಬ್ರಹ್ಮಪುರಿ, ದೇವಾಲಯ, ಮಠಗಳನ್ನು ಕುರಿತು ಹೇಳಿ ಆ ಕಾಲದಲ್ಲಿಯ ಪ್ರಮುಖ ಅಗ್ರಹಾರಗಳಾದ ತಿಳವಳ್ಳಿ, ಕುಕನೂರು, ಮಲಘಾನ, ಏರಿಗೆ, ನರಗುಂದ, ತಾಳಗುಂದ ಮುಂತಾದವುಗಳನ್ನು ಕುರಿತು ಹೇಳಲಾಗಿದೆ. ಈ ಶಿಕ್ಷಣ ಕೇಂದ್ರಗಳು ಕಲಿಸುತ್ತಿದ್ದ ಅಧ್ಯಯನದ ವಿಷಯಗಳು, ವೃತ್ತಿಶಿಕ್ಷಣ, ಸ್ತ್ರೀಶಿಕ್ಷಣ ಇವುಗಳನ್ನು ಕುರಿತು ಹೇಳಲಾಗಿದೆ.

ಎಂಟನೆಯ ಅಧ್ಯಾಯವು ಧಾರ್ಮಿಕ ಪರಿಸ್ಥಿತಿಗೆ ಸಂಬಂಧಿಸಿದ್ದಾಗಿದೆ. ಮೂರನೆಯ ಸೋಮೇಶ್ವರನು ಮಹಾನ್ ಧರ್ಮ ಸಹಿಷ್ಣುತಾವಾದಿಯಾಗಿದ್ದುದಲ್ಲದೆ ಬೇರೆ ಬೇರೆ ಮತ-ಪಂಥಗಳಿಗೆ ಸಂಬಂಧಿಸಿದ ಅನೇಕ ದೇವಾಲಯಗಳನ್ನು ನಿರ್ಮಿಸಿದುದಲ್ಲದೇ ಅವುಗಳ ನಿರ್ವಹಣೆಗಾಗಿ ದಾನ ದತ್ತಿಗಳನ್ನು ಕೊಟ್ಟಿರುವುದನ್ನು ವಿವೇಚಿಸಲಾಗಿದೆ. ಶೈವ, ವೈಷ್ಣವ, ಜೈನ ಧರ್ಮಗಳ ದೇವಾಲಯಗಳಿಗೆ ದಾನ ಕೊಟ್ಟಿರುವುದನ್ನು ಚರ್ಚಿಸಲಾಗಿದೆ.

ದೇವಾಲಯಗಳು ಎಂಬ ಒಂಬತ್ತನೆಯ ಅಧ್ಯಾಯದಲ್ಲಿ ಮೂರನೆಯ ಸೋಮೇಶ್ವರನ ಕಾಲದಲ್ಲಿ ನಿರ್ಮಾಣವಾಗಿರುವ ದೇವಾಲಯಗಳು ಮತ್ತು ಶಿಲ್ಪಕಲೆಯನ್ನು ಕುರಿತು ವಿವೇಚಿಸಲಾಗಿದೆ. ಇವರ ಕಾಲದ ಪ್ರಮುಖ ದೇವಾಲಯಗಳಾದ ಲಕ್ಷ್ಮೇಶ್ವರದ ಸೋಮನಾಥ ದೇವಾಲಯ, ಕಾಮಧೇನುವಿನ ಕಲಿದೇವಸ್ವಾಮಿ ದೇವಾಲಯ, ಬಂಕಾಪುರದ ನಗರೇಶ್ವರ ದೇವಾಲಯ, ಹಾವೇರಿಯ ಸಿದ್ದೇಶ್ವರ ದೇವಾಲಯ, ಮಣ್ಣೂರಿನ ಭೀಮೇಶ್ವರ ದೇವಾಲಯಗಳು ಪ್ರಮುಖವಾದವುಗಳು. ಇವುಗಳನ್ನು ಕುರಿತು ಪ್ರಸ್ತಾಪಿಸಲಾಗಿದೆ.

ಕೊನೆಯದಾದ ಹತ್ತನೆಯ ಅಧ್ಯಾಯವಾದ ಉಪಸಂಹಾರದಲ್ಲಿ ಒಟ್ಟಾರೆ ಪ್ರಬಂಧದ ತಿರುಳನ್ನು ಮತ್ತು ಅವನ ಕಾಲದ ವಿಶಿಷ್ಟವಾದ ಅಂಶಗಳನ್ನು ಹೇಳಲಾಗಿದೆ. ಕೊನೆಯಲ್ಲಿ ಸುಧೀರ್ಘವಾದ ಗ್ರಂಥಋಣವನ್ನು ಕೊಡಲಾಗಿದ್ದು, ಅನುಬಂಧದಲ್ಲಿ ಮೂರನೆಯ ಸೋಮೇಶ್ವರನ ಕಾಲದ ದೇವಾಲಯಗಳ, ಶಿಲ್ಪಗಳ ಛಾಯಾಚಿತ್ರವನ್ನು, ದೇವಾಲಯಗಳ ತಲವಿನ್ಯಾಸಗಳನ್ನು, ಅವನ ಕಾಲದ ಶಾಸನಗಳ ಸಾರಾಂಶವನ್ನು ಮತ್ತು ಶೈಕ್ಷಣಿಕ ಸಂಸ್ಥೆಗಳ ಸ್ಥಾನಾಚಾರ್ಯರ ಪಟ್ಟಿಯನ್ನು ನೀಡಲಾಗಿದೆ. ಹೀಗೆ ಈ ಪ್ರಬಂಧದಲ್ಲಿ ಮೂರನೆಯ ಸೋಮೇಶ್ವರನ ಸೈನಿಕ ಸಾಧನೆಗಳನ್ನು ಪರಿಚಯಿಸುವುದರೊಂದಿಗೆ ಆ ಕಾಲದ ಸಮಗ್ರ ಸಂಸ್ಕೃತಿಯನ್ನು ಒಂದೆಡೆ ತರಲು ಇಲ್ಲಿ ಪ್ರಯತ್ನಿಸಲಾಗಿದೆ. ಈ ಪ್ರಯತ್ನಕ್ಕೆ ಶಾಸನಗಳು,ಸಾಹಿತ್ಯ ಕೃತಿಗಳಿಂದ ಪುಷ್ಟಿಯನ್ನು ನೀಡಲಾಗಿದೆ.

ಅಧ್ಯಾಯ-ಎರಡು Chapter-2

ಮೂರನೆಯ ಸೋಮೇಶ್ವರನ ಜೀವನ ಮತ್ತು ಸಾಧನೆ

ರಾಷ್ಟ್ರಕೂಟರ ಪತನಾನಂತರ ಕಲ್ಯಾಣದಲ್ಲಿ ಚಾಳುಕ್ಯರು ಸ್ವತಂತ್ರ ಸಾಮ್ರಾಜ್ಯವನ್ನು ಸ್ಥಾಪಿಸಿ ಸುಮಾರು ೨೨೫ ವರ್ಷಗಳ ಕಾಲ ಆಳಿದರು. ಇವರಲ್ಲಿ ಪ್ರಮುಖರಾದವರೆಂದರೆ ಎರಡನೆಯ ತೈಲಪ, ಸತ್ಯಾಶ್ರಯ, ಒಂದನೆಯ ಸೋಮೇಶ್ವರ, ಆರನೆಯ ವಿಕ್ರಮಾದಿತ್ಯ, ಮೂರನೆಯ ಸೋಮೇಶ್ವರ ಈ ವಂಶದ ಪ್ರಮುಖ ಅರಸರು. ಇವರ ಕಾಲದಲ್ಲಿ ಸಾಹಿತ್ಯ ಕ್ಷೇತ್ರದಲ್ಲಿ ವಿದ್ವತ್‌ಪೂರ್ಣ ಕೃತಿಗಳು ರಚನೆಯಾದರೆ ವಿವಿಧ ಮಾದರಿಯ ಸುಂದರ ಕೆತ್ತನೆಯ ದೇವಾಲಯಗಳು ಸಹ ರಾಜ್ಯದ ವಿವಿಧ ಭಾಗಗಳಲ್ಲಿ ನಿರ್ಮಾಣವಾದವು.

ಬಾದಾಮಿ ಚಾಳುಕ್ಯರ ಕೊನೆಯ ಅರಸ ಎರಡನೆಯ ಕೀರ್ತಿವರ್ಮನ ಪತನದ ನಂತರ ಭೀಮಪರಾಕ್ರಮ, ಮೂರನೆಯ ಕೀರ್ತಿವರ್ಮ, ತೈಲಪ, ಮೂರನೆಯ ವಿಕ್ರಮಾದಿತ್ಯ, ಇಮ್ಮಡಿ ಭೀಮ, ಅಯ್ಯಣ ಮತ್ತು ನಾಲ್ಕನೆಯ ವಿಕ್ರಮಾದಿತ್ಯ ರಾಜ್ಯಭಾರ ಮಾಡಿದರು. ಆದರೆ ರಾಷ್ಟ್ರಕೂಟರ ಪ್ರಾಬಲ್ಯದಿಂದ ಇವರು ಸಮರ್ಥ ಹೋರಾಟ ನಡೆಸಲಿಲ್ಲ. ನಂತರ ಕ್ರಿ.ಶ. ೯೭೩ ರಲ್ಲಿ ಎರಡನೆಯ ತೈಲಪ ರಾಷ್ಟ್ರಕೂಟರ ಕರ್ಕನನ್ನು ಸೋಲಿಸಿ, ಸ್ವತಂತ್ರ ರಾಜ್ಯವನ್ನು ಸ್ಥಾಪಿಸಿದನು. ಪ್ರಾರಂಭದಲ್ಲಿ ಮಾನ್ಯಖೇಟವನ್ನೆ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದ ಇವರು ಅನಂತರ ಯಾದಗಿರಿಗೆ ವರ್ಗಾಯಿಸಿದರು. ಆದರೆ ಒಂದನೆಯ ಸೋಮೇಶ್ವರನ ಕಾಲದಲ್ಲಿ ಕಲ್ಯಾಣವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಇತಿಹಾಸ ಪುಟದಲ್ಲಿ ಕಲ್ಯಾಣದ ಚಾಳುಕ್ಯರಾಗಿ ಹೆಸರಾಗಿದ್ದಾರೆ. ಮೂರನೆಯ ಸೋಮೇಶ್ವರನಿಗಿಂತ ಪೂರ್ವದಲ್ಲಿ ಆಳಿದ ಅರಸರ ಚರಿತ್ರೆಯನ್ನು ಸಂಕ್ಷಿಪ್ತವಾಗಿ ತಿಳಿದುಕೊಂಡು ಅನಂತರ ಮೂರನೆಯ ಸೋಮೇಶ್ವರನ ಜೀವನ ಹಾಗೂ ಸಾಧನೆಗಳನ್ನು ಮುಂದೆ ನೋಡೋಣ.

ಎರಡನೆಯ ತೈಲಪ (ಕ್ರಿ.ಶ. ೯೭೩ ರಿಂದ ಕ್ರಿ.ಶ. ೯೯೭) :

ಕಲಚೂರಿ ರಾಜಕುಮಾರಿಯಾದ ಬೊಂತಾದೇವಿಯ ಮಗನಾದ ಎರಡನೆಯ ತೈಲಪನು ರಾಷ್ಟ್ರಕೂಟ ಮೂರನೆಯ ಕೃಷ್ಣನ ಸಾಮಂತನಾಗಿ ಸೇವೆ ಪ್ರಾರಂಭಿಸಿ ಮುಂದೆ ರಾಜನಾದನು. ತೈಲಪನನ್ನು ತೈಲ, ತೈಲಪ್ಪ ಮತ್ತು ತೈಲಪ್ಪಯ್ಯ ಎಂದೂ ಶಾಸನಗಳಲ್ಲಿ ಹೆಸರಿಸಲಾಗಿದೆ. ಅಲ್ಲದೆ ಈತನಿಗೆ 'ಸತ್ಯಾಶ್ರಯ ಕುಲತಿಲಕ', 'ಮಹಾರಾಜಾಧಿರಾಜ', 'ಪ್ರಥ್ವಿವಲ್ಲಭ', 'ಮಹಾಸಾಮಂತ' ಮತ್ತು 'ಅಹವಮಲ್ಲ' ಎಂಬ ಬಿರುದುಗಳಿದ್ದವು.

ಇಮ್ಮಡಿ ತೈಲಪನು ಗಂಗ ಮಾರಸಿಂಹನ ಅಧಿಕಾರಿಯನ್ನು ಮತ್ತು ರಾಷ್ಟ್ರಕೂಟರ ಸಾಮಂತನಾದ ಪಾಂಚಾಲದೇವನನ್ನು ಕ್ರಿ.ಶ. ೯೭೭ ರಲ್ಲಿ ಸೋಲಿಸಿದನು. ನಂತರ ಕ್ರಿ.ಶ. ೯೮೦ ರಲ್ಲಿ ಚೋಳರ ರಾಜನಾದ ರಾಜರಾಜ ಚೋಳನನ್ನು ಸೋಲಿಸಿ ಆತನಿಂದ ವಶಪಡಿಸಿಕೊಂಡ ಪ್ರದೇಶಕ್ಕೆ ತನ್ನ ಮಗನಾದ ಸತ್ಯಾಶ್ರಯನನ್ನು ರಾಜ್ಯಪಾಲನನ್ನಾಗಿ

ನೇಮಿಸಿದನು. ಹೀಗೆ ತೈಲಪನು ದಕ್ಷಿಣ ಭಾರತದಲ್ಲಿ ವಿಶಾಲವಾದ ಸಾಮ್ರಾಜ್ಯವನ್ನು ಸ್ಥಾಪಿಸಿ ೨೪ ವರ್ಷಗಳ ಕಾಲ ರಾಜ್ಯಭಾರ ಮಾಡಿದನು. ತೈಲನ ಪತ್ನಿ ಜಾಕವ್ವೆಯಲ್ಲಿ ಇಬ್ಬರು ಪುತ್ರರು ಜನಿಸಿದರು. ಸತ್ಯಾಶ್ರಯ ಮತ್ತು ದಸವರ್ಮ. ತೈಲನ ಮರಣಾನಂತರ ಸತ್ಯಾಶ್ರಯನು ಪಟ್ಟಕ್ಕೆ ಬಂದನು.

ಸತ್ಯಾಶ್ರಯ (ಕ್ರಿ.ಶ. ೯೯೭ ರಿಂದ ಕ್ರಿ.ಶ. ೧೦೦೮) :

ಇರಿವಬೆಡಂಗವೆಂತಲೂ ಕರೆಯಲ್ಪಡುತ್ತಿದ್ದ ಈತನಿಗೆ ಅಹವಮಲ್ಲ, 'ಸಾಹಸಭೀಮ', 'ಚಾಲುಕ್ಯ-ಮಾರ್ತಾಂಡ', 'ಅಕಾಲವರ್ಷ', 'ಅಕಳಂಕ ಚರಿತ' ಎಂಬ ಬಿರುದುಗಳಿದ್ದವು. ಇವನೂ ಸಹ ತಂದೆಯ ರಾಜ್ಯ ವಿಸ್ತರಣಾ ನೀತಿಯನ್ನು ಮುಂದುವರಿಸಿದನು. ಸಾಹಿತ್ಯಪ್ರಿಯನಾದ ಈತ ಕನ್ನಡದ ಶ್ರೇಷ್ಠ ಕವಿಗಳಲ್ಲೊಬ್ಬನಾದ ರನ್ನನ ಪೋಷಕನಾಗಿದ್ದನು. ಸತ್ಯಾಶ್ರಯನಿಗೆ ಪಂಪಾದೇವಿ ಮತ್ತು ಮಹಾದೇವಿ ಎಂಬ ಹೆಣ್ಣುಮಕ್ಕಳಿದ್ದರು. ಮಹಾದೇವಿಯನ್ನು ನೊಳಂಬರ ಘಂಟೆಯಂಕಕಾರ ಇರಿವನೊಳಂಬನು ಮತ್ತು ಪಂಪಾದೇವಿಯನ್ನು ಕುಂದಮರಸನು ಮದುವೆಯಾಗಿದ್ದನು. ಸತ್ಯಾಶ್ರಯನಿಗೆ ಪುತ್ರಸಂತಾನವಿರದ ಕಾರಣ ಸಹೋದರರ ಮಗನಾದ ಐದನೆಯ ವಿಕ್ರಮಾದಿತ್ಯ ಅಧಿಕಾರಕ್ಕೆ ಬಂದನು.

ಐದನೆಯ ವಿಕ್ರಮಾದಿತ್ಯ (ಕ್ರಿ.ಶ. ೧೦೦೮ ರಿಂದ ಕ್ರಿ.ಶ. ೧೦೧೫) :

ಐದನೆಯ ವಿಕ್ರಮಾದಿತ್ಯನು ದಶವರ್ಮನ ಮಗ. ಇವನಿಗೆ 'ತ್ರಿಭುವನಮಲ್ಲ', 'ವಲ್ಲಭನರೇಂದ್ರ' ಎಂಬ ಬಿರುದುಗಳಿದ್ದವು. ಇವನದು ಅಲ್ಪ ಅವಧಿಯ ಆಳ್ವಿಕೆ. ಅವನ ಕಾಲದ ಶಾಸನಗಳೂ ವಿರಳ. ಇವನ ದೌರ್ಬಲ್ಯವನ್ನು ಉಪಯೋಗಿಸಿಕೊಂಡು ಚೋಳರು ಮತ್ತು ಪರಮಾರರು ಕಲ್ಯಾಣ ಚಾಲುಕ್ಯ ರಾಜ್ಯದ ಮೇಲೆ ದಾಳಿ ಮಾಡಿದರು. ಈ ದಾಳಿಯನ್ನು ತಡೆಗಟ್ಟಲು ಅವನು ನಿರಂತರವಾಗಿ ಹೋರಾಡಿದನು. ಇವನ ನಂತರ ಅವನ ತಮ್ಮ ಆಯ್ಯಣ್ಣನು ರಾಜನಾಗಿ ಕೇವಲ ಒಂದು ವರ್ಷ ಮಾತ್ರ ಆಳ್ವಿಕೆ ನಡೆಸಿದನು. ಅನಂತರ ಅವನ ಸಹೋದರ ಎರಡನೆಯ ಜಯಸಿಂಹನು ಅಧಿಕಾರಕ್ಕೆ ಬಂದನು.

ಎರಡನೆಯ ಜಯಸಿಂಹ (ಕ್ರಿ.ಶ. ೧೦೧೫ ರಿಂದ ಕ್ರಿ.ಶ. ೧೦೪೪) :

'ತ್ರೈಲೋಕ್ಯಮಲ್ಲ', 'ಜಗದೇಕಮಲ್ಲ', 'ಮಲ್ಲಿಕಾಮೋದ' ಮತ್ತು 'ವಿಕ್ರಮಸಿಂಹ' ಎಂಬ ಬಿರುದುಗಳಿದ್ದವು. ಈತನು ಸಹ ಹಲವು ಕಡೆ ಯುದ್ಧ ಮಾಡಬೇಕಾಯಿತು. ಪರಮಾರ ದೊರೆ ಭೋಜ ಕಲಚೂರಿ ಗಾಂಗೇಯದೇವ ಮತ್ತು ರಾಜೇಂದ್ರಚೋಳ ಇವರ ಆಕ್ರಮಣವನ್ನು ಎದುರಿಸಬೇಕಾಯಿತು. ಹೊಯ್ಸಳರ ಮಾಂಡಲಿಕರಾದ ಚೆಂಗಳ್ವ ಮತ್ತು ಕೊಂಗಾಳ್ವರನ್ನು ಸೋಲಿಸಿದನು. ಜಯಸಿಂಹನಿಗೆ ಸುಗ್ಗಲದೇವಿ, ದೂವಲದೇವಿ ಮತ್ತು ಲಕ್ಷ್ಮೀದೇವಿಯರೆಂಬ ರಾಣಿಯರಿದ್ದರು. ಮೊದಲನೆಯ ಸೋಮೇಶ್ವರ ಮತ್ತು ಮೂರನೆಯ ಜಯಸಿಂಹ ಎಂಬ ಗಂಡುಮಕ್ಕಳು, ಅವ್ವಲದೇವಿ, ಸೋಮಲದೇವಿಯರೆಂಬ ಹೆಣ್ಣುಮಕ್ಕಳಿದ್ದರು.

ಒಂದನೆಯ ಸೋಮೇಶ್ವರ (ಕ್ರಿ.ಶ. ೧೦೪೪ ರಿಂದ ಕ್ರಿ.ಶ. ೧೦೬೮) :

ಇಮ್ಮಡಿ ಜಯಸಿಂಹನ ಜೇಷ್ಠ ಪುತ್ರ. ಒಂದನೆಯ ಸೋಮೇಶ್ವರನು 'ಅಹವಮಲ್ಲ' ಮತ್ತು 'ತ್ರೈಲೋಕ್ಯಮಲ್ಲ' ಎಂದು ಬಿರುದಾಂಕಿತನಾದ ಇವನು ಸುಮಾರು ೨೫ ವರ್ಷಗಳ ಕಾಲ ರಾಜ್ಯಭಾರ ಮಾಡಿದನು. ಚೋಳ ಮತ್ತು ಚಾಳುಕ್ಯರ ನಡುವಿನ ಬದ್ಧ ದ್ವೇಷದಿಂದಾಗಿ ಇವನ ಆಳ್ವಿಕೆಯುದ್ದಕ್ಕೂ ಸತತ ಹೋರಾಟಗಳು ನಡೆದವು. ಸೋಮೇಶ್ವರನು ಚಾಲುಕ್ಯ ಸಾಮ್ರಾಜ್ಯವನ್ನು ವಿಸ್ತರಿಸಿದನಲ್ಲದೆ ವೆಂಗಿ, ಪರಮಾರ, ಪ್ರತಿಹಾರ ಮತ್ತು ಕಳಚೂರಿ ಅರಸರ ಮೇಲೆ ತನ್ನ ನಿಯಂತ್ರಣ ಸಾಧಿಸಿದನು. ಈವರೆಗೆ ರಾಜಧಾನಿಯಾಗಿದ್ದ ಯಾದಗಿರಿಯಿಂದ ಕಲ್ಯಾಣಕ್ಕೆ ರಾಜಧಾನಿಯನ್ನು ವರ್ಗಾಯಿಸಿಕೊಂಡ ಕೀರ್ತಿ ಇವನಿಗೆ ಸಲ್ಲುತ್ತದೆ. ಇವನಿಗೆ ಬಾಚಲದೇವಿ, ಚಂದಲಕಬ್ಬೆ, ಮೈಲಳದೇವಿ, ಲೀಲಾದೇವಿ, ಮೈಳಲದೇವಿ ಮೊದಲಾದ ಎಂಟು ಜನ ರಾಣಿಯರು , ಎರಡನೆಯ ಸೋಮೇಶ್ವರ, ಆರನೆಯ ವಿಕ್ರಮಾದಿತ್ಯ, ನಾಲ್ಕನೆಯ ಜಯಸಿಂಹರೆಂಬ ಗಂಡುಮಕ್ಕಳು ಸುಗ್ಗಲದೇವಿ ಎಂಬ ಹೆಣ್ಣು ಮಗಳಿದ್ದಳು. ಈತನು ತನ್ನ ಕೊನೆಗಾಲದಲ್ಲಿ ಉತ್ಕಟವಾದ ಅನಾರೋಗ್ಯದಿಂದ ನರಳುತ್ತಿದ್ದರಿಂದ ತುಂಗಭದ್ರಾ ನದಿಯಲ್ಲಿ ಮುಳುಗಿ ಪ್ರಾಣತ್ಯಾಗ ಮಾಡಿದನೆಂದು ಕ್ರಿ.ಶ. ೧೦೬೮ ರ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ಶಾಸನದಿಂದ ತಿಳಿದು ಬರುತ್ತದೆ.

ಎರಡನೆಯ ಸೋಮೇಶ್ವರ (ಕ್ರಿ.ಶ. ೧೦೬೮ ರಿಂದ ಕ್ರಿ.ಶ. ೧೦೭೬) :

ಒಂದನೆಯ ಸೋಮೇಶ್ವರನ ಮರಣದ ನಂತರ ಅವನ ಹಿರಿಯ ಮಗ ಎರಡನೆಯ ಸೋಮೇಶ್ವರನು ಅಧಿಕಾರಕ್ಕೆ ಬಂದನು. ಆದರೆ ಇವನ ಅಲ್ಪ ಅವಧಿಯ ಆಳ್ವಿಕೆಯು ಕಷ್ಟಕಾಲವಾಗಿತ್ತು. ಈತ ಸಿಂಹಾಸನಕ್ಕೆ ಬಂದೊಡನೆಯೇ ಚಾಲುಕ್ಯ ರಾಜ್ಯದ ಪರಿಸ್ಥಿತಿಯ ಪ್ರಯೋಜನ ಪಡೆಯಲೆತ್ನಿಸಿದ ಚೋಳರನ್ನು ಎದುರಿಸಬೇಕಾಯಿತು. ಮತ್ತು ಈತನ ಆಳ್ವಿಕೆಯ ಮತ್ತೊಂದು ಮುಖ್ಯವಾದ ಅಂಶವೆಂದರೆ ಅವನ ತಮ್ಮ ಆರನೆಯ ವಿಕ್ರಮಾದಿತ್ಯ ವಹಿಸಿದ ಪಾತ್ರ ಇವನು ಎರಡನೆಯ ಸೋಮೇಶ್ವರನನ್ನು ಸಿಂಹಾಸನದಿಂದ ತಳ್ಳಿ ತಾನೇ ಅಧಿಕಾರಕ್ಕೆ ಬಂದನೆಂದು ತಿಳಿದುಬರುತ್ತದೆ.


ಆರನೆಯ ವಿಕ್ರಮಾದಿತ್ಯ (ಕ್ರಿ.ಶ. ೧೦೭೬ ರಿಂದ ಕ್ರಿ.ಶ. ೧೧೨೭) :

ಆರನೆಯ ವಿಕ್ರಮಾದಿತ್ಯನು ಕಲ್ಯಾಣಿ ಚಾಲುಕ್ಯರಲ್ಲೇ ಸುಪ್ರಸಿದ್ಧ ಸಾಮ್ರಾಟನಾಗಿದ್ದನು. ಈತನ ಆಳ್ವಿಕೆಯ ಆರಂಭದಿಂದ ಚಾಳುಕ್ಯ ವಿಕ್ರಮಶಕೆ ಆಚರಣೆಗೆ ಬಂದಿತು. ಈತ ತನ್ನ ೫೧ ವರ್ಷಗಳ ಆಳ್ವಿಕೆಯಲ್ಲಿ ಅನೇಕ ದಂಡಯಾತ್ರೆಗಳನ್ನು ಕೈಕೊಂಡು ಯಶಸ್ವಿಯಾದನು. (ವಿವರಗಳಿಗೆ ನೋಡಿ ಪರಿವಾರ) ಈತನ ನಂತರ ಅಧಿಕಾರಕ್ಕೆ ಬಂದವನೇ ಇವನ ಮಗ ಮೂರನೆಯ ಸೋಮೇಶ್ವರ.

ಕರ್ನಾಟಕದ ಅರಸರಲ್ಲಿ ಕವಿಯಾಗಿ ರಾಷ್ಟ್ರಮಟ್ಟದ ಗೌರವ ಗಳಿಸಿದ ಕೀರ್ತಿ ಮೂರನೆಯ ಸೋಮೇಶ್ವರನಿಗೆ ಸಲ್ಲುತ್ತದೆ. ಅನೇಕ ಶಾಸನಗಳನ್ನು ಬರೆಯಿಸಿ ಹಲವು ಯುದ್ಧಕಾರ್ಯ ಕೈಕೊಂಡು ಅಲ್ಪಕಾಲದಲ್ಲಿಯೇ ಸಮರ್ಥ ಆಡಳಿತ

ನಡೆಸಿದ ಈತ ಜಾಗತಿಕ ಕವಿಗಳ ಸಾಲಿನಲ್ಲಿಯೂ ನಿಲ್ಲುವ ವ್ಯಕ್ತಿಯಾಗಿದ್ದಾನೆ. ಕಾವ್ಯ-ಶಾಸನಗಳಿಂದ ಈತನ ಚರಿತ್ರೆ ಹೀಗೆ ತಿಳಿದುಬರುತ್ತವೆ.

ಮೂರನೆಯ ಸೋಮೇಶ್ವರನದು ಪ್ರಸಿದ್ಧವಾದ ‘ಚಾಳುಕ್ಯ’ ವಂಶ ಇವನ ವಂಶಾವಳಿಯನ್ನು ಶಾಸನ, ಕಾವ್ಯಗಳಲ್ಲಿ ಪೌರಾಣಿಕ ಹಿನ್ನೆಲೆಯೊಂದಿಗೆ ಹೇಳಲಾಗಿದೆ. ತನ್ನ ತಂದೆಯ ಕುರಿತು ಸ್ವತಃ ತಾನೇ ರಚಿಸಿದ ‘ವಿಕ್ರಮಾಂಕಾಭ್ಯುದಯಂ’[೧] ಕಾವ್ಯದಲ್ಲಿ ಆಹಮಲ್ಲ ಸೋಮೇಶ್ವರನ ಗುಣಗಳನ್ನು ವರ್ಣಿಸಿದ ಮೇಲೆ ಆತನ ಪೂರ್ವ ವಂಶಾವಳಿಯನ್ನು ಇಲ್ಲಿ ಹೇಳಲಾಗಿದೆ. ಆಹವಮಲ್ಲನ ವಂಶದಲ್ಲಿ ಬುದ್ಧ, ಪುರೂವರ, ಕ್ಷೇಮಕರರಂಥ ಅರಸರು ಆಗಿಹೋಗಿದ್ದಾರೆ. ಇವರ ನಂತರ ೫೯ ರಾಜರು ಅಯೋಧ್ಯೆಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳಿದರು. ಈ ವಂಶದಲ್ಲಿ ಶ್ರೇಷ್ಠವ್ಯಕ್ತಿ ಸತ್ಯಾಶ್ರಯ. ಈತನು ‘ಚಾಳುಕ್ಯ’ವೆಂಬ ಬೆಟ್ಟದ ಮೇಲೆ ನಿಂತು ಶಿವನಿಂದ ವರವನ್ನು ಪಡೆದುಕೊಳ್ಳುತ್ತಾನೆ. ಆದ್ದರಿಂದ ಈ ವಂಶದವರಿಗೆ ‘ಚಾಳುಕ್ಯ’ರೆಂದು ಹೆಸರು. ಈ ಸತ್ಯಾಶ್ರಯನ ರಾಜಚಿಹ್ನೆ ಮತ್ತು ಪ್ರಶಸ್ತಿಗಳನ್ನೇ ಮುಂದೆ ಬಂದ ಅರಸರು ಇಟ್ಟುಕೊಂಡಿದ್ದಾರೆ. ಇಷ್ಟು ಹೇಳಿದ ಮೇಲೆ ದೀರ್ಘವಾದ ವಂಶಾವಳಿಯನ್ನು ಈ ಕೃತಿ ಕೊಡುತ್ತದೆ. ಅದನ್ನು ಕ್ರೋಢೀಕರಿಸಿ ಹೀಗೆ ಹೇಳಬಹುದು. ಜಯಸಿಂಹ- ರಣರಾಗ- ಪುಲಕೇಶಿ - ಕೀರ್ತಿವರ್ಮನ್ - ಮಂಗಳಾರ್ಣವ - ಸತ್ಯಾಶ್ರಯ (ಹರ್ಷನನ್ನು ಯುದ್ಧದಲ್ಲಿ ಗೆದ್ದವ) - ಆದಿತ್ಯವರ್ಮನ್ - ವಿಕ್ರಮಾದಿತ್ಯ - ಯುದ್ಧಮಲ್ಲ - ವಿಜಯಾದಿತ್ಯ - ವಿಕ್ರಮಾದಿತ್ಯ - ಕೀರ್ತಿವರ್ಮ - ಭೀಮ ಪರಾಕ್ರಮ - ಕೀರ್ತಿವರ್ಮ - ತೈಲಪ - ಮೂರ್ತಿ- ವಿಕ್ರಮಾದಿತ್ಯ - ಭೀಮದೇವ - ಅಯ್ಯಣ - ವಿಕ್ರಮಾದಿತ್ಯ (+ಚೇದಿ ಮಂಡಲದ ಪಾರಿಯಾತ್ರ ದೇಶದ ಲಕ್ಷ್ಮಣನ ಮಗಳಾದ ಬೊಂಥಾದೇವಿ) ಇವಳ ಮಗ ತೈಲಪ ಇಲ್ಲಿಂದ ವಂಶಾವಳಿ ಹೀಗಿದೆ.



ಈ ಆಹವಮಲ್ಲನ ರಾಣಿ ವಾಚಲದೇವಿ (ಬಾಚಲದೇವಿ). ಇವನು ವಿಸ್ತಾರವಾದ ಸಾಮ್ರಾಜ್ಯ ಸಂಪತ್ತನ್ನು ಹೊಂದಿದ್ದರೂ ನೆಮ್ಮದಿ ಇರಲಿಲ್ಲ. ಇದಕ್ಕೆ ಕಾರಣ ಆಹವಮಲ್ಲನ ಕನಸಿನಲ್ಲಿ ಅವನ ಪೂರ್ವಜರು ಒಂದು ‘‘ನೀನು ದೇವರಿಗೆ ಋಷಿಗಳಿಗೆ ದಾನದತ್ತಿ ನೀಡಿ, ವೇದಗಳನ್ನೋದಿ ಯಜ್ಞಗಳನ್ನು ಮಾಡಿ ದೇವಋಣವನ್ನು ತೀರಿಸಿದ್ದೀಯ. ಆದರೆ ನಮ್ಮ ಋಣವನ್ನು ನೀನಿನ್ನೂ ತೀರಿಸಿಲ್ಲ, ತೀರಿಸಲೂ ಆಗುವುದಿಲ್ಲ. ಏಕೆಂದರೆ ನಿನಗೆ ಪುತ್ರನಿಲ್ಲ’’ ಎಂದು

ಹೇಳುತ್ತಾರೆ. ಅಂದಿನಿಂದ ಆಹವಮಲ್ಲನು ಶಿವನನ್ನು ಆರಾಧಿಸಿ ದಾನಾದಿ ಕಾರ್ಯಗಳನ್ನು ಮಾಡಲು, ತೃಪ್ತಿಗೊಂಡ ಶಿವನು ಕನಸಿನಲ್ಲಿ ಸನ್ಯಾಸಿ ವೇಷದಿಂದ ಬಂದು ''ರಾಜನೇ ನಿನ್ನ ಈ ಆರಾಧನೆ ಸಾಕು, ಬೇಗನೆ ನಿನಗೊಬ್ಬ ಪುತ್ರ ಜನಿಸುತ್ತಾನೆ. ಆದರೆ ನನ್ನನ್ನು ಹೆಮ್ಮೆ ಮತ್ತು ಆಡಂಬರದಿಂದ ಪೂಜಿಸಿದುದರಿಂದ ನಿನಗೆ ಜನಿಸುವ ಪುತ್ರನು ಸಂಪೂರ್ಣವಾಗಿ 'ರಜಸ್' ಮತ್ತು 'ತಮಸ್' ಗುಣದಿಂದ ಕೂಡಿರುತ್ತಾನೆ'' ಎಂದು ಹೇಳುತ್ತಾನೆ. ಇದರಿಂದ ಆಹವಮಲ್ಲ ದುಃಖಪೀಡಿತನಾಗಿ ಶ್ರೀ ಪರ್ವತಕ್ಕೆ ಹೋಗಿ ತುಂಗಭದ್ರೆಯಲ್ಲಿ ಮಿಂದು ಬ್ರಹ್ಮೇಶ್ವರನನ್ನು ಪೂಜಿಸಿ ಮಲ್ಲಿಕಾರ್ಜುನನ ದರ್ಶನವನ್ನು ಪಡೆದು ಕಠಿಣ ತಪಸ್ಸನ್ನಾಚರಿಸುತ್ತಾನೆ. ಇದರಿಂದ ಸಂಪ್ರೀತನಾದ ಶಿವನು ''ನಿನ್ನ ಮನೆಯಲ್ಲಿ ಹುಟ್ಟಲು ನಾನು ನಾರಾಯಣನನ್ನು ಕೇಳಿಕೊಂಡಿದ್ದೇನೆ'' ಎಂದು ತಿಳಿಸುತ್ತಾನೆ. ಇಂಥ ಪವಿತ್ರ ವರವನ್ನು ಪಡೆದರೂ ಇನ್ನೊಬ್ಬ ಮಗನಿಗಾಗಿ ಇವನು ಕಾಯುತ್ತಾ ಅಲ್ಲಿಯೇ ನಿಲ್ಲುತ್ತಾನೆ. ಇದರಿಂದ ಕುಪಿತನಾದ ಶಿವನು ''ಓ ರಾಜ, ಅತಿಯಾಸೆ ಗತಿಗೇಡು, ಶ್ರೇಷ್ಠವಾದ ವರವನ್ನು ಪಡೆದುಕೊಂಡಿದ್ದರೂ, ನಿನಗೆ ತೃಪ್ತಿಯಿಲ್ಲ; ಆದುದರಿಂದ ನಿನಗೆ ಮೂರನೆಯವನಾಗಿ ಒಬ್ಬ ದುಷ್ಟಮಗನು ಹುಟ್ಟುತ್ತಾನೆ'' ಎಂದು ಹೇಳುತ್ತಾನೆ. ಅನಂತರ ಆಹವಮಲ್ಲನು ಶ್ರೀಪರ್ವತದಿಂದ ಕಲ್ಯಾಣಕ್ಕೆ ಆಗಮಿಸುತ್ತಾನೆ. ಕೆಲವು ದಿನಗಳು ಕಳೆದ ಮೇಲೆ ಮೂವರು ಮಕ್ಕಳು ಹುಟ್ಟಿದುದನ್ನು ವರ್ಣಿಸುವಲ್ಲಿ ಈ ಕಾವ್ಯ ನಿಂತುಬಿಟ್ಟಿದೆ. ಹೀಗೆ ಬಿಲ್ಹಣನ ಪ್ರಕಾರ ವಿಕ್ರಮಾದಿತ್ಯನು ಶಿವನ ಪ್ರಸಾದದಿಂದ ಜನಿಸಿದ್ದಾನೆ ಎಂಬುದು ತಿಳಿದುಬರುತ್ತದೆ. ಆದರೆ ಈ ಕಾವ್ಯವು ಈತನ ಮಕ್ಕಳ ಬಗ್ಗೆ ಯಾವುದೇ ಮಾಹಿತಿ ನೀಡುವುದಿಲ್ಲ.


'ವಿಕ್ರಮಾಂಕದೇವಚರಿತಂ' ಚಾಳುಕ್ಯರ ವಂಶಾವಳಿಯನ್ನು ಬ್ರಹ್ಮನಿಂದ ಹೀಗೆ ಆರಂಭಿಸುತ್ತದೆ. ಅರ್ಘ್ಯವನ್ನು ಕೊಡುತ್ತಿರುವ ಬ್ರಹ್ಮನ ಹತ್ತಿರ ಇಂದ್ರನು ಬಂದು ಭೂಮಿಯಲ್ಲಿಯ ಅರಾಜಕತೆಯನ್ನು ಹೋಗಲಾಡಿಸಲು 'ಶ್ರೇಷ್ಠವ್ಯಕ್ತಿ'ಯೊಬ್ಬನ ಅವಶ್ಯಕತೆಯನ್ನು ನಿವೇದಿಸುತ್ತಾನೆ. ಇದನ್ನು ಕೇಳಿದ ಬ್ರಹ್ಮ ಬೊಗಸೆಯಲ್ಲಿಯ ಅರ್ಘ್ಯವನ್ನು ನೋಡಿದ ಆ ತಕ್ಷಣವೇ ಬೊಗಸೆಯಿಂದ ಜನಿಸಿದ ವೀರನಿಂದಲೇ ಚಾಳುಕ್ಯವಂಶ ಪ್ರಾರಂಭವಾಯಿತು. ಹಾರೀತ ಮತ್ತು ಮಾನವ್ಯ ಈ ವಂಶದ ಮೂಲ ಪುರುಷರು. ಇವರಿಂದ ಹುಟ್ಟಿದ ಅರಸರು ಅಯೋಧ್ಯಾನಗರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳುತ್ತಿದ್ದರು. ಇವರಲ್ಲಿ ಕೆಲವರು ದಕ್ಷಿಣಾಪಥಕ್ಕೆ ಬಂದು ಸಾಮ್ರಾಜ್ಯವನ್ನು ಕಟ್ಟಿದರು. ಕೆಲವು ದಿನಗಳು ಕಳೆದ ಮೇಲೆ ಈ ವಂಶದಲ್ಲಿ ತೈಲಪನೆಂಬ ದೊಡ್ಡ ಅರಸು ಹುಟ್ಟಿದ. ಇವನು ಚಾಳುಕ್ಯ ರಾಜ್ಯಕ್ಕೆ ಕಂಟಕಪ್ರಾಯರಾಗಿದ್ದ ರಾಷ್ಟ್ರಕೂಟರನ್ನು ಸೋಲಿಸಿದ. ತೈಲಪನ ನಂತರ ಸಿಂಹಾಸನಕ್ಕೆ ಬಂದವರೆಂದರೆ ಸತ್ಯಾಶ್ರಯ, ಜಯಸಿಂಹ ಮತ್ತು ಆಹವಮಲ್ಲನೆಂದು ಪ್ರಸಿದ್ಧನಾದ ತ್ರೈಲೋಕ್ಯಮಲ್ಲ. ಇವನು ಚೋಳ, ಮಾಳವರನ್ನು ಸೋಲಿಸಿದ. ಧಾರಾನಗರ, ಕಾಂಚೀನಗರಗಳನ್ನು ಸೂರೆ ಮಾಡಿ ಕಲ್ಯಾಣ ರಾಜಧಾನಿಯಿಂದ ಆಳುತ್ತಲಿದ್ದ. ಇವನಿಗೆ ಬಹಳ ದಿನಗಳ ತರುವಾಯ ಕಠಿಣ ವ್ರತವನ್ನಾಚರಿಸಿದ ಫಲವಾಗಿ ಶಿವನ ದಯೆಯಿಂದ ಸೋಮೇಶ್ವರ, ವಿಕ್ರಮಾದಿತ್ಯ ಮತ್ತು ಜಯಸಿಂಹನೆಂಬ ಮೂರು ಜನ ಮಕ್ಕಳು ಜನಿಸಿದರು. ಹೀಗೆ ಸೋಮೇಶ್ವರನ ಪ್ರಕಾರ ಶಿವನ ಆದೇಶದಂತೆ

ನಾರಾಯಣನೇ ವಿಕ್ರಮಾದಿತ್ಯನಾಗಿ ಜನಿಸಿದ್ದಾನೆ ಎಂದು ವಿಕ್ರಮಾದಿತ್ಯನ ಮಗನಾದ ಮೂರನೆಯ ಸೋಮೇಶ್ವರನೇ ತನ್ನ ಕಾವ್ಯದಲ್ಲಿ ಉಲ್ಲೇಖಿಸಿದ್ದಾನೆ.

ಹೀಗೆ ಕಾವ್ಯ ಮತ್ತು ಶಾಸನಾಧಾರಗಳಿಂದ ವಂಶಾವಳಿಯನ್ನು ಹೀಗೆ ನಿರೂಪಿಸಬಹುದು.

ಬ್ರಹ್ಮ
|
ಚಳುಕ
|
ಹಾರೀತ ಮತ್ತು ಮಾನವ್ಯ
|
(ಆಯೋಧ್ಯೆಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಕೆಲವರು ಆಳಿದರು ಕೆಲವರು ದಕ್ಷಿಣಕ್ಕೆ ಬಂದರು)
|
ಜಯಸಿಂಹ
|
ರಣರಾಗ
|
ಪುಲಿಕೇಶಿ

- ಕೀರ್ತಿವರ್ಮ I
  - ಸತ್ಯಾಶ್ರಯ
  - ಆದಿತ್ಯವರ್ಮನ್
  - ವಿಕ್ರಮಾದಿತ್ಯ I
  - ಯುದ್ಧಮಲ್ಲ
  - ವಿಜಯಾದಿತ್ಯ
    - ವಿಕ್ರಮಾದಿತ್ಯ II
    - ಕೀರ್ತಿವರ್ಮ II
      - ತೈಲ I
      - ವಿಕ್ರಮಾದಿತ್ಯ - III
- ಮಂಗಳೇಶ


ಭೀಮರಾಜ
ಅಯ್ಯಣಾರ್ಯ
ವಿಕ್ರಮಾದಿತ್ಯ + ಬೊಂಥಾದೇವಿ
(ಚೇದಿ ಮಂಡಲದ ಪಾರಿಯಾತ್ರ ದೇಶದ ಅರಸ ಲಕ್ಷಣನ ಮಗಳು)
ತೈಲ II
ಸತ್ಯಾಶ್ರಯ
ದಶವರ್ಮ
ಪುಲಿಕೇಶಿ
ವಿಕ್ರಮಾದಿತ್ಯ
ಅಯ್ಯಣ
ಜಯಸಿಂಹ
?
?
ಅಹವಮಲ್ಲ ಸೋಮೇಶ್ವರ + ವಾಚಲದೇವಿ (ಬಾಚಲದೇವಿ)
ಸೋಮೇಶ್ವರ II
ವಿಕ್ರಮಾದಿತ್ಯ
(ಪುತ್ರವತಿಯಾದ ಹೆಂಡಂದಿರು)
+
೧. ಮೈಳಲದೇವಿ
೨. ಮಲೆಯಮತಿ ದೇವಿ
೩. ಚಂದಲದೇವಿ
ಜಯಸಿಂಹ
ಮಲ್ಲಿಕಾರ್ಜುನ +ಪಿರಿಯರಸಿ ಸಿರಿಯಾದೇವಿ
ಮಹಾದೇವಿ + ವಿಕ್ರಮಾದಿತ್ಯ
ಮೈಳಲದೇವಿ+ಕದಂಬ ಜಯಕೇಶಿ (ಅಳಿಯ)
ಶಿವಚಿತ್ತ
(ಪೆರ್ಮಾಡಿ)
ವಿಷ್ಣುಚಿತ್ತ
(ವಿಜಯಾದಿತ್ಯ)
ಸೋಮೇಶ್ವರ III
(ರಾಜಲದೇವಿ, ಬರ್ಮಲದೇವಿ)
ತೈಲಪ+ಲಕ್ಷ್ಮಾದೇವಿ
ಜಯಕರ್ಣದೇವ
ಮಗಳು +ಕಲಚೂರಿ ಪೆರ್ಮಾಡಿ
ವೀರಪೆರ್ಮಾಡಿ
ಪೆರ್ಮಾಡಿದೇವ
ಬಿಕ್ಕಿದೇವ
ಬಿಜ್ಜಳ

ಪ್ರಾರಂಭಿಕ ಜೀವನ :

ಮೂರನೆಯ ಸೋಮೇಶ್ವರನ ಜನನದ ಬಗ್ಗೆ ಸ್ಪಷ್ಟವಾದ ಮಾಹಿತಿಯನ್ನು ನೀಡುವ ಶಾಸನಗಳಾಗಲೀ, ಸಾಹಿತ್ಯ ಕೃತಿಗಳಾಗಲೀ ನಮಗೆ ಲಭ್ಯವಾಗದಿರುವುದು ಒಂದು ವಿಷಾದನೀಯ ಸಂಗತಿಯೆಂದು ಹೇಳಬಹುದು. ಆದರೂ ಸಹ ಕೆಲವೊಂದು ಲೇಖಕರು ನೀಡಿದ ಮಾಹಿತಿಯನ್ನು ಆಧರಿಸಿ ಆತನ ಜನನದ ಬಗ್ಗೆ ವಿವರಣೆಯನ್ನು ನೀಡುವ ಪ್ರಾಮಾಣಿಕ ಪ್ರಯತ್ನವನ್ನು ಮಾಡಲಾಗಿದೆ. ಬಾ.ರಾ.ಗೋಪಾಲರವರು ಪೆರ್ಮಾಡಿಯ ಬಾಲ್ಕಿಶಾಸನ[೨]ವನ್ನು ಆಧಾರವಾಗಿಟ್ಟುಕೊಂಡು ಕೆಲವು ಕಲ್ಯಾಣ ಚಾಲುಕ್ಯ ದೊರೆಗಳ ಜನನದ ಮಾಹಿತಿಯನ್ನು ನೀಡಲು ಪ್ರಯತ್ನಿಸಿದ್ದಾರೆ. ಅದರಲ್ಲಿ ಸೋಮೇಶ್ವರನ ಜನನದ ಕುರಿತು ಈ ರೀತಿಯಾಗಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

''ಜಗದೇಕಮಲ್ಲನ ಶಾಸನದ ಕಾಲ ಕ್ರಿ.ಶ. ೧೦೯೯ ಎಂದ ಮೇಲೆ ಆ ವೇಳೆಗೆ ಆತನಿಗೆ ಸುಮಾರು ೩೦ ವರ್ಷಗಳಾಗಿದ್ದವೆಂದು ಊಹಿಸಿದರೂ ಈತ ಕ್ರಿ.ಶ.ಸು. ೧೦೭೯ ರಲ್ಲಿ ಜನಿಸಿದನೆಂದಾಗುತ್ತದೆ. ಆ ವೇಳೆಗೆ ಈತನ ಅಜ್ಜ (ಆರನೇ ವಿಕ್ರಮಾದಿತ್ಯ) ಆಳತೊಡಗಿ ಎರಡು ಮೂರು ವರ್ಷಗಳಾಗಿದ್ದವು. ಜಗದೇಕಮಲ್ಲ ಆಳತೊಡಗಿದ್ದು ಸುಮಾರು ಕ್ರಿ.ಶ. ೧೧೩೮ ರಲ್ಲಿ. ಆ ವೇಳೆಗೆ ಆತನಿಗೆ ಸುಮಾರು ೬೦ ವರ್ಷಗಳಾಗಿದ್ದವು. ಇನ್ನು ಜಗದೇಕಮಲ್ಲ ಕ್ರಿ.ಶ. ೧೦೭೯ ರಲ್ಲಿ ಜನಿಸಿದನೆಂದರೆ ಆತನ ತಂದೆಗೆ ಆಗ ಸುಮಾರು ೩೦ ವರ್ಷಗಳಾದರೂ ಆಗಿದ್ದಿರಬಹುದು. ಅಂದರೆ ಭೂಲೋಕಮಲ್ಲ ಸೋಮೇಶ್ವರ ಕ್ರಿ.ಶ. ೧೦೪೯ ಅಥವಾ ಕ್ರಿ.ಶ. ೧೦೫೪ (೨೫ ವರ್ಷಗಳೆಂದು ಊಹಿಸಿ) ಜನಿಸಿರಬೇಕು. ಈತ ಕ್ರಿ.ಶ. ೧೧೩೮ ರವರೆಗೆ ಆಳಿದನೆಂದಾಗ ಸುಮಾರು ೮೦ ಅಥವಾ ೮೫ ವರ್ಷಗಳಾದರೂ ಜೀವಿಸಿರಬೇಕು'' ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವೆಂದರೆ ಜಿ.ಎಂ.ನಾಗಯ್ಯನವರು[೩] ಕ್ರಿ.ಶ. ೧೦೭೬ ರಲ್ಲಿ ಆರನೆಯ ವಿಕ್ರಮಾದಿತ್ಯ ಪಟ್ಟಕ್ಕೆ ಬಂದ ಬಳಿಕ ಅಂದರೆ ಸುಮಾರು ಕ್ರಿ.ಶ. ೧೦೭೮-೭೯ ರಲ್ಲಿ ಕರಹಾಟ ರಾಜಕುಮಾರಿ ಚಂದಲದೇವಿಯನ್ನು ವಿಕ್ರಮಾದಿತ್ಯ ವಿವಾಹವಾಗುತ್ತಾನೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಅಂದರೆ ಚಂದಲದೇವಿ ಮತ್ತು ವಿಕ್ರಮಾದಿತ್ಯರು ಕ್ರಿ.ಶ. ೧೦೭೮-೭೯ ರಲ್ಲಿ ವಿವಾಹವಾಗಿದ್ದರೆ ಸುಮಾರು ಒಂದು - ಎರಡು (ಒಂದೆರಡು) ವರ್ಷದ ನಂತರ ಭೂಲೋಕಮಲ್ಲ ಜನಿಸಿದನೆಂದು ಇಟ್ಟುಕೊಂಡರೆ ಸುಮಾರು ಕ್ರಿ.ಶ. ೧೦೮೧-೮೨ರ ಸುಮಾರಿಗೆ ಜನಿಸಿರಬೇಕು. ಆದರೆ ನಮಗೆ ಭೂಲೋಕಮಲ್ಲನ ಶಾಸನ ಕ್ರಿ.ಶ. ೧೦೮೩[೪] ರಲ್ಲಿ ದೊರೆತಿರುವುದರಿಂದ ಮತ್ತು ಕ್ರಿ.ಶ. ೧೦೯೯ ರ ಪೆರ್ಮಾಡಿಯ ಶಾಸನವನ್ನು ಗಮನಿಸಿದರೆ ವಿಕ್ರಮಾದಿತ್ಯನು ಚಂದಲದೇವಿಯನ್ನು ಕ್ರಿ.ಶ. ೧೦೫೨ ಅಥವಾ ಕ್ರಿ.ಶ. ೧೦೫೬ ರ ಸುಮಾರಿಗೆ ವಿವಾಹವಾದನೆಂದು ಊಹಿಸಬೇಕಾಗುತ್ತದೆ. ಹೀಗಾಗಿ ಇಲ್ಲಿ ಬಾ.ರಾ.ಗೋಪಾಲರ ಅಭಿಪ್ರಾಯವೇ ಸರಿ ಎಂದು ಹೇಳಬೇಕಾಗುತ್ತದೆ. ಏನೇ ಅಭಿಪ್ರಾಯಗಳಿದ್ದರೂ ಇದಕ್ಕೆ ಇನ್ನೂ ಹೆಚ್ಚಿನ ಶಾಸನಾಧಾರಗಳ ಮತ್ತು ಸಂಶೋಧನೆಯ ಅವಶ್ಯಕತೆ ಇದೆ ಎಂದು ಹೇಳಬಹುದು.

ವಿದ್ಯಾಭ್ಯಾಸ :

ಭೂಲೋಕಮಲ್ಲ ಸೋಮೇಶ್ವರನು ಬಾಲ್ಯದಲ್ಲಿಯೇ ಉತ್ತಮ ವಿದ್ಯಾಭ್ಯಾಸವನ್ನು ಪಡೆದನೆಂದು ಗೊತ್ತಾಗುತ್ತದೆ. ಏಕೆಂದರೆ ಈತನ ತಂದೆ ವಿಕ್ರಮಾದಿತ್ಯನು ಸುದೀರ್ಘವಾಗಿ ೬೦ ವರ್ಷಗಳಷ್ಟು ಆಳ್ವಿಕೆ ನಡೆಸಿದ್ದರಿಂದ ಮತ್ತು ಈತನ ಸಹೋದರ ಯುವರಾಜನಾಗಿ ಕಾರ್ಯನಿರ್ವಹಿಸಿದ್ದರಿಂದ ಈತನು ಆಡಳಿತಕ್ಕಿಂತ ಹೆಚ್ಚಾಗಿ ತನ್ನ ಬಿಡುವಿನ ಅವಧಿಯನ್ನು ಸಾಹಿತ್ಯಶಾಸ್ತ್ರ ವ್ಯಾಸಂಗದಲ್ಲಿ, ವಿದ್ಯಾ ವಿನೋದದಲ್ಲಿ ಕಳೆದನೆಂದು ತೋರುತ್ತದೆ. 'ವಿಕ್ರಮಾಂಕಾಭ್ಯುದಯಂ' ಮತ್ತು 'ಮಾನಸೋಲ್ಲಾಸ'ದಂಥ ವಿಶ್ವಕೋಶಕ್ಕೆ ಅವಶ್ಯವಿರುವ ವೈವಿಧ್ಯಪೂರ್ಣ ವಿದ್ವತ್ತು ಸೋಮೇಶ್ವರನಲ್ಲಿ ತುಂಬಿಕೊಂಡಿರುವುದಕ್ಕೆ ಮತ್ತು ಸೈನಿಕ ಸಾಧನೆಗಳ ಸ್ಮರಣಾರ್ಥವಾಗಿ 'ಭೂಲೋಕಮಲ್ಲ' ಎಂಬ ಬಿರುದನ್ನು ಧರಿಸಿರುವುದನ್ನು ಗಮನಿಸಿದರೆ ಆತ ಬಾಲ್ಯದಲ್ಲಿ ಪಡೆದ ವಿದ್ಯಾಭ್ಯಾಸ ಎಂಥಹದು ಎಂದು ಗೊತ್ತಾಗುತ್ತದೆ.

ಮೂರನೆಯ ಸೋಮೇಶ್ವರನ ಪ್ರಶಸ್ತಿ-ಬಿರುದುಗಳು :

ಮೂರನೆಯ ಸೋಮೇಶ್ವರನು ಕುಮಾರ ವೃತ್ತಿಯಿಂದ ಆಳುತ್ತಿರುವಾಗಲೇ ಗಂಗರ ಎಲ್ಲ ಪ್ರಶಸ್ತಿಗಳನ್ನು ಧರಿಸಿದ್ದಾನೆ. ಕ್ರಿ.ಶ. ೧೧೧೦ ರ ಕೋಲನು ಪಾಕ ಶಾಸನ[೬]ದಲ್ಲಿ ''ತತ್ಪಾದ ಪದ್ಮೋಪಜೀವಿ ಸಮಸ್ತ ನೃಪಜನ (ಸ್ತು)ತ್ಯಂ ಸತ್ಯವಾಕ್ಯ ಕೊಂಗುಳಿವರ್ಮ ಧರ್ಮ ಮಹಾರಾಜಂ ರಾಜಪರಮೇಶ್ವರಂ ಕೋಳಾಳಪುರವರೇಶ್ವರಂ ನಂನಗಿರಿನಾಥಂ ರಾಜ ಮಾಂಧಾತಂ ಮದಗಜೇಂದ್ರ ಲಾಂಛನ ಮಯೂರ ಪಿಂಛ ಧ್ವಜ ವಿರಾಜಮಾನ ಪದ್ಮಾವತೀ ಲಬ್ದವರ ಪ್ರಸಾದಂ ಮೃಗಮದಾಮೋದಂ ಜಯದುತ್ತರಂಗಂ ನಂನಿಯಗಂಗಂ ವಿಭುಧಚಿನ್ತಾಮಣಿ ಮಣ್ಡಳಿಕ ಮುಕುಟ ಚೂಡಾಮಣಿ ಧೈರ್ಯ ಮಹಾರಾಹಂ ವೀರಲಕ್ಷ್ಮಿ ವಿವಾಹಗೇಹಂ ಬಪ್ಪನ ಗಂಧವಾರಣಂ ರಿಪುರಾಯ ಮದನಿವಾರಣಂ ನಾಮಾದಿ ಸಮಸ್ತ ಪ್ರಶಸ್ತಿಸಹಿತಂ ಶ್ರೀ ಮನ್ಮಹಾಮಂಡಳೇಶ್ವರಂ ಚಾಳುಕ್ಯಗಂಗ ಪೆರ್ಮಾನಡಿ ಕುಮಾರಂ ಸೋಮೇಶ್ವರ ದೇವರು'' ಎಂದಿದೆ. ಇದೇ ರೀತಿ ಕ್ರಿ.ಶ. ೧೧೦೯[೭], ಕ್ರಿ.ಶ. ೧೧೧೧[೮], ಕ್ರಿ.ಶ. ೧೧೨೫[೯]ರ ಕೋಲನುಪಾಕ ಶಾಸನಗಳಲ್ಲಿ ಮತ್ತು ತೇದಿಯಲ್ಲದ ಎರಡು ಕೋಲನುಪಾಕ್ ಶಾಸನಗಳಲ್ಲಿಯೂ ಸಹ ಇದೇ ತೆರನಾದ ಪ್ರಶಸ್ತಿ ಬರುತ್ತದೆ. ಕ್ರಿ.ಶ. ೧೧೨೪ ರ ಗುಡೂರು ಶಾಸನ[೧೦]ದಲ್ಲಿ ''ಸ್ವಸ್ತಿ ಸಮಧಿಗತ ಪಂಚಮಹಾಶಬ್ದ ಮಹಾಮಣ್ಡಳೇಶ್ವರಂ ವೀರಮಾಹೇಶ್ವರಂ ವಿಜಯಲಕ್ಷ್ಮೀ ನಿವಾಸಂ ರಕ್ಷ ದಕ್ಷ ದಕ್ಷಿಣ ದೋರ್ದ್ದಣ್ಡಂ ದ್ವಾದಶ ಮಣ್ಡಳಿಕ (ರೊಳ) ಮಾರ್ತ್ತಣ್ಡಂ ಪ್ರತಾಪಾಕ್ರಾನ್ತ ನವಖಂಡ ಭೂಮಣ್ಡಳಂ ರಾಜಲೀಲಾ ಚಮತ್ಕೃತಾಖಂಡಳಂ ಕೋದಣ್ಡ ಚತುರ್ಭುಜಂ ಶೃಂಗಾರಮಕರಧ್ವಜಂ ತ್ರಿಭುವನರಂಗ ಪ್ರವರ್ತ್ತಿತ ಕೀರ್ತಿ ನರ್ತ್ತಕೀ ನರ್ತ್ತನ ಸೂತ್ರಧಾರಂ ಶರಣಾಗತ ವಜ್ರಪ್ರಾಕಾರಂ ಮೂರುರಾಯ ಕಲಿಕುವರ ಬಿರುದ ಹೃದಯದಯಾಕಂಪಂ ತ್ಯಾಗಜಗಝಂಪನರ್ತ್ಥಿಜನ ಚಿನ್ತಿತಾರ್ತ್ಥ ಚಿಂತಾಮಣಿ ಸುಭಟ ಮಂಡಳಿಕ ಮುಕುಟ ಚೂಡಾಮಣಿ ಕುನ್ತಳ ರಾಜ್ಯಾಭ್ಯುದಯಯ್ಕ ಕಾರಣಂ ಬಪ್ಪನ ಗಂಧವಾರಣಂ ಶ್ರೀ ಮಚ್ಚಾಳುಕ್ಯ ಗಂಗ ಪೆರ್ಮಾಡಿ ಕುಮಾರ ಸೋಮೇಶ್ವರದೇವ'' ಎಂದಿದೆ.

ಚಕ್ರವರ್ತಿಯಾದ ನಂತರ ಈತನ ಪ್ರಶಸ್ತಿಯನ್ನು ಶಾಸನಗಳು ''ಶ್ರೀ ನಮಸ್ತುಂಗ ಶಿರಶ್ಚುಂಬಿ ಚನ್ದ್ರ ಚಾಮರ ಚಾರವೇ । ತ್ರೈಲೋಕ್ಯ ನಗರಾರಂಭ(ಂ) ಮೂಲಸ್ತಂಬಾಯ ಶಂಭವೇ ॥ ಸ್ವಸ್ತಿ ಸಮಸ್ತ ಭುವನಾಶ್ರಮಂ ಶ್ರೀ ಪ್ರಥ್ವಿವಲ್ಲಭಂ ಮಹಾರಾಜಾಧಿರಾಜಂ ಪರಮೇಶ್ವರಂ ಪರಮ ಭಟ್ಟಾರಕಂ ಸತ್ಯಾಶ್ರಯ ಕುಳತಿಳಕಂ ಚಾಲುಕ್ಯಾಭರಣಂ ಶ್ರೀ ಮದ್ಭೂಲೋಕಮಲ್ಲದೇವರ ವಿಜಯರಾಜ್ಯ ಮತ್ತರೋತ್ತರಾಭಿವ್ರಿದ್ಧಿ ಪ್ರವರ್ದ್ಧಮಾನಮಾ ಚಂದ್ರಾರ್ಕ್ಕತಾರಂ ಸಲುತ್ತಂ'' ಎಂದು ಹೇಳುತ್ತದೆ. ಅಂದರೆ ಈತನಿಗೂ ಸಹ ಚಕ್ರವರ್ತಿಯಾದ ನಂತರ ಈ ವಂಶದ ಪ್ರತಿಯೊಬ್ಬರಿಗೂ ಬರುವಂತೆ ಈ ಪ್ರಶಸ್ತಿಗಳು ಪಾರಂಪರ್ಯದಿಂದ ಬಂದುದಾಗಿದೆ. ಕೆಲವು ಶಾಸನಗಳು 'ಭೂಲೋಕಮಲ್ಲ', 'ಸರ್ವಜ್ಞ ಚಕ್ರವರ್ತಿ' ಎಂದು ಕರೆದರೆ ಇನ್ನು ಕೆಲವು ಶಾಸನಗಳು 'ಸರ್ವಜ್ಞ ಚಕ್ರವರ್ತಿ ಭೂಲೋಕಮಲ್ಲ' ಎಂದು ಕರೆದಿವೆ. ನರಗುಂದ[೧೧] ಶಾಸನದಲ್ಲಿ ಮಾತ್ರ 'ಚಕ್ರಿರಾಜ ಸರ್ವಜ್ಞನ್ರಿಪ' ಎಂದು ಕರೆಯಲಾಗಿದೆ. ಅಲ್ಲದೆ ಈತನ ಕೃತಿಯಾದ ಮಾನಸೋಲ್ಲಾಸ ಅಥವಾ ಅಭಿಲಾಷಿತಾರ್ಥ ಚಿಂತಾಮಣಿ ಕೃತಿಯ[೧೨] ಐದೂ ವಿಶಂತಿಗಳ ಅಂತ್ಯದಲ್ಲಿ ''ಶ್ರೀ ಮಹಾರಾಜಾಧಿರಾಜ ಸತ್ಯಾಶ್ರಯ ಕುಳತಿಳಕ ಚಾಳುಕ್ಯಾಭರಣ ಶ್ರೀಮದ್ಭೂಲೋಕಮಲ್ಲ ಶ್ರೀ ಸೋಮೇಶ್ವರದೇವ ವಿರಚಿತ'' ಎಂದು ತನ್ನ ಪ್ರಶಸ್ತಿಯನ್ನು ಹೇಳಿಕೊಂಡಿದ್ದಾನೆ. ಆದರೆ ಈ ಸರ್ವಜ್ಞ ಚಕ್ರವರ್ತಿ ಎಂಬ ಪ್ರಶಸ್ತಿ ಈತ ಮಾನಸೋಲ್ಲಾಸ ಕೃತಿಯನ್ನು ರಚಿಸುವ ಪೂರ್ವದಲ್ಲಿಯೇ ಇತ್ತೆಂದು ಹೇಳಬಹುದು. ಏಕೆಂದರೆ ಕ್ರಿ.ಶ. ೧೧೨೫ ರ ಶಾಸನ[೧೩]ದಲ್ಲಿ ''ಶ್ರೀ ಮತ್ಸರ್ವಜ್ಞ ಚಕ್ರವರ್ತಿ ಭೂಲೋಕಮಲ್ಲದೇವರು'' ಎಂದಿದೆ. ಆದರೆ ಈತನ ಮಾನಸೋಲ್ಲಾಸ ಕೃತಿ ಸಂಪೂರ್ಣವಾದುದು ಕ್ರಿ.ಶ. ೧೧೨೯. ಅಂದರೆ ಈತ ಪಟ್ಟಕ್ಕೆ ಬಂದ ಎರಡನೇ ವರ್ಷ. ಹೀಗಾಗಿ ಈತನು ತನ್ನ ವಿದ್ವತ್ತು, ಬಹುಮುಖ ಪ್ರತಿಭೆಯಿಂದ ಮಾನಸೋಲ್ಲಾಸ ರಚಿಸುವ ಪೂರ್ವದಲ್ಲಿಯೇ ಸರ್ವಜ್ಞ ಚಕ್ರವರ್ತಿ ಎನ್ನಿಸಿಕೊಂಡಿದ್ದನು. ಇದನ್ನು ಬೆಂಬಲಿಸುವ ರೀತಿಯಲ್ಲಿಯೇ ''ಅಖಿಕಳಾ ಸಂಪತ್ಸನ್ನಿಧಿ ತಂನೊಳೆಸೆಯೆ ಸರ್ವಜ್ಞ ಮಹೀಭೃತಂಜ್ಞೆ ಪಡೆದನವಳ ಶರತ್ಸಮಯ ಸುಧಾಂಶು ಕೀರ್ತಿಧಾಮಂ ಸೋಮಂ ಭೂಲೋಕಮಲ್ಲವಲ್ಲಭನೀ ಲೋಕಮನಾಳ್ದನೆಸೆಯ ಸರ್ವಜ್ಞ ಮಹೀಪಾಲಂ ಭಾರತಿಗಂದು ಸನಾಥೋದಮಂ...'' ಎಂಬಂಥ ವಾಕ್ಯಗಳು ಶಾಸನದಲ್ಲಿ ಗೋಚರಿಸುತ್ತವೆ.

ತಡಿಕೊಂಡ ಶಾಸನ[೧೪]ವು ಈತನ ಪ್ರಶಸ್ತಿಯನ್ನು ಸ್ವಲ್ಪ ಭಿನ್ನ ರೂಪದಲ್ಲಿ ಹೇಳಿದೆ. ''ಸ್ವಸ್ತಿಯನೇಕ ವೈರಿಬಲ ಸುಭಟ ಗಿರಿ ನಿರ್ಗ್ಘಾತಂ ವೀರವಿಖ್ಯಾತಂ ವೀರಾವತಾರಂ (ಗಂಡ) ರಹಿತಂ ಪೊನು ಗೊಟ್ಟಾದಿತ್ಯಂ ಯಾಚಕ ಜನ ನಿಧಿನಿಧಾನಂ ಬಂಟರಭಾವಂ ಪರನಾರೀ ದೂರಂ ಸರಣಾಗತ ಪ್ರಿಯಂ ಬಿಲುವಿದ್ಯಾರಾಮಂ ... ಕಾವಂ ಕುಮಾರ ಕಣ್ಠೀರವ.... (ಲಳಿ)ತ ರೂಪವಿದ್ಯಾಧಾರಂ ಮಾವನಗಂಧವಾರಣಂ ಬಡ್ಡುಗಂಡು ಸೂಕ್ತ ಬಳಸುವ ನಾಯಕರ ಗಂಡ ಪಗೆಯಬೆಂಕೊಳ್ವಂ ಮಚ್ಚರಿಪ್ಪರ ಗಂಡದಾಯಿಮ್ರಿಗ ಬೇಟೆಕಾಱವಯರಿಬಳ ಸೂದ್ರಕಂ ಒಂಟಿಮುನ್ನಿಜೀವಂ ಸಂಗ್ರಾಮ ಭೀಮಂ ದೀನಾನಾತರ್ಗ್ಗೆ ಪಿರಿದೀವಚಾಗಿ ಮುಪ್ಪನಸಿಂಗಂ ನೊಳಂಬನ ಸಿಂಗಂ ನಾಮಾದಿ ಸಮಸ್ತ ಪ್ರಶಸ್ತಿ ಸಹಿತಂ

ಶ್ರೀ ಮಚ್ಚಾಳುಕ್ಯ ಭೂಲೋಕಮಲ್ಲ'' ಎಂದು ಈತನ ವಿದ್ವತ್ತು, ಶೌರ್ಯ, ಸಾಹಸ, ದಾನ ಇತ್ಯಾದಿ ಗುಣಗಳನ್ನೆಲ್ಲ ಬಣ್ಣಿಸಿದೆ. ನಾರಂಗವಾಡಿ ಶಾಸನ[೨೭]ದಲ್ಲಿ ''ಶ್ರೀ ರಮಣೀಶ ಸಿದ್ದದಿ ವಿಜೇಂದ್ರ ಫಣೀಂದ್ರ ಚಂದ್ರವಾಕ್ರೀ ರಮಣೀವ ವಂದಿತ ಪಾದಾಂಬುರುಹದ್ವಯ ಸುದ್ದ ಬುದ್ದ ಸಾಂಖ್ಯರುಹ ಯೋಗ ಯೋಗಿ ಹೃದಯೋಜ್ವಲ ಮಾನಸ ರಾಜಹಂಸ ಮುರಾರಿ ವೃಕ್ಷ ಧ್ವಜಮ್ ನಮಗೆ ಮಾಳ್ಕೆ ನಿರಂತರ ಸಂಖ್ಯ ಕೋಟಿಯ ॥ ಶ್ರೀಮಚ್ಚಾಳುಕ್ಯವಂಶವ್ಯೋಮಾಮೃತ ಕಿರಣ ನೃಪಲಲಾಮಂ ನೃಪ ಚೂಡಾಮಣಿ ಧರಿತ್ರಿಯುಳ್ಳನ ಸೋಮೇಶ್ವರ ದೇವ ರಾಜ್ಯ ಸರ್ವಾಭ್ಯುದಯಂ'' ಎಂದು ಬರುತ್ತದೆ.

ಮೂರನೆಯ ಸೋಮೇಶ್ವರನ ಪರಿವಾರ :


ಆರನೆಯ ವಿಕ್ರಮಾದಿತ್ಯ : ಕಲ್ಯಾಣ ಚಾಲುಕ್ಯರ ಸುಪ್ರಸಿದ್ಧ ಕೊನೆಯ ಸಾಮ್ರಾಟನಾದ ಆರನೆಯ ವಿಕ್ರಮಾದಿತ್ಯನು ಸೋಮೇಶ್ವರ I ಮತ್ತು ಚಾಚಲದೇವಿಯರ ದ್ವಿತೀಯ ಪುತ್ರನಾಗಿ ಜನಿಸಿದನು. ಈತನಿಗೆ ಸೋಮೇಶ್ವರ II ಮತ್ತು ಜಯಸಿಂಹರೆಂಬ ಸಹೋದರರಿದ್ದರು. ತಂದೆ ಒಂದನೆಯ ಸೋಮೇಶ್ವರನು ಕುರುವತ್ತಿಯ ಸಮೀಪ ತುಂಗಭದ್ರಾ ನದಿಯಲ್ಲಿ ಜಲಸಮಾಧಿಯ ಮೂಲ ನಿಧನ ಹೊಂದಿದನು.[೨೮] ನಂತರ ಎರಡನೆಯ ಸೋಮೇಶ್ವರನು ಅಧಿಕಾರಕ್ಕೆ ಬರುತ್ತಾನೆ. ಕಾಲಕಳೆದಂತೆ ಎರಡನೇ ಸೋಮೇಶ್ವರನಿಗೂ ಆರನೆ ವಿಕ್ರಮಾದಿತ್ಯನಿಗೂ ಭಿನ್ನಾಭಿಪ್ರಾಯ ಉಂಟಾಗಿ ವೈರತ್ವ ಬೆಳೆಯುತ್ತದೆ. ಹೀಗಾಗಿ ಆರನೆಯ ವಿಕ್ರಮಾದಿತ್ಯನು ಕಿರಿಯ ಸಹೋದರ ಜಯಸಿಂಹನೊಡಗೂಡಿ ಅಣ್ಣನಾದ ಎರಡನೆ ಸೋಮೇಶ್ವರನ ವಿರುದ್ಧ ಸಮರವನ್ನು ಸಾರುತ್ತಾನೆ. ನಂತರ ಯುದ್ಧದಲ್ಲಿ ಜಯಿಸಿ ಚಾಲುಕ್ಯ ಸಿಂಹಾಸನವನ್ನೇರುತ್ತಾನೆ.

ವಿಕ್ರಮಾದಿತ್ಯನು ಕುಮಾರವೃತ್ತಿಯಿಂದ ಆಳುತ್ತಿರುವಾಗಲೇ ಗಂಗರ ಎಲ್ಲ ಪ್ರಶಸ್ತಿಗಳನ್ನು ಧರಿಸಿದನು. ಶಿಗ್ಗಾವಿ[೨೯], ಕಲ್ಕೇರಿ[೩೦], ಅಡಗಂಟಿ[೩೧], ಶಾಸನಗಳಲ್ಲಿ ಈ ಪ್ರಶಸ್ತಿಗಳನ್ನು ನೋಡಬಹುದು. ಚಕ್ರವರ್ತಿಯಾದ ನಂತರ ಈ ವಂಶದ ಪ್ರತಿಯೊಬ್ಬರಿಗೂ ಪಾರಂಪರ್ಯರಿಂದ ಬರುತ್ತಿದ್ದ ಪ್ರಶಸ್ತಿಯನ್ನೇ ಈತನೂ ಧರಿಸಿದ್ದಾನೆ. ಈತನ ಪ್ರಶಸ್ತಿಯನ್ನು ಶಾಸನಗಳು ''ಶ್ರೀ ಪ್ರಥ್ವೀವಲ್ಲಭಂ ಮಹಾರಾಜಾಧಿರಾಜಂ ಪರಮೇಶ್ವರಂ ಪರಮಭಟ್ಟಾರಕಂ ಸತ್ಯಾಶ್ರಯ ಕುಳತಿಳಕಂ ಚಾಳುಕ್ಯಾಭರಣಂ ಶ್ರೀಮತ್ರಿಭುವನಮಲ್ಲದೇವರ ವಿಜಯರಾಜ್ಯಮುತ್ತರೋತ್ತರಾಭಿವೃದ್ಧಿ ಪ್ರವರ್ದ್ಧಮಾನ ಮಾಚಂದ್ರಾರ್ಕ್ಕತಾರಾಂಬರಂ ಸಲುತ್ತಮಿರೆ'' ಎಂದಿದೆ. ಶಾಸನಗಳು 'ತ್ರಿಭುವನಮಲ್ಲ' ಎಂದೂ ಕೆಲವೊಮ್ಮೆ 'ಪೆರ್ಮಾಡಿ'ಯೆಂದೂ ಒಮ್ಮೆ 'ರಾಯನಾರಾಯಣ'ನೆಂದೂ ಮತ್ತೊಮ್ಮೆ 'ರಾಯಸರ್ವಜ್ಞ'ನೆಂದೂ ಕರೆದಿವೆ. ದಿಗ್ಗಾವ ಶಾಸನ[೩೨]ವು 'ಶ್ರೀ ಮದ್ರಾಯ ಸರ್ವಜ್ಞ'ನೆಂದು ಕರೆದರೆ, ಅಂಬಳಿ ಶಾಸನ[೩೩]ವು 'ಭುವನೈಕ ಮಲ್ಲನನುಜಂ ಚಾಳುಕ್ಯನಾರಾಯಣಂ' ಎಂದು ಕರೆದಿದೆ. ತ್ರಿಪುರಾಂತಕಂ ಶಾಸನ[೩೪]ವು ಮಾತ್ರ ಈತನ ಪ್ರಶಸ್ತಿಯನ್ನು ಭಿನ್ನರೂಪದಲ್ಲಿ ಹೀಗೆ ಹೇಳಿದೆ. 'ಸತ್ಯಾಶ್ರಯ ಕುಳತಿಳಕ ನರಪಾಳ ಭಯಂಕರ ರಾಜಗಜಕೇಸರೀ ಸಾಮಂತ್ತಹರಿಣಶಾರ್ದೂಲ ಪಾಂಡ್ಯತೂಲಚಂಡಮಾರುತ XXX ಕಾಳಿಯ ಗೋಪಾಳ ಕುಂತ್ತಳಸೇನಾಕೃತಾಂತ್ತ ಯಾದವಬಲಚಲಧಿವಡಬಾನಲ

ಕೊಂಕಣರಣಾಂಕ್ಕಣಭಯಂಕ್ಕರ ಸೇವಣರಣ ಭೀಸಣ ಸಪ್ತಮಾಳ ವಸಪ್ತಾರ್ಚಿಮ ಸಿಂಧುವಾನಕಂದ್ದಕುಂದ್ದಾಳ ಪಲ್ಲಿಕೋಟಿ ನ(ಲ್ಲೂರ)ತನ ಭದ್ರಾಂಗ್ಗ ವಿದ್ರಾವಣಚಚ್ಚತವಾxನ ಅಯ್ಯನಯ್ಯ ಫಣೀಂದ್ರ ಸೌಪರ್ಣ(ವ)ಗ್ಗ್ರರಕರಾಕಸರಾಷ್ಟ್ರ ಕಾಲದಂಡ ಪಾಂಚಾಳಹರಿಣ ಪಂಚಾನನ ವಿದರ್ಭವನಿತಾ ವಿಧ್ವಂಸರ ಕಳಿಂಗ್ಗಸ್ವಳಿಂಗ್ಗಧಾರಾಧರ ಚಾಳುಕ್ಯಾಭರಣ ಶ್ರೀಮತ್ರಿಭುವನಮಲ್ಲದೇವರ ವಿಜಯರಾಜ್ಯ ಮತ್ತರೋತ್ತರಾಭಿವೃದ್ಧಿ ಪ್ರವರ್ದ್ಧಮಾನಂ ಜಯನ್ತೀಪುರದ ನೆಲೆವೀಡಿನೊಳು ರಾಜ್ಯಗೆಯ್ಯುತ್ತಿದ್ದುದು'' ತಿಳಿದುಬರುತ್ತದೆ. ಕೋನೂರು ಶಾಸನ[೨೩]ದಲ್ಲಿ ''ಸ್ವಸ್ತಿ ತ್ರೈಭುವನಾಶ್ರಯಂ ಪೃಥುಧರಾಶ್ರೀವಲ್ಲಭಂ ಶೂಕರನ್ಯಸ್ತೇದ್ವಧ್ವಜಲಾಂಚ್ಚನಂನುತ ಮಹಾರಾಜಾಧಿರಾಜಂ ಯಶೋವಿಸ್ತಾರಂ ಪರಮೇಶ್ವರಾಂಕ ಪರಮಂ ಭಟ್ಟಾರಂಕ ಶಾತ್ರಪೋನ್ಮಸ್ತನ್ಯಸ್ತ ಪದಾಬ್ಜನೂರ್ಜ್ಜಿತಯಶಂ ಚಾಳುಕ್ಯ ಕಣ್ಠೀರಮಂ'' ಎಂದಿದೆ. ಚಿಬ್ರೋಲು ಶಾಸನ[೨೪]ದಿಂದ 'ರಾಯದೇವೇಂದ್ರಂ' ಎಂಬ ಬಿರುದೂ ಇದ್ದುದು ತಿಳಿದುಬರುತ್ತದೆ.

ವಿಕ್ರಮಾದಿತ್ಯ ಶೌರ್ಯದಲ್ಲಿ ನಾರಾಯಣನಾಗಿದ್ದರೆ ವಿವಾಹದ ವಿಷಯದಲ್ಲಿ ಶ್ರೀಕೃಷ್ಣಪರಮಾತ್ಮನಾಗಿದ್ದಾನೆ. ಇವನಿಗೆ ೧೯ ಜನ ರಾಣಿಯರಿದ್ದರೆಂಬ ಉಲ್ಲೇಖ ಶಾಸನಗಳಲ್ಲಿ ಮತ್ತು 'ವಿಕ್ರಮಾಂಕದೇವಚರಿತಂ' ಕಾವ್ಯದಲ್ಲಿ ಬರುತ್ತದೆ. ಅವರು ಕ್ರಮವಾಗಿ ಇಂತಿದ್ದಾರೆ. ಕದಂಬ ಒಂದನೆಯ ಜಯಕೇಶಿಯ ಮಗಳು (ಹೆಸರು ತಿಳಿದುಬರುವುದಿಲ್ಲ)[೨೫], ಚೋಳರಾಜಕುಮಾರಿ[೨೬], ಸಾವಳದೇವಿ[೨೭], ಪದ್ಮಲದೇವಿ[೨೮], ಕೇತಲದೇವಿ[೨೯], ಪಿರಿಮರಸಿ ಲಕ್ಷ್ಮಾದೇವಿ[೩೦], ಚಂದಲದೇವಿ[೩೧], ಅಂಗಬ್ಬರಸಿ[೩೨], ಪಿರಿಯಕೇತಲದೇವಿ[೩೩], ಇಂಗುಳಿಗೆಯ ಜಾಕಲದೇವಿ[೩೪], ಮೈಳಲಮಹಾದೇವಿ[೩೫], ಸಿರಿಯಾಲದೇವಿ[೩೬], ಮನ್ನಾದೇವಿ[೩೭], ಮಲೆಯಮತಿದೇವಿ[೩೮], ಮಲ್ಲಣಿದೇವಿ[೩೯], ಸುಗ್ಗಲದೇವಿ[೪೦], ಅಬ್ಬಲದೇವಿ[೪೧], ಭಾಗಲಮಹಾದೇವಿ[೪೨], ಹಿರೇಲಿಂಗದಹಳ್ಳಿ ಜಾಕಲದೇವಿ[೪೩], ಇವರಲ್ಲಿ ಕೆಲವರು ವಿಕ್ರಮಾದಿತ್ಯನ ವ್ಯಕ್ತಿತ್ವ ಮೆರುಗುವುದಕ್ಕೆ ಕಾರಣೀಭೂತರಾಗಿದ್ದರೆ, ಮತ್ತೆ ಕೆಲವರು ಎರಡು ರಾಜ್ಯಗಳ ನಡುವೆ ಶಾಂತಿಯುಂಟಾಗುವಂತೆ ಮಾಡಿದ್ದಾರೆ. ಧಾರ್ಮಿಕ ಮನೋಭಾವದವರಾದ ಇವರು ಸಾಮ್ರಾಜ್ಯದಲ್ಲಿ ಧಾರ್ಮಿಕ ಚಟುವಟಿಕೆಗಳು ನಡೆಯಲು ಕಾರಣರಾಗಿದ್ದಾರೆ.

ವಿಕ್ರಮಾದಿತ್ಯನಿಗೆ ಮಲ್ಲಿಕಾರ್ಜುನನೆಂಬ ಹಿರಿಯ ಪುತ್ರನಿದ್ದನು. ಆದರೆ ಇವನು ಯಾವ ರಾಣಿಗೆ ಹುಟ್ಟಿದನೆಂಬುದು ತಿಳಿದುಬರುವುದಿಲ್ಲ. ರಾಣಿ ಚಂದಲದೇವಿಯಿಂದ ಮೂರನೆ ಸೋಮೇಶ್ವರ, ತೈಲಪ, ಜಯಕರ್ಣ ಮತ್ತು ಒಬ್ಬ ಪುತ್ರಿ[೪೪] ಜನಿಸಿದ್ದಾರೆ. ಮತ್ತೊಬ್ಬ ರಾಣಿ ಮಲೆಯಮತಿದೇವಿಯ ಹೊಟ್ಟೆಯಿಂದ ಮೈಳಲದೇವಿ ಎಂಬ ಪುತ್ರಿ ಜನಿಸಿದ್ದಳು. ಈಕೆಯನ್ನು ಕದಂಬ ಜಯಕೇಶಿಗೆ ಮದುವೆ ಮಾಡಿಕೊಡಲಾಗಿತ್ತು.[೪೫] ಈವರೆಗಿನ ಇವನ ಪರಿವಾರವನ್ನು ಹೀಗೆ ರೇಖಿಸಬಹುದು.



ಆರನೆಯ ವಿಕ್ರಮಾದಿತ್ಯನು ಅನೇಕ ದಂಡಯಾತ್ರೆಗಳನ್ನು ಯಶಸ್ವಿಯಾಗಿ ಕೈಗೊಂಡನು. ಚೋಳರಾಜ್ಯಕ್ಕೆ ಮುತ್ತಿಗೆ ಹಾಕಿ ಕಂಚಿಯನ್ನು ವಶಪಡಿಸಿಕೊಂಡನು. ನಂತರ ವೆಂಗಿ ಪ್ರಾಂತ್ಯವನ್ನು ಮುತ್ತಿ ಅದರ ಬಹುಭಾಗವನ್ನು ತನ್ನ ಆಧೀನಪಡಿಸಿಕೊಂಡನು. ಹೊಯ್ಸಳ ವಿಷ್ಣುವರ್ಧನನ ದಂಗೆಯನ್ನು ಸಮರ್ಥವಾಗಿ ಹತ್ತಿಕ್ಕಿ ಗೋವೆ ಮತ್ತು ಹಾನಗಲ್ಲಿನ ಕದಂಬರು, ಉಚ್ಚಂಗಿಯ ಪಾಂಡ್ಯರು, ಯಲ್ಬುರ್ಗದ ಸಿಂಧರು, ಸೇವುಣರು, ಪೆಂಬುರ್ಚದ ಶಾಂತಾರರು ಹಾಗೂ ತೆಲಂಗಾಣದ ಕಾಕತೀಯರು ಇವನ ವಿರುದ್ಧ ನಿಲ್ಲುವ ಧೈರ್ಯ ಯಾರಿಗೂ ಇದ್ದಿಲ್ಲ. ಹೀಗಾಗಿ 'ಹಿಮದಿನಾಸೇತು' ವರೆಗೆ ಇವನ ಸಾಮ್ರಾಜ್ಯ ಹಬ್ಬಿತ್ತೆಂದು ನೀಲ್ಗುಂದ ಶಾಸನ[೪೭], ಭೀಮ್ರಾ ಶಾಸನ[೪೮] ದಕ್ಷಿಣಕ್ಕೆ ಲಂಕಾಪುರ ಉತ್ತರಕ್ಕೆ ಆಯೋಧ್ಯಾನಗರ ಪೂರ್ವ ಪಶ್ಚಿಮಕ್ಕೆ ಸಮುದ್ರಗಳು ಮೇರೆಗಳಾಗಿದ್ದವೆಂದು ಹೇಳುತ್ತದೆ. ಇದರಲ್ಲಿ ಅತಿಶಯೋಕ್ತಿ ಇದ್ದರೂ ಈತನ ಸಾಮ್ರಾಜ್ಯ ಪೂರ್ವ-ಪಶ್ಚಿಮಕ್ಕೆ ಸಮುದ್ರದವರೆಗೂ ಉತ್ತರಕ್ಕೆ ಇಂದಿನ ಮಧ್ಯಪ್ರದೇಶವನ್ನು ದಾಟಿ ಉತ್ತರಪ್ರದೇಶದ ದಕ್ಷಿಣದ ತೀರದವರೆಗೂ, ದಕ್ಷಿಣದಲ್ಲಿ ಕಾವೇರಿ ನದಿ ದಾಟಿ ಚೋಳಮಂಡಲದ ಹಲವು ಭಾಗಗಳನ್ನು ಆಕ್ರಮಿಸಿತ್ತೆಂದು ಹೇಳಬಹುದು.

ವಿಕ್ರಮಾದಿತ್ಯನ ನಿಧನದ ಬಗ್ಗೆ ನಮಗೆ ಸ್ಪಷ್ಟವಾಗಿ ತಿಳಿದುಬರುವುದಿಲ್ಲ. ಚಾಳುಕ್ಯ ವಿಕ್ರಮವರ್ಷದ ೫೧ನೆಯ ಪರಾಭವ ಸಂವತ್ಸರ ಕಾರ್ತಿಕ ಬಹುಳ ೨ ಅಂದರೆ ಕ್ರಿ.ಶ. ೧೧೨೬ ನವಂಬರ್ ೪ನೇ ದಿನಾಂಕದಂದು ಇವನ ಮಗ ಮೂರನೆಯ ಸೋಮೇಶ್ವರ ಪಟ್ಟಾಭಿಷೇಕ ಕೈಕೊಂಡ ಮೇಲೆ ಕೈಕೊಳ್ಳಬೇಕಾದ ಚೈತ್ರಯಾತ್ರೆಗೆ ಜೋಯಿಸಿಗನನ್ನೇಯ

ಭಟ್ಟ ಮುಹೂರ್ತವನ್ನು ನಿರ್ಧರಿಸಿಕೊಡುತ್ತಾನೆ. ಇದರಿಂದ ಕ್ರಿ.ಶ. ೧೧೨೬ ನವೆಂಬರ್ ೪ ಕ್ಕೆ ಕೆಲವು ದಿನಗಳು ಮೊದಲು ವಿಕ್ರಮಾದಿತ್ಯನು ಮರಣಿಸಿದ್ದನೆಂಬುದು ಸ್ಪಷ್ಟ ಎಂಬುದಾಗಿ ಜಿ.ಎಂ.ನಾಗಯ್ಯನವರು ಅಭಿಪ್ರಾಯಪಡುತ್ತಾರೆ.

ಚಂದಲದೇವಿ :

ಮೂರನೆಯ ಸೋಮೇಶ್ವರನ ತಾಯಿಯನ್ನು ಶಾಸನಗಳಲ್ಲಿ 'ಚಂದಲದೇವಿ' ಎಂದು ಕರೆಯಲಾಗಿದೆ. ಕ್ರಿ.ಶ. ೧೦೮೨ ರ ಆಳಂದ್, ಶಾಸನವೇ ಈಕೆಯ ಉಪಲಬ್ಧ ಪ್ರಥಮ ಶಾಸನವಾಗಿದೆ. ಅದರಲ್ಲಿ ಈಕೆ ಸೋಮೇಶ್ವರ ದೇವರಿಗೆ ದಾನ ನೀಡಿದುದನ್ನು ಹೇಳಲಾಗಿದೆ. ಈಕೆ ವಿಕ್ರಮಾದಿತ್ಯನನ್ನು ಮೆಚ್ಚಿ ಅವನನ್ನೇ ಆರಿಸಿಕೊಂಡು ಮದುವೆಯಾದ ವಿಕ್ರಮಾದಿತ್ಯನ ಪ್ರಿಯರಾಣಿಯೂ ಆಗಿದ್ದ ಈಕೆಯ ಬಗ್ಗೆ ಶಾಸನಗಳಲ್ಲಿ ಬಿಲ್ಹಣನ 'ವಿಕ್ರಮಾಂಕದೇವಚರಿತಂ' ಕಾವ್ಯದಲ್ಲಿ ಮಾಹಿತಿ ಸಿಗುತ್ತದೆ. ಈಕೆಯ ಮದುವೆಯ ಪ್ರಸಂಗದ ಬಗ್ಗೆ ಶಾಸನಗಳು ಮೌನವಹಿಸಿದ್ದರೂ, ಬಿಲ್ಹಣನು ಆ ಪ್ರಸಂಗವನ್ನು ದೀರ್ಘವಾಗಿ ವರ್ಣನಾತ್ಮಕವಾಗಿ ವಿವರಿಸಿದ್ದಾನೆ. ಚಂದಲದೇವಿ ಮತ್ತು ವಿಕ್ರಮಾದಿತ್ಯರ ವಿವಾಹ ಬಿಲ್ಹಣನ ದೃಷ್ಟಿಯಲ್ಲಿ ಪ್ರೇಮವಿವಾಹವಾಗಿದೆ. ಸ್ವಯಂವರದ ಮೂಲಕ ಚಂದಲದೇವಿಯು ವಿಕ್ರಮಾದಿತ್ಯನನ್ನು ವರಿಸುತ್ತಾಳೆ. ಬಿಲ್ಹಣನು ಸಹ ತನ್ನ ಕಾವ್ಯದ ಬಹುಭಾಗವನ್ನು ಅಂದರೆ ಅಧ್ಯಾಯ೮-೧೩ ರವರೆಗೆ ಇವರೀರ್ವರ ವಿವಾಹ, ಮಧುಚಂದ್ರ ಮತ್ತು ಇವರೀರ್ವರು ಕಳೆದ ಚಳಿಗಾಲ, ಬೇಸಿಗೆಕಾಲ, ಮಳೆಗಾಲಗಳ ವರ್ಣನೆಗೆ ಮೀಸಲಿಟ್ಟಿದ್ದಾನೆ. ಬಿಲ್ಹಣನು ಈಕೆಯನ್ನು 'ಚಂದ್ರಲೇಖಾ' ಎಂದು ಕರೆದಿದ್ದಾನೆ. 'ವಿಕ್ರಮಾಂಕದೇವಚರಿತ'ದಲ್ಲಿ ಈ ವಿವಾಹದ ವಿವರಣೆ ಈ ರೀತಿಯಾಗಿದೆ.

ಕರಹಾಟದ (ಕರಹಾಡ) ಶಿಲಾಹಾರ ವಂಶದ ಚಂದಲದೇವಿಯು ಸುಂದರ ತರುಣಿಯಾಗಿದ್ದುದರಿಂದ ಈಕೆಗಾಗಿ ಅರಸನು ಸ್ವಯಂವರವನ್ನು ಏರ್ಪಡಿಸುತ್ತಾನೆ. ಈ ಅರಸನ ಹೆಸರು ತಿಳಿದುಬರುವುದಿಲ್ಲ. ಇವಳ ಅಸಾಧಾರಣ ಸೌಂದರ್ಯದ ವರ್ಣನೆಯನ್ನು ಕೇಳಿದ ವಿಕ್ರಮಾದಿತ್ಯನು ಒಂದು ರೀತಿಯಲ್ಲಿ ಹುಚ್ಚು ಹಿಡಿದಂತಾಗಿ ಕನಸಿನಲ್ಲಿಯೂ ಈಕೆಯನ್ನು ಕಾಣಲಾರಂಭಿಸಿದನು. ಇದೇ ಸಂದರ್ಭದಲ್ಲಿ ಚಂದ್ರಲೇಖಾಳ ಮನಸ್ಸಿನ ಇಂಗಿತವನ್ನರಿಯಲು ಕರಹಾಟಕ್ಕೆ ಕಳುಹಿಸಲಾಗಿದ್ದ ದೂತನೂ ಆಕೆಯಿಂದ ಸಿಹಿಯಾದ ಸುದ್ದಿಯನ್ನು ತಂದು ವಿಕ್ರಮಾದಿತ್ಯನಿಗೆ ಹೀಗೆ ಹೇಳುತ್ತಾನೆ. 'ಓ ಪ್ರಭುವೇ ನಿನ್ನ ಪ್ರತಿಭೆ, ಗುಣಗಳಿಂದಾಗಿಯೋ ಅಥವಾ ಬ್ರಾಹ್ಮಣನ ಹೇಳಿಕೆಯಿಂದಾಗಿಯೋ ಏನೋ ನಿನ್ನ ವರ್ಣನೆಯನ್ನು ಆಕೆಯ ಎದುರಿಗೆ ಮಾಡಿದಾಗ ಆಕೆ ನಿನಗೆ ಆಕರ್ಷಿತಳಾಗಿ ಕಾಮತಾಪದಿಂದ ಬಳಲಿದಳು' ಎಂದು ಮುಂತಾಗಿ ವಿವರಿಸಿ ಚಂದ್ರಲೇಖೆಯೂ ವಿಕ್ರಮಾದಿತ್ಯನನ್ನೇ ಪ್ರೇಮಿಸುತ್ತಿದ್ದ ವಿಷಯವನ್ನು ಹೇಳುತ್ತಾನೆ.

ತೆಳ್ಳಗೆ ಅರಿಶಿಣ ಬಣ್ಣ ಹೊಂದಿ ಚಂಪಕಾ ಹೂವಿನ (ಸಂಪಿಗೆ) ಮಾಲೆಯಂತಿದ್ದ ಚಂದ್ರಲೇಖೆಯ ತಂದೆಯಾದರೂ ಮಗಳಿಗೆ ಸಂಪೂರ್ಣ ಸ್ವಾತಂತ್ರ್ಯ ನೀಡಿದ್ದಾನೆ. ತನಗಿಚ್ಚೆ ಬಂದವನನ್ನು ಆಕೆ ಆರಿಸಿಕೊಳ್ಳಬಹುದು.

ಅಲ್ಲದೆ ಅವನ ಕನಸಿನಲ್ಲಿ ಶಿವನು ಬಂದು ''ಆಕೆ ತನ್ನಿಚ್ಛೆಯ ಪತಿಯನ್ನು ಆರಿಸಿಕೊಳ್ಳಲಿ, ನೀನು ಸ್ವಯಂವರವನ್ನೇರ್ಪಡಿಸು'' ಎಂದು ಹೇಳಿದ್ದಾನೆ. ಹೀಗಾಗಿ ಮಗಳ ವಿಷಯದಲ್ಲಿ ಅಡ್ಡ ಬರುವುದಿಲ್ಲ. ಅಲ್ಲದೆ ಅವನಾದರೋ ಹೆಚ್ಚಾಗಿ ನಿನ್ನನ್ನೇ ನಂಬಿಕೊಂಡಿದ್ದಾನೆ ಎಂದು ಕರಹಾಟ ನಗರದಲ್ಲಿ ನಡೆಯುತ್ತಿದ್ದ ವಿಷಯವನ್ನು ತಿಳಿಸುತ್ತಾನೆ. ಸ್ವಯಂವರಕ್ಕಾಗಿ ಗೊತ್ತುಪಡಿಸಿದ ದಿನವು ಸಮೀಪಿಸಿದಾಗ ದೂತನು ವಿಕ್ರಮಾದಿತ್ಯನಿಗೆ ''ಓ ದೊರೆಯೇ ದಯಮಾಡಿ ಪ್ರಯಾಣವನ್ನು ಈಗಲೇ ಪ್ರಾರಂಭಿಸಿರಿ. ಎರಡನೆಯ ವಿಜಯದೇವತೆಯಾದ ಈಕೆ ನಿಮ್ಮ ಹೆಂಡತಿಯಾಗಬೇಕು'' ಎಂದು ಹೇಳುತ್ತಾನೆ.

ಚಕ್ರವರ್ತಿ ಈ ವಿಷಯವನ್ನು ಕೇಳಿ ಸಂತೋಷದಿಂದ ವೇಗವಾಗಿ ಓಡುವ ಅಶ್ವಗಳನ್ನು ತೆಗೆದುಕೊಂಡು ಸ್ವಯಂವರ ನಡೆಯುವ ಕರಹಾಟ ನಗರದತ್ತ ಧಾವಿಸಿ ಬರುತ್ತಾನೆ. ಇವನನ್ನು ನೋಡಿ ಕರಹಾಟದ ಅರಸ ಹರ್ಷದಿಂದ ಪುಳಕಿತನಾಗಿ ತುಂಬು ಹೃದಯದಿಂದ ಸ್ವಾಗತಿಸುತ್ತ, ಸ್ವಯಂವರ ನಡೆದ ಸ್ಥಳದಲ್ಲಿ ಕರೆದುಕೊಂಡು ಹೋಗಿ ಕುಳ್ಳರಿಸುತ್ತಾನೆ. ಅಲ್ಲಿ ದೇಶ-ವಿದೇಶಗಳಿಂದ ಚಂದ್ರಲೇಖೆಯನ್ನು ಪಡೆಯಬೇಕೆಂಬ ಉದ್ದೇಶದಿಂದ ಬಂದಿದ್ದ ರಾಜರು, ರಾಜಕುಮಾರರು ನೆರೆದಿದ್ದರು. ಅವರೆಲ್ಲ ಚಂದ್ರಲೇಖೆಯ ಬರುವಿಕೆಗಾಗಿ ಕಾದಿದ್ದರು.

ರೇಷ್ಮೆ ಸೀರೆಯನ್ನುಟ್ಟು, ತಲೆಗೆ ಕೇದಗೆಯನ್ನು ಮುಡಿದು, ಹಣೆಗೆ ಗಂಧವನ್ನು ಧರಿಸಿ ವಿವಿಧ ಉಡುಗೆ-ತೊಡುಗೆಗಳನ್ನು ತೊಟ್ಟು ಸುಂದರವಾಗಿ ಕಂಗೊಳಿಸುತ್ತಿದ್ದ ಅಪ್ರತಿಮ ಸೌಂದರ್ಯದ ಗಣಿಯಾದ ಚಂದ್ರಲೇಖೆಯು ಹೂಮಾಲೆಯನ್ನು ಹಿಡಿದು ಸ್ವಯಂವರ ನಡೆಯುವ ಸ್ಥಳಕ್ಕೆ ತನ್ನ ಸಖಿಯರೊಡನೆ ಬರುತ್ತಾಳೆ. ಸಖಿಯು ಅಲ್ಲಿ ನೆರೆದಿದ್ದ ಅರಸರ, ಕುಮಾರರ ಗುಣಗಾನವನ್ನು ಮಾಡುತ್ತ ಅವರ ವಂಶ, ದೇಶ ಮೊದಲಾದವುಗಳನ್ನು ಹೇಳುತ್ತ ಒಬ್ಬೊಬ್ಬರನ್ನಾಗಿ ಪರಿಚಯಿಸುತ್ತಾ ಬರುತ್ತಾಳೆ. ಹೀಗೆ ಅಲ್ಲಿ ಬಂದಿದ್ದ ಪ್ರಮುಖ ವಂಶದ ಅರಸರೆಂದರೆ ಚೇದಿ ಅರಸು, ಕನ್ಯಾಕುಬ್ಜದ ದೊರೆ, ಅರ್ಜುನ ವಂಶಜ, ಕಾಲಿಂಜರ ಬೆಟ್ಟದ ದೊರೆ, ಗೋಪಾಚಲದರಸ(ಗ್ವಾಲಿಯರ್) ಮಾಳವ, ಗೂರ್ಜರ ಪಾಂಡ್ಯ, ಚೋಳ, ಮೊದಲಾದ ದೇಶದವರೆಂದು ಇವರನ್ನು ಪರಿಚಯಿಸುತ್ತಿದ್ದಾಗ ಚಂದ್ರಲೇಖೆಯು ಇವರಾರ ಕಡೆಗೂ ನೋಡುತ್ತಿದ್ದಿಲ್ಲ. ಆಕೆಯ ಮಾತನ್ನೂ ಕೇಳುತ್ತಿದ್ದಿಲ್ಲ. ಈ ಎಲ್ಲ ಅರಸರಿಗಿಂತ ದೂರದಲ್ಲಿ ಕುಳಿತಿದ್ದ ವಿಕ್ರಮಾದಿತ್ಯನಿಗೆ ಹಾರವನ್ನು ಹಾಕಿ ಅವನನ್ನು ತನ್ನ ಪತಿಯನ್ನಾಗಿ ಆಯ್ಕೆ ಮಾಡಿಕೊಳ್ಳುತ್ತಾಳೆ. ಇದರಿಂದ ಕುಪಿತಗೊಂಡ ಇತರ ಅರಸರು ಮನಸ್ಸಿಗೆ ಬಂದಂತೆ ಮಾತನಾಡುತ್ತಾ ತಮ್ಮ ದಾರಿಯನ್ನು ಹಿಡಿಯುತ್ತಾರೆ. ಕರಹಾಟದ ಅರಸನು ಇವರೀರ್ವರ ವಿವಾಹ ಮಾಡುತ್ತಾನೆ ಎಂದಿದೆ.

ಚಂದಲದೇವಿಯ ವಿವಿಧ ಪ್ರಶಸ್ತಿಗಳನ್ನು ಶಾಸನಗಳಲ್ಲಿ ಹೀಗೆ ಹೇಳಲಾಗಿದೆ. ಹುಣಸಿ ಹಡಗಲಿ[೨೦] ಶಾಸನದಲ್ಲಿ ''ಸ್ವಸ್ತ್ಯನವರತ ಪರಮ ಕಲ್ಯಾಣಾಭ್ಯುದಯ ಸಹಸ್ರಫಳಭೋಗ ಭಾಗಿನಿ (1*) ದ್ವಿತೀಯ ಲಕ್ಷ್ಮೀ ಸಮಾನೆ ಕಳಹಂಸಯಾನೆ

। ರಾಯರುಳಪ್ಪ ಕಟ್ಟ(ಳ್ಪ) ಕುಜಸಮಾಲಂಗಿತ ಕಲ್ಪಲತೆ ಸಾಮಂತಸೀಮಂತಿನೀ ಪರಿವೃತೆ । ದುಷ್ಟ ದರ್ಪಿಷ್ಠ ಸವತೀ ಶಿರೋವಜ್ರಮುಷ್ಠಿ ದೀನಾನಾಥಕಥಕ ವೈತಾಳಿಕ ಸುವರ್ಣ್ಣವೃಷ್ಟಿವಂದಿಚಿಂತಾಮಣಿ ಅಂತಃಪುರ ಚೂಡಾಮಣಿ ಮಲಪವಿದ್ಯಾಧರೀ, ಸಕಳಕಳಾಧರಿ, ರಾಯಮನೋಜರಾಜರಲಿ, ಅಡಬಳ ಸರಸ್ವತಿ, ನೃತ್ಯವಿದ್ಯಾಧರಿ, ಸಸ್ತಿಗಜಕೇಸರಿ, ಕಲಿಕಾಲ ಸರಸ್ವತಿ ಶ್ರೀ ಮತ್ತ್ರಿಭುವನಮಲ್ಲದೇವ ವಿಶಾಳವೃಕ್ಷಸ್ಥಳ ನಿವಾಸಿನಿಯರಪ್ಪ ಶ್ರೀ ಮತ್ಪಿರಿಯರಸಿ ಚನ್ದಲದೇವಿಯರು'' ಎಂದು ಹೇಳಿದೆ. ಅಳಂದ ಶಾಸನ[೫೦]ವು ''ಸ್ವಸ್ತ್ಯನವರತ ಪರುಮಕಲ್ಯಾಣಾಭ್ಯುದಯ ಸಹಸ್ರಫಳಭೋಗಭಾಗಿನಿ ವಾಟ(ಕ್ಕೆ) ಮದದ್ವಿರದ ಗಾಮಿನಿ ರಾಯಜಗದಲಮತತಿ ಮಚ್ಚರಿಪ ಸವತೀಮದಭಂಜನೆ ರಾಯಭಂಗಾಜಿ ದೇವಮನಚ್ಛಿಯೋನಿಧಿ ಪ್ರವರ್ದ್ಧಮಾ(ನ) (ಚಂದ್ರ) ವದನೆ ಸೌಭಾಗ್ಯಸದನೆ ರಾಯಜಳಪ್ಪ ಕಳ್ಪಾವನೀಜ ಸಮಾಲಿಂದ ಜಂನಮುಲತೆ ಶರ(ಣಾಗತ) ಸಮುದ್ಧರಣ ಪರಿಣತೆ ದುಷ್ಟದರ್ಪಿಷ್ಟ ಸವತೀ ಶಿರೋವಜ್ರಮುಷ್ಟಿಯನವರತೆ (ಸು)ವರ್ಣ್ಣ ವೃಷ್ಟೀ ಸಮಸ್ತಾನ್ತಃಪುರ ಜಗದಳ ಪವಿತ್ರೀಕೃತ ರಾಯನಾರಾಯಣ ಹೃದಯಾನಂದ ಪ್ರದಾಯಕಿ ಗೌರೀಪದಾಂಬುಜಾ ರಾಧಕಿ ಸೌಭಾಗ್ಯಗರ್ವದುರ್ವ್ವಿನೀತಾಂತಃಪುರ ಕಾ(ಸ್ತೋಪ) ಹಾಸಿನಿ ಶ್ರೀವತ್ತ್ರಿಭುವನಮಲ್ಲದೇವ ವಿಶಾಳ ವಕ್ಷಸ್ಥಳ ನಿವಾಸಿನಿಯರಪ್ಪ ಶ್ರೀ(ನೃ)ತ್ಯ ವಿದ್ಯಾಧರಿ ಚಂದಲದೇವಿಯರು''ಎಂದು ಈಕೆಯ ಪ್ರಶಸ್ತಿಯನ್ನು ಹೇಳಿದೆ.

'ನೃತ್ಯ ವಿದ್ಯಾಧರಿ' ಎಂಬ ಪ್ರಶಸ್ತಿಯಿಂದ ಈಕೆಯು ಶ್ರೇಷ್ಠದರ್ಜೆಯ ನೃತ್ಯಗಾರ್ತಿಯಾಗಿದ್ದಳೆಂಬುದು ತಿಳಿದು ಬರುತ್ತದೆ. ಅಲ್ಲದೆ ಈಕೆಯು ಇತರ ಕಲೆಗಳಲ್ಲಿಯೂ ಪರಿಣಿತಳಾಗಿದ್ದಳು. 'ಸವತಿಶಿರೋವಜ್ರಮುಷ್ಠಿ' ಎಂಬ ಪ್ರಶಸ್ತಿ ಸವತಿಯರ ಬಗ್ಗೆ ಇವಳಿಗಿದ್ದ ದರ್ಪವನ್ನು ಸೂಚಿಸುತ್ತದೆ. ''ಗೌರೀಪದಾಂಬುಜಾರಾಧಕಿ'' ಎಂಬ ಪ್ರಶಸ್ತಿ ಈಕೆ ಗೌರಿಭಕ್ತೆಯೆಂಬುದನ್ನು ಸೂಚಿಸುತ್ತಿರಬಹುದು. ಹೀಗಾಗಿ ಚಲುವೆಯಾದ ಈಕೆ ವಿಕ್ರಮಾದಿತ್ಯನ ಪ್ರಿಯರಾಣಿಯಾಗಿರುವಲ್ಲಿ ಸಂದೇಹವೇ ಇಲ್ಲ ಎಂದು ಹೇಳಬಹುದು.

ಕ್ರಿ.ಶ. ೧೦೯೮ ರ ಹುಣಸಿಹಡಗಲಿ ಶಾಸನ[೫೧]ದಲ್ಲಿ ಈಕೆಯನ್ನು ''ಶ್ರೀಮತ್ರಿಭುವನಮಲ್ಲದೇವ ವಿಶಾಳವಕ್ಷಸ್ಥಳ ನಿವಾಸಿನಿಯರಪ್ಪ ಶ್ರೀ ಮತ್ಪಿರಿಯರಸಿ ಚನ್ದಲದೇವಿಯರು'' ಎಂದು ಕರೆಯಲಾಗಿದೆ. ಕ್ರಿ.ಶ. ೧೧೧೦ ರ ಕಾಳಗಿ ಶಾಸನ[೫೨]ದಲ್ಲಿ ಕೂಡ ಈಕೆ ಪಿರಿಯರಸಿ ಎಂಬರ್ಥದಲ್ಲೇ ಹೇಳಲಾಗಿದೆ. ''ಶ್ರೀ ತ್ರಿಭುವನಮಲ್ಲ ಭೂಪತಿ ದೇವನಗ್ರಮಹಾಮಹಿಷಿಪದಕೆ ನಿಂದಭಿನವರೂಪ್ರವಿಜ್ರಮಸಮನ್ವಿತ ಚಂದಲದೇವಿಯರು'' ಎಂದು ಬರುತ್ತದೆ.

ಚಂದಲದೇವಿಯ ಹೊರರೂಪ ಸುಂದರವಾಗಿರುವಂತೆ ಆಕೆಯ ಒಳಮನಸ್ಸು ಸುಂದರವಾಗಿದ್ದಿತು. ಅಲ್ಲದೆ ಈಕೆ ಅನೇಕ ದಾನ ದರ್ಮಾದಿ ಕಾರ್ಯಗಳನ್ನು ಮಾಡಿದುದು ಶಾಸನಗಳಿಂದ ತಿಳಿದುಬರುತ್ತದೆ. ಕ್ರಿ.ಶ. ೧೦೯೭ ರ ರಾಜನಕೊಳೂರು ಶಾಸನ[೫೩]ದಲ್ಲಿ ಇವಳು ಭತ್ತ ಗ್ರಾಮವಾದ ರಾಜನಕೋಳೂರಿನಲ್ಲಿಯ ಶಂಕರನಾರಾಯಣ ದೇವರಿಗೆ ಭೂಮಿ, ತೋಟ, ಗಾಣ, ನಿವೇಶನಗಳನ್ನು ದತ್ತಿಯಾಗಿ ಬಿಟ್ಟುದುದನ್ನು ತಿಳಿಸುತ್ತದೆ. ಕಟ್ಗೇರಿ ಶಾಸನ[೫೪]ದಲ್ಲಿ ಇವಳು

ಅಗ್ರಹಾರ 'ಕಟಕೆಜೆಯ' ಊರೊಡೆಯ ಪ್ರಮುಖ ಮಹಾಜನರ ಕೈಯಲ್ಲಿ ಋಗ್ವೇದದ ಖಂಡಿಕಕ್ಕೆ ಸಿದ್ದಾಯದಲ್ಲಿ ಎಂಟು ಗದ್ಯಾಣವನು ಧಾರಾಪೂರ್ವಕವಾಗಿ ದಾನ ಮಾಡುತ್ತಾಳೆ. ಈ ಶಾಸನ ತ್ರುಟಿತವಾಗಿರುವುದರಿಂದ ಹೆಚ್ಚಿನ ಮಾಹಿತಿ ಲಭ್ಯವಿಲ್ಲ.

ಹುಣಸಿಹಡಗಲಿ ಶಾಸನ[೫೬]ದಲ್ಲಿ ಚಂದಲದೇವಿಯು ಹಲವು ಭತ್ತಗ್ರಾಮಗಳನ್ನು ಆಳುತ್ತಿದ್ದಳೆಂದು ಹೇಳಿದೆ. ''ಶ್ರೀಮತ್ಪರಿಯರಸಿ ಚನ್ದಲದೇವಿಯರು ಅಲಂದೆಸಾಸಿರ ಪ್ರಮುಖವನೇಕ ಭತ್ತಗ್ರಾಮಂಗಳು ಮರಿದುಷ್ಟನಿಗ್ರಹ ಶಿಷ್ಟಪ್ರತಿಪಾಳನರಿಂದಾಟ್ಟ(ಳ್ದ)ರಸುಗೈಯ್ಯುತ್ತಮಿರೆ'' ಎಂದಿದೆ. ಇದರಿಂದ ಅಳಂದೆ ಸಾಸಿರದಲ್ಲಿ ತನ್ನ ಉಪಜೀವನಕ್ಕಾಗಿ ಕೊಟ್ಟ ಭತ್ತಗ್ರಾಮಗಳ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದಳೆಂದು ತಿಳಿಯುತ್ತದೆ.

ಕೆಲವಾರು ಅಧಿಕಾರಿಗಳು ಚಂದಲದೇವಿಯ ಪಾದಪದ್ಮೋಪಜೀವಿಗಳಾಗಿದ್ದುದು ತಿಳಿದುಬರುತ್ತದೆ. ಮಹಾಮಂಡಳೇಶ್ವರ ಬಿಬ್ಬರಸನು[೫೭] ಈಕೆಯ ಪಾದಪದ್ಮೋಪಜೀವಿಯಾಗಿದ್ದನು. ಚಿನ್ನತುಂಬಳಂ ಶಾಸನ[೫೮]ದಲ್ಲಿ ''ಚಂದಲದೇವಿಯ ಗಂಧವಾರಣ ತ್ರಿಭುವನಮಲ್ಲದೇವ ಪಾದಸಳ್ಬರಣ ಗುಣಾಭರಣ'' ಎಂದು ಕಲಗಭೂಪನನ್ನು ಕರೆಯಲಾಗಿದೆ. ಈ ಕಲಿಗನನ್ನೇ ಬಂಕಾಪುರ ಶಾಸನ[೫೯]ವು ''ಚನ್ದಲದೇವಿಯ ಗನ್ಧವಾರಣಂ ರಿಪ್ರಮದನಿವಾರಣ ಶ್ರೀಮನ್ಮಹಾಮಣ್ಡಳೇಶ್ವರ ಕಲಿಯಮರಸ'' ಎಂದು ಕರೆದಿದೆ. ಇದರಿಂದ ಕಲಿಯಮರಸನು ಚಂದಲದೇವಿಗೆ ನಿಕಟವರ್ತಿಯಾಗಿದ್ದನೆಂಬುದು ಸ್ಪಷ್ಟವಾಗುತ್ತದೆ.

ಮೂರನೆಯ ಸೋಮೇಶ್ವರ, ತೈಲಪ, ಜಯಕರ್ಣದೇವ ಈ ಮೂವರು ಪುತ್ರರು ಚಂದಲದೇವಿಯ ಉದರದಿಂದ ಜನಿಸಿದ್ದಾರೆ. ಈಕೆಗೆ ಒಬ್ಬ ಪುತ್ರಿಯೂ ಜನಿಸಿದ್ದಳೆಂಬ ಅಂಶವನ್ನು ಡಾ. ಪಿ. ಬಿ. ದೇಸಾಯಿ[೬೦]ಯವರು ಶೋಧಿಸಿದ್ದಾರೆ. ಆಕೆಯನ್ನು ಕಲಚೂರಿ ವಂಶದ ಮಹಾಮಂಡಳೇಶ್ವರ ಪೆರ್ಮಾಡಿಗೆ ಕೊಟ್ಟು ಮದುವೆ ಮಾಡಲಾಗಿತ್ತು. ಇದಕ್ಕೆ ಅವರು ಜತ್ ತಾಲೂಕಿನ ವಳಸಂಗ ಗ್ರಾಮದ ಶಾಸನಾಧಾರವನ್ನು ಕೊಟ್ಟಿರುತ್ತಾರೆ. ''ಈ ಶಾಸನದ ಆರಂಭದಲ್ಲಿ ಜಗದೇಕಮಲ್ಲನ ಆಳ್ವಿಕೆಯ ವಿಷಯವು ಬರುತ್ತದೆ. ಅನಂತರ ಮಹಾಮಂಡಳೇಶ್ವರ ಬಿಜ್ಜಣದೇವನು ಕರಹಡ ನಾಲ್ಕುಸಾವಿರ ಪ್ರದೇಶವನ್ನು ಆಳುತ್ತಿದ್ದನೆಂದು ಹೇಳಿದೆ. ನಂತರ ಈ ಬಿಜ್ಜಣದೇವನ ಮುತ್ತಬ್ಬೆಯೂ ತ್ರಿಭುವನಮಲ್ಲದೇವನ ಅರ್ಧಾಂಗ ಲಕ್ಷ್ಮಿಯೂ ಆದ ''ಅಭಿನವಶಾರದಾ ದೇವಿಯರಪ್ಪ ಶ್ರೀಮದಭಿನವ ಚಂದಲದೇವಿಯರು'' ವಳಸಂಗ ಗ್ರಾಮದ ಆಡಳಿತವನ್ನು ನಡೆಸುತ್ತಿದ್ದ ವಿಷಯವನ್ನು ವಿವರಿಸಿದೆ. ಈ ಬಿಜ್ಜಣದೇವನೆಂದರೆ ಪೆರ್ಮಾಡಿಯ ಮಗನಾದ ಬಿಜ್ಜಳ. ಈ ಅಭಿನವ ಚಂದಲದೇವಿ ಮೂರನೆಯ ಸೋಮೇಶ್ವರನ ತಾಯಿಯಾದ ಸುಪ್ರಸಿದ್ಧ ಚಂದಲದೇವಿಯಲ್ಲದೆ ಬೇರೆಯಲ್ಲ. ಈಕೆಗೆ 'ಅಭಿನವ ಸರಸ್ವತೀ' ಎಂಬ ಬಿರುದು ಇದ್ದಿತು. ಶಾರದಾ ಮತ್ತು ಸರಸ್ವತೀ ಇವು ಪರ್ಯಾಯ ಪದಗಳು ಎಂದು ಹೇಳಿದ್ದಾರೆ. ಬಿಜ್ಜಳನ 'ಮುತ್ತಬ್ಬೆ' ಚಂದಲದೇವಿಯಾದರೆ ಈ ಚಂದಲದೇವಿಯ ಮಗಳ ಮಗ ಬಿಜ್ಜಳ ಎಂದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಆದರೆ ಚಂದಲದೇವಿಯ ಮಗಳ ಹೆಸರು ತಿಳಿದುಬರುವುದಿಲ್ಲ.

ಚಂದಲದೇವಿಯ ಪುತ್ರ ಮಹಾಮಂಡಳೇಶ್ವರ ಕುಮಾರ ತೈಲಪ್[೬೧]ನು (೩೫ನೆಯ ಚಾಲುಕ್ಯ ವಿಕ್ರಮವರ್ಷದಲ್ಲಿ) ಅಗಸ್ತ್ಯೇಶ್ವರ ಮತ್ತು ಚಂದಲೇಶ್ವರ ದೇವರದಾಯಿ (-ದಾಸಿಗಾಗಿ) ಬಾಗಿಯಬ್ಬೆಯ ಕೇಳಿಕೆಯ ಮೇರೆಗೆ ಕಂದೂರು-೧೦೦೦ ರಲ್ಲಿಯ ಎತ್ತರ್ಪಿ೭೦ರೊಳಗಣ ಸೆಜಿಮಲೆ-೧೨ರಲ್ಲಿದ್ದ ವೇಪಿಕಟ್ಟ ಗ್ರಾಮವನ್ನು ದಾನ ಕೊಡುತ್ತಾನೆ. ಇಲ್ಲಿ ಚಂದಲೇಶ್ವರ ದೇವರನ್ನು ಪ್ರತಿಷ್ಠಾಪಿಸಿರುವುದರಿಂದ ಈ ಸುಮಾರಿಗೆ ಚಂದಲದೇವಿಯು ಮರಣಹೊಂದಿರಬೇಕು. ಆಕೆಯ ನೆನಪಿಗಾಗಿ ಚಂದಲದೇವಿಯ ಪುತ್ರ ಹಾಗೂ ಅವನ ದಾಯಿ ಚಂದಲೇಶ್ವರ ದೇವಾಲಯ ನಿರ್ಮಿಸಿ ದೇವರನ್ನು ಪ್ರತಿಷ್ಠಾಪಿಸಿರಬೇಕು.

ಈ ಚಂದಲದೇವಿಯು ಶಿಲಾಹಾರ ರಾಜಕುಮಾರಿ ಎಂಬುದು ಸ್ಪಷ್ಟ. ಆದರೆ ಈ ಶಿಲಾಹಾರರಲ್ಲಿ ಅನೇಕ ಶಾಖೆಗಳಿವೆ. ಅವುಗಳಲ್ಲಿ ಈಕೆಯು ಯಾವ ಶಾಖೆಗೆ ಸೇರಿದ್ದಳೆಂಬುದು ಸ್ಪಷ್ಟವಾಗಿ ತಿಳಿದುಬಂದಿಲ್ಲ. ಆದರೆ ಡಾ. ಎಂ.ಎಂ.ಕಲಬುರ್ಗಿ[೬೨]ಯವರು ಈಕೆ ಕೊಲ್ಹಾಪುರದ ಶಿಲಾಹಾರ ಮನೆತನಕ್ಕೆ ಸೇರಿದವಳೆಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಅದಕ್ಕಾಗಿ ಇವರು ಕೊಲ್ಹಾಪುರದ ಶಿಲಾಹಾರ ಮನೆತನದ ವಂಶದ ಬಗ್ಗೆ ಹೇಳುತ್ತಾ ''ಜಟಿಗನ ಮೊಮ್ಮಗನಾದ ಮಾರಸಿಂಹ ಈ ಮನೆತನದ ಪ್ರಸಿದ್ಧ ಅರಸು. ಈತನನ್ನು 'ಚಕ್ರೇಶಪ್ರಿಯಮಾತುಲ' ಎಂದು ತಾಳಲೆತಾಮ್ರಪಟ ಕರೆದಿದೆ. ಶಿಲಾಹಾರ ರಾಜಕುಮಾರಿ ಚಂದ್ರಲೇಖಾ (ಚಂದಲದೇವಿ) ಎಂಬವಳನ್ನು ಕಲ್ಯಾಣ ಚಾಲುಕ್ಯ ಚಕ್ರೇಶ ಆರನೆಯ ವಿಕ್ರಮಾದಿತ್ಯನು ರಾಜಧಾನಿ ಕರಹಾಡದಲ್ಲಿ ಮದುವೆಯಾಗಿದ್ದನೆಂದು ವಿಕ್ರಮಾಂಕದೇವ ಚರಿತಂ ಹೇಳುವುದರಿಂದ ಈಕೆ ಈ ಮಾರಸಿಂಹನ ಮಗಳೇ ಆಗಿರಬೇಕು'' ಎಂದಿದ್ದಾರೆ. ಇವರ ಅರ್ಥದಲ್ಲಿ ಕೊಲ್ಹಾಪುರ ಶಿಲಾಹಾರರಿಗೆ 'ಕರಹಾಡ' ರಾಜಧಾನಿಯಾಗಿತ್ತು. ಈ ಶಿಲಾಹಾರರ ಪುತ್ರಿಯೇ ಚಂದಲದೇವಿ ಎಂಬುದು ಇವರ ಅಭಿಪ್ರಾಯವಾಗಿದೆ.

ಆದರೆ ಮೂರು ಪ್ರತ್ಯೇಕವಾದ ಶಿಲಾಹಾರ ಮನೆತನಗಳು ಒಂದೊಂದು ಭಾಗದಲ್ಲಿ ಆಳುತ್ತಿದ್ದವು. ಉತ್ತರ ಕೊಂಕಣ ಭೂಪ್ರದೇಶದಲ್ಲಿ ಕೊಲ್ಹಾಪುರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಕೊಲ್ಹಾಪುರ ಶಿಲಾಹಾರ ಮನೆತನದವರು ಆಳುತ್ತಿದ್ದರು. ದಕ್ಷಿಣ ಕೊಂಕಣದಲ್ಲಿ ಮಿರಜನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಮತ್ತೊಂದು ಶಿಲಾಹಾರ ಮನೆತನವು ಆಳುತ್ತಿತ್ತು. ಇದೇ ರೀತಿ ದಕ್ಷಿಣ ಮರಾಠ ಪ್ರದೇಶದಲ್ಲಿ ಕರಹಾಡವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಕರಹಾಡ ಶಿಲಾಹಾರರು ಆಳುತ್ತಿದ್ದರು.[೬೩] ಈ ಕರಹಾಡ ಶಿಲಾಹಾರ ಮನೆತನಕ್ಕೆ ಚಂದಲದೇವಿಯು ಸೇರಿದ್ದಾಳೆಂದು ಹೇಳಬೇಕಾಗುತ್ತದೆ. ಆದರೆ ಈ ಸಂದರ್ಭದಲ್ಲಿ ಕೊಲ್ಹಾಪುರ ಶಿಲಾಹಾರ ಮಾರಸಿಂಹನಿಗೆ 'ಚಕ್ರೇಶಪ್ರಿಯಮಾತುಲ' ಎಂಬ ಪ್ರಶಸ್ತಿಯನ್ನೇಕೆ ಬಳಸಲಾಗಿದೆ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಏಕೆಂದರೆ 'ಮಾತುಲ' ಎಂದರೆ ಸೋದರಮಾವ. ಆದ್ದರಿಂದ ಮಾರಸಿಂಹನು ಆರನೆಯ ವಿಕ್ರಮಾದಿತ್ಯನ ತಾಯಿಯ ಅಣ್ಣ ಅಥವಾ ತಮ್ಮ ಆಗಿರಬಹುದು. ಒಂದು ವೇಳೆ 'ಮಾತುಲ'ವೆಂಬುದನ್ನು ಸಡಿಲಾಗಿ 'ಮಾವ' ಎಂಬರ್ಥದಲ್ಲಿ ಬಳಸಿದ್ದರೆ, ಮಾರಸಿಂಹನ

ಮಗಳೊಬ್ಬಳನ್ನು ವಿಕ್ರಮಾದಿತ್ಯ ವಿವಾಹವಾಗಿದ್ದನೇ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಆದ್ದರಿಂದ ಈ ವಿಷಯವು ಇನ್ನೂ ಹೆಚ್ಚಿನ ಶೋಧವನ್ನು ಬಯಸುತ್ತದೆ.

ಯುವರಾಜ ಮಲ್ಲಿಕಾರ್ಜುನ :

ಆರನೆಯ ವಿಕ್ರಮಾದಿತ್ಯನ ಹಿರಿಯಮಗ ಹಾಗೂ ಮೂರನೆಯ ಸೋಮೇಶ್ವರನ ಹಿರಿಯ ಸಹೋದರನಾದ ಮಲ್ಲಿಕಾರ್ಜುನನು ಯಾವ ರಾಣಿಯ ಮಗನೆಂದು ಸ್ಪಷ್ಟವಾಗಿ ತಿಳಿದುಬರುವುದಿಲ್ಲ. ರಾಮತೀರ್ಥ ಶಾಸನ[೪೪]ದಲ್ಲಿ ''ಶ್ರೀಮತ್ರಿಭುವನಮಲ್ಲದೇವರ ಪಟ್ಟಮಹಾದೇವಿಯರುಣಗ'' ಎಂದು ಹೇಳಿಕೊಂಡಿದ್ದಾನೆ. ಲಭ್ಯವಿರುವ ಆಧಾರದ ಪ್ರಕಾರ ಆರನೆಯ ವಿಕ್ರಮಾದಿತ್ಯನ ಮೊದಲನೆಯ ಪಟ್ಟಮಹಾದೇವಿ ಮೈಳಲದೇವಿ ಈಕೆಯನ್ನು ಕ್ರಿ.ಶ. ೧೦೯೪ ರ ಕನ್ನೊಳ್ಳಿ ಶಾಸನ[೪೫]ದಲ್ಲಿ ''ಶ್ರೀಮತ್ರಿಭುವನಮಲ್ಲ ವಿಶಾಳವಕ್ಷಸ್ಥಳನಿವಾಸಿನಿಯರಪ್ಪ ಪಟ್ಟಮಹಾದೇವಿ'' ಎಂದು ಹೇಳಲಾಗಿದೆ. ಅಂದರೆ ಈಕೆ ವಿಕ್ರಮಾದಿತ್ಯನ ಪಿರಿಯರಸಿಯೂ ಪಟ್ಟಮಹಾದೇವಿಯೂ ಆಗಿದ್ದಳು. ಈಕೆಯು ವಿಕ್ರಮಾದಿತ್ಯನ ಪ್ರಥಮ ಪಟ್ಟದ ರಾಣಿಯಾಗಿದ್ದ ಪಕ್ಷದಲ್ಲಿ ಯುವರಾಜ ಮಲ್ಲಿಕಾರ್ಜುನನು ಖಂಡಿತವಾಗಿ ಈಕೆಯ ಮಗನೆಂದು ಹೇಳಬಹುದು.

ಅಳಂದ ಶಾಸನ[೪೬]ವು ವಿಕ್ರಮಾದಿತ್ಯನಿಗೆ ಮಲ್ಲಿಕಾರ್ಜುನನು ಮಕರಕೇತನ ಹುಟ್ಟುವಂತೆ ಜನಿಸಿದನು ಎಂದು ವರ್ಣಿಸಿದೆ. ಇವನ ಶೌರ್ಯ, ಸಾಹಸ ನೋಡಿ ಯುವರಾಜಪಟ್ಟ ಕಟ್ಟಿದ ಉಲ್ಲೇಖ ಇದೇ ಶಾಸನದಲ್ಲಿ ಬಂದಿದೆ. ವಿಕ್ರಮಾದಿತ್ಯನು ಇವನಿಗೆ ಯುವರಾಜಪಟ್ಟಕಟ್ಟಿ ಆಳಂದಸಾಸಿರ ವಿಭಾಗವನ್ನು ಕೊಡುತ್ತಾನೆ. ಮುಂದೆ ಇವನು ಕ್ರಿ.ಶ. ೧೦೯೫ ರ ಸುಮಾರಿಗೆ ತರ್ದವಾಡಿ-೧೦೦೦ ವನ್ನು ಆಳುತ್ತಿದ್ದನು.[೪೭] ಕ್ರಿ.ಶ. ೧೧೧೫ ರ ಸುಮಾರಿಗೆ ಕರಹಾಡ೪೦೦೦ವನ್ನು ಆಳುತ್ತಿದ್ದನೆಂದು ತಿಳಿದುಬರುತ್ತದೆ.[೪೮] ಇವನ ಉಪಲಬ್ಧ ಕೊನೆಯ ಶಾಸನವೆಂದರೆ ಕ್ರಿ.ಶ. ೧೧೨೩ ಜನೇವರಿ ೨೨ ರ ಉಮರಾಣಿ ಶಾಸನ[೪೯]ವಾಗಿದೆ. ಇದರಿಂದ ಕ್ರಿ.ಶ. ೧೦೮೨ ರಿಂದ ೧೧೨೩ ರವರೆಗೆ ಯುವರಾಜನಾಗಿದ್ದು ನಂತರ ಮರಣ ಹೊಂದಿರಬಹುದು. ಅಂದರೆ ಈತ ಸುಮಾರು ೫೬ ವರ್ಷ ಮಾತ್ರ ಜೀವನ ನಡೆಸಿದನೆಂದು ಹೇಳಬೇಕಾಗುತ್ತದೆ.

ವಿಕ್ರಮಾದಿತ್ಯನ 'ತನಯಂ'[೫೦] ಎಂದೂ 'ತದಗ್ರಜಂ'[೫೧] ಎಂದೂ ಇವನನ್ನು ಕರೆಯಲಾಗಿದೆ. ಹೆಬ್ಬಾಳ[೫೨] ಶಾಸನದಲ್ಲಿ 'ಸಮಸ್ತ ಭುವನಸಂಸ್ತೂಯಮಾನ' ಕೀರ್ತ್ತಿಕೌಮದೀಧವಳಿ ಚಾಳುಕ್ಯಕುಳಕುಮುದ, ವಿಭವಾಮರೇಂದ್ರಂ, ರಿಪುರಾಯಕುಮಾರ, ಕುಳಕುಧರಕುಳಿಶದಣ್ಣಂ ರಾಜ ಮಾರ್ತ್ತಣ್ಡ, ಮಾಳವಬಳಬಳಾಹಕ ಸಮೀರಣಂ, ವಿಜಯಲಕ್ಷ್ಮೀ ಭವನ ಮಣಿತೋರಣಂ, ಶಸ್ತ್ರಶಾಸ್ತ್ರ ವಿದ್ಯಾಧರಂ, ರಾಜ್ಯಲಕ್ಷ್ಮೀಧರಂ, ಬಪ್ಪನಸಿಂಗಂ,ಸಾಹಸೋತ್ತುಂಗ ಎಂಬ ಪ್ರಶಸ್ತಿಗಳನ್ನು ಹೊಂದಿದ್ದನೆಂದು ಹೇಳಲಾಗಿದೆ. ಬಂಧರವಾಡ ಶಾಸನ[೫೩]ದಲ್ಲಿ ''ಯುವರಾಜ್ಯ ಪದವೀಭೂತಂ ಕುಮಾರಚೂಡಾರತ್ನಂ ಬೊಪ್ಪನಂಕಕಾರ, ರಾಮನೇಕಕಲಿ ಮಂನೆಯನಾಭಿರಾಮ ಕಾಮಿತವಿಭುಜನನಯ್ಯನಸಿಂಗ'' ಎಂಬ ಪ್ರಶಸ್ತಿಗಳನ್ನು ಅಗರಖೇಡದ ಶಾಸನ[೫೪]ದಲ್ಲಿ ''ಸಮಸ್ತ ಭುವನವಿಖ್ಯಾತಂ ಪರಿಜನಪಾರಿಜಾತಂ, ಭೂಪಮಾನ್ಯಾತಂ

ರಿಪುರಾಯ ಕುವರಬಂಗಾಱಂ ಬಪ್ಪನಂಕಕಾಱಂ, ಕುಮರಂಕಭೀಮಂ, ನಯನಾಭಿರಾಮಂ, ಕುವರವೇಶ್ಯಾಭುಜಂಗಂ, ಅಯ್ಯನಸಿಂಗಂ ಸರಣಾಗತ ವಜ್ರಪಂಜರಂ, ಕುಮಾರದಿಕ್ಕುಂಜರಂ, ಪರವಿದ್ಯಾಧಿಕಂಸಕಳಕಳಾಧರಂ, ಪದ್ಮನಾಳಗಿರಿಜವಜ್ರದಣ್ಡ, ವೀಕ್ಷಳರಾಯಕುವರ(ಜವದಣ್ಡ) ಮಹಾಲಕ್ಷ್ಮೀದೇವೀಲಬ್ಧವರ ಪ್ರಸಾದಂ, ತ್ಯಾಗವಿನೋದಂ ಮೂರುರಾಯಕುವರ ಸಾಹಸಮಲ್ಲಂ'' ಎಂದು ಮೊದಲಾದ ಪ್ರಶಸ್ತಿಗಳನ್ನು ಹೇಳಲಾಗಿದೆ. ದಿಣ್ಣಾವಾರ ಶಾಸನ[೭೫]ದಲ್ಲೂ ಸಹ ಇದೇ ತೆರನಾದ ಪ್ರಶಸ್ತಿಗಳು ಕಂಡುಬರುತ್ತವೆ.

ಈ ಮೇಲೆ ಹೇಳಿದ ಪ್ರಶಸ್ತಿಗಳಿಂದ ತಿಳಿದುಬರುವ ಅಂಶವೆಂದರೆ ಇವನು ಆರನೆಯ ವಿಕ್ರಮಾದಿತ್ಯನ ಪ್ರಿಯಪುತ್ರನೂ, ಅವನಂತೆ ವೀರನೂ ಆಗಿದ್ದನೆಂದು ತಿಳಿದುಬರುತ್ತದೆ. 'ಮಹಾಲಕ್ಷ್ಮೀದೇವಿಲಬ್ಧವರಪ್ರಸಾದ' ವೆಂಬ ಪ್ರಶಸ್ತಿಯಿಂದ ಇವನು ದೇವಿಭಕ್ತನಾಗಿದ್ದನೆಂದು ತಿಳಿದುಬರುತ್ತದೆ. ಶಾಸ್ತ್ರಗಳಲ್ಲಿ ಪಾರಂಗತನಾಗಿರುವಂತೆ ಸಕಲಶಾಸ್ತ್ರಗಳಲ್ಲಿಯೂ ಪಾರಂಗತನಾಗಿ ವಿದ್ಯಾಧರನೆನಿಸಿದ್ದನು. ವೀರನಾಗಿರುವಂತೆ ಶರಣು ಬಂದವರನ್ನು ರಕ್ಷಿಸುವವನೂ ಆಗಿದ್ದನು.

ಆಳಂದ ಶಾಸನ[೭೬]ದಲ್ಲಿ ಈತನ ಪರಾಕ್ರಮದ ವರ್ಣನೆ ಈ ರೀತಿಯಾಗಿದೆ. ''ನೃಪವಿಕ್ರಮಾಂಕನ ಭುಜಸ್ತಂಭದೊಳೊಪ್ಪಿಪ್ಪಿಪಂ ವಸೂಧಾಮಣ್ಡನ ಮಲ್ಲಿಕಾರ್ಜುನ ಕುಮಾರಂ ವೀರನಾರಾಯಣಂ'' ಎಂದು ಬರುತ್ತದೆ. ಮಾಶಾಳ ಶಾಸನ[೭೭]ದಲ್ಲಿ ''ಎನೆ ನೆಗಳ್ದ ಮಲ್ಲಿಕಾರ್ಜುನ ಜನಪಂ ಯುವರಾಜ ಪದವಿಯೊಳು ಸುಖದಿನಿರಲು ವನವಿಧಿಪರೀತ ಭೂತಳಮನಿತುಂ ಸುಖದಿಂದಮಿರ್ದುದೆನಲೇ ಪೊಗಳ್ವೆ'' ಎಂದು ಹೇಳಿ ಸಂಪತ್ತನ್ನು ಬೇಡಿದವರಿಗೆ ದಾನ ಮಾಡುವವ, ಗರ್ವದಿಂದ ಮೆರೆದವರನ್ನು ಸೋಲಿಸುವವ ಈತನನ್ನು ಸರಿಗಟ್ಟುವವರು ಯಾರೂ ಇಲ್ಲವೆನ್ನುತ್ತ ಇವನ ದಾನ ಶೌರ್ಯ ಗುಣವನ್ನು ವಿವರಿಸಲಾಗಿದೆ. ಬಿಜಾಪುರ ಮ್ಯೂಜಿಯಂನಲ್ಲಿರುವ ಶಾಸನ[೭೮]ವು ಇವನು ಯುವರಾಜ ಪದವಿಯನ್ನು ಪಡೆದುದನ್ನು ಈ ರೀತಿಯಾಗಿ ತಿಳಿಸುತ್ತದೆ.

ಆತನ ತನೆಯಂ ತಂದೆಗ
ಮಿತನೆ ಮಿಗಿಲೆನಿಪ ಮಹಿಮೆಯಂ ಯುವರಾಜ
ಖ್ಯಾತಿಪೆರಸುರ್ವ್ವಿಯಂ ತಳೆ
ದಾತಂ ಕೇವಳಮೆ ಮಲ್ಲಿಕಾರ್ಜುನದೇವಂ

ಕಡಲೊಳ್ ಪುಟ್ಟಿದಮಣಿಗಳು
ಪಡೆಗುಮೆ ಕೌಸ್ತುಭವ ಮಹಿಮೆಯಂ ನೃಪತನಯ
ಪ್ಪಡೆಗುಮೆ ಕುಮಾರರೆಂಬೀ
ರ್ಪಡೆಮಾತಿಂ ಮಲ್ಲಿದೇವ ಮಹಿಮಾಸ್ಪದಂ

ಈ ಮೇಲಿನ ವರ್ಣನೆ ನಿಜವೆನ್ನುವಂತೆ ಇವನು ಅನೇಕ ಧಾರ್ಮಿಕ ಕಾರ್ಯಗಳನ್ನು ಮಾಡಿದ್ದಾನೆ. ಮಲ್ಲಿಕಾರ್ಜುನನು ದೇವರ ದತ್ತಿಯಾಗಿ ವಿಮಳಶಕ್ತಿಪಂಡಿತದೇವರಿಗೆ ಅಣಂದೂರು -೩೦೦ ರಲ್ಲಿದ್ದ ಕಂಬರಿಗಾವೆ ೬೦ರೊಳಗಿನ ದಿಣ್ಣಪುರವನ್ನು ಬಿಟ್ಟನೆಂದು ತೀರ್ಥಶಾಸನ[೭೯] ತಿಳಿಸುತ್ತದೆ. ಅಣಂದೂರ-೩೦೦ ರಲ್ಲಿಯ ನಿತ್ಯಭೂದಾನದ ಅಗ್ರಹಾರವಾದ ಮಾಸಿವಳದಲ್ಲಿ ಮನೆವೆರ್ಗಡೆ ದಂಡನಾಯಕ ಗೋವಿಂದಮಯ್ಯಂಗಳು ಮಾಡಿಸಿದ ಮಹಾದೇವ ಕೇಶವದೇವ, ಆದಿತ್ಯದೇವ ದೇವಾಲಯಗಳಿಗೆ ಭೂದಾನ ಮಾಡುತ್ತಾನೆ.[೮೦] ಮಹಾಸಾಮಂತಾಧಿಪತಿ ಮಹಾಪ್ರಚಂಡ ದಂಡನಾಯಕ ಭೀವಣಯ್ಯನ ಭಿನ್ನಪದ ಮೇರೆಗೆ ಇವನು ಪೆರ್ಬಾಳದ ಶ್ರೀ ಸ್ವಯಂಭೂ ದಕ್ಷಿಣ ಸೋಮನಾಥದೇವರ ಮಠದ ಆಚಾರ್ಯರಾದ ಶಾಂತರಾಶಿ ಪಂಡಿತರ ಶಿಷ್ಯ ಚಂದ್ರಶೇಖರ ಪಂಡಿತರ ಕಾಲು ತೊಳೆದು ದಾನವನ್ನು ಬಿಡುತ್ತಾನೆ.[೮೧] ಅಳಂದ ಸಾವಿರದ ಪೆರ್ಗ್ಗಡೆ ದಂಡನಾಯಕ ನಾಚ..ನ ಬಿನ್ನಪದ ಮೇರೆಗೆ ಇವನು ಚಕ್ರವರ್ತಿಯಿಂದ ಒಪ್ಪಿಗೆ ಪಡೆದು ಅಳಂದೆಯ ಸೋಮೇಶ್ವರ ದೇವರಿಗೆ ದಾನವನ್ನು[೮೨] ಬಿಡುತ್ತಾನೆ. ಇದೇ ರೀತಿ ಮಲ್ಲಿಕಾರ್ಜುನನು ಮಹಾಸಾಮಂತಾಧಿಪತಿ ಮಹಾಪ್ರಚಂಡ ದಂಡನಾಯಕ ಲಕ್ಷ್ಮರಸನ ವಿನಂತಿಯ ಮೇರೆಗೆ ಬೊಂದರವಾಡದ ಸೋಮೇಶ್ವರ ದೇವರಿಗೆ ಅಳಂದ-೧೦೦೦ದಲ್ಲಿಯ ಛತ್ತಿಗಾಣಪುರದ ಹತ್ತಿರದ ಗ್ರಾಮ ಹಸಿರು ಗುಂಡಿಗೆಯಲ್ಲಿ ಭೂಮಿಯನ್ನು ದಾನ ಬಿಡುತ್ತಾನೆ.[೮೩] ಭಂಡರಕರಠೆ ಶಾಸನ[೮೪]ದಲ್ಲಿ ಮುಂದುರ್ವ-೩೦ ರೊಳಗಿನ ಬಂಡಾರಗೌಟಗೆಯಲ್ಲಿ ಸೋಮರಾಸಿಜೀಯರ ಕೈಯಲ್ಲಿ ಕಲಿದೇವರಿಗಾಗಿ ಭೂಮಿಯನ್ನು ಬಿಟ್ಟನೆಂದು ತಿಳಿಸುತ್ತದೆ. ಈ ಎಲ್ಲ ಉಲ್ಲೇಖಗಳು ಇವನ ದಾನಗುಣಕ್ಕೆ ಸಾಕ್ಷಿಯಾಗಿವೆ.

ಮಹಾಸಾಮಂತಾಧಿಪತಿ ಮಹಾಪ್ರಚಂಡ ದಂಡನಾಯಕ ಭೀವಣಯ್ಯ[೮೫] ಮಹಾಸಾಮಂತಾಧಿಪತಿ ಮಹಾಪ್ರಚಂಡ ದಂಡನಾಯಕ ಕರಹಾಡನಾಡ ಪೆರ್ಗ್ಗಡೆ ದಂಡನಾಯಕ ಚಾವೂಣಯ್ಯ[೮೬], ಮಹಾಮಂಡಳೇಶ್ವರ ಪೆರ್ಮಾಡಿಯರಸ[೮೭], ಮಹಾಸಾಮಂತಾಧಿಪತಿ ಮಹಾಪ್ರಚಂಡ ದಂಡನಾಯಕ ಲಕ್ಷ್ಮರಸ[೮೮],ರೆಂಬ ಇವನ ಕೆಲವು ಅಧಿಕಾರಿಗಳ ಉಲ್ಲೇಖ ತಿಳಿದುಬರುತ್ತದೆ. ಇವನ ಗುರುಗಳಾದ ವಿದ್ಯಾಗುರು ಲಕ್ಷ್ಮೀಧರ ಭಟ್ಟೋಪಾಧ್ಯಾಯ[೮೯]ರ ಉಲ್ಲೇಖ ಸಹ ಕಂಡುಬರುತ್ತದೆ.

ಮರಡಿ ಶಾಸನ[೯೦]ದಲ್ಲಿ ಯುವರಾಜ ಮಲ್ಲಿಕಾರ್ಜುನನ ಪಿರಿಯ ಅರಸಿಯಾದ ಸಿರಿಯಾಲದೇವಿಯ ಉಲ್ಲೇಖ ಬರುತ್ತದೆ. ಯುವರಾಜ ಮಲ್ಲಿಕಾರ್ಜುನನ ಅರ್ಧಾಂಗಲಕ್ಷ್ಮಿ ಎಂದು ಹೇಳಿಕೊಂಡ ಈಕೆ "(ಸುಸ್ಥ್ಯ)ನವರತ ಪರಮಕಲ್ಯಾಣಾಭ್ಯುದಯ ಸಹಸ್ರಫಳಭೋಗಭಾಗಿನಿ ಅಗಣ್ಯ ಪುಣ್ಯಲಾವಣ್ಯ ಸಂಭೋಗಭಾಗಿನಿ ಪರಿವಾರ ಜನಸಮುದ್ಧರಣ ಧಾತ್ರಿಪತಿಬ್ರತಾ ಗುಣಸಾವಿತ್ರಿ, ಶರಣಾಗತ ರಕ್ಷಾಮಣಿ, ದಾನಚಿಂತಾಮಣಿ, ರೂಪ ವಿದ್ಯಾಧರಿ, ಸಕಳಕಳಾಧರಿ" ಮೊದಲಾದ ಪ್ರಶಸ್ತಿಯನ್ನು ಧರಿಸಿದ್ದಳೆಂದು, ಸೋಮಗ್ರಹಣದ ನಿಮಿತ್ತ ಅಣಂದೂರು-೩೦೦ ರಲ್ಲಿಯ ಮಾರುಡಿಗೆ ಗ್ರಾಮದಲ್ಲಿ ಭೂಮಿಯನ್ನು ದಾನಬಿಟ್ಟ ಉಲ್ಲೇಖವಿದೆ.

ಮುತ್ತಗೆ-೩೦ನ್ನು ಆಳುತ್ತಿದ್ದ ವರ್ಧಮಾನ ಪುರವರಾಧೀಶ್ವರನೆನಿಸಿದ್ದ ಮಹಾಮಂಡಳೇಶ್ವರ ವಿಕ್ರಮಾದಿತ್ಯನಿಗೆ ಯುವರಾಜ ಮಲ್ಲಿಕಾರ್ಜುನ ಮತ್ತು ಪಿರಿಯರಸಿ ಪಿರಿಯಾದೇವಿಗೆ ಜನಿಸಿದ ಪುತ್ರಿ ಮಹಾದೇವಿಯನ್ನು ವಿವಾಹಮಾಡಿಕೊಡಲಾಗಿತ್ತು. ಇದರ ವಿವರಣೆ ಶಾಸನದಲ್ಲಿ ''ಚಾಳುಕ್ಯ ಚಕ್ರವರ್ತಿಯ ಮಗಂ ಯುವರಾಜ ಮಲ್ಲಿಕಾರ್ಜುನದೇವರ ಮಗಳು ಶ್ರೀ ಮಹಾದೇವಿ'' ಎಂದು ಬರುತ್ತದೆ. ಈಕೆ ತನ್ನ ಅಜ್ಜ ವಿಕ್ರಮಾದಿತ್ಯನಿಗೆ ಭಿನ್ನವಿಸಿ ಸೋಮಗ್ರಹಣಪರ್ವದ ನಿಮಿತ್ತ ಅಚಳೇಶ್ವರಪಂಡಿತ ದೇವರ ಕಾಲು ತೊಳೆದು ಭೂಮಿಯನ್ನು ದಾನ ಬಿಡುತ್ತಾಳೆ.

ಮಲ್ಲಿಕಾರ್ಜುನನ ಕ್ರಿ.ಶ. ೧೧೨೩ ನೆಯ ಶಾಸನವೇ ಈತನ ಉಪಲಬ್ಧ ಕೊನೆಯ ಶಾಸನವೆಂದು ಹೇಳಬಹುದು. (ಆದ್ದರಿಂದ) ಹೀಗಾಗಿ ಅವನು ಕ್ರಿ.ಶ. ೧೧೨೩ ರಲ್ಲಿ ನಿಧನ ಹೊಂದಿರಬೇಕು. ತನ್ನೆಲ್ಲ ಮಕ್ಕಳಿಗಿಂತ ಮಲ್ಲಿಕಾರ್ಜುನನ ಮೇಲೆ ಹೆಚ್ಚಿನ ಪ್ರೀತಿಯನ್ನು ಹೊಂದಿದ್ದ ವಿಕ್ರಮಾದಿತ್ಯನು ಇವನು ನಿಧನವಾದ ಮೂರು ವರ್ಷಗಳಲ್ಲಿಯೇ ಮರಣ ಹೊಂದಿದುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು.

ಕುಮಾರ ತೈಲಪದೇವ :

ಮೂರನೆಯ ಸೋಮೇಶ್ವರನ ಸಹೋದರನಾದ ಇವನು ಚಕ್ರವರ್ತಿ ವಿಕ್ರಮಾದಿತ್ಯ ಮತ್ತು ಚಂದಲದೇವಿಯರ ದ್ವಿತೀಯ ಪುತ್ರ. ತೊಗರಕುಂಟ ಶಾಸನ್‍ದಲ್ಲಿ ''ರಾಯಕುಮಾರ.. ಚ್ಚನ್ದಲದೇವೀನಯನ ಸರಸಿಜಯಸೂರ್ಯ್ಯಸ ಪ್ರತಿಹತ ಧೈರ್ಯ್ಯ ಗುರುಜನಪದರಂಜಿತ ಚೋಳ ಕಟಕರಕ್ಷಾಪಾಳ....... ಶ್ರೀಮನ್ಮಹಾಮಣ್ಡಳೇಶ್ವರಂ ಕುಮಾರ ತೈಲಪದೇವ'' ಎಂದು ಹೇಳಲಾಗಿದೆ. ಅಳವನಪಲ್ಲಿ ಶಾಸನ್‍ದಲ್ಲಿ ''ತತುಪ್ರಿಯಪುತ್ರಂ (ವಿಕ್ರಮಾದಿತ್ಯನ ಮಗ) ಮಹಾಮಂಡಳೇಶ್ವರ ಯುವರಾಜ ತೈಲಪದೇರ್ಕ್ಕನ್ದೂಸ್ಸಾಸಿರ (ಕನ್ದೂರು) ಬಾಡಮುಮಂ ತ್ರಿಭೋಗಾಭ್ಯಂತರ ಸಿದ್ದಿಯಿಂ'' ಆಳುತ್ತಿದ್ದನೆಂದು ಹೇಳಿದೆ. ಕೊಲ್ಹಾಪುರ ಶಾಸನ್‍ದಲ್ಲಿ ಇವನು ತನ್ನ ದಾದಿ ಬಾಗಿಯಬ್ಬೆಯ ಕೇಳಿಕೆಯ ಮೇರೆಗೆ ಕಂದೂರು-೧೦೦೦, ಎತ್ತಪಿ-೯೦ ರಲ್ಲಿಯ ಸಜಿಮಲೆ-೧೨ ರೊಳಗಣ ವ್ರೇಪಿಕಟ್ಟ ಗ್ರಾಮವನ್ನು ಅಗಸ್ತ್ಯೇಶ್ವರ ಮತ್ತು ಚಂದಲೇಶ್ವರ ದೇವರಿಗಾಗಿ ಗೋಕರ್ಣರಾಶಿ ಪಂಡಿತರಿಗೆ ದಾನ ನೀಡುತ್ತಾನೆ. ಇದೇ ಶಾಸನದಲ್ಲಿ ಇವನು ಚಂದಲೇಶ್ವರ ದೇವರನ್ನು ಪ್ರತಿಷ್ಠಾಪಿಸಿದ ಮಾಹಿತಿಯೂ ದೊರೆಯುತ್ತದೆ. ಬಹುಶಃ ತನ್ನ ತಾಯಿ ಚಂದಲದೇವಿಯ ನೆನಪಿಗಾಗಿ ಈ ಕೆಲಸವನ್ನು ತೈಲಪನು ಮಾಡಿರಬೇಕು. ಈ ಮೇಲಿನ ಆಧಾರಗಳಿಂದ ತೈಲಪದೇವನು ವಿಕ್ರಮಾದಿತ್ಯ ಮತ್ತು ಚಂದಲದೇವಿಯರ ಮಗನೆಂಬುದರಲ್ಲಿ ಸಂಶಯವಿಲ್ಲ.

ಕ್ರಿ.ಶ. ೧೧೧೩ ರ ಪೆದ್ದಹೊರಟೂರಿನ ಶಾಸನ್‍ದಲ್ಲಿ ಸಿಂಧವಾಡಿ-೧೦೦೦ದನ್ನು ಚಕ್ರವರ್ತಿಯ ಕಾರುಣ್ಯದಿಂದ ತೈಲಪದೇವನಿಗೆ ಕೊಟ್ಟ ಉಲ್ಲೇಖ ಬರುತ್ತದೆ. ಮುಂದೆ ಕ್ರಿ.ಶ. ೧೧೨೧ ರ ಬೋಧಪುರ ಶಾಸನ್‍ದಿಂದ ಇವನು ಕಂದೂರು ೧೦೦೦ ವಿಭಾಗವನ್ನು ಆಳುತ್ತಿದ್ದನೆಂದು ತಿಳಿದುಬರುತ್ತದೆ. ಮೂರನೆಯ ಸೋಮೇಶ್ವರನು ಚಕ್ರವರ್ತಿಯಾದಾಗ

ತೈಲಪನು ಯುವರಾಜನಾಗಿ ಆಳುತ್ತಿದ್ದ ಉಲ್ಲೇಖ ಕರಕಂಠ ಶಾಸನ[೯೭]ದಲ್ಲಿ ''ಶ್ರೀಮದ್ ಭೂಲೋಕಮಲ್ಲದೇವರ ವಿಜಯರಾಜ್ಯ ಮುತ್ತರೋತ್ತರಾಭಿವೃದ್ಧಿ ಪ್ರವರ್ಧಮಾನ..... ರಾಜ್ಯಂಗೆಯುತ್ತಮಿರೆ ಸ್ವಸ್ತಿ ಸಮಸ್ತ ಪ್ರಶಸ್ತಿ ಸಹಿತಂ ಶ್ರೀಮದ್‌ಯುವರಾಜಂ ತೈಲಪದೇವ'' ಎಂದು ಬರುತ್ತದೆ.

ಕೆಲವು ಶಾಸನಗಳು ಇವನ ಪ್ರಶಸ್ತಿಯನ್ನು ಈ ರೀತಿಯಾಗಿ ಹೇಳಿವೆ. ಬೋಧಪುರ ಶಾಸನ[೯೮]ವು ...... ಹೃದಯಕುವಲದ ಸುಧಾಕರಂ ಪರಿಜನಸಂಪತ್ಕರ ಶ್ರೀಮ(ಚ್ಚ)ನ್ದಲದೇವಿ ನಯನಸರಸಿಜ ಸೂರ್ಯನ ಪ್ರತಿಹತಸೌರ್ಯಂ ಗುರಜನಪದ ಪರಾಗರಂಜಿತಂ ಚಾಳುಕ್ಯ ಕಟಕರಕ್ಷಪಾಳ'' ಎಂದು ಅವಂಚ ಶಾಸನ[೯೯]ದಲ್ಲಿ ''ಮಹಾಮಂಡಳೇಶ್ವರಂ ಜಯಾಂಗಣಾಧೀಶ್ವರನು ಪಹಸಿತ ಮನಸಿಜ ಮೂರ್ತ್ತಿ ತ್ರಿಳೋಕೀಲಾಳಿತಕೀರ್ತ್ತಿ ಬೆಂಗೀಶ ವಂಶವನದವದಹನನ್ತಳ್ಪುರಮಳೆಯ ಪವನ ಚಾಳೊಕ್ಯಕುಳ ಕುಮುದಿನೀ ಮಾರ್ತ್ತನ್ಡ ಮಂಡವೆತ್ತಿನಡೆವ ರಿಪುರಾಯ ಕುವರ ಹೆನ್ಡತ್ತಿಗಂಡ ಬಾಹಾಬಳದಳಿತ ಬಂಗಾಳಚಾತಾರ್ಯ್ಯ ಕೀರ್ತ್ತಿನರ್ತ್ತಣಾಚಾರ್ಯ್ಯ ಕ್ರಿಪಾ(ಶೇ)ಷ (ಶ್ರೀ) ತಮಾಳವಕಾಮಿನೀ ಕರ್ಣ್ನಜಾಹನಿಜಸೈನ್ಯಸನ್ನಾಹ ಕಿಂಕರ ಕದನಕದರ್ತ್ಥಿತ ಬಹಳದಹಳೋತ್ಕರ್ಷ ವಿಶೇಷವಿಬ್ಧಪ್ರಕರ್ಷನಲಿ ಕುವರ (ಚಿಕು)ರವಿದ್ರಾವಣನಗಣ್ಯಗುಣ ಪಣ್ಯಮು...... (ರ್ತ್ತ) ಶೌರ್ಯ್ಯನು...... ಗೆ ರಂಜಿತ ಚಾಳುಕ್ಯ ಕಟಕರಕ್ಕಪಾಳ'' ನಾಮಾದಿ ಪ್ರಶಸ್ತಿಗಳನ್ನು ಹೊಂದಿದ್ದನೆಂದು ತಿಳಿಸುತ್ತದೆ.

ಲಕ್ಮಾದೇವಿ ಈ ತೈಲಪನ ಪಟ್ಟಮಹಾದೇವಿಯಾಗಿದ್ದಳು. ಇವರಿಬ್ಬರಿಗೆ ಪೆರ್ಮಾಡಿದೇವ, ಬಿಕ್ಕಿದೇವ ಎಂಬ ಪುತ್ರರಿದ್ದರು. ಇವರು ಕೋಳೂರಪುರದ ನೆಲವೀಡಿನಲ್ಲಿದ್ದು ಆಳುತ್ತಿದ್ದ ಉಲ್ಲೇಖ ಬೋಧಪುರ ಶಾಸನ[೧೦೦]ದಲ್ಲಿವೆ. ಮಹಾಮಂಡಳೇಶ್ವರ ದಳವಪರಸರು, ಇಯೂರ ಚೋಳಗಾವುಂಡ, ಬಮ್ಮಣನ ಮಗ ಕೇತಗಾವುಂಡ ಇವರು ತೈಲಪನ ಕೆಳಗೆ ಅಧಿಕಾರಿಗಳಾಗಿದ್ದರು.[೧೦೧] ಅಳವನಪಲ್ಲಿ ಶಾಸನ[೧೦೨]ದಲ್ಲಿ ಮಹಾಪ್ರಭು ಮನೆವೆರ್ಗ್ಗಡೆ ಪ್ರಮುಖ ಕರಣನೊಬ್ಬನ ಉಲ್ಲೇಖ ಬರುತ್ತದೆ. ರಾಮರಾಜುಪಳ್ಳ ಶಾಸನ[೧೦೩]ದಲ್ಲಿ ತೈಲಪನು ಸಿಂಧವಾಡಿ-೧೦೦೦ ವನ್ನು ಆಳುತ್ತಿದ್ದಾಗ ಇವನ ಕೆಳಗೆ ಮಹಾಮಂಡಳೇಶ್ವರನೊಬ್ಬನಿದ್ದುದು ತಿಳಿದುಬರುತ್ತದೆ. ಆದರೆ ಅವನ ಹೆಸರು ತಿಳಿದುಬರುವುದಿಲ್ಲ.

ಇವನು ಹಲವು ಧಾರ್ಮಿಕ ಕಾರ್ಯಗಳನ್ನು ಮಾಡಿದ್ದಾನೆ. ''ಮಹಾಪ್ರಭು ಮನೆವೆರ್ಗಡೆ ಪ್ರಮುಖ ಕರಣಂಗಳ್[೧೦೪] ಬಿನ್ನಪದ ಮೇರೆಗೆ ರಾಜಧಾನಿಯಾದ ಕೋಳೂರನವಪುರ ಪಂಚಮಟಸ್ಥಾನ ಮಹಾಜನನಕರದ ಪಟ್ಟಸಾಲಿಗಕಟ್ಟ ಮಠಕ್ಕೆ ಪಾ.. ಸಂಕಿಸೆಟ್ಟಿಯಂ ವಾಯಸ(ಮಠ) ಮಧು ... ದೇವಸೆಟ್ಟಿಯುಂ ಮುಖ್ಯವಾಗೆ'' ಎಂದು ಬರುತ್ತದೆ. ಬಹುಶಃ ಇವನು ದಾನ ಬಿಟ್ಟಿರಬೇಕು.

ಕುಮಾರ ಜಯಕರ್ಣದೇವ :

ಮೂರನೇಯ ಸೋಮೇಶ್ವರನ ಮತ್ತೋರ್ವ ಸಹೋದರ ಹಾಗೂ ಚಂದಲದೇವಿ ಮತ್ತು ವಿಕ್ರಮಾದಿತ್ಯರ ಕಿರಿಯ ಪುತ್ರ ಜಯಕರ್ಣದೇವರ ಪ್ರಥಮ ಉಲ್ಲೇಖ ಕಾಳಗಿ ಶಾಸನ[೧೦೫]ದಲ್ಲಿ ಬರುತ್ತದೆ. ಆದರಲ್ಲಿ

''ಶ್ರೀಮತ್ರಿಭುವನಮಲ್ಲ ಭೂಪತಿ ದೇವನಗ್ರ ಮಹಿಷಿಪದಕೆ ನಿಂದಭಿನವರೂಪ ವಿಭ್ರಮ ಸಮನ್ವಿತೆ ಚಂದಲದೇವಿಯ ಮ.....ಯ ಕರ್ಣ್ನದೇವನುದಿತೋದಿತ ಕೀರ್ತ್ತಿವಿಳಾಸನೆಂಬಿನಂ'' ಎಂದು ಹೇಳಿದೆ. ಬಿಜಾಪುರ ಶಾಸನ[೧೦೬]ದಲ್ಲಿ ಶ್ರೀಮನ್ಮಹಾಮಣ್ಡಳೇಶ್ವರ ಕುಮಾರ ಜಯಕರ್ಣ್ನದೇವನು ಮಹಾಗ್ರಹಾರವಾದ ಸಿಂದಿಗೆಯನ್ನು ತ್ರಿಭೋಗಾಭ್ಯಂತರ ಸಿದ್ಧಿಯಿಂದ ಆಳುತ್ತಿದ್ದನೆಂದು ಬರುತ್ತದೆ. ಕೇವಲ ಅಗ್ರಹಾರ ಸಿಂದಿಗೆಯನ್ನು ಆಳುತ್ತಿರಬೇಕಾದರೆ ಇವನು ವಯಸ್ಸಿನಲ್ಲಿ ಚಿಕ್ಕವನಾಗಿರಬೇಕು. ಆದರೆ ಕೋನೂರು ಶಾಸನ[೧೦೭]ದಲ್ಲಿ (ಕ್ರಿ.ಶ. ೧೧೨೨ ಸುಮಾರಿಗೆ)

ಜಯಕರ್ಣ್ಣಾವನಿಪಾಳ ಭಾಸುರಲಸಲ್ಲಾಲಾಟಿಕಂ ಶ್ರೀ ವಧೂ
ನಯನಾಳಂಕೃತರೂಪ ನೂರ್ಜ್ಜಿತಯಶಃ ಶ್ರೀ ಕಾಮಿನೀವಲ್ಲಭಂ
ಭಯಕಾನ್ತಾ ಭುಜದಂಡನಾಹವಗದಾದಂಡಂ ಗುಣೋನ್ಮಂಡಿತಂ
ನಯದಿಂ ಕೂಂಡಿ ಧರಾಧಿಪತ್ಯದೊಳಿರಲ್ ಚಾಮುಣ್ಡ ದಂಡಾಧಿಪಂ ॥

ಎಂದು ಕೂಂಡಿ ಭಾಗವನ್ನು ಆಳುತ್ತಿದ್ದನೆಂದು ಹೇಳಲಾಗಿದೆ. ಇದೇ ಶಾಸನದಲ್ಲಿ ಇವನು ಬಸದಿಗೆ ಹಾಗೂ ಅಲ್ಲಿಯ ಮುನಿಗಳಿಗೆ ದಾನಬಿಟ್ಟ ಉಲ್ಲೇಖವೂ ಇದೆ.

ಬಿಜಾಪುರದ ಶಾಸನ[೧೦೮]ದಲ್ಲಿ ಈತನ ಪ್ರಶಸ್ತಿಯನ್ನು ಹೀಗೆ ಕೊಡಲಾಗಿದೆ. ಅದರಲ್ಲಿ ''ಪಂಚಮಹಾಶಬ್ದ,ಮಹಾಮಣ್ಡಳೇಶ್ವರ ರಿಪುರಾಯಕುವರ ಮಹೇಶ್ವರ, ಸಮರ ಭಗದತ್ತಕಂನ್ದರ, ಮದನಸೌನ್ದರ್ಯ್ಯಬಿನ್ದುರ ಮತಿಮುಕರ ಪ್ರತಿಬಿಂಬಿತ ಸುಕವಿಮಂತ್ರಧಂಮ್ಮ್ರಪರತಂತ್ರಯಾಚಕ ಚಕೋರಚಂದ್ರ ಅರಿಬಿರುದಕುವರ, ಹ್ರಿದಯಭೀಷಣ, ಅಭಿಮಾನ ಭೂಶಣ, ಅಕವಿಂಕಕ್ಷತ್ರಧಾಮ, ಚಾಳುಕ್ಯಕುಟಕುವಟಿಯ ಸೋಮ, ವಿದರಿತವಿದ್ವತ್‌ಜನದಿಪಲ್ಲವ ವಾಗುವಲ್ಲರೀ ನವಪಲ್ಲವಕೀರ್ತ್ತಿನರ್ತ್ತಕೀ ಸಮಾಟಂಬಿತ ಖಗದಂಣ್ಡ, ಅಪ್ರತಿಹತವಿಜಯದೇವಣ್ಡ ಪ್ರತಿಭಟಿಹೃದಯ ವಿಘಟನಪಟುನಾಯಕ ವಿದಗ್ಧಮು.... ಮ(ದ್ಯ) ನಾಯಕ ಗುರುಜನ ನಿಯಮನಿಯಾನುಗ ಶ್ರೀ ಮತೃಭುವನಮಲ್ಲ.... ರಣುಗಿನಕುಮಾರಂ ಶ್ರೀಮನುಮಹಾಮಣ್ಡಳೇಶ್ವರ ಕುಮಾರ ಶ್ರೀ ಜಯಕರ್ಂರ್ನ ದೇವರು'' ಎಂದು ಬರುತ್ತದೆ. ಕಾಳಗಿಯ ತೃಟಿತ ಶಾಸನ[೧೦೯]ದಲ್ಲಿ ಈತನ ಶೌರ್ಯದ ವರ್ಣನೆ ಬರುತ್ತದೆ. ಒಟ್ಟಾರೆ ಮೇಲಿನ ಪ್ರಶಸ್ತಿ, ವರ್ಣನೆಗಳಿಂದ ಇವನು ಶಸ್ತ್ರವಿದ್ಯೆಗಳಲ್ಲಿ ಪಾರಂಗತನಾಗಿದ್ದು ವೀರನೂ ಆಗಿದ್ದನೆಂದು ತಿಳಿದುಬರುತ್ತದೆ.

ಬಂಧರವಾಡದ ಶಾಸನ[೧೧೦]ದಲ್ಲಿ ಇವನ ಕೆಳಗಿನ ಅಧಿಕಾರಿ 'ಪಿರಿಯಸಚಿವ'ನಾದ ಹಡಪವಳ ನೀಲಕಂಠನ ಉಲ್ಲೇಖ ಬರುತ್ತದೆ. ಈ ನೀಲಕಂಠನು ಅಗ್ರಹಾರ ಬೊಂದರವಾಡದಲ್ಲಿ ಸೋಮೇಶ್ವರ ದೇವಾಲಯವನ್ನು ನಿರ್ಮಿಸುತ್ತಾನೆ. ಮಂನೆಯ ಸಿಂಗರಸ[೧೧೧] ಹನ್ನೆರಡರ ಮೊದಲಬಾಡವಾದ ಸಿಂದಗೆಯ ಪ್ರಭುದಂಡನಾಯಕ, ಸುರಿಗೆಯ ಸೋವರಸ[೧೧೨], ಪೆರ್ಗ್ಗಡೆ ಕೀರ್ತಿರಾಜ[೧೧೩] ಇವರು ಜಯಕರ್ಣನ ಅಧಿಕಾರಿಗಳಾಗಿದ್ದರೆಂದು ತಿಳಿದುಬರುತ್ತದೆ.

ಜಯಕರ್ಣನು ಸುರಿಗೆಯ ಸೋವರಸ ಮಾಡಿಸಿದ ಮೂಲಸ್ಥಾನ ದೇವರಿಗೆ ಖಂಡ್ಡಸ್ಪುಟಿತ ಜೀರ್ಣೋದ್ಧಾರ ದೀಪ, ನೀವೇದ್ಯಕ್ಕೆಂದು ಭೂಮಿಯನ್ನು ದಾನವಾಗಿ ಬಿಡುತ್ತಾನೆ.[೧೪]

ಹೀಗೆ ಮೂರನೇಯ ಸೋಮೇಶ್ವರನಿಗೆ ಮಲ್ಲಿಕಾರ್ಜುನನೆಂಬ ಹಿರಿಯ ಮಲಸಹೋದರ, ತೈಲಪ ಮತ್ತು ಜಯಕರ್ಣರೆಂಬ ಇಬ್ಬರು ಕಿರಿಯ ಸಹೋದರರಿದ್ದರೆಂದು ಶಾಸನಾಧಾರಗಳಿಂದ ತಿಳಿದುಬರುತ್ತದೆ.

ಇಮ್ಮಡಿ ಜಗದೇಕಮಲ್ಲ :

ಮೂರನೆಯ ಸೋಮೇಶ್ವರನ ಹಿರಿಯ ಮಗನಾದ ಜಗದೇಕಮಲ್ಲನು ಯಾವ ರಾಣಿಯ ಮಗನೆಂದು ಸ್ಪಷ್ಟವಾಗಿ ತಿಳಿದು ಬರುವುದಿಲ್ಲ. ಹಾವೇರಿ ಶಾಸನ[೧೫]ವು ''ಭೂಲೋಕಮಲ್ಲನುರ್ವ್ವೀಲೋಲಂ ಮಗನವನ ಸೂನು ಜಗದೇಕನೃಪಂ'' ಎಂದು ಹೇಳಿದೆ. ಇದುವರೆಗೆ ತಿಳಿದಂತೆ ಜಗದೇಕಮಲ್ಲನ ಮೊದಲ ಶಾಸನದ ಕಾಲ ಕ್ರಿ.ಶ. ೧೦೪೯. ಬಾಲ್ಕಿಯ ಈ ಶಾಸನದಿಂದ ಜಗದೇಕಮಲ್ಲನು ಕ್ರಿ.ಶ. ೧೦೪೯ ರ ವೇಳೆಗಾಗಲೇ ಮಹಾಮಂಡಳೇಶ್ವರನೆನಿಸಿಕೊಂಡಿದ್ದನೆಂದು ತಿಳಿದುಬರುತ್ತದೆ. ಆದರೆ ಶಾಸನದಲ್ಲಿ ಈತ ಯಾವುದೇ ಪ್ರಾಂತ್ಯದ ಅಧಿಕಾರಿಯಾಗಿದ್ದನೆಂದು ಹೇಳಿಲ್ಲ. ಭಲ್ಲುಂಕೆ ಪಟ್ಟಣ ಭಾಲ್ಕಿ ರಾಜಧಾನಿಯಾದ ಕಲ್ಯಾಣಕ್ಕೆ ಸಮೀಪದಲ್ಲಿದ್ದ ನಗರ ಸಹಜವಾಗಿಯೇ ಅರಸನ ನೇರವಾದ ಆಡಳಿತಕ್ಕೆ ಅಧೀನವಾದ ನಗರವಾಗಿದ್ದಿರಬಹುದು. ಅಲ್ಲದೆ ಪೆರ್ಮಾಡಿ ಕೇವಲ ಮಹಾಮಂಡಳೇಶ್ವರ ಪದವಿಯನ್ನು ಪಡೆದು ಆಡಳಿತದ ಜವಾಬ್ದಾರಿ ವಹಿಸಿಕೊಂಡಿದ್ದಿರಬಹುದು. ಅಲ್ಲದೆ ಪೆರ್ಮಾಡಿ ಕೇವಲ ಮಹಾಮಂಡಳೇಶ್ವರ ಪದವಿಯನ್ನು ಪಡೆದು ಇನ್ನೂ ಆಡಳಿತದ ಜವಾಬ್ದಾರಿ ವಹಿಸಿಕೊಂಡಿರಲಿಲ್ಲವೆಂದು ಹೇಳಬಹುದು. ಅಲ್ಲದೆ ಈ ಶಾಸನದ ಕಾಲ ಕ್ರಿ.ಶ. ೧೦೪೯ ಎಂದ ಮೇಲೆ ಆ ವೇಳೆಗಾಗಲೇ ಈತನಿಗೆ ಸುಮಾರು ೨೦ ವರ್ಷಗಳೆಂದು ಊಹಿಸಿದರೂ ಈತ ಕ್ರಿ.ಶ. ಸು. ೧೦೨೯ ರಲ್ಲಿ ಜನಿಸಿದನೆಂದಾಗುತ್ತದೆ.

ಅಂದರೆ ಜಗದೇಕಮಲ್ಲನು ತನ್ನ ಅಜ್ಜನಾದ ಆರನೆಯ ವಿಕ್ರಮಾದಿತ್ಯನ ಕಾಲದಲ್ಲಿಯೇ ಮಹಾಮಂಡಳೇಶ್ವರನಾಗಿ ಸೇವೆಯನ್ನು ಸಲ್ಲಿಸುತ್ತಿದ್ದನೆಂದು ತಿಳಿದುಬರುತ್ತದೆ. ಕ್ರಿ.ಶ. ೧೦೪೭ಕ್ಕೆ ಸಂಬಂಧಿಸಿದ ಹರಸೂರು ಶಾಸನವು ಇವನನ್ನು ಪೆರ್ಮಜಗದೇಕಮಲ್ಲ ಎಂದು ಹೆಸರಿಸಿದರೆ ಕ್ರಿ.ಶ. ೧೦೪೯ ರ ಬಾಲ್ಕಿ ಶಾಸನವು ಕುಮಾರ 'ಹೆಮ್ಮಾಡಿದೇವ' ಎಂಬುದಾಗಿ ಹೆಸರಿಸಿದೆ. ಅಂದರೆ ಇವನು ಸಹ ತನ್ನ ಅಜ್ಜ ಹಾಗೂ ತಂದೆಯಂತೆ ಶೂರನಾಗಿದ್ದನೆಂದು ಹೇಳಬಹುದು. ನರಗುಂದ ಶಾಸನ[೧೬]ವು ಈತನ ಶೌರ್ಯ ಸಾಹಸಗಳನ್ನು ಹೀಗೆ ವರ್ಣಿಸಿದೆ ''ಶ್ರೀವಾರಾಹಂ ವಹತೋವ (ಪುಃ) ಪೃಥುತರಂ ನಾರಾಯಣ ಸ್ಯಾಸ್ಯವ(ಃ) ಕ್ಷ್ಮೋಣೀ (ವೀ)ಕ್ಷಣ ಕಾಂಕ್ಷಿಣ(ಃ) ಕ್ಷಿತಿಪತೇಃ ಕ್ಷೀವೇಕ್ಷಿತೋ ರಕ್ಷತುಯಸ್ಯಾಶೇಷಪತೇರ್ವ್ವಿಷಾಣ ಉದಿತಾ ಸೆಷಾ ಜಿಗೀಷೋರ್ವ್ವಿಟಂ ಕಸ್ತೂರ್ಯ್ಯಾಮರಕಲ್ಪಿ(ತ)ಸ್ಯ ತಿಳಕಸ್ಯೋರ್ವ್ವೀಶ್ರಿಯಂ ಶಿಶ್ರಿಯೇ ನಮಃ.

ಯಸ್ಯ ದಂಷ್ಟ್ರಾಂಕುರೇ ಲಗ್ನಾ ಸಾಕ್ಷಾನ್ಮಕ್ಷೀಯತೇ ಕ್ಷಿತಿಃ । ನಮೋ ಮಾಹರೂಪಾಯ ವಿಷ್ಣವೇ ಪ್ರಭವಿಷ್ಣವೇ (।।*) ಗಣೇಶ (।*) ಶ್ರೀಪತಿಯ ರುಚಿತರತರನಾಭಿಪದ್ಮದೊಳೊಗೆದನಬ್ಜಜಂತಜ್ಞಾತೋರ್ವ್ವೀಪಾಳಾನ್ವಯದೊಳ್ ಜಗತೀಪೂಜ್ಯಂ ನೆಗರ್ದ್ದುದೆಳೆಗೆ ಚಾಳುಕ್ಯಕುಳ(ವೃ) ಹೇಳಾಸಾಧಿತಮಾಗಲನ್ಯ ಮಹಿಗಳ್ ವಿಕ್ರಾನ್ತಮಂ ತಾಳ್ದಿದಂ ಚೋಳವ್ಯಾಳಗಜಾರಿ ಕೇರಳಕುಳೋದನ್ವದ್ಭನಾರ್ವ್ವಾಗ್ನಿ ಪಾಂಚಾಳಧ್ವಾಂತ ದಿನೇಂದ್ರನಂದ್ರವಿಪಿನ ಪ್ರೋದ್ದಾಮದಾವಾಗ್ನಿ ನೇಪಾಳಾಬೀಳಘ ನಾ(ಘ)ನೋಗ್ರಪವನಂ ಪೆರ್ಮ್ಮಾಡಿ ಭೂಪಾಳಕ।। ಜಯಲಕ್ಷ್ಮೀಪತಿ ಚಕ್ರವರ್ತ್ತಿತಿಳಕಂ ಭೂಪಾಳ ಸರ್ವ್ವಜ್ಞನುದ್ಧ ಯಶೋವ್ಯಾವೃತದಿಗ್ವಿ (ಭಾಗ) ನಸುಹೃದ್ಭೂಭೃತ್ಪುಭೃತ್ವವನೋದಯಮಂ ವಿನತಕ್ಷಮಾಪತಿಶಿರೋರತ್ನ ಪ್ರಭಾದೌತಪಾ ದಯುಗಂ ದೇವಿತಸರ್ವ್ವವಿದ್ಯನೆಸೆದಂ ಭೂಲೋಕಮಲ್ಲೋರ್ವ್ವಿಪಂ।। ಕೊಂಗ ಕಳಿಂಗ (ವಂಗ ಖಸಕೇರಳ ಪಲ್ಲವ ಪಾಂಡ್ಯ) ಚೋಳ ಚೇರಾಂಗ ತುರುಷ್ಕಗೌಡಡಹಳಾಮರು ಮಾಳವ ಗೂರ್ಜ್ಜರಾಧಿ ದೇಶಂಗಳನೊತ್ತಿ (ತಂನ್ನೆಪರ ಕಪ್ಪಮನುಳ್ದುರೆ ಕಾದಿ ತನ್ನ ಸೈನ್ಯಂಗಳ), ತಂದುವೆಂದಡಿದಿರಾರ್ಜ್ಜಗದೇ (ಕ) ನೃಪಾಧಿನಾಥನೊಳ್।। ಸ್ವಸ್ತಿ ಸಮಸ್ತ ಭುವನಾಶ್ರಯ ಶ್ರೀ ಪೃಥ್ವೀವಲ್ಲಭ ಮಹಾ(ರಾಜಾಧಿರಾಜಪರ)ಮೇಶ್ವರ ಪರಮಭಟ್ಟಾರಕಂ ಸತ್ಯಾಶ್ರಯಕುಳತಿಳಕಂ ಚಾಳುಕ್ಯಾಭರಣಂ ಶ್ರೀಮತ್ಪ್ರತಾಪ ಚಕ್ರವರ್ತ್ತಿ ಜಗದೇಕಮಲ್ಲದೇವರ್ಕ್ಕಲ್ಯಾಣದ ನೆಲೆವೀಡಿನೊಳ್।।

ಜಗದೇಕಮಲ್ಲನೂ ಸಹ ಅನೇಕ ಧಾರ್ಮಿಕ ಕಾರ್ಯಗಳನ್ನು ಮಾಡಿದ್ದಾನೆ. ಮಲ್ಲಗಾವುಂಡ ಮಾಡಿಸಿದ ಮಲ್ಲಿನಾಥ ಜಿನೇಶ್ವರಂಗಭೋಗಕ್ಕೆ ನಿತ್ಯನಿವೇದ್ಯಕ್ಕೆ ಮಾಟಕೂಟ ಪ್ರಸಾದಕ್ಕೆ ದಾನವನ್ನು ಬಿಡುತ್ತಾನೆ.[೧೧೭] ಅಗ್ರಹಾರ ಕುಕ್ಕನೂರಿನ ಸಾವಿರ ಮಹಾಜನರ ಪ್ರಿಯ ಮಕ್ಕಳಾದ ಗಳೆಯ ಮೂನೂರ್ವರು ಸಾವಿರ ಮಹಾಜನರ ಕೈಯಲಿ ತಮ್ಮ ತೋಟಿಗೇಶ್ವರ ದೇವರ್ಗ್ಗೆ ವರ್ಷಂಪ್ರತಿ ತೋಟಗೆಲಸದಲ್ಲಿ ಒಂದು ಹಾಗವನ್ನು ಬಿಟ್ಟಂತೆ ಕುಕನೂರು ಶಾಸನ ತಿಳಿಸುತ್ತದೆ.[೧೧೮]

ಜಗದೇಕಮಲ್ಲನು ಕ್ರಿ.ಶ. ೧೧೩೮ ರಲ್ಲಿ ಅಧಿಕಾರಕ್ಕೆ ಬಂದನು. ಅಣಂದೂರು ಶಾಸನವು[೧೧೯] ಇವನ ಆಳ್ವಿಕೆಯ ಪ್ರಾರಂಭಿಕ ದಿನದ ಬಗೆಗೆ ಖಚಿತವಾದ ಮಾಹಿತಿಯನ್ನು ಒದಗಿಸುತ್ತದೆ. ಈತನೂ ಸಹ ಸುಮಾರು ೧೩ ವರ್ಷಗಳ ಕಾಲ ರಾಜ್ಯಭಾರ ನಡೆಸಿದ ನಂತರ ಈತನ ಸಹೋದರನಾದ ಮೂರನೆಯ ತೈಲಪನು ಅಧಿಕಾರಕ್ಕೆ ಬಂದನು.

ಮೂರನೆಯ ತೈಲಪ :

ಮೂರನೆಯ ಸೋಮೇಶ್ವರನ ಕಿರಿಯ ಮಗನಾದ ತೈಲಪನು ಸಹ ಯಾವ ರಾಣಿಯ ಮಗನೆಂದು ಸ್ಪಷ್ಟವಾಗಿ ತಿಳಿದುಬರುವುದಿಲ್ಲ. ಜಗದೇಕಮಲ್ಲನಿಗಿಂತ ೨-೩ ವರ್ಷಗಳು ಕಿರಿಯವನಾಗಿರಬಹುದಾದ ಮುಮ್ಮಡಿ ತೈಲಪನು ಕ್ರಿ.ಶ.ಸು. ೧೦೮೨ ರಲ್ಲಿ ಜನಿಸಿದ್ದಿರಬಹುದೆಂದು ಬಿ.ಆರ್.ಗೋಪಾಲರವರು ಬಾಳ್ಕಿ ಶಾಸನವನ್ನು

ಆಧಾರವಾಗಿಟ್ಟುಕೊಂಡು ಊಹಿಸಿದ್ದಾರೆ.[೨೦] ಕೊಲ್ಲೂರು ಶಾಸನ[೨೧]ವು ''ವಿಕ್ರಮಾಂಕನ ತನಯಂ ಭೂಲೋಕಮಲ್ಲ ಭುಭುಜಗೆ ಜನಿಸಿದನ ಭಯ ಪದನಘ ಜಗದೇಕಮಲ್ಲದೇವನೊಗೆದಂ ॥ ಜಗದೇಕಮಲ್ಲನ ತನುಜಂ ಜಗತೀವಿಖ್ಯಾತನತಿ ಬಳನಿಜಭುಳದಿಂ ನೆಗಳ್ದಂ ನೂರ್ಮ್ಮಡಿ ತೈಲಪ ಜಿನಾಧಿಪಂ ಆದ ಚಾಳುಕ್ಯರಾಜ್ಯದ ಭಯದಂ।'' ಎಂದು ತಿಳಿಸುತ್ತದೆ. ತೈಲಪನು ತಂದೆಯ ಜೊತೆಗಿದ್ದುಕೊಂಡು ಕಲ್ಯಾಣದಲ್ಲಿಯೇ ಆಳ್ವಿಕೆಯನ್ನು ನಡೆಸುತ್ತಿದ್ದಂತೆ ತೋರುತ್ತದೆ. ಗಂಗಾಪುರಂ ಶಾಸನ[೨೨]ವು ಭೂಲೋಕಮಲ್ಲನು ಕಲ್ಯಾಣಪುರದದಿದ ಆಳುತ್ತಿದ್ದಾಗ ಇವನ ಮಗ ತೈಲಪದೇವನ ದಂಡನಾಯಕ ಜಯಾನಂದಭಟ್ಟರ ಸಾನ್ನಿಧ್ಯದಲ್ಲಿ ಕಂದೂರುನಾಡಿನ ಸುಂಕವೆರ್ಗ್ಗಡೆ ಬವ್ವರಸ ಮತ್ತು ಇತರ ಅಧಿಕಾರಿಗಳು, ಸಮಸ್ತ ಸೆಟ್ಟಿಕಾರರೂ ಕಟ್ಟೆಯ ಸೋಮನಾಥ ದೇವರಿಗೆ ದಾನ ನೀಡಿದುದನ್ನು ತಿಳಿಸುತ್ತದೆ. ಅಲ್ಲದೆ ರಾಚೂರು ಶಾಸನ[೨೩]ವು ಸಹ ತೈಲಪದೇವನ ಆಳ್ವಿಕೆಯನ್ನು ತಿಳಿಸುತ್ತದೆ. ಅವನ ಹೆಗ್ಗಡೆ ನಲ್ಲಪಯ್ಯನಾಯಕ ಎಂಬುವವನು ರಾವಿತೊರೆಯ ಮಲ್ಲಿಕಾರ್ಜುನ ದೇವರ ಸೇವೆಗೆ ದತ್ತಿಯನ್ನು ನೀಡಿದಂತೆ ದಾಖಲಿಸಿದೆ. ಆದರೆ ಈ ಎರಡೂ ಶಾಸನಗಳು ಆತನ ಯಾವ ಹುದ್ದೆಯನ್ನು ಅಲಂಕರಿಸಿದ್ದನೆಂಬುದನ್ನು ತಿಳಿಸುವುದಿಲ್ಲ.

ಮೂರನೆಯ ತೈಲಪನು ಎರಡನೆಯ ಜಗದೇಕಮಲ್ಲನ ನಿಧನಾನಂತರ ಕ್ರಿ.ಶ. ೧೧೫೧ ರ ಸುಮಾರಿಗೆ ಸಿಂಹಾಸನವನ್ನೇರಿದನು. ಎರಡನೆಯ ಜಗದೇಕಮಲ್ಲನಿಗೆ ಬಹುಶಃ ಗಂಡುಮಕ್ಕಳಿರದ ಕಾರಣ ಇವನ ಸಹೋದರನಾದ ಮೂರನೆಯ ತೈಲಪನೇ ಅಧಿಕಾರಕ್ಕೆ ಬಂದಿರಬಹುದು. 'ತ್ರೈಲೋಕ್ಯಮಲ್ಲ' ಇದು ಇವನ ನೆಚ್ಚಿನ ಬಿರುದಾಗಿತ್ತು. ಯಳವತ್ತಿ ಶಾಸನವು ಇವನನ್ನು 'ತ್ರಿಭುವನಮಲ್ಲ' ಎಂದು ಕರೆದಿದ್ದರೆ, ಕಲ್ಲೂರು ಮತ್ತು ಬಿಲ್ಲಟಗಿ ಶಾಸನಗಳು 'ರಕ್ಕಸಗಂಗ ಚಾಲುಕ್ಯ ಚಕ್ರವರ್ತಿ' ಎಂದಿವೆ. ಕೆಲ ಶಾಸನಗಳು 'ನೂರ್ಮಡಿ ತ್ರೈಲೋಕ್ಯಮಲ್ಲ' ಎಂದು ಕರೆದಿವೆ. ಗೊಲ್ಲಪಲ್ಲಿ ಶಾಸನವು ಈತನಿಗೆ 'ವಿಷ್ಣುವರ್ಧನ' ಎಂಬ ಬಿರುದು ಹೊಂದಿದುದನ್ನು ತಿಳಿಸುತ್ತದೆ.

ದೊರೆತಿರುವ ಶಾಸನಾಧಾರಗಳಿಂದ ಮೂರನೆಯ ತೈಲಪನ ಕುಟುಂಬದ ಸದಸ್ಯರ ಬಗ್ಗೆ ಹೆಚ್ಚಿನ ಮಾಹಿತಿ ದೊರೆತಿರುವುದಿಲ್ಲ. ಇವನಿಗೆ ನಾಲ್ಕನೆಯ ಸೋಮೇಶ್ವರನೆಂಬ ಮಗನಿದ್ದು ಕಲಚೂರಿಗಳ ಅವನತಿಯ ನಂತರ ಸ್ವಲ್ಪ ಅವಧಿಯವರೆಗೆ ಚಾಳುಕ್ಯ ಸಾಮ್ರಾಜ್ಯವನ್ನು ಆಳಿದನೆಂದು ತಿಳಿದುಬರುತ್ತದೆ.

ಮೂರನೆಯ ಸೋಮೇಶ್ವರನ ರಾಣಿಯರು :

ಪಿರಿಯರಸಿ ಬಮ್ಮ್ರಲದೇವಿ : ಕ್ರಿ.ಶ. ೧೧೩೪ ರ ಆಳಂದ ತಾಲೂಕಿನ ನಿಂಬರಗಿ ಶಾಸನದಲ್ಲಿ ''ಭೂಲೋಕಮಲ್ಲದೇವ ನೃಪಾಳಕನನ್ಗಾಂಗ ಲಕ್ಷ್ಮೀಶುಭಲಕ್ಷಣೆ ಸಲ್ಲೀಲಾನ್ತಪ್ಪುರ ಕಮಳವನಾಳಯ ಕಳಹಂಸೆ ನೆಗಟ್ದ ಬಮ್ಮ್ರಲದೇವಿ'' ಎಂಬ ಉಲ್ಲೇಖ ಮಾತ್ರ ಬರುತ್ತದೆ. ಇದರಿಂದ ಈಕೆ ಮೂರನೆಯ ಸೋಮೇಶ್ವರನ ರಾಣಿಯೆಂಬುದು ಸ್ಪಷ್ಟವಾಗುತ್ತದೆ.

ಪಿರಿಯರಸಿ ರಾಜಲಾದೇವಿ : ಕ್ರಿ.ಶ. ೧೧೩೬ ರ ಮಹಾರಾಷ್ಟ್ರದ ಉಸ್ಮಾನಾಬಾದ್ ಜಿಲ್ಲೆಯ ತುಳಜಾಪುರ ತಾಲೂಕಿನ ಅಣದೂರು ಶಾಸನದಲ್ಲಿ ಭೂಲೋಕಮಲ್ಲನ ಪಿರಿಯರಸಿ ಪಟ್ಟಮಹಾದೇವಿ ರಾಜಲಾದೇವಿಯ ಕೈಕೆಳಗಿನ ಅಧಿಕಾರಿ (ಹೆಸರಿದ್ದ ಭಾಗ ನಾಶವಾಗಿದೆ) ಹಾಗೂ ಹನ್ನಿಪಳ್ಳಿಯ ಹೆಗ್ಗಡೆ ಮಲ್ಲಿಯಣ್ಣನಾಯಕ ಮೊದಲಾದವರು ಸೇರಿ ಮಾಣಿಕೇಶ್ವರ ದೇವರ ನಂದಾದೀಪಕ್ಕೆ ದಾನ ನೀಡಿದ ವಿವರವಿದೆ. ಇದರಿಂದ ಈಕೆ ಆಡಳಿತದಲ್ಲಿಯೂ ಭಾಗವಹಿಸುತ್ತಿದ್ದಳೆಂದು ಸ್ಪಷ್ಟವಾಗುತ್ತದೆ.

ಸೈನಿಕ ಸಾಧನೆಗಳು :

ಮೂರನೆಯ ಸೋಮೇಶ್ವರನ ತಂದೆ ಆರನೆಯ ವಿಕ್ರಮಾದಿತ್ಯನ ಕಾಲದಲ್ಲಿದ್ದ ಸಾಮ್ರಾಜ್ಯ ವಿಸ್ತರಣೆ ಮತ್ತು ಆರ್ಥಿಕ ಸುಭದ್ರತೆಯು ಇವನ ಕಾಲದಲ್ಲಿಯೂ ಮುಂದುವರೆದುಕೊಂಡು ಬಂದಿತು. ಇವನ ಶಾಸನಗಳ ವಿಶ್ಲೇಷಣಾತ್ಮಕ ಅಧ್ಯಯನದಿಂದ ಇವನ ಆಳ್ವಿಕೆಯು ಹೆಚ್ಚು ಶಾಂತಿಯುತವಾಗಿತ್ತೆಂದು ತಿಳಿಯುತ್ತದೆ. ಮತ್ತು ಇವನು ತನ್ನ ಸೈನಿಕ ಸಾಧನೆಗಳ ಸ್ಮರಣಾರ್ಥವಾಗಿ ''ಭೂಲೋಕಮಲ್ಲ'' ಎಂಬ ಬಿರುದನ್ನೂ ಧರಿಸಿದ್ದನು. ಪಟಾನ್‌ಚೆರು ಶಾಸನ[೨೪]ದ ಪ್ರಕಾರ ಜೋಯಿಸ ನನ್ನೆಯ ಭಟ್ಟನೆಂಬುವವನು ಮೂರನೆ ಸೋಮೇಶ್ವರನ ದಂಡಯಾತ್ರೆಗಾಗಿ ಒಂದು ಉತ್ತಮ ದಿನವನ್ನು ಸೂಚಿಸಿದ್ದನು. ಅದು ಕ್ರಿ.ಶ. ೧೧೨೬ ಅಕ್ಟೋಬರ್ ೨೬. ಇದು ಆರನೆ ವಿಕ್ರಮಾದಿತ್ಯನ ಆಳ್ವಿಕೆಯ ಅವಧಿಯಲ್ಲಿಯೇ ಬರುತ್ತದೆ. ಆದ್ದರಿಂದ ಕೆ.ಎ.ನೀಲಕಂಠಶಾಸ್ತ್ರಿಯವರು ಇದೇ ಶಾಸನವನ್ನು ಅಧ್ಯಯನ ಮಾಡಿ ಆ ದಿನವು ಮೂರನೆ ಸೋಮೇಶ್ವರನ ಪಟ್ಟಾಭಿಷೇಕದ ದಿನ ಆಗಿತ್ತೆಂದು ಹೇಳಿದ್ದಾರೆ. ಆದರೆ ಈ ವಿವರಣೆಯು ಸಮರ್ಪಕವಾಗಿರುವುದಿಲ್ಲ. ಒಂದು ವೇಳೆ ಈ ದಂಡಯಾತ್ರೆಯ ದಿನಾಂಕವು ಅವನ ಪಟ್ಟಾಭಿಷೇಕದ ದಿನಕ್ಕಿಂತಲೂ ಮುಂಚೆಯೇ ಆಗಿದ್ದೇ ಆದರೆ ಅದು ಯುವರಾಜನಾಗಿದ್ದಾಗ ಕಳಿಂಗದ ವಿರುದ್ಧ ಕೈಕೊಂಡ ದಂಡಯಾತ್ರೆಯಾಗಿರಬೇಕೆಂದು ಎಂ.ಎಸ್.ಶರ್ಮಾರವರು ಅಭಿಪ್ರಾಯಪಟ್ಟಿದ್ದಾರೆ. ಆದರೆ ಅದರ ಬಗ್ಗೆ ಹೆಚ್ಚು ವಿವರಣೆ ನೀಡುವುದಿಲ್ಲ. ಪೂರ್ವದ ಗಂಗ ದೊರೆಯಾಗಿ ಕಳಿಂಗ[೨೫] ಪ್ರದೇಶದಲ್ಲಿ ಆಳುತ್ತಿದ್ದ ಅನಂತವರ್ಮನ್ ಜೋಡಗಂಗ ಎಂಬುವವನು ಆಂಧ್ರಪ್ರಾಂತ್ಯವನ್ನು ಆಕ್ರಮಿಸಿ ಗೋದಾವರಿ ನದಿಯವರೆಗಿನ ಪ್ರದೇಶವನ್ನು ತನ್ನ ಆಧೀನಕ್ಕೆ ಒಳಪಡಿಸಿಕೊಂಡಿದ್ದನು. ಆದರೆ ಇದು ಸಹ ಆರನೆ ವಿಕ್ರಮಾದಿತ್ಯನ ಮರಣಾನಂತರವಾಗಿತ್ತು. ಈ ವಿಷಯ ಮತ್ತು ದಿನಾಂಕದ ಕುರಿತು ಎನ್.ವೆಂಕಟರಮಣಯ್ಯನವರು ಬೇರೆ ವಾದವನ್ನು ಮಂಡಿಸಿದ್ದಾರೆ. ಆದಕ್ಕಾಗಿ ಅವರು ಪಟಾನ್‌ಚೆರು ಶಾಸನದಂತೆ ಕಾಕತೀಯ ರುದ್ರದೇವನ 'ಹನುಮಕೊಂಡ' ಶಾಸನ[೨೬]ವನ್ನು ತೆಗೆದುಕೊಂಡಿದ್ದಾರೆ. ಈ ಶಾಸನದಲ್ಲಿ ಕಾಕತೀಯ ದೊರೆ ಎರಡನೆಯ ಪ್ರೋಲನು ಕ್ರಿ.ಶ. ೧೧೨೭ ರಲ್ಲಿ ಮೂರನೆಯ ಸೋಮೇಶ್ವರನ ವಿರುದ್ಧ ದಂಗೆಯೆದ್ದ ಅವನ ಪುತ್ರ ರಾಜಕುಮಾರ ತೈಲನ ಮತ್ತು ಅವನ ಬೆಂಬಲಿಗರ ದಂಗೆಯನ್ನು ಅಡಗಿಸಿ ನಂತರದಲ್ಲಿ ಸ್ವಾಮಿನಿಷ್ಠೆಯಿಂದ ಅವನನ್ನು ಬಿಡುಗಡೆಗೊಳಿಸಿದ್ದರ ಬಗೆಗೆ ತಿಳಿಸುತ್ತದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಅವನು ತೆಲಗು ಜೋಡ

ನಾಯಕರೊಂದಿಗೆ ಸಂಘರ್ಷದಲ್ಲಿ ತೊಡಗಿರಬಹುದೆಂದು ಇದೇ ಶಾಸನದಲ್ಲಿ ಹೇಳಲಾಗಿದೆ. ಈ ಸಂದರ್ಭದಲ್ಲಿ ಮೂರನೆಯ ಸೋಮೇಶ್ವರನ ವಿರುದ್ಧ ತೈಲನಿಗೆ ಸಹಾಯ ಮಾಡಿದವರು ಆಂಧ್ರದ ಕರೀಂನಗರ ಜಿಲ್ಲೆಯ ಮಂಥೇನಾ ಪ್ರದೇಶದಲ್ಲಿನ ಪೋಳವಾಸದ ಮುಖ್ಯಸ್ಥ ನಾಯಕನಾದ ಗುಂಡ ಮತ್ತು ಮೇಧರಾಜ II ಎಂಬುವವರು. ಒಂದು ವೇಳೆ ಈ ವಾದವು ನಿಜವಾಗಿದ್ದೇ ಆದರೆ ಅದು ಮೂರನೆಯ ಸೋಮೇಶ್ವರನ ಪಟ್ಟಾಭಿಷೇಕಕ್ಕಿಂತಲೂ ಮುಂಚೆಯೇ ನಡೆದಿರಬಹುದು. ಏಕೆಂದರೆ ಮೂರನೆಯ ಸೋಮೇಶ್ವರನು ಅಧಿಕಾರಕ್ಕೆ ಬಂದಾಗ ತೈಲನು ೪೮ ವರ್ಷದವನಾಗಿದ್ದನು. ಆದ್ದರಿಂದ ಚಾಲುಕ್ಯ ಸಿಂಹಾಸನವು ತನ್ನ ತಂದೆಯ ನಂತರ ತನ್ನ ಅಣ್ಣ ಮತ್ತು ಅವನ ಮಕ್ಕಳಿಗೆ ಹೋಗಬಹುದೆಂಬ ಭಾವನೆಯಿಂದ ತೈಲನು ದಂಗೆ ಎದ್ದಿರಬಹುದು. ಆದರೆ ತೈಲನು ತನ್ನ ಮತ್ತೊಬ್ಬ ಸಹೋದರನ ವಿರುದ್ಧ ದಂಗೆಯೆದ್ದ ಬಗ್ಗೆ ಪುರಾವೆಗಳು ದೊರೆಯುವುದಿಲ್ಲ. ಎರಡನೆಯ ಪ್ರೋಲನು ಪಾರಮಾರ ರಾಜಕುಮಾರನಾದ ಜಗದೇವನ ಆಕ್ರಮಣವನ್ನು ಹನುಮಕೊಂಡದಲ್ಲಿ ಎದುರಿಸಿರಬಹುದೆಂದು ಹನುಮಕೊಂಡ ಶಾಸನವು ತಿಳಿಸುತ್ತದೆ. ಶ್ರೀ ಪಿ.ವಿ.ಪಿ.ಶಾಸ್ತ್ರಿಯವರು ಸನಿಗರಂ ಶಾಸನ[೨೨]ದ ಬಗ್ಗೆ ಚರ್ಚಿಸುತ್ತ ಇದು ಆರನೆಯ ವಿಕ್ರಮಾದಿತ್ಯನಿಗೆ ಸೇರಿದ್ದು ಕ್ರಿ.ಶ. ೧೧೦೭ ದ್ದಾಗಿದ್ದು ಮೊದಲು ಮಹಾಮಂಡಳೇಶ್ವರ ಕಾಕತೀಯ ಬೆಟ್ಟರಸ ನಂತರದಲ್ಲಿ ಮಹಾಮಂಡಳೇಶ್ವರ ಜಗದ್ದೇವರಸನ ಸೇನಾಧಿಕಾರಿಯಾದ ಕೊಂಡಮಯ್ಯನು ಪುಲಗನೂರು-೭೦ ವಿಭಾಗದಲ್ಲಿಯ ಸನಿಗರಂದ ಭೀಮೇಶ್ವರ ದೇವರಿಗೆ ದಾನ ನೀಡಿದ ಬಗ್ಗೆ ತಿಳಿಸುತ್ತದೆ. ಈ ಶಾಸನದಲ್ಲಿ ಬರುವ ಜಗದ್ದೇವರಸನೇ ಪಾರಮಾರರ ರಾಜಕುಮಾರ ಜಗದ್ದೇವನೆಂದು ತಿಳಿಸಿದ್ದಾರೆ. ಪಾರಮಾರ ಜಗದ್ದೇವನಿಗಿಂತಲೂ ಮೊದಲು ಕಾಕತೀಯ ಬೆಟ್ಟರಸನ ಹೆಸರು ಬಂದಿರುವುದರಿಂದ ಜಗದೇವನು ಅಂತಸ್ತಿನಲ್ಲಿ ಅಧಿಕಾರದಲ್ಲಿ ಅವನಿಗಿಂತಲೂ ಕಡಿಮೆ ದರ್ಜೆಯವನಾಗಿದ್ದನರೂ ಸಹ ಆರನೆಯ ವಿಕ್ರಮಾದಿತ್ಯನಿಗೆ ಹತ್ತಿರದವನಾಗಿದ್ದನೆಂದು ತಿಳಿಸಿದ್ದಾರೆ. ಆದರೆ ಕೆಲವು ಸ್ಥಳೀಯ ರಾಜಕೀಯದ ಪರಿಣಾಮವಾಗಿ ಕಾಕತೀಯ ಬೆಟ್ಟರಸನು ಕಾಕತೀಯ ಅಥವಾ ಹನುಮಕೊಂಡದ ಮೇಲೆ ದಾಳಿ ಮಾಡಿದಾಗ ಬೆಟ್ಟರಸನ ಮಗ ಎರಡನೆಯ ಪ್ರೋಲನು ಅವನ ದಾಳಿಯನ್ನು ಹಿಮ್ಮೆಟ್ಟಿಸಿ ನಗರ ಕಟ್ಟಿಸಿದನೆಂದು ಸಾವಿರ ಕಂಬದ ದೇವಾಲಯದಲ್ಲಿನ ಶಾಸನ[೨೩]ದಿಂದ ತಿಳಿಯುತ್ತದೆ. ಆದರೆ ಈ ವಿವರಣೆಯು ಸಹ ಸಮರ್ಪಕವಾಗಿಲ್ಲ. ಏಕೆಂದರೆ ಸನಿಗರಂ ಶಾಸನದ ದಿನಾಂಕ ಕ್ರಿ.ಶ. ೧೧೦೭ ಕ್ಕೆ ಸಂಬಂಧಿಸಿದ್ದರೆ ಎರಡನೆಯ ಪ್ರೋಲನಿಗೆ ಸಂಬಂಧಿಸಿದ ಮೊದಲ ಶಾಸನವು ಕ್ರಿ.ಶ. ೧೧೧೭ ಕ್ಕೆ ಸೇರಿದೆ. ಮೇಲಿನ ಶಾಸನವು ಜಗದೇವನು ಯಾವಾಗ ಹನುಮಕೊಂಡವನ್ನು ಆಕ್ರಮಿಸಿಕೊಂಡನೆಂಬುದರ ಬಗ್ಗೆ ನಿಖರವಾಗಿ ತಿಳಿಸುವುದಿಲ್ಲ. ಈ ಎಲ್ಲ ಮಾಹಿತಿಯನ್ನು ಒಂದುಗೂಡಿಸಿದಾಗ ಮತ್ತೊಂದು ವಿಷಯವು ಬೆಳಕಿಗೆ ಬರುತ್ತದೆ. ಈ ವೇಳೆಗೆ ಆಂಧ್ರದ ಕಾಕತೀಯ ದೊರೆಗಳು ಪ್ರಮುಖ ರಾಜಕೀಯ ಶಕ್ತಿಯಾಗಿ ಉದಯಿಸುತ್ತಿದ್ದರು. ಭೂಲೋಕಮಲ್ಲ ಮೂರನೆಯ ಸೋಮೇಶ್ವರನು ಕರೀಂನಗರ ಮತ್ತು ಮೆಹಬೂಬನಗರ ಜಿಲ್ಲೆಗಳನ್ನೊಳಗೊಂಡ "ಕೊಳ್ಳಪಾಕೆ-೭೦೦೦" ಎಂಬ ಪ್ರದೇಶದ ಆಡಳಿತಾಧಿಕಾರಿಯಾಗಿದ್ದನು. ಈ ಸಂದರ್ಭದಲ್ಲಿ ಸನಿಗರಂ ಶಾಸನವು ತಿಳಿಸುವ ವಿಷಯವೆಂದರೆ ಕಾಕತೀಯರು ದಂಗೆಯೆದ್ದ ವಿಷಯವನ್ನು ಮಾತ್ರ

ತಿಳಿಸುತ್ತದೆ. ಏಕೆಂದರೆ ಮೂರನೆಯ ಸೋಮೇಶ್ವರನು ಪಾರಮಾರರ ರಾಜಕುಮಾರ ಜಗದ್ದೇವನ ಬೆಂಬಲಿಗನಾಗಿದ್ದನು. ಆದರೆ ಎರಡನೆಯ ಪ್ರೋಲನು ಅಧಿಕಾರಕ್ಕೆ ಬಂದ ನಂತರ ಕಲ್ಯಾಣ ಚಾಲುಕ್ಯರಿಂದ ಸ್ವತಂತ್ರನಾಗಲು ಬಯಸಿದ ಪರಿಣಾಮವಾಗಿ ಅವನು ಜಗದ್ದೇವ ರಾಜಕುಮಾರ ಮೂರನೆಯ ತೈಲ ಮತ್ತು ಮಂಥೇನ ಪ್ರದೇಶದ ಸಾಮಂತರನ್ನು ಎದುರಿಸಬೇಕಾಯಿತು. ನಂತರ ಅವರನ್ನು ದಂಡನಾಯಕ ಅನಂತಪಾಲನ ಸೋದರಳಿಯನಾದ ಗೋವಿಂದರಾಜನೂ ಸಹ ಇವರನ್ನು ಸೇರಿಕೊಂಡಿರಬಹುದು. ಈ ಎಲ್ಲ ಬೆಳವಣಿಗೆಯು ಆರನೆಯ ವಿಕ್ರಮಾದಿತ್ಯನ ಕಾಲದಲ್ಲಿಯೇ ಮೂರನೆಯ ಸೋಮೇಶ್ವರನ ಆಜ್ಞೆಯ ಮೇರೆಗೆ ಆಗಿರಬಹುದು. ಕಾಕತೀಯ ರುದ್ರದೇವನ ಹನುಮಕೊಂಡ ಶಾಸನದಲ್ಲಿ ಇವರೆಲ್ಲರ ವಿರುದ್ಧ ಪ್ರೋಲನು ಗೆದ್ದಿದ್ದನೆಂದು ತಿಳಿಸಿದ್ದರೂ ಸಹ ಇದು ನಿಜವಿರಲಿಕ್ಕಿಲ್ಲ. ಇದಕ್ಕೆ ಬದಲಾಗಿ ಎರಡನೆಯ ಪ್ರೋಲನು ಸೋಲನ್ನು ಅನುಭವಿಸಿ ಕಲ್ಯಾಣ ಚಾಲುಕ್ಯರಿಗೆ ತನ್ನ ಅಂತ್ಯದವರೆಗೆ ಸ್ವಾಮಿನಿಷ್ಠನಾಗಿರಬಹುದು. ಈ ವಿಷಯಕ್ಕೆ ಸಂಬಂಧಿಸಿದಂತೆ ರಾಜಕುಮಾರ ಮೂರನೆಯ ಸೋಮೇಶ್ವರನು ದಂಡಯಾತ್ರೆ ಕೈಕೊಳ್ಳಲು ಒಂದು ಶುಭದಿನವನ್ನು ನನ್ನೆಯ ಭಟ್ಟನೆಂಬುವವನು ನೀಡಿರಬಹುದು. ಆರನೆಯ ವಿಕ್ರಮಾದಿತ್ಯನ ಆಳ್ವಿಕೆಯ ಕೊನೆಯ ೧೦-೨೦ ವರ್ಷಗಳಲ್ಲಿ ವೆಂಗಿ ಪ್ರದೇಶವು ಕಲ್ಯಾಣ ಚಾಲುಕ್ಯರ ಆಧೀನಕ್ಕೊಳಪಟ್ಟಿತ್ತು. ಆದರೆ ಅವನ ಆಳ್ವಿಕೆಯ ೫-೬ ವರ್ಷಗಳಲ್ಲಿ ಈ ಪ್ರದೇಶವು ರಾಜಕೀಯ ಅಸ್ಥಿರತೆಯನ್ನು ಎದುರಿಸಿತು. ಮೇ ೨೬ ಕ್ರಿ.ಶ. ೧೧೨೬ಕ್ಕೆ ಸೇರಿದ ಜೆಬ್ರೋಲು ಶಾಸನ[೪೯]ದಲ್ಲಿ ಕಂಡುಬರುವಂತೆ ಮಹಾಮಂಡಲೇಶ್ವರ ನಂಬಯ್ಯ ಎಂಬುವವನು ಕೊಳ್ಳಪಾಕ ಮತ್ತು ಷಟ್‌ಸಹಸ್ರ ಪ್ರದೇಶದ ಮೇಲೆ ದೊರೆಯಾಗಿ ವಿಕ್ರಮಚೋಳನ ಮಾಂಡಲೀಕನಾಗಿ ಆಳಿದನೆಂಬ ವಿಷಯ ಮೇಲಿನ ಸಂಗತಿಗೆ ಪುಷ್ಠಿ ಒದಗಿಸುತ್ತದೆ. ವಿಕ್ರಮಚೋಳನು ತನ್ನ ತಂದೆ ಒಂದನೆಯ ಕುಲೋತ್ತುಂಗ ಚೋಳನ ನಂತರ ಕ್ರಿ.ಶ. ೧೧೧೮ ರಲ್ಲಿ ಅಧಿಕಾರಕ್ಕೆ ಬಂದು ಚಾಲುಕ್ಯರು ಕಳೆದುಕೊಂಡ ಪ್ರದೇಶವನ್ನು ಮರಳಿ ಪಡೆಯಲು ಪ್ರಯತ್ನಿಸಿದನು.

ನಿಡದವೊಲವಿನ ಚಾಲುಕ್ಯರು ಈ ಸಮಯದಲ್ಲಿ ಕೃಷ್ಣಾ ಮತ್ತು ಗೋದಾವರಿ ಪ್ರದೇಶದಲ್ಲಿ ನಿಡುವೋಲು ವೆಂಗಿ ಮತ್ತು ಧಾಡಿಕಾಲಪುಡಿ ನಗರಗಳನ್ನು ರಾಜಧಾನಿಯನ್ನಾಗಿ ಮಾಡಿಕೊಂಡಿದ್ದರು. ತಮ್ಮನ್ನು ತಾವು ಸೋಮವಂಶಸ್ಥರು, ಮಾನವ್ಯ ಗೋತ್ರದವರು ಮತ್ತು ಹಾರೀತಿಪುತ್ರರೆಂದು ಕರೆದುಕೊಳ್ಳುತ್ತಿದ್ದರು. ಇವರ ದೊರೆ ಮಲ್ಲಭೂಪತಿ ಎಂಬುವವನು ಭಟ್ಟಪುರ ಮತ್ತು ಷಟ್‌ಸಹಸ್ರಾವಣಿ ಪ್ರದೇಶಗಳ ಅಧಿಪತಿಯಾಗಿದ್ದು ಕಲ್ಯಾಣ ಚಾಲುಕ್ಯರನ್ನು ಕೃಷ್ಣಾ-ಗೋದಾವರಿ ನದಿ ಪ್ರದೇಶಗಳಿಂದ ಹೊಡೆದೋಡಿಸಿ ''ಯುದ್ಧಮಲ್ಲವಂಶ ಸಮ್ಮದ್ದರಣ'' ಎಂಬ ಬಿರುದು ಹೊಂದಿದ್ದನೆಂದು ಹಾಗೂ ಕ್ರಿ.ಶ. ೧೧೨೬ ರಿಂದ ಆಳಿದನೆಂದು ತಿಳಿಯುತ್ತದೆ.[೫೦] ಈ ರೀತಿ ಆರನೆಯ ವಿಕ್ರಮಾದಿತ್ಯನ ಕೊನೆಯ ಆಳ್ವಿಕೆಯಲ್ಲಿ ಮೂರನೆಯ ಸೋಮೇಶ್ವರನು ಯುವರಾಜನಾಗಿದ್ದಾಗ ಪೂರ್ವದ ಗಡಿಯಲ್ಲಿ ಉಂಟಾದ ರಾಜಕೀಯ ದಂಗೆಗಳು ಮೂರನೆಯ ಸೋಮೇಶ್ವರನು ಸಿಂಹಾಸನವನ್ನೇರುವುದಕ್ಕಿಂತ ಮುಂಚೆಯೇ ಯುದ್ಧಗಳನ್ನು ಮಾಡಬೇಕಾಯಿತು.

ರಾಜನಾದ ಮೇಲೆ ನಡೆಸಿದ ಯುದ್ಧಗಳು :

ಮೂರನೆಯ ಸೋಮೇಶ್ವರನು ಕ್ರಿ.ಶ. ೧೧೨೭ ಫೆಬ್ರುವರಿ ೨೦ ರಲ್ಲಿ ಅಧಿಕಾರಕ್ಕೆ ಬಂದ ಮೂರು ತಿಂಗಳುಗಳ ನಂತರದಲ್ಲಿ ಮಹಾಮಂಡಳೇಶ್ವರ ನಂಬಯ್ಯನು ವೆಂಗಿ-೬೦೦೦ ಪ್ರದೇಶವನ್ನು ಆಕ್ರಮಿಸಿದ್ದರಿಂದ ತನ್ನ ಪಟ್ಟಾಭಿಷೇಕದ ನಂತರ ಕೂಡಲೇ ಮೂರನೆಯ ಸೋಮೇಶ್ವರನು ಚಾಲುಕ್ಯ ಸಾಮ್ರಾಜ್ಯದ ಪೂರ್ವದ ಭಾಗಗಳಲ್ಲಿ ಯುದ್ಧಗಳಲ್ಲಿ ತೊಡಗಬೇಕಾಯಿತು. ನಂತರ ನಿಧಾನವಾಗಿ ಮೂರನೆಯ ಸೋಮೇಶ್ವರನು ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡನು. ಗುಂಟೂರು ಜಿಲ್ಲೆಯ ನಾಂದೇಡ್ಲ ಎಂಬಲ್ಲಿ ದೊರಕಿದ ಕ್ರಿ.ಶ. ೧೧೨೭ ರ ಶಾಸನ[೩೧]ವೊಂದು ಮಹಾಮಂಡಳೇಶ್ವರ ಅನಂತಪಾಲಯ್ಯನು ಒಂದು ದೇವಾಲಯವನ್ನು ನಿರ್ಮಿಸಿದುದರ ಬಗ್ಗೆ ಮತ್ತು ತ್ರಿಪುರಾಂತಕಂ ಎಂಬಲ್ಲಿ ದೊರಕಿರುವ ಕ್ರಿ.ಶ. ೧೧೨೬-೨೭ರ ಶಾಸನ[೩೨]ವೊಂದು ಅವನು ಚೋಳರನ್ನು ಸೋಲಿಸಿ ಕಾಂಚಿಯವರೆಗೆ ಹಿಮ್ಮೆಟ್ಟಿಸಿ ಅದನ್ನು ಲೂಟಿಮಾಡಿ 'ಚೋಳಕಟಕಾಸೂರೆಕಾರ' ಎಂಬ ಬಿರುದು ಧರಿಸಿದ ಬಗ್ಗೆ ತಿಳಿಸುತ್ತದೆ. ಕೊಲ್ಲೂರಿನ ಒಂದು ಶಾಸನ[೩೩]ವು ಅನಂತಪಾಲನ ಒಬ್ಬ ಕೆಳಗಿನ ಸಾಮಂತನು ವೆಂಗಿಯ ಉಪ್ಪಿನಕಟ್ಟೆಯಿಂದ ಹಿಡಿದು ಕಾಂಚಿಯವರೆಗೆ ಬೆನ್ನಟ್ಟಿದ್ದನೆಂದು ಹಾಗೂ ಚೋಳರಾಜ್ಯ ನಿರ್ಮೂಲನ ಎಂಬ ಬಿರುದನ್ನು ಹೊಂದಿದ್ದನೆಂದು ತಿಳಿಸುತ್ತದೆ. ಕ್ರಿ.ಶ. ೧೧೨೯ ರಲ್ಲಿ ಮೂರನೆಯ ಸೋಮೇಶ್ವರನು ತನ್ನ ಒಡೆಯನೆಂದು ತಿಳಿಸುತ್ತದೆ. ಕ್ರಿ.ಶ. ೧೧೨೯ ರಲ್ಲಿ ಭೂಲೋಕಮಲ್ಲನು ತನ್ನ ಒಡೆಯನೆಂದು ಸಾರಿದ ಮಹಾಮಂಡಳೇಶ್ವರ ಜಾಗಿ ಬೆಟ್ಟರಾಜು ಎನ್ನುವ ಬ್ರಾಹ್ಮಣನೊಬ್ಬನಿಂದ ಮಾಧವಿ ಪಟ್ಟಣದಲ್ಲಿ ನಿರ್ಮಿಸಲ್ಪಟ್ಟ 'ತ್ರಿಮೂರ್ತಿ' ದೇವಾಲಯಕ್ಕೆ ಭೂದಾನ ಮಾಡಿದ ಬಗ್ಗೆ ತಿಳಿಸುತ್ತದೆ. ಕ್ರಿ.ಶ. ೧೧೩೧ ರಲ್ಲಿ ವೇಲನಾಟ ಚೋಳನ[೩೪] ಪತ್ನಿಯಾದ ಸುರಮದೇವಿಯು ಬಾಪಟ್ಲಾದಲ್ಲಿರುವ ಭಾವನಾರಾಯಣ ದೇವಾಲಯಕ್ಕೆ ದಾನ ನೀಡಿದ ಬಗ್ಗೆ ಮತ್ತು ಇದು ಮೂರನೆಯ ಸೋಮೇಶ್ವರನನ್ನು ತಮ್ಮ ಒಡೆಯನನ್ನಾಗಿ ಒಪ್ಪಿಕೊಂಡ ಬಗ್ಗೆ ತಿಳಿಸುತ್ತದೆ.[೩೫] ಈ ಅರಸನ ಕಾಲಕ್ಕೆ ಸಂಬಂಧಿಸಿದಂತೆ ಕ್ರಿ.ಶ. ೧೧೩೧-೩೨ ರಲ್ಲಿಯ ಶಾಸನಗಳು ದ್ರಾಕ್ಷಾರಾಮದಲ್ಲಿ ದೊರೆತಿವೆ. ಕ್ರಿ.ಶ. ೧೧೩೨-೩೩ ಶಾಸನವೊಂದು ಲಕ್ಷ್ಮರಸ ದಂಡನಾಯಕನ[೩೬] ಕೆಳಗಿನ ಸಾಮಂತ ಕಲ್ಲಯ್ಯ ಸಾಹಿನಿಯ ದಾನದ ಬಗ್ಗೆ ಕ್ರಿ.ಶ. ೧೧೩೩ ರ ಶಾಸನ[೩೭]ವು ಗೋವಿಂದರಾಜ ಲಕ್ಷ್ಮರಾಜ ಮತ್ತು ಸಿದ್ದಿಮಯ್ಯ ಎಂಬುವವರು ನೀಡಿದ ದಾನದ ಬಗ್ಗೆ ಇದೇ ಸ್ಥಳದಲ್ಲಿರುವ ಕ್ರಿ.ಶ. ೧೧೩೩ ರ ಮತ್ತೊಂದು ಶಾಸನದಲ್ಲಿ ಸಿದ್ದಿಮಯ್ಯನು ತನ್ನ ಮಗ ಕೇಸಿಮಯ್ಯನೊಂದಿಗೆ ನೀಡಿದ ದಾನದ ಬಗ್ಗೆ ತಿಳಿಸುವುದರಿಂದ ವೆಂಗಿಯ ಉತ್ತರ ಭಾಗವು ಮೂರನೆಯ ಸೋಮೇಶ್ವರನ ಕಾಲದಲ್ಲಿ ಚಾಲುಕ್ಯರ ಹಿಡಿತದಲ್ಲಿ ಕ್ರಿ.ಶ. ೧೧೩೦-೩೧ರ ವೇಳೆಗೆ ಇತ್ತೆಂದು ಹೇಳಬಹುದು.

ಮೂರನೆಯ ಸೋಮೇಶ್ವರನ ಕಾಲದ ದಾಖಲೆಗಳನ್ನು ನೋಡಿದಾಗ ನಂಬಯ್ಯನು ಜಯಂತಿಪುರ[೩೮] ಪ್ರದೇಶದ ಮೇಲೆ ಒಡೆತನ ಸಾಧಿಸಿದಾಗ ಕ್ರಿ.ಶ. ೧೧೨೫ ಡಿಸೆಂಬರ್ ೨೫ ರಲ್ಲಿ ಮೂರನೆಯ ಸೋಮೇಶ್ವರನು ಅಲ್ಲಿ ವಾಸ್ತವ್ಯ ಹೂಡಿದ್ದನು. ಆದರ ಮರುವರ್ಷವೇ ಮಾರ್ಚ ೭ ರಂದು ಇವನು ನವಿಲೆಯ ಕುಪ್ಪ ಅಥವಾ ಇಂದಿನ ರಾಯಚೂರು

ಜಿಲ್ಲೆಯ ನವಲೆಯಲ್ಲಿದ್ದನು.[೧೩೯] ಕ್ರಿ.ಶ.೧೧೨೯ ರಲ್ಲಿ ಇವನು ಹುಲ್ಲುನಿಯತೀರ್ಥ[೧೪೦] (ಖಚಿತ ಹೆಸರು ಗೊತ್ತಾಗಿಲ್ಲ)ದಲ್ಲಿ ಇದ್ದನೆಂದು ಮತ್ತು ಸ್ವಾಭಾವಿಕವಾಗಿ ಈ ಪ್ರದೇಶಗಳಿಗೆ ಅವನು ದಂಡಯಾತ್ರೆಯ ನಿಮಿತ್ತವಾಗಿ ಬಂದಿದ್ದನೆಂದು ಹೇಳಲಾಗಿದೆ. ಇದರ ಮರು ತಿಂಗಳಲ್ಲಿಯೇ ಅವನು ಕಲ್ಯಾಣದಲ್ಲಿದ್ದನು.[೧೪೧] ನಂತರ ಕರಡಿಕಲ್ಲ ಶಾಸನ[೧೪೨]ದ ಪ್ರಕಾರ ಅವನು ಆಗಸ್ಟ್ ೧೨ ಕ್ರಿ.ಶ. ೧೧೩೨ ಡಿಸೆಂಬರ್ ೨ ರಲ್ಲಿ ಬಿಜಾಪುರ ಜಿಲ್ಲೆಯ ಮಹಿಸೂರು[೧೪೩] ಎಂಬ ಸ್ಥಳಗಳಿಗೆ ಹೋಗಿದ್ದನು. ಈ ಕೆಲವು ಉದಾಹರಣೆಗಳನ್ನು ಬಿಟ್ಟರೆ ಉಳಿದೆಲ್ಲಾ ಸಮಯದಲ್ಲಿ ಮೂರನೆಯ ಸೋಮೇಶ್ವರನು ರಾಜಧಾನಿಯಲ್ಲಿಯೇ ಇದ್ದನು. ಕ್ರಿ.ಶ. ೧೧೨೯ ಫೆಬ್ರುವರಿ ೨೦ ರಲ್ಲಿ ಮೂರನೆಯ ಸೋಮೇಶ್ವರನು ಹುಲ್ಲುನಿಯ ತೀರ್ಥದಲ್ಲಿ ದಂಡಯಾತ್ರೆಗೆಂದು ತಂಗಿದ್ದನು. ಈ ಸಮಯಕ್ಕೆ ಸಂಬಂಧಿಸಿದ ಸಮಕಾಲೀನ ಹೊಯ್ಸಳ ದಾಖಲೆಗಳು ಚಾಲುಕ್ಯರಿಂದ ಸ್ವತಂತ್ರನಾಗಲು ಪ್ರಯತ್ನಿಸುತ್ತಿದ್ದ ವಿಷ್ಣುವರ್ಧನನ್ನು ಹತ್ತಿಕ್ಕಲು ಇವನು ಬಂದಿದ್ದನೆಂದು ತಿಳಿಸುತ್ತವೆ. ಏಕೆಂದರೆ ಕಲ್ಯಾಣ ಚಾಲುಕ್ಯರ ಸಾಮ್ರಾಜ್ಯದ ದಕ್ಷಿಣ ಭಾಗದ ಸ್ಥಿತಿಯು ಅಲ್ಲಿನ ರಾಜಮನೆತನಗಳಾದ ಉಚ್ಚಂಗಿಯ ಪಾಂಡ್ಯರು, ಹಾನಗಲ್ಲ ಕದಂಬರು ಮತ್ತು ಗೋವೆಯ ಕದಂಬರು ನೀಡುವ ಬೆಂಬಲ ಮತ್ತು ಸ್ವಾಮಿನಿಷ್ಠೆಯನ್ನು ಅವಲಂಬಿಸಿತ್ತು. ಆದ್ದರಿಂದ ವಿಷ್ಣುವರ್ಧನನು ಮೊದಲು ಇವರನ್ನು ಸೋಲಿಸಲು ಪ್ರಯತ್ನಿಸಿ ಆರನೆಯ ವಿಕ್ರಮಾದಿತ್ಯನ ಕಾಲದಲ್ಲಿಯೇ ವಿಫಲನಾಗಿದ್ದನು. ನಂತರದಲ್ಲಿ ಮೂರನೆಯ ಸೋಮೇಶ್ವರನ ಶಾಂತಿಯುತ ಆಡಳಿತನೀತಿಯು ಮತ್ತೊಮ್ಮೆ ದಂಗೆ ಏಳುವಂತೆ ವಿಷ್ಣುವರ್ಧನನ್ನು ಪ್ರೇರೇಪಿಸಿತು. ಇದರಿಂದಾಗಿ ಹೊಯ್ಸಳ ವಿಷ್ಣುವರ್ಧನನು ಕ್ರಿ.ಶ. ೧೧೨೯ ರಲ್ಲಿ ಹಾನಗಲ್ಲ ಕದಂಬರನ್ನು ಆಕ್ರಮಿಸಿ ಕ್ರಿ.ಶ. ೧೧೩೦ ರಲ್ಲಿ ಬಂಕಾಪುರವನ್ನು ಆಕ್ರಮಿಸಿದಾಗ[೧೪೪] ವಿಷ್ಣುವರ್ಧನನ ದಂಡಯಾತ್ರೆಯನ್ನು ತಡೆಯಲು ದಕ್ಷಿಣಕ್ಕೆ ಬಂದ ಮೂರನೆಯ ಸೋಮೇಶ್ವರನು ಆ ಕಾಲದಲ್ಲಿ ಹನುಮಗೋಳದಿಂದ ಕದಂಬ ತೈಲಪನು ಆಳುತ್ತಿದ್ದಾಗ ಕ್ರಿ.ಶ. ೧೧೨೯ ರಲ್ಲಿಯೇ ಅವನಿಗೆ ವಿಷ್ಣುವರ್ಧನನ ವಿರುದ್ಧ ಸಹಾಯ ಮಾಡಲು ಬಂದಿದ್ದನೆಂದು ತಿಳವಳ್ಳಿ ಶಾಸನ[೧೪೫]ವು ತಿಳಿಸುತ್ತದೆ. ಆದರೆ ಈ ವೇಳೆಗೆ ವಿಷ್ಣುವರ್ಧನನ್ನು ತುಂಗಭದ್ರಾ ನದಿ ಮೇಲ್ಭಾಗದ ಧಾರವಾಡ ಜಿಲ್ಲೆಯ ಕೆಲ ಪ್ರದೇಶಗಳನ್ನು ಗೆದ್ದುಕೊಂಡಿದ್ದನು. ಕ್ರಿ.ಶ. ೧೧೩೦ ರಲ್ಲಿ ಕದಂಬ ತೈಲಪನು ಮರಣ ಹೊಂದಿದ ನಂತರ ಮಯೂರವರ್ಮ ಮತ್ತು ಮಲ್ಲಿಕಾರ್ಜುನರು ಅವನ ಉತ್ತರಾಧಿಕಾರಿಗಳಾಗಿದ್ದು ಹೊಯ್ಸಳರ ದಾಳಿ ಎದುರಿಸಬೇಕಾಯಿತು. ನಂತರ ಕ್ರಿ.ಶ. ೧೧೩೨ ರಲ್ಲಿ ವಿಷ್ಣುವರ್ಧನನು ಬಂಕಾಪುರ ಮತ್ತು ಹಾನಗಲ್ ಪ್ರದೇಶಗಳ ಮೇಲೆ ದಾಳಿ ಮಾಡಿದನು.[೧೪೬] ಅದರ ಮರುವರ್ಷವೇ ಅವನು ತನ್ನ ದಂಡನಾಯಕ ಬೋಕಣ[೧೪೭]ನ ನೆರವಿನಿಂದ ಕದಂಬರ ರಾಜಧಾನಿಯನ್ನು ಲೂಟಿ ಮಾಡಿದನು. ಮೂರನೆಯ ಸೋಮೇಶ್ವರನ ಆಳ್ವಿಕೆಯ ೧೦ನೆಯ ವರ್ಷದಲ್ಲಿ ಹೊರಡಿಸಲಾದ ಯಳವತ್ತಿ ಶಾಸನ[೧೪೮]ವು ಮಲ್ಲಿಕಾರ್ಜುನನು ಆಳುತ್ತಿದ್ದಾಗ ಹನುಮಗೋಳದ ವಿರುದ್ಧ ಹೊಯ್ಸಳದೇವನ ದಂಡಯಾತ್ರೆಯ ಸಮಯದಲ್ಲಿ ಸಾಹನಿಕೇಸಿ ಎಂಬುವವನು ಯಳವತ್ತಿ ಗ್ರಾಮವನ್ನು ಮುತ್ತಿದಾಗ ಆ ಮುತ್ತಿಗೆಯಲ್ಲಿ ಒಬ್ಬ ನಾಯಕನ ಮರಣವನ್ನು ಕುರಿತು

ಸ್ಮರಿಸುತ್ತದೆ. ಬೆಲೂರು ಶಾಸನ[೨೯]ಗಳು ಹೊಯ್ಸಳ ಮುಖ್ಯ ಅಧಿಕಾರಿಯು ಪಾನಂಗಲ್ ಕೋಟೆಯನ್ನು ಗೆದ್ದ ಬಗ್ಗೆ ತಿಳಿಸುತ್ತದೆ. ಮೂರನೆಯ ಸೋಮೇಶ್ವರನ ಕ್ರಿ.ಶ. ೧೧೩೭-೩೮ ರ ಗಣಜೂರು ಶಾಸನ[೩೦]ವು ಮಲ್ಲಿಕಾರ್ಜುನನು ಲೊಕ್ಕಿಗುಂಡಿ ಕೋಟೆಯನ್ನು ಆಕ್ರಮಿಸಿದ ಬಗ್ಗೆ ತಿಳಿಸುತ್ತದೆ. ಈ ಘಟನೆಯು ಹೊಯ್ಸಳರಿಂದ ಮಲ್ಲಿಕಾರ್ಜುನನು ಕಳೆದುಕೊಂಡ ಪ್ರದೇಶಗಳನ್ನು ಪುನಃ ಪಡೆಯಲು ಮಾಡಿದ ಪ್ರಯತ್ನವನ್ನು ಸೂಚಿಸುತ್ತದೆ. ಇದರ ನಂತರ ಹಾನಗಲ್‌ವು ವಿಷ್ಣುವರ್ಧನನ ವಶವಾಗಿರಬಹುದು. ಏಕೆಂದರೆ ಕ್ರಿ.ಶ. ೧೧೪೦ ರ ವೇಳೆಗೆ ವಿಷ್ಣುವರ್ಧನನು ತನ್ನ ರಾಣಿ ಬಮ್ಮಲದೇವಿಯೊಂದಿಗೆ[೩೧] ಅಲ್ಲಿ ವಾಸಿಸುತ್ತಿದ್ದುದನ್ನು ಕಾಣಬಹುದು. ವಿಷ್ಣುವರ್ಧನನು ಕದಂಬರ ಎರಡನೆಯ ಜಯಕೇಶಿಯೊಂದಿಗೆ ವೈರತ್ವ ಹೊಂದಿದ್ದು ಇವನು ಗೋವಾ ಪ್ರದೇಶದಲ್ಲಿ ಆಳುತ್ತಿದ್ದು ಪ್ರಾರಂಭದಲ್ಲಿ ಆರನೆಯ ವಿಕ್ರಮಾದಿತ್ಯನ ಆಳ್ವಿಕೆಯಲ್ಲಿ ಸ್ವತಂತ್ರನಾಗುವ ವಿಫಲಯತ್ನ ಮಾಡಿದನು. ವಿಕ್ರಮಾದಿತ್ಯನ ಮರಣಾನಂತರ ಅವನು ಪುನಃ ತಲೆ ಎತ್ತಿದರೂ ಸಹ ವಿಷ್ಣುವರ್ಧನನು ಅವನನ್ನು ಸೋಲಿಸಿದ ಬಗ್ಗೆ ಕ್ರಿ.ಶ. ೧೧೩೩ ಶಾಸನವು ತಿಳಿಸುತ್ತದೆ.[೩೨] ಇದರಲ್ಲಿ ಅವನು ಬನವಾಸಿ ಮತ್ತು ಹಲಸಿಗೆ ಪ್ರದೇಶಗಳನ್ನು ಆಳುತ್ತಿದ್ದನೆಂದು ಹೇಳಲಾಗಿದೆ. ಕ್ರಿ.ಶ. ೧೧೩೫ ರ ಶಾಸನ[೩೩]ವೊಂದು ವಿಷ್ಣುವರ್ಧನನು ಜಯಕೇಶಿಯನ್ನು ಓಡಿಸಿ ಕೆಲ ಪ್ರದೇಶವನ್ನು ಗೆದ್ದನೆಂದು ಹೇಳುತ್ತದೆ. ಕೊಲ್ಹಾಪುರದ ಶಿಲಾಹಾರ ಎರಡನೆಯ ಭೋಜರಾಜನ ಶಾಸನ[೩೪]ವೊಂದು ಅವನ ತಂದೆ ವಿಜಯಾದಿತ್ಯನು ಗೋವೆಯಲ್ಲಿ ಕೆಲ ನಾಶಪಡಿಸಲ್ಪಟ್ಟ ಅರಸರ ಅಧಿಕಾರವನ್ನು ಪುನಃ ಸ್ಥಾಪಿಸಿದನೆಂಬ ವಿಷಯವನ್ನು ತಿಳಿಸುವುದರಿಂದ ಜಯಕೇಶಿಗೆ ಇವರು ನೆರವು ನೀಡಿದ್ದರೆಂದು ತಿಳಿಯಲಾಗಿದೆ. ವಿಷ್ಣುವರ್ಧನನ ಶಾಸನಗಳು ಅವನ ರಾಜ್ಯವು ಕೃಷ್ಣಾನದಿಯವರೆಗೆ ವಿಸ್ತರಿಸಿತ್ತೆಂದು ತಿಳಿಸಿದರೂ ಸಹ ಅದು ಉತ್ಪ್ರೇಕ್ಷೆಯಾಗಿದೆ. ಅಲ್ಲದೇ ಅವನ ಅನೇಕ ಶಾಸನಗಳು ವಿಷ್ಣುವರ್ಧನನು ಬನವಾಸಿ, ಹಾನಗಲ್, ಸಾಂತಲಿಗೆ, ಬೆಳುವೊಲ, ಪುಲಿಗೆರೆ ಮತ್ತು ಹಲಸಿಗೆ ಪ್ರದೇಶಗಳ ಮೇಲೆ ಆಳುತ್ತಿದ್ದನೆಂದು ತಿಳಿಸುತ್ತವೆ. ಆದರೆ ಹಾನಗಲ್ ಕದಂಬರು, ಗೋವೆ ಕದಂಬರು ಈ ಪ್ರದೇಶದಲ್ಲಿ ಆಳುತ್ತಿದ್ದುದನ್ನು ಗಮನಿಸಿದರೆ ವಿಷ್ಣುವರ್ಧನನ ಜಯವು ಕ್ಷಣಿಕವಾಗಿತ್ತೆಂದು ತೋರುತ್ತದೆ. ಈ ಎಲ್ಲಾ ಸಮಯದಲ್ಲಿಯೂ ಕಲ್ಯಾಣ ಚಾಲುಕ್ಯ ದೊರೆ ಏನು ಮಾಡುತ್ತಿದ್ದನೆಂಬ ಪ್ರಶ್ನೆ ಸಹಜವಾಗಿ ಉದ್ಭವಿಸುತ್ತದೆ. ಈ ಸಂದರ್ಭದ ಯುದ್ಧಗಳಲ್ಲಿ ಮೂರನೆಯ ಸೋಮೇಶ್ವರನು ನೇರವಾಗಿ ಭಾಗವಹಿಸಿದ ಬಗ್ಗೆ ಉಲ್ಲೇಖವಿಲ್ಲ. ಬಹುಶಃ ಇವನು ತನ್ನ ದಂಡನಾಯಕರನ್ನು ಮತ್ತು ಸೈನ್ಯವನ್ನು ತನ್ನ ಮಾಂಡಲಿಕರ ಸಹಾಯಕ್ಕಾಗಿ ಕಳುಹಿಸಿ ತಾನು ದೂರವಿದ್ದನು. ಉಳಿದ ಮಾಂಡಳಿಕರೂ ಸಹ ದಂಗೆ ಏಳುವ ಸಂದರ್ಭವಿದ್ದರೂ ಸಹ ಅವರಿಗೆ ತಮ್ಮ ಉಳಿವಿನ ಅವಶ್ಯಕತೆ ಇದ್ದುದರಿಂದ ಅವರು ತಮ್ಮ ಸ್ವಹಿತಕ್ಕಾಗಿ ಚಾಲುಕ್ಯರ ಒಡೆತನವನ್ನು ಒಪ್ಪಿಕೊಳ್ಳುತ್ತಿದ್ದರು. ಹೀಗಾಗಿ ಕಲ್ಯಾಣ ಚಾಲುಕ್ಯರ ಅಧಿಕಾರವು ಸಾವಕಾಶವಾಗಿ ಮೂರನೆಯ ಸೋಮೇಶ್ವರನ ಕಾಲದಲ್ಲಿ ಇಳಿಮುಖವಾಗತೊಡಗಿತು. ಇದು ಮೂರನೆಯ ಸೋಮೇಶ್ವರನ ನಂತರವೂ ಮುಂದುವರೆಯಿತೆಂದು ಹೇಳಬಹುದು.

ಸೋಮೇಶ್ವರನ ಅಂತ್ಯ :

ಮೂರನೆಯ ಸೋಮೇಶ್ವರನ ನಿಧನನಾದ ದಿನ ಸ್ಪಷ್ಟವಾಗಿ ತಿಳಿದುಬರುವುದಿಲ್ಲ. ಆದರೆ ಇಮ್ಮಡಿ ಜಗದೇಕಮಲ್ಲನ ಕ್ರಿ.ಶ. ೧೧೩೮ ಡಿಸೆಂಬರ್ ೮ ರ ಶಾಸನದಲ್ಲಿ ''ಶ್ರೀಮತು ಪ್ರತಾಪ ಚಕ್ರವರ್ತಿ ಜಗದೇಕಮಲ್ಲದೇವರು ಪಟ್ಟಬಂಧೋತ್ಸವಂ ಮಾಡಿಸಿಕೊಂಡು ಪ್ರಥಮ ರಾಜ್ಯದಲ್ಲು'' ಎಂಬ ಉಲ್ಲೇಖವನ್ನು ಗಮನಿಸಿದರೆ[೫೫] ಕ್ರಿ.ಶ. ೧೧೩೮ ಡಿಸೆಂಬರ್ ೮ ದಿನಾಂಕಕ್ಕೆ ಮೊದಲು ಸೋಮೇಶ್ವರನು ಮರಣಿಸಿದ್ದನೆಂಬುದು ಸ್ಪಷ್ಟವಾಗುತ್ತದೆ.

ಹೀಗೆ ಸುಮಾರು ೧೧ ವರ್ಷಗಳ ಕಾಲ ವೈಭವದಿಂದ ಸಾಮ್ರಾಜ್ಯವನ್ನಾಳಿದ ಮೂರನೆಯ ಸೋಮೇಶ್ವರನು ಕ್ರಿ.ಶ. ೧೧೩೮ ರಲ್ಲಿ ಮರೆಯಾಗುತ್ತಾನೆ. ಅವನು ಬಿಟ್ಟುಹೋದ ಅತ್ಯಮೂಲ್ಯ ಸಾಹಿತ್ಯ, ಸಂಪತ್ತು ಮತ್ತು ಶಾಸನಗಳು ಆತನು ಮಾಡಿದ ಯುದ್ಧಗಳನ್ನು, ಸೋಲಿಸಿದ ಅರಸರನ್ನು, ನೀಡಿದ ದಾನ-ದತ್ತಿಗಳನ್ನು, ವರಿಸಿದ ಅರಸಿಯರನ್ನು, ಪಡೆದ ತಂದೆ ತಾಯಿಗಳು, ಪುತ್ರರನ್ನು ಹೊಂದಿದ್ದ ಪ್ರಭುಗಳನ್ನು ಮತ್ತು ಅಧಿಕಾರಿಗಳನ್ನು ಸಾರಿ ಸಾರಿ ಹೇಳುತ್ತವೆ.

ಅಡಿಟಿಪ್ಪಣಿಗಳು :

೧. Murari Lal (Ed), Someswaradevi, *Vikramankabhyudayam*, Nagar Earodai Oriental Institute, 1966, P. IX.

೨. ಗೋಪಾಲ, ಬಾ. ರಾ., ಮಾನವಿಕ ಕರ್ನಾಟಕ, ಸಂಪುಟ-೩, ಸಂಚಿಕೆ-೪, ಕ್ರಿ.ಶ. ೧೯೭೩.

೩. ನಾಗಯ್ಯ, ಜಿ.ಎಂ., *ಆರನೆಯ ವಿಕ್ರಮಾದಿತ್ಯನಶಾಸನಗಳು : ಒಂದು ಅಧ್ಯಯನ*, ಪು. ೫೨.

೪. ಎಸ್.ಆಯ್.ಆಯ್., ಸಂಪುಟ- XI (II), ನಂ. ೧೨೯.

೫. ಗಣೇಶ, ಕೆ.ಆರ್. (ಸಂ.), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೫*, ನಂ. ೫೬೧, ಕೋಲನುಪಾಕ ಕ್ರಿ.ಶ. ೧೧೧೦.

೬. ಅದೇ, ನಂ. ೫೬೫, ಕೋಲನುಪಾಕ ಕ್ರಿ.ಶ. ೧೧೦೯-೧೧೧೦.

೭. ಅದೇ, ನಂ. ೫೬೨, ಕೋಲನುಪಾಕ ಕ್ರಿ.ಶ. ೧೧೧೧ ಡಿಸೆಂಬರ್ ೧೨.

೮. ಅದೇ, ನಂ. ೫೬೯, ಕೋಲನುಪಾಕ ಕ್ರಿ.ಶ. ೧೧೨೫ ಮಾರ್ಚ, ೨೩.

೯. ಅದೇ, ನಂ. ೫೭೦, ಕೋಲನುಪಾಕ ಕ್ರಿ.ಶ. ೧೧೦೯.

ಅದೇ,ನಂ. ೫೭೬, ಕೋಲನುಪಾಕ.

೧೦. ಅದೇ, ನಂ. ೪೧೯, ಗುಡೂರು ಕ್ರಿ.ಶ. ೧೧೨೪ ಡಿಸೆಂಬರ್ ೨೪.

೧೧. ಕೆ.ಆಯ್. ಸಂಪುಟ-V, ನಂ. ೨೪, ನರಗುಂದ, ಕ್ರಿ.ಶ. ೧೧೩೮ ಏಪ್ರಿಲ್ ೨೬.

೧೨. ಕಲಬುರ್ಗಿ. ಎಂ.ಎಂ., (ಸಂ.), *ಮಾನಸೋಲ್ಲಾಸ*, ಪ್ರಸ್ತಾವನೆ, ಪು.XII.

೧೩. ಗಣೇಶ, ಕೆ.ಆರ್. (ಸಂ.), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೫*, ನಂ. ೫೦೮, ಜೆಡಜರ್ಲ, ಕ್ರಿ.ಶ. ೧೧೨೫ ಫೆಬ್ರುವರಿ ೧೯.

೧೪. ಅದೇ, ನಂ. ೫೨೨, ತಡಿಕೊಂಡ, ಕ್ರಿ.ಶ. ೧೧೨೮.

೧೫. ಉಪಾಧ್ಯ, ಜಿ.ಎನ್. (ಸಂ.), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೬*, ನಂ.೧೫, ನಾರಂಗವಾಡಿ, ಕ್ರಿ.ಶ. ೧೧೨೯, ಅಕ್ಟೋಬರ್ ೨೯.

೧೬. ಎ.ಕ., ಸಂಪುಟ-VII, ನಂ. ೧೩೬, ಶಿಕಾರಿಪುರ, ಕ್ರಿ.ಶ. ೧೦೬೮, ಆಗಸ್ಟ್ ೧೫.

೧೭. ಕೆ.ಆಯ್., ಸಂಪುಟ- I, ನಂ. ೧೭, ಶಿಗ್ಗಾಂವಿ, ಕ್ರಿ.ಶ. ೧೦೫೫ ಡಿಸೆಂಬರ್ ೨೫.

೧೮. ಎಸ್.ಆಯ್.ಆಯ್., ಸಂಪುಟ- XX, ನಂ. ೩೫, ಕಲ್ಕೇರಿ ಕ್ರಿ.ಶ. ೧೦೫೫, ಡಿಸೆಂಬರ್ ೨೫.

೧೯. ಎ.ಕ., ಸಂಪುಟ-VII, ನಂ. ೮೩, ಶಿಕಾರಿಪುರ, ಕ್ರಿ.ಶ. ೧೦೫೮, ಫೆಬ್ರುವರಿ ೧೨.

೨೦. ಎ.ಪಿ.ಜಿ.ಎ.ಎಸ್., ಸಂಪುಟ-೯, ನಂ. ೧೭, ದಿಗ್ಗಾಂವ, ಕ್ರಿ.ಶ. ೧೧೦೭, ಡಿಸೆಂಬರ್ ೧೬.

೨೧. ಎಸ್.ಆಯ್.ಆಯ್., ಸಂಪುಟ-IX(1), ನಂ. ೧೫೩, ಅಂಬಳಿ, ಕ್ರಿ.ಶ. ೧೦೮೩, ಜನೇವರಿ ೨೦.

೨೨. ಅದೇ, ನಂ. ೨೦೪, ತ್ರಿಪುರಾಂತಕಂ, ಕ್ರಿ.ಶ. ೧೧೨೨, ಅಕ್ಟೋಬರ್ ೧೭.

೨೩. ಜೆ.ಬಿ.ಬಿ.ಆರ್. ಎ.ಎಸ್., ಸಂಪುಟ-XXVIII, ನಂ.VIII, ಕೋನೂರು, ಕ್ರಿ.ಶ. ೧೦೮೮.

೨೪. ಎಸ್.ಆಯ್.ಆಯ್., ಸಂಪುಟ-VI, ನಂ. ೧೧೩, ಚಿಬ್ರೋಲು.

೨೫. ಎ.ಇ., ಸಂಪುಟ-XIII, ನಂ. ೨೮ (A), ಕುಂಭಾಪುರ, ಕ್ರಿ.ಶ. ೧೧೨೫, ಆಗಸ್ಟ್ ೨೮.

೨೬. Bhilhana : *Vikramankadevacaritam,* Tr. By : Sureschandra Banarji and Amalkumar Gupta, Calcutta, Sambodhi, 1965.

೨೭. ಎ.ಆರ್.ಐ.ಇ. ೧೯೪೬, ನಂ. ೨೨೭, ನರೇಗಲ್ಲು.

೨೮. ಎಸ್.ಆಯ್.ಆಯ್., ಸಂಪುಟ- IX(1), ನಂ. ೧೯೫, ರಂಗಾಪುರಂ, ಕ್ರಿ.ಶ. ೧೧೧೬, ಡಿಸೆಂಬರ್ ೨೪.

೨೯. ಅದೇ, ಸಂಪುಟ- XX, ನಂ. ೫೧, ಕುಳೇಕುಮಟ್ಗಿ, ಕ್ರಿ.ಶ. ೧೦೭೭, ಡಿಸೆಂಬರ್ ೨೪.

೩೦. ಎ.ಇ., ಸಂಪುಟ-XV, ನಂ. ೬ (I), ಸೂಡಿ, ಕ್ರಿ.ಶ. ೧೦೮೪, ಡಿಸೆಂಬರ್ ೨೪.

೩೧. Desai, P.B., *Jainism in South India and Some Jaina Epigraphs*, ನಂ. ೨, ಹುಣಸಿಹಡಗಲಿ, ಕ್ರಿ.ಶ. ೧೦೯೮, ಜನೇವರಿ ೫.

೩೨. ಎಸ್.ಆಯ್.ಆಯ್., ಸಂಪುಟ- XVIII, ನಂ. ೯೪, ದೇವರಗೆಣ್ಣೂರು, ಕ್ರಿ.ಶ. ೧೦೮೯, ಜೂನ್ ೧೧.

೩೩. ಅದೇ, ಸಂಪುಟ- IX(1), ನಂ. ೧೫೯, ಸಿರಗುಪ್ಪ, ಕ್ರಿ.ಶ. ೧೦೯೨.

೩೪. ಎಚ್ ಆ್ಯಂಡ್ ಸಿ. ನಂ. ೨೧, ಇಂಗಳಗಿ, ಕ್ರಿ.ಶ. ೧೦೯೪, ಫೆಬ್ರುವರಿ ೨೭.

೩೫. ಎಸ್.ಆಯ್.ಆಯ್., ಸಂಪುಟ- XX, ನಂ. ೬೧, ಕನ್ನೊಳ್ಳಿ, ಕ್ರಿ.ಶ. ೧೦೯೪, ಮಾರ್ಚ ೧೯.

೩೬. ಎಚ್ ಆ್ಯಂಡ್ ಸಿ. ನಂ. ೨೨, ಜಗದಾಳ, ಕ್ರಿ.ಶ. ೧೦೯೬.

೩೭. ಎ.ಪಿ.ಜಿ.ಎ.ಎಸ್. -೩, ಕನ್ನಡ ಇನ್ಸ್ಕ್ರಿಪ್ಷನ್ಸ್ ಆಫ್ ಎ.ಪಿ. ೩೬, ಕ್ರಿ.ಶ. ೧೧೦೧, ಡಿಸೆಂಬರ್ ೨೪.

೩೮. ಎಸ್.ಆಯ್.ಆಯ್., ಸಂಪುಟ- IX(1), ನಂ. ೧೭೫, ಚಿನ್ನತುಂಬಳಂ, ಕ್ರಿ.ಶ. ೧೧೦೭, ಡಿಸೆಂಬರ್ ೨೪.

೩೯. Ritti, S.H. and Shelke, G.C., (Ed), *Inscriptions from Nanded Dist,* No. 23, 1122 A.D., December, 6.

೪೦. Ibid.

೪೧. Ritti, S.H. and Shelke, G.C., (Ed), *Corpus of Inscriptions in the Kannada Districts of Hyderabad State* (HAS 18) No. 9, Lingasur, 1124 A.D., December 24.

೪೨. ಎಸ್.ಆಯ್.ಆಯ್., ಸಂಪುಟ- XI (II), ನಂ. ೨೦೬, ಸಿರೂರು.

೪೩. ಎಸ್.ಆಯ್.ಆಯ್., ಸಂಪುಟ- XVIII, ನಂ. ೧೨೭, ಹಿರೇಲಿಂಗದಹಳ್ಳಿ.

೪೪. ಪುತ್ರಿಯ ಹೆಸರು ತಿಳಿದುಬರುವುದಿಲ್ಲ.

೪೫. ಕೆ.ಆಯ್., ಸಂಪುಟ-V, ನಂ. ೩೩, ಗೌಳಿಹಳ್ಳಿ, ಕ್ರಿ.ಶ. ೧೧೭೬ ಫೆಬ್ರುವರಿ ೨೪.

೪೬. ನಾಗಯ್ಯ. ಜಿ.ಎಂ., *ಆರನೆಯ ವಿಕ್ರಮಾದಿತ್ಯನಶಾಸನಗಳು : ಒಂದು ಅಧ್ಯಯನ*, ಪು. ೨೮.

೪೭. ಎಸ್.ಆಯ್.ಆಯ್., ಸಂಪುಟ- XI (II), ನಂ. ೨೦೪, ನೀಲ್ಗುಂದ.

೪೮. Ritti, S.H. and Shelke, G.C., (Ed), *Inscriptions from Nanded Dist,*No. 23, Bhimra, 1122 A.D., December, 06.

೪೯. ಎ.ಪಿ.ಜಿ.ಎ.ಎಸ್. -೩, ಕನ್ನಡ ಇನ್ಸ್ಕ್ರಿಪ್ಷನ್ಸ್ ಆಫ್ ಎ.ಪಿ. *I*, ಆಳಂದ, ಕ್ರಿ.ಶ. ೧೦೮೨.

೫೦. Desai, P.B., *Jainism in South India and Some Jaina Epigraphs*, ನಂ. ೨, ಹುಣಸಿಹಡಗಲಿ, ಕ್ರಿ.ಶ. ೧೦೯೮.

೫೧. ಎ.ಪಿ.ಜಿ.ಎ.ಎಸ್. -೩, ಕನ್ನಡ ಇನ್ಸ್ಕ್ರಿಪ್ಷನ್ಸ್ ಆಫ್ ಎ.ಪಿ. *I*, ಆಳಂದ, ಕ್ರಿ.ಶ. ೧೦೮೨, ಡಿಸೆಂಬರ್ ೨೫.

೫೨. Desai, P.B., *Jainism in South India and Some Jaina Epigraphs*, ನಂ. ೨, ಹುಣಸಿಹಡಗಲಿ, ಕ್ರಿ.ಶ. ೧೦೯೮.

೫೩. ಎಚ್. ಆ್ಯಂಡ್ ಸಿ. ನಂ. ೪೫, ಕಾಳಗಿ, ಕ್ರಿ.ಶ. ೧೧೧೦.

೫೪. ಹನುಮಾಕ್ಷಿ ಗೋಗಿ (ಸಂ), *ಸುರಪುರ ತಾಲೂಕಿನ ಶಾಸನಗಳು*, ನಂ. ೭೫, ರಾಜನಕೋಳೂರು, ಕ್ರಿ.ಶ. ೧೦೯೭.

೫೫. ಎಸ್.ಆಯ್.ಆಯ್., ಸಂಪುಟ- XI (II), ನಂ. ೧೪೨, ಕಟ್ಗೇರಿ, ಕ್ರಿ.ಶ. ೧೦೯೬, ಡಿಸೆಂಬರ್ ೨೨ ಮತ್ತು ೨೪.

೫೬. Desai, P.B., *Jainism in South India and Some Jaina Epigraphs*, ನಂ. ೨, ಹುಣಸಿಹಡಗಲಿ, ಕ್ರಿ.ಶ. ೧೦೯೮, ಜನೆವರಿ ೫.

೫೭. ಎಸ್.ಆಯ್.ಆಯ್., ಸಂಪುಟ- IX (I), ನಂ. ೧೬೧, ಚಿನ್ನತುಂಬಳ, ಕ್ರಿ.ಶ. ೧೦೯೨, ಏಪ್ರಿಲ್ ೨೪.

೫೮. ಅದೇ, ನಂ. ೧೬೧, ಚಿನ್ನತುಂಬಳ, ಕ್ರಿ.ಶ. ೧೦೯೨, ಏಪ್ರಿಲ್ ೨೪.

೫೯. ಆದೇ, ಸಂಪುಟ- XVIII, ನಂ. ೯೭, ಬಂಕಾಪುರ, ಕ್ರಿ.ಶ. ೧೦೯೦, ಫೆಬ್ರುವರಿ ೭.

೬೦. ದೇಸಾಯಿ (ಪಾಂಡುರಂಗರಾಯ), *'ಕರ್ನಾಟಕದ ಕಲಚೂರಿಗಳು'*, ಪುಟ. ೩೯-೪೦.

೬೧. ಎ.ಆರ್.ಐ.ಇ. ೧೯೬೦-೬೧, ನಂ. ೮೬, ಕೊಲ್ಹಾಪುರ.

೬೨. ಕಲಬುರ್ಗಿ.ಎಂ.ಎಂ. (ಸಂ.) *ಕೊಲ್ಹಾಪುರ ನಿಂಬ ಸಾಮಂತರ ಚರಿತ್ರೆ*, ಪ್ರಸ್ತಾವನೆ. ಪುಟ. III.

೬೩. Bilhana : *Vikramankadeva Caritam,* Tr. by Sures Chandra Banerjee and AmalKumar Gupta, Calcutta, Sambodhi, 1965, p. 318.

೬೪. ಕೆ.ಆಯ್. II, ನಂ. ೧೩, ರಾಮತೀರ್ಥ, ಕ್ರಿ.ಶ. ೧೧೧೫ ಫೆಬ್ರುವರಿ ೧೦.

೬೫. ಎಸ್.ಆಯ್.ಆಯ್., ಸಂಪುಟ- XX , ನಂ. ೬೧, ಕನ್ನೊಳ್ಳಿ, ಕ್ರಿ.ಶ. ೧೦೯೪, ಮಾರ್ಚ್ ೧೯.

೬೬. ಎ.ಪಿ.ಜಿ.ಎ.ಎಸ್. -೩, ಕನ್ನಡ ಇನ್ಸ್‌ಕ್ರಿಪ್ಷನ್ಸ್ ಆಫ್ ಎ.ಪಿ. *I,* ಆಳಂದ, ಕ್ರಿ.ಶ. ೧೦೮೨, ಡಿಸೆಂಬರ್ ೨೫.

೬೭. ಎಸ್.ಆಯ್.ಆಯ್., ಸಂಪುಟ- XI (II), ನಂ. ೧೩೯, ಹೆಬ್ಬಾಳ, ಕ್ರಿ.ಶ. ೧೦೯೫, ಡಿಸೆಂಬರ್ ೨೪.

೬೮. ಕೆ.ಆಯ್., ಸಂಪುಟ- II, ನಂ. ೧೩, ರಾಮತೀರ್ಥ, ಕ್ರಿ.ಶ. ೧೧೧೫ ಫೆಬ್ರುವರಿ ೧೦.

೬೯. ಅದೇ, ನಂ. ೧೪, ಉಮರಾಣಿ, ಕ್ರಿ.ಶ. ೧೧೨೩ ಜನೇವರಿ ೨೨.

೭೦. ಎಸ್.ಆಯ್.ಆಯ್., ಸಂಪುಟ- XI (II), ನಂ. ೧೩೯, ಹೆಬ್ಬಾಳ, ಕ್ರಿ.ಶ. ೧೦೯೫, ಡಿಸೆಂಬರ್, ೨೪.

೭೧. ಅದೇ, ಸಂಪುಟ- XX, ನಂ. ೭೧, ಅಗರಖೇಡ, ಕ್ರಿ.ಶ. ೧೧೦೯, ನವೆಂಬರ್, ೮.

೭೨. ಅದೇ, ಸಂಪುಟ- XI (II), ನಂ. ೧೩೯, ಹೆಬ್ಬಾಳ, ಕ್ರಿ.ಶ. ೧೦೯೫, ಡಿಸೆಂಬರ್, ೨೪.

೭೩. ಎಚ್ ಆ್ಯಂಡ್ ಸಿ. ನಂ. ೫೩ ಬಂಧರವಾಡ, ಕ್ರಿ.ಶ. ೧೧೧೮, ಜೂನ್ ೨೮.

೭೪. ಎಸ್.ಆಯ್.ಆಯ್., ಸಂಪುಟ- XX, ನಂ. ೭೧, ಅಗರಖೇಡ, ಕ್ರಿ.ಶ. ೧೧೦೯, ನವೆಂಬರ್, ೮.

೭೫. ಅದೇ, ಸಂಪುಟ- XI (II), ನಂ. ೧೬೨, ದಿಣ್ಣಾವಾರ ಕ್ರಿ.ಶ. ೧೧೧೨, ಡಿಸೆಂಬರ್ ೨೯.

೭೬. ಎ.ಪಿ.ಜಿ.ಎ.ಎಸ್. -೩, ಕನ್ನಡ ಇನ್ಸ್‌ಕ್ರಿಪ್ಷನ್ಸ್ ಆಫ್ ಎ.ಪಿ. *I,* ಆಳಂದ, ಕ್ರಿ.ಶ. ೧೦೮೨, ಡಿಸೆಂಬರ್ ೨೫.

೭೭. ಎಚ್ ಆ್ಯಂಡ್ ಸಿ. ನಂ. ೫೪, ಮಾಶಾಳ, ಕ್ರಿ.ಶ. ೧೧೧೯, ಡಿಸೆಂಬರ್ ೨೮.

೭೮. ಎಸ್.ಆಯ್.ಆಯ್., ಸಂಪುಟ- XVIII, ನಂ. ೧೨೫, (?) ಬಿಜಾಪುರ ಮ್ಯೂಜಿಯಂನಲ್ಲಿಯ ಶಾಸನ ನಂ. (A-23).

೭೯. Shrinivas Ritti and Shri Anand Kumbar., *Inscriptions from Sollapur District,* ನಂ. ೪, ತೀರ್ಥ, ಕ್ರಿ.ಶ. ೧೧೦೮, ಡಿಸೆಂಬರ್ ೬.

೮೦. ಎಚ್ ಆ್ಯಂಡ್ ಸಿ. ನಂ. ೫೪, ಮಾಶಾಳ, ಕ್ರಿ.ಶ. ೧೧೧೯, ಡಿಸೆಂಬರ್ ೨೮.

೮೧. ಎಸ್.ಆಯ್.ಆಯ್., ಸಂಪುಟ- XI (II), ನಂ. ೧೩೯, ಹೆಬ್ಬಾಳ, ಕ್ರಿ.ಶ. ೧೦೯೫, ಡಿಸೆಂಬರ್, ೨೪.

೮೨. ಎ.ಪಿ.ಜಿ.ಎ.ಎಸ್. -೩, ಕನ್ನಡ ಇನ್ಸ್‌ಕ್ರಿಪ್ಷನ್ಸ್ ಆಫ್ ಎ.ಪಿ. *I,* ಆಳಂದ, ಕ್ರಿ.ಶ. ೧೦೮೨, ಡಿಸೆಂಬರ್ ೨೫.

೮೩. ಎಚ್ ಆ್ಯಂಡ್ ಸಿ. ನಂ. ೫೩, ಅಫ್ಜಲಪುರ, ಕ್ರಿ.ಶ. ೧೧೨೮, ಜೂನ್ ೨೮.

೮೪. Shrinivas Ritti and Anand Kumbar., *Inscriptions from Sollapur District,* ನಂ. ೫, ಭಂಡರಕರಠೆ, ಕ್ರಿ.ಶ. ೧೧೧೯, ಫೆಬ್ರುವರಿ ೨೩.

೮೫. ಎಸ್.ಆಯ್.ಆಯ್., ಸಂಪುಟ- XI (II), ನಂ. ೧೩೯, ಹೆಬ್ಬಾಳ, ಕ್ರಿ.ಶ. ೧೦೯೫, ಡಿಸೆಂಬರ್, ೨೪.

೮೬. ಕೆ.ಆಯ್., ಸಂಪುಟ- II, ನಂ. ೧೩, ರಾಮತೀರ್ಥ, ಕ್ರಿ.ಶ. ೧೧೧೫ ಫೆಬ್ರುವರಿ ೧೦.

೮೭. ಎಚ್ ಆ್ಯಂಡ್ ಸಿ. ನಂ. ೫೩ ಬಂಧರವಾಡ, ಕ್ರಿ.ಶ. ೧೧೧೮, ಜೂನ್ ೨೮.

೮೮. ಎಚ್ ಆ್ಯಂಡ್ ಸಿ. ನಂ. ೫೪, ಮಾಶಾಳ, ಕ್ರಿ.ಶ. ೧೧೧೯, ಡಿಸೆಂಬರ್ ೨೮.

೮೯. ಎಸ್.ಆಯ್.ಆಯ್., ಸಂಪುಟ- XX, ನಂ. ೭೧, ಅಗರಖೇಡ, ಕ್ರಿ.ಶ. ೧೧೧೯, ನವೆಂಬರ್, ೮.

೯೦. Shrinivas Ritti and Anand Kumbar., *Inscriptions from Sollapur District,* ನಂ. ೩, ಮರಡಿ, ಕ್ರಿ.ಶ. ೧೧೦೭, ಜನೆವರಿ ೨೬.

೯೧. Kundanagar K. G.(Ed), *Inscriptions in Northern Karnataka and the Kolhapur State,* No. 3, 1079, December 26, 1110 A.D., October 29.

೯೨. ಎಸ್.ಆಯ್.ಆಯ್., ಸಂಪುಟ- IX (I), ನಂ. ೨೨೧, ತೊಗರಕುಂಟ.

೯೩. ಎ.ಪಿ.ಜಿ.ಎ.ಎಸ್. -೩, ಕನ್ನಡ ಇನ್ಸ್‌ಕ್ರಿಪ್ಷನ್ಸ್ ಆಫ್ ಎ.ಪಿ. *Mn-39,* ಅಳವನಪಲ್ಲಿ, ಕ್ರಿ.ಶ. ೧೧೧೦, ಅಕ್ಟೋಬರ್ ೨೯.

೯೪. ಎ.ಆರ್.ಆಯ್.ಇ. ೧೯೬೦-೬೧, ನಂ. ೮೬, ಕೊಲ್ಹಾಪುರ.

೯೫. ಎಸ್.ಆಯ್.ಆಯ್., ಸಂಪುಟ- IX (I), ನಂ. ೧೯೦, ಪೆದ್ದಹೊಟೂರು, ಕ್ರಿ.ಶ. ೧೧೧೩, ಅಕ್ಟೋಬರ್ ೩೦.

೯೬. ಎ.ಪಿ.ಜಿ.ಎ.ಎಸ್. -೩, ಕನ್ನಡ ಇನ್ಸ್‌ಕ್ರಿಪ್ಷನ್ಸ್ ಆಫ್ ಎ.ಪಿ. *Mn-41,* ಬೋಧಪುರ, ಕ್ರಿ.ಶ. ೧೧೨೧, ಆಗಸ್ಟ್ ೧೪.

೯೭. ಎಸ್.ಆಯ್.ಆಯ್., ಸಂಪುಟ- IX (I), ನಂ. ೨೨೬, ಕರಕಂತಪುರ, ಕ್ರಿ.ಶ. ೧೧೩೨, ಮಾರ್ಚ್ ೨೩.

೯೮. ಎ.ಪಿ.ಜಿ.ಎ.ಎಸ್. -೩, ಕನ್ನಡ ಇನ್ಸ್‌ಕ್ರಿಪ್ಷನ್ಸ್ ಆಫ್ ಎ.ಪಿ. *Mn-41,* ಬೋಧಪುರ, ಕ್ರಿ.ಶ. ೧೧೨೧, ಆಗಸ್ಟ್ ೧೪.

೯೯. ಅದೇ, ಅವಂಚ, ಕ್ರಿ.ಶ. ೧೧೧೩, ಜುಲೈ ೨೮.

೧೦೦. ಅದೇ, ಬೋಧಪುರ, ಕ್ರಿ.ಶ. ೧೧೨೧, ಆಗಸ್ಟ್ ೧೪.

೧೦೧. ಎಸ್.ಆಯ್.ಆಯ್., ಸಂಪುಟ- IX (I), ನಂ. ೧೯೦, ಪೆದ್ದಹೊಟೂರು, ಕ್ರಿ.ಶ. ೧೧೧೩, ಅಕ್ಟೋಬರ್ ೩೦.

೧೦೨. ಎ.ಪಿ.ಜಿ.ಎ.ಎಸ್. -೩, ಕನ್ನಡ ಇನ್ಸ್‌ಕ್ರಿಪ್ಷನ್ಸ್ ಆಫ್ ಎ.ಪಿ. *Mn-39,* ಅಳವನಪಲ್ಲಿ, ಕ್ರಿ.ಶ. ೧೧೧೦, ಅಕ್ಟೋಬರ್ ೨೯.

೧೦೩. ಎಸ್.ಆಯ್.ಆಯ್., ಸಂಪುಟ- IX (I), ನಂ. ೨೦೨, ರಾಮರಾಜುಪಳ್ಳ, ಕ್ರಿ.ಶ. ೧೧೨೨, ಸೆಪ್ಟಂಬರ್ ೧೭.

೧೦೪. ಎ.ಪಿ.ಜಿ.ಎ.ಎಸ್. -೩, ಕನ್ನಡ ಇನ್ಸ್‌ಕ್ರಿಪ್ಷನ್ಸ್ ಆಫ್ ಎ.ಪಿ. *Mn-39,* ಅಳವನಪಲ್ಲಿ, ಕ್ರಿ.ಶ. ೧೧೧೦, ಅಕ್ಟೋಬರ್ ೨೯.

೧೦೫. ಎಚ್ ಆ್ಯಂಡ್ ಸಿ. ನಂ. ೪೫, ಕಾಳಗಿ, ಕ್ರಿ.ಶ. ೧೧೧೦.

೧೦೬. ಎಸ್.ಆಯ್.ಆಯ್., ಸಂಪುಟ- XX , ನಂ. ೭೨, ಬಿಜಾಪುರ, ಕ್ರಿ.ಶ. ೧೧೧೧, ಏಪ್ರಿಲ್ ೨೪.

೧೦೭. ಜೆ.ಬಿ.ಬಿ.ಆರ್.ಎ.ಎಸ್., ಸಂಪುಟ- XXXVIII, ನಂ. VIII, ೧೦೮೮, ೧೧೨೨.

೧೦೮. ಎಸ್.ಆಯ್.ಆಯ್., ಸಂಪುಟ- XX , ನಂ. ೭೨, ಬಿಜಾಪುರ, ಕ್ರಿ.ಶ. ೧೧೧೧, ಏಪ್ರಿಲ್ ೨೪.

೧೦೯. ಎಚ್ ಆ್ಯಂಡ್ ಸಿ. ನಂ. ೪೫, ಕಾಳಗಿ, ಕ್ರಿ.ಶ. ೧೧೧೦.

೧೧೦. ಎಚ್ ಆ್ಯಂಡ್ ಸಿ. ನಂ. ೫೩ ಬಂಧರವಾಡ, ಕ್ರಿ.ಶ. ೧೧೧೮, ''ಜಯಕರ್ನ್ನಾಟಕು ಮಾರನಾಕುಮಾರನಣ್ಮಪ್ರಿಯ ಸಚಿವಂ ಹಡಪವಳಂ ನಯಮಾಗಿಂ ನೀಲಕಂಠನೆಸೆದು ಧರೆಯೊಳ್''.

೧೧೧. ಎಸ್.ಆಯ್.ಆಯ್., ಸಂಪುಟ- XX , ನಂ. ೭೨, ಬಿಜಾಪುರ, ಕ್ರಿ.ಶ. ೧೧೨೦, ಅಕ್ಟೋಬರ್ ೨೪.

೧೧೨. ಅದೇ,

೧೧೩. ಅದೇ, ಏಪ್ರಿಲ್ ೨೪.

೧೧೪. ಅದೇ, ಅಕ್ಟೋಬರ್ ೨೪.

೧೧೫. ಎಸ್.ಆಯ್.ಆಯ್., ಸಂಪುಟ- XVIII , ನಂ.೧೫೯, ಹಾವೇರಿ, ಕ್ರಿ.ಶ. ೧೧೫೭, ಡಿಸೆಂಬರ್ ೨೦.

೧೧೬. ಅದೇ, ನಂ.೧೫೦, ನರಗುಂದ, ಕ್ರಿ.ಶ. ೧೧೪೭, ಜುಲೈ ೪.

೧೧೭. ಅದೇ, ನಂ.೧೫೯, ನೀರಲಗಿ, ಕ್ರಿ.ಶ. ೧೧೪೮, ಜನೆವರಿ ೫.

೧೧೮. ದೇವರಕೊಂಡಾರೆಡ್ಡಿ, *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೨*, ಕುಕನೂರು, ಕ್ರಿ.ಶ. ೧೧೪೩, ಜುಲೈ ೨೮.

೧೧೯. ಗೋಪಾಲ, ಬಾ. ರಾ., *ಮಾನವಿಕ ಕರ್ನಾಟಕ*, ಸಂ. ೩, ಸಂ. ೪, ಕ್ರಿ.ಶ. ೧೯೭೩.

೧೨೦. ಅದೇ.

೧೨೧. ಹನುಮಾಕ್ಷಿ ಗೋಗಿ (ಸಂ), *ಕಲಬುರ್ಗಿ ಜಿಲ್ಲೆಯ ಶಾಸನಗಳು.*, ನಂ. ೧೭, ಕೊಲ್ಲೂರು, ಕ್ರಿ.ಶ. ೧೧೮೯.

೧೨೨. ಗಣೇಶ, ಕೆ.ಆರ್. (ಸಂ.), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೫*, ನಂ.೫೦೩, ಗಂಗಾಪುರಂ, ಕ್ರಿ.ಶ. ೧೧೩೪, ಜೂನ್ ೮.

೧೨೩. ಅದೇ, ನಂ.೫೮೯, ರಾಚೂರು, ಕ್ರಿ.ಶ. ೧೧೩೬.

೧೨೪. ಅದೇ, ನಂ. ೬೦೪, ಪಟಾನ್‌ಚೇರು, ಕ್ರಿ.ಶ. ೧೧೨೭, ಫೆಬ್ರುವರಿ ೨೦.

೧೨೫. Majumdar, R.D. (Ed.) *The Struggle for Empire*, p. 206.

೧೨೬. Sastry, P.V.P., *Inscriptions of Andhra Pradesh*, Warangal District, No. 36, Introduction p. XVII.

೧೨೭. Ibid, Karimnagar District, No.19.

೧೨೮. Ibid, Introduction, P. XVII.

೧೨೯. ಎ.ಆರ್.ಎಸ್.ಐ.ಇ. ೧೮೯೭, ನಂ. ೧೬೩, ಎಸ್.ಆಯ್.ಆಯ್., ಸಂಪುಟ- VI, ನಂ. ೧೨೩.

೧೩೦. ಎ.ಆರ್.ಎಸ್.ಐ.ಇ. ೧೯೨೦, ನಂ. ೩೦೮., ಎಸ್.ಆಯ್.ಆಯ್., ಸಂಪುಟ- VI, ನಂ. ೧೬೮.

೧೩೧. ಎ.ಆರ್.ಎಸ್.ಐ.ಇ. ೧೯೨೦, ನಂ. ೮೧೧.

೧೩೨. ಎಸ್.ಆಯ್.ಆಯ್., ಸಂಪುಟ- IX PI, ನಂ. ೨೧೩.

೧೩೩. ಅದೇ, ನಂ. ೨೨೦.

೧೩೪. ಎ.ಆರ್.ಎಸ್.ಐ.ಇ. ೧೯೦೬, ನಂ. ೩೯೬.

೧೩೫. Srisa Chandra Vasu (Ed), *Vijnanesvara,* p. 204.

೧೩೬. ಎ.ಆರ್.ಐ.ಇ. ೧೮೯೩, ನಂ.೩೩೬.

೧೩೭. ಅದೇ, ನಂ.೨೪೩.

೧೩೮. ಎಸ್.ಆಯ್.ಆಯ್., ಸಂಪುಟ- XX, ನಂ. ೯೮.

೧೩೯. ಎ.ಆರ್.ಐ.ಇ. ೧೯೫೮-೫೯, APP-B, ನಂ. ೭೧೫.

೧೪೦. ಎ.ಕ., ಸಂಪುಟ- VII SK. 100.

೧೪೧. ಎಸ್.ಆಯ್.ಆಯ್., ಸಂಪುಟ- XX , ನಂ. ೧೦೧.

೧೪೨. ಎ.ಆರ್.ಐ.ಇ. ೧೯೬೩-೬೪, APP-B, ನಂ. ೩೫೮.

೧೪೩. Ritti, S.H. and Shelke, G.C., (Ed.) *Inscriptions from Nanded District,* No. 30.

೧೪೪. ಎ.ಕ., ಸಂಪುಟ- IV KP. 78.

೧೪೫. ಎ.ಆರ್.ಐ.ಇ. ೧೯೪೫-೪೬, APP-B, ನಂ. ೨೪೮.

೧೪೬. ಎ.ಎಂ.ಆರ್. ೧೯೨೬, ಪು. ೫೨.

೧೪೭. ಎ.ಕ., ಸಂಪುಟ- VI CM. 71.

೧೪೮. ಎ.ಆರ್.ಐ.ಇ. ೧೯೪೪-೪೫, BK, ನಂ. ೫೮.

೧೪೯. ಎ.ಕ., ಸಂಪುಟ- IV BL. 17, 52.

೧೫೦. ಎಸ್.ಆಯ್.ಆಯ್., ಸಂಪುಟ- XVIII , ನಂ. ೧೪೦.

೧೫೧. ಎ.ಕ., ಸಂಪುಟ- XII GB. 13.

೧೫೨. ಅದೇ, ಸಂಪುಟ- V BI. 124.

೧೫೩. ಅದೇ, ಸಂಪುಟ- IV BL. 17.

೧೫೪. ಬಿ.ಜಿ. I P. II, ಪು. ೫೪೮.

೧೫೫. ಗೋಪಾಲ, ಬಾ. ರಾ., ಮಾನವಿಕ ಕರ್ನಾಟಕ, ಸಂ.೩, ಸಂ.೩, ಮೇ. ೧೯೭೩.

ಅಧ್ಯಾಯ-ಮೂರು Chapter-3

ಆಡಳಿತ ವಿಭಾಗಗಳು

ವಿಸ್ತಾರವಾದ ಸಾಮ್ರಾಜ್ಯವನ್ನು ಕೇವಲ ಒಬ್ಬ ವ್ಯಕ್ತಿಯಿಂದ ಆಡಳಿತ ನಡೆಸುವುದು ಕಷ್ಟದ ಕೆಲಸವೆನ್ನಬಹುದು. ನಾವು ಇಂದಿಗೂ ಕೂಡ ಆಡಳಿತ ಸೌಕರ್ಯಕ್ಕಾಗಿ ರಾಷ್ಟ್ರವನ್ನು ರಾಜ್ಯ-ವಿಭಾಗ, ಜಿಲ್ಲೆ-ತಾಲೂಕು-ಗ್ರಾಮ ಎಂದು ವಿಭಾಗಿಸಿ ಕ್ರಮವಾಗಿ ಇವುಗಳ ಮೇಲೆ ರಾಷ್ಟ್ರಪತಿ-ರಾಜ್ಯಪಾಲ-ವಿಭಾಗಾಧಿಕಾರಿ-ಜಿಲ್ಲಾಧಿಕಾರಿ ತಹಶೀಲ್ದಾರರುಗಳನ್ನು ನೇಮಿಸಲಾಗಿರುತ್ತದೆ. ಇವರಲ್ಲಿ ರಾಷ್ಟ್ರಪತಿಯೇ ಉನ್ನತ ಅಧಿಕಾರಿಯಾಗಿರುವಂತೆ ಹಿಂದಿನ ಕಾಲದಲ್ಲಿ ಚಕ್ರವರ್ತಿಯೇ ಸರ್ವಶ್ರೇಷ್ಠ ಅಧಿಕಾರಿಯಾಗಿದ್ದನು. ಸಾಮ್ರಾಜ್ಯವನ್ನು ಆಡಳಿತದ ಅನುಕೂಲಕ್ಕಾಗಿ ವಿಭಾಗ, ಉಪವಿಭಾಗಗಳನ್ನಾಗಿ ವಿಂಗಡಿಸಿ, ಅವುಗಳಿಗೆ ಆತನು ಅಧಿಕಾರಿಗಳನ್ನು ನೇಮಿಸುತ್ತಿದ್ದನು. ಈ ಪದ್ಧತಿ ಬಹಳ ಪ್ರಾಚೀನ ಕಾಲದಿಂದಲೂ ನಡೆದುಕೊಂಡು ಬಂದಿದೆ. ತೀರಾ ಪ್ರಾಚೀನ ಕಾಲದಲ್ಲಿ ಇಂತಹ ವಿಭಾಗಗಳನ್ನು ಆಹಾರ- ಮಂಡಲ- ಭುಕ್ತಿ- ವಿಷಯ-ದೇಶ ಎಂದು ಮುಂತಾದ ಹೆಸರುಗಳಿಂದ ಕರೆಯಲಾಗುತ್ತಿತ್ತು. ಮಧ್ಯಕಾಲೀನ ಕರ್ನಾಟಕ ಮತ್ತು ಡೆಕ್ಕನ್ ಶಿಲಾ ಶಾಸನಗಳಲ್ಲಿ ಇವುಗಳಿಗೆ ಮಂಡಲ-ವಿಷಯ-ದೇಶ-ನಾಡು-ಕಂಪಣ ಎಂಬ ಹೆಸರುಗಳನ್ನು[1] ಬಳಸಲಾಗಿದೆ.

ಆಡಳಿತ ವಿಭಾಗಗಳ ಹೆಸರು-ಸಂಖ್ಯೆಗಳು :

ಪ್ರಾಚೀನ ಕಾಲದಲ್ಲಿ ಬೆಳ್ವೊಲ ದೇಶ, ಗಂಗಮಂಡಲ, ಪುಲಿಗೆರೆ ನಾಡು ಎಂದು ಆಡಳಿತ ವಿಭಾಗಗಳನ್ನು ಕ್ರಮವಾಗಿ ದೇಶ, ಗ್ರಾಮನಾಮಗಳಿಂದ ನಿರ್ದೇಶಿಸಲಾಗುತ್ತಿತ್ತು ಮತ್ತು ಈ ವಿಭಾಗಗಳನ್ನು ದೇಶ, ಮಂಡಲ, ನಾಡು ಎಂದು ಸ್ಪಷ್ಟವಾಗಿ ಕರೆದಿದ್ದಾರೆ. ಅಂದರೆ ಬಹಳಷ್ಟು ಸಲ ತರ್ದವಾಡಿ ಸಾಸಿರ,[2] ಅಲಂದೆ ಸಾಸಿರ,[3] ಪಲಸಿಗೆ ಪನ್ನಿಚ್ಛಾಸಿರ,[4] ಬನವಾಸೆ ಪನ್ನಿಚ್ಛಾಸಿರ,[5] ಸಬ್ಬಿಸಹಸ್ರ,[6] ಸಿಂದವಾಡಿ ಸಾಸಿರ[7] ಎಂದು ಆಡಳಿತ ವಿಭಾಗಗಳ ಮುಂದೆ ಸಂಖ್ಯೆ ಕಂಡುಬರುತ್ತದೆ. ಆದರೆ ಈ ಸಂಖ್ಯೆಗಳು ಏನನ್ನು ಸೂಚಿಸುತ್ತಿರಬಹುದು ಎಂಬುದರ ಬಗ್ಗೆ ವಿದ್ವಾಂಸರಲ್ಲಿ ಸಾಕಷ್ಟು ಭಿನ್ನಭಿಪ್ರಾಯಗಳಿವೆ. ಮತ್ತು ಇದನ್ನು ಕುರಿತು ಚರ್ಚೆಗಳೂ ನಡೆದಿವೆ. ಆದರೆ ಬಿ.ಎಲ್.ರೈಸ್‌ರವರು[8] ''ಇವು ಆದಾಯದ ಮೊತ್ತವನ್ನು ಸೂಚಿಸುತ್ತವೆ'' ಎಂದು ಹೇಳಿದ್ದಾರೆ. ''ಪ್ರಾಚೀನ ಕರ್ನಾಟಕದ ವಿಭಾಗಗಳ ಹೆಸರುಗಳ ಮುಂದೆ ಇರುವ ಸಂಖ್ಯೆಗಳು ಅದರೊಳಗಿನ ನಾಡುಗಳ ಸಂಖ್ಯೆಯನ್ನೋ ಅಥವಾ ಆದಾಯದ ಮೊತ್ತವನ್ನೋ ಸೂಚಿಸುತ್ತಿರಬೇಕು'' ಎಂದು ಇಂಪೀರಿಯಲ್ ಗೆಜೆಟಿಯರ್ ಆಫ್ ಇಂಡಿಯಾ್‌ದಲ್ಲಿ ಹೇಳಿದೆ. "Nolambalige-1000 means the district of Nolambalige consisting of 1000 Villages and hamletsï" ಎಂದು ನೊಳಂಬಳಿಗೆ ೧೦೦೦ವನ್ನು ಉಲ್ಲೇಖಿಸಿ ಎನ್.ಲಕ್ಷ್ಮೀನಾರಾಯಣರವರು[10] ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಇದೇ ಮಾತನ್ನು ಪುಷ್ಟೀಕರಿಸುವ ಅರ್ಥದಲ್ಲಿಯೇ ಫ್ಲೀಟರವರು[11] ''ವಿಭಾಗದ ಹೆಸರುಗಳ ಮುಂದಿರುವ ಸಂಖ್ಯೆ ಆ ವಿಭಾಗ

ಒಳಗೊಂಡಿರುವ ಗ್ರಾಮಗಳ ಸಂಖ್ಯೆಯನ್ನು ಸೂಚಿಸುತ್ತದೆ''ಎಂದಿದ್ದಾರೆ. ಹೀಗಾಗಿ ಫ್ಲೀಟ್ ಮತ್ತು ಎನ್.ಲಕ್ಷ್ಮೀನಾರಾಯಣರ ಅಭಿಪ್ರಾಯ ಸರಿಯಾಗಿದೆ. ಏಕೆಂದರೆ ಇದಕ್ಕೆ ಸಾಕಷ್ಟು ಶಾಸನಾಧಾರಗಳಿವೆ.

ನರಗುಂದ[೧೨] ಶಾಸನದಲ್ಲಿ ''ಬೆಣ್ಣೆದಡಿಯೆಪ್ಪತ್ತರೊಳಗಣ(ರ).....ಹಟ್ಟಿಯೆಂಬ ಗ್ರಾಮಮಂ''ಎಂದಿದೆ. ಅಂದರೆ ಬೆಣ್ಣೆದಡಿ-೭೦ ಗ್ರಾಮಗಳಲ್ಲಿ ಹಟ್ಟಿಯೂ ಒಂದು ಗ್ರಾಮ ಎಂದರ್ಥ. ಇದೇರೀತಿ ರಾಮದುರ್ಗ[೧೩] ಶಾಸನದಲ್ಲಿ ''ಸಿಂದವಾಡಿ ಸಾವಿರದೊಳಗಣ ತಮ್ಮೊಳ್ಕೆಯ ಬಾಡಂ''ಎಂದಿದೆ ಮತ್ತು ಅಸುಂಡಿ[೧೪] ಶಾಸನದಲ್ಲಿ ''ಸತ್ತಳಿಗೆಯಪ್ಪತ್ತರ ಬಳಿಯ ಬಾಡಂ ಹಸುಣ್ಡಿ''ಎಂದು ಬರುತ್ತವೆ. ಇಂತಹ ಅನೇಕ ಉದಾಹರಣೆಗಳು ಶಾಸನಗಳಲ್ಲಿ ನಮಗೆ ಸಿಗುತ್ತವೆ. ಇದರಿಂದ ವಿಭಾಗಗಳ ಹೆಸರಿನೊಂದಿಗೆ ಇರುವ ಅಂಕಿ ಗ್ರಾಮ ಅಥವಾ ಊರುಗಳ ಸಂಖ್ಯೆಯನ್ನು ಸೂಚಿಸುತ್ತದೆ ಎಂಬುದು ಸ್ಪಷ್ಟವಾಗುತ್ತದೆ. ಡಾ. ರಿತ್ತಿಯವರು ಕ್ರಿ.ಶ. ೮೬೦ರ ಕೊಣ್ಣೂರು ಶಾಸನದ ಆಧಾರದ ಮೇಲೆ ಕೊಳನೂರು-೩೦ರಲ್ಲಿಯ ಗ್ರಾಮಗಳನ್ನು ಹೀಗೆ ಗುರುತಿಸಿದ್ದಾರೆ.

ಕೊಳನೂರು (ಕೊಣ್ಣೂರು), ಬೆಳ್ಳೇರು (ಬೆಳ್ಳೇರಿ), ಬೆಂಚನೂರು (ಬೆಣ್ಣೂರು), ಸುಳ್ಳಸ ಮುಸುಡಗೇರಿ (ಮುಚ್ಚಗೇರಿ), ಮತ್ತಿಕಟ್ಟಿ (ಮತ್ತೀಕಟ್ಟಿ), ನೀಲಗುಂದಗೆ (ನೀಲಗುಂದ), ತಲಖೇಡ (ತಲಕವಾಡ), ಆಲೂರು, ಇಂಡುಗಲ್ಲು (ಇಡುಗಲ್ಲು), ನೇರಿಲಗೆ (ನೀರಲಗಿ), ಹಾಗನೂರು, ಬಡಿಟ್ಟಿಗೆ (ವಡವಟ್ಟಿ) ಕಕೆಯನೂರು (ಕುಕನೂರು), ಅವರವಾಡಿ, ಕಿತ್ತಪೊಳೆ (ಕಿತ್ತಳೆ), ಪಿರಸಿಂಗಿ (ಸಿರಸಂಗಿ), ಮುನಿವಳ್ಳಿ (ಮುನವಳ್ಳಿ), ಮುಡುಗುಂದಿ, ಸಂಗಮ, ಬೇಹೂರು, ಪಾವನನಗೇರಿ, ಹೊಸಪೊಳಲು, ಉಂತಕೂರು, ಸಿರಿಮಲೆ, ಸಿರಿವೊಳಲು, ಇಂಚಗೇರೆ, ಕೊತ್ತಸೆ ಮತ್ತು ಮಾವಿನೂರು ಎಂದು ೨೯ ಹಳ್ಳಿಗಳನ್ನು ಗುರುತಿಸಿದ್ದಾರೆ.[೧೫] ಹೀಗಾಗಿ ಅಂಕಿಗಳು ಗ್ರಾಮಗಳನ್ನು ಕುರಿತು ಹೇಳುತ್ತವೆ ವಿನಃ ಆದಾಯವನ್ನಲ್ಲ, ಆದರೂ ಬನವಾಸಿ-೧೨೦೦೦, ಗಂಗವಾಡಿ-೯೬೦೦೦ ಇವುಗಳ ಗ್ರಾಮಗಳನ್ನು ಗುರುತಿಸುವುದು ಕಷ್ಟದ ಕೆಲಸವೇ.

ನಾಡು :

ವಿದ್ವಾಂಸರು ಈ ವರೆಗೆ 'ಕಂಪಣ'ವೆಂದರೆ ಸಣ್ಣ ವಿಭಾಗ 'ನಾಡು'ಎಂದರೆ ದೊಡ್ಡ ವಿಭಾಗ ಎಂದು ಅರ್ಥೈಸಿದ್ದಾರೆ, ಆದರೆ ನಾಡು ಎಂಬ ಪದವನ್ನು ಶಾಸನಗಳಲ್ಲಿ ದೊಡ್ಡ ಹಾಗೂ ಸಣ್ಣ ವಿಭಾಗಗಳಿಗೂ ಬಳಸಲಾಗಿದೆ. ಉದಾ : ಮೂವತ್ತಾರುಂಬಾಡದ ಬಳಿಯ ಬಾಡಂ ಬಿಕ್ಕನಾಡ,[೧೬] ತರ್ದ್ದವಾಡಿನಾಡಂ,[೧೭] ಪಲಸಿಗೆ ನಾಡೋಳ್,[೧೮] ಬನವಸೆನಾಡ್[೧೯] ಈ ರೀತಿ ತರ್ದ್ದವಾಡಿ-೧೦೦೦, ಪಲಸಿಗೆ-೧೨೦೦೦, ಬನವಾಸೆ-೧೨೦೦ ಅನ್ನು 'ನಾಡು'ಎಂದೇ ಕರೆಯಲಾಗಿದೆ. ಹೀಗೆ 'ನಾಡು'ಎಂಬ ಪದ ದೊಡ್ಡ, ಸಣ್ಣ ವಿಭಾಗಗಳಿಗೂ ಬಳಸಿರುವದರಿಂದ ಅದು ಸ್ಥೂಲವಾಗಿ 'ಪ್ರದೇಶ'ಎಂಬ ಅರ್ಥವನ್ನು ನಿರ್ದೇಶಿಸಲು ಮಾತ್ರ ಬಳಕೆಯಾಗಿದೆ. ಆದ್ದರಿಂದ 'ನಾಡು' ಎಂದ ತಕ್ಷಣ ದೊಡ್ಡ ವಿಭಾಗವೆಂದು ತಿಳಿಯಬಾರದು ಎಂದೆನಿಸುತ್ತದೆ.

ಕಂಪಣ :

ವಿದ್ವಾಂಸರು ಹೇಳುವಂತೆ. 'ನಾಡು' ವಿಭಾಗಕ್ಕಿಂತ 'ಕಂಪಣ'ವೆಂಬುದು ಚಿಕ್ಕದು. ಆದರೆ ಇದು ಸಣ್ಣ ಸ್ವತಂತ್ರ. ವಿಭಾಗವಲ್ಲ ಒಂದು ಭಾಗದ ಉಪವಿಭಾಗ ಎಂಬ ಅರ್ಥವನ್ನು ನಿರ್ದೇಶಿಸುತ್ತದೆ. ಉದಾ : ಅಲಂದೆ ಸಾಸಿರದ ಕಂಪಣಂ ಬಾಗೇವಾಡಿ ಮೂವತ್ತರ ಬಳಿಯ ಬಾಡಂ[೨೦] ಕೆಲವೆಡೆ ''ಕಂಪಣ'ವೆಂಬ ಶಬ್ದಕ್ಕೆ ಬದಲು 'ಬಳಿಯ' ಅಥವಾ 'ಅ' ಎಂಬ ಷಷ್ಠೀ ಪ್ರತ್ಯಯವನ್ನು ಬಳಸಲಾಗಿದೆ. ೧) ಅವರವಾಡಿ -೩೦೦ರ ಬಳಿಯ ಆಲೂರು, ಗೌಡಗಾವೆ, ಕಾವಳಿಗಾವೆ ದಯಸದಳಿಗೆ, (ಗು)ಕ್ಕಾವೆ, ಬೋರಿಗಾವೆ, ನೇರಿಲಿಗೆ, ಹಿಪ್ಪಳಗಾವೆ, ಸಕ್ಕರಗೆ-೯೦ರ ಬಳಿಯ ಬಾಯಿಗಾವೆಯ[೨೧] ೨) ಸಿಂದವಾಡಿ ಸಾಸಿರದಾದವನಿಯಯ್ನೂರರ ಬಳಿಯ ಗರುಜೆಯೆರ್ಪ್ಪತ್ತಂರೊಳಗಟ್ಟಿಗೆಯೆಂಬೂರಂ[೨೨] ೩) ಬೆಣ್ಣೆದಡಿ ಯೆರ್ಪ್ಪತ್ತೀರೊಳಗಣ(ರ) ಹಟ್ಟಿಯೆಂಬ ಗ್ರಾಮಮಂ.[೨೩]

೧೦೦ಕ್ಕಿಂತ ಕಡಿಮೆ ಗ್ರಾಮಗಳನ್ನೊಳಗೊಂಡ ಸಣ್ಣ ವಿಭಾಗಗಳನ್ನು ನಿರ್ದೇಶಿಸುವಲ್ಲಿ ಮಾತ್ರ 'ಕಂಪಣ' ಪದ ಬಳಕೆಯಾಗಿರುವುದನ್ನು ಗಮನಿಸಬೇಕು. ಒಟ್ಟಿನಲ್ಲಿ ಮಂಡಲ, ನಾಡು, ಕಂಪಣಗಳ ಸ್ವರೂಪ ಮೂಲತಃ ಅನಿರ್ದಿಷ್ಟ. ಹೀಗಿದ್ದೂ ನಾಡು, ಮಂಡಲ, ದೇಶ ದೊಡ್ಡವು; ಕಂಪಣ ಸಣ್ಣದು ಎಂದು ಸ್ಥೂಲವಾಗಿ ಹೇಳಬಹುದು.

ಆಡಳಿತ ವಿಭಾಗಗಳ ಮುಖ್ಯ ಪಟ್ಟಣ :

ಆಡಳಿತ ವಿಭಾಗಗಳ ಮುಖ್ಯ ಪಟ್ಟಣಗಳನ್ನು ಬಹಳ ಸುಲಭವಾಗಿ ಪತ್ತೆ ಹಚ್ಚಬಹುದು. ಬನವಾಸಿ-೧೨೦೦೦ಕ್ಕೆ ಬನವಾಸಿ, ಎಡವಟ್ಟಿ-೭೦ಕ್ಕೆ ಎಡವಟ್ಟಿ, ಸಗರ-೫೦೦ಕ್ಕೆ ಸಗರ, ಸಬ್ಬಿ-೧೦೦೦ಕ್ಕೆ ಸಬ್ಬಿ ಗ್ರಾಮಗಳೇ ರಾಜಧಾನಿಗಳಾಗಿದ್ದವು. ಆದರೆ ಕೆಲವು ಸಂದರ್ಭಗಳಲ್ಲಿ ವಿಭಾಗಗಳಿಗೆ ಮೇಲಿನಂತೆ ಊರಿನ ಹೆಸರು ಇರುವುದಿಲ್ಲ. ಉದಾ : ಹಗರಿಟ್ಟಿಗೆನಾಡು, ಸಿಂದವಾಡಿನಾಡು, ಇಂಥ ಸಂದರ್ಭದಲ್ಲಿ ಇವುಗಳ ರಾಜಧಾನಿಯನ್ನು ಪತ್ತೆ ಹಚ್ಚುವುದು ಒಂದು ಸಮಸ್ಯೆ. ಇಂಥ ಸಂದರ್ಭದಲ್ಲಿ ಕೆಲವೊಮ್ಮೆ ಆ ವಿಭಾಗಗಳ 'ಮೊದಲಬಾಡ'ವೆಂದು ಆ ರಾಜಧಾನಿಯನ್ನು ಸೂಚಿಸಲಾಗಿರುತ್ತದೆ. ಉದಾ : ''ಮುತ್ತಿಗೆ ಮೂವತ್ತರ ಮೊದಲಬಾಡ ಶ್ರೀಮತ್ಸರ್ಬ್ಬನಮಶ್ಯದಗ್ರಹಾರಂ ಮುತ್ತಿಗೆ''[೨೪] ಅಂದರೆ ಮುತ್ತಿಗೆ ಮೂವತ್ತರ ಮೊದಲ ಗ್ರಾಮವಾದ ಮುತ್ತಿಗೆಯೇ ಈ ವಿಭಾಗದ ರಾಜಧಾನಿ'' ಎಂದು ಹೇಳಬಹುದು, ಕೆಲವು ಸಂದರ್ಭಗಳಲ್ಲಿ ಶಾಸನಗಳಲ್ಲಿ ಸ್ಪಷ್ಟವಾಗಿ ರಾಜಧಾನಿಯನ್ನು ಉಲ್ಲೇಖಿಸಿರುವುದು ಕಂಡುಬರುತ್ತದೆ. ಉದಾ :ಮುಳ್ಕಿ ಮುಂನೂರರ ರಾಜಧಾನಿ ನೆಲ್ಲೂರ ಪಟ್ಟಣದಲು[೨೫] ಎಂದು ರಾಜಧಾನಿಯನ್ನು ಸ್ಪಷ್ಟವಾಗಿ ಸೂಚಿಸಿರುವುದು ಕಂಡುಬರುತ್ತದೆ.

ಸಾಮ್ರಾಜ್ಯದ ರಾಜ್ಯಧಾನಿ :

ಇಡೀ ಸಾಮ್ರಾಜ್ಯಕ್ಕೆ ರಾಜಧಾನಿ ಒಂದೇ ಆಗಿರುತ್ತಿತ್ತು. ಮೂರನೆಯ ಸೋಮೇಶ್ವರನ ರಾಜಧಾನಿ 'ಕಲ್ಯಾಣ ನಗರ' ಕೆಲವು ಶಾಸನಗಳಲ್ಲಿ ಮೂರನೆಯ ಸೋಮೇಶ್ವರನು ಬೇರೆ ಬೇರೆ ನೆಲೆವೀಡಿನಿಂದ ಆಳುತ್ತಿದ್ದ ಉಲ್ಲೇಖವಿದೆ.

ನೆಲವಿಡು	ಕಾಲ	ಆಕರ
ಜಯಂತಿಪುರ	ಕ್ರಿ.ಶ.೧೧೨೭ ಡಿಸೆಂಬರ್ ೨೫	ಎಸ್.ಆಯ್.ಆಯ್., ನಂ.೯೮, ಕಡ್ಲೇವಾಡ, ಸಿಂದಗಿ(ತಾ), ಬಿಜಾಪುರ(ಜಿ).
ಕುಪ್ಪ	ಕ್ರಿ.ಶ.೧೧೩೨ ಮಾರ್ಚ್ ೨೩	ಕನ್ನಡ ವಿಶ್ವವಿದ್ಯಾಲಯದ ಶಾಸನ ಸಂಪುಟ - ೫ ನಂ.೨೭೬.
ಕುಪ್ಪ	ಕ್ರಿ.ಶ.೧೧೩೩ ಆಗಸ್ಟ್ ೨	ಕನ್ನಡ ವಿಶ್ವವಿದ್ಯಾಲಯದ ಶಾಸನ ಸಂಪುಟ - ೬ ನಂ.೭೪, ಕರಾಡಖೇಡ, ದೇಗೂರು(ತಾ), ನಾಂದೇಡ(ಜಿ).

ಮೇಲಿನ ನೆಲೆವೀಡುಗಳ ಉಲ್ಲೇಖ ಕೆಲವು ಶಾಸನಗಳಲ್ಲಿ ಬಂದರೆ, ಉಳಿದ ಹೆಚ್ಚಿನ ಎಲ್ಲ ಶಾಸನಗಳಲ್ಲಿ ಮೂರನೆಯ ಸೋಮೇಶ್ವರನು ಕಲ್ಯಾಣದ ನೆಲೆವೀಡಿನಿಂದ ಆಳುತ್ತಿದ್ದನೆಂದು ಹೇಳಲಾಗಿದೆ. ಹುಣಸಗಿ ಶಾಸನದಲ್ಲಿ[೨೬] ಕಲ್ಯಾಣವನ್ನು 'ಕೈಲಾಸ' ಎಂದು ಕರೆಯಲಾಗಿದೆ.

ಮೇಲೆ ಉಲ್ಲೇಖಿಸಿದ ಗ್ರಾಮಗಳೆಲ್ಲವೂ ಚಕ್ರವರ್ತಿಯ ರಾಜಧಾನಿಗಳು ಎಂದು ವಿದ್ವಾಂಸರು ತಪ್ಪು ಭಾವಿಸಿದ್ದಾರೆ. ಆದರೆ ಡಾ.ಎಂ.ಎಂ.ಕಲಬುರ್ಗಿಯವರು[೨೭] ಇವೆಲ್ಲ ಅರಸರು ಪ್ರಯಾಣ ಪ್ರಸಂಗದಲ್ಲಿ ನೆಲೆನಿಂತು ಅಲ್ಲಿಂದಲೇ ದಾನ, ರಾಜಾಜ್ಞೆ ಮೊದಲಾದವುಗಳನ್ನು ಹೊರಡಿಸಿದ ಸ್ಥಳಗಳೆಂದು ಗುರುತಿಸಿದ್ದಾರೆ.

ಆಡಳಿತದ ವಿಭಾಗಗಳು :

ಮೇಲೆ ಹೇಳಿದ ವಿವರಣೆಗಳ ಹಿನ್ನೆಲೆಯಲ್ಲಿ ಮೂರನೆಯ ಸೋಮೇಶ್ವರನ ಆಡಳಿತದ ವಿಭಾಗಗಳನ್ನು ಈಗ ಒಂದೊಂದಾಗಿ ಅಭ್ಯಸಿಸಬಹುದು. ಈ ಪ್ರಸಂಗದಲ್ಲಿ ಮೂರನೆಯ ಸೋಮೇಶ್ವರನು ಅಲ್ಪಕಾಲ ಆಳಿರುವುದರಿಂದ ಈತನ ಶಾಸನಗಳಲ್ಲದೇ ದೀರ್ಘಕಾಲವಾಳಿದ ಈತನ ತಂದೆ ಆರನೆಯ ವಿಕ್ರಮಾದಿತ್ಯ, ಮಗನಾದ ಇಮ್ಮಡಿ ಜಗದೇಕಮಲ್ಲನ ಶಾಸನಗಳನ್ನು ಸಹ ಬಳಸಿಕೊಂಡು ಇವನ ವಿಸ್ತಾರವಾದ ಸಾಮ್ರಾಜ್ಯದ ಆಡಳಿತ ವಿಭಾಗಗಳನ್ನು ಗುರುತಿಸುವ ಕೆಲಸವನ್ನು ಮಾಡಬಹುದು.

ಎಡೆದೊರೆ ನಾಡು :

ಎರಡು ಸಾವಿರ ಹಳ್ಳಿಗಳನ್ನು ಒಳಗೊಂಡಿದ್ದ ಎಡೆದೊರೆ ನಾಡು ಕನ್ನಡ ಶಾಸನಗಳನಲ್ಲಿ 'ಎಡದೆರೆಯಿಚ್ಛಾಸಿರ' 'ಎಡೆದೊರೆ ಇಚ್ಛಾಸಿರ' ಎಡೆದೊರೆ-೨೦೦೦ ಎಂಬ ವಿವಿಧ ರೂಪಗಳಲ್ಲಿ ಕಾಣಿಸಿಕೊಂಡಿದೆ. ಈ ಎಡೆದೊರೆ ನಾಡಿನ

ಗಡಿಯನ್ನು ಡಾ.ಜೆ.ಎಫ್. ಫ್ಲೀಟರು ಉತ್ತರಕ್ಕೆ ಕೃಷ್ಣಾನದಿ, ದಕ್ಷಿಣಕ್ಕೆ ತುಂಗಭದ್ರಾ ನದಿಗಳ ನಡುವಿನ ಪ್ರದೇಶವೆಂದು ಸೂಚಿಸಿದರು.[೨೮] ಆದರೆ ಮುಂದಿನ ವಿದ್ವಾಂಸರು ಫ್ಲೀಟರು ಹೇಳಿದ ಮೇರೆಯನ್ನೇ ಈ ನಾಡಿನ ಪದದ ನಿಷ್ಪತ್ತಿ ಎಂದು ತಪ್ಪಾಗಿ ಅರ್ಥೈಸಿದರು. ಆದರೆ ಇಂದು ಅಂದಿನ ಆಡಳಿತ ವಿಭಾಗಗಳ ಹಿನ್ನೆಲೆಯಲ್ಲಿ ಎಡೆದೊರೆ ನಾಡಿನ ಮೇರೆಗಳನ್ನು ಗುರುತಿಸುವುದು ಸುಲಭ ಸಾಧ್ಯವಾಗಿದೆ. ಉತ್ತರದಲ್ಲಿ ಅಳಂದೆ-೧೦೦೦ ನಾಡಿನ ಉಪವಿಭಾಗ ಅತ್ತಿನೂರು-೮೦, ಈಶಾನ್ಯದಲ್ಲಿ ಅರಲು-೩೦೦, ಪೂರ್ವದಲ್ಲಿ ಅಯಿಜೆ-೩೦೦, ಆಗ್ನೇಯಕ್ಕೆ ಸಿಂದವಾಡಿನಾಡಿನ ಮಂಚಾಲ-೩೬ (ಮಂತ್ರಾಲಯ), ದಕ್ಷಿಣದಲ್ಲಿ ಬಲ್ಲಕುಂದೆ ನಾಡಿನ ತೆಕ್ಕೆಕಲ್ಲು -೧೨, ಮತ್ತು ನೆಲ್ಲುಡಿ -೧೨, ನೈರುತ್ಯದಲ್ಲಿ ಪುಲಿಗೆರೆ-೩೦೦ರ ಉಪವಿಭಾಗ ಮಾಸವಾಡಿ-೧೪೦, ಪಶ್ಚಿಮದಲ್ಲಿ ಬೆಳ್ವೊಲ ನಾಡಿನ ಕುಕನೂರು-೩೦, ಕಿಸುಕಾಡು-೭೦ ಮತ್ತು ಹುನಗುಂದ-೩೦ ಹಾಗೂ ತರ್ದವಾಡಿನಾಡಿನ ನಲವತ್ತುಬಾಡ (ನಾಲತವಾಡ), ವಾಯುವ್ಯದಲ್ಲಿ ತರ್ದವಾಡಿ ನಾಡಿನ ಸಿಂದಗಿ-೧೨ ಮತ್ತು ನರಿಯಂಬೊಳೆ-೭೦ ವಿಭಾಗಗಳು ಎಡೆದೊರೆ ನಾಡಿನ ಬಾಹ್ಯ ಮೇರೆಗಳಾಗಿದ್ದವು.[೨೯]

ಹೀಗೆ ಎಡೆದೊರೆ -೨೦೦೦ ನಾಡಿನಲ್ಲಿ ಕರಡಿಕಲ್ಲು-೩೦೦, ಕೆಳವಾಡಿ-೩೦೦, ವೊರಟ-೩೦೦, ಅಯ್ಯಣವಾಡಿ-೩೦೦, ಮೊಸಳಿಕಲ್ಲು-೩೦೦, ಸಗರ-೫೦೦ ಈ ಎಲ್ಲ ಹಳ್ಳಿಗಳು ಸೇರಿಕೊಂಡರೆ ಎಡೆದೊರೆ ನಾಡಿನ ಎಲ್ಲ ಹಳ್ಳಿಗಳು ದೊರೆತಂತಾಗುತ್ತದೆ.

ಆಡಳಿತದ ಅನುಕೂಲಕ್ಕಾಗಿ ಈ ಎಡೆದೊರೆ ನಾಡನ್ನು ಹಲವು ಉಪವಿಭಾಗಗಳಾಗಿ ವಿಂಗಡಿಸಲಾಗಿತ್ತು. ಮೂರನೆಯ ಸೋಮೇಶ್ವರನ ಕಾಲದ ಶಾಸನಗಳಲ್ಲಿ ಕರಡಿಕಲ್ಲಿ-೩೦೦, ಕೆಳವಾಡಿ-೩೦೦ ಮತ್ತು ಸಗರ-೫೦೦ ಉಪವಿಭಾಗಗಳ ಉಲ್ಲೇಖವಿದೆ.

ಕರಡಿಕಲ್ಲು-೩೦೦ :

ನವಿಲೆಯ ಶಾಸನದಲ್ಲಿ[೩೦] ''ಕರಡಿಕಲ್ಮೂನೂರರ ಬಳಿಯ...'' ಎಂಬ ಉಲ್ಲೇಖ ಬರುತ್ತದೆ. ಅಂದರೆ ಇಂದಿನ ಲಿಂಗಸೂರು ತಾಲೂಕಿನ ಚಿಕ್ಕಗ್ರಾಮವಾದ ಕರಡಿಕಲ್ಲು ಈ ವಿಭಾಗದ ಮುಖ್ಯ ಪಟ್ಟಣವಾಗಿದೆ. ಆದ್ದರಿಂದ ಇಂದಿನ ಲಿಂಗಸೂರು ತಾಲೂಕಿನ ಎಲ್ಲ ಗ್ರಾಮಗಳು ಮತ್ತು ಕುಷ್ಟಗಿ, ಹುನಗುಂದ, ಮಾನ್ವಿ ಹಾಗೂ ಸಿಂಧನೂರು ತಾಲ್ಲೂಕಿನ ಹಲವು ಗ್ರಾಮಗಳು ಈ ವಿಭಾಗದಲ್ಲಿ ಸಮಾವೇಶಗೊಂಡಿದ್ದವು ಎಂದು ಹೇಳಬಹುದು.

ಕೆಳವಾಡಿ-೩೦೦ :

ಡಾ. ಜಿ.ಎಂ.ನಾಗಯ್ಯನವರು ಕೆಳವಾಡಿನಾಡು ಇಂದಿನ ಮುಧೋಳ, ಬಾಗಲಕೋಟೆ ಮತ್ತು ಬಾದಾಮಿ ತಾಲೂಕಿನ ವ್ಯಾಪ್ತಿಯನ್ನು ಹೊಂದಿತ್ತೆಂದು ಹೇಳಿದ್ದಾರೆ.[೩೧] ಡಾ.ಬಿ.ವ್ಹಿ.ಶಿರೂರ ಅವರು ಬಾದಾಮಿ ತಾಲೂಕಿನ ಕೆಳವಾಡಿ ಗ್ರಾಮವೇ ಈ ವಿಭಾಗದ ಮುಖ್ಯ ಪಟ್ಟಣವಾಗಿದೆಯೆಂದು ಊಹಿಸಿದ್ದಾರೆ.[೩೨] ಆದರೆ ರಾಯಚೂರು ಮತ್ತು ಕೊಪ್ಪಳ

ಜಿಲ್ಲೆಯ ಶಾಸನಗಳು ಇವರ ಮಾತನ್ನು ಸಮರ್ಥಿಸುವುದಿಲ್ಲ. ಆದರೆ ಡಾ. ಸಿ.ಬಿ.ಹಿರೇಮಠ ಅವರು ರಾಯಚೂರು ಮತ್ತು ಕೊಪ್ಪಳ ಜಿಲ್ಲೆಯ ಶಾಸನದ ಆಧಾರದ ಮೇಲೆ ಕಲಕೇರಿ ಗ್ರಾಮವೇ ಈ ವಿಭಾಗದ ಮುಖ್ಯ ಪಟ್ಟಣವಾಗಿರಬೇಕೆಂದು ಊಹಿಸಿದ್ದಾರೆ.[೩೩] ಅಲ್ಲದೆ ಕೊಪ್ಪಳ ತಾಲೂಕಿನ ಮಾದಿನೂರು ಶಾಸನವು ''ಎಡೆದೊರೆಯಿಚ್ಛಾಸಿರದ ಬಳಿಯ ಕೆಳವಾಡಿ ಮೂನೂರು'' ಎಂದು ಹೇಳಿದೆ. [೩೪] ಅಂದರೆ ಕೆಳವಾಡಿನಾಡು ಇಂದಿನ ಸಿಂಧನೂರು, ಗಂಗಾವತಿ, ಕೊಪ್ಪಳ, ಕುಷ್ಟಗಿ ಮತ್ತು ಯಲಬುರ್ಗಾ ತಾಲೂಕಿನ ವ್ಯಾಪ್ತಿಯನ್ನು ಹೊಂದಿತ್ತೆಂದು ಹೇಳಬಹುದು. ಅಲ್ಲದೇ ಈ ತಾಲೂಕುಗಳ ವ್ಯಾಪ್ತಿಯಲ್ಲಿ ಕಂಡುಬರುವ ಚಿಕ್ಕ ಚಿಕ್ಕ ವಿಭಾಗಗಳು ಕೆಳವಾಡಿ ನಾಡಿನ ಉಪವಿಭಾಗಗಳಾಗಿರಬೇಕು.

ಸಗರ-೫೦೦ :

ಇಂದಿನ ಶಹಪುರ ತಾಲೂಕನ ಸಗರ ಗ್ರಾಮವೇ ಈ ವಿಭಾಗದ ಮುಖ್ಯ ಪಟ್ಟಣವಾಗಿದೆ.[೩೫] ಕ್ರಿ.ಶ.೯೨೭ರಿಂದ ೧೧೦೬ರವರೆಗೆ ಮೂರುನೂರು ಹಳ್ಳಿಗಳ ವಿಭಾಗವಾಗಿತ್ತು. ಮುಂದೆ ಕ್ರಿ.ಶ.೧೧೨೯ರಿಂದ ಅದು ಐದುನೂರು ಹಳ್ಳಿಗಳ ವಿಭಾಗವಾಗಿ ರೂಪುಗೊಂಡಿತೆಂದು ಸುರಪುರ ತಾಲೂಕಿನ ಮುದನೂರು ಶಾಸನ[೩೬] ಮತ್ತು ಕಲ್ಬುರ್ಗಿ ಜಿಲ್ಲೆಯ ಸಿರಿವಾಳ ಶಾಸನ[೩೭]ಗಳಿಂದ ತಿಳಿಯುತ್ತದೆ. ಇದರಿಂದ ಸಗರನಾಡು ಇಂದಿನ ಸುರಪುರ ತಾಲೂಕಿನ ಏವೂರು, ಯಾಳಗಿ, ಅರಕೇರಿ, ನಗರಪುರ, ಚಣ್ಡವುರ (ಚೆನ್ನೂರು) ಹುಣಸಗಿ, ಶಿವಪುರ, ತಿಂಥಣಿ, ಕೆಂಭಾವಿ, ಪಿರಿಯಬೆಳ್ಳುಂಬಟ್ಟಿ, ಕಚಕನೂರು, ಎಡೆಯಪುರ, ಶಹಪುರ ತಾಲೂಕಿನ ದೊರನಹಳ್ಳಿ, ಸಿರಿವಾಳ, ಕೋಬಾಳ, ಗುಂಡಲೂರು, ಸೂಗೂರು, ಹೋತಗಲ್ಲು ಮತ್ತು ಜೇವರ್ಗಿ ತಾಲೂಕಿನ ಎಳರಾವೆ (ಯಡ್ರಾವಿ), ಮುಲ್ಲಾಬಾದ ಗ್ರಾಮಗಳು ಸಗರನಾಡಿನಲ್ಲಿದ್ದವೆಂದು ಹೇಳಬಹುದು. ಇದುವರೆಗೆ ಸಗರನಾಡಿನ ಎಳರಾವೆ-೫೦ ಮತ್ತು ಕೆಂಭಾವಿ-೨೪ ಇದರ ಉಪವಿಭಾಗಗಳೆಂದು ತಿಳಿದು ಬಂದಿದೆ.

ಎಳರಾಮೆ-೫೦ :

ಇಂದಿನ ಜೇವರ್ಗಿ ತಾಲೂಕಿನ ಯಡ್ರಾವಿಯೇ ಪ್ರಾಚೀನ ಎಳರಾವೆಯ ಮುಖ್ಯ ಪಟ್ಟಣವಾಗಿದೆ. ಕ್ರಿ.ಶ. ೧೧೩೫ ಮಲ್ಲಾಬಾದ ಶಾಸನದಲ್ಲಿ [೩೮] ಈ ವಿಭಾಗದ ಉಲ್ಲೇಖವಿದೆ. ಆದರೆ ಯಡ್ರಾವಿ ಮತ್ತು ಮಲ್ಲಾಬಾದ ಬಿಟ್ಟರೆ ಈ ವಿಭಾಗದ ಇತರ ಗ್ರಾಮಗಳ ವಿವರ ತಿಳಿದುಬರುವುದಿಲ್ಲ.

ಆಲಂದೆ ಸಾಸಿರ :

ಈಗಿನ ಗುಲಬರ್ಗಾ ಜಿಲ್ಲೆಯ 'ಆಳಂದ' ಗ್ರಾಮವೇ ಹಿಂದೆ ಅಲಂದೆ ಸಾಸಿರ ವಿಭಾಗದ ರಾಜಧಾನಿಯಾಗಿತ್ತು. ಈ ವಿಭಾಗವು ಗುಲಬರ್ಗಾ ಜಿಲ್ಲೆಯ ಅಫ್ಜಲಪುರ ತಾಲೂಕು, ಆಳಂದ ತಾಲೂಕು ಹಾಗೂ ಚಿತ್ತಾಪುರ ತಾಲೂಕಿನ

ಕೆಲವು ಗ್ರಾಮಗಳನ್ನು, ಮಹಾರಾಷ್ಟ್ರದ ಉಸ್ಮಾನಾಬಾದ ಜಿಲ್ಲೆಯ ಕೆಲವು ಪ್ರದೇಶಗಳನ್ನು, ಸೊಲ್ಲಾಪುರ ಜಿಲ್ಲೆಯ ಕೆಲವು ಗ್ರಾಮಗಳನ್ನು, ಬೀದರ ಜಿಲ್ಲೆಯ ಬಸವಕಲ್ಯಾಣ ತಾಲೂಕನ್ನು ಒಳಗೊಂಡು ಒಟ್ಟು ಸಾವಿರ ಗ್ರಾಮಗಳ ವಿಭಾಗವಾಗಿದ್ದಿತು. ಅಣಂದೂರು-೩೦೦, ಗೊಂಕನಾಡು ೧೨೦+೬೦, ಮೊರಂಬ- ೯೪, ಅತ್ತಿನೂರು-೮೦ ಮತ್ತು ಕಂಪಣವತ್ತಿಗಾಣಪುರಗಳು ಮಾತ್ರ ಈ ಆಲಂದೆ ಸಾಸಿರದ ಉಪವಿಭಾಗಗಳೆಂದು ಈಗ ತಿಳಿದು ಬಂದಿದೆ. [೫೯]

ಅಣಂದೂರು-೩೦೦ :

ಇದು ಮೂರುನೂರು ಗ್ರಾಮಗಳನ್ನು ಒಳಗೊಂಡ ವಿಭಾಗವಾಗಿದೆ. ಇಂದಿನ ಉಸ್ಮಾನಾಬಾದ್ ಜಿಲ್ಲೆಯ ತುಳಜಾಪುರ ತಾಲೂಕಿನ ಅಣಂದೂರು ಗ್ರಾಮವೇ ಹಿಂದೆ ಮೂರುನೂರು ಗ್ರಾಮಗಳ ವಿಭಾಗಕ್ಕೆ ಮುಖ್ಯ ಪಟ್ಟಣವೆನಿಸಿತ್ತು. ಹನ್ನವಳ್ಳಿ ಮತ್ತು ಆವಟಿ ಮುದ್ರೆ ಎಂಬ ಗ್ರಾಮಗಳು ಈ ವಿಭಾಗದಲ್ಲಿದ್ದವು ಎಂಬುದು ಅಣಂದೂರು ಶಾಸನದಿಂದ [೬೦] ತಿಳಿದು ಬರುತ್ತದೆ.

ಮಣೆಯೂರ-೧೨ :

ಹನ್ನೆರಡು ಗ್ರಾಮಗಳನ್ನೊಳಗೊಂಡ ಈ ಚಿಕ್ಕ ವಿಭಾಗದ ಉಲ್ಲೇಖ ಮಣ್ಣೂರ್ [೬೧] ಶಾಸನದಲ್ಲಿ 'ಮಣೆಯೂರು ಹನ್ನೆರಡರ ಕಂಪಣ'ವೆಂದು ಬರುತ್ತದೆ. ಕ್ರಿ.ಶ. ೧೧೩೪ರ ಮಣ್ಣೂರು [೬೨] ಶಾಸನದಲ್ಲಿ ಕೇವಲ 'ಮಣೆಯೂರ ಪ್ರಭು' ಎಂಬ ಉಲ್ಲೇಖ ಕಂಡುಬರುತ್ತದೆ.

ಮೊರಂಬ-೮೦ :

ರುದ್ರವಾಡಿ ಗ್ರಾಮದ ಶಾಸನದಲ್ಲಿ [೬೩] ತೊಂಬತ್ತುನಾಲ್ಕು ಗ್ರಾಮಗಳ ವಿಭಾಗವಾಗಿದ್ದು ಮುಂದೆ ಕ್ರಿ.ಶ.೧೧೨೯ರ ನಾರಂಗವಾಡಿ [೬೪] ಶಾಸನದಲ್ಲಿ ಮೊರಂಬ-೮೦ ಎಂದು ಎಂಬತ್ತು ಹಳ್ಳಿಗಳ ವಿಭಾಗವಾಗಿ ರೂಪುಗೊಂಡಿರುವುದು ಕಂಡುಬರುತ್ತದೆ. ಈ ರೂಪಾಂತರಕ್ಕೆ ಕಾರಣಗಳು ಸ್ಪಷ್ಟವಾಗುವುದಿಲ್ಲ.

ಬಾಗವಾಡಿ-೩೦ :

ಮೂವತ್ತು ಗ್ರಾಮಗಳನ್ನೊಳಗೊಂಡ ಈ ವಿಭಾಗದ ಕುರಿತು ಕಡ್ಲೆವಾಡ [೬೫] ಶಾಸನದಲ್ಲಿ ''ಅಲಂದೆ ಸಾಸಿರದ ಕಂಪಣಂ ಬಾಗವಾಡಿ ಮೂವತ್ತರ ಬಳಿಯ ಬಾಡಂ ಹಿಂಚಗೇರಿ'' ಎಂದು ಹೇಳಿದೆ.

ಅರಲು-೩೦೦ :

ಗುಲಬರ್ಗಾ ಜಿಲ್ಲೆಯ ಸೇಡಂ ತಾಲೂಕಿನ ಕೆಲವು ಗ್ರಾಮಗಳನ್ನು, ಚಿತಾಪುರ ತಾಲೂಕಿನ ಕೆಲವು ಗ್ರಾಮಗಳನ್ನು ಈ ವಿಭಾಗವು ಹೊಂದಿತ್ತು. ಹಂದರಕಿ ಶಾಸನದಲ್ಲಿ [೬೬] ''ಅರಲು ಮೂನೂರರ ಬಳಿಯ ಬಾಡಂಗುಂಡಿಂ

ತರುವಳಿಗೆಯಂತೆರಡೂರ'' ಎಂದಿದೆ. ಬಾಡಂಗುಂಡಿಂ ತರುವಳಿಗೆ ಗ್ರಾಮಗಳು ಅರಲು-೩೦೦ರಲ್ಲಿದ್ದವು. ಬಹುಶಃ ಈ ಅರಲು-೩೦೦ ವಿಭಾಗವು ಆಳಂದೆ ಸಾಸಿರದ ಉಪವಿಭಾಗವಾಗಿರಬೇಕು.

ಜೆ.ಎಂ.ನಾಗಯ್ಯನವರು ಆಲಂದೆ ಸಾಸಿರ ವಿಭಾಗಕ್ಕೆ ಇನ್ನೂ ೩೪೬ ಗ್ರಾಮಗಳ ಕೊರತೆ ಬೀಳುತ್ತವೆ, ಅರಲು-೩೦೦ ಈ ವಿಭಾಗದ ಉಪವಿಭಾಗವಾಗಿದ್ದರೆ ಇನ್ನೂ ೪೬ ಗ್ರಾಮಗಳನ್ನು ಹುಡುಕಬೇಕಾಗುತ್ತದೆ ಎಂದಿದ್ದಾರೆ. ಬಾಗವಾಡಿ-೩೦ನ್ನು ಈ ವಿಭಾಗದಲ್ಲಿ ಸೇರಿಸಿದರೆ ಇನ್ನು ೧೬ ಗ್ರಾಮಗಳ ಕೊರತೆ ಮಾತ್ರ ಬೀಳುತ್ತದೆ.

ತರ್ದವಾಡಿ ಸಾಸಿರ :

ಬಿಜಾಪುರ ಜಲ್ಲೆಯ ಇಂಡಿ ತಾಲೂಕಿನ 'ತದ್ದೆವಾಡಿ' ಗ್ರಾಮವೇ ಈ ವಿಭಾಗದ ರಾಜಧಾನಿಯಾಗಿತ್ತು. ಇದನ್ನು ಶಾಸನಗಳು 'ತರ್ದವಾಡಿನಾಡು' 'ತರ್ದವಾಡಿಸಾಸಿರ' ಎಂದು ಕರೆದಿವೆ. ಈ ವಿಭಾಗದಲ್ಲಿ ಆರುನೂರುಂಬಾಡ, ಬಾಗೆ-೫೦, ಮುತ್ತಗೆ-೩೦, ಪೆರ್ಬಾಕ-೧೨, ವಾಯ್ವಡ-೧೨, ಸಿಂದಗಿ-೧೨, ನರಿಯಂಬೊಳೆ-೧೦, ಕೆಂಪನಕುಳಿ, ಆರುಂಬಾಡ, ತಂಬದರುಂಬಾಡ, ನಲವತ್ತುಬಾಡ, ಮುಂಬಾಡ, ಸೋಗಿಲು ಪನ್ನೆರಡು, ಹಡಗಿಲೆ ಹನ್ನೆರಡು, ನಲವತ್ತುಬಾಡ, ಕಾರಕುರುವ-೪೦, ಕುಮ್ಮಸಿ-೩೦, ಖೇಡ-೧೨, ಬೇವಿನೂರು-೩೬, ರೂವಿಗೆ-೩೬, ಅಂಕುಲಿಗೆ-೫೦, ಎಳಮೇಲ-೩೦ ಮುಂತಾದ ಒಟ್ಟು ೮೯೮ ಗ್ರಾಮಗಳು, ಇನ್ನೂ ೧೦೨ ಗ್ರಾಮಗಳ ಲೆಕ್ಕಸಿಗಬೇಕಾಗಿದೆ.[೪೭] ಮೂರನೆಯ ಸೋಮೇಶ್ವರನ ಕಾಲದ ಶಾಸನದಲ್ಲಿ ಈ ವಿಭಾಗದ ಕುಮ್ಮಸಿ-೩೦, ಸಿಂದಗಿ-೧೨, ಅಂಕುಲಿಗೆ-೫೦ರ ಉಲ್ಲೇಖ ಕಂಡುಬರುತ್ತದೆ.

ಕುಮ್ಮಸಿ-೩೦ :

ಈ ವಿಭಾಗದ ಉಲ್ಲೇಖ ಬಿಜಾಪುರ[೪೮] ಶಾಸನದಲ್ಲಿ 'ಕುಂಮಸೆಮೂ(ವ)ತ್ತು' ಎಂದಿದೆ. ಕಡ್ಲೇವಾಡ[೪೯] ಶಾಸನದಲ್ಲಿ 'ತರ್ದ್ದವಾಡಿ ಸಾಸಿರದ ಕಂಪಣ, ಕುಮ್ಮಸಿ ಮೂವತ್ತರ ಬಳಿಯ ಸೆಂ (ಬೆವಾಡದ)' ಎಂದಿದೆ. ಕುಮ್ಮಸಿ, ಮಲ್ಘಾಣ (ಮಲಘಾಣ), ಕಡ್ಲೇವಾಡ, ಸೆಂಬೆವಾಡ ಗ್ರಾಮಗಳು ಕುಮ್ಮಸಿ- ೩೦ರಲ್ಲಿದ್ದವು.

ಸಿಂದಗಿ-೧೨ :

ಇಂದಿನ ಬಿಜಾಪುರ ಜಿಲ್ಲೆಯ ಸಿಂದಗಿ ತಾಲೂಕಿನ ಕೇಂದ್ರಸ್ಥಳ ಸಿಂದಗಿಯಾಗಿದೆ. ಬಿಜಾಪುರ ಶಾಸನದಲ್ಲಿ[೫೦] ಇದನ್ನು 'ಸಿಂದಿಗೆ ಹಂನೆರಡುಂ' ಎಂದು ಹೇಳಲಾಗಿದೆ.

ಅಂಕುಲಿಗೆ -೫೦ :

ಐವತ್ತು ಗ್ರಾಮಗಳ ವಿಭಾಗವಾದ ಇದರ ಮುಖ್ಯ ಗ್ರಾಮ ಇಂದಿನ ಗುಲಬರ್ಗಾ ಜಿಲ್ಲೆಯ ಜೇವರ್ಗಿ ತಾಲೂಕಿನ

'ಅಂಕುಲಗೆ' ಗ್ರಾಮವಾಗಿದೆ. 'ಅಂಕುಲಗೆ ಅಯಿವತ್ತರ' ಎಂದು ಬಿಜಾಪುರ ಶಾಸನದಲ್ಲಿ[೫೧] ಹೇಳಲಾಗಿದೆ. ಅಂದರೆ ಇಂದಿನ ಅಂಕುಲಗೆಯ ಸುತ್ತಮುತ್ತಲಿನ ಗ್ರಾಮಗಳು ಈ ವಿಭಾಗದಲ್ಲಿದ್ದವೆಂದು ಹೇಳಬಹುದು.

ಎರಡರು ನೂರು :

(ಬೆಳ್ವೊಲ-೩೦೦ + ಪುಲಿಗೆರೆ ೩೦೦)

ಬೆಳ್ವೊಲ-೩೦೦ ಮತ್ತು ಪುಲಿಗೆರೆ-೩೦೦ ಇವೆರಡನ್ನೂ ನಿರ್ದೇಶಿಸಲು ಶಾಸನಗಳಲ್ಲಿ ಎರಡರುನೂರು ಎಂಬ ಶಬ್ದವನ್ನು ಬಳಸಲಾಗಿದೆ. ಎರಡರುನೂರು ಎಂದರೆ ಎರಡು ಆರುನೂರುಗಳಲ್ಲ ಪುಲಿಗೆರೆ-೩೦೦, ಬೆಳ್ವೊಲ-೩೦೦ ಎರಡೂ ಸೇರಿ ಆರುನೂರು ಎಂದು ಅರ್ಥ ಮಾಡಿಕೊಳ್ಳಬೇಕು. ಡಾ. ಎಂ.ಎಂ.ಕಲಬುರ್ಗಿಯವರು[೫೨] ಮೂಲ ಬೆಳ್ವಲ-೬೦೦ ಗ್ರಾಮಗಳಿಂದ ಅಖಂಡವಾಗಿದ್ದು, ಯಾವುದೋ ಒಂದು ಕಾಲದಲ್ಲಿ ದಕ್ಷಿಣ ಬೆಳ್ವೊಲಕ್ಕೆ ಪುಲಿಗೆರೆ ಎಂಬ ಹೆಸರು ಪ್ರಾಪ್ತವಾಗಿರಬೇಕು ಎಂದು ಹೇಳಿದ್ದಾರೆ. ಕಲ್ಯಾಣದ ಚಾಲುಕ್ಯರ ಕಾಲದ ಶಾಸನಗಳಲ್ಲಿಯೂ ಕೂಡ ಎರಡನ್ನೂ ಬೇರೆ ಬೇರೆಯಾಗಿ ಹೇಳಿ ಕೊನೆಗೆ ಅವೆರಡನ್ನೂ ಕೂಡಿಸಿ ಹೇಳಿರುವುದನ್ನು ಕಾಣುತ್ತೇವೆ. ಉದಾಹರಣೆಗೆ ನರಗುಂದ ಶಾಸನದಲ್ಲಿ[೫೩] ''ಇನ್ತೆನಿಸಿದ ಮಹದೇವರಸರು ಬೆಳ್ವಲ ಮೂನೂರುಮಂ ಹುಲಿಗೆರೆ ಮೂನೂರುಮಂ ದುಷ್ಟನಿಗ್ರಹಶಿಷ್ಟ ಪ್ರತಿಪಾಳನದಿಂದಾಳ್ದರಸಂಗಯ್ಯುತ್ತಮಿರೆ'' ಎಂದು ಹೇಳಲಾಗಿದೆ. ಈ ಎರಡೂ ವಿಭಾಗಗಳಿಗೆ ಚಕ್ರವರ್ತಿಯು ಒಬ್ಬ ವ್ಯಕ್ತಿಯನ್ನೇ ಅಧಿಕಾರಿಯನ್ನಾಗಿ ನೇಮಿಸುತ್ತಿದ್ದನು. ಈ ಎರಡೂ ವಿಭಾಗಗಳು ಇತಿಹಾಸದಲ್ಲಿ ಬಹಳ ಪ್ರಸಿದ್ಧಿಯನ್ನು ಪಡೆದವುಗಳಾಗಿವೆ. ಅವುಗಳ ವಿವರಣೆ ಇಂತಿದೆ.

ಬೆಳ್ವೊಲ-೩೦೦ :

ಮೂರುನೂರು ಗ್ರಾಮಗಳನ್ನು ಒಳಗೊಂಡ ಬೆಳವಲ ನಾಡು, ಬೆಳೆದ ಫಲವತ್ತತೆಯನ್ನು ನಾಮದಲ್ಲಿ ಎತ್ತಿ ತೋರಿಸುವ ವಿಭಾಗವಾಗಿದ್ದು, ಇದು ಧಾರವಾಡ, ಗದಗ ಜಿಲ್ಲೆಯ ನವಲಗುಂದ, ನರಗುಂದ, ರೋಣ, ಹುಬ್ಬಳ್ಳಿ, ಕುಂದಗೋಳ ತಾಲೂಕಿನ ಕೆಲವು ಗ್ರಾಮಗಳನ್ನು ಬೆಳಗಾವಿ ಜಿಲ್ಲೆಯ ಸೌದತ್ತಿ, ರಾಮದುರ್ಗ ತಾಲೂಕಿನ ಕೆಲವು ಗ್ರಾಮಗಳನ್ನು , ಬಿಜಾಪುರ ಜಿಲ್ಲೆಯ ಬಾದಾಮಿ, ಬಾಗಲಕೋಟ, ಹುನಗುಂದ ತಾಲೂಕುಗಳ ಕೆಲವು ಗ್ರಾಮಗಳನ್ನು, ರಾಯಚೂರು ಜಿಲ್ಲೆಯ ಯಲಬುರ್ಗಿ ತಾಲೂಕಿನ ಕೆಲವು ಗ್ರಾಮಗಳನ್ನು ಒಳಗೊಂಡಿತ್ತು. ಅಣ್ಣಿಗೇರಿಯು ಈ ಬೆಳ್ವೊಲನಾಡಿನ (ಬೆಳ್ವೊಲ-೩೦೦ರ) ರಾಜಧಾನಿಯಾಗಿತ್ತು. ಬೆಣ್ಣೆದಡಿ-೭೦, ಚಿಂಚಲಿ-೫೦, ಕೊಳನೂರು-೩೦, ಕುಕನೂರು-೩೦, ಕಿಸುಕಾಡು-೭೦, ಕರಿವಿಡಿ-೩೦ ಹೀಗೆ ಒಟ್ಟು ೨೮೦ ಗ್ರಾಮಗಳ ಉಲ್ಲೇಖ ಈವರೆಗೆ ದೊರೆಕಿವೆ. ಇನ್ನೂ ೨೦ ಗ್ರಾಮಗಳ ಉಲ್ಲೇಖ ಸಿಗಬೇಕಾಗಿದೆ.[೫೪] ಮೂರನೆಯ ಸೋಮೇಶ್ವರನ ಕಾಲದ ಶಾಸನಗಳಲ್ಲಿ ಈ ಕೆಳಗಿನ ವಿಭಾಗಗಳ ಉಲ್ಲೇಖ ಕಂಡುಬರುತ್ತದೆ.

ಬೆಣ್ಣೆದಡಿ-೭೦ :

ನರಗುಂದ ಶಾಸನದಲ್ಲಿ[೫೫] ಈ ವಿಭಾಗದ ಉಲ್ಲೇಖ ''ಇನ್ತೆನಿಸಿದ ರುದ್ರದೇವರಸರು ಬೆಳ್ವಲದೊಳೆಸೆವ ಪಲವುಂ ಭತ್ತಗಾವೆಗಳಂ ಕೊಳನೂಮ್ಮೂರ್ವತ್ತುಮಂ ಬೆಣ್ಣೆದಡಿಯೆಪ್ಪತ್ತುಮಂ'' ಎಂದು ಬರುತ್ತದೆ. ಡಾ. ಶ್ರೀನಿವಾಸ ರಿತ್ತಿಯವರು[೫೬] ಇದು ಇಂದಿನ ನರಗುಂದ ತಾಲೂಕಿನ ಬಸಹಟ್ಟಿ ಗ್ರಾಮವೇ ಆಗಿರಬೇಕೆಂದು ಊಹಿಸಿದ್ದಾರೆ. ಆದರೆ ಈಗಿನ ಗದಗ ಜಿಲ್ಲೆಯ ಬೆಳವಡಿ ಗ್ರಾಮವೇ ಈ ವಿಭಾಗದ ಮುಖ್ಯ ಗ್ರಾಮವಾಗಿರಬೇಕು. ನವಲಗುಂದ ತಾಲೂಕಿನಲ್ಲಿ ಹರಿಯುವ ''ಬೆಣ್ಣೆಹಳ್ಳ''ದ ಪಶ್ಚಿಮ ಭಾಗಕ್ಕೆ ಈ ವಿಭಾಗವು ಇದ್ದಿರಬೇಕು ''ಬೆಣ್ಣೆದಡಿಯೆಪ್ಪತ್ತರೊಳಗಣ(ರ) ಹಟ್ಟಿಯೆಂಬ ಗ್ರಾಮವುಂ''[೫೭] ಎಂಬ ಉಲ್ಲೇಖದಿಂದ ಹಟ್ಟಿ ಎಂಬ ಗ್ರಾಮವು ಈ ವಿಭಾಗದಲ್ಲಿ ಇತ್ತೆಂದು ತಿಳಿದುಬರುತ್ತದೆ.

ಭತ್ತಗಾವೆ-೧೮ :

''ಬೆಳ್ವಲನಾಳ್ಕೆ ಪೊದಲ್ದ ಸೋಭೆಗಾಗರ ಮನೆ ಭತ್ತಗಾವೆ ಪದಿನೆಂಟರೊಳಂ''[೫೮] ಈ ಉಲ್ಲೇಖದಿಂದ ಹದಿನೆಂಟು ಗ್ರಾಮಗಳನ್ನು ಹೊಂದಿದ ಈ ವಿಭಾಗ ಇಂದಿನ ನರಗುಂದ ತಾಲ್ಲೂಕಿನಲ್ಲಿತ್ತೆಂದು ನಮಗೆ ತಿಳಿದುಬರುತ್ತದೆ.

ಕೊಳನೂರು-೩೦ :

ಮೂವತ್ತು ಗ್ರಾಮಗಳನ್ನೊಳಗೊಂಡ ಈ ವಿಭಾಗದ ಮುಖ್ಯ ಗ್ರಾಮ ನರಗುಂದ ತಾಲೂಕಿನ 'ಕೊಣ್ಣೂರು'. ಈ ಕೊಣ್ಣೂರು ಗ್ರಾಮದ ಸುತ್ತ ಮುತ್ತಲಿನ ಗ್ರಾಮಗಳನ್ನು ಈ ವಿಭಾಗವು ಒಳಗೊಂಡಿತ್ತು. ''ಬೆಳ್ವಲದೊಳೆಸೆವ ಪಲವು ಭತ್ತ ಗಾವೆಗಳಂ ಕೊಳನೂಮ್ಮೂರ್ವತ್ತುಮುಂ ''ಎಂದು ನರಗುಂದ[೫೯] ಶಾಸನದಲ್ಲಿದೆ. ಡಾ. ಶ್ರೀನಿವಾಸ ರಿತ್ತಿಯರು[೬೦] ಈ ವಿಭಾಗದಲ್ಲಿದ್ದ ೨೯ ಗ್ರಾಮಗಳನ್ನು ಈ ರೀತಿ ಗುರುತಿಸಿದ್ದಾರೆ. ಕೊಳನೂರು (ಕೊಣ್ಣೂರು), ಬಳ್ಳೇರು (ಬೆಳ್ಳೇರಿ) ಈವೆರಡೂ ನರಗುಂದ ತಾಲೂಕಿನಲ್ಲಿಯವು. ಬೆಂಚನೂರು (ಬೆಣ್ಣೂರು), ಸುಳ್ಳ, ಮುಸುಡಗೆರೆ (ಮುಷ್ಟಿಗೇರಿ), ಮತ್ತಿಕಟ್ಟೆ (ಮುತ್ತೀಕಟ್ಟಿ), ನೀಲಗುಂದಗೆ (ನೀಲಗುಂದ), ತಲಖೇಡ (ತಲಕವಾಡ), ಆಲೂರು, ಇಂಡುಗಲು (ಇಡಗಲ್ಲು), ನೇರಿಲಗೆ (ನೀರಲಿಗೆ), ಹಗನೂರು, ಒಡ್ಡಿಟ್ಟಿಗೆ (ಬಹುಶಃ ವಡವಟ್ಟಿ), ಕೆಕೆಯನೂರು (ಕಕನೂರು) ಇವೆಲ್ಲ ಬಾದಾಮಿ ತಾಲೂಕಿನಲ್ಲಿಯವು. ಅವರವಾಡಿ, ಕಿತ್ತವೊಳೆ (ಕಿತ್ತಳಿ) ಇವು ರಾಮದುರ್ಗ ತಾಲೂಕಿನವು. ಪಿರಿಸಿಂಗಿ (ಸಿರಸಂಗಿ), ಮುನಿವಳ್ಳಿ (ಮುನವಳ್ಳಿ) ಇವು ಸವದತ್ತಿ ತಾಲೂಕಿನವು. ಇನ್ನೂಳಿದ ಗ್ರಾಮಗಳು ಇವು: ಮುಡುಗುಂದಿ, ಸಂಗಮ, ಬೇಹೂರು, ಪಾರ್ವನಗೇರಿ, ಹೊಸಪೊಳಲು, ಉಂತಕೂರು, ಸಿರಿಮಲೆ, ಸಿರಿವೊಳಲು, ಇಂಚಗೆರೆ, ಕೊತ್ತಸೆ ಮತ್ತು ಮಾವಿನೂರು .

ಕುಕ್ಕನೂರು-೩೦ :

ರಾಯಚೂರು ಜಿಲ್ಲೆಯ ಯಲಬುರ್ಗಾ ತಾಲೂಕಿನ ಕುಕನೂರು ಗ್ರಾಮವೇ ಹಿಂದೆ 'ಕುಕ್ಕನೂರು'ವೆಂಬ ಹೆಸರನ್ನು ಹೊಂದಿ ಮೂವತ್ತು ಗ್ರಾಮಗಳಿಗೆ ರಾಜಧಾನಿಯಾಗಿತ್ತು. ಈ ಕುಕನೂರಿನ ಸುತ್ತಮುತ್ತಲ ಗ್ರಾಮಗಳು ಈ ವಿಭಾಗದಲ್ಲಿದ್ದವು. ಕ್ರಿ.ಶ.೧೧೨೯ರ ಶಾಸನದಲ್ಲಿ,[೬೧] ಕ್ರಿ.ಶ.೧೧೩೨ರ ಕುಕನೂರು[೬೨] ಶಾಸನದಲ್ಲಿ ಇದರ ಉಲ್ಲೇಖವನ್ನು ಕಾಣುತ್ತೇವೆ. ಅಲ್ಲದೆ ಕಲ್ಲೂರು ಶಾಸನದಲ್ಲಿ[೬೩] ''ಕುಕ್ಕನೂರು ಮೂವತ್ತರೊಳಗಣ ಕಲ್ಲೂರು'' ಎಂದಿದೆ ಅಂದರೆ ಕಲ್ಲೂರು ಈ ವಿಭಾಗದ ಒಂದು ಗ್ರಾಮವಾಗಿದ್ದಿತು.

ಪುಲಿಗೆರೆ-೩೦೦ :

ಕವಿರಾಜ ಮಾರ್ಗಕಾರ ತಿರುಳ್ಗನ್ನಡದ ಮೇರೆಯನ್ನು ಹೇಳುವಾಗ ಪುಲಿಗೆರೆಯನ್ನು ಹೆಸರಿಸಿದ್ದಾನೆ. ಇದನ್ನು ಶಾಸನಗಳಲ್ಲಿ 'ಪುಲಿಗೆರೆ',[೬೪] 'ಪುರಿಕನಗರ',[೬೫] ಹುಲಿಗೆರೆ[೬೬] ಎಂದು ಕರೆಯಲಾಗಿದೆ. ಇಂದಿನ ಧಾರವಾಡ ಜಿಲ್ಲೆಯ ಶಿರಹಟ್ಟಿ ತಾಲೂಕಿನ ಲಕ್ಷ್ಮೇಶ್ವರ ಗ್ರಾಮವೇ ಹಿಂದೆ 'ಪುಲಿಗೆರೆ' ಎಂದು ಕರೆಯಲ್ಪಡುತ್ತಿತ್ತು. ಇದು ಮೂರುನೂರು ಗ್ರಾಮಗಳಿಗೆ ಮುಖ್ಯ ಗ್ರಾಮವಾಗಿತ್ತು. ಇಂದಿನ ಧಾರವಾಡ ಜಿಲ್ಲೆಯ ಶಿರಹಟ್ಟಿ, ಹುಬ್ಬಳ್ಳಿ, ಕುಂದಗೋಳ, ಹಾವೇರಿ ಜಿಲ್ಲೆಯ, ಶಿಗ್ಗಾವಿ , ಸವಣೂರು, ಗದಗ ಜಿಲ್ಲೆಯ ಮುಂಡರಗಿ ತಾಲೂಕುಗಳ ಕೆಲವು ಗ್ರಾಮಗಳನ್ನು ಹೊಂದಿತ್ತು. ಡಾ.ಎಂ.ಎಂ.ಕಲಬುರ್ಗಿಯವರು[೬೭] ಬೆಳಗಾವಿ ಜಿಲ್ಲೆಯ ಸವದತ್ತಿ, ಬೈಲಹೊಂಗಲ ತಾಲೂಕುಗಳ ಕೆಲಭಾಗವನ್ನು ಹೊಂದಿತ್ತೆಂಬ ಊಹೆಯನ್ನು ಮಂಡಿಸಿದ್ದಾರೆ. ಆದರೆ ಪುಲಿಗೆರೆ-೩೦೦ರ ಮೇರೆ ಧಾರವಾಡವನ್ನು ಕೂಡ ಮುಟ್ಟಿರಲಿಲ್ಲ. ಹುಬ್ಬಳ್ಳಿ ತಾಲೂಕಿನ ಪೂರ್ವಭಾಗಕ್ಕಿರುವ ಕೆಲವು ಗ್ರಾಮಗಳನ್ನು ಮಾತ್ರ ಹೊಂದಿರಬಹುದು. ಈ ಪುಲಿಗೆರೆಯನ್ನು ಲಕ್ಷ್ಮೇಶ್ವರ ಶಾಸನದಲ್ಲಿ[೬೮] ''ರಾಜಧಾನಿ ಪಟ್ಟಣಂ ಪುಲಿಗೆರೆ'' ಎಂದು ಕರೆಯಲಾಗಿದೆ.

ಸುರುಕ-೧೨ ಮತ್ತು ಅವಗವಾಡಿ-೧೨ :

ಮುಂಡರಗಿ ತಾಲೂಕಿನ ಚಿಕ್ಕವಡವಟ್ಟಿ[೬೯] ಶಾಸನದಲ್ಲಿ ಈ ಎರಡು ಸಣ್ಣ ವಿಭಾಗಗಳ ಉಲ್ಲೇಖ ಬರುತ್ತದೆ. ''xx ಕಕ್ಕರಸರುಂ ಸುರಿಕ ಪನ್ನೆರಡುಮಂ ಅವಗವಾಡಿ ಹನ್ನೆರಡು xx... '' ಎಂದಿದೆ. ಇವು ಮಾಸವಾಡಿ- ೧೪೦ ವಿಭಾಗದಲ್ಲಿ ಬರುತ್ತಿದ್ದು, ಇತರ ಉಪವಿಭಾಗಗಳ ಉಲ್ಲೇಖ ತಿಳಿದುಬರುವುದಿಲ್ಲ.

ಪಾನುಂಗಲ್ಲು-೫೦೦ :

ಅಸುಂಡಿ ಶಾಸನದಲ್ಲಿ[೭೦] 'ಬನವಾಸಿ ಪನ್ನಿಚ್ಛಾಸಿರಮುಮಂ ಪಾನುಂಗಲ್ಲ ಯನ್ನೂರುಮಂ(ಮ)ತ್ತಂ' ಎಂದಿದೆ ಪಾನುಂಗಲ್ಲು-೫೦೦ ವಿಭಾಗವು ಇಂದಿನ ಹಾವೇರಿ ಜಿಲ್ಲೆಯ ಶಿಗ್ಗಾವಿ ತಾಲೂಕಿನ ಪಶ್ಚಿಮ ದಕ್ಷಿಣ ಭಾಗದ ಕೆಲವುಗ್ರಾಮ, ರಾಣೆಬೆನ್ನೂರು ತಾಲೂಕಿನ ಕೆಲವುಗ್ರಾಮ, ಶಿವಮೊಗ್ಗ ಜಿಲ್ಲೆಯ ಸೊರಬ ತಾಲೂಕಿನ ಕೆಲವುಗ್ರಾಮ, ಉತ್ತರ ಕನ್ನಡ ಜಿಲ್ಲೆಯ ಮುಂಡಗೋಡ ತಾಲೂಕಿನ ಕೆಲವು ಗ್ರಾಮಗಳನ್ನು ಹೊಂದಿತ್ತು. ಈ ವಿಭಾಗದ ಉತ್ತರಕ್ಕೆ ಬೆಳ್ವೊಲ

ಮೂನ್ನೂರು, ದಕ್ಷಿಣಕ್ಕೆ ವರದಾ ನದಿಗಳೇ ಮೇರೆಯಾಗಿದ್ದವೆಂದು ಹೇಳಬಹುದು. ಇಂದಿನ ಹಾವೇರಿ ಜಿಲ್ಲೆಯ ಹಾನಗಲ್ಲ ತಾಲೂಕಿನ ಮುಖ್ಯ ಗ್ರಾಮವಾಗಿರುವ ಹಾನಗಲ್ಲು ಎಂಬುದೇ ಹಿಂದೆ ಹಾನುಂಗಲ್ಲು, ಪಾನುಂಗಲ್ಲು ಎನಿಸಿ ಐದುನೂರು ಗ್ರಾಮಗಳಿಗೆ ಮುಖ್ಯ ಪಟ್ಟಣವಾಗಿತ್ತು. ಇದು ಬನವಾಸಿ-೧೨೦೦೦ದ ಉಪವಿಭಾಗವಾಗಿರಬೇಕು.

ಬನವಾಸಿ-೧೨೦೦೦ :

ಬನವಾಸಿ-೧೨೦೦೦ ಪ್ರಾಚೀನ ಕಾಲದಿಂದಲೂ ಜನಮನ ಸೂರೆಗೊಂಡ ಪ್ರೇಕ್ಷಣೀಯ ಸ್ಥಳವಾಗಿದೆ. ಈ ನಾಡನ್ನು ಮಹಾಕವಿ ಪಂಪನು[೭೧] ತನ್ನ ವಿಕ್ರಮಾರ್ಜುನ ವಿಜಯಂ ಮಹಾಕಾವ್ಯದಲ್ಲಿ ''ಅರಂಕುಸವಿಟ್ಟೊಡಂ ನೆನೆವುದೆನ್ನ ಮನಂ ವನವಾಸಿ ದೇಶಮಂ '' ಎಂದು ಬಾಯ್ತುಂಬ ಹೊಗಳಿದ್ದಾನೆ. ಅಸುಂಡಿಯ ಶಾಸನದಲ್ಲಿ[೭೨] ''ಬನವಾಸಿ ಪನ್ನಿಚ್ಛಾಸಿರಮುಮಂ'' ಎಂದಿದೆ. ಈಗ ಉಪಲಬ್ದದಿರುವ ಇದರ ಉಪವಿಭಾಗಗಳೆಂದರೆ ನೂರುಂಬಾಡ, ಇಟ್ಟಿಗೆ-೩೦, ರಟ್ಟಿಪಳ್ಳಿ- ೭೦, ಸತ್ತಳಿಗೆ- ೭೦, ಹೊನ್ನತ್ತಿ-೧೨, ನಾಗರಖಂಡ-೭೦, ಗಜಗಂಡ-೬೦೦, ಕಾಲಡಿ-೯೬, ಎಡವಟ್ಟ-೭೦, ಬಾಸವುರ- ೧೪೦, ಜಿಡ್ಡಳಿಗೆ-೭೦ ಮತ್ತು ಕರ್ಬುನಾಲಗೆ- ೭೦.

ಸತ್ತಳಿಗೆ-೭೦ :

ಇದು ಬನವಾಸಿ-೧೨೦೦ದ ಉಪವಿಭಾಗವಾಗಿದೆ. ಸತ್ತಳಿಗೆ ಎಂಬುದು ಈಗಿನ ಹಿರೇಕೆರೂರು ತಾಲೂಕಿನ ಸಾತೇನಹಳ್ಳಿ ಗ್ರಾಮವೇ ಇರಬೇಕೆಂದು ವಿದ್ವಾಂಸರ ಅಭಿಪ್ರಾಯ.[೭೩] ಈ ವಿಭಾಗವು ಇಂದಿನ ಧಾರವಾಡ ಜಿಲ್ಲೆಯ ಹಿರೇಕೆರೂರು, ರಾಣೆಬೆನ್ನೂರು ತಾಲೂಕಿನ ಕೆಲವು ಗ್ರಾಮಗಳನ್ನು ಒಳಗೊಂಡಿತ್ತು. ಅಸುಂಡಿಯ[೭೪] ಶಾಸನದಲ್ಲಿ 'ಸತ್ತಳಿಗೆಯೆಪ್ಪತ್ತರ ಬಳಿಯ ಬಾಡಂ ಹಸುಣ್ಡಿ''ಎಂದಿದೆ ಅಂದರೆ ಹಸುಂಡಿಯು ಈ ವಿಭಾಗದಲ್ಲಿತ್ತೆಂದು ತಿಳಿದು ಬರುತ್ತದೆ.

ಅರಕೆರೆ -೧೨ :

ಹಿರೇಕೆರೂರು ತಾಲೂಕಿನ ನಾಗವಂದ[೭೫] ಶಾಸನದಲ್ಲಿ ''xxಮರಕೆರೆ ಹಂನೆರಡು''ಎಂದು ಬರುತ್ತದೆ. ಇದು ಬನವಾಸಿ -೧೨೦೦೦ದ ಉಪವಿಭಾಗವಾಗಿತ್ತು.

ಎಡವಟ್ಟ -೭೦ :

ಎಪ್ಪತ್ತು ಗ್ರಾಮಗಳನ್ನು ಹೊಂದಿದ ಈ ವಿಭಾಗವು ಬನವಾಸಿ- ೧೨೦೦೦ದ ಉಪವಿಭಾಗವಾಗಿದೆ. ಮೇದೂರು[೭೬] ಶಾಸನದಲ್ಲಿ '....ರೆಡೆವಟ್ಟ- ೭೦ರ ಮೊದಲಬಾಡಂ ಮೆಜವುರದ' ಎಂದಿದೆ ಆದುದರಿಂದ ಇದರ ರಾಜಧಾನಿ 'ಮೆಜವುರ'ವಾಗಿದೆ ಇದು ಇಂದಿನ ಹಿರೇಕೆರೂರು ತಾಲೂಕಿನ ಮೆದೂರು ಗ್ರಾಮವೇ ಆಗಿದೆ. ಈ ವಿಭಾಗವು ಧಾರವಾಡ

ಜಿಲ್ಲೆಯ ಹಿರೇಕೆರೂರು ತಾಲೂಕಿನ ಶಿವಮೊಗ್ಗ ಜಿಲ್ಲೆಯ ಸೊರಬ ಮತ್ತು ಶಿಕಾರಿಪುರ ತಾಲೂಕುಗಳಲ್ಲಿಯ ಕೆಲವು ಗ್ರಾಮಗಳನ್ನು ಹೊಂದಿತ್ತು. ನಾಗವಂದ[೭೭] ಶಾಸನದಲ್ಲಿಯೂ ''......ರೆಡೆವಟ್ಟೆ ಯೆಪ್ಪತ್ತು'' ಎಂದು ಉಲ್ಲೇಖವಿದೆ.

ಸಿಂದವಾಡಿ-೧೦೦೦ :

ಸಿಂದವಾಡಿ-೧೦೦೦ದ ಉಲ್ಲೇಖವು ಸಿಂದವಾಳ,[೭೮] ಕರಕಾಂತಪುರ,[೭೯] ಪೆದ್ದತುಂಬಳಂ,[೮೦] ರಾಮದುರ್ಗ[೮೧]ಶಾಸನಗಳಲ್ಲಿ ಬರುತ್ತದೆ. ಶಾಸನಗಳಲ್ಲಿ ಇದನ್ನು 'ಸಿಂದವಾಡಿ ನಾಡು', 'ಸಿಂದವಾಡಿಸಾಸಿರ' ವೆಂದು ಕರೆಯಲಾಗಿದೆ. ಈ ವಿಭಾಗವು ಇಂದಿನ ಬಳ್ಳಾರಿ ಜಿಲ್ಲೆಯ ಸಿರಗುಪ್ಪ, ಬಳ್ಳಾರಿ, ಸೊಂಡೂರು, ಹೊಸಪೇಟೆ ತಾಲೂಕುಗಳ ಕೆಲವುಗ್ರಾಮಗಳನ್ನು, ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ಅದೋನಿ, ಗುತ್ತಿ, ಆಲೂರು ತಾಲೂಕಿನ ಕೆಲವು ಗ್ರಾಮಗಳನ್ನು ಒಳಗೊಂಡಿತ್ತು.

'ತುಂಬುಳ' ನಗರವು ಸಿಂದವಾಡಿ-೧೦೦೦ದ ರಾಜಧಾನಿಯಾಗಿದೆ. ಕಂದೂರಿ ಈಶ್ವರ ದತ್ತರವರು [೮೨] ಕೂಡ ಸಿಂದವಾಡಿಗೆ ತುಂಬಳವೇ ರಾಜಧಾನಿಯಾಗಿತ್ತೆಂದು ಹೇಳಿದ್ದಾರೆ. ವಿಕ್ರಮಾದಿತ್ಯನ ನಂತರ ಮುಂದೆ ಇದರ ರಾಜಧಾನಿ ಕುರಗೋಡಿಗೆ ಸ್ಥಳಾಂತರಗೊಂಡಿರಬೇಕು.[೮೩] ಏಕೆಂದರೆ ಪೆದ್ದತುಂಬಳಂ[೮೪] ಶಾಸನದಲ್ಲಿ ತುಂಬಳ-೩೦ ಒಂದು ಉಪವಿಭಾಗವಾಗಿ ಕಾಣಿಸಿಕೊಂಡಿದೆ. ಹೀಗೆ ಸಿಂಧವಾಡಿ-೧೦೦೦ದ ಉಪವಿಭಾಗಗಳೆಂದರೆ ಕಿಡಿಯಪೆ-೪೦, ಬಲ್ಲಕುಂದೆ -೩೦೦, ಅದವಾನಿ-೫೦೦, ಚಿನ್ನವಾಡಿ-೮೬ ಅಂದರೆ ಒಟ್ಟು ೯೨೬ ಗ್ರಾಮಗಳ ಲೆಕ್ಕ ಸಿಗುತ್ತದೆ. ಇನ್ನೂ ೭೪ ಗ್ರಾಮಗಳ ಲೆಕ್ಕ ಸಿಗಬೇಕಾಗಿದೆ.[೮೫] ಮೂರನೇ ಸೋಮೇಶ್ವರನ ಕಾಲದ ಶಾಸನಗಳಲ್ಲಿ ಅದವಾನಿ-೫೦೦ ಅದರ ಉಪವಿಭಾಗಗಳಾದ ತುಂಬಳ-೩೦, ಗರುಜೆ- ೭೦ರ ಉಲ್ಲೇಖವಿದೆ.

ಅದವಾನಿ-೫೦೦ :

ಅನಂತಪುರ ಜಿಲ್ಲೆಯ 'ಅದೋನಿ' ಸಿಂದವಾಡಿನಾಡಿನ ದೊಡ್ಡ ವಿಭಾಗವಾಗಿದೆ. ಈ ವಿಭಾಗವು ಇಂದಿನ ಬಳ್ಳಾರಿ ಜಿಲ್ಲೆಯ ಕೆಲವು ಗ್ರಾಮಗಳನ್ನು ಅನಂತಪುರ ಜಿಲ್ಲೆಯ ಅದೋನಿ, ಎಮ್ಮಿಗನೂರು, ಕರ್ನೂಲು ತಾಲೂಕಿನ ಕೆಲವು ಗ್ರಾಮಗಳನ್ನು ಒಳಗೊಂಡಿತ್ತು. ಅದೋನಿ ತಾಲೂಕಿನ ಕರಕಾಂತಪುರವು [೮೬] ಅದವಾನಿ-೫೦೦ರಲ್ಲಿತ್ತು.

ತುಂಬಳ-೩೦ :

ಇದು ಅದವಾನಿ-೫೦೦ರ ಉಪವಿಭಾಗವಾಗಿದೆ. ಅದೋನಿ ತಾಲೂಕಿನ ಪೆದ್ದತುಂಬಳಂ[೮೭] ಶಾಸನದಲ್ಲಿ 'ತುಂಬಳ ಮೂವ ಬಳಿಯ ಬಾಡಂ ನವಿಲೆರ' ಎಂದಿದೆ. ಈ ತುಂಬಳದ ಸುತ್ತಲಿನ ಗ್ರಾಮಗಳು ಈ ವಿಭಾಗದೊಳಗೆ ಇದ್ದವು.

ಗರುಜೆ -೭೬ :

ಎಪ್ಪತ್ತಾರು ಗ್ರಾಮಗಳ ಈ ವಿಭಾಗವು, ಅದೋನಿ -೫೦೦ರ ಉಪವಿಭಾಗವಾಗಿದೆ. ಗರುಜೆ-೭೦ರಲ್ಲಿ ಇಟ್ಟಿಗೆ ಗ್ರಾಮವನ್ನು ಮಹಾಮಂಡಳೇಶ್ವರ ಬಾಚರಸನು ದಾನ ಬಿಟ್ಟ ಉಲ್ಲೇಖವನ್ನು ಕರಕಾಂತಪುರ್[೮೮] ಶಾಸನದಲ್ಲಿ ಕಾಣುತ್ತೇವೆ.

ಸಬ್ಬಿ ಸಾಸಿರ :

ಕರೀಂನಗರ ತಾಲೂಕಿನ ಸನಿಗರಂ ಶಾಸನದಲ್ಲಿ[೮೯] ''ಸಬ್ಬಿ ಸಹಶ್ರಮುಸವದೊರ ರೇಪೊಲ ಕುರುವ ರಾಜು'' ಎಂದು ಸಬ್ಬಿ ಸಾಸಿರದ ಉಲ್ಲೇಖ ಬರುತ್ತದೆ. ಈ ವಿಭಾಗವು ಆಂಧ್ರ ಪ್ರದೇಶದ ಕರೀಂನಗರ, ಓರಂಗಲ್ ಜಿಲ್ಲೆಗಳ ಕೆಲವು ಗ್ರಾಮಗಳನ್ನು ಒಳಗೊಂಡು ಒಟ್ಟು ಸಾವಿರ ಗ್ರಾಮಗಳ ವಿಭಾಗವಾಗಿತ್ತು.

ಕೊಂಕಣ-೯೦೦:

ಈ ವಿಭಾಗವು ಮಹಾರಾಷ್ಟ್ರದ ರತ್ನಗಿರಿ ಜಿಲ್ಲೆಯ ದಕ್ಷಿಣ ಭಾಗವನ್ನು ಮತ್ತು ಉತ್ತರ ಕನ್ನಡ ಜಿಲ್ಲೆಯ ಉತ್ತರ-ಪಶ್ಚಿಮ ಭಾಗವನ್ನು ಒಳಗೊಂಡಿತ್ತು. ಆರ್.ಎನ್ ಗುರುವ್[೯೦] ಅವರು ೨೦೦ ಗ್ರಾಮಗಳು ಉತ್ತರ ಕನ್ನಡ ಜಿಲ್ಲೆಯಲ್ಲಿ, ಸುಮಾರು ೫೦೦ ಗ್ರಾಮಗಳು ಗೋವೆ ಭಾಗದಲ್ಲಿ ಇಂಡಿಗೆ ಜಿಲ್ಲೆಯಲ್ಲಿ ೭೦ ಹಳ್ಳಿಗಳು, ದಕ್ಷಿಣ ಭಾಗದ ರತ್ನಗಿರಿ ಜಿಲ್ಲೆಯಲ್ಲಿ ೭೦ ಹಳ್ಳಿಗಳು ಹರಡಿಕೊಂಡು ಕೊಂಕಣ೯೦೦ ವಿಭಾಗ ರೂಪುಗೊಂಡಿದ್ದಿತೆಂದು ಹೇಳಿದ್ದಾರೆ. ''ಕೊಂಕಣ ಒಂಬಯ್ನೂರುಮಂ'' ಎಂದು ಕಾಮಧೇನು[೯೧] ಶಾಸನದಲ್ಲಿ ಕರೆಯಲಾಗಿದೆ. ಇದರ ಉಪವಿಭಾಗಗಳ, ಇದರಲ್ಲಿದ್ದ ಎಲ್ಲ ಗ್ರಾಮಗಳ ವಿವರವಾದ ಉಲ್ಲೇಖ ಸಿಗುವುದಿಲ್ಲ.

ಕೊಳ್ಳಿಪಾಕೆ-೭೦೦೦ :

ಡಾ.ಎಸ್.ಶಟ್ಟರ್[೯೨] ಅವರು ಹೈದರಾಬಾದಕ್ಕೆ ಪೂರ್ವ-ಉತ್ತರದ ಕಡೆಗೆ ೪೫ ಮೈಲು ದೂರದಲ್ಲಿರುವ 'ಕಲ್ಪಾಕ' ಗ್ರಾಮವೇ ಹಿಂದೆ ಕೊಳ್ಳಿಪಾಕೆಯಾಗಿತ್ತು ಎಂದಿದ್ದಾರೆ. ತಮಿಳು ಶಾಸನಗಳಲ್ಲಿ ಈ ವಿಭಾಗವನ್ನು 'ಕುಲ್ಪಾಪಾಕೆ' 'ಕೊಳ್ಳಿಪಾಕೆ' 'ಕೊಳ್ಳಿಪಾಕ್ಕೈ'[೯೩] ಎಂದು ಕರೆಯಲಾಗಿದೆ. ಏಳು ಸಾವಿರ ಗ್ರಾಮಗಳ ಈ ವಿಭಾಗದ ರಾಜಧಾನಿ ಈಗ ನಾಲ್ಕೊಂಡ ಜಿಲ್ಲೆಯ 'ಕೋಲನುಪಾಕ' ಕೋಲನುಪಾಕದ ಶಾಸನದಲ್ಲಿ[೯೪] ''ಕುಮಾರಂ ಸೋಮೇಶ್ವರ ದೇವರು ಕೊಳ್ಲಿಪಾಕೆ ಎಚ್ಚಾಸಿರ ಮಾದಿಯಾಗಿ ಪಲವುಂ ದೇಶಂಗಳನಾಳುತ್ತಮಿರೆ'' ಎಂದು ಹೇಳಲಾಗಿದೆ. ಹೆಚ್ಚು ಪ್ರಸಿದ್ಧವಾಗಿರುವ ಅನೇಕ ಶಾಸನಗಳನ್ನು ಹೊಂದಿರುವ ಇಂದಿನ ಕೋಲನುಪಾಕವೇ 'ಕೊಳ್ಳಿಪಾಕೆ'ಯಾಗಿರಬೇಕು. ಇದರ ಮೇರೆಯನ್ನು ಸ್ಪಷ್ಟವಾಗಿ ಗುರುತಿಸಲು ಸಾಧ್ಯವಾಗಿಲ್ಲವಾದರೂ ಇಂದಿನ ನಾಲ್ಗೊಂಡ ಜಿಲ್ಲೆ ಹಾಗೂ ಇದರ ಸುತ್ತಲಿನ ಜಿಲ್ಲೆಗಳ ಕೆಲವು ಗ್ರಾಮಗಳನ್ನು ಒಲಗೊಂಡಿತ್ತೆಂದು ಹೇಳಬಹುದು.

ವೇಳ್ಪುಗೊಂಡ-೨೪ :

ಇಪ್ಪತ್ನಾಲ್ಕು ಗ್ರಾಮಗಳನ್ನು ಒಳಗೊಂಡಿದ್ದ ಈ ವಿಭಾಗದ ಉಲ್ಲೇಖ ಗುಡೂರಿನ ಶಾಸನದಲ್ಲಿ[೯೫] 'ವೆಲ್ಪುಗೊಂಡೆ-೨೪ ಬಳಿಯ ಬಮ್ಮರಿಗೆ' ಎಂದಿದೆ. 'ಬಮ್ಮರಿಗೆ' ಎನ್ನುವ ಗ್ರಾಮ ಈ ವಿಭಾಗದಲ್ಲಿತ್ತು.

ಕಲ್ವಚೇಡು-೪೦ :

ಕೋಲನುಪಾಕದ ಎರಡು ಶಾಸನದಲ್ಲಿ ಈ ವಿಭಾಗದ ಉಲ್ಲೇಖ ಬರುತ್ತದೆ. 'ಕಲ್ವಚೆಡ್ಲ ನಾಲ್ವತ್ತರ ಬಳಿಯ ಸೋಮನಾಥ ಭಟ್ಟರ ಪ್ರಭುತ್ವದಗ್ರಹಾರಂ ತಾಂಡಿಪಾಮುಲಕಂ'[೯೬] ಎಂದೂ ಮತ್ತು 'ಕಲ್ವಚೇಡು ನಾಲ್ವತ್ತರ ಬಳಿಯ ನಲ್ಲೂಟಿನ ಪಿರೆಯಕೆರೆ'[೯೭] ಎಂದೂ ಬರುತ್ತದೆ. ಅಂದರೆ ತಾಂಡಿಪಾಮುಲಂಕಂ ಮತ್ತು ನೆಲ್ಲೂಟಿ ಗ್ರಾಮಗಳು ಈ ವಿಭಾಗದಲ್ಲಿದ್ದವು ಎಂದು ಹೇಳಬಹುದು.

ಮುಳ್ಕಿ-೩೦೦ :

ಮುಳ್ಕಿ-೩೦೦ರ ಉಲ್ಲೇಖವು ಆಂಧ್ರಪ್ರದೇಶದ ಕಡಪಾ ಜಿಲ್ಲೆಯ ಕಾಮಾಪುರಂ ತಾಲ್ಲೂಕಿನ ಪೆದ್ದಚಪ್ಪಲಿ ಶಾಸನದಲ್ಲಿ[೯೮] ''ಮುಳ್ಕಿ ಮುಂನೂXX ರಾಜಧಾನಿ ನೆಲ್ಲೂರು ಪಟ್ಟಣ''ಎಂದು ಬರುತ್ತದೆ. ಅಂದರೆ ಈ ನೆಲ್ಲೂರು ಪಟ್ಟಣವು ಮುಳ್ಕಿ-೩೦೦ರ ರಾಜಧಾನಿಯಾಗಿತ್ತೆಂದು ಹೇಳಬಹುದು.

ಮುದುಗುಂದೂರು-೩೦೦ :

ಮುದುಗುಂದೂರ-೩೦೦ ನಾಡಿನ ಉಲ್ಲೇಖವು ಕ್ರಿ.ಶ.೧೧೨೪ ಶಾಸನದಲ್ಲಿ ಮೊದಲಿಗೆ ಬಂದಿದೆ. ಕಲ್ಲೂರು ಶಾಸನದಲ್ಲಿ[೯೯] ಮುದುಗುಂದೂರನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಹೈಹೇಯ ವಂಶದ ಬಾಚಿದೇವ ಆಳುತ್ತಿದ್ದಂತೆ ಹೇಳಿದೆ. ಶಾಸನಗಳು ದೊರೆತಿರುವ ಸ್ಥಳಗಳನ್ನು ಗಮನಿಸಿದಾಗ ಈ ಪ್ರದೇಶವು ಮಾನ್ವಿ ಮತ್ತು ರಾಯಚೂರು ತಾಲ್ಲೂಕುಗಳಲ್ಲಿ ಹರಡಿಕೊಂಡಿದ್ದಂತೆ ಊಹಿಸಬಹುದು. ''ಮುದುಗುಂದೂರು ಮುನ್ನೂರಮಂ ದುಷ್ಟನಿಗ್ರಹ ಶಿಷ್ಟಪ್ರತಿಪಾಳದಿಂ ನಿಜರಾಜಧಾನಿಯಪ್ಪ ಮುದಗುಂದೂರ ಕೋಟೆಯೊಳು'' ಎಂಬ ಉಲ್ಲೇಖದಿಂದ[೧೦೦] ಇದರ ರಾಜಧಾನಿ ಮುದಗುಂದೂರು ಆಗಿತ್ತೆಂದು ಹೇಳಬಹುದು.

ನೊಳಂಬವಾಡಿ-೩೨೦೦೦ :

'ನೊಳಂಬವಾಡಿ' (ನೊಣಂಬವಾಡಿ) ಎಂಬ ಶಬ್ದಕ್ಕೆ ತಮಿಳಿನಲ್ಲಿ ದೊಡ್ಡ ಭಾಗವೆಂಬ ಅರ್ಥವಿದೆ, ಈ ಪ್ರದೇಶವನ್ನು ಆಳುತ್ತಿದ್ದ ಪಲ್ಲವರಿಗೆ ಗಂಗರ, ರಾಷ್ಟ್ರಕೂಟರ, ಚಾಳುಕ್ಯರ ಕಾಲದಲ್ಲಿ 'ನೊಣಂಬರು' ಅಥವಾ 'ನೊಳಂಬರು'ಎಂದು ಕರೆಯಲಾಗಿದೆ. ಆರಂಭದಲ್ಲಿ ಈ ನೊಳಂಬವಾಡಿಯ ರಾಜಧಾನಿ 'ಪೆಂಜೇರು' ಅಥವಾ 'ಹೆಂಜೇರು' ಆಗಿತ್ತು. ಈಗಿನ ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ 'ಹೇಮಾವತಿ' ಗ್ರಾಮವೇ ಪುರಾತನ 'ಹೆಂಜೇರು'.

ಒಂದು ಕಾಲದಲ್ಲಿ ಬಳ್ಳಾರಿ ಜಿಲ್ಲೆಯ 'ಕಂಪಿಲಿ' (ಈಗಿನ ಕಂಪ್ಲಿ)ಯೂ ಇದರ ರಾಜಧಾನಿಯಾಗಿತ್ತು. ರಾಷ್ಟ್ರಕೂಟರ ಕಾಲದಲ್ಲಿ ಚಿಕ್ಕ ವಿಭಾಗವಾಗಿದ್ದ ಇದು ಮುಂದೆ ೩೨೦೦೦ ಗ್ರಾಮಗಳನ್ನು ಹೊಂದಿ ದೊಡ್ಡ ವಿಭಾಗವಾಗಿ ಪರಿಣಮಿಸಿತು. ಆರನೆಯ ವಿಕ್ರಮಾದಿತ್ಯನ ಕಾಲಕ್ಕೆ ಪಾಂಡ್ಯರು ಮಹಾಮಂಡಳೇಶ್ವರರಾಗಿ ನೊಳಂಬವಾಡಿ-೩೨೦೦೦ವನ್ನು ಆಳುತ್ತಿದ್ದರು. ಇವರ ಕಾಲದಲ್ಲಿ ಇದರ ರಾಜಧಾನಿಯು ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ತಾಲೂಕಿನ ಉಚ್ಚಂಗಿ ದುರ್ಗವಾಗಿತ್ತು. ನೊಳಂಬವಾಡಿ ೩೨೦೦೦ದ ವಿಭಾಗವು ಈಗಿನ ಚಿತ್ರದುರ್ಗ, ಶಿವಮೊಗ್ಗ, ಬಳ್ಳಾರಿ ತುಮಕೂರು ಜಿಲ್ಲೆಯ ಕೆಲವು ಗ್ರಾಮಗಳನ್ನು, ಆಂಧ್ರಪ್ರದೇಶದ ಅನಂತಪುರ ಕರ್ನೂಲ ಜಿಲ್ಲೆಯ ಕೆಲವು ಗ್ರಾಮಗಳನ್ನು ಒಳಗೊಂಡಿತ್ತು. ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ತಾಲೂಕಿನ ರಾಗಿಮುಸಲವಾಡಿ ಶಾಸನದಲ್ಲಿ[೧೦೧] ನೊಳಂಬವಾಡಿ ಮೂವತ್ತಿರ್ಚ್ಛಾಸಿರದ ವಡ್ಡರಾವುಳ'' ಎಂದಿದೆ.

ಮೂರನೆಯ ಸೋಮೇಶ್ವರನ ಅಧಿಪತ್ಯಕ್ಕೆ ಒಳಪಟ್ಟಿದ್ದ ಆಡಳಿತದ ಕೆಲವು ವಿಭಾಗಗಳನ್ನು ಉಪವಿಭಾಗಗಳನ್ನು ಮತ್ತು ಕೆಲವು ಗ್ರಾಮಗಳ ಉಲ್ಲೇಖವನ್ನು ಇಲ್ಲಿ ಕೊಡಲಾಗಿದೆ. ಆದರೆ ಆ ವಿಭಾಗಗಳು ಒಳಗೊಂಡಿದ್ದ ಎಲ್ಲ ಗ್ರಾಮಗಳನ್ನು ಪತ್ತೆಹಚ್ಚುವುದು ಕಷ್ಟದಾಯಕದ ಕೆಲಸವೆನ್ನಬಹುದು. ಏಕೆಂದರೆ ಕೆಲವು ಶಾಸನಗಳಲ್ಲಿ ಆಡಳಿದ ವಿಭಾಗಗಳ ಉಲ್ಲೇಖವಿರದೆ, ಕೇವಲ ಗ್ರಾಮಗಳ ಉಲ್ಲೇಖ ಮಾತ್ರ ಕಂಡು ಬರುತ್ತದೆ. ಮತ್ತೆ ಕೆಲವು ಶಾಸನಗಳಲ್ಲಿ ವಿಭಾಗಗಳ ಮುಂದಿರುವ ಸಂಖ್ಯೆಗಳು ಕಂಡುಬರುವುದಿಲ್ಲ ಮತ್ತೆ ಕೆಲವು ಶಾಸನಗಳು ಅಲ್ಲಲ್ಲಿ ಹಾಳಾಗಿ ಹೋಗಿವೆ. ಹೀಗಾಗಿ ನಮಗೆ ಈ ಆಡಳಿತ ವಿಭಾಗಗಳಲ್ಲಿಯ ಗ್ರಾಮಗಳನ್ನು ಪತ್ತೆ ಹಚ್ಚುವುದು ಕಷ್ಟದಾಯಕ ಕೆಲಸವೆನ್ನಬಹುದು. ಆದರೂ ಕೂಡ ದೊರೆತ ಶಾಸನಗಳನ್ನು ಆಧಾರವಾಗಿಟ್ಟುಕೊಂಡು ಈ ವಿಭಾಗಗಳನ್ನು ಕುರಿತು ವಿವೇಚಿಸಲಾಗಿದೆ.

ಅಡಿಟಿಪ್ಪಣಿ :

೧. Ritti, S.H. and Shelke, G.C., (Ed.) *Inscriptions from Nanded District,* Jntro p. LII.

೨. ಎಸ್.ಆಯ್.ಆಯ್., *ಸಂಪುಟ*- XX, ನಂ. ೧೦೦, ಬಿಜಾಪುರ, ಕ್ರಿ.ಶ.೧೧೨೯, ಜನೆವರಿ, ೧೭.

೩. ಅದೇ, *ಸಂಪುಟ*- XX, ನಂ. ೯೮, ಕಡ್ಲೇವಾಡ, ಕ್ರಿ.ಶ. ೧೧೨೭, ಡಿಸೆಂಬರ್, ೨೫.

೪. ಅದೇ, ನಂ. ೧೦೧, ಕಾಮಧೇನು, ಕ್ರಿ.ಶ. ೧೧೨೯, ಮಾರ್ಚ್, ೨೩.

೫. ಅದೇ, ನಂ. ೧೩೩, ಅಸುಂಡಿ, ಕ್ರಿ.ಶ. ೧೧೨೭ ಡಿಸೆಂಬರ್ ೨೫.

೬. ಗಣೇಶ, ಕೆ.ಆರ್.(ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ* -೩, ನಂ. ೪೧೧, ಸನಿಗರಂ, ಕ್ರಿ.ಶ ೧೧೨೮.

೭. ದೇವರ ಕೊಂಡಾರೆಡ್ಡಿ (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ* -೧, ನಂ. ೬೪, ನಿಂಧವಾಳ, ಕ್ರಿ.ಶ.೧೧೩೪, ಅಕ್ಟೋಬರ್ ೪.

೮. Rice (B.K) : *Mysore and Coorg from the Inscriptions,* Landon: Archibold Constable of contable of com 1909 p-174 "But from an early period all the great provincer and their subdivisions commonly had their revenue value attached to the name. Thar while kuntala and Ratta vadi were a seven and half country... The figureo apparentty indicated nishkao.. but they are popularly supposed to be epuivalent to varahas or pagodor.

೯. Imperial Gazetter of India X New Delhi Today and Tammcrow ? Footnote p-291 "These numerical designations almost invaribly attached to the, Name of ancient divisions in Mysore, apparently refer to their revenue capacity orto the number of their Nads"

೧೦. Lakshminarayanarao(N) *Genealogi and Chieftains of sauntatti and Chronology of the Nolamba Pallava,* (Q.J.M.S XLVII) 1957-58 p-28.

೧೧. J.B.B.R.A.S.X. p 168-109.

೧೨. ಕೆ.ಆಯ್.*ಸಂಪುಟ*- V, ನಂ.೨೪, ನರಗುಂದ, ಕ್ರಿ.ಶ.೧೧೩೮, ಏಪ್ರಿಲ್, ೨೬.

೧೩. ಗಣೇಶ,ಕೆ.ಆಯ್(ಸಂ)., *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೫,* ನಂ. ೩೩೧, ರಾಮದುರ್ಗ, ಕ್ರಿ.ಶ.೧೧೩೪, ಜುಲೈ ೨೩.

೧೪. ಎಸ್.ಆಯ್.ಆಯ್., *ಸಂಪುಟ*- XVIII, ನಂ. ೧೩೩, ಅಸುಂಡಿ, ಕ್ರಿ.ಶ.೧೧೨೭, ಡಿಸೆಂಬರ್, ೨೫.

೧೫. ಗೋಪಾಲ, ಬಿ.ಆರ್., (ಸಂ.)ಕರ್ನಾಟಕ ಭಾರತಿ, ಸಂಪುಟ-೧, ಪು. ೪೫.

೧೬. ಎಸ್.ಆಯ್.ಆಯ್., *ಸಂಪುಟ*- XVIII, ನಂ. ೧೦೬, ನಾಡ, ಕ್ರಿ.ಶ.೧೧೩೪, ಅಕ್ಟೋಬರ್, ೨೫.

೧೭. ಅದೇ, *ಸಂಪುಟ*- XV, ನಂ.೧೨, ಇಂಗಳೇಶ್ವರ, ಕ್ರಿ.ಶ.೧೧೨೯, ನವಂಬರ್, ೮.

೧೮. ಅದೇ, *ಸಂಪುಟ*- XX, ನಂ. ೧೦೧, ಕಾಮಧೇನು, ಕ್ರಿ.ಶ.೧೧೨೯, ಮಾರ್ಚ್, ೨೩.

೧೯. ಅದೇ, *ಸಂಪುಟ*- XVIII, ನಂ. ೧೩೬, ಕ್ರಿ.ಶ.೧೧೩೪, ಡಿಸೆಂಬರ್, ೨೨.

೨೦. ಅದೇ, *ಸಂಪುಟ*- XVIII ನಂ. ೯೮, ಕ್ರಿ.ಶ.೧೧೨೭, ಕಡ್ಲೇವಾಡ, ಡಿಸೆಂಬರ್, ೨೫.

೨೧. ಉಪಾಧ್ಯ, ಜಿ.ಎನ್(ಸಂ)., *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೬*, ನಂ.೭೨, ಕರಾಡಖೇಡ, ಕ್ರಿ.ಶ. ೧೧೩೦, ಡಿಸೆಂಬರ್, ೨೧.

೨೨. ಕೆ.ಆಯ್.*ಸಂಪುಟ*- V, ನಂ.೨೪, ನರಗುಂದ, ಕ್ರಿ.ಶ.೧೧೩೮, ಏಪ್ರಿಲ್, ೨೬.

೨೩. ಗಣೇಶ,ಕೆ.ಆರ್., *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೫*, ನಂ.೨೭೬, ಕಂಕಾಂತಪುರ, ಕ್ರಿ.ಶ.೧೧೩೨, ಮಾರ್ಚ್, ೨೩.

೨೪. Kundanagar, K.G., (Ed.), *Inscriptions in Northarn Karnataka and the Kholapur State No.3*, ಮುತ್ತಿಗೆ, ಕ್ರಿ.ಶ.೧೦೭೯.

೨೫. ಗಣೇಶ,ಕೆ.ಆರ್(ಸಂ)., *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೫*, ನಂ. ೩೭೩.

೨೬. ಗೋಗಿ, ಹನುಮಾಕ್ಷಿ., (ಸಂ.) *ಸುರಪುರ ತಾಲೂಕಿನ ಶಾಸನಗಳು*, ನಂ .೧೫, ಹುಣಸಗಿ, ಕ್ರಿ.ಶ.೧೧೩೬, ಫೆಬ್ರುವರಿ, ೫.

೨೭. ಕಲಬುರ್ಗಿ, ಎಂ.ಎಂ., ರಾಜಧಾನಿ ಒಂದು ಸ್ವಪ್ನ, ಸಾಧನೆ-೧೧, ಜನವರಿ-ಮಾರ್ಚ್, ಕ್ರಿ.ಶ.೧೯೮೧, ೩೨-೩೫.

೨೮. ಎ.ಇ, ೧೨., ನಂ.೩೨. Noteo by Fleet, ಪು.೨೯೬

೨೯. ಹಿರೇಮಠ, ಸಿ.ಬಿ, ಎಡದೊರೆ ನಾಡು, ೨೦೦೦ ಪು. ೩.

೩೦. ದೇವರಕೊಂಡಾರೆಡ್ಡಿ(ಸಂ)., *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೭*, ನಂ. ೭, ಕ್ರಿ.ಶ.೧೧೨೮, ಮಾರ್ಚ್, ೩.

೩೧. ನಾಗಯ್ಯ,ಜಿ.ಎಂ., *ಆರನೇ ವಿಕ್ರಮಾದಿತ್ಯನ ಶಾಸನಗಳು ಒಂದು ಅಧ್ಯಯನ*, ೧೯೯೨, ಪು.೧೦೯.

೩೨. ಶಿರೂರ, ಬಿ.ವ್ಹಿ, *ಯಲಬುರ್ಗಿಯ ಸಿಂದರು*, ಕ.ವಿ.ವಿ.ಧಾರವಾಡ, ೧೯೭೭.

೩೩. ಹಿರೇಮಠ, ಚನ್ನಬಸಬಸವ, ಎಡೆದೊರೆನಾಡು, ಕನ್ನಡ ವಿಶ್ವ ವಿದ್ಯಾಲಯ ಹಂಪಿ, ೨೦೦೦, ಪು.೫.

೩೪. ದೇವರ ಕೊಂಡಾರೆಡ್ಡಿ(ಸಂ)., *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೨*, ನಂ.೨೬, ಮಾದಿನೂರು, ಕ್ರಿ.ಶ.೧೧೩೬, ಡಿಸೆಂಬರ್, ೧೦.

೩೫. ಹಿರೇಮಠ, ಚನ್ನಬಸಬಸವ., ಎಡೆದೊರೆನಾಡು, ಕನ್ನಡ ವಿಶ್ವ ವಿದ್ಯಾಲಯ ಹಂಪಿ, ೨೦೦೦, ಪು. ೮.

೩೬. ಗೋಗಿ, ಹನುಮಾಕ್ಷಿ., (ಸಂ.), *ಸುರಪುರ ತಾಲೂಕಿನ ಶಾಸನಗಳು,* ನಂ. ೬೭, ಮುದನೂರು, ಕ್ರಿ.ಶ. ೧೧೨೯, ಡಿಸೆಂಬರ್, ೨೪.

೩೭. ಅದೇ, ನಂ.೩೨, ಸಿರಿವಾಳ, ಕ್ರಿ.ಶ.೧೧೩೭.

೩೮. ಅದೇ, *ಕಲಬುರ್ಗಿ ಜಿಲ್ಲೆಯ ಶಾಸನಗಳು,* ನಂ.೪೮, ಯಲ್ಲಾಬಾದ, ಕ್ರಿ.ಶ.೧೧೩೬.

೩೯. ನಾಗಯ್ಯ, ಜಿ.ಎಂ., *ಆರನೆಯ ವಿಕ್ರಮಾದಿತ್ಯನಶಾಸನಗಳು : ಒಂದು ಅಧ್ಯಯನ,* ೧೯೯೨, ಪು. ೯೧.

೪೦. ಉಪಧ್ಯ, ಜಿ.ಎನ್(ಸಂ)., *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೬,* ನಂ.೯, ಅಣದೂರು, ಕ್ರಿ.ಶ. ೧೧೩೭.

೪೧. ಎಚ್.ಮತ್ತು ಸಿ., ೫೭, ಮಣ್ಣೂರು, ಕ್ರಿ.ಶ. ೧೧೨೧, ಮಾರ್ಚ್, ೧೦.

೪೨. ಎಸ್.ಆಯ್.ಆಯ್., *ಸಂಪುಟ-* XX, ನಂ. ೧೦೫, ಮಣ್ಣೂರು, ಕ್ರಿ.ಶ. ೧೧೩೪, ಜುಲೈ, ೨೩.

೪೩. ಎಚ್.ಮತ್ತು ಸಿ., ನಂ.೩೪, ರುದ್ರನಾಡಿ, ಕ್ರಿ.ಶ. ೧೧೦೩, ಡಿಸಂಬರ್, ೧೦.

೪೪. ಉಪಾಧ್ಯ, ಜಿ.ಎನ್(ಸಂ)., *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೬,* ನಂ.೧೫, ನಾರಂಗವಾಡಿ, ಕ್ರಿ.ಶ. ೧೧೨೯ ಅಕ್ಟೋಬರ್ ೨೪.

೪೫. ಎಸ್.ಆಯ್.ಆಯ್., *ಸಂಪುಟ-* XVIII, ನಂ.೯೮, ಕಡ್ಲೇವಾಡ, ಕ್ರಿ.ಶ.೧೧೨೭, ಡಿಸೆಂಬರ್, ೨೫.

೪೬. ಎ.ಪಿ.ಜಿ.ಎಸ್. ಸಂಪುಟ -೯ ನಂ. ೧೮, ೧೯, ಹಂದರಕಿ, ಕ್ರಿ.ಶ. ೧೧೧೮, ಜೂನ್ ೫.

೪೭. ನಾಗಯ್ಯ,ಜಿ.ಎಂ., *ಆರನೆಯ ವಿಕ್ರಮಾದಿತ್ಯನಶಾಸನಗಳು : ಒಂದು ಅಧ್ಯಯನ,* ೧೯೯೨, ಪು. ೧೦೨.

೪೮. ಎಸ್.ಆಯ್.ಆಯ್., *ಸಂಪುಟ-* XX, ನಂ. ೧೦೦, ಬಿಜಾಪುರ, ಕ್ರಿ.ಶ.೧೧೨೯, ಜನೆವರಿ, ೧೭.

೪೯. ಅದೇ, *ಸಂಪುಟ-* XX, ನಂ.೨೮೬, ಕಡ್ಲೇವಾಡ, ಕ್ರಿ.ಶ.೧೧೨೫, ಡಿಸೆಂಬರ್, ೩.

೫೦. ಅದೇ, ನಂ.೧೦೦, ಬಿಜಾಪುರ, ಕ್ರಿ.ಶ.೧೧೨೯, ಜನೆವರಿ, ೧೭.

೫೧. ಅದೇ.

೫೨. ಕಲಬುರ್ಗಿ, ಎಂ.ಎಂ., *ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ,* ಧಾರವಾಡ, ಕ.ವಿ.ವಿ.೧೯೭೩, ಪು. ೪೯.

೫೩. ಕೆ.ಆಯ್., ಸಂಪುಟ-V ನಂ.೨೪, ನರಗುಂದ, ಕ್ರಿ.ಶ.೧೧೩೮,ಏಪ್ರಿಲ್, ೨೬.

೫೪. ನಾಗಯ್ಯ, ಜಿ.ಎಂ., *ಆರನೆಯ ವಿಕ್ರಮಾದಿತ್ಯನಶಾಸನಗಳು : ಒಂದು ಅಧ್ಯಯನ,* ಒಂ.ಅ, ೧೯೯೨, ಪು. ೧೦೬.

೫೫. ಕೆ.ಆಯ್., ಸಂಪುಟ-Vನಂ,೨೪, ನರಗುಂದ, ಕ್ರಿ.ಶ. ೧೧೩೮, ಏಪ್ರಿಲ್, ೨೬.

೫೬. ರಿತ್ತಿ ಶ್ರೀನಿವಾಸ., *ಬೆಳ್ವೊಲ ಮುನೂರು,* ಕರ್ನಾಟಕ ಭಾರತಿ, ಸಂ.೧,(೧) ೧೯೬೮, ಪು.೮೫.

೫೭. ಕೆ.ಆಯ್., ಸಂಪುಟ-Vನಂ.೨೪, ನರಗುಂದ, ಕ್ರಿ.ಶ.೧೧೩೮, ಏಪ್ರಿಲ್,-೨೬.

೫೮. ಅದೇ.

೫೯. ಕೆ.ಆಯ್., ಸಂಪುಟ-Vನಂ.೨೪, ನರಗುಂದ, ಕ್ರಿ.ಶ.೧೧೩೮, ಏಪ್ರಿಲ್,-೨೬.

೬೦. ಗೋಪಾಲ, ಬಿ.ಆರ್., (ಸಂ.)., *ಕರ್ನಾಟಕ ಭಾರತಿ*, ಸಂ. ೧(೧), ೧೯೬೮ ,ಪು.೮೫.

೬೧. ದೇವರಕೊಂಡಾರೆಡ್ಡಿ(ಸಂ)., *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೨*, ನಂ. ೫೩, ಕುಕನೂರು, ಕ್ರಿ.ಶ.೧೧೨೯, ಡಿಸೆಂಬರ್, ೨೫.

೬೨. ಅದೇ, ನಂ. ೩೮, ಕುಕನೂರು, ಕ್ರಿ.ಶ.೧೧೩೨, ಮಾರ್ಚ್, ೩.

೬೩. ಅದೇ, ನಂ. ೧೬, ಕಲ್ಲೂರು, ಕ್ರಿ.ಶ.೧೧೩೨, ಡಿಸೆಂಬರ್, ೨೪.

೬೪. ಎಸ್.ಆಯ್.ಆಯ್., *ಸಂಪುಟ*- XX, ನಂ.೯೯, ಲಕ್ಷ್ಮೇಶ್ವರ, ಕ್ರಿ.ಶ. ೧೧೩೮, ಜುಲೈ, ೪.

೬೫. ಅದೇ, XX, ನಂ. ೧೦೭,ಲಕ್ಷ್ಮೇಶ್ವರ, ಕ್ರಿ.ಶ.೧೧೩೮ , ನವ್ಹೆಂಬರ್, ೧೮.

೬೬. ಕೆ.ಆಯ್.ಆಯ್., *ಸಂಪುಟ*- V,ನಂ.೨೪, ನರಗುಂದ, ಕ್ರಿ.ಶ.೧೧೩೮, ಏಪ್ರಿಲ್, ೨೬.

೬೭. ಕಲಬುರ್ಗಿ,ಎಂ.ಎಂ., *ಕವಿರಾಜ ಮಾರ್ಗ ಪರಿಸರದ ಕನ್ನಡ ಸಾಹಿತ್ಯ*, ಧಾರವಾಡ, ಕ.ವಿ.ವಿ. ೧೯೭೩,ಪು.೪೯.

೬೮. ಎಸ್.ಆಯ್.ಆಯ್., *ಸಂಪುಟ*- XX,ನಂ. ೯೯, ಲಕ್ಷ್ಮೇಶ್ವರ, ಕ್ರಿ.ಶ. ೧೧೨೮, ಜುಲೈ, ೪.

೬೯. ಅದೇ, *ಸಂಪುಟ*- XI, ನಂ.೧೭೮, ಚಿಕ್ಕವಡೆವಟ್ಟ, ಕ್ರಿ.ಶ. ೧೧೨೭,ಜನೆವರಿ, ೧೯.

೭೦. ಅದೇ, *ಸಂಪುಟ*- XX, ನಂ. ೯೮, ಕಡ್ಲೇವಾಡ, ಕ್ರಿ.ಶ. ೧೧೨೭, ಡಿಸೆಂಬರ್, ೨೫.

೭೧. ಪುಟ್ಟಪ್ಪ ಕೆ.ವಿ., (ಸಂ) *ಪಂಪ ಭಾರತಂ ಎಂಬ ವಿಕ್ರಮಾರ್ಜುನ ವಿಜಯಂ*, ಮೈಸೂರು, ವಿಶ್ವವಿದ್ಯಾಲಯ,ಕ್ರಿ.ಶ. ೧೯೯೭, ಪು.೯೮-೯೯.

೭೨. ಎಸ್.ಆಯ್.ಆಯ್., *ಸಂಪುಟ*- XV ನಂ. ೧೩೩, ಅಸುಂಡಿ, ಕ್ರಿ.ಶ.೧೧೨೭, ಡಿಸೆಂಬರ್, ೨೫.

೭೩. ಅದೇ, *ಸಂಪುಟ*- XVIII, ಪೀಠಿಕೆ, ಪು.೨೭.

೭೪. ಅದೇ, *ಸಂಪುಟ*- XVನಂ. ೧೩೩, ಅಸುಂಡಿ, ಕ್ರಿ.ಶ. ೧೧೨೭, ಡಿಸೆಂಬರ್, ೨೫.

೭೫. ಕೆ.ಆಯ್., *ಸಂಪುಟ*- VI, ನಂ.೨೫, ನಾಗವಂದ, ಕ್ರಿ.ಶ. ೧೧೨೮, ನವಂಬರ್, ೮.

೭೬. ಅದೇ, *ಸಂಪುಟ*- IV, ನಂ. ೩೯, ಮೆದೂರು, ಕ್ರಿ.ಶ. ೧೧೧೧, ಡಿಸೆಂಬರ್, ೨೭.

೭೭. ಅದೇ, *ಸಂಪುಟ*- VI, ನಂ. ೩೫, ನಾಗವಂದ, ಕ್ರಿ.ಶ. ೧೧೨೮, ನವಂಬರ್, ೮.

೭೮. ದೇವರ ಕೊಂಡಾರೆಡ್ಡಿ(ಸಂ)., *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೧*,ನಂ. ೬೪, ಸಿಂದವಾಳ, ಕ್ರಿ.ಶ. ೧೧೩೦, ಅಕ್ಟೋಬರ್, ೪.

೭೯. ಗಣೇಶ, ಕೆ.ಆರ್(ಸಂ)., *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೫*, ನಂ.೨೭೬, ಕರಕಾಂತಪುರ, ಕ್ರಿ.ಶ.೧೧೩೨,ಮಾರ್ಚ್, ೨೩.

೮೦. ಅದೇ, ನಂ.೩೦೧, ಪೆದ್ದತುಂಬಳಂ, ಕ್ರಿ.ಶ.೧೧೩೩, ಡಿಸೆಂಬರ್, ೨೩.

೮೧. ಗಣೇಶ, ಕೆ.ಆರ್(ಸಂ)., *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೫*, ನಂ. ೩೩೧, ರಾಮದುರ್ಗ, ಕ್ರಿ.ಶ. ೧೧೩೪, ಜುಲೈ, ೨೩.

೮೨. ಕಂದೂರಿ, ಈಶ್ವರಿದತ್ತ, ಪ್ರಾಚೀನಾಂಧ್ರ ಚಾರಿತ್ರಿಕ ಭೂಗೋಳಮು, ಹೈದಾರಾಬಾದ ಆಂಧ್ರ ಪ್ರದೇಶ ಸಾಹಿತ್ಯ ಅಕಾಡೆಮಿ, ಕ್ರಿ.ಶ.೧೧೬೩, ಪು.೩೨೩.

೮೩. ನಾಗಯ್ಯ, ಜಿ.ಎಂ., *ಆರನೆಯ ವಿಕ್ರಮಾದಿತ್ಯನಶಾಸನಗಳು : ಒಂದು ಅಧ್ಯಯನ*, ಕ್ರಿ.ಶ. ೧೯೯೨, ಪು.೧೨೩, ಬೆಳಗಾವಿ ವೀರ ಶೈವ ಅಧ್ಯಯನ ಅಕಾಡೆಮಿ.

೮೪. ಗಣೇಶ, ಕೆ.ಆರ್(ಸಂ)., *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೫*, ನಂ ,೩೦೧, ಪೆದ್ದತುಂಬಳಂ, ಕ್ರಿ.ಶ.೧೧೩೩, ಡಿಸೆಂಬರ್, ೨೩.

೮೫. ನಾಗಯ್ಯ, ಜಿ.ಎಂ., *ಆರನೆಯ ವಿಕ್ರಮಾದಿತ್ಯನಶಾಸನಗಳು : ಒಂದು ಅಧ್ಯಯನ*, ಕ್ರಿ.ಶ. ೧೯೯೨, ಪು.೧೨೩, ಬೆಳಗಾವಿ ವೀರಶೈವ ಅಧ್ಯಯನ ಅಕಾಡೆಮಿ.

೮೬. ಗಣೇಶ,ಕೆ.ಆರ್(ಸಂ)., *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೫*, ನಂ.೨೭೬, ಕಂಕಾಂತಪುರ, ಕ್ರಿ.ಶ.೧೧೩೨, ಮಾರ್ಚ್, ೨೩.

೮೭. ಅದೇ, ನಂ.೩೦೧, ಪೆದ್ದತುಂಬಳಂ, ಕ್ರಿ.ಶ.೧೧೩೩, ಡಿಸೆಂಬರ್, ೨೩.

೮೮. ಅದೇ, ನಂ.೨೭೬,ಕರಕಾಂತಪುರ, ಕ್ರಿ.ಶ.೧೧೩೨, ಮಾರ್ಚ್, ೨೩.

೮೯. ಉಪಾಧ್ಯ, ಜಿ.ಎನ್(ಸಂ)., *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೬*, ನಂ. ೬೩, ಐರಿಗೆ, ಕ್ರಿ.ಶ.೧೧೩೮ , ಸೆಪ್ಟಂಬರ್, ೧.

೯೦. Gurav, R.N., *Kadambas of Goa and Their Inscriptions,* (Unpublished Ph.D. Thesis), K.U.D., p.13

೯೧. ಎಸ್.ಆಯ್.ಆಯ್., ನಂ. ೧೦೧, ಕಾಮಧೇನು, ಕ್ರಿ.ಶ. ೧೧೨೯, ಮಾರ್ಚ್, ೨೩.

೯೨. Settar.S., (Ed), *Archaeological sarvey of Mysore Annoual Reports A Study.*, Vol III Dharwad K.U.D p.137, *Kadambas of Goa and Their Inscriptions,* p-13.

೯೩. ಕಂದೂರಿ, ಈಶ್ವರದತ್ತ, ಪ್ರಾಚೀನಾಂಧ್ರ ಚಾರಿತ್ರಿಕ ಭೂಗೋಲಮು,ಹೈದರಾಬಾದು, ಆಂಧ್ರ ಪ್ರದೇಶ, ಸಾಹಿತ್ಯ ಅಕಾಡೆಮಿ, ೧೯೬೩, ಪು.೧೧೫.

೯೪. ಗಣೇಶ, ಕೆ.ಆರ್(ಸಂ)., *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೫*, ನಂ, ೫೬೨, ಕೋಲನುಪಾಕ, ಕ್ರಿ.ಶ. ೧೧೧೧, ಡಿಸೆಂಬರ್, ೧೨.

೯೫. ಅದೇ, ನಂ. ೪೧೯, ಗುಡೂರು, ಕ್ರಿ.ಶ. ೧೧೨೪, ಡಿಸೆಂಬರ್, ೨೪.

೯೬. ಅದೇ, ನಂ. ೫೬೫, ಕೋಮಪಾಕ, ಕ್ರಿ.ಶ. ೧೧೦೯-೧೦.

೯೭. ಅದೇ, ನಂ. ೫೬೨, ಕೋಲನುಪಾಕ, ಕ್ರಿ.ಶ. ೧೧೧೧, ಡಿಸೆಂಬರ್, ೧೨.

೯೮. ಅದೇ, ನಂ. ೩೭೩, ಪೆದ್ದಚಪ್ಪರಿ, ಕ್ರಿ.ಶ. ೧೧೩೫, ಜನವರಿ ,೧೬.

೯೯. ದೇವರಕೊಂಡಾರೆಡ್ಡಿ(ಸಂ)., *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೭*, ನಂ. ೬೭, ಕಲ್ಲೂರು, ಕ್ರಿ.ಶ. ೧೧೩೫, ನವ್ಹಂಬರ್, ೨೮.

೧೦೦. ಅದೇ, ನಂ. ೬೭, ಕಲ್ಲೂರು, ಕ್ರಿ.ಶ. ೧೧೩೫, ನವ್ಹಂಬರ್, ೨೮.

೧೦೧. ಅದೇ, *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೧*, ನಂ. ೩೪, ರಾಗಿಮುಸಲವಾಡ, ಕ್ರಿ.ಶ. ೧೧೨೭, ಜುಲೈ,೧೦.

ಅಧ್ಯಾಯ-ನಾಲ್ಕು Chapter-4

ಸಾಮಂತರು ಹಾಗೂ ಅಧಿಕಾರಿ ವರ್ಗ

ಮಹಾಮಂಡಳೇಶ್ವರರು :

'ಮಹಾಮಂಡಳೇಶ್ವರ' ಎಂಬ ಪದದ ಶಬ್ದಶಃ ಅರ್ಥ ವಿಸ್ತಾರವಾದ ಭೂಮಿಗೆ ಅಥವಾ ವಿಭಾಗಕ್ಕೆ ಒಡೆಯ ಎಂದಾಗುತ್ತದೆ. ಇವರು ಕೆಲವೊಮ್ಮೆ ಒಂದು ಇಲ್ಲವೆ ಒಂದಕ್ಕಿಂತ ಹೆಚ್ಚು ವಿಭಾಗಗಳನ್ನು ಆಳುತ್ತಿದ್ದರು. ವಿಸ್ತಾರವಾದ ಸಾಮ್ರಾಜ್ಯದ ಆಡಳಿತವನ್ನು ಚಕ್ರವರ್ತಿಯೊಬ್ಬನೇ ನಡೆಸುವುದು ಅಸಾಧ್ಯ. ಈ ಕಾರಣದಿಂದಾಗಿ ಮತ್ತು ಸಾಮ್ರಾಜ್ಯದ ಆಡಳಿದ ಅನುಕೂಲಕ್ಕಾಗಿ ಅವನು ವಿಶಾಲವಾದ ಸಾಮ್ರಾಜ್ಯದಲ್ಲಿ ವಿಭಾಗಿಸಲಾದ ವಿಭಾಗಗಳಿಗೆ (ಮಂಡಲಗಳಿಗೆ) ವಂಶಪಾರಂಪರ್ಯದಿಂದ ಬಂದ ಮಂಡಳೇಶ್ವರರೇ ತನ್ನ ಆಧೀನರಾಗಿ ಮುಂದುವರೆಯಲು ಅವಕಾಶ ನೀಡುತ್ತಿದ್ದನು. ಕೆಲವು ಸಾರಿ ಮಾತ್ರ ಹೊಸ ಮಂಡಳೇಶ್ವರನನ್ನು ನಿಯಮಿಸುತ್ತಿದ್ದನು. ಇವರು ಚಕ್ರವರ್ತಿಗೆ ಆಧೀನರಾಗಿ ಆಳುತ್ತಿದ್ದರೂ ಸಾಕಷ್ಟು ಅಧಿಕಾರ, ಸ್ವಾತಂತ್ರ್ಯವನ್ನು ಪಡೆದಿದ್ದರು. ಪ್ರತಿಯೊಬ್ಬ ಮಹಾಮಂಡಳೇಶ್ವರ ತನ್ನದೇ ಆದ ಮಂತ್ರಿಮಂಡಳ, ಅಧಿಕಾರಿವರ್ಗ, ಸೈನ್ಯಗಳನ್ನು ಹೊಂದಿರುತ್ತಿದ್ದನು. ಇವರು ಎಲ್ಲ ವಿಷಯಗಳಲ್ಲಿ ಸ್ವಾತಂತ್ರ್ಯವನ್ನು ಹೊಂದಿದ್ದರೂ ಚಕ್ರವರ್ತಿಗೆ ಆಧೀನರಾಗಿ ಪ್ರತಿವರ್ಷ ಕಪ್ಪವನ್ನು ಕೊಡಬೇಕಾಗಿದ್ದಿತು. ಒಂದುವೇಳೆ ಕಪ್ಪವನ್ನು ಕೊಡದೆ ಆಧೀನತೆಯನ್ನು ಒಪ್ಪಿಕೊಳ್ಳದೇ ಹೋದರೆ ಅಂಥವರನ್ನು ಸದೆಬಡೆಯಲು ಚಕ್ರವರ್ತಿ ಮತ್ತೊಬ್ಬ ಮಹಾಮಂಡಳೇಶ್ವರನನ್ನು ಕಳುಹಿಸುತ್ತಿದ್ದನು.

ಚರ್ಕವರ್ತಿಯೊಬ್ಬನಿಂದಲೇ ಎಲ್ಲ ಮಹಾಮಂಡಳೇಶ್ವರನನ್ನು ನೋಡಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಹೀಗಾಗಿ ಇವರ ಮೇಲೆ ತನ್ನ ಸಹೋದರರನ್ನೋ, ಪುತ್ರರನ್ನೋ ನೇಮಿಸುತ್ತಿದ್ದನು. ಇವರಲ್ಲಿ ಹಿರಿಯ ಮಗನನ್ನು 'ಯುವರಾಜ'ನೆಂದು ಕರೆಯುತ್ತಿದ್ದರು. ಈ ಮಗನು ಅಪ್ರಾಪ್ತ ವಯಸ್ಕನಾಗಿದ್ದರೆ ಚಕ್ರವರ್ತಿಯ ತಮ್ಮನೇ 'ಯುವರಾಜ'ನಾಗುತ್ತಿದ್ದನು. ಯುವರಾಜರಲ್ಲದೆ ಇತರ ಮಕ್ಕಳು ಮತ್ತು ಸಹೋದರರು 'ಕುಮಾರ ವೃತ್ತಿ'ಯಿಂದ ಆಳುತ್ತಿದ್ದರೆಂದು ಗೊತ್ತಾಗುತ್ತದೆ.

ಮಹಾಮಂಡೇಶ್ವರರ ರಾಜ ಚಿಹ್ನೆಗಳು :

ತಮ್ಮ ವಂಶಪಾರಂಪರ್ಯದಿಂದ ಬಂದ ರಾಜ ಚಿಹ್ನೆಗಳನ್ನು ಪ್ರತಿಯೊಬ್ಬ ಮಹಾಮಂಡಳೇಶ್ವರರು ಹೊಂದಿದ್ದಾರೆ. ಇವು ಧ್ವಜ, ಮುದ್ರೆ, ವಾದ್ಯ ರೂಪದವುಗಳಾಗಿವೆ. ಹಾನಗಲ್ಲ ಕದಂಬರು[1] ಸಿಂಹ ಲಾಂಛನ, ಶಾಖಾಚರೇಂದ್ರ ಧ್ವಜ, ಪೆಮ್ಮಟ್ಟಿ ತೂರ್ಯ್ಯನಿ ಗ್ರೋಷಣ, ಬೆಳಗುತ್ತಿಯ ಸಿಂಧರು[2] ನೀಳ ಧ್ವಜವನ್ನು ವ್ಯಾಘ್ರಮೃಗ ಲಾಂಛನವನ್ನು, ಗೋವೆ ಕದಂಬರು[3] ಸಿಂಹಲಾಂಛನವನ್ನು ವಾನರ ಧ್ವಜವನ್ನು, ಕಲಚೂರಿಯರು[4] ವೃಷಭಧ್ವಜವನ್ನು ಡಮರುಗ ವಾದ್ಯವನ್ನು ಹೊಂದಿದ್ದರೆಂದು ತಿಳಿದುಬರುತ್ತದೆ.

ಹೀಗೆ ವಿವಿಧ ಮಹಾಮಂಡಳೇಶ್ವರರು ವಿವಿಧ ಲಾಂಛನಗಳನ್ನು, ಧ್ವಜಗಳನ್ನೂ, ವಾದ್ಯಗಳನ್ನೂ ಹೊಂದಿದ್ದುದು ತಿಳಿದುಬರುತ್ತದೆ.

ಮಹಾಮಂಡಳೇಶ್ವರರ ಆಳ್ವಿಕೆಯ ವಿಭಾಗಗಳು :

ಮಹಾಮಂಡಳೇಶ್ವರರ ಆಳ್ವಿಕೆಗೆ ಒಳಪಟ್ಟ ಭೂಪ್ರದೇಶ ಒಂದು ಪ್ರಾಂತವಾಗಿರಬಹುದು, ಒಂದಕ್ಕಿಂತ ಹೆಚ್ಚು ಪ್ರಾಂತಗಳಿರಬಹುದು, ಇಲ್ಲವೆ ಕೆಲವು ಗ್ರಾಮಗಳೂ ಇರಬಹುದು. ಉದಾ: ತೈಲಪನನು[೫] ಬನವಾಸಿ ೧೨೦೦೦ ಮತ್ತು ಪಾನಂಗಲ್ಲ-೫೦೦ ವಿಭಾಗಗಳನ್ನು ಆಳುತ್ತಿದ್ದನು. ಜಯಕೇಶಿದೇವನು[೬] ಕೊಂಕಣ-೯೦೦ ಮತ್ತು ಪಲಸಿಗೆ -೧೨೦೦೦ ವಿಭಾಗಗಳನ್ನು ಕಲಚೂರಿ ಹೆಮ್ಮಾಡಿಯು ತರ್ದವಾಡಿ-೧೦೦೦ ವಿಭಾಗವನ್ನು ನೋಡಿಕೊಳ್ಳುತ್ತಿದ್ದನು.

ಮಹಾಮಡಳೇಶ್ವರರ ಪ್ರಕಾರಗಳು:

ಈ ವರೆಗಿನ ವಿದ್ವಾಂಸರೆಲ್ಲರೂ ಮಹಾಮಂಡಳೇಶ್ವರೆಂದರೆ ಒಂದೇ ವಿಧ, ಅವರಲ್ಲಿ ಯಾವ ತಾರತಮ್ಯವೂ ಇಲ್ಲವೆಂದೇ ತಿಳಿದಿದ್ದರು. ಆದರೆ ಜಿ.ಎಂ.ನಾಗಯ್ಯನವರು[೭] ಶಾಸನಗಳಲ್ಲಿ ಮೂರು ವಿಧದ ಮಾಹಾಮಂಡಳೇಶ್ವರರು ಕಂಡು ಬರುತ್ತಾರೆಂದು ತಿಳಿಸಿದ್ದಾರೆ. ಈ ಮೂರು ವಿಧಗಳು ಈ ರೀತಿಯಾಗಿವೆ.

೧) ರಾಜವಂಶೀಯ ಮಹಾಮಂಡಳೇಶ್ವರರು

ಎ) ಹಿಂದೆ ಚಕ್ರವರ್ತಿಗಳಾಗಿದ್ದವರು,

ಬಿ) ಆರಂಭದಿಂದಲೂ ಮಹಾಮಂಡಳೇಶ್ವರರಾಗಿದ್ದವರು,

೨) ಮಂಡಳೇಶ್ವರರ ಮಹಾಮಂಡಳೇಶ್ವರರು,

೩) ಇತರ ಮಹಾಮಂಡಳೇಶ್ವರರು.

೧) ರಾಜವಂಶೀಯ ಮಹಾಮಂಡಳೇಶ್ವರರು:

ರಾಜವಂಶದಿಂದ ಬಂದವರು ರಾಜವಂಶೀಯ ಮಹಾಮಂಡಳೇಶ್ವರರಾಗಿದ್ದಾರೆ. ಇವರಲ್ಲಿಯೂ ಎರಡು ವಿಧ ಎ) ಹಿಂದೆ ಚಕ್ರವರ್ತಿಗಳಾಗಿದ್ದವರು, ಬಿ) ಆರಂಭದಿಂದಲೂ ಮಹಾಮಂಡಳೇಶ್ವರರಾಗಿದ್ದವರು. ಹಿಂದೆ ಚಕ್ರವರ್ತಿಗಳಾಗಿದ್ದವರು ತಮ್ಮ ಅಧಿಕಾರ ಕಳೆದುಕೊಂಡು ಮತ್ತೊಬ್ಬ ಚಕ್ರವರ್ತಿಗೆ ಮಹಾಮಂಡಳೇಶ್ವರರಾಗಿದ್ದರು. ಉದಾ: ಬಾದಾಮಿ ಚಾಲುಕ್ಯರು ತಮ್ಮ ಚಕ್ರಾಧಿಪತ್ಯ ಕಳೆದುಕೊಂಡು ರಾಷ್ಟ್ರಕೂಟರಿಗೆ ಮಹಾಮಂಡಳೇಶ್ವರರಾಗಿದ್ದರು. ಮುಂದೆ ರಾಷ್ಟ್ರಕೂಟರು ತಮ್ಮ ಅಧಿಕಾರ ಕಳೆದುಕೊಂಡು ಕಲ್ಯಾಣದ ಚಾಲುಕ್ಯರಿಗೆ ಮಹಾಮಂಡಳೇಶ್ವರಾಗಿದ್ದರು. ಇದೇ ರೀತಿ ಕದಂಬರು ಮೂಲತಃ ಚಕ್ರವರ್ತಿಗಳಾಗಿದ್ದು, ಆಮೇಲೆ ಅಧಿಕಾರ ಕಳೆದುಕೊಂಡು ಬಾದಾಮಿ ಚಾಲುಕ್ಯರಿಗೆ, ರಾಷ್ಟ್ರಕೂಟರಿಗೆ, ಕಲ್ಯಾಣದ ಚಾಲುಕ್ಯರಿಗೆ ಆಧೀನ ಮಹಾಮಂಡಳೇಶ್ವರಾಗಿದ್ದರು.

ಎರಡನೆಯದಾಗಿ ರಾಜವಂಶೀಯ ಮಹಾಮಂಡಳೇಶ್ವರರಲ್ಲಿ ಕೆಲವರು ಆರಂಭದಿಂದಲೂ ಎಲ್ಲಾ ವಂಶದ ಚಕ್ರವರ್ತಿಗಳಿಗೆ ಮಹಾಮಂಡಳೇಶ್ವರರಾಗಿದ್ದಾರೆ. ಉದಾ:ಗಂಗರು ಇವರು ಎಂದೂ ಚಕ್ರವರ್ತಿಯಾಗಿ ಮೆರೆಯಲೇ ಇಲ್ಲಿ ಕಂದಂಬರಿಗೆ, ಚಾಳುಕ್ಯರಿಗೆ, ರಾಷ್ಟ್ರಕೂಟರಿಗೆ ಅಷ್ಟೇ ಅಲ್ಲದೆ ಮಹಾಮಂಡಳೇಶ್ವರರಾಗಿದ್ದ ಹೊಯ್ಸಳರಿಗೂ ಇವರು ಮಹಾಮಂಡಳೇಶ್ವರರಾಗಿದ್ದರು. ಹೀಗೆ ರಾಜವಂಶೀಯರಾಗಿದ್ದುಕೊಂಡು ಮೂರನೆಯ ಸೋಮೇಶ್ವರನ ಕಾಲದಲ್ಲಿಯೂ ಮಹಾಮಂಡಳೇಶ್ವರರಾಗಿ ಬಂದವರೆಂದರೆ ಶಿಲಾಹಾರರು, ಸಾಂತರು ಮೊದಲಾದವರು. ಇವರು ತಮ್ಮ ವಂಶಕ್ಕೆ ಪರಂಪರಾಗತವಾಗಿ ಬಂದ ಭೂಪ್ರದೇಶವನ್ನೇ ಆಳುತ್ತಿದ್ದರು. ಒಮ್ಮೊಮ್ಮೆ ಚಕ್ರವರ್ತಿಯು ಇವರ ವಿಧೇಯತೆಗೆ ಮೆಚ್ಚಿ ಹೆಚ್ಚಿನ ಭೂಭಾಗವನ್ನು ಕೊಟ್ಟಿದ್ದು ಕಂಡುಬರುತ್ತದೆ. ಕೆಲವರು ವೈರಿಗಳನ್ನು ಹಿಮ್ಮೆಟ್ಟಿಸಿ ಅವರ ಪ್ರದೇಶವನ್ನು ಆಕ್ರಮಿಸಿ ತಮ್ಮ ಭೂಪ್ರದೇಶವನ್ನು ವಿಸ್ತರಿಸಿಕೊಂಡಿದ್ದಾರೆ. ಸಾಮಾನ್ಯವಾಗಿ ಇವರ ಆಡಳಿತಕ್ಕೆ ದೊಡ್ಡ ವಿಭಾಗಗಳು ಒಳಪಟ್ಟಿರುತ್ತಿದ್ದವು

೨) ಮಹಾಮಂಡಳೇಶ್ವರರ ಮಹಾಮಂಡಳೇಶ್ವರರು :

ರಾಜವಂಶೀಯ ಮಹಾಮಂಡಳೇಶ್ವರರಿಗೆ ಈ ಮಹಾಮಂಡಳೇಶ್ವರರು ಆಧೀನರಾಗಿದ್ದರು ಚಿಕ್ಕ ಚಿಕ್ಕ ವಿಭಾಗಗಳನ್ನು ಆಳುವವರಾಗಿದ್ದ ಇವರು ರಾಜವಂಶೀಯರು ಇಲ್ಲವೆ ಇತರರೂ ಆಗಿರಬಹುದು.

೩) ಇತರ ಮಹಾಮಂಡಳೇಶ್ವರರು:

ಕೆಲವು ಗ್ರಾಮಗಳಿಗೋ ಅಥವಾ ಸಣ್ಣ ವಿಭಾಗಕ್ಕೋ ಮಹಾಮಂಡಳೇಶ್ವರರಾಗಿದ್ದವರನ್ನು 'ಇತರ ಮಹಾಮಂಡಳೇಶ್ವರರ' ಗುಂಪಿಗೆ ಸೇರಿಸಬಹುದಾಗಿದೆ. ಇವರು ಯಾವುದೇ ರಾಜವಂಶಕ್ಕೆ ಸೇರದವರಾಗಿದ್ದಾರೆ. ಚಕ್ರವರ್ತಿಗೆ ನಿಷ್ಠೆಯಿಂದ ಇದ್ದು ಯುದ್ಧದಲ್ಲಿ ತಮ್ಮ ಜೀವದ ಹಂಗುತೊರೆದು ಜಯ ತಂದುಕೊಟ್ಟವರನ್ನು ಮಹಾಮಂಡಳೇಶ್ವರರೆಂದು ಗೌರವಿಸಿ ಆಯಕಟ್ಟಿನ ಜಾಗೆಗಳಿಗೆ (ಸ್ಥಳಗಳಿಗೆ) ನೇಮಿಸುತ್ತಿದ್ದರು.

ಆರನೆಯ ವಿಕ್ರಮಾದಿತ್ಯನ ಕಾಲದ ಈ ತೆರನಾದ ಆಡಳಿತಪದ್ಧತಿ ನಂತರ ಈತನ ಮಗನಾದ ಮೂರನೆಯ ಸೋಮೇಶ್ವರನ ಕಾಲದಲ್ಲಿಯೂ ಬಹುತೇಕ ಮುಂದುವರಿದುಕೊಂಡು ಬಂದಿರುವುದನ್ನು ಕಾಣುತ್ತೇವೆ. ಮೂರನೆಯ ಸೋಮೇಶ್ವರನ ಕಾಲದಲ್ಲಿದ್ದ ಎಲ್ಲರೀತಿಯ ಮಹಾಮಂಡಳೇಶ್ವರ ವಿವರ ಇಂತಿದೆ.

ಕದಂಬರು :

ಕರ್ನಾಟಕದ ನಿಜವಾದ ರಾಜಕೀಯ ಇತಿಹಾಸ ಪ್ರಾರಂಭವಾಗುವುದು ಕದಂಬರಿಂದಲೇ. ಇವರ ವಂಶದ ಕುರಿತು ಏನೇ ದಂತಕಥೆಗಳಿದ್ದರೂ ಇವರು ಕರ್ನಾಟಕದ ಪ್ರಥಮ ಚಕ್ರವರ್ತಿಗಳಾಗಿ ಮೆರೆದು ತಮ್ಮ ಶೌರ್ಯ, ಸಾಹಸ,

ಪರಾಕ್ರಮದಿಂದ ಆಂಧ್ರ, ತಮಿಳುನಾಡು, ಕೇರಳ ಮತ್ತಿತರ ಅರಸರನ್ನು ಸೋಲಿಸಿ ತಮ್ಮ ಆಧೀನರಾಗಿ ಬಾಳುವಂತೆ ಮಾಡಿಕೊಂಡಿದ್ದಾರೆ. ಮಯೂರ ವರ್ಮನು ತನ್ನ ತೋಳ್ಬಲದಿಂದ ಕದಂಬ ವಂಶದವರು ಸ್ಥಿರವಾಗಿ ನೆಲೆಯೂರವಂತೆ ಅಡಿಪಾಯ ಹಾಕಿದವನಾಗಿದ್ದಾನೆ. ನಂತರ ಬಂದ ಮೃಗೇಶವರ್ಮ, ಕಾಕುತ್ಸವರ್ಮ ಮೊದಲಾದವರು ಅದರ ಮೇಲೆ ಭದ್ರವಾದ ಸಾಮ್ರಾಜ್ಯವನ್ನು ಕಟ್ಟಿದ್ದಾರೆ.

ಇವರು ಕ್ರಿ.ಶ ೩೨೫ ರಿಂದ ೫೪೦ರವರೆಗೆ ಅಂದರೆ ಸುಮಾರು ಎರಡು ಶತಮಾನಕ್ಕೂ ಹೆಚ್ಚುಕಾಲ ಬನವಾಸಿಯನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡು ಚಕ್ರವರ್ತಿಗಳಾಗಿ ಆಳಿದರು. ಈ ಸಮಯದಲ್ಲಿಯೇ ಸಾಮ್ರಾಜ್ಯದ ವಿವಿಧ ಭಾಗಗಳ ಆಡಳಿತವನ್ನು ನೋಡಿಕೊಳ್ಳಲು ತಮ್ಮ ವಂಶದವರನ್ನೇ ನೇಮಿಸಿದರು. ಇವರೇ ಮುಂದೆ ಚಕ್ರವರ್ತಿಗಳಾದ ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರಿಗೆ ಮಹಾಮಂಡಳೇಶ್ವರರಾಗಿ ಇಲ್ಲವೆ ಮಹಾಸಾಮಂತರಾಗಿ ಬಾಳಿದರು. ಹೀಗೆ ಆಧೀನರಾಗಿ ಬಾಳಿದ ಕದಂಬವಂಶದ ಆರು ಮನೆತನಗಳನ್ನು ಡಾ.ಬಿ.ಆರ್ ಗೋಪಾಲ್ ಅವರು ಹೀಗೆ ಗುರುತಿಸಿದ್ದಾರೆ. ೧) ಹಾನಗಲ್ಲಿನ ಕದಂಬರು, ೨)ಗೋವೆಯ ಕದಂಬರು, ೩) ಬಯಲು ನಾಡಿನ ಕದಂಬರು, ೪) ನೂರುಂಬಾಡದ ಕದಂಬರು, ೫) ಕರಡಿಕಲ್ಲಿನ ಕದಂಬರು, ೬) ಚಂದ್ರವಾರದ ಕದಂಬರು. ಇವರು ಇನ್ನೂ ಒಂದು ಮನೆತನ ಬಳ್ಳಾರಿ ಜಿಲ್ಲೆಯಲ್ಲಿತ್ತೆಂದು ಇವರು ಕೋಗಳಿ-೫೦೦ ವಿಭಾಗವನ್ನು ಕದಂಬವಂಶದ ಮಹಾಮಂಡಳೇಶ್ವರ ಕೊಟ್ಟೂರಿನ ಘಟ್ಟಿಯರಸನು ಆಳುತ್ತಿದ್ದನು. ಹೀಗೆ ಒಟ್ಟು ಏಳು ಕದಂಬ ಮನೆತನಗಳು ಕಲ್ಯಾಣದಚಾಲುಕ್ಯ ವಿಕ್ರಮಾದಿತ್ಯನ ಕಾಲದಲ್ಲಿ ಅಸ್ತಿತ್ವದಲ್ಲಿದ್ದವು.[೯] ಈತನ ನಂತರ ಅಧಿಕಾರಕ್ಕೆ ಬಂದಂತಹ ಮೂರನೆಯ ಸೋಮೇಶ್ವರನ ಕಾಲದ ಶಾಸನಗಳಲ್ಲಿ ಕೇವಲ ಹಾನಗಲ್ಲ ಕದಂಬರು, ಗೋವೆಯ ಕದಂಬರು, ಕರಡಿಕಲ್ಲಿನ ಕದಂಬರು ಮಾತ್ರ ಉಲ್ಲೇಖಿತರಾಗಿದ್ದಾರೆ.

ಹಾನಗಲ್ಲಿನ ಕದಂಬರು :

ಇಂದಿನ ಹಾವೇರಿ ಜಿಲ್ಲೆಯ ಹಾನಗಲ್ಲನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡು ೫೦೦ ಗ್ರಾಮಗಳ ರಾಜ್ಯವನ್ನು 'ಉಭಯ ಸಾಮ್ಯ'ದಿಂದ ಅಂದರೆ ಏಕಕಾಲಕ್ಕೆ ಚಕ್ರವರ್ತಿಗೂ ಮತ್ತು ಮಹಾಮಂಡಳೇಶ್ವರರಾದ ಗೋವೆಯ ಕದಂಬರಿಗೂ ಆಧೀನರಾಗಿ ಈ ಮಹಾಮಂಡಳೇಶ್ವರರು ಆಳುತ್ತಿದ್ದರು. ಬನವಾಸಿ ಕದಂಬರಿಗೆ ಸಹೋದರ ಸಂಬಂಧಿಗಳಾಗಿದ್ದ ಇವರು ಆರಂಭದಲ್ಲಿ ಪಾನಂಗಲ್ಲು-೫೦೦ಕ್ಕೆ ಮಾತ್ರ ಒಡೆಯರಾಗಿದ್ದು ಉಭಯ ಸಾಮ್ಯದಿಂದ ಆಳುತ್ತಿದ್ದರೆ, ಮುಂದೆ ತೈಲಪನು ಬಾಧ್ಯಸ್ಥರಿಲ್ಲದಕ್ಕಾಗಿಯೋ ಏನೋ ಬನವಾಸಿ ೧೨೦೦೦ದ ಒಡೆತನವನ್ನೂ ಪಡೆದುಕೊಳ್ಳುತ್ತಾನೆ. ಹೀಗೆ ಇವರು ಹಂತ ಹಂತವಾಗಿ ಮೇಲೆರಿದುದು ತಿಳಿದು ಬರುತ್ತದೆ.

ಎರಡನೆಯ ತೈಲಪ :

ಹಾನಗಲ್ಲ ಕದಂಬ ವಂಶಕ್ಕೆ ಸೇರಿದ ಈತನು ಆರನೆಯ ವಿಕ್ರಮಾದಿತ್ಯನ ಕಾಲದಲ್ಲಿಯೂ ಮಹಾಮಂಡಳೇಶ್ವರನಾಗಿದ್ದು ನಂತರ ಮೂರನೆಯ ಸೋಮೇಶ್ವರನ ಕಾಲದಲ್ಲಿಯೂ ಮಹಾಮಂಡಶ್ವರರಾನಾಗಿ ಪಾನಂಗಲ್ಲು-೫೦೦ ಬನವಾಸಿ-೧೨೦೦೦ನ್ನು ತ್ರಿಭೋಗ್ಯಾಭ್ಯನ್ತರ ಸಿದ್ದಿಯಿಂದ ಆಳುತ್ತಿದ್ದನೆಂದು ಅಸುಂಡಿ[೧೦] ಶಾಸನ ತಿಳಿಸುತ್ತದೆ. ಈ ಶಾಸನದಲ್ಲಿ ಈತನ ಪ್ರಶಸ್ತಿ

ಪೆರ್ಮ್ಮಟ್ಟಿ ತೂರ್ಯ್ಯನಿರ್ಗ್ಘೋಷಣಂ ಶಾಖಾಚರೇಂದ್ರಧ್ವಜವಿರಾಜಮಾನ ಮನೋತ್ತುಂಗ ಸಿಂಹಲಾಂಛನಂ ದತ್ತರ್ತ್ಥಿಕಾಂಚನಂ ಸಮರಜಯಕರಣಂ ವೀರಶ್ರೀವಿವಾಹಗೇಹಮಂಗಳರತ್ನ ತೋರಣಂ ಕಾದಂಬರಾಭರಣಂ॥ ಚತುಸ್ಸಮಯ ಸಮುದ್ಧರಣಂ। ರಿಪುಮಣ್ಣಳಿಕಚತು......... ಮಾರ್ಕ್ಕೊಳ್ವರ ಗಂಡ। ಮಣ್ಡಳಿಕಗಂಡ ಬಂಗಾಱ । ರಣ ರಂಗನೀಱ ದಾಯಾದ ಮಂಡಳಿಕ ಕುಧರಪವಿದಂಡ॥ ಶತ್ರುಮಂಡಳಿಕಯಮದಂಡ ಮೆಲೆವ ಮಲೆಯ ಮಂಡಳಿಕ ಮಂಡಳ ಗಹನದಾವಪಾವಕ ಕುಮಿತ್ರ ಮಂಡಳ ಭಯದಾಯಕ ಚತುರಯುವತೀ ಹೃದಯ (ರತಿ ಪತಿ) ನೀತಿಶಾಸ್ತ್ರ ವಾಚಸ್ಪತಿ ಧರ್ಮ್ಮಧರ್ಮ್ಮಾತ್ಮಜಂ । ಶೌಚಗಂಗಾತ್ಮಜಂ ನಿತ್ಯ ಖಳನಾಮಾದಿ ಪ್ರಶಸ್ತಿ ಸಹಿತಂ ಶ್ರೀಮನ್ಮಹಾಮಂಡಳೇಶ್ವರಂ ತೈಲಪದೇವರು । ಎಂದಿದೆ.

ಎರಡನೆಯ ತೈಲಪನ ಜೀವನವೆಲ್ಲವೂ ಇತರರೊಡನೆ ಕೈಗೊಂಡ ಹೋರಾಟದಲ್ಲಿಯೇ ಮುಕ್ತಾಯವಾಯಿತೆಂದು ಶಾಸನಗಳಿಂದ ತಿಳಿದುಬರುತ್ತದೆ. ಏಕೆಂದರೆ ಹೊಯ್ಸಳ ವಿಷ್ಣುವರ್ಧನನು ವಿಕ್ರಮಾದಿತ್ಯನು ಗತಿಸಿದ ನಂತರ ಸ್ವತಂತ್ರನಾಗಲು ಬಯಸಿ ಸಾಮ್ರಾಜ್ಯ ವಿಸ್ತಾರ ಮಾಡಿಕೊಳ್ಳುವ ದೃಷ್ಟಿಯಿಂದ ಹಾನಗಲ್ಲಿನ ಮೇಲೆ ದಾಳಿ ಮಾಡಿದನು. ಹಾನಗಲ್ಲ ಕೋಟೆ ಅಂದು ಪ್ರತಿಷ್ಠಿತಕೋಟೆ. ಮಣ್ಣಿನ ಕೋಟೆಗಳಲ್ಲಿಯೇ ಕರ್ನಾಟಕದ ಅತ್ಯಂತ ದೊಡ್ಡ ಕೋಟೆ ಎಂದು ಪ್ರಸಿದ್ಧಿ ಪಡೆದಿತ್ತು.[೧೧] ಬಲಿಷ್ಠವಾದ ಈ ಕೋಟೆಯನ್ನು ಗೆಲ್ಲುವುದು ವಿಷ್ಣುವರ್ಧನನಿಗೂ ಪ್ರತಿಷ್ಠೆ ಎನಿಸಿತ್ತು. ಹೀಗಾಗಿ ಬಲಾಢ್ಯವಾದ ಸೈನ್ಯದೊಂದಿಗೆ ತೈಲಪನ ಮೇಲೆ ದಾಳಿ (ಆಕ್ರಮಣ) ಮಾಡಿದನು. ಬಲಾಢ್ಯರಾದ ಹೊಯ್ಸಳರ ಇದಿರು ತೈಲಪನ ಸೈನ್ಯ ನಿಲ್ಲದಾಯಿತು ಮತ್ತು ಸಕಾಲದಲ್ಲಿ ಸುತ್ತಲಿನ ಚಾಲುಕ್ಯ ಮಾಂಡಲಿಕರು ಸಹಕಾರ ನೀಡಲಿಲ್ಲ. ಹೀಗಾಗಿ ಈ ಯುದ್ಧದಲ್ಲಿ ವಿಷ್ಣುವರ್ಧನನು ತೈಲಪನನ್ನು ಸೆರೆಹಿಡಿದು ಅವನ ಶಿರಚ್ಛೇದನಗೊಳಿಸಿದನಂತೆ. ಇದೇ ದಿನದಂದು ವಾಸಣಯ್ಯನ ಸೋದರ ಬೊಪ್ಪಣ್ಣ ತನ್ನ ದಳಪತಿಯ ಕೈಯಿಂದ ವೀಳೆಯ ಸ್ವೀಕರಿಸಿ ತೈಲಪದೇವನೊಡನೆ ಸ್ವರ್ಗಕ್ಕೆ ಮುನ್ನಡೆದನಂತೆ.[೧೨] ಯುದ್ಧ ಸಂದರ್ಭದಲ್ಲಿ ತಮ್ಮ ದೊರೆಯ ಆತ್ಮಗೌರವಕ್ಕೆ ಚ್ಯುತಿ ಬಂದರೆ ಅವರ ಸೇವಕರು ತಮ್ಮ ಪ್ರಾಣವನ್ನು ತೆತ್ತು ಗೌರವ ರಕ್ಷಣೆ ಮಾಡುವುದಾಗಿ ಪಣತೊಟ್ಟು ವೀಳೆಯ ಸ್ವೀಕರಿಸವುದು ಅಂದಿನ ಪದ್ಧತಿಯಾಗಿತ್ತು. ಹಾನಗಲ್ಲ ಹೋರಾಟದಲ್ಲಿ (ಯುದ್ಧದಲ್ಲಿ) ತನ್ನ ಸಾಮ್ರಾಜ್ಯದ

ಉಳಿವಿಗಾಗಿ ತೈಲಪ ಪ್ರಾಣತೆತ್ತುದು ಚಾಲುಕ್ಯ ವಿಕ್ರಮ ವರ್ಷ ಸಾಧಾರಣ ಕಾರ್ತಿಕ ಶುದ್ಧ ಸೋಮವಾರ ಅಂದರೆ ಕ್ರಿ.ಶ. ೧೧೫೦ ಅಕ್ಟೋಬರ್ ೬ನೇ ತಾರೀಖು.[೧೩]

ಎರಡನೆಯ ಮಯೂರವರ್ಮ :

ಎರಡನೆಯ ತೈಲಪನ ತರುವಾಯ ಅವನ ಹಿರಿಯ ಮಗನಾದ ಎರಡನೆಯ ಮಯೂರವರ್ಮ ಚಾಲುಕ್ಯ, ಮೂರನೆಯ ಸೋಮೇಶ್ವರನ ಮಹಾಮಂಡಳೇಶ್ವರನಾಗಿ ಕ್ರಿ.ಶ. ೧೧೫೧ರಲ್ಲಿ ಬನವಾಸಿ ಪನ್ನಿಚ್ಛಾಸಿರ ಪಾನುಂಗಲ್ಲ ಐನೂರು ಸಾಂತಳಿಗೆ ಸಾವಿರನಾಡುಗಳ ಅಧಿಪತ್ಯ ಕೈಗೊಂಡಿದ್ದನು.[೧೪] ಮಯೂರ ವರ್ಮ ಕ್ರಿ.ಶ. ೧೧೫೦ರ ವೇಳೆಗೆ ತೈಲಪನ ಉತ್ತರಾಧಿಕಾರಿಯಾಗಿ ಹಾನುಂಗಲ್ಲ ಕದಂಬರ ಮನೆತನದ ಉಜ್ವಲ ಭವಿಷ್ಯದ ಕನಸು ಕಂಡರೂ ಕನಸು ಕನಸಾಗಿಯೇ ಉಳಿಯಿತು. ಏಕೆಂದರೆ ಅವನು ಕೇವಲ ಮೂರು ವರ್ಷಗಳ ಅಲ್ಪಕಾಲದ ಆಳ್ವಿಕೆ ನಡೆಸಿದುದು ತಿಳಿದುಬರುತ್ತದೆ. ಈತನ ಕಾಲದಲ್ಲಿ ಕೂಡ ಹೊಯ್ಸಳರ ಹಾಗೂ ಕದಂಬರ ನಡುವಿನ ಹೋರಾಟ ಹಾಗೆಯೇ ಮುಂದುವರೆದಿತ್ತು.

ಕ್ರಿ.ಶ. ೧೧೫೧ರ ಹಾವಣಿಗೆಯ ಎರಡು ಶಾಸನಗಳಲ್ಲಿ, ಒಂದು ಬನವಾಸಿಯ ಅಧಿಕಾರ ಸೂಚಿಸಿದೆ. ಹಿರೇಕೆರೂರಿನ ಶಾಸನ ಬನವಾಸಿ-೧೨೦೦೦ ಜೊತೆಗೆ ಹಾನುಂಗಲ್ಲು-೫೦೦, ಸಾಂತಳಿಗೆ-೧೦೦೦, ಹಲಸಿಗೆ-೧೨೦೦೦ ಆಳಿದಂತೆ ಸೂಚನೆ ಇದೆ.[೧೫] ಗೋವೆಯ ಕದಂಬರ ಆಳ್ವಿಕೆಗೆ ಒಳಪಟ್ಟ ಹಲಸಿಗೆ-೧೨೦೦೦ ಕ್ರಿ.ಶ. ೧೧೫೧ರಲ್ಲಿ ಮಯೂರವರ್ಮನಿಗೆ ಹೇಗೆ ಬಂದಿತ್ತೆಂಬುದು ತಿಳಿಯುವುದಿಲ್ಲ.

ಮಲ್ಲಿಕಾರ್ಜುನ :

ಮಲ್ಲಿಕಾರ್ಜುನನು ಎರಡನೆಯ ಮಯೂರವರ್ಮನ ಸೋದರನು ಈತನು ಕ್ರಿ.ಶ. ೧೧೫೨ ರಿಂದ ೧೧೫೮ರಲ್ಲಿ ಬನವಾಸಿ ಮತ್ತು ಪಾನಂಗಲ್ಲ ಪ್ರಾಂತ್ಯಗಳಲ್ಲಿ ಚಾಲುಕ್ಯ ಮೂರನೆಯ ಸೋಮೇಶ್ವರನ ಮಹಾಮಂಡಳೇಶ್ವರನಾಗಿ ಅಧಿಕಾರ ನಡೆಸಿರುವನು. ಚಾಲುಕ್ಯ ಮೂರನೆಯ ಸೋಮೇಶ್ವರನ ಆಡಳಿತಾವಧಿಯಲ್ಲಿ ಮತ್ತೆ ಮತ್ತೆ ದಂಗೆ ಏಳಲು ಪ್ರಯತ್ನಿಸಿದ ಹೊಯ್ಸಳ ದೊರೆ ವಿಷ್ಣುವರ್ಧನನ್ನು ಹಿಮ್ಮೆಟ್ಟಿಸಿದ ಕೀರ್ತಿ ಇವನಿಗೆ ಸಲ್ಲುವುದು. ಕ್ರಿ.ಶ. ೧೧೫೬ರಲ್ಲಿ ಕಲಚೂರಿ ಬಿಜ್ಜಳ ಹಾನಗಲ್ಲ ಕೋಟೆಯನ್ನು ಮುತ್ತಿದಾಗ ಕೇತಯನಾಯಕ ಬಿಜ್ಜಳನನ್ನು ಹಿಮ್ಮೆಟ್ಟಿಸಿ ವೀರಸ್ವರ್ಗಪಡೆದ ವಿವರಣೆಯ ವೀರಗಲ್ಲು ಧಾರವಾಡದ ಕನ್ನಡ ಸಂಶೋಧನಾ ಸಂಸ್ಥೆಯ ಮ್ಯುಜಿಯಮ್‌ನಲ್ಲಿದೆ.

ಗೋವೆಯ ಕದಂಬರು :

ಚಂದ್ರಪುರ್‌ವನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದ ಕದಂಬವಂಶದವರು ಮುಂದೆ (ಜಯಕೇಶಿ Iನ ಕಾಲಕ್ಕೆ) ಗೋವೆಯನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡರು. ಹೀಗಾಗಿ ಇವರನ್ನು ಇತಿಹಾಸದಲ್ಲಿ

'ಗೋವೆಯ ಕದಂಬರು' ಎಂದು ಗುರುತಿಸಲಾಗಿದೆ. ಇವರ ಆಡಳಿತಕ್ಕೆ ಒಳಪಟ್ಟ ಪ್ರದೇಶವೆಂದರೆ ಕೊಂಕಣ-೯೦೦, ಪಲಸಿಗೆ-೧೨೦೦೦ ಮತ್ತು ಇತರ ಭೂ ಪ್ರದೇಶಗಳು ಹಾನಂಗಲ್ಲು-೫೦೦ ಕದಂಬ ಮಹಾಮಂಡಳೇಶ್ವರರು ಉಭಯಸ್ವಾಮ್ಯದಿಂದ ಅಂದರೆ ಚಕ್ರವರ್ತಿ ಚಾಳುಕ್ಯರಿಗೂ ಈ ಗೋವೆಯ ಕದಂಬರಿಗೂ ಆಧೀನರಾಗಿ ಆಳುತ್ತಿದ್ದರು.

ಮಹಾಮಂಡಳೇಶ್ವರ ಎರಡನೆಯ ಜಯಕೇಶಿ :

ಗೋವೆಯ ಕದಂಬರ ಇತಿಹಾಸದಲ್ಲಿಯೇ ವಿಶಿಷ್ಟ ಸ್ಥಾನವನ್ನು ಪಡೆದು ಸಾಮ್ರಾಜ್ಯವನ್ನು ವಿಸ್ತರಿಸಿ ಹೆಚ್ಚು ಪ್ರಸಿದ್ಧಿ ಪಡೆದವನೆಂದರೆ ಇಮ್ಮಡಿ ಜಯಕೇಶಿ. ಈತನು ಆರನೆಯ ವಿಕ್ರಮಾದಿತ್ಯನ ಕಾಲದಲ್ಲಿಯೇ ಮಹಾಮಂಡಳೇಶ್ವರನಾಗಿ ನಂತರ ಮೂರನೆಯ ಸೋಮೇಶ್ವರ ಕಾಲದಲ್ಲಿಯೂ ಮಹಾಮಂಡಳೇಶ್ವರನಾಗಿ ಮುಂದುವರೆದನು.

ಜಯಕೇಶಿ ಪ್ರಶಸ್ತಿ ಮದನಬಾವಿ,[೧೭] ಗೌಳಿಹಳ್ಳಿ[೧೮] ಶಾಸನದಲ್ಲಿ 'ಕೊಂಕಣ ಚಕ್ರವರ್ತಿ' ಎಂದೂ ಸಿದ್ದಾಪುರ ಶಾಸನದಲ್ಲಿ[೧೯] 'ಬನವಾಸಿಪುರವರಾಧೀಶ್ವರ ವಾನರಮಹಾಧ್ವಜ ಪೆರ್ಮ್ಮಟ್ಟಿ ತೂರ್ಯ ನಿರ್ಘೋಷಣಂ, ಚತುರಾಶೀತಿ ನಗರಾಧಿಷ್ಠಿತಾಷ್ಟಾದಕಾಶ್ವಮೇಧ ದೀಕ್ಷಾ ದೀಕ್ಷಿತ ಕುಲಪ್ರಸೂತಂ, ಶರಣಾಗತ ವಜ್ರ ಪ್ರಾಕಾರ, ಮಣ್ಡಳಿಕ ತ್ರಿನೇತ್ರ'ನೆಂದೂ ಕೊಡಲಾಗಿದೆ. ಅಲ್ಲದೆ ಜಯಕೇಶಿ ಅನೇಕ ಧಾರ್ಮಿಕ ಕಾರ್ಯಗಳನ್ನು ಮಾಡಿದುದು ಸಹ ತಿಳಿದು ಬರುತ್ತದೆ.

ಆರನೆಯ ವಿಕ್ರಮಾದಿತ್ಯ ಮತ್ತು ಮಲಯಮತಿದೇವಿಯರ ಮಗಳಾದ ಮೈಳಲಮಹಾದೇವಿಯನ್ನು[೨೦] ಎರಡನೆಯ ಜಯಕೇಶಿಗೆ ವಿವಾಹ ಮಾಡಿಕೊಡಲಾಗಿತ್ತು. ಕ್ರಿ.ಶ. ೧೧೦೪ರ ಕನಕೂರಿನ ಶಾಸನದಲ್ಲಿ ಇವರ ವಿವಾಹದ ಉಲ್ಲೇಖ ಬರುತ್ತದೆ.[೨೧] ಸಿದ್ದಾಪುರ ಶಾಸನದಲ್ಲಿ[೨೨] ಈತನು ಪಿರಿಯರಸಿ ಮೈಳನ ಮಹಾದೇವಿಯೊಂದಿಗೆ ಬೋಗೂರು ನೆಲವೀಡಿನಲ್ಲಿ ಆಳ್ವಿಕೆ ನಡೆಸುತ್ತಿದ್ದನೆಂದು ಹೇಳಲಾಗಿದೆ. ಮದನಬಾವಿ ಶಾಸನವು[೨೩] ಎರಡನೆಯ ಜಯಕೇಶಿ ಮೈಳಮಹಾದೇವಿ, ಯುವರಾಜ ಪೆರ್ಮ್ಮಾಡಿದೇವ ವಿಜಯಾದಿತ್ಯ ಸಹಿತ ಭೋಗೂರ ನೆಲವೀಡಿನಲ್ಲಿ ಆಳ್ವಿಕೆ ನಡೆಸಿದರೆಂದು ತಿಳಿಸಿದರೆ ಗೌಳಿಹಳ್ಳಿ ಶಾಸನವು[೨೪] ಮೈಳಲಮಹಾದೇವಿಯರು ವೀರಪೆರ್ಮ್ಮಾಡಿ ದೇವರು ಗೋವೆಯ ನೆಲೆವೀಡಿನೊಳು ಎಂದಿದೆ. ಹೀಗಾಗಿ ಚಕ್ರವರ್ತಿಯ ಮಗಳಾದ ಇವಳು ತುಂಬ ವರ್ಚಸ್ವೀ ಮಹಿಳೆಯಾಗಿದ್ದಳೆಂದು ಹೇಳಬಹುದು.

ಕರಡಿಕಲ್ಲಿನ ಕದಂಬರು :

ಕದಂಬ ವಂಶದ ಅರಸರ ಶಾಖೆಯೊಂದು ಇಂದಿನ ರಾಯಚೂರು ಜಿಲ್ಲೆಯ ಲಿಂಗಸೂರು ತಾಲೂಕಿನ ಸುತ್ತಮುತ್ತಲಿನ ಪ್ರದೇಶವನ್ನು ಅಂದರೆ ಎಡದೊರೆ ನಾಡಿನ ಉಪವಿಭಾಗವಾದ ಕರಡಿಕಲ್ಲು-೪೦೦ನ್ನು ಆಳುತ್ತಿದ್ದಿತು. ಇದರ ವಂಶಾವಳಿಯನ್ನು ಬಿ. ಆರ್. ಗೋಪಾಲ್[೨೫]ರವರು ಹೀಗೆ ನಿರೂಪಿಸಿದ್ದಾರೆ.

ಮನ್ನೆಯ ಬಾಚರಸ (ಕ್ರಿ.ಶ. ೧೦೩೩)

|

ಮನ್ನೆಯ ನಾಗವರ್ಮರಸ (ಕ್ರಿ.ಶ. ೧೦೬೬, ೧೦೭೭)

|

ಸಿಂಗರ (?)

|

ಭೂತರಸ (ಕ್ರಿ.ಶ. ೧೧೧೩, ೧೧೧೯) — ಮಾಧವತ್ತಿಯರಸ (ಕ್ರಿ.ಶ. ೧೧೨೦, ೧೧೩೫)

ಮಹಾಮಂಡಳೇಶ್ವರ ಮಾಧವತ್ತಿಯರಸ :

ಚಾಲುಕ್ಯ ಚಕ್ರವರ್ತಿ ವಿಕ್ರಮಾದಿತ್ಯನ ಕೆಳಗೆ ಮಹಾಮಂಡಳೇಶ್ವರನಾಗಿದ್ದ ಈತನ ಉಲ್ಲೇಖ ಲಿಂಗಸೂರಿನ[೨೬] ಶಾಸನದಲ್ಲಿ ಬರುತ್ತದೆ. ಈತನು ಮೂರನೆಯ ಸೋಮೇಶ್ವರನ ಕಾಲದಲ್ಲಿಯೂ ಮಹಾಮಂಡಳೇಶ್ವರನಾಗಿ ಮುಂದುವರೆದು ಕ್ರಿ.ಶ. ೧೧೩೫ರವರೆಗೆ ಆಳ್ವಿಕೆ ನಡೆಸಿದರು. ಶಾಸನದಲ್ಲಿ ಬನವಾಸಿಪುರವರಾಧೀಶ್ವರ, ಕದಂಬರಾಭರಣ, ವೈರಿಸಂಹರಣ, ತೊರೆದಡಿಯಭೀಮ, ಕಲಿಯುಗರಾಮ, ನವಿಲಿನ ಪಾರ್ಥ, ಸಂದಣಿದವಳಂ, ಸಿಂಗನಹಕಾರಂ ಮನ್ನೆಯಗೊಡತಿ, ಮೊದಲಾದ ಪ್ರಶಸ್ತಿಗಳನ್ನು ಹೊಂದಿದ್ದಾರೆ. ಈತನು ಸಿಂಗರಸನ ಪುತ್ರನೆಂದು ಡಾ. ಬಿ. ಆರ್. ಗೋಪಾಲ್[೨೭]ರವರು ವಂಶಾವಳಿಯಲ್ಲಿ ನಿರೂಪಿಸಿದ್ದಾರೆ. ಮಹಾಮಂಡಳೇಶ್ವರ ಮಾಧವತ್ತಿಯರಸನ ಲಿಂಗದಱುವರು (ಲಿಂಗದರುವರು ಎಂದರೆ ಲಿಂಗ ಗ್ರಾಮದ ಆರು ಜನ ಪ್ರಮುಖರು ಲಿಂಗಸೂರಿಗೆ ಹಿಂದೆ 'ಲಿಂಗ'ವೆಂದು ಕರೆಯಲಾಗುತ್ತಿತ್ತು) ಒಡೆಯರ (ಲಿಂಗಸೂರಿನ ೬ ಜನ ಒಡೆಯರ) ಸಮಕ್ಷಮದಲ್ಲಿ ಕಲಿದೇವೇಶ್ವರನ ಧೂಪ, ದೀಪ, ನೈವೇದ್ಯ, ಅಂಗಭೋಗ ಮೊದಲಾದುದಕ್ಕೆ ಮಾಚಿರಾಜನ ಮಗ ಸಂಕರಸ ಮತ್ತು ತಮ್ಮ ನಾಗರಸ ಇವರು ಭೂಮಿಯನ್ನು ದಾನ ಬಿಡುತ್ತಾರೆ.


ಸಿಂದರು :

ಸಿಂದ ವಂಶದ ಅರಸರು ಕಲ್ಯಾಣದ ಚಾಲುಕ್ಯರಿಗೆ ಮಹಾಮಂಡಳೇಶ್ವರರಾಗಿ ಆಳಿದ್ದಾರೆ. ಚಾಲುಕ್ಯ ದೊರೆಗಳಿಗೆ ಸರ್ವಸ್ವವನ್ನೂ ಅರ್ಪಿಸಿ ತಮ್ಮ ನಿಷ್ಠೆಯನ್ನು ಮೆರೆದಿದ್ದಾರೆ. ಅಲ್ಲದೆ ಚಾಲುಕ್ಯ ಚಕ್ರಾಧಿಪತ್ಯದ ಶ್ರೇಯಸ್ಸಿಗಾಗಿ ಆರಂಭದಿಂದ ಕೊನೆಯವರೆಗೂ ಈ ವಂಶದ ಅರಸರು ಶ್ರಮಿಸಿದ್ದಾರೆ. ಈ ವಂಶದ ಅರಸರು ಆಳುತ್ತಿದ್ದ ಪ್ರದೇಶಕ್ಕೆ 'ಸಿಂದವಾಡಿ' ಎಂದು ಕರೆಯಲಾಗುತ್ತಿತ್ತು. ಈ ಅರಸರು ಬೇರೆ ಬೇರೆ ಕಡೆಗೆ ಮಹಾಮಂಡಳೇಶ್ವರರಾಗಿ ಆಳಿದ್ದಾರೆ. ಈ ಸಿಂದವಂಶದ ವಿವಿಧ ಶಾಖೆಗಳೆಂದರೆ ಬಾಗಡೆಯ ಸಿಂದರು, ಯಲಬುರ್ಗಿಯ ಸಿಂದರು, ಬೆಳಗುತ್ತಿಯ ಸಿಂದರು, ರಂಜೋಲದ ಸಿಂದರು, ಮುಳಗುಂದದ ಸಿಂದರು, ಪ್ರತ್ಯಂಡ್ರಕದ ಸಿಂದರು, ಚಕ್ರಕೂಟದ ಸಿಂದರು, ಕೋಗಳಿನಾಡಿನ ಸಿಂದರು, ಗುತ್ತಿಯ ಸಿಂದರು, ಸಾಲಗುಂದೆಯ ಸಿಂದರು, ಕುರಗೋಡಿನ ಸಿಂದರು[೨೮] ಇವರಲ್ಲಿ ಕೆಲವರು ಮೂರನೆಯ

ಸೋಮೇಶ್ವರನ ಕಾಲದಲ್ಲಿ ಮಹಾಮಂಡಳೇಶ್ವರರಾಗಿ ಆಳ್ವಿಕೆಯನ್ನು ನಡೆಸಿದುದು ಲಭ್ಯವಿರುವ ಶಾಸನಗಳಿಂದ ತಿಳಿದು ಬರುತ್ತವೆ.

ಯಲಬುರ್ಗಿಯ ಸಿಂದರು :

ಇಂದಿನ ಕೊಪ್ಪಳ ಜಿಲ್ಲೆಯ ಯಲಬುರ್ಗವನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡು ಸುತ್ತಲಿನ ಪ್ರದೇಶವನ್ನು ಆಳುತ್ತಿದ್ದ ಇವರು ಮಧ್ಯಕಾಲೀನ ಕರ್ನಾಟಕದ ಸಾಮಂತ ಅರಸರಲ್ಲಿಯೇ ಪ್ರಭಲರಾದವರು ಕರ್ನಾಟಕವನ್ನು ಬೇರೆ ಬೇರೆ ಕಾಲಗಳಲ್ಲಿ ಆಳಿದ್ದ ಚಾಳುಕ್ಯ, ಕಲಚೂರಿ ಮತ್ತು ಯಾದವ ಮನೆತನಗಳಲ್ಲಿ ಗೌರವ ಹೊಂದಿ ಅವರ ಪರವಾಗಿ ಇತರ ಅರಸರೊಂದಿಗೆ ಹೋರಾಡಿ, ಆ ಅರಸು ಮನೆತನಗಳ ರಕ್ಷಣೆಯ ಬೆನ್ನೆಲುಬಾಗಿ ನಿಂತವರು. ಚಾಲುಕ್ಯ ಅರಸು ಮನೆತನಕ್ಕಂತೂ ಈ ವಂಶದವರಿಂದ ಸಂದ ಸೇವೆ ಅಪೂರ್ವವಾಗಿದೆ. ಅಂದಿನ ಚಕ್ರವರ್ತಿಗಳಲ್ಲಿ ಅವರ ಸಾಮಂತ ಮಹಾಮಂಡಳೇಶ್ವರರು ಇಡುತ್ತಿದ್ದ ಅಪಾರ ಭಕ್ತಿ, ಗೌರವ, ಆದರಗಳಿಗೆ ತೋರುತ್ತಿದ್ದ ಸಾಹಸ, ಶೌರ್ಯ, ಆದರ್ಶಗಳಿಗೆ ಯಲಬುರ್ಗಿಯ ಸಿಂಧ ಮನೆತನವು ಉತ್ತಮ ನಿದರ್ಶನವಾಗಿದೆ.[೨೯] ಈ ಮಹಾಮಂಡಳೇಶ್ವರರ ವಂಶಾವಳಿಯನ್ನು ದಿನಕರ ದೇಸಾಯಿಯವರು[೩೦] ಹೀಗೆ ನಿರೂಪಿಸಿದ್ದಾರೆ.



ಮಹಾಮಂಡಳೇಶ್ವರ ಭೂಲೋಕಮಲ್ಲ ಪೆರ್ಮಾಡಿದೇವ :

ಕ್ರಿ.ಶ. ೧೦೮೩ ಮಾರ್ಚ್ ೧೧ರ ಸವಡಿಯ[೩೧] ಶಾಸನದಲ್ಲಿ ಮೊದಲಿಗೆ ಈತನ ಉಲ್ಲೇಖ ಬರುತ್ತದೆ. ಈ ಸುಮಾರಿಗಾಗಲೇ ಈತನು ಮಹಾಮಂಡಳೇಶ್ವರನಾಗಿ ಕಿಸುಕಾಡು-೭೦, ಬಾಗಡಿಗೆ-೭೦, ನೆರೆಯಂಗಲ್ಲು-೧೨ ಈ ವಿಭಾಗಗಳನ್ನು ತ್ರಿಭೋಗಾಭ್ಯಂತರ ಸಿದ್ಧಿಯಿಂದ ಆಳುತ್ತಿದ್ದನು. ಎರಡನೆಯ ಅಚುಗಿ ಮತ್ತು ಸಿರಿಯಾಲದೇವಿಯರ ಮಗನಾದ ಈತನು 'ವಿರೋಧಿ ಮಂಡಳಿಕ, ಮಾಹೇಶ್ವರಂ, ದುಷ್ಟಮಂಡಳಿಕ ಸರಭಭೇರುಂಡ, ಪಗೆಮೆಚ್ಚೆಗಂಡ, ಶರಣಾಗತನೃಪಾಳಸರನಿಧಿ, ಸಕಳವಿದ್ಯಾನಿಧಿ, ರಸಗೀತ ಕೌತುಕ ಸುಧಾಸಾರಧಾರಾಕಾರ, ರಿಪುಪುರ ತ್ರಿಪುರ ಗಂಗಾಧರಂ, ನಿಜಕುಳಕುವಳಯ ಸುಧಾಕರ, ಗಂಭೀರ ವೀರಾಕರಂ, ದೇವದ್ವಿಜಗುರು ಪೂಜಾಸಂತರ್ಪ್ಪಣ, ಮಂಡಳಿಕ ಮುಖದರ್ಪ್ಪಣ, ನಿರ್ವ್ವಿಕಾರ ಮನಸಿಜಾಕಾರ, ಪರಾಂಗನಾದೂರ, ಅಯ್ಯನಗಂಧವಾರಣ, ಭೂಲೋಕಮಲ್ಲ, ದೇವಪಾದಾರಾಧಕ ಪರಬಳಸಾಧಕ' ಮೊದಲಾದ ಪ್ರಶಸ್ತಿಗಳನ್ನು ಹೊಂದಿದ್ದನು.

ಪೆರ್ಮಾಡಿಯು ಸಹ ತನ್ನ ತಂದೆಯಂತೆ ಚಕ್ರವರ್ತಿಗಳಿಗೆ ನಿಷ್ಠನು, ಮಹತ್ವಾಕಾಂಕ್ಷಿಯೂ ಆಗಿದ್ದನು. ಚಾಲುಕ್ಯ ವಿಕ್ರಮಾದಿತ್ಯನ ಆಳ್ವಿಕೆಯ ಕೊನೆಗಾಲದಲ್ಲಿ ಅಧಿಕಾರಕ್ಕೆ ಬಂದ ಈತನ ಜವಾಬ್ದಾರಿಯೂ ಹೆಚ್ಚಿದ್ದಿತು. ಏಕೆಂದರೆ ವಿಕ್ರಮಾದಿತ್ಯನ ಮರಣದ ನಂತರ ಅನೇಕ ಸಾಮಂತರು ಸ್ವತಂತ್ರರಾಗಲು ಹವಣಿಸತೊಡಗಿದರು. ಅಲ್ಲದೆ ಹಿಂದಿನ ಅವರ ಮಹಾತ್ವಾಕಾಂಕ್ಷೆಯನ್ನು ಮಣ್ಣುಗೂಡಿಸಿದ್ದ ಎರಡನೆಯ ಅಚುಗಿ ಇಲ್ಲದಿರುವುದು ಅವರಿಗೆ ಮತ್ತಷ್ಟು ಪುಷ್ಟಿನೀಡಿತು. ಆದರೆ ಅವರ ಕನಸನ್ನು ನುಚ್ಚುನೂರು ಮಾಡಿ ತಂದೆಯಂತೆ ತಾನೂ ಬಲಶಾಲಿಯೆಂಬುದನ್ನು ಪೆರ್ಮಾಡಿಯು ಸಾಬೀತುಪಡಿಸಿದನು.

ಪೆರ್ಮಾಡಿಯು ಸಾಧಿಸಿದ ವಿಜಯಗಳಲ್ಲಿ ಅತ್ಯಂತ ಪ್ರಮುಖವಾದುದೆಂದರೆ ಹೊಯ್ಸಳ ವಿಷ್ಣುವರ್ಧನನ್ನು ಸೋಲಿಸಿದುದು ಇವನು ವಿಷ್ಣುವರ್ಧನನ್ನು ತುಂಗಭದ್ರೆಯ ಆಚೆಗೆ ದೂಡಿದನಲ್ಲದೆ, ಬೇಲೂರಿನವರೆಗೂ ದಂಡೆತ್ತಿ ಹೋಗಿ ಅದನ್ನು ವಶಪಡಿಸಿಕೊಂಡನು.[೩೨] ಸಾಮಂತ ಅರಸನೊಬ್ಬನು ತನ್ನ ಸಾಮ್ರಾಟನ ರಕ್ಷಣೆಗಾಗಿ ಮತ್ತೊಬ್ಬ ಸಾಮ್ರಾಟನ ಮೇಲೆ ಏರಿ ಹೋಗಿ ಸಾಧಿಸಿರುವ ವಿಜಯವು ಮೈನವಿರೇಳಿಸುತ್ತದೆ. ಇದಲ್ಲದೆ ಹಿಂದಿನ ಸೋಲಿನಿಂದ ಪಾಠಕಲಿಯದ ಕದಂಬ ಜಯಕೇಶಿಯೂ 'ಕೊಂಕಣ ಚಕ್ರವರ್ತಿ' ಎಂಬ ಬಿರುದನ್ನು ಧರಿಸುವುದರ ಮೂಲಕ ಮತ್ತೊಮ್ಮೆ ಸ್ವತಂತ್ರನಾಗಲು ಪ್ರಯತ್ನಿಸಿದನು. ಮೂರನೆಯ ಸೋಮೇಶ್ವರನ ಆಜ್ಞೆಯ ಮೇರೆಗೆ ಪೆರ್ಮಾಡಿಯು ಮತ್ತೊಮ್ಮೆ ಅವನನ್ನು ಸೋಲಿಸಿದನಲ್ಲದೆ ಕುಲಶೇಖರ ಮತ್ತು ಚಟ್ಟರನ್ನೂ ಮುತ್ತಿ ಕೊಂದು ಹಾಕಿದನು.[೩೩] ಆದರೆ ಈ ಕುಲಶೇಖರ ಮತ್ತು ಚಟ್ಟರ ವಿವರಗಳು ಮಾತ್ರ ತಿಳಿಯುವುದಿಲ್ಲ.

ಪೆರ್ಮಾಡಿಯು ಒಂದೆಡೆ ವೀರನಾಗಿದ್ದರೆ ಮತ್ತೊಂದೆಡೆ ಪ್ರಕಾಂಡ ಪಂಡಿತನೂ ಆಗಿದ್ದನು. ಅವನು ಪ್ರೌಢಶಿಕ್ಷಾ ವಿಚಕ್ಷಣ ಪರಿಪೂರ್ಣನೂ ಕಾವ್ಯಗೀತ ರಸಾನುಭವ ವಿನೋದನೂ,[೩೪] ವಿದ್ಯಾನಿಧಿಯೂ[೩೫] ಆಗಿದ್ದನು.

ಆದ್ದರಿಂದಲೇ ಕವಿಗಮಕಿ ವಾದಿ ವಾಗ್ಮಿ ಜ ಸಂಸ್ತೂಯ ಮಾನನಾಗಿದ್ದನು. ಕಾವ್ಯಗೀತಗಳನ್ನು ಕೇಳುವುದಕ್ಕಾಗಿಯೇ ಸಭೆಗಳನ್ನು ನೆರವೇರಿಸಿ, ಹೊಸ ಕಾವ್ಯಗಳ ಹುಟ್ಟಿಗೆ ಅವಕಾಶ ಮಾಡಿಕೊಡುತ್ತಿದ್ದನು. ಅವನು ತನ್ನ ಪಾಂಡಿತ್ಯ ಪ್ರೀತಿಗಾಗಿ ಎರಡನೆಯ 'ಭೋಜ' ಎಂಬ ಅಭಿಧ್ಯೇಯವನ್ನು ಧರಿಸಿದ್ದನು.[೩೬] ಒಟ್ಟಿನಲ್ಲಿ ಪೆರ್ಮಾಡಿಯು ಚಕ್ರವರ್ತಿಗಳಿಗೆ (ಮೂರನೆಯ ಸೋಮೇಶ್ವರನಿಗೆ) ವಿಧೇಯನಾಗಿ, ಅವನ ಸಾಮ್ರಾಜ್ಯವನ್ನು ರಕ್ಷಿಸುವ ವೀರಭಂಟನಾಗಿ ವಿದ್ಯಾನಿಧಿಯಾಗಿ ಬಾಳಿದನು. ಅವನ ಕಾಲವು ಯಾವ ಹೆಚ್ಚಿನ ವ್ಯತ್ಯಾಸಗಳಿಗೆ ಒಳಪಡದೆ ಸುಖಸಮೃದ್ಧಿಯಿಂದ ಕೂಡಿತ್ತು. ಇವನ ಶಾಸನಗಳು ಕ್ರಿ.ಶ. ೧೧೪೪ರ ತರುವಾಯ ದೊರೆಯದ ಕಾರಣ ಈ ವೇಳೆಗಾಗಲೇ ಮಡಿದಿರಬೇಕು.

ಬೆಳಗುತ್ತಿಯ ಸಿಂದರು :

''ಸಮಧಿಗತ ಪಂಚಮಹಾಶಬ್ದ ಮಹಾಮಂಡಳೇಶ್ವರಂ ಕರಹಾಟ ಪುರವರಾಧೀಶ್ವರಂ ಮಾಳತೀದೇವೀಲಬ್ಧವರಪ್ರಸಾದಿತ ಸಮಸ್ತ ಮಹೀಮಂಡಳಂ ವಿಜಯಲಕ್ಷ್ಮೀ ಕರ್ಣ್ನಕುಂಡಳಂ ನೀಳಧ್ವಜ ವಿರಾಜಮಾನ ದಾನಕಾನೀನ ಮಲ್ಲಳಿತೂರ್ಯ್ಯನಿರ್ಗ್ಘೋಶಣಂ, ಗುಣರತ್ನ ಭೂಷಣಂ, ಸಿಂದಕುಳ ಕಮಳಮಾರ್ತ್ತಂಡಂ ವಿಜಯದೋರ್ದ್ದಂಡಂ ಫಣಿರಾಜವಂಶ ಸುಜನಾವತರಿಸಂ ವ್ಯಾಘ್ರಮೃಗ ಲಾಂಛನಂ ವಿನಿಯೋಗಕಾಂಚನಂ, ಶೌರ್ಯ್ಯ ಪಾರಾಯಣಂ ವೈರಿನಾರಾಯಣಂ ಅರಸಂಕ ಕರಗಸಂ ಬಿರುದರಂಕುಸಂ ವೈರಿವನದಾವ ಸಿಂದರದೇವಂ ನಿಡುದೋಳಸಿಂದಂ......''ನಾಮಾದಿ ಪ್ರಶಸ್ತಿಗಳನ್ನು[೩೭] ಪಡೆದಿದ್ದ ಸಿಂದವಂಶದವರು ಶಿವಮೊಗ್ಗ ಜಿಲ್ಲೆಯ ಹೊನ್ನಾಳಿ ತಾಲೂಕಿಗೆ ಸೇರಿದ್ದ ಬೆಳಗುತ್ತಿ ಗ್ರಾಮದ ಸುತ್ತಮುತ್ತಲಿನ ಪ್ರದೇಶಗಳ ಅಧಿಪತ್ಯವಹಿಸಿಕೊಂಡು ಸುಮಾರು ಎರಡು ಶತಮಾನಗಳವರೆಗೆ ಕರ್ನಾಟಕದ ಅರಸುಗಳ ಅಧೀನದಲ್ಲಿ ಮಾಂಡಳೀಕರಾಗಿ ಮೆರದ ಇವರು ಕಲ್ಯಾಣದ ಚಾಲುಕ್ಯರ ಮಾಂಡಲೀಕರಾಗಿಯೂ ಆಳ್ವಿಕೆಯನ್ನು ನಡೆಸಿದರು. ದಿನಕರ ದೇಸಾಯಿ[೩೮]ಯವರು ಇವರ ವಂಶಾವಳಿಯನ್ನು ಈ ರೀತಿ ನಿರೂಪಿಸಿದ್ದಾರೆ.

ನನ್ನಿಯ ಸಿಂದ (ಕ್ರಿ.ಶ. ೯೬೮-೯೯೨)

|

ಜಾತರಸ (ಕ್ರಿ.ಶ. ೯೯೨)

|

ಕಾಯವೀರಸ (ಕ್ರಿ.ಶ. ೧೦೬೧-೧೦೭೫)

|

ಒಂದನೆಯ (ಪಿರಿಯ) ಚಟ್ಟರಸ - I (ಕ್ರಿ.ಶ. ೧೦೭೫-೧೧೦೦)

|

ಜೋಗರಸ (ಕ್ರಿ.ಶ. ೧೧೧೦-೧೧೧೭)

ಎರಡನೆಯ ಚಟ್ಟರಸ (ಕ್ರಿ.ಶ. ೧೧೭-೧೧೨೫)

ಒಂದನೆಯ ಈಶ್ವರ ದೇವ

ಮಾಚ | ಮಲ್ಲಿದೇವ | ಐಹರಸ

ಐಹರಸ → ರಾಯ

ರಾಯ → ಎರಡನೆಯ ಈಶ್ವರದೇವ (ಕ್ರಿ.ಶ. ೧೧೬೦-೧೧೮೫)

ಪಾಂಡ್ಯದೇವ | ಮಲ್ಲಿದೇವ | ರಾಯ | ವಿಜಯ

ಮಲ್ಲಿದೇವ → ಮೂರನೆಯ ಈಶ್ವರದೇವ (ಕ್ರಿ.ಶ. ೧೨೦೪-೧೨೨೭)

ಸೋವಲ | ಕಾಳಲೆ | ಕೇಶವದೇವ (ಕ್ರಿ.ಶ. ೧೨೨೭-೧೨೩೮)

ಕೇಶವದೇವ → ಬೀರದೇವ (ಕ್ರಿ.ಶ. ೧೨೩೮-೧೨೪೭)

ಮಾಚರಸ :

ಈಶ್ವರ ದೇವನ ಹಿರಿಯ ಮಗನಾದ ಮಾಚರಸನು ಕ್ರಿ.ಶ. ೧೧೨೫ರಲ್ಲಿ ಪಟ್ಟಕ್ಕೆ ಬಂದಿರಬೇಕು. ನಾಗವಂದ ಶಾಸನದಲ್ಲಿ[೩೭] ಭೂಲೋಕಮಲ್ಲ ಸೋಮೇಶ್ವರನು ಕಲ್ಯಾಣದಲ್ಲಿ ಆಳುತ್ತಿದ್ದಾಗ ಸಿಂದ ವಂಶದ ಮಾಚರಸನು ಎಡವಟ್ಟ-೭೦, ಅರಕೆರೆ -೧೨ ಮತ್ತು ಐವತ್ತಾರು ಗ್ರಾಮಗಳ ಮತ್ತೊಂದು ಭಾಗವನ್ನು ಆಳುತ್ತಿದ್ದನೆಂದು ಹೇಳಲಾಗಿದೆ. ಶಾಸನದ ಕಾಲ ಚಾಲುಕ್ಯ ವಿಕ್ರಮ ೫೭ನೇ ವರ್ಷಕ್ಕೆ ಸಮನಾದ ಕ್ರಿ.ಶ. ೧೧೨೮. ಈತನು ಕ್ರಿ.ಶ. ೧೧೪೦ರ ವರೆಗೂ ಅಧಿಕಾರದಲ್ಲಿದ್ದನೆಂದು ತಿಳಿದು ಬರುತ್ತದೆ. ಮಾಚರಸನಿಗೆ ಮಲ್ಲಿದೇವ ಮತ್ತು ಐಹರಸರೆಂಬ ಇಬ್ಬರು ತಮ್ಮಂದಿರಿದ್ದರು.[೪೦]

ರಂಜೋಲಿದ ಸಿಂದರು :

ಇಂದಿನ ಬೀದರ ಜಿಲ್ಲೆಯ ರಂಜೇರುವಿನಲ್ಲಿ ಸಿಂದ ಮನೆತನವೊಂದು ಆಳಿಕೆ ನಡೆಸಿದ್ದನು ಡಾ. ಬಾ. ರಾ. ಗೋಪಾಲ ಅವರು ಗುರುತಿಸಿದ್ದಾರೆ.[೪೧] ರಂಜೇರು ಅಟ್ಟಳೆ ನಾಡಿನ ರಾಜಧಾನಿ. ಈ ವಂಶದವರೂ ಇತರ ಸಿಂದ ಮನೆತನಗಳಂತೆ ನಿಡುದೋಳ ಸಿಂದನೇ ತಮ್ಮ ಮೂಲ ಪುರುಷನೆಂದು ಹೇಳಿಕೊಂಡಿದ್ದಾರೆ. ಈ ನಿಡುದೋಳ ಸಿಂಧನ

ನಾಲ್ಕು ಜನ ಮಕ್ಕಳಲ್ಲಿ ಜಗತ್ಸ್ಯೋವ್ಯನು ಅಟ್ಟಳೆ ನಾಡಿನಲ್ಲಿ ನೆಲೆ ನಿಂತು ಸಿಂದ ಶಾಖೆಯೊಂದರ ಉದಯಕ್ಕೆ ಕಾರಣನಾದನು.[೪೨] ಇದುವರೆಗೆ ನೋಡಿದಂತೆ ಈ ಮನೆತನದ ವಂಶಾವಳಿಯನ್ನು ಈ ಕೆಳಗಿನಂತೆ ನೀಡಬಹುದು.[೪೩]

ಜಗತ್ಸ್ಯೋವ್ಯ
|
ಅಲ್ಲಮ
|
ಬದ್ದೆಗ
├── ಗೊನ್ನ
└── ಗೊಂಕ
    |
    ಹಜ್ಜರಸ + ಹಮ್ಮಲದೇವಿ (ಕ್ರಿ.ಶ. ೧೦೯೦-೧೧೧೫)
    |
    ವೀರಪೆರ್ಮಾಡಿ + ಮೈಳಲದೇವಿ (ಕ್ರಿ.ಶ. ೧೧೧೫-೧೧೪೦)
    |
    ಭೈರವ
    |
    ಹೆಮ್ಮ (ಎರಡನೆಯ ಪೆರ್ಮಾಡಿ)
    ├── ದೇವ
    └── ಬರ್ಮದೇವ (ಕ್ರಿ.ಶ. ೧೧೬೯)
        |
        ಆದ್ಯರಸ (ಕ್ರಿ.ಶ. ೧೨೦೮)
        |
        ನೂರ್ಮಡಿಗಂಡ ಭೈರವ (ಮಗ)
        |
        ದುಗ್ಗರಸ
        |
        ಗೊಂಕರಸ (ಮಗ ?)
        |
        ಹಿರಿಯ ಭೈರವದೇವ


ವೀರ ಪೆರ್ಮಾಡಿ :

ಆನೆರಯ ವಿಕ್ರಮಾದಿತ್ಯನ ಕಾಲದಲ್ಲಿ ಆಟ್ಟಳೆ ನಾಡನ್ನಾಳುತ್ತಿದ್ದ ಹಜ್ಜರಸ ಮತ್ತು ಈತನ ರಾಣಿ ಹಮ್ಮಲದೇವಿ[೪೪]ಯರ ಮಗನೇ ವೀರಪೆರ್ಮಾಡಿ ಕ್ರಿ.ಶ. ೧೧೨೯ರ ನಾರಾಯಣಪುರ ಶಾಸನ[೪೫]ವೇ ಪೆರ್ಮಾಡಿಯನ್ನು

ಉಲ್ಲೇಖಿಸುವ ಅತ್ಯಂತ ಪ್ರಾಚೀನ ಶಾಸನ, ಅಲ್ಲಿ ಅವನನ್ನು 'ಭೈರವನ ಅಂಕಕಾರ' ಎಂದು ಕರೆಯಲಾಗಿದೆ. ಬಹುಶಃ ಈ ಭೈರವನು ಹಜ್ಜರಸನ ಮೇಲಾಧಿಕಾರಿಯಾಗಿರಬೇಕು.

ಗುತ್ತಿಯ ಸಿಂದರು :

ಇಂದಿನ ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ತಾಲೂಕು ಕೇಂದ್ರವಾಗಿರುವ 'ಗುತ್ತಿ'ಯಲ್ಲಿ ಹಿಂದೆ ಸಿಂಧವಂಶದ ಅರಸರು ಆಳುತ್ತಿದ್ದರು. ಕರಕಂತಪುರ ಶಾಸನವು[೬೭] ಈ ಮನೆತನದ ವಂಶಾವಳಿಯನ್ನು ನೀಡುತ್ತದೆ. ಇಲ್ಲಿ ಬರುವ ಬಾಚಿಭೂಪನು 'ಗುತ್ತಿಕಲ್ಲು' ರಾಜಧಾನಿಯಿಂದ ಆಳುತ್ತಿದ್ದರಿಂದ ಅವರನ್ನು 'ಗುತ್ತಿಯ ಸಿಂದ'ರೆಂದು ಕರೆಯಲಾಗಿದೆ.



ಮಹಾಮಂಡಳೇಶ್ವರ ಬಾಚಿಭೂಪ :

ಬಾಚಿಭೂಪನು ಏಕಕಾಲದಲ್ಲಿ ಚಕ್ರವರ್ತಿ ಮೂರನೆಯ ಸೋಮೇಶ್ವರ ಹಾಗೂ ಆತನ ತಮ್ಮ ಯುವರಾಜ ತೈಲಪನ ಸಾಮಂತನಾಗಿ ಸಿಂದವಾಡಿ ನಾಡಿನ ಒಂದು ಉಪವಿಭಾಗ (?)ವಾದ 'ಗುತ್ತಿಕಲ್ಲು' ರಾಜಧಾನಿಯಿಂದ ಆಳುತ್ತಿದ್ದನು. ಇವನು 'ವಿದಗ್ದ ಗಣಿಕಾಜನ ಹೃದಯ ಸೂರೆಕಾರ ಅಣ್ಣನಂಕಕಾರ, ಸಿತಗರ ಗಂಡ ನುಡಿದಂತೆ ಗಂಡ, ತೊಡರೆ ಬಲ್ಲಂಡ, ಅಯ್ಯನ ಸಿಂಗ, ಸಾಹಸೋತ್ತುಂಗ ಪರಬಳ ಸಾಧಕ' ಮುಂತಾದ ಬಿರುದುಗಳನ್ನು ಧರಿಸಿದ್ದನು.

ಬಾಚಿಭೂಪನು ಸಿಂಧವಾಡಿಯ ರಾಜಧಾನಿಯಾದ ತುಂಬುಳದ 'ಶ್ರೀಸ್ವಯಂಭು ಕರಕಂತದೇವ'ರಿಗೆ ವಿಷು ಸಂಕ್ರಮಣ ನಿಮಿತ್ಯವಾಗಿ ಆದವಾನಿ-೫೦೦ ಬಳಿಯ ಗುರುಜೆ-೭೦ರಲ್ಲಿಯ ಇಟ್ಟಿಗೆ ಎಂಬ ಗ್ರಾಮವನ್ನು ದೇವರ ಅಂಗಭೋಗ, ರಂಗಭೋಗ, ನಿತ್ಯನೈವೇದ್ಯ ನಂದಾದೀವಿಗೆಗೆ, ಪಾತ್ರ, ಪಾವುಳ ಹಾಗೂ ಸತ್ರಕ್ಕಾಗಿ ಅಲ್ಲಿಯ ಸ್ಥಾನಾಚಾರ್ಯರಾದ ಚಂದ್ರಮೌಳಿ ಪಂಡಿತರ ಶಿಷ್ಯರಾದ ವಾಮದೇವ ಪಂಡಿತರಿಗೆ ಬಿಟ್ಟುಕೊಡುತ್ತಾನೆ.

ಬಾಚಿಭೂಪನ ರಾಜಧಾನಿ ಗುತ್ತಿಕಲ್ಲು ''ಉದಯ ಗಿರೀಂದ್ರಾರ್ಕ್ಕಮೆ ಪೇಳೆನಲ್ ಸಂಪದಮಂ ಕೈಕೊಂಣ್ದು ತೇಜಂ

ನಿಜವೆನಲೆಸಗುತ್ತಿ ದ್ದಿ ತಂತೆ ಅಲ್ಲ ದೆ ಅದು
ಗಿರಿನಿರ್ಜ್ಜರದಿಂ ಸಿಂಧುವ
ಪರಿಕಾಲಿಂ ಬಳೆದ ಗನ್ದ ಶಾಳಿಯ ವನದಿಂ
ವರ ಪುಂಡ್ರೇಕ್ಷು ಸುವಾಟೋ
ತ್ಕರದಿಂ ದ್ರೋಣಾಮುಖಾಖ್ಯ

ಗಳಿಂದ ಶೋಭಿಸುತ್ತಿತ್ತು. ಅಲ್ಲಿ ಮಾವು, ಮಲ್ಲಿಗೆಗಳು ಸಮೃದ್ಧಿಯಾಗಿ ಬೆಳೆದಿದ್ದವು. ಆ ನಾಡಿನ ಸ್ತ್ರೀಯರು ಪತಿಭಕ್ತೆಯರಾಗಿ ಇತರರಿಗೆ ಆದರ್ಶಪ್ರಾಯರಾಗಿದ್ದರೆಂದು ತಿಳಿದುಬರುತ್ತದೆ.

ಕುರಗೋಡಿನ ಸಿಂದರು :

ಬಳ್ಳಾರಿ ಜಿಲ್ಲೆಯಲ್ಲಿ ಕಂಡುಬರುವ ಪ್ರಮುಖ ಮಾಂಡಳಿಕ ವಂಶಗಳಲ್ಲಿ ಕುರಗೋಡಿನ ಸಿಂಧರದೂ ಒಂದು. ಇವರು ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ ಮತ್ತು ಕಲಚೂರ್ಯರ ಮಾಂಡಳೀಕರಾಗಿ ಆಳ್ವಿಕೆ ನಡೆಸಿದರು. ಆರಂಭದಲ್ಲಿ ಇವರು ಕಲ್ಯಾಣ ಚಾಲುಕ್ಯರ ಮಾಂಡಳಿಕರಾಗಿ (ಸಾಮಂತರಾಗಿ) ನಂತರ ಮಹಾಮಂಡಳೇಶ್ವರರಾಗಿ ಪದೋನ್ನತಿಯನ್ನು ಪಡೆದರು. ಸಿಂದರ ಶಾಖೆಗಳು ಅನೇಕವಿದ್ದು ಕುರುಗೋಡನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆನಡೆಸಿದ್ದರಿಂದ ಇವರನ್ನು 'ಕುರಗೋಡಿನ ಸಿಂದರೆಂದು'[೪೭] ಇತಿಹಾಸದಲ್ಲಿ ಗುರುತಿಸಲಾಗಿದೆ. ಈ ಸಿಂದ ಮನೆತನದ ವಂಶಾವಳಿ ಈ ಕೆಳಗಿನಂತಿದೆ :

ನಿಡುದೋಳ ಸಿಂದ (ಕ್ರಿ.ಶ. ಸು. ೨೬೦)
|
ಜಗತ್ಸೆವ್ವ (ಕ್ರಿ.ಶ. ಸು. ೨೯೦)
|
ಅರಿಬಲ್ಲದಾಗ್ರ (ಕ್ರಿ.ಶ. ಸು. ೯೪೭)
|
ಉದಯಾದಿತ್ಯ (ಕ್ರಿ.ಶ. ಸು. ೧೦೪೫)
|
ಚೋಕರಸ (ಕ್ರಿ.ಶ. ಸು. ೧೦೯೨)
|
ಒಂದನೆಯ ಭೀಮ (ಭೀಮರಸ) + ಮಾಕಣಾಂಬಿಕೇಹೆಂ) (ಕ್ರಿ.ಶ. ೧೧೦೨)
|

ಸೋವಿದೇವ (ಕ್ರಿ.ಶ. ೧೧೨೨)

ಇಮ್ಮಡಿ ಭೀಮ — ಒಂದನೆಯ ರಾಚಮಲ್ಲ — ದೂವರ (ದೇವರಾಜ) — ದೇವ ಫಣಿರಾಜ

ಒಂದನೆಯ ರಾಚಮಲ್ಲ: (ರಾಣಿ) ಪಿರಿಯರಸಿ ಮಾಕಲದೇವಿ — ಸೋವಲದೇವಿ (ರಾಣಿ)

ಸೋವಲದೇವಿ: ಇರುಂಗೋಳ + ಬಲದೇವಿ : ಏಚಲದೇವಿ

ಇಮ್ಮಡಿ ರಾಚಮಲ್ಲ — ಸೋಮಭೂಪಾಲ

ಇಮ್ಮಡಿ ರಾಚಮಲ್ಲ: ವೀರಕಲಿದೇವ (ಕ್ರಿ.ಶ. ೧೧೮೯)

ಮಹಾಮಂಡಳೇಶ್ವರ ಸೋವಿದೇವ :

ಕುರುಗೋಡು ಸಿಂದವಂಶದ ಕೀರ್ತಿ, ಪ್ರತಿಷ್ಠೆ, ಸ್ಥಾನ-ಮಾನಗಳನ್ನು ಉನ್ನತಿಗೇರಿಸಿ ಪ್ರಾಂತೀಯ ಅರಸರ ಬಂಧನದಿಂದ ಮುಕ್ತರನ್ನಾಗಿ ಮಾಡಿ, ಆ ಮನೆತನಕ್ಕೆ ಸುಭದ್ರವಾದ ಅಡಿಪಾಯ ಹಾಕಿಕೊಟ್ಟ ಕೀರ್ತಿ ಸೋವಿದೇವನಿಗೆ ಸಲ್ಲುತ್ತದೆ. ಇದುವರೆಗೆ ಕೇವಲ ಮನ್ನೆಯ ಮಹಾಸಾಮಂತರಾಗಿದ್ದ ಕುರುಗೋಡು ಸಿಂಧರು ಸೋವಿದೇವನ ಕಾಲದಿಂದ ಮಹಾಮಂಡಳೇಶ್ವರರಾಗಿ ಪದೋನ್ನತಿಯನ್ನು ಪಡೆದರು.

ಆರನೆಯ ವಿಕ್ರಮಾದಿತ್ಯನ ನಂತರ ಹೊಯ್ಸಳಾದಿ ಅನೇಕ ಸಾಮಂತರು ಸ್ವತಂತ್ರರಾಗಲು ಪ್ರಯತ್ನಿಸತೊಡಗಿದರು. ಇಂತಹವರ ಪ್ರಯತ್ನಗಳನ್ನು ನಿಯಂತ್ರಿಸುವ ಜವಾಬ್ದಾರಿ ಚಾಲುಕ್ಯರ ನಿಷ್ಠಾವಂತ ಸಾಮಂತರ ಮೇಲೆ ಬಿದ್ದಿತು. ಸೋವಿದೇವನು ಅಧಿಕಾರಕ್ಕೆ ಬಂದ ಕೇವಲ ೧೦ ವರ್ಷಗಳಲ್ಲಿ ಅಂದರೆ ಕ್ರಿ.ಶ. ೧೧೩೧ರಲ್ಲಿ ಅವನ ಮಗ ಇಮ್ಮಡಿ ಭೀಮನು ಅಧಿಕಾರಕ್ಕೆ ಬಂದುದನ್ನು ನೋಡಿದರೆ, ಸೋವಿದೇವನು ಯುದ್ಧಗಳಲ್ಲಿ ಭಾಗವಹಿಸಿ ಮಡಿದಿರಬೇಕು. ಇದನ್ನು ಸಮರ್ಥಿಸಲು ಆಧಾರಗಳ ಕೊರತೆಯಿದೆಯಾದರೂ ಅವನು ಧರಿಸಿದ ಅನೇಕ ಬಿರುದುಗಳು ಆತನ ಕ್ಷಾತ್ರ ಜೀವನವನ್ನು ನಿರೂಪಿಸುವಂತಿವೆ.

ಸೋವಿದೇವನು 'ಸಿಂದಕುಳಕಮಳ ಮಾರ್ತ್ತಣ್ಡಂ ಸಾಹಸೋತ್ತುಂಗ, ಸಮರ ಪ್ರಚಂಡ, ವಿಮಳ ಯಶೋದ್ಭವ, ವಿಜಯ ಪಟುಪಟಹಘೋಷಣ, ಗುಣರತ್ನ ಭೂಷಣ, ನುಡಿದಂತೆ ಗಂಡ, ಸಾಹಸೋತ್ತುಂಗ, ಗಾಶಳರಾಯಿಗ ಮೃಗಬೇಟೆಕಾರ, ಸತ್ಯವಿಖ್ಯಾತ, ಅಹವವೀರ, ವೈರಿ ಮದಾಮೋದ, ಉದ್ವೃತ್ತಾರಾತಿ ಮಂಡಳಿಕ ತಾರಕ ಷಡಾಸನ, ಸಾಹಸ ಪಂಚಾನನ, ಮನುಜ ಮನೋಜಮೂರ್ತಿ, ಪಾತಾಳ ಚಕ್ರವರ್ತಿ, ಪರನಾರಿದೂರ' ಮೊದಲಾದ ಬಿರುದುಗಳನ್ನು ಧರಿಸಿದ್ದನು.[೪೮]

ಸೋವಿದೇವನನ್ನು 'ಕಾರ್ತಿಕದೇವಲಬ್ದವರ ಪ್ರಸಾದ್'[೪೯] ಎಂದು ಕರೆಯಲಾಗಿದೆ. ಬಹುಶಃ ಈತನ ತಂದೆ-ತಾಯಿಗಳು ಕಾರ್ತಿಕ ಸ್ವಾಮಿಯಲ್ಲಿ ಹರಕೆಹೊತ್ತು ಅವನನ್ನು ಪಡೆದಿರಬೇಕು. ಸೋವಿದೇವನ ರಾಣಿಯರ ವಿವರ ತಿಳಿಯದಿದ್ದರೂ ಅವನಿಗೆ ಇಮ್ಮಡಿಭೀಮ, ಒಂದನೆಯ ರಾಚಮಲ್ಲ, ದೊವರ (ದೇವರಾಜ) ದೇವ ಮತ್ತು ಫಣಿರಾಜರೆಂಬ ಐದು ಜನ ಮಕ್ಕಳಿದ್ದರೆಂದು ಕೊಂಚಗೇರೆ[೫೦] ಶಾಸನ ಹೇಳಿದೆ.

ಇಮ್ಮಡಿ ಭೀಮ :

ಸೋವಿದೇವನ ನಂತರ ಅಧಿಕಾರಕ್ಕೆ ಬಂದ ಇಮ್ಮಡಿ ಭೀಮನು 'ಫಣಿವಂಶ, ಕಮಳ ದಿನಪ, ಫಣಿವಂಶಾಂಬೋಧಿ ವರ್ಧಮಾನ ಶಶಾಂಕ, ಫಣಿವಂಶ ಕುಮುದಚಂದ್ರ, ಫಣಿವಂಶ ಲಾಟ ತಿಲಕ, ಅಮಳ ಗುಣನಿಲಯ, ಭಾನುರುಚಿ ಸದೃಶತೇಜ' ಮೊದಲಾದ ಬಿರುದುಗಳನ್ನು ಧರಿಸಿದ್ದನು.[೫೧] ಬೈಲೂರು ಶಾಸನವು[೫೨] ಈತನನ್ನು ಕೇವಲ ''ಮಹಾಮಂಡಳೇಶ್ವರ ಬಳ್ಳಾರೆಯ ಭೀವರಸ' ಆದರೆ ಕೊಂಚಗೆರೆ ಶಾಸನವು[೫೩] ಈ ಬೀವರಸನು ಕುರುಗೋಡು ಸಿಂದ ವಂಶಕ್ಕೆ ಸೇರಿದವನೆಂದು ಸ್ಪಷ್ಟಪಡಿಸಿದೆ. ಬಳ್ಳಾರೆಯು ಬಲ್ಲಕುಂದೆ ನಾಡಿಗೆ ಸೇರಿದ ಒಂದು ಗ್ರಾಮ. ಹೀಗಾಗಿ ದಾನ ಬಿಡುವಾಗ ಆ ನಾಡಿನ ಒಡೆಯನಾದ ಬೀವರಸನು ಬಳ್ಳಾರೆಯ ನೆಲೆವೀಡಿನಲ್ಲಿರಬೇಕು. ಆದ್ದರಿಂದಲೇ ಶಾಸನವು ಅವನನ್ನು 'ಬಳ್ಳಾರೆಯ ಬೀವರಸ' ಎಂದು ಕರೆದಿದೆ ಎಂದು ಹೇಳಬಹುದು.

ಎಳಮೇಲದ ಸಿಳಾರರು :

ಸಿಳಾರ ವಂಶದವರು 'ಸಿಂಧಿಕಾಗ್ರಾಮ' (ಸಿಂದಗಿ) 'ಎಳಮೇಲ' (ಆಲಮೇಲ) ಸುತ್ತಲಿನ ಪ್ರದೇಶವನ್ನು ಮಹಾಮಂಡಳೇಶ್ವರರಾಗಿ ಆಳುತ್ತಿದ್ದುದು ತಿಳಿದುಬರುತ್ತದೆ. ಡಾ. ಬಿ. ಆರ್. ಗೋಪಾಲ[೫೪]ರವರು ಇವರ ವಂಶಾವಳಿಯನ್ನು ಹೀಗೆ ನಿರೂಪಿಸಿದ್ದಾರೆ.

ನಾಯಿಗ

ಒಂದನೆಯ ಸಿಂಗರಸ | ಉದಯಾದಿತ್ಯ

ಎರಡನೆಯ ಸಿಂಗರಸ

ಸೋವರಸ ಅಥವಾ ಸೋವಿದೇವ

ಮಹಾಮಂಡಳೇಶ್ವರ ಎರಡನೆಯ ಸಿಂಗರಸ :

ಆರನೆಯ ವಿಕ್ರಮಾದಿತ್ಯನ ಕಾಲದಲ್ಲಿ ಮಹಾಮಂಡಳೇಶ್ವರನಾಗಿದ್ದ ಈತನು ನಂತರ ಮೂರನೆಯ ಸೋಮೇಶ್ವರನ ಆಡಳಿತಾವಧಿಯಲ್ಲಿಯೂ ಮಹಾಮಂಡಳೇಶ್ವರನಾಗಿ ಮುಂದುವರೆದನು. ಮಲಘಾಣ[೫೫] ಶಾಸನವು

'ಮಹಾಮಂಡಳೇಶ್ವರಂ ಸಿಂಗರಸರ್ಗ್ಗೆ ಪರೋಕ್ಷ ವಿನಯಮಂ ಶ್ರೇಯಸ್ಸವಾಗಿ ಮಗಂ' ಎಂದಿದೆ. ಅಂದರೆ ಈತ ಕ್ರಿ.ಶ. ೧೧೩೩ರ ಸುಮಾರಿಗೆ ಮರಣ ಹೊಂದಿರಬಹುದು.

ಮಹಾಮಂಡಳೇಶ್ವರ ಸೋವಿದೇವ (ಸೋವರಸ):

ಸಿಂಗರಸ ಮತ್ತು ಬಾಚಲದೇವಿಯರ ಮಗನಾದ ಸೋವಿದೇವನು ಮಲಜಯಪುರದ ಶ್ರೀ ಸ್ವಯಂಭೂ ಕೇದಾರೇಶ್ವರ ದೇವರ ಮೂರ್ತಿ ಕೆಲಸಕ್ಕೆ ಸಮಸ್ತ ಪ್ರಜೆಗಳ ಸಮ್ಮುಖದಲ್ಲಿ ಸಿರಸಿದ್ದೆ (ಶಿರಸಗಿ) ದೇವಾಶ್ರಮದ ವಿದ್ವಾಂಸರಿಗೆ ದಾನ ನೀಡಿದ ಬಗ್ಗೆ ಶಿರಸಗಿ[೫೬] ಶಾಸನ ತಿಳಿಸುತ್ತದೆ. ಮಲ್ಲಾಬಾದ ಶಾಸನವು[೫೭] ಎಳರಾಮೆ ತೀರ್ಥದ ರಾಮೇಶ್ವರ ದೇವರ ನಿವೇದ್ಯಕ್ಕೆ ನಂದಾದೀವಿಗೆಗೆ ಮಹಾಮಂಡಳೇಶ್ವರ ಎಳಮೇಲ ಸೋವರಸರು ದಾನ ನೀಡದುದನ್ನು ತಿಳಿಸುತ್ತದೆ.

ಕೊಲ್ಲಾಪುರದ ಶಿಲಾಹಾರರು :

ಮೂರನೆಯ ಸೋಮೇಶ್ವರನ ಮಹಾಮಂಡಳೇಶ್ವರರಲ್ಲಿ ಕೊಲ್ಲಾಪುರ ಶಿಲಾಹಾರ ಮನೆತನದವರೂ ಒಬ್ಬರಾಗಿದ್ದಾರೆ. ಇವರು ಇಂದಿನ ಮಹಾರಾಷ್ಟ್ರದ ಸತಾರ, ಸಾಂಗ್ಲಿ, ಕೊಲ್ಲಾಪುರ ಮತ್ತು ಬೆಳಗಾಂವ್ ಜಿಲ್ಲೆಯ ಕೆಲವು ಪ್ರದೇಶಗಳು ಇವರ ಹತೋಟಿಯಲ್ಲಿದ್ದವು. 'ತಗರಪುರವರಾಧೀಶ್ವರ, ಮಹಾಲಕ್ಷ್ಮೀಲಬ್ಧವರಪ್ರಸಾದ'ರೆಂದೂ ಇವರನ್ನು ಶಾಸನಗಳು ಕರೆದಿವೆ. ಇವರ ವಂಶಾವಳಿಯನ್ನು ಶಾಸನಗಳಿಂದ ಹೀಗೆ ಚಿತ್ರಿಸಬಹುದು.[೫೮]

ಜಟ್ಟಿಗ (ಕ್ರಿ.ಶ. ೯೪೦-೯೬೦)
|
ನಾಯಿಮ (ನಾಯಿವರ್ಮನ್) (ಕ್ರಿ.ಶ. ೯೬೦-೯೮೦)
|
ಚಂದ್ರ (ಕ್ರಿ.ಶ. ೯೮೦-೧೦೦೦)
|
ಎರಡನೆಯ ಜಟ್ಟಿಗ (ಕ್ರಿ.ಶ. ೧೦೦೦-೧೨೦)

ಗೊಂಕ | ಗುವಲ | ಕೀರ್ತಿರಾಜ | ಚಂದ್ರಾದಿತ್ಯ

ಗೊಂಕ
|
ಮಾರಸಿಂಹ (ಕ್ರಿ.ಶ. ೧೦೫೦-೧೦೭೫)

ಎರಡನೆಯ ಗುವಲ | ಬಲ್ಲಾಳ | ಎರಡನೆಯ ಗೊಂಕ | ಭೋಜ | ಗಂಡರಾದಿತ್ಯ (ಕ್ರಿ.ಶ. ೧೧೦೮-೧೧೩೮)

ಗಂಡರಾದಿತ್ಯ
|
ಎರಡನೆಯ ಭೋಜ
(ಕ್ರಿ.ಶ. ೧೧೭೫-೧೨೧೩)


ಮಹಾಮಂಡಳೇಶ್ವರ ಗಂಡರಾದಿತ್ಯ :

ಆರೆ ಶಾಸನದಲ್ಲಿ[೫೯] ಈತನ ಉಲ್ಲೇಖ ಬರುತ್ತದೆ. ಶಾಸನದಲ್ಲಿ ''ತಗರ ಪುರವರಾಧೀಶ್ವರಂ ಜೀಮೂತ ವಾಹನಾನ್ವಯ ಪ್ರಸೂತಂ ಸುವರ್ಣ್ಣಗರುಡಧ್ವಜಂ, ರಿಪುಮಂಡಳಿಕ ಭೈರವಂ, ವಿದ್ವಿಷ್ಟಗಜ ಕಂಠೀರವಂ ಇಡುವರಾದಿತ್ಯಂ, ಕಲಿಯುಗ ವಿಕ್ರಮಾದಿತ್ಯಂ, ಶನಿವಾರಸಿದ್ಧಿ, ಗಿರಿದುರ್ಗ್ಗಲಂಘನಂ ಶ್ರೀ ಮಹಾಲಕ್ಷ್ಮೀದೇವಿ ಲಬ್ಧವರಪ್ರಸಾದಂ' ಎಂದು ಈತನ ಪ್ರಶಸ್ತಿಗಳನ್ನು ಕೊಡಲಾಗಿದೆ. ಗಂಡರಾದಿತ್ಯನು ವಳವಾಡದಿಂದ ರಾಜ್ಯಭಾರ ಮಾಡುತ್ತಿದ್ದನು. ಆ ಸಮಯದಲ್ಲಿ ತನ್ನ ಸಾಮಂತನಾದ ನಂಬಿದೇವನು ಕಟ್ಟಿಸಿದ ಪಾರ್ಶ್ವನಾಥ ಬಸದಿಗೆ ದಾನ ಬಿಡುತ್ತಾನೆ. ಔರಾದ ಶಾಸನವು[೬೦] ಕಲಚೂರಿ ಬಿಜ್ಜಳನ ಅಧಿಕಾರಿಯೊಬ್ಬನು ಈ ಗಂಡರಾದಿತ್ಯನನ್ನು ಸೋಲಿಸಿ ಪಶ್ಚಿಮದ ರಾಜರನ್ನೆಲ್ಲ ಹತ್ತಿಕ್ಕಿದ್ದನೆಂದು ತಿಳಿಸುತ್ತದೆ. ಡಾ. ಎಂ. ಎಂ. ಕಲಬುರ್ಗಿಯವರು ಇವನ ಉಲ್ಲೇಖವಿರುವ ಶಾಸನಗಳ ಪಟ್ಟಿಯನ್ನು ಕೊಟ್ಟಿರುತ್ತಾರೆ.[೬೧]

ಕಲಚೂರಿಯರು :

ಮಧ್ಯಕಾಲೀನ ಭಾರತದ ಕಟಚ್ಚುರಿ ವಂಶದ ಹೈದಯ ವಂಶಕ್ಕೆ (ಕುಲಕ್ಕೆ) ಸೇರಿದ ಕರ್ನಾಟಕದ ಕಲಚೂರಿಯರು ನರ್ಮದಾ ತೀರದ ಮಾಹೀಷ್ಮತಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡಿದ್ದರು. ಹೀಗಾಗಿ 'ಮಾಹೀಷ್ಮತೀ ಪುರವರಾಧೀಶ್ವರ' ಎಂಬ ತಮ್ಮ ಬಿರುದಿನ ಮೂಲಕ ಮಾಹೀಷ್ಮತಿ ಪುರವನ್ನು ಅಮರಗೊಳಿಸಿದ್ದಾರೆ. ಉತ್ತರದ ಕಾಲಂಜರ ಪುರದಿಂದ ಬಂದವರೆಂಬುದನ್ನು ತೋರಿಸಲು 'ಕಾಲಂಜರ ಪುರವರಾಧೀಶ್ವರ'ರೆಂದು ತಮ್ಮನ್ನು ಕರೆದುಕೊಂಡಿದ್ದಾರೆ. ಮೂಲ ಕಟಚೂರಿಗಳು ಶಿವಭಕ್ತರಾದುದರಿಂದ ಇವರೂ ಕೂಡ ಶೈವಭಕ್ತರಾಗಿ ಸುವರ್ಣ್ಣವೃಷಭ ಲಾಂಛನವನ್ನು ಹೊಂದಿದ್ದಾರೆ. ಕಲಚೂರಿ ಹೆಸರು ಕಟಚೂರಿ ಎಂಬ ಪದದಿಂದ ಬಂದಿದ್ದು. ಕತ್ರಿಯಕುಲ, ಸೂರ್ಯನಂತೆ ಪ್ರಭಾವಶಾಲಿ ಎಂದಾಗುವದರಿಂದ ಇದು ಬಹುಶಃ ಮನೆತನದ ಮೂಲ ಪುರುಷರ ಹೆಸರಾಗಿರಬಹುದು ಎನ್ನಲಾಗಿದೆ.[೬೨]

ಕರ್ನಾಟಕಕ್ಕೆ ಹೊರಗಿನಿಂದ ಬಂದ ಕಲಚೂರಿಯರು ತರ್ದ್ದವಾಡಿ ನಾಡಿನ ಪಶ್ಚಿಮೋತ್ತರ ಗಡಿಗೆ ಸೇರಿದ ತರುಕಾಡು ಪ್ರದೇಶವನ್ನು ಆಳತೊಡಗಿದರು. ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ಕಲಚೂರಿ ಅರಸರ ಭಾಗಶಃ ವಂಶಾವಳಿ ಹೀಗಿದೆ.[೬೩]



ಕನ್ನಮರಸನ ಮೊಮ್ಮಗ ಜೋಗಮನ ಮಗನಾದ ಪೆರ್ಮಾಡಿಯು ಆರನೆಯ ವಿಕ್ರಮಾದಿತ್ಯನ ನಂತರ ಮೂರನೆಯ ಸೋಮೇಶ್ವರನ ಕಾಲದಲ್ಲಿ ತರ್ದವಾಡಿ ನಾಡಿನ ಮಹಾಮಂಡಳೇಶ್ವರನಾಗಿದ್ದ ಸಂಗತಿ ಇಂಗಳೇಶ್ವರ[೬೪] ಮತ್ತು ವಿಜಾಪುರ ಪ್ರಾಚ್ಯವಸ್ತು ಸಂಗ್ರಹಾಲಯದ[೬೫] ಶಾಸನಗಳಿಂದ ತಿಳಿಯುತ್ತದೆ. ಪಾಂಡುರಂಗ ದೇಸಾಯಿಯವರು[೬೬] ಈತನ ಕಾಲವನ್ನು ಕ್ರಿ.ಶ. ೧೧೧೮-೧೧೪೦ ಎಂದು ನಿರ್ಧರಿಸಿದ್ದಾರೆ. ಅಲ್ಲದೆ ಪೆರ್ಮಾಡಿಯ ತಂದೆ ಜೋಗಮ ತನ್ನ ಮಗಳು ಸಾವಳದೇವಿಯನ್ನು ಆರನೆಯ ವಿಕ್ರಮಾದಿತ್ಯನಿಗೆ ಕೊಡುವ ಮೂಲಕ ಕಲಚೂರಿ-ಚಾಲುಕ್ಯ ಸಂಬಂಧವನ್ನು ಸ್ಥಿರಗೊಳಿಸಿದ್ದ. ನಂತರ ಪೆರ್ಮಾಡಿಯು ವಿಕ್ರಮಾದಿತ್ಯನ ಹಾಗೂ ಚಂದಲದೇವಿಯರ ಮಗಳು ನಾಗಲದೇವಿಯನ್ನು ವಿವಾಹವಾಗುವ ಮೂಲಕ ತನ್ನ ಮೊದಲಿನ ಸಂಬಂಧವನ್ನು ಮತ್ತಷ್ಟು ನಿಕಟಗೊಳಿಸಿ ರಾಜಕೀಯವಾಗಿ ತನ್ನ ಸ್ಥಾನವನ್ನು ಸುಭದ್ರಗೊಳಿಸಿಕೊಂಡಿದ್ದನು.[೬೭] ಹೀಗಾಗಿ ಶಾಂತಿಪ್ರಿಯ, ಸಾಹಿತ್ಯ ಕಲೆಗಳತ್ತ ಹೆಚ್ಚಿನ ಒಲವು ತೋರಿದ್ದ ಮೂರನೆಯ ಸೋಮೇಶ್ವರನ ಆಳ್ವಿಕೆಯ ದುರ್ಲಾಭ ಪಡೆದು ತಾನು ಸ್ವತಂತ್ರನೆಂಬಂತೆ ತನ್ನ ಆಳ್ವಿಕೆಯ ಹನ್ನೆರಡನೆಯ ವರ್ಷವನ್ನು ಉಲ್ಲೇಖಿಸಿ ತದ್ದಲಬಾಗಿ[೬೮] ಶಾಸನ ಬರೆಸಿರಬಹುದು ಮುಂದೆ ಈತನ ಮಗನಾದ ಬಿಜ್ಜಳನೂ ಸಹ ಇದೇ ನೀತಿಯನ್ನು ಮುಂದುವರೆಸಿದನು.

ಮಹಾಮಂಡಳೇಶ್ವರ ಎರಡನೆಯ ಬಿಜ್ಜಳ :

ಮೂರನೆಯ ಸೋಮೇಶ್ವರನ ಕಾಲದಲ್ಲಿಯೇ ಮಹಾಮಂಡಳೇಶ್ವರನಾಗಿದ್ದ ಎರಡನೆಯ ಬಿಜ್ಜಳನು ಸಹ ತಂದೆಯಂತೆಯೇ ಮಹಾತ್ವಾಕಾಂಕ್ಷಿಯಾಗಿದ್ದನೆಂದು ಹೇಳಬಹುದು. ಔರಾದ[೬೯] ಶಾಸನವು ಬಿಜ್ಜಳದೇವನ ಅಧಿಕಾರಿಯೊಬ್ಬನು ಲಾಳ, ಚೋಳ, ಗೂರ್ಜರ, ಕೇರಳ ಮೊದಲಾದ ದೇಶಗಳ ರಾಜರನ್ನು ಸದೆಬಡಿದನಲ್ಲದೇ ಶಿಲಾಹಾರ ದೊರೆ ಗಂಡರಾದಿತ್ಯನನ್ನು ಸೋಲಿಸಿ ಪಶ್ಚಿಮದ ರಾಜರನ್ನೆಲ್ಲ ಹತ್ತಿಕ್ಕಿದನೆಂದು ಅವನ ಪರಾಕ್ರಮವನ್ನು

ಇಲ್ಲಿ ಕೊಂಡಾಡಲಾಗಿದೆ. ಅಲ್ಲದೇ ಕ್ರಿ.ಶ. ೧೧೩೬ರಲ್ಲಿ ಹಾನಗಲ್ಲ ಕೋಟೆಯ ಮೇಲೆ ದಾಳಿ ಮಾಡಿ ಮಾಂಡಳಿಕ ಮಸಣೆಯನ್ನು ಸೋಲಿಸಿ ಕಪ್ಪವನ್ನು ಪಡೆದನೆಂದು ಸೊಲ್ಲಾಪುರ ಶಾಸನ[೭೦] ತಿಳಿಸುತ್ತದೆ.

ಹೊಯ್ಸಳರು :

ಕರ್ನಾಟಕದ ಇತಿಹಾಸದಲ್ಲಿ ಹೊಯ್ಸಳ ವಂಶದ ದೊರೆಗಳು ಚಕ್ರವರ್ತಿಗಳಾಗದಿದ್ದರೂ ಶ್ರೇಷ್ಠ ದರ್ಜೆಯ ಮಹಾಮಂಡಳೇಶ್ವರರಾಗಿ ಮೆರೆದಿದ್ದಾರೆ. ಕಲ್ಯಾಣದ ಚಾಳುಕ್ಯ ಮನೆತನ ಸಂಪೂರ್ಣವಾಗಿ ನಾಶವಾದ ನಂತರ ಇವರು ಚಾಳುಕ್ಯ ಸಾಮ್ರಾಜ್ಯದ ಕೆಲವು ಭಾಗಗಳನ್ನು ಸ್ವಾಧೀನ ಪಡಿಸಿಕೊಂಡು ಸ್ವತಂತ್ರರಾದರು.

ಹೊಯ್ಸಳರ ಅತೀ ಪ್ರಸಿದ್ಧನಾದ ದೊರೆಯೆಂದರೆ ವಿಷ್ಣುವರ್ಧನ, ವಿಷ್ಣುವರ್ಧನನು ವಿಕ್ರಮಾದಿತ್ಯನ ವಿರುದ್ಧ ಬಂಡಾಯವೆದ್ದು ಸ್ವತಂತ್ರನಾಗಲು ಪ್ರಯತ್ನಿಸಿದರೂ ಸಾಧ್ಯವಾಗದೇ ಆತನ ಅಡಿಯಾಳಾಗಿಯೇ ಉಳಿಯಬೇಕಾಯಿತು. ವಿಕ್ರಮಾದಿತ್ಯ ಸ್ವರ್ಗಸ್ಥನಾದ ಮೇಲೂ ವಿಷ್ಣುವರ್ಧನನ ಪುತ್ರ ನರಸಿಂಹನವರೆಗೂ ಇವರು ಚಾಲುಕ್ಯರ ಪಾದಪದ್ಮೋಪ ಜೀವಿಗಳೆಂದು ಹೇಳಿಕೊಂಡಿರುವುದು ಶಾಸನಗಳಿಂದ ತಿಳಿದುಬರುತ್ತದೆ. ಶಾಸನಗಳ ಆಧಾರದಿಂದ ನಮಗೆ ಅವಶ್ಯವಿರುವ ಇವರ ವಂಶಾವಳಿಯ ಭಾಗವನ್ನು ಹೀಗೆ ನಿರೂಪಿಸಬಹುದು.[೭೧]

ಹೊಯ್ಸಳ

x x
|
ವಿನಯಾದಿತ್ಯ + ಕಳೆಯಬ್ಬರಸಿ
|
ಎರೆಯಂಗ + ಏಚಲದೇವಿ
|
ಬಲ್ಲಾಳ | ವಿಷ್ಣುವರ್ಧನ (ಬಿಟ್ಟಿದೇವ)+ಲಕ್ಷ್ಮೀದೇವಿ | ಉದಯಾದಿತ್ಯ
|
ನರಸಿಂಹ

ಮಹಾಮಂಡಳೇಶ್ವರ ವಿಷ್ಣುವರ್ಧನ :

ಮಹಾಮಂಡಳೇಶ್ವರ ವಿಷ್ಣುವರ್ಧನನು ಭೂಲೋಕಮಲ್ಲನ ಸಾಂಮತನಾಗಿದ್ದನೆಂದು ಕಿತ್ತನಕೆರೆ ಶಾಸನ[೭೨] ತಿಳಿಸುತ್ತದೆ. ಈತನ ಪ್ರಶಸ್ತಿ ಬೇರೆ ಬೇರೆ ಶಾಸನಗಳಲ್ಲಿ ಬೇರೆ ಬೇರೆಯಾಗಿ ಬರುತ್ತದೆ. ಚಿಕ್ಕಕಡಲೂರು ಶಾಸನದಲ್ಲಿ[೭೩] ''ದ್ವಾರಾವತೀಪುರವರಾಧೀಶ್ವರಂ ಯಾದವಕುಳಾಂಬರದ್ಯುಮಣಿ ಮಲೆಪರೊಳುಗಂಡ ಗಂಡಭೇರುಂಡ ಸಂಗ್ರಾಮರಾಮ ಕಲಿಕಾಲಕಾಮ'' ಎಂದಿದೆ. ಬೇಲೂರು ಶಾಸನದಲ್ಲಿ[೭೪] ''ವಾಸಂತಿಕಾದೇವೀಲಬ್ಧವರ ಪ್ರಸಾದಂ

ಚೋಳಕುಳಪ್ರಳಯಭೈರವ ಚೇರಮುರಸಪರಮುರಾಜಕಂಠೀರವಂ ಪಾಂಡ್ಯಕುಳಪಯೋಧಿಬಡವಾನಳಂ ಪಲ್ಲವಯಶೋವಲ್ಲೀಪಲ್ಲವದಾವಾನಳಂ ನರಸಿಂಗವುರ್ಮ್ಮ ಸಿಂಹಸರಭಂ ನಿಶ್ಚಳಪ್ರತಾಪದೀಪ ಪರ್ವತಕಳಪಾಳಾಧಿನೃಪಾಳ ಶಲಭಂ ವಂಗಾಂಗಕಳಿಂಗ ಸಿಂಹಳನೃಪಾಳ ಕುರಂಗಕುಳಪಳಾಯನ ಕಾರಣಂ ಕಠೋರವಿಯಧನುರ್ದ್ದಂಡಟಂಕಾರಂ.........ಸಕಳರಿಪುನೃಪ....ಕುಳದಳನಜನಿತಜಯಾಳಂಕಾರಂ ನಿಜಾಜ್ಞಾಚಂಡಡಿಂಡಿಮಾಡಂಬ ರಾಳಂಕೃತಕಾಂಚೀಪುರ ಸ್ವಗೃಹಚೇಟೀನಿಯೋಗ ಯೋಜಿತರಿಪುನೃಪಾಂತಃಪುರ ಕರತಳಕ್ರೋಡೀಕೃತದಕ್ಷಿಣ ಮಧುರಾಪುರಂ ನಿಜಸೇನಾನಾಥ ನಿರ್ದ್ದಳಿತಜಿನನಾಥಪುರಂ ಭಯಲೋಭದುರ್ಲ್ಲಭಂ ನಾಮಾದಿ ಸಮಸ್ತ ಪ್ರಶಸ್ತಿಸಹಿತಂ ಶ್ರೀಮತು ಕಂಚೆಗೊಂಡಂ ವಿಕ್ರಮಗಂಗ ವೀರ ವಿಷ್ಣುವರ್ದ್ಧನದೇವರು ಗಂಗವಾಡಿ ತೊಂಬತ್ತರುಸಾಸಿರಮುಮಂ ನೊಣಂಬವಾಡಿ ಮೂವತ್ತಿಚ್ಛಾಸಿರ ಮುಮಂ ಬನವಸೇಪನ್ನಿಚ್ಛಾಸಿರಮುಂ' ಎಂದಿದೆ.

ಶ್ರವಣಬೆಳಗೊಳ ಶಾಸನದಲ್ಲಿ[೨೫] ''ರಿಪುಹೃದಯಸೆಲ್ಲಿ ಭೀತರಹೊಲ್ಲ ದಾನವಿನೋದ ಚಂಪಕಾಮೋದ ಚತ್ಸಮಯಸಮುದ್ಧರಣ ಗಂಡರಾಭರಣ, ವಿವೇಕನಾರಾಯಣ, ವೀರಪಾರಾಯಣ, ಸಾಹಿತ್ಯ ವಿದ್ಯಾಧರ, ಕವಿಜನಕಾಮಧೇನು, ಕಲಿಯುಗ ಪಾರ್ತ್ಥ ದುಷ್ಟರ್ಗೆ ಧೂರ್ತ್ಥ ಸಂಗ್ರಾಮರಾಮ ಸಾಹಸಭೀಮ ಹಯವತ್ಸರಾಜ ಕೊಂಗರಮಾರಿ ಪಾಂಡ್ಯನಂ ಬೆಂಕೊಂಡ ತುಳುವರ ಸೆಳೆವ'' ಎಂಬ ಮುಂತಾದ ಪ್ರಶಸ್ತಿಗಳನ್ನು ಹೊಂದಿದ್ದನೆಂದು ಶಾಸನಗಳು ತಿಳಿಸುತ್ತವೆ.

ವಿಷ್ಣುವರ್ಧನನು ಆರನೆಯ ವಿಕ್ರಮಾದಿತ್ಯ ಮರಣಹೊಂದುವವರೆಗೂ ಸುಮ್ಮನಿದ್ದು ಮತ್ತೆ ಆತ ಮರಣ ಹೊಂದಿದ ನಂತರ ತನ್ನ ಹಳೆಯ ನೀತಿಯನ್ನು ಮುಂದುವರೆಸಿದನು. ಕ್ರಿ.ಶ. ೧೧೧೬ರಿಂದ ಕ್ರಿ.ಶ. ೧೧೩೯ರವರೆಗೆ ಚೋಳರ ಪ್ರಾಭಲ್ಯವನ್ನು ಎದುರಿಸಿದ ವಿಷ್ಣುವರ್ಧನ ಕ್ರಿ.ಶ. ೧೧೩೦ರಲ್ಲಿ ಕದಂಬರ ಮೇಲೆ ದಂಡೆತ್ತಿ ಬಂದನು ಕದಂಬ ರಾಜಧಾನಿ ಹಾನಗಲ್ಲ ವಶಪಡಿಸಿಕೊಳ್ಳಬೇಕಾದರೆ ಮೊದಲು ಬನವಾಸಿ ಕೈವಶ ಮಾಡಿಕೊಳ್ಳುವುದು ಅತ್ಯವಶ್ಯಕವಾಗಿತ್ತು. ಆಗ ಬನವಾಸಿಯಲ್ಲಿ ಮಸಣನೆಂಬ ಕದಂಬರ ಮಾಂಡಳಿಕ ಅಧಿಕಾರ ವಹಿಸಿಕೊಂಡಿದ್ದ. ಹೀಗಾಗಿ ಮಸಣನೊಂದಿಗೆ ಹೋರಾಡಿ ಜಯಸಾಧಿಸಿ ಬನವಾಸಿಯನ್ನು ವಶಪಡಿಸಿಕೊಳ್ಳಲು ವಿಷ್ಣುವರ್ಧನನು ನಿರ್ಧರಿಸಿದನು. ಬಂಕಾಪುರದಲ್ಲಿ ಹೊಯ್ಸಳರಿಗೂ ಕದಂಬರಿಗೂ ಯುದ್ಧ ನಡೆಯಿತು. ಈ ಯುದ್ಧದಲ್ಲಿ ಕದಂಬ ದಳಪತಿಯ ಮಗ ಸೋವಣ ಎಂಬಾತ ತನ್ನ ಶೌರ್ಯ, ಸಾಮರ್ಥ್ಯದಿಂದ ಹೋರಾಡಿದುದನ್ನು ತಗರೆಯ ಕ್ರಿ.ಶ. ೧೧೩೩ ಶಾಸನ ಸ್ವಸ್ತಿ ಶ್ರೀಮತು ತಗರೆಯ ಮಸಣಯನ ಸೋವಣನು ಬಂಕಹುರದ ಕವಿಯ ಕಾಳಗದಲು ಬಿದ್ದನು ಎಂದು ತಿಳಿಸಿದೆ.[೨೬]

ವಿಷ್ಣುವರ್ಧನನು ಹಾನಗಲ್ಲನ್ನು ಗೆದ್ದಿದ್ದನಾದರೂ ಕೆಲಕಾಲ ಅದು ಅವರ ಕೈಬಿಟ್ಟಿತ್ತೆಂದು ಹೇಳಬಹುದು. ಕದಂಬ ಮಲ್ಲಿಕಾರ್ಜುನನು ವಿಷ್ಣುವರ್ಧನನ್ನು ಎದುರಿಸಿ ಕ್ರಿ.ಶ. ೧೧೩೫ರಲ್ಲಿ ಹಾನಗಲ್ಲ ಕೋಟೆಯನ್ನು ಮರಳಿ ತನ್ನ ಕೈವಶಕ್ಕೆ ತೆಗೆದುಕೊಂಡುದುದಲ್ಲದೆ ವಿಷ್ಣುವರ್ಧನನ್ನು ಬೆನ್ನಟ್ಟಿ ಲಕ್ಕುಂಡಿಯವರೆಗೆ ಅವನ ಸೈನ್ಯವನ್ನು ಓಡಿಸಿದಂತೆ

ವಿವರಣೆಗಳಿವೆ. ಕ್ರಿ.ಶ. ೧೧೩೬ರ ವೇಳೆಗೆ ಹಾನಗಲ್ಲು ವಿಷ್ಣುವರ್ಧನನ ಕೈಬಿಟ್ಟಿತ್ತು. ಹೀಗಾಗಿ ಮತ್ತೆ ಹಾನಗಲ್ಲನ್ನು ಮರಳಿ ಪಡೆಯಲು ವಿಷ್ಣುವರ್ದನನು ದಂಡೆತ್ತಿ ಬಂದುದನ್ನು ಕ್ರಿ.ಶ. ೧೧೩೮ರ ದಬ್ಬೆ ಅಗ್ರಹಾರ ಶಾಸನ[೭೭] ತಿಳಿಸಿದರೆ ಹಳೆವೂರಿನ ಶಾಸನದ[೭೮] ಪದ್ಯವೊಂದು ವಿಷ್ಣುವರ್ಧನನು ಹಾನಗಲ್ಲನ್ನು ಆಳುತ್ತಿದ್ದನೆಂದು ತಿಳಿಸಿದೆ.

'ತಳಕಾಡೊಳ್ ಸುಳಿದಾಡಿ ತುಂಗಗಜವಪ್ಪುಚ್ಚಂಗಿಯ ಸಾರ್ದುದಾ ಕುಳಚಿತ್ತಂ ಬನವಾಸೆಯಾಗೆ ನಡೆದಾರ್ಪಿಂ ಬೆಳ್ವಲಂಗೊಂಡು ನಿಶ್ಚಳಿತಂ ಪೆರ್ದ್ದೊರೆಗಂ ಸತೋಷದೊಸೆದಾ ಹಾನುಂಗಲ್ಲೊದ್ದತ್ತು ಹೊಯಿಸಳಭೂಪಾಳನ ಶೌರ್ಯಸಿಂಹವಸುಹೃದ್ಭೂಪರ್ ಭಯಂಗೊಳ್ವಿನಂ'[೭೯] ಎಂದು ತಿಳಿಸಿದೆ. ವಿಷ್ಣುವರ್ಧನ ಹಾನಗಲ್ಲನ್ನು ಗೆದ್ದು ಬಂಕಾಪುರವನ್ನು ತನ್ನ ರಾಜಧಾನಿಯನ್ನಾಗಿಸಿಕೊಂಡ. ಪೂಮೆಗಾಮೆಯ ಶಾಸನ[೮೦] 'ನಂಗಲಿ ಕೊಂಗು ಸಿಂಗಮಲೆ ರಾಯಪುರ ತಳಕಾಡು ರೊಡ್ಡವಾ ಬೆಂಗಿ ಬಳ್ಳೆರೆ ವಲ್ಲೂರು ಚಕ್ರಗೊಟ್ಟ ಮುಚ್ಚಲಗಿ ವಿರಾಟನ ಪೊಳಲು ಬಂಕಪುರ ಬನವಾಸೆಗಳು' ವಿಷ್ಣುವರ್ಧನನ ಆಳ್ವಿಕೆಗೆ ಒಳಪಟ್ಟಿದ್ದವು.

ಸದಾ ಯುದ್ಧ ಕಾರ್ಯದಲ್ಲಿಯೇ ಕಾಲಕಳೆದ ವಿಷ್ಣುವರ್ಧನನು ಅನೇಕ ಧಾರ್ಮಿಕ ಕಾರ್ಯಗಳನ್ನೋ ಸಹ ಕೈಗೊಂಡಿರುವನು ಒಟ್ಟಾರೆಯಾಗಿ ಈತ ಒಬ್ಬ ಸಮರ್ಥ, ಮಹಾತ್ವಾಕಾಂಕ್ಷೆಯ ಮಹಾಮಂಡಳೇಶ್ವರನಾಗಿದ್ದನೆಂದು ಹೇಳಬಹುದು.

ಸಗರರು :

ಸಗರವಂಶದ ಅರಸರು ವಿಕ್ರಮಾದಿತ್ಯನ ಮತ್ತು ಅವನ ಮಗನಾದ ಭೂಲೋಕಮಲ್ಲನ ಕಾಲದಲ್ಲಿಯೂ ಮಹಾಮಂಡಳೇಶ್ವರರಾಗಿ ಮುಂದುವರೆದು ಪುಲಿಗೆರೆ-೩೦೦ನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ನಡೆಸುತ್ತಿದ್ದರೆಂದು ಶಾಸನಗಳಿಂದ ತಿಳಿದುಬರುತ್ತದೆ. ಇವರು 'ಮಣಲರಾನ್ವಯ'ರೆಂದು ತಮ್ಮನ್ನು ಕರೆದುಕೊಂಡಿದ್ದಾರೆ. ಈ ಅರಸರ ವಂಶಾವಳಿಯನ್ನು ವಿದ್ವಾಂಸರು[೮೧] ಹೀಗೆ ನಿರೂಪಿಸಿದ್ದಾರೆ.

ಮಣಲೇರ (ಕ್ರಿ.ಶ. ೯೪೬) → ಮಣಲೇರ ಗಾಡಿಗ (ಕ್ರಿ.ಶ. ೯೭೨) → ಇರೆವಬೆಡಂಗ ಮಾರಸಿಂಹ → ಜಯಕೇಶಿ-I (ಕ್ರಿ.ಶ. ೧೦೩೮) → ಒಂದನೆಯ ಇಂದ್ರಕೇಶಿ (ಕ್ರಿ.ಶ. ೧೦೬೦)

- ಮಾರಸಿಂಹ
  - ಎರಡನೆಯ ಇಂದ್ರಕೇಶಿ
    - ಮೂರನೆಯ ಜಯಕೇಶಿ
- ಎರಡನೆಯ ಜಯಕೇಶಿ (ಕ್ರಿ.ಶ. ೧೦೬೦-೧೦೨೨)

ಮಹಾಮಂಡಳೇಶ್ವರ-ಮೂರನೆಯ ಜಯಕೇಶಿದೇವ :

ಚಕ್ರವರ್ತಿಭೂಲೋಕಮಲ್ಲನ ಮಾಂಡಳಿಕನಾದ ಈತನ ಉಲ್ಲೇಖ ಲಕ್ಷ್ಮೇಶ್ವರ[೮೧] ಶಾಸನದಲ್ಲಿ ಬರುತ್ತದೆ. ಅದರಲ್ಲಿ ಈತನನ್ನು ''ಶ್ರೀ ಮನ್ಮಹಾಮಣ್ಡಳೇಶ್ವರಂ ಸಗರ ಮಾರ್ತ್ತಣ್ಡ ಜಯ ಕೇಸಿದೇವರ್ ಶ್ರೀ ರಾಜಧಾನಿ ಪಟ್ಟಣಂ ಪುಲಿಗೆರೆ'' ಎಂದಿದೆ ಮತ್ತೊಂದು ಲಕ್ಷ್ಮೇಶ್ವರ ಶಾಸನದಲ್ಲೂ[೮೨] ಕೂಡ ಈತನನ್ನು ''ಸಮ್ಯುಕ್ತ ಚೂಡಾಮಣಿ ಕ್ಷತ್ರಿಯ ಪವಿತ್ರಃ ಕದನ ತ್ರಿಣೇತ್ರ ಸಗರ ಮಾರ್ತ್ತಣ್ಡ'' ಎಂದಿದೆ. ಅಂದರೆ ಈತನು ಎರಡನೆಯ ಇಂದ್ರಕೇಶಿನ ಮಗನಾದ ಮೂರನೆಯ ಜಯಕೇಶಿಯಾಗಿರಬಹುದು ಮತ್ತು ಈತನು ನೀಡಿದ ದಾನಗಳನ್ನು ಸಹ ಈ ಶಾಸನಗಳು ಉಲ್ಲೇಖಿಸುತ್ತವೆ.

ಕಾಕತೀಯರು :

ಕಾಕತೀಯರು ಮೊದಲು ಆಂಧ್ರಪ್ರದೇಶದ 'ಅನುಮಕೊಂಡು'ವನ್ನು ನಂತರ 'ವಾರಂಗಲ್'ನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ನಡೆಸಿದರು. ಇವರು ಕಲ್ಯಾಣದ ಚಾಲುಕ್ಯರ ಮಹಾಮಂಡಳೇಶ್ವರರಾಗಿ ಕಲ್ಯಾಣದ ಚಾಲುಕ್ಯ ಸಾಮ್ರಾಜ್ಯದ ಪೂರ್ವದ ಗಡಿಯನ್ನು ರಕ್ಷಿಸಿದವರಾಗಿದ್ದಾರೆ. ಸಬ್ಬಿ-೧೦೦೦ ವಿಭಾಗವು ಇವರ ರಾಜ್ಯವಾಗಿತ್ತು. ನಂತರ ಇಂದಿನ ತೆಲಂಗಾಣ ಪ್ರದೇಶವೆಲ್ಲವೂ ಇವರ ಆಡಳಿತಕ್ಕೊಳಪಟ್ಟಿತ್ತು. ಲಾಕುಳ ಶೈವ ಮತಾನುಯಾಯಿಗಳಾಗಿದ್ದ ಈ ವಂಶದ ಅರಸರು ಇದರ ಪ್ರಚಾರಕ್ಕೆ ಕಾರಣೀಭೂತರಾಗಿದ್ದಾರೆ.

ಮಹಾಮಂಡಳೇಶ್ವರ ಎರಡನೆಯ ಪ್ರೋಲ :

'ಕಾಕತಿ' ವಂಶಕ್ಕೆ ಸೇರಿದ ಈತನು ಎರಡನೆಯ ಬೇಟರಸ ಪುತ್ರನಾಗಿದ್ದಾನೆ. ಆರನೆಯ ವಿಕ್ರಮಾದಿತ್ಯನ ಮಹಾಮಂಡಳೇಶ್ವರನಾಗಿದ್ದ ಈತನು ಮೂರನೆಯ ಸೋಮೇಶ್ವರನ ಕಾಲದಲ್ಲಿಯೂ ಮಹಾಮಂಡಳೇಶ್ವರನಾಗಿ ಮುಂದುವರೆದನು. ಈತನ ಉಲ್ಲೇಖ ಸನಿಗರಂ[೮೩] ಶಾಸನದಲ್ಲಿ ಬರುತ್ತಿದ್ದು ಅಲ್ಲಿ (ಅನ್ಮ) ಕುಂಡಾ ಪುರವೇಶ್ವರ, ಪರಮಮಹೇಶ್ವರ, ಪತಿಹಿತಚರಿತ, ವಿನಯ ವಿಭೂಷಣ ಎಂದು ಕರೆಯಲಾಗಿದೆ. ಈತನ ಪಾದ ಪದ್ಮೋಪ ಜೀವಿಯಾಗಿದ್ದ ಸಬ್ಬಿ-೧೦೦೦ದ ಸೌದೊರೆ ರೇಪೊಲ ಕುರುವರಾಜು ಎಂಬುವವನು ಖಣ್ವಸನಗರದ ಕೋಮೇಶ್ವರ ದೇವರ ಸೇವೆಗೆ ತಪೋಧನರ ಆಹಾರದಾನಕ್ಕೆ ಲೋಕಾಭರಣ ಪಂಡಿತ ದೇವರಿಗೆ ಒಂದು ರಾಟಣ, ಗಾಣ ದತ್ತಿಯಾಗಿ ನೀಡಿದನೆಂದು ಸಹ ತಿಳಿಸುತ್ತದೆ.

ಚೋಳರು :

ಕರ್ನಾಟಕ, ಆಂಧ್ರಪ್ರದೇಶ, ಕರ್ನೂಲು, ಅನಂತಪುರ ಜಿಲ್ಲೆಗಳಲ್ಲಿ ಚೋಳವಂಶದ ಅರಸರು ಮಹಾಮಂಡಳೇಶ್ವರರಾಗಿ ಆಳುತ್ತಿದ್ದ ಉಲ್ಲೇಖ ಆರನೆಯ ವಿಕ್ರಮಾದಿತ್ಯನ ಕಾಲದಲ್ಲಿಯೇ ಬರುತ್ತದೆ. ಆದರೆ ಇವರು

ಯಾವ ಶಾಖೆಗೆ ಸೇರಿದ್ದರು ಮತ್ತು ಆ ಶಾಖೆಗಳ ಆದಿ ಅಂತ್ಯದ ಇತಿಹಾಸ ತಿಳಿದು ಬರುವುದಿಲ್ಲ. ಆದರೆ ಕೆಲವರು ಕರಿಕಾಲನ ವಂಶದವರೆಂದು ಹೇಳಿಕೊಂಡಿದ್ದಾರೆ.

ಮಹಾಮಂಡಳೇಶ್ವರ ವಂಕಣ ಚೋಳ ಮಹಾರಾಜ :

ಮೂರನೆಯ ಸೋಮೇಶ್ವರ ಮಹಾಮಂಡಳೇಶ್ವರನಾದ ವಂಕಣ ಚೋಳ ಮಹಾರಾಜನು ಹಂಡೆಕಲ್ಲು, ಕನ್ನೆನಾಡು, ರೇನಾಡು ನಂದ್ಯಾಲೆಯ ಸುತ್ತಮುತ್ತಲ ಪ್ರದೇಶವನ್ನು ಆಳುತ್ತಿದ್ದನು. ಕೊಲ್ಮಗುಡಿಯ ಪ್ರಭು ಮುಪ್ಪರಟಿ ಎಂಬುವವನು ಮಾಡಿಸಿದ ಕೇಶವದೇವರ ಸೇವೆಗಾಗಿ ಎರಡು ಮತ್ತರು ಭೂಮಿ, ಒಂದು ಹೂದೋಟ ಒಂದು ಗಾಣವನ್ನು ಪೂಜಾರಿ ವ್ಯಾಸಣಭಟ್ಟರಿಗೆ ದತ್ತಿ ನೀಡಿದನೆಂದು ಕೋಲಿಮಿಗುಂಡ್ಲ ಶಾಸನವು[೮೪] ತಿಳಿಸಿದೆ.

ಮಹಾಮಂಡಳೇಶ್ವರರು :

ಮಹಾಮಂಡಳೇಶ್ವರ ಮಲ್ಲಿರೇವರಸರು :

ಕ್ರಿ.ಶ. ೧೧೨೭ರ ಕಕ್ಕೇರಿ ಶಾಸನದಲ್ಲಿ[೮೫] ''ಸಮಧಿಗತ ಪಂಚಮಹಾಶಬ್ದ ಮಹಾಮಂಡಳೇಶ್ವರಂ ಮಾಹಿಶ್ಮತೀ ಪುರವರಾಧೀಶ್ವರಂ ಮಧ್ಯದೇಶಾಧೀಶ್ವರ ಆಹಿಹಯ ವಂಶೋದ್ಭವಂ ವಿವೇಕ ವನಜೋದ್ಭವಂ ಕ್ಷತ್ರಿಯ ಪವಿತ್ರಂ ರೂಪಮಾಂಧಾತಂ ನುಡಿದಂತೆ ಗಂಡ, ಭ್ರಿಗು ವಂದಾಚಾರ್ಯ್ಯಯಾ ಕಾಲಭೈರವ ಮಾತಿಗೆದಪ್ಪುವ ಮಂಡಳಿಕರ ಗಂಡ, ಜಗದೊಬ್ಬ್ರಗಂಡ, ಗಂಡಭೇರುಂಡಂ ರಾಯಕಟಕ ಮಂನಿರೆವಂ ಶ್ರೀಮತು ಭೂಲೋಕಮಲ್ಲರಾಯನ ಅಡರು ನಾಮಾದಿ ಸಮಸ್ತ ಪ್ರಶಸ್ತಿ ಸಹಿತಂ ಶ್ರೀಮನ್ಮಹಾಮಂಡಳೇಶ್ವರಂ ಮಲ್ಲಿರೇವರಸರುಂ ಎಂದು ಹೊಗಳುತ್ತದೆ. ಕ್ರಿ.ಶ. ೧೧೨೯ರ ಮುದನೂರು ಶಾಸನ[೮೬] ''ಸ್ವಸ್ಯನೇಕ ಭಂಗುರತರತ್ತರಂಗ ಸಂಭೂತವೀಛಿಚ್ಛಾಯ ಲವಣಾಬ್ಧಿವಳಯ ವಳಯಿತ ವೇಳಾವನ ಗಂಗಾತೀರ ಪಾರಿಯಾತ್ರ ತನ್ಮಧ್ಯ ದೇ xxಶ್ವರಂ ಮಾಹಿಷ್ಮತೀ ಪುರವರಾಧೀಶ್ವರಂ ಕಾರ್ತ್ತಿವೀರ್ಯ್ಯ ಕುಳಾನ್ವಯ ಸ(ಶ)ರತ್ಸಮೆಯ ಸಂಪೂರ್ನ್ನ ಚಂದ್ರ ವಿಭವಾಮರೇಂದ್ರ xxx ಸತ್ಯಮಾಂಧಾತಂ ಸತ್ಯವಿಖ್ಯಾತಂ ಕ್ಷತ್ರಿಯ ಪವಿತ್ರ ಕದನತ್ರಿಣೇತ್ರ X ಕಂ ಶ್ರೀಗಾತಾಭಾರ್ಯ್ಯ[ಂ] ಮಂದರಧೈರ್ಯ್ಯಂ ಏಕಾಂಗವೀರಂ ಮದನವತಾರಂ ಗುಣಮಣಿ ಭೂಷಣ xxಲಪರೆಘೋಷಣಂ ಚತುಸ್ಯಮುದ್ರ ಪರ್ಯ್ಯಂತ ಕೀರ್ತಿವಿಖ್ಯಾತಂ ಶೋಭನದೀಜಾತಂ ವಿದ್ವಿಷ್ಟಗ xxx ಕಂಠೀರವ[ಂ] ಮಾರ್ಕ್ಕಾಲ ಭೈರವಂ ರಿಪುಮಂಡಳಿಕ ಸರಭಭೇರುಂಡಂ ಜಗದೋರ್ವ್ವಗಂಡನಾಶ್ರಿತಜನ ಚಿಂತಾಮಣಿ ಮಂಡಳಿಕ ಮಕುಟ ಚೂಡಾಮಣಿಯಾಳಿಂ ಮುಂನ್ನಿರೆವ ವೈರಿ ಚತುರಂಗ ಬಲಮನೇಕಾಂಗದೊಳ್ಗೆಲ್ದರಿ ಭೂಪಾಲರ ಶಿರಮಂ ಪರಿದಿಕ್ಕುವ ಶರಣಾಗತ ವಜ್ರ ಪಂಜರಂ ವೈರಿ ದಿಕ್ಕುಂಜರಂ ಶ್ರೀ ಮನ್ಮಹಾಮಂಡಳೇಶ್ವರ ಮಲ್ಲಿರೇವರಸರು'' ಎಂದು ಈತನನ್ನು ಸುದೀರ್ಘವಾಗಿ ವರ್ಣಿಸುತ್ತದೆ.

ಮಹಾಮಂಡಳೇಶ್ವರ -ಮಲ್ಲಿಯಂಣ :

ಚಕ್ರವರ್ತಿ ಮೂರನೆಯ ಸೋಮೇಶ್ವರನ ಮಹಾಮಂಡಳೇಶ್ವರ ಮಲ್ಲಿಯಣನ ಉಲ್ಲೇಖ ಪಟ್ಟಣಚೆರು ಶಾಸನದಲ್ಲಿ[೬೭] ಬರುತ್ತದೆ. ಚೋಯಿಸಿಗನಾದ ನನ್ನೆಯ ಭಟ್ಟನು ಸೋಮೇಶ್ವರನ ವಿಜಯಯಾತ್ರೆಗೆ ಮುಹೂರ್ತ ನಿರ್ಣಯಿಸಿಕೊಡುತ್ತಾನೆ. ಈ ಕಾರಣದಿಂದ ಪಟ್ಟಬಂಧೋತ್ಸವ ಸಮಯದಲ್ಲಿ ಅದನ್ನು ನೆನೆದು ಸೋಮೇಶ್ವರನು ಮಹಾಮಂಡಳೇಶ್ವರ ಕರಿತುರಗ ಪಟ್ಟಸಾಹಿಣಿ ಮಲ್ಲಿಯಣ್ಣ ಹಾಗೂ ಮಹಾಪ್ರಧಾನ ವೆಚ್ಚಪ್ಪಯ್ಯರ ಬಿನ್ನಹದಂತೆ ಪೊಟ್ಟಳಕೆರೆಯ ಚಿನ್ತಾಮಣಿ ಪುರದ ಕೊಳಗದಾಯವನ್ನು ಬಿಟ್ಟುಕೊಡುತ್ತಾನೆ.

ಮಹಾಮಂಡಳೇಶ್ವರ ಎರೆಯಮರಸ :

ಮೂರನೆಯ ಸೋಮೇಶ್ವರನ ಮಹಾಮಂಡಳೇಶ್ವರನಾಗಿ ಎರೆಯಮರಸನು ಎರಡಿರ್ಪಾಸಿರ ಬಾಡವನ್ನು ಆಳುತ್ತಿದ್ದನು.[೬೮] ಈತ ಶ್ರೀ ಮದಗ್ರಹಾರ ನಕರೇಶ್ವರದಲ್ಲಿ ವೆಣ್ಣಮಯ್ಯನಾಯಕ ಕಟ್ಟಿಸಿದ ಕೇಶವ ದೇವಾಲಯದ ಪೂಜೆ, ಪುನಸ್ಕಾರ, ಧೂಪ, ದೀಪ, ನಿವೇದ್ಯಕ್ಕೆ ದಾನಬಿಟ್ಟ ವಿಷಯ ಏರಿಗೆ ಶಾಸನದಲ್ಲಿ[೬೯] ಹೇಳಲಾಗಿದೆ. ಕರಾಡಖೇಡದ ಮತ್ತೊಂದು ಶಾಸನ[೭೦] ಈತನು ಜ್ಞಾನೇಶ್ವರ ಪಂಡಿತರ ಸನ್ನಿಧಾನದಲ್ಲಿ ಸ್ವಯಂಭು ಸೋಮನಾಥ ದೇವರಿಗೆ ಗುಕ್ಕಾವೆ, ಹಿಪ್ಪಳಗಾವೆ ಬೋರಿಗಾವೆಯನ್ನು ಸರ್ವನಮಸ್ಯವಾಗಿ ದಾನಬಿಟ್ಟುದುದನ್ನು ತಿಳಿಸುತ್ತದೆ.

ಮಹಾಮಂಡಳೇಶ್ವರ -ಹೆಮ್ಮಾಡಿಯರಣ :

ಕರಾಡಖೇಡ ಶಾಸನದಲ್ಲಿ[೭೧] ಈತನ ಉಲ್ಲೇಖ ಬರುತ್ತದೆ. ಅದರಲ್ಲಿ ಈತನ ಪ್ರಶಸ್ತಿಯನ್ನು ಹೀಗೆ ಕೊಡಲಾಗಿದೆ. ಪ್ರತಾಪಮಹೇಶ್ವರಂ ಮಚ್ಚರಿಪರಗಂಡಂ, ವೈರಿಭೇರುಂಡಂ, ಸಾಹಸೋತ್ತುಂಗನಘಟಿತ ಬಿರುದ ಮಂಡಳಿಕರ ಗಂಡಂ । ಕಲಿಗೆ ಮಾರ್ತ್ತಂಡನಾಳಿಂ ಮುನ್ನಿರೆವನ್ನೆಯ್ಯನ ಸಿಂಗಂ, ಶ್ರೀಮತ್ತ್ರೈಲೋಕಮಲ್ಲದೇವ ಪಾದಾರಾದ್ಧಕಂ ಪರಬಳಸಾಧಕಂ ಇತ್ಯಾದಿ. ಇವನು ತಮ್ಮ ತಂದೆ ಬೂಚರಸ ಮತ್ತು ತಾಯಿ ಮಾಳಿಯಬ್ಬರನಿಗೆ ಒಳ್ಳೆಯದಾಗಲಿ (ಶ್ರೇಯಸ್ಸಾಗಲೆಂದು) ಕರಡಿಕಲ್ಲ ಸ್ವಯಂಭು ಸೋಮೇಶ್ವರದೇವರ ಮಹಾಘಟಿಕಾಸ್ಥಾನದ ಆಚಾರ್ಯರಾದ ಶ್ರೀ ಜ್ಞಾನೇಶ್ವರ ಪಂಡಿತರ ಕಾಲನ್ನು ತೊಳೆದು ಅವರವಾಡಿ-೭೦೦ರ ಬಳಿಯ ಆಲೂರು, ಗವುಡಗಾವೆ, ಕಾವಳಿಗಾವೆ, ದಯಸವಳಿಗೆ, ಗುಕ್ಕಾವೆ, ಬೋರಿಗಾವೆ, ನೇರಲಿಗೆ, ಹಿಪ್ಪಳಗಾವೆ, ಸಕ್ಕರಿಗೆ-೯೦ರ ಬಳಿಯ ಭಾಯಿಗಾವೆಯ ಆದಾಯದ ಮೇಲಿನ ಸುಂಕವನ್ನು ಸೋಮೇಶ್ವರದೇವರಿಗೆ ಬಿಟ್ಟುಕೊಡುತ್ತಾನೆ.

ಮಹಾಮಂಡಳೇಶ್ವರ-ಪೆರ್ಮಾಡಿದೇವ :

ಅಹಿಹಯ ವಂಶದವನಾದ ಮಾಲಪರೆಘೋಷಣ ಅತ್ಯುಗ್ರನರಶಿರೋದರ್ಪಣ ಧ್ವಜ ವಿರಾಜಮಾನ ಅಣ್ಣಲದೇವನ ಗಂಧವಾರಣ (ಸೇವಕ)ನಾದ ಪೆರ್ಮಾಡಿ ದೇವನು ಅಯ್ಯಣವಾಡಿ ನಾಡನ್ನು ಆಳುತ್ತಿದ್ದಾಗ

ಮುದ್ಗನೂರಿನ ಬಳಿಯ ರಾಕುರ್ಪ್ಪೆ (ರಾಯಕುಂಪಿ)ಯಲ್ಲಿ ಜಯರಾಮ ಎಂಬುವವನು ಮಾಡಿಸಿದ ದೇವಾಲಯದ ಅಂಗಭೋಗ ಖಂಡಸ್ಫುಟಿತ ಜೀರ್ಣೋದ್ಧಾರ ಮುಂತಾದ ಕಾರ್ಯಗಳಿಗಾಗಿ ದೇವಾಲಯದ ಸ್ಥಾನಪತಿಗಳ (ಹೆಸರು ಹಾಳಾಗಿದೆ) ಕಾಲನ್ನು ತೊಳೆದು ಧರಣಿದೇವನ ಕೋಲಿನಲ್ಲಿ ೪೦ ಮತ್ತರು ಹೊಲ, ತೋಟ ಮುಂತಾದವುಗಳನ್ನು ನೀಡಿದನೆಂದು ಉಲ್ಲೇಖಿಸಿದೆ.[೯೨]

ಮಹಾಮಂಡಳೇಶ್ವರ ಮಂಗರಸ :

ನಾರಂಗವಾಡಿ ಶಾಸನದಲ್ಲಿ[೯೩] ಈತನ ಉಲ್ಲೇಖ ಬಂದಿದೆ. ಮಂಗರಸನ ಆಜ್ಞೆಯಂತೆ ಮಹಾಸಾಮಂತ ಬೋಚರಸ ಬೋಗೇಶ್ವರ ದೇವಾಲಯಕ್ಕೆ ದಾನ ನೀಡಿದನು.

ಮಹಾಮಂಡಳೇಶ್ವರ ಬೂಚಿದೇವರಸ :

ಮೂರನೆಯ ಸೋಮೇಶ್ವರನ ಮಹಾಮಂಡಳೇಶ್ವರ ಬೂಚಿದೇವರಸನು ಮುದುಗುಂದದ ರಾಜಧಾನಿಯನ್ನಾಗಿ ಮಾಡಿಕೊಂಡು ಮುದುಗುಂದೂರಿನಿಂದ ಆಳುತ್ತಿದ್ದನು. ಇವನನ್ನು ಕಲ್ಲೂರು ಶಾಸನವು[೯೪] ಮಾಹಿಷ್ಮತೀಪುರವರಾಧೀಶ್ವರ, ಅಹಿಹಯ ವಂಶೋದ್ಭವ, ಅತ್ಯುಗ್ರ ನರಶಿರೋದರ್ಪ್ಪಣ ಧ್ವಜ, ಮಾಲೆಪರೆ ಘೋಷಣ, ಬಂಟರಭಾವ, ಕೇಶವದೇವರ ಪಾದಾಜ್ಜಭೃಂಗ ಮುಂತಾದ ವಿಶೇಷಣಗಳಿಂದ ಹೊಗಳಿದೆ. ಈ ಬೂಚಿದೇವನು ಸರ್ವನಮಸ್ಯದಗ್ರಹಾರ ಕಲ್ಲೂರಿನಲ್ಲಿ ಮಹಾಜನರ ಸನ್ನಿಧಿಯಲ್ಲಿ ಸ್ವಯಂಭು ಮಾರಟೇಶ್ವರ ದೇವರಿಗೆ ವಿಕ್ರಮಾದಿತ್ಯ ಭಟ್ಟಯ್ಯನಿಗೆ ನೀಡಿದ ಹೊಲದಿಂದ ಗಬ್ಬೂರ ದಾರಿಯ ಪಶ್ಚಿಮಕ್ಕೆ ದಶವಂದದ ಭೂಮಿಯಲ್ಲಿ ೧೨ ಮತ್ತರು ಭೂಮಿಯನ್ನು ಹಿರಿಯ ಕೋಲಿನಲ್ಲಿ ಅಳೆದು ನೀಡುತ್ತಾನೆ.

ಮಹಾಮಂಡಳೇಶ್ವರ-ಮಲ್ಲಿದೇವರಸ :

ನಿಂಬರಗಿಯ ಶಾಸನದಲ್ಲಿ[೯೫] 'ಶ್ರೀ ಮನ್ಮ ಮಹಾಮಣ್ಡಳೇಶ್ವರಂ ಮಲ್ಲದೇವರಸರುಂ' ಎಂದಿದೆಯಲ್ಲಿದೆ. ಮಲ್ಲದೇವರಸನು ತಮ್ಮ ಮನ್ನೆಯಯೊಳಗಾಗಿ ತ್ರಿಭೋಗಾಭ್ಯನ್ತರವಾಗಿ ಬಿಟ್ಟ ದಾನಗಳನ್ನು ಹೇಳಿದೆ.

ಮಹಾಮಂಡಳೇಶ್ವರ ಮಾರಸಿಂಹ :

ಭೂಲೋಕಮಲ್ಲನ ಮಹಾಮಂಡಳೇಶ್ವರನಾದ ಮಾರಸಿಂಹನೆಂಬುವವನು ಬೆಳಗಾವಿ ಜಿಲ್ಲಾ ಮುಗುಟಖಾನ ಹುಬ್ಬಳ್ಳಿಯ ನೆರೆಯ ಪ್ರದೇಶವನ್ನು ಆಳುತ್ತಿದ್ದನು.[೯೬]

ಮಹಾಮಂಡಳೇಶ್ವರ ತ್ರೈಳೋಕ್ಯಮಲ್ಲ ಮಲ್ಲಿದೇವ :

ಭೂಲೋಕಮಲ್ಲನ ಮಹಾಮಂಡಳೇಶ್ವರನಾದ ತ್ರೈಳೋಕ್ಯಮಲ್ಲ ಮಲ್ಲಿದೇವನು ''ಮುಳಕಿ ಮುನ್ನೂರನಾಳುತ್ತಿರಲು'' ಎಂದು ಕ್ರಿ.ಶ. ೧೧೩೨ ಚಿರ್ಮಕೂರಲಗ ಶಾಸನ[೯೭] ತಿಳಿಸುತ್ತದೆ. ನಂತರ ಕ್ರಿ.ಶ. ೧೧೩೩ರ

ಪೆದ್ದತುಂಬಳ ಶಾಸನವು[೯೮] ಶ್ರೀ ಮನ್ಮಹಾಮಣ್ಡಳೇಶ್ವರಂ ತ್ರೈಲೋಕ್ಯಮಲ್ಲ ಮಲ್ಲಿದೇವ ಮಹಾರಾಜರು ಸಿನ್ದವಾಡಿ ಸಾ xx ಸುಖದಿನಾಳುತ್ತಿಮಿರೆ ಎಂದಿದೆ. ಕ್ರಿ.ಶ. ೧೧೩೫ರ ಪೆದ್ದಚಪ್ಪಲಿ ಶಾಸನವು[೯೯] ''ಶ್ರೀ ಮನ್ಮಹಾಮಣ್ಡಳೇಶ್ವರಂ ತ್ರೈಲೋಕ್ಯಮಲ್ಲ ಮಲ್ಲಿದೇವ ಮಹಾರಾಜರು ಮುಳ್ಕಿ ಮುಂನೂರರ ರಾಜಧಾನಿ ನೆಲ್ಲೂರ ಪಟ್ಟಣದಲು ಸುಖಸಂಕತಾ ವಿನೋದದಿಂ ರಾಜ್ಯಂಗೆಯುತ್ತಮಿರಲು'' ಎಂದಿದೆ. ಅಂದರೆ ಕ್ರಿ.ಶ. ೧೧೩೨ರಲ್ಲಿ ಮುಳ್ಕಿ-೩೦೦ನ್ನು ಆಳುತ್ತಿದ್ದ ಈತ ಕ್ರಿ.ಶ. ೧೧೩೩ರಲ್ಲಿ ಸಿಂಧವಾಡಿ-೧೦೦೦ ಆಳುತ್ತಿರುತ್ತಾನೆ. ನಂತರ ಮತ್ತೆ ಕ್ರಿ.ಶ. ೧೧೩೩ರಲ್ಲಿ ಮತ್ತೆ ಮುಳ್ಕ-೩೦೦ ಆಳುತ್ತಿದ್ದನೆಂದು ಈ ಶಾಸನಗಳು ತಿಳಿಸುತ್ತವೆ. ಇದರಿಂದ ಚಕ್ರವರ್ತಿಗಳು ಆಡಳಿತದ ಅನುಕೂಲಕ್ಕಾಗಿ ಮಹಾಮಂಡಳೇಶ್ವರರುಗಳನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವರ್ಗಾವಣೆ ಮಾಡುತ್ತಿದ್ದರೆಂದು ಹೇಳಬಹುದು.

ತ್ರೈಲೋಕ್ಯಮಲ್ಲ ಮಲ್ಲಿದೇವನು ಸಿಂಧವಾಡಿ-೧೦೦೦ದ ಮಹಾಮಂಡಳೇಶ್ವರನಾಗಿದ್ದಾಗ ತುಂಬುಳ ಬೀಡಿನ ಪಂಚಲಿಂಗೇಶ್ವರ ದೇವರ ಸೇವೆಗೆ ತಳವೃತ್ತಿಯಾಗಿ ದೇಗುಲದ ಪಶ್ಚಿಮದ ಪುರದಕೇರಿ ೩ ಗಾಣ, ಅಚ್ಚಿನಟಂಕ ಶಾಲೆಯಲ್ಲಿ ದಳಕ್ಕೆ ೨ ವೀಸ ಮೊದಲಾದವುಗಳನ್ನು ದತ್ತಿಯಾಗಿ ನೀಡಿದುದನ್ನು ಪೆದ್ದತುಂಬಳ ಶಾಸನ[೧೦೦] ತಿಳಿಸುತ್ತದೆ ಮತ್ತು ನಿಟ್ಟೂರಿನ ತೇದಿಯಿಲ್ಲದ ಶಾಸನದಲ್ಲಿ[೧೦೧] ಈತನ ಹೆಸರಿನ ಉಲ್ಲೇಖ ಮಾತ್ರ ಕಂಡುಬರುತ್ತದೆ.

ರಾಯ ಸಾಧರ ಪೆರ್ಮಾಡಿದೇವ ಅಥವಾ ಮಹಾಮಂಡಳೇಶ್ವರ ಪೆರ್ಮಾಡಿದೇವ :

ಭೋಲೋಕಮಲ್ಲನ ಸಾಮಂತನಾದ ಅಚುರಸನ ವಗ ರಾಯಸಾಧರ ಪೆರ್ಮಾಡಿ ದೇವನ ಉಲ್ಲೇಖ ಕಲ್ಲೂರ ಶಾಸನ[೧೦೨]ದಲ್ಲಿ ಈ ರೀತಿ ಇದೆ, ''ಮಹಾಮಂಡಳೇಶ್ವರಂ ಆಚರಸನ ಮಗಂ ಸಮಸ್ತ ಪ್ರಶಸ್ತಿ ಸಹಿತಂ ಶ್ರೀಮತುರಾಯಸಾಧರಂ ಪೆರ್ಮ್ಮಡಿದೇವ' ಈತನ ಆಳ್ವಿಕೆಯಲ್ಲಿ ಕುಕ್ಕನೂರು-೩೦ರೊಳಗಿನ ಕಲ್ಲೂರ ಸ್ವಯಂಭು ಕಲಿದೇವರಿಗೆ ಸುಂಕವೆರ್ಗಡೆ ಮಹೇಶ್ವರಯ್ಯ ದಾನ ನೀಡಿದನು.

ಮಹಾಸಾಮಂತಾಧಿಪತಿ-ಮಹಾಪ್ರಚಂಡ ದಂಡನಾಯಕರು :

ಮೂರನೆಯ ಸೋಮೇಶ್ವರನ ಶಾಸನಗಳಲ್ಲಿ ಕಂಡುಬರುವ 'ಮಹಾಸಾಮಂತಾಧಿಪತಿ ಮಹಾಪ್ರಚಂಡನಾಯಕರು' ಚಕ್ರವರ್ತಿಯಿಂದ ನೇಮಿಸಲ್ಪಡುತ್ತಿದ್ದ ಉನ್ನತಾಧಿಕಾರಿಗಳಾಗಿದ್ದು, ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಕೇಂದ್ರವನ್ನು ಪ್ರತಿನಿಧಿಸುತ್ತ ಮುಖ್ಯವಾಗಿ ಕೇಂದ್ರದ ತೆರಿಗೆ, ಸೈನ್ಯ ಮುಂತಾದ ಇಲಾಖೆಗಳನ್ನು ನೋಡಿಕೊಳ್ಳುತ್ತಿದ್ದರು. ಚಕ್ರವರ್ತಿಗೆ ನಿಷ್ಠೆಯಿಂದ ಇದ್ದು ನಿಸ್ವಾರ್ಥದಿಂದ ಸೇವೆ ಸಲ್ಲಿಸುವ ಅಧಿಕಾರಿಗಳಿಗೆ ಬಡತಿ ನೀಡಿ, 'ಮಹಾಸಾಮಂತಾಧಿಪತಿ ಮಹಾಪ್ರಚಂಡ ದಂಡನಾಯಕ'ರನ್ನಾಗಿ ನೇಮಿಸಲಾಗುತ್ತಿತ್ತು. ಇದರಿಂದ ದಕ್ಷ ಅಧಿಕಾರಿಗಳಿಗೆ ಹೆಚ್ಚಿನ ಪ್ರೋತ್ಸಾಹ ಸಿಗುತ್ತಿತ್ತು. ಅಲ್ಲದೆ ಚಕ್ರವರ್ತಿಯು ಇವರನ್ನು ಒಂದು ಇಲಾಖೆಯಿಂದ

ಮತ್ತೊಂದು ಇಲಾಖೆಗೆ ಬಡತಿ ಕೊಟ್ಟೋ, ಕೊಡದೆಯೋ ವರ್ಗಾವಣೆಯನ್ನು ಸಹ ಮಾಡುತ್ತಿದ್ದರು ಮತ್ತು ಈ ಎಲ್ಲ ಮಹಾಸಾಮಂತಾಧಿಪತಿ ಮಹಾಪ್ರಚಂಡ ದಂಡನಾಯಕರು ಸಾಮ್ರಾಜ್ಯದ ರಾಜಧಾನಿಯಲ್ಲಿ ಇರುತ್ತಿರಲಿಲ್ಲ. ಬಹಳಷ್ಟು ಜನ ಕೇಂದ್ರದ ಪ್ರತಿನಿಧಿಗಳಾಗಿ ಸಾಮ್ರಾಜ್ಯದ ಬೇರೆ ಬೇರೆ ಭಾಗಗಳಲ್ಲಿದ್ದು ತಮ್ಮ ಇಲಾಖೆಯ ಕೆಲಸವನ್ನು ನಿರ್ವಹಿಸುತ್ತಿದ್ದರೆಂದು ಶಾಸನಗಳಿಂದ ತಿಳಿದುಬರುತ್ತದೆ. ಸುಂಕದಧಿಕಾರಿಗಳು ಸಾಮ್ರಾಜ್ಯದ ವಿವಿಧೆಡೆ ನಿಂತು ಸುಂಕ ಸಂಗ್ರಹಿಸುತ್ತಿದ್ದರೆ ರಕ್ಷಣಾ ಮತ್ತು ವಿದೇಶಾಂಗ ಇಲಾಖೆಯ ಕೆಲವು ಅಧಿಕಾರಿಗಳು ಚಕ್ರವರ್ತಿಯೊಂದಿಗೆ ರಾಜಧಾನಿಯಲ್ಲಿದ್ದರೆ ಮತ್ತೆ ಕೆಲವರು ಸಾಮ್ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಇರುತ್ತಿದ್ದರು ಎಂದು ತಿಳಿದುಬರುತ್ತದೆ.

ಸಾಮ್ರಾಜ್ಯದ ಆಡಳಿತ ಸುಗಮವಾಗಿ ನಡೆಯಲು ಈಗಿನಂತೆ ಆ ಕಾಲದಲ್ಲಿಯೂ ವಿವಿಧ ಇಲಾಖೆಗಳಿದ್ದವು. ಅವುಗಳನ್ನು ಹೀಗೆ ಹೆಸರಿಸಬಹುದು. ಸುಂಕದ ಇಲಾಖೆ, ದಾಖಲು ಪತ್ರಗಳ ಇಲಾಖೆ, ರಕ್ಷಣಾ ಇಲಾಖೆ, ವಿದೇಶಾಂಗ ಇಲಾಖೆ ಇದ್ದವೆಂದು ಮೂರನೆಯ ಸೋಮೇಶ್ವನ ಮಾನಸೋಲ್ಲಾಸದ ದ್ವಿತೀಯ ವಿಶಂತಿಯಲ್ಲಿ ಉಲ್ಲೇಖಿಸಲಾಗಿದೆ. ಮುಂತಾದವು ಇವುಗಳನ್ನು ನೋಡಿಕೊಳ್ಳಲು ಚಕ್ರವರ್ತಿ ಇಂತಹ ಮಹಾಸಾಮಂತಾಧಿಪತಿ ಮಹಾಪ್ರಚಂಡ ದಂಡನಾಯಕರನ್ನು ನೇಮಿಸುತ್ತಿದ್ದರೆಂದು ಗೊತ್ತಾಗುತ್ತದೆ.

ರಕ್ಷಣಾ ಇಲಾಖೆ :

ಮಹಾಸಾಮಂತಾಧಿಪತಿ ಮಹಾಪ್ರಚಂಡ ದಂಡನಾಯಕ ಸ್ವಾಮಿ ದಂಡಾಧೀಶ :

ಗುಡೂರು[೧೦೩] ಶಾಸನೋಕ್ತ ಈತನು ಚಕ್ರವರ್ತಿ ಆರನೆಯ ವಿಕ್ರಮಾದಿತ್ಯನ ಪುತ್ರನಾದ ಸೋಮೇಶ್ವರನ ಪಾದಪದ್ಮೋಪಜೀವಿಯಾಗಿದ್ದನು. ಇವನು 'ಮದವದ್ವಿಷ್ಟ ಸೈನ್ಯ ಪ್ರಬಳ ವಿಪಿನದಾವಾಳನಂ' ಎನಿಸಿದ್ದನು. ಈತನು ಕೊಳ್ಳಪಾಕೆ-೨೦೦೦ಕ್ಕೆ ದಂಡನಾಯಕನಾಗಿದ್ದನೆಂದು ತಿಳಿದುಬರುತ್ತದೆ. ಈತನ ಬಿನ್ನಹದ ಮೇರೆಗೆ ಮೂರನೆಯ ಸೋಮೇಶ್ವರನು ಗುಡೂರಿನ ಮಲ್ಲೇಶ್ವರದೇವರಿಗೆ ವೇಳ್ಪುಗೊಂಡೆ ೨೪ರಲ್ಲಿದ್ದ ಬಮ್ಮರಿಗೆಯನ್ನು ದಾನಕೊಟ್ಟ ಉಲ್ಲೇಖವಿದೆ. ಕೋನುಪಾಕ ಶಾಸನವು[೧೦೪] ಈತನು ಕುಮಾರ ಸೋಮೇಶ್ವರನಿಗೆ ಮಹಾಪ್ರಧಾನ ಮನೆವರ್ಗ್ಗಡೆಯಾಗಿದ್ದನೆಂದು ತಿಳಿಸುತ್ತದೆ. ಕೊಳ್ಳಪಾಕೆ-೨೦೦೦ದ ದಂಡನಾಯಕನಾದ ಈತನ ಬಿನ್ನಹದ ಮೇರೆಗೆ ಕುಮಾರ ಸೋಮೇಶ್ವರನು ನಿಜರಾಜಧಾನಿಯಾಗಿದ್ದ ಕೊಳ್ಳಪಾಕೆಯ 'ಚಾಳುಕ್ಯಕುಳತಿಳಕ ಮೆನಿಸಿದಂಭರ ತಿಳಕ ದಂಬಿಕಾದೇವಿ'ಯ ಅಂಗಭೋಗ ರಂಗಭೋಗಗಳಿಗೆ ಪಾಳಲಬಳಿಯ 'ಪಾನುಪುರ'ವನ್ನು ದಾನ ನೀಡಿದ ಉಲ್ಲೇಖವಿದೆ.

ಮಹಾಸಾಮಂತಾಧಿಪತಿ ಮಹಾಪ್ರಚಂಡ ದಂಡನಾಯಕನಾಗಿದ್ದ ಇವನು ಸೈನ್ಯಕ್ಕೆ ಸಂಬಂಧಪಟ್ಟ ಅಧಿಕಾರಿಯಾಗಿದ್ದಾನೆ. ಇವನನ್ನು 'ಚಮೂಪ'ನೆಂದು ಕರೆಯಲಾಗಿದೆ. ಈತನು ಮೂರನೇ ಸೋಮೇಶ್ವರನೊಡನೆ

ಕಳಿಂಗದೇಶಕ್ಕೆ ನುಗ್ಗಿ ಅಲ್ಲಿಯ ಅರಸನನ್ನು ಗೆದ್ದಿದ್ದಾನೆ. ಶಾಸನದಲ್ಲಿ ಕಳಿಂಗಾವನಿಪಾಳನನ್ನು ಸಮರದಲ್ಲಿ 'ಬೆಂಕೊಣ್ಡು ತದ್ದೇಶವನ್ನು ಪ್ರಕಟಾಟೋಪದೆಸೂರೆಗೊಂಡು ತಮುಗ್ರೇ ಭಂಗಳಂ ಮುತ್ತಿಕೊಣ್ಡ ಕುಮಾರಾಗ್ರಣಿ ಗೆದ್ದು ಚಕ್ರತನಯಂ ಸೋಮೇಶ್ವರ'ನು ಈ ಶಾಸನವಿದ್ದ ಜಯಸ್ತಂಭವನ್ನು ಇರಿಸಿದ ಉಲ್ಲೇಖವಿದೆ.

ದಾಖಲುಪತ್ರ ಇಲಾಖೆ :

ಮಹಾಸಾಮಂತಾಧಿಪತಿ ಮಹಾಪ್ರಚಂಡ ದಂಡನಾಯಕ ಕಾಳಿಮರಸ :

ಕಾಳಿಮರಸನು ಮೂರನೆಯ ಸೋಮೇಶ್ವರನ ನಿಷ್ಠಾವಂತ ಅಧಿಕಾರಿಯಾಗಿದ್ದು ಹಂತಹಂತವಾಗಿ ಮೇಲೇರಿದುದು ಶಾಸನಗಳಿಂದ ತಿಳಿದುಬರುತ್ತದೆ. ಬಿಜಾಪುರ ಶಾಸನದಲ್ಲಿ[೧೦೫] 'ಸಿಂದಿಗೆ ಹಂನೆರಡುಂ ಕುಂಮಸೆಮೂ(ವ)ತ್ತು ಅಂಕುಲಗೆ ಅಯಿವತ್ತರಮಂನೆಯ ಕಾಳಮರಸನುಂ' ಎಂದು ಬರುತ್ತದೆ. ನಂತರ ಇವನು ಮಹಾಪ್ರಧಾನ ಹಿರಿಯ ದಂಡನಾಯಕನಾಗಿ ಕಾರ್ಯನಿರ್ವಹಿಸಿತ್ತಿದ್ದನೆಂದು ಈತನ ಬಿನ್ನಹದ ಮೇರೆಗೆ ಭೂಲೋಕಮಲ್ಲ ಮತ್ತು ಪಟ್ಟಮಹಾದೇವಿಯರು ಪರಮೇಶ್ವರ ದತ್ತಿಯಾಗಿ ಸರ್ವನಮಸ್ಯಮಾಡಿ ಹಳ್ಳಿಯ ಮೇಲಾಳ್ಕೆಯನ್ನು ಬಿಟ್ಟರೆಂದು ನಿಂಬರಗಿ ಶಾಸನ[೧೦೬] ತಿಳಿಸುತ್ತದೆ. ಸಿರಿವಾಳ ಶಾಸನವು[೧೦೭] ಈತ ಮಹಾ ಸಾಮಂತನಾಗಿದ್ದನೆಂದು ತಿಳಿಸುತ್ತದೆ. ಇದರಲ್ಲಿ ಈತನ ಉಲ್ಲೇಖ ಈ ರೀತಿ ಬರುತ್ತದೆ. 'ತತ್ಪಾದ ಪದ್ಮೋಪಜೀವಿ ಸಮಧಿಗತ ಪಂಚಮಹಾಶಬ್ದ ಮಹಾಸಾಮನ್ತಾಧಿಪತಿ ಮಹಾಪ್ರಧಾನಂ ಸೇನಾಧಿಪತಿ ಕಡಿತವೆರ್ಗ್ಗಡೆ ಕನ್ನಡ ಸನ್ಧಿವಿಗ್ರಹಿ ಹಿರಿಯದಣ್ಡನಾಯಕಂ ಕಾಳಿಮರಸು' ಎಂದಿದೆ.

ಕಾಳಿಮರಸನಿಗೆ ಕಾಳಿದಾಸ ಎಂಬ ಮತ್ತೊಂದು ಹೆಸರು ಇತ್ತೆಂದು ನರಗುಂದ ಶಾಸನ[೧೦೮] ತಿಳಿಸುತ್ತದೆಯಲ್ಲದೆ ಈತ 'ಚೋಳನಂ ಕೇರಳನಂಪಾಂಚಾಳನಂ ಗೂರ್ಜ್ಜರನನಧಿಕ ನೇಪಾಳನ ಗೊಲ್ಲಿನ ಸಿಂಹಳನ ಕಾಶ್ಮೀರನಂ ಮಾಗಧನನು ರದೆ ವಿಕ್ರಾಂನ್ತದಿಂದೊತ್ತಿ ಕಪ್ಪಂಗೊಳಲೆಂದಿಂತಿರ್ಪ್ಪ ಸೇನಾಧಿಪನಖಿಳ ಗುಣಾವಾಸನೀ ಕಾಳಿದಾಸ ॥ ಇನ್ತೆನಿಸಿದ ಮಹಾಪ್ರಚಂಡ ದಂಡನಾಯಕಂ ಕಾಳಿಮರಸ' ಎಂದು ಹೊಗಳಲಾಗಿದೆ. ಈ ಎಲ್ಲ ಪ್ರಶಸ್ತಿಗಳಿಂದ ಈತ ಚೋಳ, ಕೇರಳ ಪಾಂಚಾಳರನ್ನು ಹಿಡಿತದಲ್ಲಿಟ್ಟುಕೊಂಡಿದ್ದನೆಂದು ಹೇಳಬಹುದು. ಸೇಡಂ ಶಾಸನವೂ[೧೦೯] ಕೂಡ 'ದಂಡಾಧೀಶ ಶಿಖಾಮಣಿ ದಂಡಿತ ವಿದ್ವಿಷ್ಟ ದಂಡನಾಯಕನಿಕರಂ ಚಂಡಭುಜಂ ನೆಗಳ್ದ ಭೂಮಂಡಳ ದೋಳ್ಕಾಳಿದಾಸ ದಂಡಾಧೀಶಂ' ಎಂದು ಆತನ ಶೌರ್ಯಗುಣವನ್ನು ಹೊಗಳಿದೆ. ಈತನ ಮಗನಾದ ದಂಡನಾಯಕ ಮಹದೇವರಸನು ಬೆಳ್ವಲ-೩೦೦ ಹುಲಿಗೆರೆ-೩೦೦ನ್ನು ಆಳುತ್ತಿದ್ದನೆಂದು ನರಗುಂದ[೧೧೦] ಶಾಸನ ತಿಳಿಸುತ್ತದೆ ಹೀಗೆ ತಂದೆ ಮಕ್ಕಳಿಬ್ಬರೂ ಮೂರನೆಯ ಸೋಮೇಶ್ವರನ ಕಾಲದಲ್ಲಿ ಸೇವೆಸಲ್ಲಿಸುತ್ತಿದ್ದರು.

ಮಹಾಸಾಮಂತಾಧಿಪತಿ ಮಹಾಪ್ರಧಾನ ದಂಡನಾಯಕ ಭೋಗಭಟ್ಟಯ್ಯ :

ರಾಗಿ ಮುಸಲವಾಡ[೧೧೧] ಶಾಸನೋಕ್ತ ಇವನು ಮೂರನೆಯ ಸೋಮೇಶ್ವರನು 'ಶ್ರೀ ಮನ್ಮಹಾಪ್ರಧಾನಂ ಸಾವಾಸಿಗಳಧಿಷ್ಠಾಯಕಂ ಕನ್ನಡ ಸ(ಂ)ಧ್ಧಿವಿಗ್ರಹಿ ಸೇನಾಧಿಪತೆ ಮನವೆರ್ಗ್ಗಡೆ ದಂಡನಾಯಕ'ನಾಗಿದ್ದನೆಂದು ತಿಳಿದು

ಬರುತ್ತದೆ. ಈ ಭೋಗಭಟ್ಟಯ್ಯನು ಸಾವಾಸಿಗಳ ನಾಯಕನಾಗಿ ಎರಡು ಆರುನೂರು ಮತ್ತು ಬನವಾಸಿ-೧೨೦೦೦ ನಾಡಿನ ಏಳೂವರೆಲಕ್ಷ ವಡ್ಡರಾವುಳದ ಸುಂಕವನ್ನು ಪಡೆದು ಆಳುತ್ತಿರುತ್ತಾನೆ.

ವಿದೇಶಾಂಗ ಇಲಾಖೆ :

ಮಹಾಸಾಮಂತಾಧಿಪತಿ ಮಹಾಪ್ರಚಂಡ ದಂಡನಾಯಕ ಕೇಶಿರಾಜ :

ಕೇಶಿರಾಜನು ವಾಜಿವಂಶದ ಮಹಾಸಾಮಂತಾಧಿಪತಿ ಮಹಾಪ್ರಚಂಡ ದಂಡನಾಯಕ ನಿಂಬಣ್ಣಯ್ಯನ ಮಗ ತಂದೆಯಂತೆ ಈತನೂ ಮಹಾಸಾಮಂತಾಧಿಪತಿ ಮಹಾಪ್ರಚಂಡ ದಂಡನಾಯಕ ಶ್ರೇಣಿಯ ಅಧಿಕಾರಿಯಾಗಿದ್ದು ಶಾಸನದಲ್ಲಿ[೧೧೨] ಈತನ ಪ್ರಶಸ್ತಿಯನ್ನು ಹೀಗೆ ಕೊಡಲಾಗಿದೆ. 'ದುಷ್ಟವಿದ್ವಿಷ್ಟ ವಿಧೇಯಕ, ವಾಜಿಕುಳಾರ್ಣ್ಣವ ಪಾರಿಜಾತ, ಸುಕವಿಶುಕ ಚೂತಬನ್ದುವನವಸನ್ತ, ವಚಶ್ರೀವಧೂಕಾನ್ತ, ಸಾಹಿತ್ಯಸರೋರುಹ ಮಧುಬ್ರತ, ಸತ್ಯಸತ್ಯಬ್ರತ, ಹರಚರಣರಣರಜೋರಂಜಿತೋತ್ತಮಾಂಗನದಾನಂ' ಇತ್ಯಾದಿ ಇವನು 'ಶ್ರೀ ಮನ್ಮಹಾಪ್ರಧಾನ ಹೇರಿಲಾಳಸನ್ಧಿವಿಗ್ರಹಿ ದಣ್ಡನಾಯಕ ಕೇಶಿರಾಜರಸರು' ಎಂದು ಕರೆಯಲಾಗಿರುವುದರಿಂದ ಈತನು ವಿದೇಶಾಂಗ ಇಲಾಖೆಗೆ ಸಂಬಂಧಿಸಿದ್ದಾನೆ. ಕೊಂಡಗುಳಿಯಲ್ಲಿ ಸೋಮೇಶ್ವರ ದೇವಾಲಯವನ್ನು ನಿರ್ಮಿಸಿ ತನ್ನ ಪ್ರಭುತ್ವದ ಭೂಮಿಯನ್ನು ದಾನ ಬಿಡುತ್ತಾನೆ.

ಮೂರನೆಯ ಸೋಮೇಶ್ವರನ ಅವಧಿಯಲ್ಲಿಯೂ ಕೇಶಿರಾಜನ[೧೧೩] ಉಲ್ಲೇಖಬರುತ್ತದೆ. ಈಗ ಇವನಿಗೆ 'ಮಹಾಸಾಮಂತಾಧಿಪತಿ ಮಹಾಪ್ರಚಂಡ ದಂಡನಾಯಕ' ಎಂಬ ಹುದ್ದೆಯನ್ನು ನಿರ್ದೇಶಿಸುವ ಪದವನ್ನು ಬಳಸಿಲ್ಲ. ಬಹುಶಃ ಈ ವೇಳೆಗೆ ಇವನು ನಿವೃತ್ತಿ ಹೊಂದಿರಬಹುದು. ಸೋಮೇಶ್ವರನ ಕ್ರಿ.ಶ. ೧೧೩೨ರ ಶಾಸನದಲ್ಲಿ ಈತನ ಉಲ್ಲೇಖ ಬರುವುದರಿಂದ ಇವನು ಈ ಸುಮಾರಿನವರೆಗೂ ಬದುಕಿದ್ದನೆಂದು ಸ್ಪಷ್ಟವಾಗುತ್ತದೆ.

ಸುಂಕದ ಇಲಾಖೆ :

ಮಹಾಸಾಮಂತಾಧಿಪತಿ ಮಹಾಪ್ರಚಂಡ ದಂಡನಾಯಕ ಅನಂತಪಾಳಯ್ಯ :

ಚಾಲುಕ್ಯರ ಇತಿಹಾಸದಲ್ಲಿ ದೀರ್ಘಾವಧಿಯವರೆಗೆ ಉನ್ನತಾಧಿಕಾರಿಯಾಗಿ ಬಾಳಿದ ವ್ಯಕ್ತಿಯೆಂದರೆ ಅನಂತಪಾಳಯ್ಯ. ಈತ ಆರನೆಯ ವಿಕ್ರಮಾದಿತ್ಯನ ಕಾಲದಿಂದಲೇ ಹಂತ ಹಂತವಾಗಿ ಮೇಲೇರಿದುದು ಕಂಡು ಬರುತ್ತದೆ.[೧೧೪] ಸಿಂಧವಾಳ ಶಾಸನದಲ್ಲಿ[೧೧೫] ''ಸಮಧಿಗತ ಪಂಚಮಹಾಶಬ್ದ ಮಹಾಸಾಮಂತಾಧಿಪತಿ ಮಹಾಪ್ರಚಂಡ ದಂಡನಾಯಕಂ ವಿಬುಧವರದಾಯಕಂ ಸುಜನಪ್ರಸಂನಂ ನುಡಿದು ಮತ್ತೆಂನಂ ಗೋತ್ರಪವಿತ್ರಂ ಪರಾಂಗನಾಪುತ್ರಂ ತುರಯರೇವನ್ತಂ ವೈರಿಕ್ರಿತಾಂತಂ ಸಹಾಸೋತ್ತುಂಗನಯ್ಯನ ಸಿಂಗ ನಾಮಾದಿ ಸಮಸ್ತ ಪ್ರಶಸ್ತಿ ಸಹಿತಂ ಶ್ರೀ ಮನು ಮಹಾಪ್ರಧಾನಂ ಭಾಣಸುವರ್ಗ್ಗಡೆ, ಮನೆವೆರ್ಗ್ಗಡೆ, ಸೇನಾಧಪತಿ ದಂಡನಾಯಕನನನ್ತನಪಾಲಯ್ಯಂಗರು'' ಎಂದು

ಇವನ ಪ್ರಶಸ್ತಿ, ಅಧಿಕಾರಗಳನ್ನು ತಿಳಿಸಿದೆಯಲ್ಲದೆ ಈತ ಸೋಮೇಶ್ವರ ದೇವರಿಗೆ ಭೂಮಿಯನ್ನು ದಾನವಾಗಿ ನೀಡಿದುದನ್ನು ಸಹ ಉಲ್ಲೇಖಿಸಿದೆ.

ಮಹಾಸಾಮಂತಾಧಿಪತಿ ಮಹಾಪ್ರಚಂಡ ದಂಡನಾಯಕ ಯಿನ್ದರಾಣಿ ಭಟ್ಟಯ್ಯ :

ರಾಗಿಮುಸಲವಾಡ[೧೧೬] ಶಾಸನೋಕ್ತ ಈತನು ಮೂರನೆಯ ಸೋಮೇಶ್ವರನ ಪಾದಪದ್ಮೋಪಜೀವಿಯಾಗಿದ್ದಾನೆ. ಈತನ ಪ್ರಶಸ್ತಿಯನ್ನು ಶಾಸನದಲ್ಲಿ 'ಆಸ್ಥಾನವಸ್ತುನಾಯಕಂ ಭವಾನೀವಲ್ಲಭ ಚರಣ ಸರಸೀರುಹಷಟ್ಪರಣಂ, ಕಾಶ್ಮೀರ ವಿಷಯಾಂಭೋಜಿನೀ ಸಹಸ್ರಕಿರಣಂ ಸಾರದಾದೇವಿ ಲಬ್ದವರಪ್ರಸಾದಂ ಚಂಪಕಾಮೋದಂ ವಿವೇಕವಿದ್ಯಾಧರಂ ಸಕಳಕಳಾಧರಂ ಸಹವಾಸಿಜನನಿಚಯ ಶುಕರ ಸಫಳಸಹಕಾರಂ ಸಮಸ್ತಗುಣ ಗಣಾಳಂಕಾರಂ' ಎಂದು ಹೇಳಲಾಗಿದೆ. ಈತನು ''ನೊಳಂಬವಾಡಿ ಮೂವತ್ತಿರ್ಚ್ಛಾಸಿರದ ವಡ್ಡರಾವುಳದ ಕೀಳ್ಬಟ್ಟೆಯಚ್ಚುಪನ್ನಾಯದ ದಂಡನಾಯಕ''ನಾಗಿದ್ದನೆಂದು ತಿಳಿಸುತ್ತದೆ.

ಮಹಾಸಾಮಂತರು :

ಮೂರನೆಯ ಸೋಮೇಶ್ವರನ ಶಾಸನಗಳಲ್ಲಿ ಅನೇಕ ಮಹಾಸಾಮಂತರ ಉಲ್ಲೇಖ ಬರುತ್ತದೆ. 'ಸಾಮಂತ' ಎಂಬ ಪದಕ್ಕೆ ಕನ್ನಡ ಸಾಹಿತ್ಯ ಪರಿಷತ್ತಿನ ಸಂಕ್ಷಿಪ್ತ ನಿಘಂಟುವಿನಲ್ಲಿ[೧೧೭] ಒಬ್ಬ ರಾಜನಿಗೆ ಅಧೀನವಾಗಿರುವ ರಾಜ. ಮಾಂಡಲಿಕ ಎಂದು ಅರ್ಥ ಕೊಟ್ಟಿರುತ್ತಾರೆ. ಇದು ಸರಳ, ಸಾಮಾನ್ಯ ಅರ್ಥ. 'ಮಹಾಸಾಮಂತ' ಎಂಬುದರಲ್ಲಿ ಎರಡು ಪದಗಳಿವೆ. 'ಮಹಾ' ಮತ್ತು 'ಸಾಮಂತ' 'ಸಾಮಂತ' ಎಂಬುದು ಸ್ವಾಮ್ಯವಂತ (ಒಡೆಯ, ಒಡೆತನ ಪಡೆದವ) > ಸಾಮಂತ > ಸಾವಂತ ಎಂಬ ರೂಪಾಂತ ಹೊಂದುತ್ತ ಬಂದಿದೆ. ಇದಕ್ಕೆ ಕೇವಲ ಗೌರವ ಸೂಚಿಯಾಗಿ 'ಮಹಾ' ಎಂಬ ವಿಶೇಷಣ ಸೇರಿ ಮಹಾಸಾಮಂತ ಎಂಬ ಪದವಾಗಿದೆ.[೧೧೮] ಅಂದರೆ ಇಲ್ಲಿ ಸಾಮಂತ ಎಂದರೂ ಒಂದೇ, ಮಹಾಸಾಮಂತ ಎಂದರೂ ಒಂದೇ ಇದು ಹುದ್ದೆಯನ್ನು ಸೂಚಿಸುವ ಪದವಾಗಿದೆ ಎನ್ನಬಹುದು.

ಮಹಾಸಾಮಂತ ಬಮ್ಮರಸ :

ಚಿಕ್ಕಂಬಾ ಕುಲದ ಬಮ್ಮರಸನು ಸತ್ತಳಿಗೆ-೭೦ನ್ನು ಮನ್ನೆಯದ ಅಧಿಕಾರದಿಂದ ಆಳುತ್ತಿದ್ದನೆಂದು ಅಸುಂಡಿ ಶಾಸನ[೧೧೯] ತಿಳಿಸುತ್ತದೆ. ಶಾಸನದಲ್ಲಿ 'ವೀರಲಕ್ಷ್ಮೀಕಾನ್ತನುತ್ತರ ಮಧುರಾಧೀಶ್ವರ ವೀರಮಹೇಶ್ವರ ಶರಣಾಗತ ವಜ್ರಪಂಜರ ರಿಪುಕುಂಜಕುಂಜರ ಚತುರಚತುರ್ಮ್ಮುಖ ಸಂಗ್ರಾಮ ಷಣ್ಮುಖ (ಬಿರುದ) ಮಾರ್ಕೋಲ ಭೈರವ ಸಮರ ಕಣ್ಠೀರವ ಗಂಡರೊದ್ದಳಿವಂ ಮಾXXX ತುಳಿದಂ ಸಹಸ ಪ್ರಚಣ್ಣಂ ಸಾಹಸ ಮುರಾರಿ' ಮೊದಲಾದ ಪ್ರಶಸ್ತಿಗಳನ್ನು ಹೊಂದಿದ್ದನೆಂದು ತಿಳಿಸುತ್ತದೆ.

ಮಹಾಸಾಮಂತ ಬೋಚರಸ :

ಸೋಮೇಶ್ವರನ ಅಧಿಕಾರಿ ಬೋಚರಸನ ಉಲ್ಲೇಖ ನಾರಂಗವಾಡಿ ಶಾಸನದಲ್ಲಿ[೧೨೦] ಬಂದಿದೆ. ಈತ ಮೊರಂಬ-೮೦ರ ಅಧಿಕಾರಿಯಾಗಿದ್ದು, ಮಹಾಮಂಡಳೇಶ್ವರ ಮಂಗರಸನ ಆಜ್ಞೆಯಂತೆ ಬೋಚರಸ ಭೋಗೇಶ್ವರ ದೇವರ ರಂಗಭೋಗ, ಧೂಪ, ದೀಪ, ನೈವೇದ್ಯ ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆ, ನವಕರ್ಮವಿನಿತಕ್ಕೆ ಗದ್ದೆ, ತೋಟವನ್ನು ದಾನಬಿಟ್ಟನು. ಅಲ್ಲದೆ ಈತನ ಪತ್ನಿ ಮಾಚಿಯಬ್ಬರಸಿ ಹಾಗೂ ಮಗ ಯಶರ್ಮಲ್ಲಿದೇವನ ಉಲ್ಲೇಖವು ಸಹ ಇದೆ.

ಮಹಾಸಾಮಂತ ಕುರುವರಸ :

ಈತನ ಉಲ್ಲೇಖ ಸನಿಗರಂ[೧೨೧] ಶಾಸನದಲ್ಲಿ ಬರುತ್ತದೆ. ಮಹಾಮಂಡಳೇಶ್ವರ ಕಾಕತೀಯ ಎರಡನೆಯ ಪೋಳರಸನ ಪಾದಪದ್ಮೋಪಜೀವಿಯಾಗಿದ್ದ ಈತನನ್ನು ಶಾಸನದಲ್ಲಿ 'ಸಬ್ಬಿ ಸಹಸ್ರಮುಂ ಸವದೊರ ರೇಪೋಲ ಕುರುವರಾಜು' ಎಂದು ಕರೆಯಲಾಗಿದೆ. ಇದರಿಂದ ಈತನು ಸಬ್ಬಿ-೧೦೦೦ವನ್ನು ಆಳುತ್ತಿದ್ದನೆಂದು ಗೊತ್ತಾಗುತ್ತದೆ.

ಮಹಾಸಾಮಂತ ನಿಂಬದೇವ :

ಮಹಾಮಂಡಳೇಶ್ವರ ಗಂಡರಾಧಿತ್ಯನ ಅಧಿಕಾರಿ ಮಹಾಸಾಮಂತ ನಿಂಬದೇವನ ಉಲ್ಲೇಖ ಅರೆ ಶಾಸನದಲ್ಲಿ[೧೨೨] ಬಂದಿದೆ. ಶಾಸನದಲ್ಲಿ ''ರಿಪುಸಾಮಂತ ಸಿಮಂತಿನಿಸೀಮಂತಭಂಗಂ, ವೀರವಾರಾಂಗನಾ ಪ್ರಿಯಭುಜಗಂ ವೈರಿಸಾಮಂತ ಮೇಘ ವಿಘಟನ ಸಮೀಕರಣಂ ನಾಗಲದೇವಿಯ ಗಂಧವಾರಣಂ, ವಿದ್ವಿಷ್ಟಸಾಮಂತ ವಿಳಯಕಾಳಂ ಸಾಮಂತ ಗಂಡಗೋಪಾಳಂ ದಾಯದ ಸಾಮಂತ ತಾರಾಸುರ ವೀರಕುಮಾರಂ ಸಾಮಂತ ಕೇದಾರಂ'' ಎಂದು ಇವನ ಪ್ರಶಸ್ತಿಗಳನ್ನು ಹೇಳಿದೆ. ನಿಂಬದೇವನು ಕವಡೆಳ್ಳಗೊದ ಬಳಿಯ ಸಂತೆಯ ಮುದ್ಗೋಡೆಯಲ್ಲಿ ಕಟ್ಟಿಸಿದ ಪಾರ್ಶ್ವನಾಥ ಬಸದಿಗೆ ದಾನ ನೀಡಿದ ವಿವರವೂ ಇದೆ.

ಮಹಾಸಾಮಂತ ಹಂಡೆಯ ನಾಯಕ :

ಕ್ರಿ.ಶ. ೧೧೨೯ರ ಮುದನೂರ ಶಾಸನದಲ್ಲಿ[೧೨೩] ಇನ್ನಿತರ ಅಧಿಕಾರಿಗಳ ಜೊತೆ ಸುಂಕಗಳನ್ನು ದತ್ತಿಯಾಗಿ ಬಿಡುವಾಗ ಈತನ ನಾಮಮಾತ್ರದ ಉಲ್ಲೇಖವಿದೆ.

ಗಾವುಂಡರು :

ಗ್ರಾಮದಲ್ಲಿ ಆಡಳಿತವನ್ನು ನೋಡಿಕೊಳ್ಳುವವನು ಗಾವುಂಡ. ಇಂದಿನ ಗೌಡರೇ ಹಿಂದೆ ಗಾವುಂಡರೆನಿಸಿದ್ದರು. ಕೆಲವು ಗ್ರಾಮಗಳಲ್ಲಿ ಒಬ್ಬ ಮತ್ತೆ ಕೆಲವು ಗ್ರಾಮಗಳಲ್ಲಿ ಹಲವು ಜನ ಗಾವುಂಡರು ಇರುತ್ತಿದ್ದುದನ್ನು ಡಾ. ಎಂ.

ಚಿದಾನಂದಮೂರ್ತಿಯವರು[೧೨೪] ಗುರುತಿಸಿದ್ದಾರೆ. ಹಲವು ಜನ ಗಾವುಂಡರು ಬಹುಶಃ ಮೂಲತಃ ಒಂದೇ ವಂಶಕ್ಕೆ ಸಂಬಂಧಿಸಿದ್ದು ಸೋದರ ಸಂಬಂಧಿಗಳಾಗಿರಬೇಕು. ಒಂದು ಊರಿನಲ್ಲಿ ಅನೇಕ ಗಾವುಂಡರಿದ್ದರೂ ಅವರೆಲ್ಲರ ಮೇಲೆ ಒಬ್ಬನೇ ಗಾವುಂಡನಿರುತ್ತಿದ್ದನು. ಎಲ್ಲ ಅಧಿಕಾರ ಅವನ ಕೈಯಲ್ಲಿ ಇರುತ್ತಿತ್ತು.

ಗಾವುಂಡರ ಕರ್ತವ್ಯ :

ಗ್ರಾಮದ ಒಡೆಯರಾದ ಗಾವುಂಡರ ಕರ್ತವ್ಯ, ಹೊಣೆಗಾರಿಕೆ ಹೆಚ್ಚಿದನಾಗಿದೆ. ಗ್ರಾಮದ ಆಡಳಿತವನ್ನು ನೋಡಿಕೊಂಡು ಹೋಗುವುದರ ಜೊತೆಗೆ ಗ್ರಾಮ ರಕ್ಷಣೆ ಮಾಡುವುದು ಇವರ ಪ್ರಮುಖ ಕೆಲಸವಾಗಿತ್ತು. ಸುಂಕ ಸಂಗ್ರಹಣೆಯ ಕೆಲಸವೂ ಇವರದಾಗಿತ್ತು. ಉತ್ತಮ ಭಟರೂ ಆಗಿದ್ದ ಇವರು ತಮ್ಮ ಚಕ್ರವರ್ತಿಯ, ಇಲ್ಲವೆ ಮಹಾಮಂಡಳೇಶ್ವರ ಇಲ್ಲವೆ ಮಹಾಸಾಮಂತರ ಪರವಾಗಿ ಯುದ್ಧಗಳಲ್ಲಿ ಭಾಗವಹಿಸುತ್ತಿದ್ದರು. ಅಲ್ಲದೆ ಗ್ರಾಮಕ್ಕೆ ಲೂಟಿಯ ಬಾಧೆ ಮೊದಲಾದ ಸಂದರ್ಭದಲ್ಲಿ ಗೋವುಗಳನ್ನು, ಸ್ತ್ರೀಯರನ್ನು ಅಪಹರಿಸುವ ಸಮಯದಲ್ಲಿ ಇವರು ತಮ್ಮ ಜೀವದ ಹಂಗು ತೊರೆದು ಹೋರಾಡಿ ಗ್ರಾಮವನ್ನು ಗ್ರಾಮದ ಜನ ಹಾಗೂ ಸಂಪತ್ತನ್ನು ರಕ್ಷಿಸುತ್ತಿದ್ದರು.

ಇವರಲ್ಲಿ ಕೆಲವರು 'ಏಕಭೋಗದಿಂದ' ಆಳುತ್ತಿದ್ದರೆ ಮತ್ತೆ ಕೆಲವರು ತ್ರಿಭೋಗವಾಗಿಯೂ ಆಳುತ್ತಿದ್ದರು. ಬರ್ಮಗಾವುಂಡ ಅಸುಂಡಿಯನ್ನು ಏಕಭೋಗದಿಂದ ಆಳುತ್ತಿದ್ದನು.

ಬರ್ಮಗಾವುಂಡ :

ಅಸುಂಡಿ ಶಾಸನದಲ್ಲಿ[೧೨೫] ಈತನ ಉಲ್ಲೇಖ ಬರುತ್ತದೆ. ಅಶ್ವರ ಕುಲದ ಮಹೇಶ್ವರ ಗಾವುಂಡನ ಮಗನಾದ ಶಂಕರಗಾವುಂಡ ಮತ್ತು ಗೊಜ್ಜಿಯಬ್ಬೆರ ಮಗನಾದ ಬರ್ಮನು ಸತ್ತಳಿಗೆ-೭೦ರ ಭಾಗವಾದ ಹಸುಂಡಿ (ಅಸುಂಡಿ) ಗ್ರಾಮವನ್ನು ತನ್ನ ಪತ್ನಿಯಾದ ಬಾಗಣಬ್ಬೆಯೊಂದಿಗೆ ಏಕಭೋಗದಿಂದ ಆಳುತ್ತಿದ್ದನು. ಅಲ್ಲದೆ ಹಸುಂಡಿಯ ಕಲಿದೇವರ ಸ್ವಾಮಿಯ ಪೂಜೆ, ಪುನಸ್ಕಾರ, ಅಂಗಭೋಗ, ಧೂಪ, ನಿವೇದ್ಯಕ್ಕೆ ಗದ್ದೆ, ನಿವೇಶನ ದಾನ ನೀಡಿದನೆಂದು ಸಹ ತಿಳಿಸುತ್ತದೆ.

ಬೀರಗಾವುಂಡ :

ಬೈಲೂರು ಶಾಸನದಲ್ಲಿ[೧೨೬] ಉಲ್ಲೇಖಗೊಂಡಿರುವ ಹಟ್ಟಣದ ಬೀರಗಾವುಂಡನು ಶ್ರೀ ಮಲ್ಲಿಕಾರ್ಜುನ ದೇವರಿಗೆ ಭೂಮಿಯನ್ನು, ದೇವರಾಸಿ ಪಂಡಿತರಿಗೆ ಧಾರಾಪೂರ್ವಕವಾಗಿ ಬಿಟ್ಟುಕೊಡುತ್ತಾನೆ.

ನಾಗ ಗಾವುಂಡ :

ಮಣಿಯೂರ ಶಾಸನದಲ್ಲಿ[೧೨೭] ನಾಗಗಾವುಂಡನ ನಾಮ ಮಾತ್ರ ಉಲ್ಲೇಖವಿದ್ದು, ಉಳಿದ ವಿವರಗಳು ನಷ್ಟವಾಗಿವೆ.

ಹಳ್ಳಗಾವುಂಡ :

ಹೊಸವೊಳಲದ ಶ್ರೀ ಮೂಲಸ್ಥಾನದೇವರಿಗೆ ಮೂಲಿಗ ಹಳ್ಳಗಾವುಂಡನು ನೀಡಿದ ಭೂದಾನ, ಈತನ ಪುತ್ರ ಹುಲಿಯಮ್ಮನು ಕಟ್ಟಿಸಿದ ನಂದಿಮಂಟಪದ ವಿಷಯ ಮತ್ತು ಹಳ್ಳಗಾವುಂಡನ ತಂದೆ ತಾಯಿಯರಾದ ಹೀಚಗವುಂಡ, ಹಮ್ಮಿಕಬ್ಬೆಯರ ಉಲ್ಲೇಖವು ಸಹ ಸಿದ್ದಾಪುರ ಶಾಸನದಲ್ಲಿದೆ.[೧೨೮]

ಬಸವಗೌಂಡ :

ಈತನ ಉಲ್ಲೇಖ ಬಂಕಾಪುರ ಶಾಸನದಲ್ಲಿ[೧೨೯] ಬರುತ್ತದೆ. ಬಸವಗೌಂಡನು ಬಳೆಯರ ಸಂಗಣ, ಅಂಡುರ ಕಾಳಿಯಣ, ಬೆಳಗಲಿ ಗೇತಣ, ಸಿಂಗಜ್ಜ, ಮತ್ಯಜ್ಜ, ಮೋರಿಯ ಬೊಪ್ಪಣ, ಮಾಳಿಸೆಟ್ಟಿ ಮತ್ತು ಸೇನಬೋವ ನಾಣೆಯಣ, ಬೈಸಜ್ಜ ಇನ್ನಿಬ್ಬರ ಸಹಿತವಾಗಿ ಬಂಕಾಪುರದ ನಕರೇಶ್ವರ ದೇವರ ಅಚಾರ್ಯ ಚಂದ್ರಭೂಷಣ ಪಂಡಿತರಿಗೆ ದಾನದತ್ತಿಗಳನ್ನು ಕೊಟ್ಟದುದನ್ನು ದಾಖಲಿಸಿದೆ.

ಬಮ್ಮ ಗಾವುಂಡ :

'ಶ್ರೀಮತು ಕಿರಿಯ ಬಂಕಾಪುರದ ಬಂಮ್ಮಗಾವುಂಡ' ಎಂಬ ಉಲ್ಲೇಖವನ್ನು ಬಂಕಾಪುರ ಶಾಸನದಲ್ಲಿ[೧೩೦] ಕಾಣಬಹುದು ಮತ್ತು ಈತನು ಬಂಕಾಪುರದ ನಕರೇಶ್ವರ ದೇವರಿಗೆ, ಚಂದ್ರಭೂಷಣ ಪಂಡಿತರಿಗೆ ದಾನಬಿಟ್ಟ ವಿವರಗಳನ್ನು ದಾಖಲಿಸಿದೆ.

ಹೀಗೆ ಗಾವುಂಡರು ಗ್ರಾಮ ಜೀವನದಲ್ಲಿ ಇಂದಿನಕ್ಕಿಂತ ಹೆಚ್ಚು ಪ್ರಮುಖ ಪಾತ್ರವಹಿಸುತ್ತಿದ್ದರು. ಗ್ರಾಮದ ಪ್ರಭುಗಳಾಗಿದ್ದ ಇವರು ಗ್ರಾಮದ ಸಮಗ್ರ ಆಗು-ಹೋಗುಗಳನ್ನು ನೋಡಿಕೊಂಡು ಹೋಗುತ್ತಿದ್ದರು. ಗ್ರಾಮೀಣ ಜನರಲ್ಲಿ ಶಾಂತಿ, ಸುಭೀಕ್ಷೆಗಳನ್ನುಂಟು ಮಾಡುವಲ್ಲಿ ಇವರು ಕಾರಣೀಭೂತರಾಗಿದ್ದರು.

ಕರಣಿಕ :

ಕರಣಿಕನೆಂದರೆ 'ಲೆಕ್ಕ ಬರೆಯುವ ಅಧಿಕಾರಿ' ಎಂದು ಅರ್ಥ. ಇವರು ಬರೆಯುತ್ತಿದ್ದ ಲೆಕ್ಕ ಒಂದು ಗ್ರಾಮಕ್ಕೆ ಮಾತ್ರ ಸಂಬಂಧಿಸಿದುದಲ್ಲ, ಇವರು ಚಕ್ರವರ್ತಿ, ಮಹಾಮಂಡಳೇಶ್ವರ ಮತ್ತು ಮಹಾಸಾಮಂತರ ಕಛೇರಿಗಳಲ್ಲಿ ಸಹ ಲೆಕ್ಕ ಬರೆಯುವ ಅಧಿಕಾರಿಗಳಾಗಿದ್ದಾರೆ.

ಶ್ರೀಕರಣದ ನೀಲಕಂಠ ನಾಯಕರು :

ಈತನ ಉಲ್ಲೇಖ ಇಂಗಳೇಶ್ವರ ಶಾಸನದಲ್ಲಿ[೧೩೧] ಬರುತ್ತದೆ. ಶಾಸನದಲ್ಲಿ ಮನೆವೆರ್ಗ್ಗಡೆ ದಣ್ಡನಾಯಕಂ ಸಾಯಿಪಯ್ಯಂಗಳ ಶ್ರೀಕರಣಂ ನೀಲಕಂಠ ನಾಯಕರು' ಎಂದಿದೆ. ನೀಲಕಂಠ ನಾಯಕರು ತಾವು ಮಾಡಿಸಿದ ತ್ರಿಕೂಟ ನೀಲಕಂಠ ದೇವರ ಪೂಜೆಗೆ ಅಂಗಭೋಗಕ್ಕೆ ನೈವೇದ್ಯಕ್ಕೆ ಪುರಾಣ ಖಂಡಿಕಕ್ಕೆ ತೋಟ, ಗಾಣಗಳನ್ನು ದಾನಬಿಡುತ್ತಾನೆ.

ಕರಣಿಕ ವೆಚ್ಚಪಯ್ಯ :

ಕಂಚಿಗೊಂಡಪುರದ ಹೆರ್ಗಡೆ ದಂಡನಾಯಕ ವೆಚ್ಚಪಯ್ಯಗಳ ಸರ್ವಾಧ್ಯಕ್ಷ ಶ್ರೀಕರಣದ ದಂಡನಾಯಕ ಹುದ್ದೆಯನ್ನು ಮಲ್ಯಣ ಭಟ್ಟ ಹೊಂದಿದ್ದನೆಂದು ಪಟಾನ್ ಚೆರು ಶಾಸನ[೧೩೨] ತಿಳಿಸುತ್ತದೆ.

ಸೇನಬೋವ :

ಗ್ರಾಮಗಳ ಲೆಕ್ಕಪತ್ರವನ್ನು ಬರೆಯುವವ ಸೇನಬೋವ. ಈತನು ಗ್ರಾಮದ ಒಡೆಯನಾದ 'ಗಾವುಂಡ'ನ ಕೆಳಗಿನ ಅಧಿಕಾರಿ. ಈ ಸೇನಬೋವರನ್ನೇ ಇಂದು 'ಶಾನುಭೋಗ'ರೆಂದು ಹಳ್ಳಿಗಳಲ್ಲಿ ಕರೆಯಲಾಗುತ್ತಿದೆ. ಒಂದೊಂದು ಗ್ರಾಮಕ್ಕೊಬ್ಬ ಸೇನಬೋವನಿರುತ್ತಿದ್ದನು. ಅತೀ ಚಿಕ್ಕ ಗ್ರಾಮಗಳಾಗಿದ್ದರೆ ಎರಡು ಮೂರು ಗ್ರಾಮಗಳಿಗೆ ಒಬ್ಬ ಸೇನಬೋವನಿರುತ್ತಿದ್ದನು. ಇವನು ಇಂದಿನ ಗ್ರಾಮಲೆಕ್ಕಿಗರನ್ನು ಹೋಲುತ್ತಾನೆ. ವಿದ್ಯಾವಂತರಾಗಿರುವ ಇವರು ಗ್ರಾಮದ ಆಡಳಿತದಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತಿದ್ದರು.

ಸೇನಬೋವ ನಾಣಿಯಣ್ಣ :

ನಾಣಿಯಣ್ಣನ ಉಲ್ಲೇಖವು ಬಂಕಾಪುರ ಶಾಸನದಲ್ಲಿ[೧೩೩] ಬರುತ್ತದೆ. ಬಂಕಾಪುರದ ನಕರೇಶ್ವರ ದೇವರ ಚಂದ್ರಭೂಷಣ ಪಂಡಿತರಿಗೆ ನಾಣಿಯಣ್ಣ, ಬಸವಗೌಂಡ, ಬಳೆಯರ ಸಂಕಣ, ಅಂಡುರ ಕಾಳಿಯಣ್ಣ, ಬೆಳಗಲಿ ಗೇತಣ, ಸಿಂಗಜ್ಜ, ಮುತ್ಯಜ್ಜ, ಮೋರಿಯ ಬೊಪ್ಪಣ, ಬೈಸಜ್ಜ ಮತ್ತು ಇನ್ನಿಬ್ಬರು ಸಹಿತವಾಗಿ ದಾನಬಿಟ್ಟ ಉಲ್ಲೇಖವಿದೆ.

ಸೇನಬೋವ-ಮಯಿಲಣ :

ಇಂಗಳೇಶ್ವರ ಶಾಸನದಲ್ಲಿ[೧೩೪] ''ಸೇನಬೋವ ಮಯಿಲಣಂಗಳು'' ಎಂದಿದೆ. ಈತನು ಡೊಂಕಣ ಕೇರಿಯ ಆಡಳಿತವನ್ನು ನೋಡಿಕೊಳ್ಳುತ್ತಿದ್ದು ಬ್ರಾಹ್ಮಣರ ಭೋಜನಕ್ಕೆ ದಾನ ಬಿಡುತ್ತಾನೆ.

ತಳಾರರು :

ಪ್ರಾಚೀನ ಕರ್ನಾಟಕದ ಇತಿಹಾಸದಲ್ಲಿ 'ತಳಾರರು' ಎಂಬ ಚಿಕ್ಕ ಹುದ್ದೆಯ ಅಧಿಕಾರಿಗಳು ಸಹ ಮಹತ್ವದ ಪಾತ್ರ ವಹಿಸಿದುದು ಶಾಸನಗಳಿಂದ ತಿಳಿದುಬರುತ್ತದೆ. ಇವರು ಗ್ರಾಮಗಳಲ್ಲಿಯ ಇಂದಿನ 'ತಳವಾರ'ರಾಗಿದ್ದಾರೆ. ಈ ಶಬ್ದ 'ಸ್ಥಳ' ಇಲ್ಲವೆ 'ತಲ್ವಾರ್' (ಖಡ್ಗ) ಮೂಲದಿಂದ ಬಂದಿರಬಹುದು. ಪ್ರಮುಖವಾಗಿ ಈತನ ಕೆಲಸ ಗ್ರಾಮದ ರಕ್ಷಣೆ ಅಂದರೆ ಕಳ್ಳರಿಂದ, ಸಮಾಜ ದ್ರೋಹಿಗಳಿಂದ ಗ್ರಾಮವನ್ನು ರಕ್ಷಣೆ ಮಾಡುವುದು. ಹಗಲು-ರಾತ್ರಿ ಎನ್ನದೆ ಗ್ರಾಮವನ್ನು ರಕ್ಷಿಸುವ ಈತನಿಗೆ ಖಡ್ಗದ ಅಂದರೆ ತಲ್ವಾರದ ಅವಶ್ಯಕತೆ ಯಾವಾಗಲೂ ಇರುತ್ತಿತ್ತು. ಹೀಗಾಗಿ

ಯಾವಾಗಲೂ ಖಡ್ಗಧಾರಿಯಾಗಿರುವ ಈತನನ್ನು 'ತಳಾರ'ನೆಂದು ಕರೆದಿರಬಹುದಾಗಿದೆ.[೧೩೫] ತಳಾರನು ಕೇವಲ ತನ್ನ ಗ್ರಾಮ ರಕ್ಷಣೆಗೆ ಮಾತ್ರ ಮೀಸಲಾಗಿರದೆ ಕೆಲವೊಮ್ಮೆ ಬೇರೆ ಬೇರೆ ಸ್ಥಳಗಳ ರಕ್ಷಣಾ ಕಾರ್ಯವನ್ನು ಸಹ ಮಾಡುತ್ತಿದ್ದರೆಂದು ಹೇಳಬಹುದು.

ತಳಾರ ಬೊಪ್ಪನಾಯಕ :

ಕುರ್ತಕೋಟಿಯ ನರಸಿಂಹದೇವರ ನಂದಾದೀವಿಗೆಗೆ ತನ್ನ ಸುಂಕದಾನದಲ್ಲಿ ಈತನು ದಾನಬಿಟ್ಟ ಉಲ್ಲೇಖ ಕುರ್ತುಕೋಟಿ ಶಾಸನದಲ್ಲಿ[೧೩೬] ಬರುತ್ತದೆ. ಇದರಲ್ಲಿ 'ತಳಾರಂ ಬೊಪ್ಪನಾಯಕಂ' ಎಂಬ ಉಲ್ಲೇಖವಿದೆ.

ದಂಡನಾಯಕರು :

'ದಂಡನಾಯಕ' ಶಬ್ದಕ್ಕೆ ಸಾಮಾನ್ಯವಾಗಿ 'ಸೇನಾಪತಿ' ಎಂಬ ಅರ್ಥವನ್ನು ಇದುವರೆಗೆ ಹಚ್ಚುತ್ತ ಬರಲಾಗಿದೆ.[೧೩೭] 'ದಂಡ' ಎಂಬುದಕ್ಕೆ ಸೈನ್ಯ ಎಂಬ ಅರ್ಥವಿರುವುದರಿಂದಲೂ 'ದಂಡನಾಯಕ'ರೆಲ್ಲರೂ ವೀರರಾಗಿದ್ದುದರಿಂದಲೂ ಈ ಅರ್ಥ ಹೇಳಲಾಯಿತು. ಆದರೆ ದಂಡವೆಂಬುದಕ್ಕೆ ಕೋಟಿ ಎಂದೂ ಅರ್ಥವಿದೆ. ಈ ದಂಡಕ್ಕೆ ಭಾರತೀಯ ಸಂಸ್ಕೃತಿಯಲ್ಲಿ ಒಂದು ವಿಶಿಷ್ಟಸ್ಥಾನವಿದೆ. ದೀಕ್ಷೆಯಂಥ ಧಾರ್ಮಿಕ ಕಾರ್ಯದಲ್ಲಿ ವಟುಗಳಿಗೆ ಹಿಡಿಯಲು ದಂಡವನ್ನು ಕೊಡುತ್ತಾರೆ. ಸನ್ಯಾಸಿಗಳು, ಸ್ವಾಮಿಗಳು ದಂಡವನ್ನು ಹಿಡಿದಿರುತ್ತಾರೆ. ಹೀಗಾಗಿ ಹುದ್ದೆ ಸ್ವೀಕರಿಸುವ ಸಂದರ್ಭದಲ್ಲಿ ರಾಜನಿಂದ ದಂಡವನ್ನು ಸಾಂಕೇತಿಕವಾಗಿ ಪಡೆಯುತ್ತಿರುವುದೇ 'ದಂಡನಾಯಕ' ಹೆಸರು ರೂಢಿಗೆ ಬರಲು ಕಾರಣವಾಗಿರಬಹುದು. ಇವರು ಚಕ್ರವರ್ತಿ ಇಲ್ಲವೆ ಮಹಾಮಂಡಳೇಶ್ವರರಿಂದ ನೇಮಿಸಲ್ಪಟ್ಟ ಅಧಿಕಾರಿಗಳು, 'ಮಹಾಸಾಮಂತಾಧಿಪತಿ ಮಹಾ ಪ್ರಚಂಡನಾಯಕ'ರಂತೆ 'ದಂಡನಾಯಕ'ವೆಂಬುದೂ ಹುದ್ದೆಯ ಹೆಸರಾಗಿದೆ. ಇವರಲ್ಲಿ ಕೆಲವರು ಸುಂಕಕ್ಕೆ, ಕೆಲವರು ಸೈನ್ಯಕ್ಕೆ, ಕೆಲವರು ವಿದೇಶಾಂಗಕ್ಕೆ ಹೀಗೆ ವಿವಿಧ ಇಲಾಖೆಗಳಿಗೆ ಸಂಬಂಧಪಟ್ಟವರಾಗಿದ್ದಾರೆ. ಇವರಲ್ಲಿ ಕೆಲವರಿಗೆ 'ಮಹಾಪ್ರಧಾನ' ಎಂಬುದನ್ನು ಬಳಸಿದ್ದರೂ ಅದು ಗೌರವಸೂಚಿ ಪದವಾಗಿದೆ ಎನ್ನಬಹುದು. ಇಷ್ಟು ವಿವರಗಳ ಹಿನ್ನಲೆಯಲ್ಲಿ ಶಾಸನೋಕ್ತ ದಂಡನಾಯಕರ ವಿವರಗಳನ್ನು ಈ ಕೆಳಗೆ ಕೊಡಲಾಗಿದೆ.

ದಂಡನಾಯಕ - ತಿಕ್ಕಪಯ್ಯ :

ತಿಕ್ಕಪಯ್ಯನು ಸೋಮೇಶ್ವರನು ಯುವರಾಜನಾಗಿದ್ದಾಗಲೇ ಆತನ ದಂಡನಾಯಕನಾಗಿ ಕೊಳ್ಳಿಪಾಕೆ-೭೦೦ ವಿಭಾಗವನ್ನು ನೋಡಿಕೊಳ್ಳುತ್ತಿದ್ದನು. ಈತನು ಮಹಾಪ್ರಧಾನ ಅಂತಃಪುರ ವೆರ್ಗ್ಗಡೆ ಕಾಳಿಮಯ್ಯನ ಕಿರಿಯ ಸೋದರನೆಂದು ಕೋಲನುಪಾಕ ಶಾಸನ ತಿಳಿಸುತ್ತದೆ.[೧೩೮] ತಿಕ್ಕಪಯ್ಯನ ಬೇಡಿಕೆಯಂತೆ ಸೋಮನಾಥ ಭಟ್ಟ ಎಂಬುವವನ ಪ್ರಭುತ್ವ ಅಗ್ರಹಾರವಾಗಿದ್ದ ಕಲ್ಪಚೇಡು-೪೦ರ ತಾಂಡಿಪಾಮುಲಕ ಎಂಬ ಗ್ರಾಮದ ತಳವೃತ್ತಿಯ ೧/೩ ಭಾಗದ ರಾಜ

ಸುಂಕವನ್ನು ಮತ್ತು ಭೂಮಿಯನ್ನು ಸೋಮೇಶ್ವರ ದೇವರಿಗೆ ದತ್ತಿಯಾಗಿ ನೀಡಿದ ವಿಚಾರವನ್ನು ಇಲ್ಲಿ ದಾಖಲಿಸಿವೆ ಮತ್ತೊಂದು ಕೋಲನುಪಾಕ ಶಾಸನವು[೧೩೯] ದಂಡನಾಯಕ ಕಾಳಿಮಯ್ಯನು ತನ್ನ ತಮ್ಮ ತಿಕ್ಕಪಯ್ಯ ಮಾಡಿಸಿದ ಮಲ್ಲಿಕಾರ್ಜುನ ದೇವರಿಗೆ ನೀಡಿದ ಭೂದಾನವನ್ನು ತಿಳಿಸುತ್ತದೆ. ಹಲ್ಲೂರು ಶಾಸನವು[೧೪೦] ''ಸಮಧಿಗತ ಪಂಚಮಹಾಶಬ್ದ ಮಂಡಳಾಧಿಪತಿ ಶ್ರೀ ಮನ್ಮಹಾಪ್ರಚಂಡ ದಣ್ಡನಾಯಕಂ ತಿಕ್ಕಪಯ್ಯರಸರ ರೆಡರನೂರು ಮಂ ಸುಖದಿನಾಳುತ್ತಮಿರೆ'' ಎಂದಿದೆ. ಅಂದರೆ ಮೊದಲು ಕೇವಲ ದಂಡನಾಯಕನಾಗಿದ್ದ ತಿಕ್ಕಪಯ್ಯ ಮಂಡಳಾಧಿಪತಿಯಾಗಿ ಮೇಲ್ದರ್ಜೆಗೆ ಏರಿದನೆಂದು ಹೇಳಬಹುದು.

ದಂಡನಾಯಕ ಚೋಳಾಂಡರ :

ನೊಳಂಬವಾಡಿ-೩೨೦೦೦ದ ದಂಡನಾಯಕ ಚೋಳಾಂಡರನು ಪಾಂಡ್ಯನಾಡಿನ ತೆರಿಗೆಯಲ್ಲಿ ಎರಡು ಪಣವನ್ನು ರತ್ನಭೂಷಣ ವಿನಾಯಕ ದೇವರಿಗೆ ದಾನನೀಡಿದನೆಂದು ರಾಗಿ ಮುಸಲವಾಡ ಶಾಸನ[೧೪೦] ತಿಳಿಸುತ್ತದೆ.

ದಂಡನಾಯಕ ಭೀಮರಸ :

ಸೇಡಂ ಶಾಸನದಲ್ಲಿ[೧೪೨] ''ಶ್ರೀ ಮನ್ಮಹಾಪ್ರಧಾನಂ ಹಿರಿಯ ದಂಡನಾಯಕಂ ಕಾಳಿಮಯ್ಯಂಗಳಳಿಯ ಮಹಾಪ್ರಚಂಡ ದಂಡನಾಯಕ ಭೀಮರಸ'' ಎಂಬ ಉಲ್ಲೇಖವಿದೆ. ಇದರಿಂದ ಭೀಮರಸನು ಕಾಳಿಮಯ್ಯನ ಅಳಿಯನಾಗಿದ್ದನೆಂಬುದು ಸ್ಪಷ್ಟವಾಗುತ್ತದೆ. ಅಲ್ಲದೆ ಈ ದಂಡನಾಯಕರುಗಳು ತಮ್ಮೊಳಗೆ ವೈವಾಹಿಕ ಸಂಬಂಧಗಳನ್ನು ಬೆಳೆಸಿಕೊಂಡು ತಮ್ಮ ಅಧಿಕಾರವನ್ನು ಭದ್ರಪಡಿಸಿಕೊಳ್ಳುತ್ತಿದ್ದರೆಂದು ಹೇಳಬಹುದು ಮತ್ತು ಭೀಮರಸನು ಶ್ರೀ ಮತ್ಸೇಡಿಂಬದ ತೆಂಕಣ ಬಸದಿಯ ಜೀರ್ಣೋದ್ಧಾರಕ್ಕೆ, ಆದಿ ಭಟ್ಟಾರಕದೇವರಿಗೆ ಬಿಟ್ಟ ದಾನಗಳನ್ನು ಉಲ್ಲೇಖಿಸಿದೆ.

ದಂಡನಾಯಕ ನಿಮ್ಬಣಯ್ಯ :

ನಿಮ್ಬಣಯ್ಯನು ಮಹಾಮಂಡಳೇಶ್ವರ ಕುಮಾರ ತೈಲಪದೇವನ ಮಹಾಪ್ರಧಾನ ದಂಡನಾಯಕನಾಗಿದ್ದನೆಂದು ಕುರಡಿ ಶಾಸನ[೧೪೩] ಉಲ್ಲೇಖಿಸಿದೆಯಲ್ಲದೆ ಈತನ ಇಬ್ಬರು ಹೆಣ್ಣು ಮಕ್ಕಳಾದ ನಾಗಲದೇವಿ ಹಾಗೂ ಗಂಗಣಬ್ಬೆಯರನ್ನು ಶಂಕರಾರ್ಯ್ಯನಿಗೆ ಹಾಗೂ ಅವರ ತಮ್ಮ ಮಹಾದೇವನಿಗೆ ಮದುವೆ ಮಾಡಿಕೊಡಲಾಗಿತ್ತು. ನಾಗಲದೇವಿಯು ತನಗೆ ಬಳುವಳಿಯಾಗಿ ಕೊಟ್ಟ ತೈಲಪದೇವರ ಅಗ್ರಹಾರ ರಾರಾವಿಯಲ್ಲಿ ಬಂದ ವೃತ್ತಿಯಲ್ಲಿ ಅರ್ಧವೃತ್ತಿಯನ್ನು ರೂಢಿಯ ಶಂಕರೇಶ್ವರ ಹಾಗೂ ನಾಗೇಶ್ವರ ದೇವರಿಗೆ ದಾನ ಮಾಡಿದಳೆಂದು ದಾಖಲಿಸಿದೆ.

ದಂಡನಾಯಕ ಮಹಾದೇವರಸ :

ಮುದೇನೂರು ಶಾಸನದಲ್ಲಿ[೧೪೪] ''ವಡ್ಡರಾವುಳದ ದಣ್ಡನಾಯಕಂ ಮಹಾದೇವರಸರುಂ'' ಎಂದಿದೆ. ಲಕ್ಷ್ಮೇಶ್ವರ ಶಾಸನದಲ್ಲಿ[೧೪೫] ಸುಂಕದ ಶ್ರೀ ಮನ್ಮಹಾ ಪ್ರಧಾನ ದಣ್ಡನಾಯಕಂ ಮಹಾದೇವರಸರ ಶ್ರೀ ಮದ್ರಾಜಧಾನಿ ಪಟ್ಟಣಂ

ಪುರಿಗೆರೆಯ ನಗರ' ಎಂದಿದೆ. ನರಗುಂದ ಶಾಸನದಲ್ಲಿ[೧೪೬] ''ಮಹದೇವರಸರು ಬೆಳ್ವಲ ಮೂನೂರುಮಂ ಹುಲಿಗೆರೆ ಮೂನೂರುಮಂ ದುಷ್ಟನಿಗ್ರಹ ಶಿಷ್ಟ ಪ್ರತಿಪಾಳನದಿಂದಾಳರಸಂಗೆಯ್ಯುತ್ತಮಿರೆ'' ಎಂದಿದೆಯಲ್ಲದೆ ದಂಡನಾಯಕ ಕಾಳಿಮರಸರ ಮಗ ಎಂದು ಸಹ ಹೇಳಿದೆ ಮತ್ತು ಈತನು ಹಂತಹಂತವಾಗಿ ಮೇಲ್ದರ್ಜೆಗೆ ಏರಿದುದನ್ನು ಸಹ ಈ ಶಾಸನಗಳು ತಿಳಿಸುತ್ತದೆ. ನರಗುಂದ ಶಾಸನ[೧೪೭] ''ನಿಜಖಡ್ಗಂ ವೀರಲಕ್ಷ್ಮೀಪ್ರಿಯ ಮುಖ ಮುಕುಂದ ತೇಜ ಮದ್ಯೋತಿತಾಶಾಗಜಕುಂಭಾಳಂ ಶ್ರಿತಾಲೇಪಿತ ಸುರಚಿರಸಿಂಧೂರ ಮುತ್ತುಂಗ ಕೀರ್ತಿಧ್ವಜ ಮಾಕಾಶಾ (ದ್ಬ) ಗಂಗಾಧವಳರುಚಿಗೆ ಶಾದ್ರಿಶ್ಯಮೆಂದೆಂದೆ ಕೂರ್ತಿಂತು ಜಗಂ ವ್ಯಾವರ್ಣಿಸಲ್ಕೊಪ್ಪುವನಮುವು ಮುಹಾದೇವ ದಂಡಾಧಿನಾಥ'' ಎಂದು ಈತನ ಪ್ರಶಸ್ತಿಗಳನ್ನು ತಿಳಿಸಿದೆ.

ದಂಡನಾಯಕ ಚಿದ್ದರಸ :

ಲಕ್ಷ್ಮೇಶ್ವರ ಶಾಸನದಲ್ಲಿ[೧೪೮] ಚಿದ್ದರಸನ ಉಲ್ಲೇಖವಿದೆ. ಅದರಲ್ಲಿ XX ಹಾ ಪ್ರಧಾನ ಸೇನಾಧಿಪತಿ ಕಡಿತವೆರ್ಗ್ಗಡೆ ಕನ್ನಡಸನ್ಧಿವಿಗ್ರಹಿ ದಣ್ಡನಾಯಕಂ ಚಿದ್ದರಸ' ಎಂದು ಕರೆಯಲಾಗಿದೆಯಲ್ಲದೆ ಈತ 'ಕನ್ನಡ ಸನ್ಧಿವಿಗ್ರಹಿ ದಣ್ಡನಾಯಕಂ ತಿಕ್ಕರಸರಳಿಯಂ ಶ್ರೀ ಮನ್ಮಹಾ ಪ್ರಧಾನಂ ದಣ್ಡನಾಯಕ ಚಿದ್ದ XX'' ಎಂದು ಹೇಳಿದೆ. ಈ ಚಿದ್ದರಸನು ಶ್ರೀ ಸ್ವಯಂಭು ದಕ್ಷಿಣ ಸೋಮನಾಥ ದೇವರಂಗಭೋಗಕ್ಕೆ ತಮ್ಮ ಕಿರುಕುಳಾದಾಯದಲ್ಲಿ ದಾನಬಿಟ್ಟುದುದನ್ನು ಸಹ ತಿಳಿಸುತ್ತದೆ.

ದಂಡನಾಯಕ-ಜಯಾನಂದ ಭಟ್ಟ :

ದಂಡನಾಯಕ ಜಯಾನಂದ ಭಟ್ಟ ಬಹುಶಃ ದೊರೆಯಮಗ ತೈಲಪದೇವನ ದಂಡನಾಯಕನಾಗಿರಬಹುದು. ಈತನ ಸಾನಿಧ್ಯದಲ್ಲಿ ಕಂದೂರುನಾಡಿನ ಸುಂಕವೆರ್ಗ್ಗಡೆ ಬವ್ವರಸ ಮತ್ತು ಇತರ ಅಧಿಕಾರಿಗಳು ಸಮಸ್ತ ಸೆಟ್ಟಿಕಾರರೂ ಕಟ್ಟೆಯ ಸೋಮನಾಥದೇವರ ನಂದಾದೀವಿಗೆಗೆ ಧೂಪಕ್ಕೆ ದಡ್ಡರಾವುಳ ಮತ್ತು ಪೆಜ್ಜುಂಕದಲ್ಲಿ ತಿಂಗಳಿಗೆ ಇಷ್ಟೆಂದು ದತ್ತಿಯನ್ನು ನೀಡಿದರು. ಕರ್ತವಾದಿದೇವ ಎಂಬುವವನು ಈ ದತ್ತಿಯನ್ನು ಪಡೆದನೆಂದು ಗಂಗಾಪುರಂ ಶಾಸನ[೧೪೯] ತಿಳಿಸುತ್ತದೆ.

ಹಿರಿಯ ದಂಡನಾಯಕ ಕುಮಾರ ಪದ್ಮನಾಭರಸ :

ಶ್ರೀ ಮನ್ಮಾಹಪ್ರಧಾನ ಸೇನಾಧಿಪತಿ, ಮನೆವೆರ್ಗ್ಗಡೆ, ಹಿರಿಯ ದಂಡನಾಯಕ ಕುಮಾರ ಪದ್ಮನಾಭರಸನು ಬನವಾಸಿನಾಡನ್ನಾಳುತ್ತಿದ್ದನೆಂದು ಹಾವೇರಿ ಶಾಸನದಲ್ಲಿ[೧೫೦] ಹೇಳಲಾಗಿದೆ. ಈತ ಕೆರೆಯೊಂದನ್ನು ಕಟ್ಟಿಸಿ ಅದರ ಪುನರುಜ್ಜೀವನ್ನಾಗಿ ಭೂಮಿಯನ್ನು ದಾನಬಿಟ್ಟನೆಂದು ಉಲ್ಲೇಖಿಸಿದೆ.

ದಂಡನಾಯಕ ಬಮ್ಮರ್ಾದೇವಯ್ಯ :

ಉರುವಕೊಂಡ ಶಾಸನದಲ್ಲಿ[೧೫೧] 'ಶ್ರೀ ಮನ್ಮಹಾ ಪ್ರಧಾನನನ್ತಪ್ಪರಾಧ್ಯಕ್ಷ ಕರಿತುರಗ ಸಾಹಣಿವೆರ್ಗ್ಗಡೆ ಶ್ರೀಕರಣಂ ಹೇರಿಸನ್ಧಿವಿಗ್ರಹಿ ಪಸಾಯಿತಂ ಸೇನಾಧಿಪತಿ ಮನೆವೆರ್ಗ್ಗಡೆ ಹಡಪವಳ ದಣ್ಡನಾಯಕಂ ಬಮ್ಮರ್ಾದೇವಯ್ಯಂಗಳ್'' ಎಂಬ ಉಲ್ಲೇಖವಿದೆ. ಅಂದರೆ ಈತ ಅರಸನಿಗೆ ಆಪ್ತನಾದ ಅಧಿಕಾರಿಯಾಗಿದ್ದಲ್ಲದೆ ವಿವಿಧ ಹುದ್ದೆಗಳನ್ನೂ ಸಹ ಹೊಂದಿದ್ದನೆಂದು ಹೇಳಬಹುದು.

ದಂಡನಾಯಕ ಸಾಯಿಪಯ್ಯ :

ಈತನನ್ನು ಇಂಗಳೇಶ್ವರ ಶಾಸನದಲ್ಲಿ[೧೫೨] ''ಶ್ರೀ ಮನ್ಮಹಾ ಪ್ರಧಾನಂ ಮನೆವೆರ್ಗ್ಗಡೆ ದಣ್ಡನಾಯಕಂ ಸಾಯಿಪಯ್ಯಂಗಳ್'' ಎಂದು ಕರೆಯಲಾಗಿದೆ. ಈತನ ಶ್ರೀಕರಣದ ಅಧಿಕಾರಿಯಾದ ನೀಲಕಂಠ ನಾಯಕರು ತ್ರಿಕೂಟ ನೀಲಕಂಠ ದೇವರಿಗೆ ನಿವೇದ್ಯಕ್ಕೆ ಪುರಾಣ ಖಂಡಿಕಕ್ಕೆ ದಾನಬಿಟ್ಟ ಉಲ್ಲೇಖವಿದೆ.

ದಂಡನಾಯಕ-ತೀಕಿಮಯ್ಯ :

ಮಹಾಪ್ರಧಾನ ದಂಡನಾಯಕ ತೀಕಿಮಯ್ಯನ ಉಲ್ಲೇಖವು ತಿಳವಳ್ಳಿ ಶಾಸನದಲ್ಲಿ[೧೫೩] ಬಂದಿದೆ. ಈತನು ಮಹಾಮಂಡಳೇಶ್ವರ ತೈಲಪದೇವರ ಅಮಾತ್ಯನಾಗಿ ತಿಳುವಳ್ಳಿ ಆಳುತ್ತಿದ್ದನೆಂದು ಹೇಳಲಾಗಿದೆ.

ದಂಡನಾಯಕ ಮಹೇಶ್ವರಯ್ಯ :

ಮಹಾಮಂಡಳೇಶ್ವರ ಪೆರ್ಮಡಿ ದೇವನು ಆಳುತ್ತಿದ್ದಾಗ ಕುಕ್ಕನೂರು-೩೦ರೊಳಗಿನ ಕಲ್ಲೂರು ಸ್ವಯಂಭು ಕಲಿದೇವರಿಗೆ ಶ್ರೀ ಉಪೇಂದ್ರದೇವಿ ಸರ್ಬ್ಬಕ್ರತು ಸೋಮಯಾಜಿಯ ವಂಶಸ್ಥನಾದ ಶ್ರೀಮನ್ಮಹಾಪ್ರಧಾನ ಪೆಜ್ಜರ್ಂಕ ವಡ್ಡರಾವುಳ ದಣ್ಡನಾಯಕ ಮಹೇಶ್ವರಯ್ಯನು ದಾನ ನೀಡಿದ ವಿವರವನ್ನು ಮತ್ತು ಈತನು ಚಂಡಿಕಾ ಹೋಮವನ್ನು ಮಾಡಿದ್ದನೆಂದೂ, ಶೂರನೆಂದೂ, ಬ್ರಹ್ಮ, ವಿಷ್ಣು, ರುದ್ರ, ಸೂರ್ಯ, ನಕ್ಷತ್ರ, ಕಾರ್ತಿಕ, ಗಣಪತಿ, ಇಂದ್ರ, ಕುಮಾರಿ, ಸರಸ್ವತಿ, ಲಕ್ಷ್ಮಿ ಮುಂತಾದವರು ಇವನಿಗೆ ಆಶೀರ್ವಾದ ಮಾಡಿದ್ದರಿಂದ ಈ ಅಧಿಕಾರಗಳು ಇವನಿಗೆ ಲಭಿಸಿದ್ದವೆಂದು ಕಲ್ಲೂರು[೧೫೪] ಶಾಸನದಲ್ಲಿ ಹೇಳಲಾಗಿದೆ.

ದಂಡನಾಯಕ ಕಲಿದೇವಯ್ಯ :

ದಂಡನಾಯಕ ಕಲಿದೇವಯ್ಯ ತಡವಲಿಗೆಯನ್ನು ಆಳುತ್ತಿದ್ದ ಉಲ್ಲೇಖ ಅಥರ್ಗಾ ಶಾಸನಲ್ಲಿದೆ.[೧೫೫]

ದಂಡನಾಯಕ ತಿಕ್ಕರಸ :

ದಂಡನಾಯಕ ತಿಕ್ಕರಸನು ಮಹಾಸಾಮಂತಾಧಿಪತಿ ಕಾಳಿಮರಸ ಮಹಾಪ್ರಧಾನ ಮಹಾಮಾತ್ಯನಾಗಿ ಸಮಸ್ತ ರಾಜ್ಯ ಭಾರವನ್ನು ನೋಡಿಕೊಳ್ಳುತ್ತಿದ್ದನೆಂದು ಸಿರಿವಾಳ ಶಾಸನವು ತಿಳಿಸುತ್ತದೆ.[೧೫೬] ಅಲ್ಲದೆ ಈತ ಮನೆವರ್ಗ್ಗಡೆ, ಕನ್ನಡ

ಸಂಧಿ ವಿಗ್ರಹಿಯಾಗಿ ಕೂಡ ಕಾರ್ಯನಿರ್ವಹಿಸುತ್ತಿದ್ದನೆಂದು, ಈತನ ಅಳಿಯನಾದ ಚಿದ್ದರಸನು ಸಹ ದಂಡ ನಾಯಕನಾಗಿದ್ದನೆಂದು ಲಕ್ಷ್ಮೇಶ್ವರ ಶಾಸನ ತಿಳಿಸುತ್ತದೆ.[೧೫೭]

ಸಂಧಿ ವಿಗ್ರಹಿ-ಸಿಂಗರಸ :

ಈತನ ಉಲ್ಲೇಖ ಚಿಲ್ಮಕುರು ಶಾಸನದಲ್ಲಿ[೧೫೮] ಬರುತ್ತದೆ. ಮಹಾಮಂಡಳೇಶ್ವರ ತ್ರೈಲೋಕ್ಯಮಲ್ಲಮಲ್ಲಿದೇವರು ಮುಳ್ಕಿ-೩೦೦ನ್ನು ಆಳುತ್ತಿರುವಾಗ ಅವನ ಮಹಾಪ್ರಧಾನ, ಸಂಧಿವಿಗ್ರಹಿಯಾಗಿ ಸಿಂಗರಸನಿದ್ದನು. ಈ ಸಿಂಗರಸನ ತಾಯಿಯಾದ ನಾಲಿಕಬ್ಬೆ ಚಿಲ್ಮಕೂರಗದಲ್ಲಿ ಕೆರೆಯನ್ನು ಕಟ್ಟಿಸಿದಳೆಂದು ಹೇಳಲಾಗಿದೆ.

ದಂಡನಾಯಕಿ ರತ್ನದೇವಿಯಕ್ಕ :

ರಾಗಿಮುಸಲವಾಡಿ ಶಾಸನದಲ್ಲಿ[೧೫೯] ಈಕೆಯ ಉಲ್ಲೇಖ ಬರುತ್ತಿದ್ದು ಈಕೆ ನೊಳಂಬವಾಡಿ-೩೨೦೦೦ದ ದಂಡನಾಯಕ ಯಿನ್ದರಾಣಿಭಟ್ಟಯ್ಯನ ಮಡದಿಯಾಗಿದ್ದಳು. ಶಾಸನದಲ್ಲಿ ಈಕೆಯನ್ನು ''ಪರಮಕಲ್ಯಾಣ ಫಳ ಸಹಶ್ರಭೋಗಭಾಗಿನೆ ದ್ವಿತೀಯ ಲಕ್ಷ್ಮೀಸಮಾನೆ ಕಳಹಂಸಗಮನೆಯಪ್ಪ ಶ್ರೀ ಮನ್ಮಹಾನಾಯಕಿ ದಣ್ಡನಾಯಕಿತಿ ರತ್ನದೇವಿಯಕ್ಕಂಗಳು'' ಎಂದು ಹೊಗಳಿದೆ.

ದಂಡನಾಯನಕ -ಕಂಚರಸ

ಏವೂರ ಶಾಸನದಲ್ಲಿ[೧೬೦] ಸಗರ-೫೦೦ರ ದಂಡನಾಯಕ ಕಂಚರಸ ಏವೂರ ಶ್ರೀ ಸ್ವಯಂಭು ಸೋಮೇಶ್ವರ ದೇವರ ಅಂಗಭೋಗಕ್ಕಾಗಿ ಏವೂರ ಠಾಣಾಂತರ ಹೆಜ್ಜುಂಕದಲ್ಲಿ ಈತ ತಿಂಗಳಿಗೆ೫ ಲೊಕ್ಕಿಯ ಹಣ ಬಿಟ್ಟುದುದನ್ನು ತಿಳಿಸುತ್ತದೆ. ಇದರಿಂದ ಹೆಜ್ಜುಂಕ ವೆರ್ಗ್ಗಡೆಗಳಿಗೆ ತಾವು ವಸೂಲಿ ಮಾಡಬೇಕಾದ ಸುಂಕದ ಭಾಗಗಳನ್ನು ದೇವರಿಗೆ ಬಿಡುವ ಅಧಿಕಾರವಿತ್ತೆಂದು ತಿಳಿದು ಬರುತ್ತದೆ.

ದಂಡನಾಯಕ-ಕಾಳಿಮಯ್ಯ :

'ಮಹಾಪ್ರಧಾನ ಅಂತಃಪುರ ವೆರ್ಗ್ಗಡೆ ಸಂಧಿ ವಿಗ್ರಹಿ, ದಂಡನಾಯಕ, ಕಾಳಿಮಯ್ಯನ ಉಲ್ಲೇಖ ಅನೇಕ ಶಾಸನಗಳಲ್ಲಿ[೧೬೧]ಬರುತ್ತದೆ. ಈತ ಮೂರನೆಯ ಸೋಮೇಶ್ವರನು ಯಾವರಾಜನಾಗಿದ್ದಾಗಿನಿಂದ ಹಿಡಿದು ಚಕ್ರವರ್ತಿಯಾದ ನಂತರವೂ ಆತನ ಕೈಕೆಳಗಿನ ಅಧಿಕಾರಿಯಾಗಿ ಸೇವೆ ಸಲ್ಲಿಸಿದ್ದಾನೆ. ಅಲ್ಲದೆ ಈತನ ಕಿರಿಯ ಸಹೋದರನಾದ ತಿಕ್ಕಪಯ್ಯ[೧೬೨] ಮತ್ತು ಅಳಿಯಂದಿರಾದ ಪ್ರತಿಕಂಟ ಬಮ್ಮದೇವನಾಯಕ[೧೬೩] ಭೀಮರಸರೂ[೧೬೪] ಕೂಡ ದಂಡನಾಯಕರಾಗಿ ಕಾರ್ಯನಿರ್ವಹಿಸುತ್ತಿದ್ದರೆಂದು ಶಾಸನಗಳಿಂದ ತಿಳಿದುಬರುತ್ತದೆ. ಅಂದರೆ ಈತನ ಪರಿವಾರವೆಲ್ಲ ಚಕ್ರವರ್ತಿಯ ಆಧೀನರಾಗಿ ಸೇವೆಯನ್ನು ಸಲ್ಲಿಸುತ್ತಿದ್ದರೆಂದು ಹೇಳಬಹುದು. ಅಲ್ಲದೆ ಈ ಶಾಸನಗಳು ಕಾಳಿಮಯ್ಯನು ನೀಡಿದ ದಾನಗಳನ್ನು ಸಹ ಉಲ್ಲೇಖಿಸುತ್ತವೆ.

ಪೆರ್ಗಡೆಗಳು :

ಶಾಸನಗಳಲ್ಲಿ 'ಪೆರ್ಗ್ಗಡೆ'ಗಳ ಉಲ್ಲೇಖ ಬರುತ್ತವೆ. ಇವರನ್ನು ಕುರಿತು ಜಿ. ಎಸ್. ದೀಕ್ಷಿತರು[೧೬೫] ''ನಾಡು ಅಥವಾ ಗ್ರಾಮದ ಮುಖ್ಯಸ್ಥ ಗಾವುಂಡ, ಪೆರ್ಗಡೆ ಎಂಬುವರು ನಾಡುಗಳ ಇಲ್ಲವೆ ಹಳ್ಳಿಗಳ ಇಲ್ಲವೆ ಯಾವುದೇ ವಿಭಾಗದ ಮುಖ್ಯಸ್ಥರಾಗಿದ್ದಾರೆ. ತೆರಿಗೆ ಸಂಗ್ರಹಿಸುವ ಅಧಿಕಾರ ಹೊಂದಿದ್ದ ಪೆರ್ಗಡೆಯನ್ನು 'ಸುಂಕದ ಹೆಗ್ಗಡೆ' ಎಂದು ಕರೆದಿದ್ದಾರೆ. ಪೆರ್ಗಡೆಗಳಲ್ಲಿ ಕೆಲವರು ಯಾವುದೇ ವಿಭಾಗದ ಆಡಳಿತಾಧಿಕಾರಿಗಳಾಗಿದ್ದು ಮತ್ತೆ ಕೆಲವರು ಸುಂಕದ ಅಧಿಕಾರಿಗಳಾಗಿದ್ದರೆಂದು ಅರ್ಥವಾಗುತ್ತದೆ. ಡಾ. ಎಂ. ಚಿದಾನಂದ ಮೂರ್ತಿಯವರು[೧೬೬] 'ಪೆರ್ಗಡೆ' ಎಂಬುದು ಸಂಸ್ಕೃತದ 'ಮಹತ್ತರ' ಎಂಬುದರ ಸಮಾನರೂಪ ಎಂದು ಹೇಳಿ ಇವೆರಡೂ ದೊಡ್ಡ ಅಧಿಕಾರಿಗಳನ್ನು ಸೂಚಿಸುವ ಪದಗಳು ಎಂದಿದ್ದಾರೆ.

ಗಾವುಂಡ ಪೆರ್ಗಡೆ :

ಗಾವುಂಡನ ಅಧಿಕಾರ ಒಂದು ಗ್ರಾಮಕ್ಕೆ ಮಾತ್ರ ಸೀಮಿತವಾಗಿದ್ದರೆ 'ಪೆರ್ಗಡೆ'ಗಳ ಅಧಿಕಾರಕ್ಕೆ ಒಂದಕ್ಕಿಂತ ಹೆಚ್ಚು ಗ್ರಾಮಗಳು ಸೇರುತ್ತಿದ್ದವೆನ್ನಬಹುದು. ಪ್ರಭುವರ್ಗದವರಾದ ಗಾವುಂಡರು ಸುಂಕವನ್ನೂ ಸಂಗ್ರಹಿಸಿ ಆಡಳಿತ ವರ್ಗದ ಪೆರ್ಗಡೆಗಳಿಗೆ ಕೊಡುತ್ತಿರಬೇಕು. ಹೀಗಾಗಿ ಗಾವುಂಡನಿಗಿಂತ ಅಧಿಕಾರದಲ್ಲಿ 'ಪಿರಿಯ' ನಾಮದದಿಂದ ಈತನನ್ನು 'ಪಿರಿಯಗಾವುಂಡ'ನೆಂದು ಕರೆಯುತ್ತಿರಬೇಕು. ಕಾಲಾನಂತರ ಪಿರಿಯಗಾವುಂಡ >ಪೆರ್ಗಾವುಂಡ >ಪೆರ್ಗಾವುಡ >ಪೆರ್ಗಡೆ ಹೆಗ್ಗಡೆ ಎಂದಾಗಿದೆ.[೧೬೭]

ಪೆರ್ಗಡೆ ದಂಡನಾಯಕ :

ಹಲವು ಜನ 'ಪೆರ್ಗಡೆ'ಗಳ ಹೆಸರಿನೊಂದಿಗೆ 'ದಂಡನಾಯಕ' ಎಂಬುದು ಕಂಡುಬರುತ್ತದೆ. ಇವರು ಮೂಲತಃ ಸುಂಕದ ಅಧಿಕಾರಿಯಾಗಿದ್ದು ಮುಂದೆ 'ದಂಡನಾಯಕ'ರಾಗಿ ಬಡತಿ ಹೊಂದಿರಬೇಕು. ಇಲ್ಲವೆ ಪೆರ್ಗಡೆಯ ಮನೆತನಕ್ಕೆ ಸಂಬಂಧಪಟ್ಟಿದ್ದು 'ದಂಡನಾಯಕ' ಹುದ್ದೆಯನ್ನು ಅಲಂಕರಿಸಬೇಕು.

ಪೆರ್ಗಡೆಗಳು-ಸುಂಕ :

'ಪೆರ್ಗಡೆ'ಗಳು ವಿವಿಧ ತೆರನಾದ ಸುಂಕವನ್ನು ಸಂಗ್ರಹಿಸುವ ಅಧಿಕಾರಿಗಳಾಗಿದ್ದಾರೆ. ಹೆಜ್ಜುಂಕದ ಪೆರ್ಗಡೆ ಕೇತುಮಲ್ಲಸೆಟ್ಟಿ,[೧೬೮] ಸುಂಕವೆರ್ಗ್ಗಡೆ ಬದ್ದರಸ[೧೬೯] ಸುಂಕದ ಪೆರ್ಗ್ಗಡೆ ಶಂಕರಯ್ಯನಾಯಕರು[೧೭೦] ಸುಂಕವೆರ್ಗಡೆಯರಾಗಿದ್ದಾರೆ. ಇಲ್ಲಿ ಕೆಲವರು ಒಂದೇ ಸುಂಕವನ್ನು ಸಂಗ್ರಹಿಸುವ ಅಧಿಕಾರಿಯಾಗಿದ್ದಾರೆ ಮತ್ತೆ ಕೆಲವರು ಒಂದಕ್ಕಿಂತ ಹೆಚ್ಚು ಸುಂಕವನ್ನು ಸಂಗ್ರಹಿಸುವ ಅಧಿಕಾರಿಯಾಗಿದ್ದಾರೆ. ಅಂದು ಇದ್ದ ವಿವಿಧ ಸುಂಕಗಳೆಂದರೆ ಪೆರ್ಜುಂಕ, ಬಿಲ್ಕೊಡೆ, ವಡ್ಡರಾವುಳ, ಪನ್ನಾಯ ಮೊದಲಾದವುಗಳಾಗಿವೆ.

ಪೆರ್ಗಡೆಗಳ ಸಂಬಳ :

ಇವರು ಸಂಗ್ರಹಿಸುವ ಸುಂಕದಲ್ಲಿ ಕೆಲವು ಭಾಗ ಇವರಿಗೆ ಸಂಬಳವಾಗಿ ಸಲ್ಲುತ್ತಿತ್ತು. ತಮಗೆ ಸೇರಬೇಕಾದ ಸುಂಕದಲ್ಲಿಯ ಒಂದಿಷ್ಟು ಭಾಗವನ್ನು ಇವರು ದೇವರಿಗೆ ದಾನವಾಗಿ ಬಿಟ್ಟುದುದನ್ನು ಅನೇಕ ಶಾಸನಗಳಲ್ಲಿ ಕಾಣುತ್ತೇವೆ. ಇದರಿಂದ ಇವರಿಗೆ ಸಂಗ್ರಹಿಸಿದ ಸುಂಕದಲ್ಲಿ ಕೆಲವು ಭಾಗ ಸಂಬಳವಾಗಿದ್ದಿತೆಂದೂ, ತಮ್ಮ ಭಾಗದಲ್ಲಿಯೇ ಒಂದಿಷ್ಟನ್ನು ದಾನಧರ್ಮ ಕಾರ್ಯಗಳಿಗೆ ಇವರು ಸಲ್ಲಿಸುತ್ತಿದ್ದರೆಂದು ಶಾಸನಗಳಿಂದ ತಿಳಿದು ಬರುತ್ತದೆ. ಶಾಸನಗಳಲ್ಲಿ ಕಂಡುಬರುವ ಪೆರ್ಗಡೆಗಳೆಂದರೆ ಮಹಾಪ್ರಧಾನ ಕಂಚೆಗೊಂಡ ಪುರದ ಹೆರ್ಗ್ಗಡೆ ದಂಡನಾಯಕ ವೆಚ್ಚಪ್ಪಯ್ಯ ಮಹಾಮಂಡಳೇಶ್ವರ ಮಲ್ಲಿಯಣನ ಕೆಳಗಿನ ಅಧಿಕಾರಿಯಾಗಿದ್ದನೆಂದು ಪಟಾನ್‌ಚೆರು ಶಾಸನ[೨೧] ತಿಳಿಸುತ್ತದೆ.

ಹೆಗ್ಗಡೆ ವುಜ್ಜಭಟ್ಟ :

ದಂಡನಾಯಕ ಯಿನ್ದರಾಣಿ ಭಟ್ಟಯ್ಯ ಮತ್ತು ಅವನ ಪೆರ್ಗಡೆ ವುಜ್ಜಭಟ್ಟ ಇವರು ರತ್ನಭೂಷಣ ವಿನಾಯಕನನ್ನು ಪ್ರತಿಷ್ಠಾಪಿಸಿ ಸಭಾಮಂಟಪವನ್ನು ಮತ್ತು ಒಂದು ಭಾವಿಯನ್ನು ಕಟ್ಟಿಸಿ ದೇವರ ಸೇವೆಗೆ ನಾಲ್ಕು ಪಣಗಳನ್ನು ನೀಡಿದರೆಂದು ರಾಗಿಮುಸಲವಾಡ ಶಾಸನವು[೨೨] ಉಲ್ಲೇಖಿಸಿದೆ.

ಪೆರ್ಗಡೆ ಮಾಚಿಯಣ್ಣ :

ಅಸುಂಡಿ ಶಾಸನದಲ್ಲಿ[೨೩] ಈತನ ಉಲ್ಲೇಖ ಬರುತ್ತಿದ್ದು, ಶಾಸನದಲ್ಲಿ ಈತನನ್ನು 'ನಿಪುಣೋತ್ತಮವೀಣ, ಬಹುಕೌಷಳಭಾವದ ಕಾವ್ಯಶಬ್ದವಾಕ್ಪತಿ ಚತುರೋಕ್ತಮ, ವಿಬುಧಸೇವ್ಯಂ ವಾಗ್ವಧೂಭೂಷಣಂ, ವಾಚಸ್ಪತಿ ಚತುರತೆಗೆ ದಧೀಚಿಯೆ ಪರಹಿತದೊಳತುಳಬಳರಿಪುಮದವತ್ ಕೀಚಕ ಭೀಮಂ ಪೆರ್ಗಡೆ ಮಾಚಂ' ಎಂದು ಹೇಳಿದೆ. ಅಲ್ಲದೆ ಕದಂಬ ತೈಲಪನು ಈತನಿಗೆ ಬನವಾಸಿಯ ನಾಡಾಧಿಕಾರವನ್ನು ಸಹ ನೀಡಿದನೆಂದು ತಿಳಿಸುತ್ತದೆ.

ಪೆರ್ಗಡೆ ಕೇತುಮಲ್ಲ ಸೆಟ್ಟಿ :

ಮಹಾಮಂಡಳೇಶ್ವರ ತೈಲಪದೇವರ ಹೆಜ್ಜುಂಕದ ಪೆರ್ಗಡೆ ಕೇತುಮಲ್ಲಿಸೆಟ್ಟಿ ಮದುಗುನ್ನೂರ ಪಟ್ಟವರ್ದ್ಧನ ಗೋಬಿನ್ದಘಯಿಸಾಸರಿಗೆ ದಾನಬಿಟ್ಟ ಉಲ್ಲೇಖವಿದೆ.[೨೪]

ಹೆಗ್ಗಡೆ ದುಗ್ಗರಸ :

ಮಹಾಮಂಡಳೇಶ್ವರ ತೈಲಪದೇವರ ಬಿಲುಕೊಡ ಹೆಗ್ಗಡೆ ದುಗ್ಗರಸರು ಮುದುಗುನ್ನೂರ ಪಟ್ಟವರ್ದ್ಧನ ಗೋಬಿನ್ದಘಯಿಸಾಸಗ್ಗ್ಗೆ ಖನ್ಡಿಕಕೆ ವಹಮಾನಮಾನವಾಗಿ ದಾನ ಬಿಟ್ಟರೆಂದು ತಿಳಿದುಬರುತ್ತದೆ.[೨೫]

ಹೆಗ್ಗಡೆ ನಾಗದೇವಯ್ಯ :

ನಾಡ ಹೆಗ್ಗಡೆ ದಂಡನಾಯಕ ನಾಗದೇವಯ್ಯನ ಉಪಸ್ಥಿತಿಯಲ್ಲಿ ಇಂಗಳೇಶ್ವರದ ನೀಲಕಂಠದೇವರಿಗೆ ದಾನಬಿಟ್ಟ ಉಲ್ಲೇಖವಿದೆ.[೧೨೬]

ಪೆರ್ಗಡೆ ವೈಜನಾಥಯ್ಯ :

ಅಥರ್ಗಾ ಶಾಸನದಲ್ಲಿ[೧೨೭] ತದ್ದವಾಡಿ ನಾಡನ್ನು ಆಳುತ್ತಿದ್ದ ಪೆರ್ಗಡೆ ದಂಡನಾಯಕ ವೈಜನಾಥಯ್ಯನ ಉಲ್ಲೇಖವಿದೆ.

ಸುಂಕವೆರ್ಗ್ಗಡೆ ಬವ್ವರಸ :

'ಕಂದೂರನಾಡ ಸುಂಕವೆರ್ಗ್ಗಡೆ ಬವ್ವರಸ' ಎಂದು ಗಂಗಾಪುರಂ ಶಾಸನದಲ್ಲಿ[೧೨೮] ಇವನನ್ನು ಕರೆಯಲಾಗಿದೆ. ಈತ ತೈಲಪನ ದಂಡನಾಯಕನಾದ ಜಯಾನಂದ ಭಟ್ಟರ ಸಾನಿಧ್ಯದಲ್ಲಿ ಬವ್ವರಸ ಮತ್ತು ಇತರ ಅಧಿಕಾರಿಗಳು ಸಮಸ್ತ ಸೆಟ್ಟಿಕಾರರೂ ಕಟ್ಟೆಯ ಸೋಮನಾಥ ದೇವರ ನಂದಾದೀವಿಗೆಗೆ ಧೂಪಕ್ಕೆ ವಡ್ಡರಾವುಳ ಮತ್ತು ಪೆರ್ಜ್ಜುಂಕದಲ್ಲಿ ತಿಂಗಳಿಗೆ ಇಷ್ಟೆಂದು ದತ್ತಿ ನೀಡಿದುದನ್ನು ಕರ್ತವಾದಿದೇವ ಎಂಬುವನು ಪಡೆದನೆಂದು ತಿಳಿಸುತ್ತದೆ.

ಪೆರ್ಗಡೆ ಬೆನಿವಣ :

ಮಹಾಮಂಡಳೇಶ್ವರ ಬಾಚರಸನ ಪೆರ್ಗಡೆಯಾಗಿ ಬೆನಿವಣನೆಂಬುವವನಿದ್ದ . ಇವನ ಪತ್ನಿ ಚನ್ದಿಯಕ್ಕ ಇವರ ಮಗ ನಾಚಣ ಬೆನಿಮಯನು ಕೇಶವದೇವರ ದೇವಾಲಯಕ್ಕೆ ಮಹಾಮಂಡಳೇಶ್ವರ ಕುರುವಡದ ಬಾಚರಸನು ದೇವಾಲಯದ ಅಂಗಭೋಗ ಮಂದಿರದ ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆ ಪೂಜಾರಿಗಳ ಜೀವಿತಕ್ಕೆಂದು ಆರುಮತ್ತರು ಭೂಮಿಯನ್ನು ಮತ್ತು ನಂದಾದೀವಿಗೆಗೂ ಭೂಮಿಯನ್ನು ದಾನಬಿಟ್ಟನೆಂದು ಮುರಹರಿ ಶಾಸನ[೧೨೯] ದಾಖಲಿಸಿದೆ.

ಹೆಗ್ಗ್ಗಡೆ ವಾವಣಯ್ಯ :

'ಹೆಗ್ಗ್ಗಡೆ ವಾವಣಯ್ಯ'ನ ಉಲ್ಲೇಖ ಮಲ್ಲಾಬಾದ ಶಾಸನದಲ್ಲಿ[೧೩೦] ಬರುತ್ತದೆ. ಈತನು ಮಹಾಮಂಡಳೇಶ್ವರ ಎಳಮೇಲ ಸೋವಿದೇವರಸನ ಕೈಕೆಳಗಿನ ಅಧಿಕಾರಿಯಾಗಿದ್ದನು ಮತ್ತು ದಕ್ಷಿಣದ ವಾರಣಾಸಿ ಎನಿಸಿದ ಎಳರಾಮೆ ತೀರ್ಥದ ರಾಮೇಶ್ವರ ದೇವರ ನಿವೇದ್ಯಕ್ಕೆ ನಂದಾದೀವಿಗೆಗೆ ದಾನಬಿಟ್ಟ ಉಲ್ಲೇಖವೂ ಇದೆ.

ಹೆಗ್ಗ್ಡೆ ದಂಡನಾಯಕ ಅಲ್ಲಹುಲಿಯರಸ :

ಮಹಾಮಂಡಳೇಶ್ವರ ಸೋವಿದೇವರಸರ ತಾಯಿಯಾದ ಲೋಕಾದೇವಿಯರ ಮಹಾಪ್ರಧಾನ ಸರಗ-೫೦೦ರ ಹೆಗ್ಗ್ಡೆ, ದಂಡನಾಯಕ ಅಲ್ಲಹುಲಿಯರಸ ಮತ್ತು ಇತರರು ಸೇರಿ ಶ್ರೀಮಕ್ಕದಂಬೇಶ್ವರ ದೇವರ ಜೀರ್ಣೋದ್ಧಾರಕ್ಕೆ, ಪೂಜೆ, ನಿವೇದ್ಯ, ಧೂಪ, ದೀಪಕ್ಕೆ ದಾನ ನೀಡಿದ ವಿವರವನ್ನು ಸಿರಿವಾಳ ಶಾಸನವು[೮೧] ತಿಳಿಸುತ್ತದೆ.

ಹೆಗ್ಗಡೆ ಮಲ್ಲಿಯಣ್ಣ ನಾಯಕ :

ಹನ್ನಿಪಳ್ಳಿಯ ಹೆಗ್ಗಡೆ ಮಲ್ಲಿಯಣ್ಣನಾಯಕ ಮೊದಲಾದವರು ಸೇರಿ ಮಾಣಿಕೇಶ್ವರ ದೇವರ ನಂದಾದೀಪಕ್ಕೆ ದಾನ ನೀಡಿದ ವಿವರ ಅಣದೂರ ಶಾಸನದಲ್ಲಿ[೮೨] ಬಂದಿದೆ.

ಸುಂಕದ ಪೆರ್ಗ್ಗ್ಡೆ ಶಂಕರಯ್ಯ ನಾಯಕ :

ಮನ್ನೂರ ಶ್ರೀ ಸ್ವಯಂಭು ದೇವರ ನಂದಾದೀವಿಗೆಗೆ, ಚೈತ್ರ ಪವಿತ್ರಕ್ಕೆ ಸುಂಕದ ಪೆರ್ಗ್ಗ್ಡೆ ಶಂಕರಯ್ಯ ನಾಯಕರು ದಾನ ಬಿಟ್ಟ ಉಲ್ಲೇಖ ಮದನಬಾವಿ ಶಾಸನದಲ್ಲಿದೆ.[೮೩]

ಹೆಗಡೆ-ಚವುಡಣ :

ಮಹಾಮಂಡಳೇಶ್ವರ ಬೂಚಿದೇವನು ಮುದುಗಂದೂರು-೩೦೦ರಲ್ಲಿ ರಾಜ್ಯಭಾರ ಮಾಡುತ್ತಿದ್ದಾಗ ಹೆಗಡೆ ಚವುಡಣನು ಮಾರಟೇಶ್ವರ ದೇವರ ಹಡಪಕ್ಕೆ ಒಂದು ಮತ್ತರು ಹೊಲವನ್ನು ನೀಡಿದನೆಂದು ಕಲ್ಲೂರು ಶಾಸನ[೮೪] ತಿಳಿಸುತ್ತದೆ.

ಹೆಗ್ಗ್ಡೆ ದಂಡನಾಯಕ ಸಂಬುದೇವ :

ಈತನ ಉಲ್ಲೇಖ ಉರುವಕೊಂಡ[೮೫] ಶಾಸನದಲ್ಲಿ ಬರುತ್ತದೆ. 'ಹೆಗ್ಗ್ಡೆ ಗುತ್ತಿಯ ದಣ್ಡನಾಯಕಂ ಸಂಬುದೇವನುಂ' ಎಂದಿದೆ. ಅಂದರೆ ಈತ ಗುತ್ತಿಯ ಹೆಗ್ಗಡೆ ಮತ್ತು ದಂಡನಾಯಕನಾಗಿದ್ದನೆಂದು ಹೇಳಬಹುದು.

ಹೆಗ್ಗಡೆ ರಾವಸೆಟ್ಟಿ :

ಈತನ ಉಲ್ಲೇಖ ಅರೆ ಶಾಸನದಲ್ಲಿ[೮೬] 'ಕೊಂಡಿಪಟ್ಟಣದಾದಿತ್ಯಗೃಹದ ಸಾಸನಿಗಂ ಹೆಗ್ಗಡೆ ರಾವಸೆಟ್ಟಿಯುಂ' ಎಂದಿದೆ. ರಾವಸೆಟ್ಟಿ ಮತ್ತು ಇತರರು ಕೂಡಿ ಕೊಲ್ಹಾಪುರದ ಶ್ರೀರೂಪನಾರಾಯಣ ಬಸದಿಯಾಚಾರ್ಯ ಶ್ರೀ ಶೃತಕೀರ್ತಿ ತ್ರೈವಿದ್ಯದೇವರಿಗೆ ದಾನ ನೀಡಿದರೆಂದು ತಿಳಿಸುತ್ತದೆ.

ಹೆಗ್ಗಡೆ ನಲ್ಲಪಯ್ಯನಾಯಕ :

'ಸಾದಬಣ್ಣಿಗೆಯಧಿಕಾರಿ ಪೆರ್ಗ್ಗಡೆ ನಲ್ಲಪಯ್ಯ ನಾಯಕರು' ಎಂದು ರಾಚೂರು ಶಾಸನದಲ್ಲಿ[೧೮೭] ಉಲ್ಲೇಖಗೊಂಡಿರುವ ನಲ್ಲಪಯ್ಯ ನಾಯಕ ರಾವಿತೋಱುತಿಯ ಮಲ್ಲಿಕಾರ್ಜುನ ದೇವರ ಸೇವೆಗೆ ಕೆಲವು ದತ್ತಿಗಳನ್ನು ಕೊಟ್ಟುದುದನ್ನು ದಾಖಲಿಸಿದೆ.

ಪೆರ್ಗ್ಗಡೆ ಮಲ್ಲಿಯಣ :

ಲಕ್ಷ್ಮೇಶ್ವರ ಶಾಸನದಲ್ಲಿ[೧೮೮] ಪೆರ್ಗಡೆ ಮಲ್ಲಿಯಂಣನು, ಲಕ್ಕಿಸೆಟ್ಟಿ ಸಮಸ್ತ ದೇವಪುತ್ರಕರು ಕೂಡಿ ಗೊಗ್ಗಿಯ ಬಸದಿಯಾಚಾರ್ಯ ಹೇಮದೇವಬಾದ್ಯರಿಗೆ ಮನೆ, ಭೂಮಿಯನ್ನು ದಾನ ಬಿಟ್ಟ ಉಲ್ಲೇಖವಿದೆ.

ಸುಂಕವೆರ್ಗಡೆ ಮಾದೆಯನಾಯಕ :

ಸಗರ-೫೦೦ರ ಬಾಡದ ಪೆಜ್ಜುಂಕದ ಸುಂಕವೆರ್ಗ್ಗಡೆ ಮಾದೆಯನಾಯಕನ ಉಲ್ಲೇಖ ಮುದನೂರು ಶಾಸನ[೧೮೯]ದಲ್ಲಿದ್ದು ಪೆಜ್ಜುಂಕ, ಸಾರಿಗೆ ಬೀರವಣ ಸೇಸೆ, ಕಾಹುಕಾಣಿಕೆ, ಬಿಳ್ಕೊಡೆ, ವಡ್ಡರಾವುಗಳನ್ನು ದತ್ತಿಯಾಗಿ ಬಿಟ್ಟ ವಿವರವಿದೆ.

ಸುಂಕವೆರ್ಗ್ಗಡೆ ನಾಗೆಯನಾಯಕ :

ಮುದನೂರು ಶಾಸನದಲ್ಲಿ[೧೯೦] ''ಹಗರಟ್ಟಿಗೆನಾಡ ಹೆಜ್ಜುಂಕದ ಸುಂಕವೆರ್ಗ್ಗಡೆ'' ಎಂದು ಉಲ್ಲೇಖಿತನಾಗಿದ್ದು ಹಲವು ಸುಂಕಗಳನ್ನು ಬಿಟ್ಟ ವಿವರವಿದೆ.

ಅಡಿ ಟಿಪ್ಪಣಿಗಳು :

೧. ಎಸ್. ಆಯ್. ಆಯ್. ಸಂ. XVIII ನಂ. ೧೩೩, ಅಸುಂಡಿ, ಕ್ರಿ.ಶ. ೧೧೨೭, ಡಿಸೆಂಬರ್ ೨೫.

೨. *ಬೆಳಗುತ್ತಿಯ ಸಿಂದರು*, ಗೋಪಾಲ ಬಾರಾ, ಪು. ೧೪೭, Journal of the Karnataka University, Humanitics, Vol. X, 1996.

೩. ಕಲಬುರ್ಗಿ ಎಂ. ಎಂ., (ಸಂ), *ಧಾರವಾಡ ತಾಲೂಕಿನ ಶಾಸನಗಳು*, ನಂ. ೬೭, ಸಿದ್ದಾಪುರ, ಕ್ರಿ.ಶ. ೧೧೩೫, ಜನೆವರಿ, ೧೬.

೪. ಉಪಾಧ್ಯ ಜಿ. ಎನ್. (ಸಂ), *ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ*-೬, ನಂ. ೧೩೭, ಔರಾದ ಕ್ರಿ.ಶ., ೧೧೩೫, ಮಾರ್ಚ್, ೧೧.

೫. ಎಸ್. ಆಯ್. ಆಯ್. ಸಂಪುಟ-XVIII, ನಂ. ೧೩೩, ಅಸುಂಡಿ, ಕ್ರಿ.ಶ. ೧೧೨೭, ಡಿಸೆಂಬರ್ ೨೫.

೬. ಅದೇ, ನಂ. ೧೦೧, ಕಾಮಧೇನು, ಕ್ರಿ.ಶ. ೧೧೨೯, ಮಾರ್ಚ್ ೨೩.

೭. ನಾಗಯ್ಯ.ಜಿ.ಎಂ., *ಆರನೆಯ ವಿಕ್ರಮಾದಿತ್ಯನ ಶಾಸನಗಳು- ಒಂದು ಅಧ್ಯಯನ*, ೧೯೯೨ ಪು.೧೫೩.

೮. Gopal.B.R., *Minor Dynasities of South India Karnatak*, Madaras era 1982 p. 28-75.

೯. ನಾಗಯ್ಯ.ಜಿ.ಎಂ., *ಆರನೆಯ ವಿಕ್ರಮಾದಿತ್ಯನ ಶಾಸನಗಳು: ಒಂದು ಅಧ್ಯಯನ*, ಪು. ೧೫೫ ಬೆಳಗಾವಿ, ೧೯೯೨.

೧೦. ಎಸ್.ಆಯ್.ಆಯ್., ಸಂಪುಟ-XVIII, ನಂ. ೧೩೩, ಅಸುಂಡಿ, ಕ್ರಿ.ಶ.೧೧೨೭, ಡಿಸೆಂಬರ್೨೫.

೧೧. ಎಲಿಗಾರ ಚನ್ನಕ್ಕ, *ಹಾನಗಲ್ಲ ಕದಂಬರು*, ಪು. ೫೬.

೧೨. ಎ. ಕ. ಸಂಪುಟ-VII, ನಂ. ೪೭, ಹೊನ್ನಾಳಿ, ಕ್ರಿ.ಶ. ೧೧೩೦.

೧೩. ಅದೇ, ಸೊರಬ, ನಂ. ೧೪೧, ಕ್ರಿ.ಶ. ೧೨೨೮.

೧೪. ಎಂ. ಎ. ಆರ್., ನಂ. ೭, ೧೯೩೦.

೧೫. ಎ. ಆರ್. ಆಯ್.ಇ., ೧೯೫೭-೫೮, ನಂ. ೨೭೮, ಹಿರೆಕೇರೂರ, ಡಿ.ಕೆ.ಡಿ. ೫೬೩, ೨ ನೋಟ್-೪.

೧೬. Gopal.B.R., *Minor Dynasties of South India Karnatak*, Vol. I, p. 48.

೧೭. ಎಸ್. ಆಯ್. ಆಯ್., ಸಂಪುಟ-XV, ನಂ. ೧೬, ಮದನಬಾವಿ, ಕ್ರಿ.ಶ. ೧೧೩೮, ಜನೆವರಿ, ೨೭.

೧೮. ಕೆ. ಆಯ್., ಸಂಪುಟ-V, ನಂ. ೯೩, ಗೌಳಿಹಳ್ಳಿ, ಕ್ರಿ.ಶ. ೧೧೮೩, ಫೆಬ್ರುವರಿ, ೭.

೧೯. ಕಲಬುರ್ಗಿ, ಎಂ. ಎಂ., (ಸಂ), *ಧಾರವಾಡ ತಾಲೂಕಿನ ಶಾಸನಗಳು*, ನಂ. ೬೭, ಸಿದ್ದಾಪುರ, ಕ್ರಿ.ಶ. ೧೧೩೫, ಜನೆವರಿ, ೧೬.

೨೦. ಕೆ. ಆಯ್., ಸಂಪುಟ-V, ನಂ. ೯೩, ಗೌಳಿಹಳ್ಳಿ, ಕ್ರಿ.ಶ. ೧೧೮೩, ಫೆಬ್ರುವರಿ, ೭.

೨೧. ಎಸ್. ಆಯ್. ಆಯ್., ಸಂಪುಟ-XI (ii), ನಂ. ೧೫೪, ಕನಕೂರು, ಕ್ರಿ.ಶ. ೧೧೦೪, ಜನೆವರಿ-೧೧.

೨೨. ಕಲಬುರ್ಗಿ, ಎಂ. ಎಂ., (ಸಂ), *ಧಾರವಾಡ ತಾಲೂಕಿನ ಶಾಸನಗಳು,* ನಂ. ೬೭, ಸಿದ್ದಾಪುರ, ಕ್ರಿ.ಶ. ೧೧೩೫, ಜನೆವರಿ, ೧೬.

೨೩. ಎಸ್. ಆಯ್. ಆಯ್., ಸಂಪುಟ-XV, ನಂ. ೧೬, ಮದನಬಾವಿ, ಕ್ರಿ.ಶ. ೧೧೩೮, ಜನೆವರಿ, ೨೭.

೨೪. ಕೆ. ಆಯ್., ಸಂಪುಟ-V, ನಂ. ೯೩, ಗೌಳಿಹಳ್ಳಿ, ಕ್ರಿ.ಶ. ೧೧೮೩, ಫೆಬ್ರುವರಿ, ೭.

೨೫. Gopal.B.R., *Minor Dynasties of South India Karnatak,* Vol. I, p. 28-75.

೨೬. Desai, P.B., (Ed.), *Corpus of Inscriptions in the Kannada Districts of Hyderabad State,* No.9, ಲಿಂಗಸೂರು, ಕ್ರಿ.ಶ. ೧೧೨೪, ಡಿಸೆಂಬರ್ ೨೪.

೨೭. Gopal.B.R., *Minor Dynasties of South India Karnatak,* Vol. I, p. 72.

೨೮. ಹಿರೇಮಠ, ಬಿ., *ಕುರಗೋಡಿನ ಸಿಂಧರು : ಒಂದು ಅಧ್ಯಯನ,* ಪು. ೨೭.

೨೯. ಶಿರೂರ, ಬಿ.ವ್ಹಿ., *ಯಲಬುರ್ಗಿಯ ಸಿಂಧರು,* ಪು. ೨.

೩೦. Desai Dinakara, *Mahamandalesvaras Under Chalukyas of Kalyana,* p. 88.

೩೧. ಎಸ್. ಆಯ್. ಆಯ್., ಸಂಪುಟ- XI (II), ನಂ. ೧೬, ಸವಡಿ, ಕ್ರಿ.ಶ. ೧೦೮೩, ಮಾರ್ಚ್, ೧೧.

೩೨. ಕೆ. ಆಯ್., ಸಂಪುಟ-V, ನಂ. ೭೨, ಹಂಚಿನಾಳ,

೩೩. ಎಸ್. ಆಯ್. ಆಯ್., ಸಂಪುಟ-XV, ನಂ. ೪೨, ನರೇಗಲ್,

೩೪. ಅದೇ, ನಂ. ೪೨, ನರೇಗಲ್,

೩೫. ಅದೇ, ಸಂಪುಟ- XV (II), ನಂ. ೧೨೯, ಸವಡಿ.

೩೬. ಶಿರೂರ ಬಿ.ವ್ಹಿ., *ಯಲಬುರ್ಗಾ ಸಿಂದರು,* ಪು. ೨೭.

೩೭. *ಗೋಪಾಲ ಬಾರಾ, ಬೆಳಗುತ್ತಿಯ ಸಿಂದರು,* Journal of the Karnataka University, Humanitics, Vol. X, 1996, ಪು. ೧೪೭.

೩೮. Desai Dinakara, *Mahamandalesvaras Under Chalukyas of Kalyani,* p. 64.

೩೯. ಕೆ. ಆಯ್., ಸಂಪುಟ-VI, ನಂ. ೨೫, ನಾಗವಂದ ಕ್ರಿ.ಶ. ೧೧೨೮ ನವ್ಹೆಂಬರ್, ೮.

೪೦. ಗೋಪಾಲ ಬಾರಾ, *ಬೆಳಗುತ್ತಿಯ ಸಿಂದರು,* Journal of the Karnataka University, Humanitics, Vol. X, 1996, ಪು. ೧೫೩.

೪೧. ಬಾ. ರಾ. ಗೋಪಾಲ (ಸಂ), *ಮಾನವಿಕ ಕರ್ನಾಟಕ,* ಸಂ.೪, ಸಂ.೨. ಪು. ೫೩.

೪೨. *ರಾಜೋಲ ಗ್ರಾಮದ ಸಿಂಧರ ಶಾಸನ,* ಕರ್ನಾಟಕ ಭಾರತಿ, ಸಂಚಿಂಕೆ- ೧, ಸಂಪುಟ-೨, ಪು. ೧೫೦-೧೫೩.

೪೩. ಹಿರೇಮಠ ಚನ್ನಬಸಯ್ಯ, *ಕುರಗೋಡು ಸಿಂದರು-ಒಂದು ಅಧ್ಯಯನ,* ಪು. ೪೬.

೪೪. B. No. 220/56-57 KRI, Collection 1139 Ref : Gopal B. R. *Minor Dynasties in Karnataka,* p. 118.

೪೫. B. No. 220/56-57 KRI Collection ನಾರಾಯಣಪುರ, ಕ್ರಿ.ಶ. ೧೧೨೯.

೪೬. ಎಸ್. ಆಯ್. ಆಯ್., ಸಂಪುಟ-IX (I), ನಂ. ೨೨೬, ಕರಕಂಠಪುರ, ಕ್ರಿ.ಶ. ೧೧೩೨, ಮಾರ್ಚ್ ೨೩.

೪೭. ಹಿರೇಮಠ ಚನ್ನಬಸವಯ್ಯ, *ಕುರಗೋಡು ಸಿಂದರು- ಒಂದು ಅಧ್ಯಯನ,* ಪು. ೮೧-೮೨.

೪೮. ದೇವರ ಕೊಂಡಾರೆಡ್ಡಿ (ಸಂ), *ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ-೧* (ಬಿ.ಜಿ.) ನಂ. ೪೦, ಕೊಂಚಗೆರೆ, ಕ್ರಿ.ಶ. ೧೧೨೦, ಡಿಸೆಂಬರ್ ೨೨.

೪೯. ಅದೇ,

೫೦. ಅದೇ, ಡಿಸೆಂಬರ್ ೨೫.

೫೧. ಅದೇ, ನಂ. ೩, ಕೊಳೂರು, ಕ್ರಿ.ಶ. ೧೧೪೭, ಡಿಸೆಂಬರ್ ೨೫.

೫೨. ಅದೇ, ನಂ. ೫೯, ಬೈಲೂರು, ಕ್ರಿ.ಶ. ೧೧೩೧, ಜನವರಿ, ೨೫.

೫೩. ಅದೇ, ನಂ. ೪೦, ಕೊಂಚಗೇರಿ, ಕ್ರಿ.ಶ. ೧೧೪೨, ನವ್ಹೆಂಬರ್ ೨೫.

೫೪. Gopal.B.R., *Minor Dynasties of South India Karnatak,* p. 158.

೫೫. ಎಸ್. ಆಯ್. ಆಯ್., ಸಂಪುಟ-XX, ನಂ. ೧೦೪, ಮಲಘಾನ, ಕ್ರಿ.ಶ. ೧೧೩೩, ಆಗಸ್ಟ್, ೩.

೫೬. ಸಂಯುಕ್ತ ಕರ್ನಾಟಕ ದಿನಪತ್ರಿಕೆ, ದಿನಾಂಕ : ೧೩-೧೨-೧೯೯೮.

೫೭. ಗೋಗಿ ಹನುಮಾಕ್ಷಿ, (ಸಂ.), *ಕಲಬುರ್ಗಿ ಜಿಲ್ಲೆಯ ಶಾಸನಗಳು,* ನಂ. ೪೮, ಮಲ್ಲಾಬಾದ, ಕ್ರಿ.ಶ. ೧೧೩೬.

೫೮. ಉಪಾಧ್ಯ ಜಿ. ಎನ್., *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೬,* ಪೀಠಿಕೆ-XXXIII.

೫೯. ಅದೇ, ನಂ. ೨೬, ಆರೆ, ಕ್ರಿ.ಶ. ೧೧೩೫, ಅಕ್ಟೋಬರ್ ೨೯.

೬೦. ಉಪಾಧ್ಯ ಜಿ. ಎನ್. (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೬,* ನಂ. ೧೩೭, ಔರಾದ ಕ್ರಿ.ಶ., ೧೧೩೫, ಮಾರ್ಚ್, ೧೧.

೬೧. ಕಲಬುರ್ಗಿ ಎಂ.ಎಂ. (ಸಂ), *ಕೊಲ್ಲಾಪುರ ನಿಂಬ ಸಾಮಂತ ಚರಿತೆ, ಪ್ರಸ್ತಾವನೆ,* ಪು. ೫-೬.

೬೨. ದೇಸಾಯಿ ಪಾಂಡುರಂಗರಾಯ, *ಕರ್ನಾಟಕದ ಕಲಚೂರಿಯರು,* ಪು. ೧೨-೧೭.

೬೩. ಅದೇ, ಪು. ೪೩.

೬೪. ಎಸ್. ಆಯ್. ಆಯ್., ಸಂಪುಟ-XV, ನಂ. ೧೨, ಇಂಗಳೇಶ್ವರ, ಕ್ರಿ.ಶ. ೧೧೨೮, ನವ್ಹಂಬರ್ ೮.

೬೫. ಅದೇ, ಸಂಪುಟ-XX, ನಂ. ೧೦೦, ಬಿಜಾಪುರ, ಕ್ರಿ.ಶ. ೧೧೨೯, ಜನವರಿ ೧೭.

೬೬. Gopal.B.R., *The Chalukyas of Kalyana and the Kalachuries,* p. 347-48.

೬೭. ದೇಸಾಯಿ ಪಾಂಡುರಂಗರಾಯ, *ಕರ್ನಾಟಕದ ಕಲಚೂರಿಯರು,* ಪು. ೩೭-೪೦.

೬೮. ಬಿ. ಕೆ. ನಂ. ೬೬, ೧೯೩೮-೩೯.

೬೯. ಉಪಾಧ್ಯ ಜಿ. ಎನ್. (ಸಂ), *ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ-೬*, ನಂ. ೧೩೭, ಔರಾದ ಕ್ರಿ.ಶ., ೧೧೩೫, ಮಾರ್ಚ್, ೧೧.

೭೦. ಅದೇ, ನಂ. ೧೩೪, ಸೊಲ್ಲಾಪುರ, ಕ್ರಿ.ಶ. ೧೧೩೬, ಜನೆವರಿ, ೩೦.

೭೧. ನಾಗಯ್ಯ ಜಿ. ಎಂ., *ಆರನೆಯ ವಿಕ್ರಮಾದಿತ್ಯನ ಶಾಸನಗಳು - ಒಂದು ಅಧ್ಯಯನ*, ಪು.೧೭೫.

೭೨. ಎ. ಕ. ಸಂಪುಟ-X, ಕಿತ್ತನಕೆರೆ, ಕ್ರಿ.ಶ. ೧೧೩೨, ಜೂನ್, ೧೫.

೭೩. ಅದೇ, ಸಂಪುಟ-VIII ಚಿಕ್ಕಕಡಲೂರು, ನಂ. ೧೩, ಕ್ರಿ.ಶ. ೧೧೩೦-೩೧.

೭೪. ಅದೇ, ಸಂಪುಟ-IX ಬೇಲೂರು, ನಂ. ೧೦೬, ಕ್ರಿ.ಶ. ೧೧೩೬ ಡಿಸೆಂಬರ್ ೨೫.

೭೫. ಹಿರೇಮಠ ಆರ್. ಸಿ., *ಕನ್ನಡ ಶಾಸನ ಸಂಪದ*, ನಂ. ೨೨, ಶ್ರವಣಬೆಳಗೊಳ, ಕ್ರಿ.ಶ. ೧೧೩೧.

೭೬. ಎಮ್. ಎ. ಆರ್., ೧೯೨೬, ತಗರೆ, ಕ್ರಿ.ಶ. ೧೧೩೩.

೭೭. ಎ. ಕ., ಸಂಪುಟ-IX ಹಾಸನ, ನಂ. ೧೯೩, ದಬ್ಬೆ ಅಗ್ರಹಾರ, ಕ್ರಿ.ಶ. ೧೧೩೮.

೭೮. ಅದೇ, ಸಂಪುಟ-VI ಕಡೂರು, ನಂ. ೬೯, ಹಳೆವೂರು, ಕ್ರಿ.ಶ. ೧೧೪೯.

೭೯. ಅದೇ, ಸಂಪುಟ-V ಹಾಸನ, ನಂ. ೧೧೪, ಪೂಮೆಗಾಮೆ, ಕ್ರಿ.ಶ. ೧೦೬೭.

೮೦. ಎಸ್. ಆಯ್. ಆಯ್., ಸಂಪುಟ-XI (II), Introduction (ಪೀಠಿಕೆ), ಪು. ೫.

೮೧. ಅದೇ, ಸಂಪುಟ- XX, ನಂ. ೯೯, ಲಕ್ಷ್ಮೇಶ್ವರ, ಕ್ರಿ.ಶ. ೧೧೨೮, ಜುಲೈ, ೧೧.

೮೨. ಅದೇ, ನಂ. ೧೦೭, ಲಕ್ಷ್ಮೇಶ್ವರ, ಕ್ರಿ.ಶ. ೧೧೩೮, ನವ್ಹೆಂಬರ್ ೧೮.

೮೩. ಗಣೇಶ ಕೆ. ಆರ್. (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೫*, ಭಾಗ-೨, ನಂ. ೪೪೧, ಸನಿಗರಂ, ಕ್ರಿ.ಶ. ೧೧೨೮.

೮೪. ಅದೇ, ನಂ. ೩೬೨, ಕೊಲಿಮಿಗುಂಡ್ಲ, ಕ್ರಿ.ಶ. ೧೧೩೪, ಡಿಸೆಂಬರ್ ೨೪.

೮೫. ಗೋಗಿ ಹನುಮಾಕ್ಷಿ, (ಸಂ.), *ಸುರಪುರ ತಾಲೂಕಿನ ಶಾಸನಗಳು*, ನಂ. ೨೨, ಕಕ್ಕೇರಿ, ಕ್ರಿ.ಶ ೧೧೨೭, ಮಾರ್ಚ್, ೨೧.

೮೬. ಅದೇ, ನಂ. ೬೭, ಮದನೂರು, ಕ್ರಿ.ಶ. ೧೧೨೯, ಡಿಸೆಂಬರ್ ೨೪.

೮೭. ಗಣೇಶ ಕೆ. ಆರ್. (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೫*, ಭಾಗ-೨, ನಂ. ೬೦೪, ಪಟಾನ್‌ಚೆರು, ಕ್ರಿ.ಶ. ೧೧೨೭. ಫೆಬ್ರುವರಿ ೨೦.

೮೮. ಉಪಾಧ್ಯ ಜಿ. ಎನ್. (ಸಂ) *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೬*, ನಂ. ೭೨, ಕರಾಡಖೇಡ, ಕ್ರಿ.ಶ. ೧೧೩೦, ಡಿಸೆಂಬರ್ ೨೬.

೮೯. ಅದೇ, ನಂ. ೬೩, ಏರಿಗೆ, ಕ್ರಿ.ಶ. ೧೧೩೮, ಸೆಪ್ಟೆಂಬರ್ ೧.

೯೦. ಅದೇ, ನಂ. ೭೩, ಕರಾಡಖೇಡ, ಕ್ರಿ.ಶ. ೧೧೩೦, ಅಕ್ಟೋಬರ ೪.

೯೧. ಅದೇ, ನಂ. ೭೨, ಕರಾಡಖೇಡ, ಕ್ರಿ.ಶ. ೧೧೩೦, ಡಿಸೆಂಬರ್ ೨೬.

೯೨. ದೇವರಕೊಂಡಾರೆಡ್ಡಿ (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೭*, ನಂ. ೨೭, ಹಿರೇರಾಯಕುಂಪಿ, ಕ್ರಿ.ಶ. ೧೧೩೦, ಡಿಸೆಂಬರ್ ೨೫.

೯೩. ಉಪಾಧ್ಯ ಜಿ. ಎನ್. (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೬*, ನಂ. ೧೫, ನಾರಂಗವಾಡಿ, ಕ್ರಿ.ಶ. ೧೧೨೯, ಅಕ್ಟೋಬರ್ ೨೯.

೯೪. ದೇವರಕೊಂಡಾರೆಡ್ಡಿ (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೭*, ನಂ. ೬೭, ಕಲ್ಲೂರ, ಕ್ರಿ.ಶ. ೧೧೩೪, ನವ್ಹಂಬರ್ ೨೮.

೯೫. ಗೋಗಿ ಹನುಮಾಕ್ಷಿ, (ಸಂ.), *ಕಲಬುರ್ಗಿ ಜಿಲ್ಲೆಯ ಶಾಸನಗಳು*, ನಂ.೩, ನಿಂಬರಗಿ, ಕ್ರಿ.ಶ. ೧೧೩೪.

೯೬. ಗೋಪಾಲ, ಬಿ.ಆರ್., ಮಾನವಿಕ ಕರ್ನಾಟಕ, ಸಂ. ೩, ಸಂ. ೪, ಪು. ೨೩.

೯೭. ಎಸ್. ಆಯ್. ಆಯ್., ಸಂಪುಟ-IX (PI), ನಂ. ೨೨೭, ಚಿಲ್ಕಕುರು, ಕ್ರಿ.ಶ. ೧೧೩೨, ನವ್ಹೆಂಬರ್ ೯.

೯೮. ಗಣೇಶ ಕೆ. ಆರ್. (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೫*, ಭಾಗ-೨, ನಂ. ೩೦೧, ಪೆದ್ದತುಂಬಳಂ ಕ್ರಿ.ಶ. ೧೧೩೩, ಡಿಸೆಂಬರ್ ೨೩.

೯೯. ಅದೇ, ನಂ. ೩೭೩, ಪೆದ್ದಚಪ್ಪಲಿ, ಕ್ರಿ.ಶ. ೧೧೩೫, ಜನೆವರಿ, ೧೬.

೧೦೦. ಅದೇ, ನಂ. ೩೦೧, ಪೆದ್ದತುಂಬಳಂ ಕ್ರಿ.ಶ. ೧೧೩೩, ಡಿಸೆಂಬರ್ ೨೩.

೧೦೧. ಅದೇ, ನಂ. ೨೦೮, ನಿಟ್ಟೂರು.

೧೦೨. ದೇವರಕೊಂಡಾರೆಡ್ಡಿ (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೨*, ನಂ. ೧೬, ಕಲ್ಲೂರು, ಕ್ರಿ.ಶ. ೧೧೩೨, ಡಿಸೆಂಬರ್ ೨೪.

೧೦೩. ಗಣೇಶ ಕೆ. ಆರ್. (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೫*, ನಂ. ೫೬೯, ಕೋಲನುಪಾಕ, ಕ್ರಿ.ಶ. ೧೧೨೫, ಮಾರ್ಚ್, ೨೩.

೧೦೪. ಅದೇ, ನಂ. ೪೧೯, ಗುಡೂರು, ಕ್ರಿ.ಶ. ೧೧೨೪, ಡಿಸೆಂಬರ್ ೨೪.

೧೦೫. ಎಸ್. ಆಯ್. ಆಯ್., ಸಂಪುಟ-XX, ನಂ. ೧೦೦, ಬಿಜಾಪುರ, ಕ್ರಿ.ಶ. ೧೧೨೯, ಜನೆವರಿ ೧೭.

೧೦೬. ಗೋಗಿ ಹನುಮಾಕ್ಷಿ, (ಸಂ.), *ಕಲಬುರ್ಗಿ ಜಿಲ್ಲೆಯ ಶಾಸನಗಳು*, ನಂ. ೩, ನಂಬರಗಿ, ಕ್ರಿ.ಶ. ೧೧೩೪.

೧೦೭. ಅದೇ, ನಂ. ೩೨, ಸಿರಿವಾಳ, ಕ್ರಿ.ಶ. ೧೧೩೭.

೧೦೮. ಕೆ. ಆಯ್., ಸಂಪುಟ-V, ನಂ. ೨೪, ನರಗುಂದ, ಕ್ರಿ.ಶ. ೧೧೩೮, ಏಪ್ರಿಲ್ ೨೬.

೧೦೯. ಗೋಗಿ ಹನುಮಾಕ್ಷಿ, (ಸಂ.), *ಕಲಬುರ್ಗಿ ಜಿಲ್ಲೆಯ ಶಾಸನಗಳು*, ನಂ. ೧೭, ಸೇಡಂ, ಕ್ರಿ.ಶ. ೧೧೩೭.

೧೧೦. ಕೆ. ಆಯ್., ಸಂಪುಟ-V, ನಂ. ೨೪, ನರಗುಂದ, ಕ್ರಿ.ಶ. ೧೧೩೮, ಏಪ್ರಿಲ್ ೨೬.

೧೧೧. ದೇವರಕೊಂಡಾರೆಡ್ಡಿ (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೧*, ಕ.ವಿ.ವಿ.ಶಾ.ಸಂ. ೧, ನಂ. ೩೪, ರಾಗಿಮುಸಲವಾಡ, ಕ್ರಿ.ಶ. ೧೧೨೭, ಜುಲೈ ೧೧.

೧೧೨ ಎಸ್. ಆಯ್. ಆಯ್., ಸಂಪುಟ-XX, ನಂ. ೬೯, ಕೊಂಡಗುಳಿ, ಕ್ರಿ.ಶ. ೧೧೦೭, ಡಿಸೆಂಬರ್ ೧೬.

೧೧೩. ಎ.ಇ., ಸಂಪುಟ-XX-IV, ಕೊಂಡಗುಳಿ, ಕ್ರಿ.ಶ. ೧೧೩೨.

೧೧೪. ನಾಗಯ್ಯ ಜಿ. ಎಂ., *ಆರನೆಯ ವಿಕ್ರಮಾದಿತ್ಯನ ಶಾಸನಗಳು : ಒಂದು ಅಧ್ಯಯನ*, ಪು. ೨೯೪-೯೫.

೧೧೫. ದೇವರಕೊಂಡಾರೆಡ್ಡಿ (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ- ೧*, ನಂ. ೬೪, ಸಿಂಧವಾಳ, ಕ್ರಿ.ಶ. ೧೧೩೦, ಆಕ್ಟೋಬರ್, ೪.

೧೧೬. ಅದೇ, ನಂ. ೩೪, ರಾಗಿಮುಸಲವಾಡ, ಕ್ರಿ.ಶ. ೧೧೨೭, ಜುಲೈ, ೧೧.

೧೧೭. ಸಂಕ್ಷಿಪ್ತ ಕನ್ನಡ ನಿಘಂಟು, ಕನ್ನಡ-ಕನ್ನಡ, ಬೆಂಗಳೂರು, ಕನ್ನಡ ಸಾಹಿತ್ಯ ಪರಿಷತ್ತು, ೧೯೭೫, ಪು. ೮೬೪.

೧೧೮. ನಾಗಯ್ಯ ಜಿ. ಎಂ., *ಆರನೆಯ ವಿಕ್ರಮಾದಿತ್ಯನ ಶಾಸನಗಳು : ಒಂದು ಅಧ್ಯಯನ*, ಪು. ೨೩೦.

೧೧೯. ಎಸ್. ಆಯ್. ಆಯ್., ಸಂಪುಟ-XX, ನಂ. ೧೩೩, ಅಸುಂಡಿ, ಕ್ರಿ.ಶ. ೧೧೨೭, ಡಿಸೆಂಬರ್ ೨೫.

೧೨೦. ಉಪಾಧ್ಯ ಜಿ. ಎನ್. (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೬*, ನಂ. ೧೫, ನಾರಂಗವಾಡಿ, ಕ್ರಿ.ಶ. ೧೧೨೯, ಆಕ್ಟೋಬರ್ ೨೯.

೧೨೧. ಗಣೇಶ ಕೆ. ಆರ್. (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ- ೫*, ನಂ. ೪೧೧, ಸನಿಗರಂ, ಕ್ರಿ.ಶ. ೧೧೨೮.

೧೨೨. ಉಪಾಧ್ಯ ಜಿ. ಎನ್. (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೬*, ನಂ. ೨೬, ಆರೆ, ಕ್ರಿ.ಶ. ೧೧೩೫, ಆಕ್ಟೋಬರ್ ೨೯.

೧೨೩. ಗೋಗಿ ಹನುಮಾಕ್ಷಿ, (ಸಂ.), *ಸುರಪುರ ತಾಲೂಕಿನ ಶಾಸನಗಳು*, ನಂ. ೬೭. ಮುದನೂರು ಕ್ರಿ.ಶ. ೧೧೨೯, ಡಿಸೆಂಬರ್ ೨೪.

೧೨೪. ಚಿದಾನಂದಮೂರ್ತಿ ಎಂ., *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ*, ಕ್ರಿ.ಶ. ೪೫೦-೧೧೫೦, ಪು. ೩೫೬-೫೭.

೧೨೫. ಎಸ್. ಆಯ್. ಆಯ್., ಸಂಪುಟ-XVIII, ನಂ. ೧೩೩, ಅಸುಂಡಿ, ಕ್ರಿ.ಶ. ೧೧೨೭, ಡಿಸೆಂಬರ್ ೨೫.

೧೨೬. ಅದೇ, ಸಂಪುಟ-IX P(I), ನಂ. ೨೨೫, ಬೆಲೂರು, ಕ್ರಿ.ಶ. ೧೧೩೧, ಜನೆವರಿ, ೨೫.

೧೨೭. ಅದೇ, ಸಂಪುಟ- XX ನಂ. ೧೦೫, ಮಣ್ಣೂರು, ಕ್ರಿ.ಶ. ೧೧೩೪, ಜುಲೈ, ೨೩.

೧೨೮. ಕಲಬುರ್ಗಿ ಎಂ. ಎಂ., (ಸಂ.), *ಧಾರವಾಡ ತಾಲೂಕಿನ ಶಾಸನಗಳು,* ನಂ. ೬೭, ಸಿದ್ದಾಪುರ, ಕ್ರಿ.ಶ. ೧೧೩೫, ಜನವರಿ, ೧೬.

೧೨೯. ಎಸ್. ಆಯ್. ಆಯ್., ಸಂಪುಟ-XVIII ನಂ. ೧೩೫, ಬಂಕಾಪುರ, ಕ್ರಿ.ಶ. ೧೧೩೭, ನವ್ಹೆಂಬರ್, ೨೭.

೧೩೦. ಅದೇ,

೧೩೧. ಎಸ್. ಆಯ್. ಆಯ್., ಸಂಪುಟ-XV ನಂ. ೧೫, ಇಂಗಳೇಶ್ವರ, ಕ್ರಿ.ಶ. ೧೧೩೮, ನವ್ಹೆಂಬರ್ ೧೨.

೧೩೨. ಗಣೇಶ ಕೆ. ಆರ್. (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೫,* ನಂ. ೬೦೪, ಪಟಾನ್‌ಚೇರು, ಕ್ರಿ.ಶ. ೧೧೨೭, ಫೆಬ್ರುವರಿ, ೨೦.

೧೩೩. ಎಸ್. ಆಯ್. ಆಯ್., ಸಂಪುಟ-XVIII , ನಂ. ೧೩೯, ಬಂಕಾಪುರ, ಕ್ರಿ.ಶ. ೧೧೩೭, ಸಪ್ಟೆಂಬರ್ ೯.

೧೩೪, ಅದೇ, ಸಂಪುಟ-XV ನಂ. ೧೫, ಇಂಗಳೇಶ್ವರ, ಕ್ರಿ.ಶ. ೧೧೩೭, ಸಪ್ಟೆಂಬರ್, ೯.

೧೩೫. ನಾಗಯ್ಯ ಜಿ. ಎಂ., *ಆರನೆಯ ವಿಕ್ರಮಾದಿತ್ಯನ ಶಾಸನಗಳು- ಒಂದು ಅಧ್ಯಯನ,* ಪು. ೩೬೧.

೧೩೬. ಎಸ್. ಆಯ್. ಆಯ್., ಸಂಪುಟ-XV ನಂ. ೧೭, ಕುರ್ತಕೋಟಿ, ಕ್ರಿ.ಶ. ೧೧೩೮, ಏಪ್ರಿಲ್, ೨೬.

೧೩೭. Sircar, D. C., *Indian Epigraphical Glossary,* (Dandanayaka : A Leader of Forces, An Army Officer A Military Commander also called Dandanatha) p. 60.

೧೩೮. ಗಣೇಶ ಕೆ. ಆರ್. (ಸಂ), *ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ-೫,* ನಂ. ೫೬೫, ಕೋಲನುಪಾಕ.

೧೩೯. ಅದೇ, ನಂ. ೫೬೨, ಕೋಲನುಪಾಕ.

೧೪೦. ಎಸ್. ಆಯ್. ಆಯ್., ಸಂಪುಟ-XV ನಂ. ೧೯, ಹಲ್ಲೂರು.

೧೪೧. ದೇವರಕೊಂಡಾರೆಡ್ಡಿ (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೧,* ನಂ. ೩೪, ರಾಗಿಮುಸಲವಾಡ, ಕ್ರಿ.ಶ. ೧೧೩೭, ಜುಲೈ, ೧೦.

೧೪೨. ಗೋಗಿ ಹನುಮಾಕ್ಷಿ, (ಸಂ.), *ಕಲಬುರ್ಗಿ ಜಿಲ್ಲಾ ಶಾಸನಗಳು,* ನಂ. ೧೭. ಸೇಡಂ ಕ್ರಿ.ಶ. ೧೧೩೭.

೧೪೩. ದೇವರಕೊಂಡಾರೆಡ್ಡಿ (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-* ೭, ನಂ. ೪೪, ಕುರಡಿ, ಕ್ರಿ.ಶ. ೧೧೩೭, ಡಿಸೆಂಬರ್ ೨೫.

೧೪೪. ಎಸ್. ಆಯ್. ಆಯ್., ಸಂಪುಟ-XVIII ನಂ. ೧೩೪, ಮುದೇನೂರು, ಕ್ರಿ.ಶ. ೧೧೨೮, ಜುಲೈ ೨೭.

೧೪೫. ಅದೇ, ಸಂಪುಟ-XX ನಂ. ೧೦೭, ಲಕ್ಷ್ಮೇಶ್ವರ, ಕ್ರಿ.ಶ. ೧೧೩೮, ನವ್ಹೆಂಬರ್, ೧೮.

೧೪೬. ಕೆ. ಆಯ್., ಸಂಪುಟ- V, ನಂ. ೨೪, ನರಗುಂದ, ಕ್ರಿ.ಶ. ೧೧೩೮, ಏಪ್ರಿಲ್, ೨೬.

೧೪೭. ಅದೇ,

೧೪೮. ಎಸ್. ಆಯ್. ಆಯ್., ಸಂಪುಟ-XX ನಂ. ೧೦೭, ಲಕ್ಷ್ಮೇಶ್ವರ, ಕ್ರಿ.ಶ. ೧೧೩೮, ನವ್ಹೆಂಬರ್, ೧೮.

೧೪೯. ಗಣೇಶ ಕೆ. ಆರ್. (ಸಂ), *ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ- ೫*, ನಂ. ೫೦೩, ಗಂಗಾಪುರಂ, ಕ್ರಿ.ಶ. ೧೧೩೪, ಜೂನ್, ೪.

೧೫೦. ಎಸ್. ಆಯ್. ಆಯ್., ಸಂಪುಟ- XVIII, ನಂ. ೧೩೬, ಕ್ರಿ.ಶ. ೧೧೩೪, ಡಿಸೆಂಬರ್, ೨೨.

೧೫೧. ಗಣೇಶ ಕೆ. ಆರ್. (ಸಂ), *ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ- ೫*, ನಂ. ೧೧೪, ಉರುವಕೊಂಡ, ಕ್ರಿ.ಶ. ೧೧೩೫, ಮೇ. ೨೭.

೧೫೨. ಎಸ್. ಆಯ್. ಆಯ್., ಸಂಪುಟ-XV, ನಂ. ೧೨, ಇಂಗಳೇಶ್ವರ, ಕ್ರಿ.ಶ. ೧೧೨೮, ನವ್ಹೆಂಬರ್, ೮.

೧೫೩. ಕೆ. ಆಯ್., ಸಂಪುಟ-V, ನಂ. ೨೩, ತಿಳವಳ್ಳಿ, ಕ್ರಿ.ಶ. ೧೧೨೯, ಅಕ್ಟೋಬರ್, ೧೫.

೧೫೪. ದೇವರಕೊಂಡಾರೆಡ್ಡಿ (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೨*, ನಂ. ೧೬, ಕಲ್ಲೂರು, ಕ್ರಿ.ಶ. ೧೧೩೨, ಡಿಸೆಂಬರ್ ೨೪.

೧೫೫. ಎಸ್. ಆಯ್. ಆಯ್., ಸಂಪುಟ-XX, ನಂ. ೧೦೩, ಅಥರ್ಗಾ, ಕ್ರಿ.ಶ. ೧೧೩೩, ಜನೆವರಿ ೧೩.

೧೫೬. ಗೋಗಿ ಹನುಮಾಕ್ಷಿ, (ಸಂ.), *ಸುರಪುರ ತಾಲೂಕಿನ ಶಾಸನಗಳು*, ನಂ. ೬೭. ಮುದನೂರು ಕ್ರಿ.ಶ. ೧೧೨೯, ಡಿಸೆಂಬರ್ ೨೪.

೧೫೭. ಎಸ್. ಆಯ್. ಆಯ್., ಸಂಪುಟ-XX, ನಂ. ೧೦೭, ಲಕ್ಷ್ಮೇಶ್ವರ, ಕ್ರಿ.ಶ. ೧೧೩೮, ನವ್ಹೆಂಬರ್, ೧೮.

೧೫೮. ಅದೇ, ಸಂಪುಟ-XX P(I), ನಂ. ೧೦೩, ಚಿಲ್ಮಕುರ, ಕ್ರಿ.ಶ. ೧೧೩೨, ನವ್ಹೆಂಬರ್, ೯.

೧೫೯. ದೇವರಕೊಂಡಾರೆಡ್ಡಿ (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೨*, ನಂ. ೩೪, ರಾಗಿಮುಸಲವಾಡ, ಕ್ರಿ.ಶ. ೧೧೩೭, ಜುಲೈ ೧೦.

೧೬೦. ಗೋಗಿ ಹನುಮಾಕ್ಷಿ, (ಸಂ.), *ಸುರಪುರ ತಾಲೂಕಿನ ಶಾಸನಗಳು*, ನಂ. ೧೭. ಏವೂರು ಕ್ರಿ.ಶ. ೧೧೩೯, ಸಪ್ಟೆಂಬರ್, ೨೪.

೧೬೧. ಗಣೇಶ ಕೆ. ಆರ್. (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೫*, ನಂ. ೧೧೪, ಉರುವಕೊಂಡ, ಕ್ರಿ.ಶ. ೧೧೩೫, ಮೇ, ೨೭., ಗೋಗಿ ಹನುಮಾಕ್ಷಿ, (ಸಂ.), *ಕಲಬುರ್ಗಿ ಜಿಲ್ಲೆಯ ಶಾಸನಗಳು*, ನಂ. ೧೭, ಸೇಡಂ, ಕ್ರಿ.ಶ. ೧೧೩೭., ಗಣೇಶ ಕೆ. ಆರ್. (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೫*, ನಂ. ೨೦೮, ನಿಟ್ಟೂರು., ಅದೇ, ನಂ. ೫೬೫, ಕೋಲನುಪಾಕ, ಕ್ರಿ.ಶ. ೧೧೦೯-೧೧೧೦., ಅದೇ, ನಂ. ೫೬೨, ಕ್ರಿ.ಶ. ೧೧೧೧, ಡಿಸೆಂಬರ್ ೧೨.

೧೬೨. ಅದೇ, ನಂ. ೧೧೪, ಉರುವಕೊಂಡ, ಕ್ರಿ.ಶ. ೧೧೩೫, ಮೇ. ೨೭.

೧೬೩. ಅದೇ, ನಂ. ೫೬೫, ಕೋಲನುಪಾಕ, ಕ್ರಿ.ಶ. ೧೧೦೯-೧೧೧೦.

೧೬೪. ಗೋಗಿ ಹನುಮಾಕ್ಷಿ, (ಸಂ.), *ಕಲಬುರ್ಗಿ ಜಿಲ್ಲೆಯ ಶಾಸನಗಳು*, ನಂ. ೧೭, ಸೇಡಂ, ಕ್ರಿ.ಶ. ೧೧೩೭.

೧೬೫. Dikshit, G. S., : *Local Self Government in Medival Karnatak*, p. 37.

೧೬೬. ಚಿದಾನಂದಮೂರ್ತಿ ಎಂ., *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ*, ಕ್ರಿ.ಶ. ೪೫೦-೧೧೫೦, ಪು. ೩೩೦-೩೩೧.

೧೬೭. ನಾಗಯ್ಯ, ಚಿ. ಎಂ., *ಆರನೆಯ ವಿಕ್ರಮಾದಿತ್ಯನ ಶಾನಗಳು- ಒಂದು ಅಧ್ಯಯನ*, ಪು. ೩೫೦.

೧೬೮. ಎಸ್. ಆಯ್. ಆಯ್., ಸಂಪುಟ-XVIII, ನಂ. ೧೩೪, ಮುದೇನೂರು, ಕ್ರಿ.ಶ. ೧೧೨೮, ಜುಲೈ, ೨೭.

೧೬೯. ಗಣೇಶ ಕೆ. ಆರ್. (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೫*, ನಂ. ೫೦೩, ಗಂಗಾಪುರಂ, ಕ್ರಿ.ಶ. ೧೧೩೪, ಜೂನ್, ೮.

೧೭೦. ಎಸ್. ಆಯ್. ಆಯ್., ಸಂಪುಟ-XV, ನಂ. ೧೬, ಮದನಬಾವಿ, ಕ್ರಿ.ಶ. ೧೧೩೮, ಜನೆವರಿ, ೨೭.

೧೭೧. ಗಣೇಶ ಕೆ. ಆರ್. (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೫*, ನಂ. ೬೦೪, ಪಟಾನ್‌ಚೆರು, ಕ್ರಿ.ಶ. ೧೧೨೭, ಫೆಬ್ರುವರಿ, ೨೦.

೧೭೨. ದೇವರಕೊಂಡಾರೆಡ್ಡಿ (ಸಂ) *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ- ೧*, ನಂ. ೩೪, ರಾಗಿಮುಸಲವಾಡ, ಕ್ರಿ.ಶ. ೧೧೨೭, ಜುಲೈ, ೧೦.

೧೭೩. ಎಸ್. ಆಯ್. ಆಯ್., ಸಂಪುಟ-XVIII, ನಂ. ೧೩೩, ಅಸುಂಡಿ, ಕ್ರಿ.ಶ. ೧೧೨೭, ಡಿಸೆಂಬರ್, ೨೫.

೧೭೪. ಅದೇ, ನಂ. ೧೩೪, ಮುದೇನೂರು, ಕ್ರಿ.ಶ. ೧೧೨೮, ಜುಲೈ, ೨೭.

೧೨೫. ಅದೇ, ನಂ. ೧೩೪, ಮುದೇನೂರು, ಕ್ರಿ.ಶ. ೧೧೨೮, ಜುಲೈ, ೨೭.

೧೭೬. ಅದೇ, ಸಂಪುಟ-XV, ನಂ. ೧೨, ಇಂಗಳೇಶ್ವರ, ಕ್ರಿ.ಶ. ೧೧೨೮, ನವ್ಹೆಂಬರ್, ೮.

೧೭೭. ಅದೇ, ಸಂಪುಟ- XX, ನಂ. ೧೦೩, ಅಥರ್ಗಾ, ಕ್ರಿ.ಶ. ೧೧೩೩, ಜನೆವರಿ, ೧೩.

೧೭೮. ಗಣೇಶ ಕೆ. ಆರ್. (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ- ೫*, ನಂ. ೫೦೩, ಗಂಗಾಪುರಂ, ಕ್ರಿ.ಶ. ೧೧೩೪, ಜೂನ್, ೮.

೧೭೯. ದೇವರಕೊಂಡಾರೆಡ್ಡಿ (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ- ೭*, ನಂ. ೬, ಮುಕ್ಕುಂದಿ, ಕ್ರಿ.ಶ. ೧೧೩೪, ಜುಲೈ, ೨೩.

೧೮೦. ಗೋಗಿ ಹನುಮಾಕ್ಷಿ, (ಸಂ.), *ಕಲಬುರ್ಗಿ ಜಿಲ್ಲೆಯ ಶಾಸನಗಳು*, ನಂ. ೪೮, ಮಲ್ಲಾಬಾದ, ಕ್ರಿ.ಶ. ೧೧೩೬.

೧೮೧. ಅದೇ, ನಂ. ೩೨, ಸಿರಿವಾಳ, ಕ್ರಿ.ಶ. ೧೧೩೭.

೧೮೨. ಉಪಾಧ್ಯ, ಜಿ. ಎಸ್. (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೬*. ನಂ. ೯, ಅಣದೂರು, ಕ್ರಿ.ಶ. ೧೧೩೭.

೧೮೩. ಎಸ್. ಆಯ್. ಆಯ್., ಸಂಪುಟ-XV, ನಂ. ೧೬, ಮದನಬಾವಿ, ಕ್ರಿ.ಶ. ೧೧೩೮, ಜನೆವರಿ, ೨೭.

೧೮೪. ದೇವರಕೊಂಡಾರೆಡ್ಡಿ (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ- ೭*, ನಂ. ೬೭, ಕಲ್ಲೂರು, ಕ್ರಿ.ಶ. ೧೧೩೪, ನವ್ಹೆಂಬರ್, ೨೮.

೧೮೫. ಗಣೇಶ ಕೆ. ಆರ್. (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ- ೫*, ನಂ. ೧೧೪, ಉರುವಕೊಂಡ, ಕ್ರಿ.ಶ. ೧೧೩೫, ಮೇ. ೨೭.

೧೮೬. ಉಪಾಧ್ಯ, ಜಿ. ಎಸ್. (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ- ೬*, ನಂ. ೨೬, ಅರೆ, ಕ್ರಿ.ಶ. ೧೧೩೫, ಅಕ್ಟೋಬರ್, ೨೯.

೧೮೭. ಗಣೇಶ ಕೆ. ಆರ್. (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ- ೫*, ನಂ. ೫೦೯, ರಾಚೂರು, ಕ್ರಿ.ಶ. ೧೧೩೬.

೧೮೮. ಎಸ್. ಆಯ್. ಆಯ್., ಸಂಪುಟ-XX, ನಂ. ೧೦೨, ಲಕ್ಷ್ಮೇಶ್ವರ, ಕ್ರಿ.ಶ. ೧೧೩೨, ಮೇ, ೩೧.

೧೮೯. ಗೋಗಿ ಹನುಮಾಕ್ಷಿ, (ಸಂ.), *ಸುರಪುರ ತಾಲೂಕಿನ ಶಾಸನಗಳು*, ನಂ. ೬೭, ಮುದನೂರು, ಕ್ರಿ.ಶ. ೧೧೨೯, ಡಿಸೆಂಬರ್, ೨೪.

೧೯೦. ಅದೇ, ನಂ. ೬೭, ಮುದನೂರು, ಕ್ರಿ.ಶ. ೧೧೨೯, ಡಿಸೆಂಬರ್, ೨೪.

ಅಧ್ಯಾಯ -೫ Chapter -5

ಆರ್ಥಿಕ ಪರಿಸ್ಥಿತಿ

ಒಂದು ನಾಡಿನ ಅರ್ಥವ್ಯವಸ್ಥೆಯು ಅಲ್ಲಿಯ ಪ್ರಾಕೃತಿಕ ಸಂಪತ್ತುಗಳೊಂದಿಗೆ ಅವನ್ನೆಲ್ಲ ಸದುಪಯೋಗ ಪಡಿಸಿಕೊಳ್ಳುವ ಅಲ್ಲಿನ ಜನಗಳ ದುಡಿಮೆಯ ಪರಿಶ್ರಮವನ್ನೂ ಅವಲಂಬಿಸಿರುತ್ತದೆ. ಆದ್ದರಿಂದ ಆ ನಾಡಿನ ಆರ್ಥಿಕಾಭಿವೃದ್ಧಿ ಅಲ್ಲಿನ ಪ್ರಾಕೃತಿಕ ಸಂಪನ್ಮೂಲಗಳ ಪ್ರಮಾಣ ಮತ್ತು ಅವುಗಳನ್ನು ಬಳಸಿಕೊಳ್ಳುವ ಸಾಮರ್ಥ್ಯಕ್ಕನುಗುಣವಾಗಿ ನಿರ್ಧಾರಿತವಾಗುತ್ತದೆ. ಈ ಹಿನ್ನೆಲೆಯಲ್ಲಿ ಮೂರನೆಯ ಸೋಮೇಶ್ವರನ ಕಾಲದ ಆರ್ಥಿಕ ಸ್ಥಿತಿಗತಿಗಳನ್ನು ಇಲ್ಲಿ ಪರಿಚಯಿಸಲಾಗಿದೆ.

ಭೂಮಿ:

ಒಂದು ನಾಡಿನ ಜನರು ತಮ್ಮ ಜೀವನ ನಿರ್ವಹಣೆಗೆ ಮತ್ತು ಆರ್ಥಿಕ ಭದ್ರತೆಗೆ ಅಲ್ಲಿನ ಪ್ರಾಕೃತಿಕ ಸಂಪತ್ತಾದ ಭೂಮಿಯನ್ನು ಆಶ್ರಯಿಸಿರುವುದು ಕಂಡುಬರುತ್ತದೆ. ಪ್ರಕೃತಿದತ್ತವಾದ ನೀರು, ಅರಣ್ಯ, ಖನಿಜ ಮತ್ತು ಪ್ರಾಣಿ ಇತ್ಯಾದಿಗಳೆಲ್ಲವೂ ''ಭೂಮಿ''ಯಲ್ಲಿ ಸಮಾವೇಶವಾಗಿರುತ್ತದೆ. ಈ ಭೂಮಿಯೇ ಅಲ್ಲಿನ ಜನಗಳ ಜೀವನ ನಿರ್ವಹಣೆಗೆ ಆಧಾರ ಮತ್ತು ಆರ್ಥಿಕ ಭದ್ರತೆಯ ಸಾಧನವೂ ಆಗಿರುತ್ತದೆ. ಈ ಕಾಲದ ಬಹುಪಾಲು ಶಾಸನಗಳು ಭೂದಾನವನ್ನು ಪ್ರಸ್ತಾಪಿಸಿವೆ.[೧] ಇಂತಹ ದಾನದ ಭೂಮಿಯನ್ನು ಕೆಡಿಸಿದವರಿಗೆ ಒದಗುವ ಹಾನಿಯನ್ನು ಸಹ ಅವು ಎತ್ತಿ ಹೇಳಿವೆ.[೨] ಇದರಿಂದ ಆಕಾಲದಲ್ಲಿಯೂ ಭೂಮಿಗೆ ಬಹಳ ಪ್ರಾಧಾನ್ಯತೆ ಇದ್ದಿತು. ಭೂಮಿಯನ್ನು ಸ್ಥೂಲವಾಗಿ ವ್ಯವಸಾಯ ಯೋಗ್ಯ ಮತ್ತು ಬೀಳು ಭೂಮಿಯೆಂದು ವಿಭಾಗಿಸಬಹುದು. ಹೊಸ ಊರುಗಳ ಸೃಷ್ಟಿಯೊಂದಿಗೆ ಅವುಗಳ ಸುತ್ತಲೂ ವ್ಯವಸಾಯ ಯೋಗ್ಯವಾದ ಭೂಮಿಯ ನಿರ್ಮಾಣವೂ ಆಗುತ್ತಿತ್ತು. ಬೀಳು ಭೂಮಿಯನ್ನು ಸಾಮಾನ್ಯವಾಗಿ ಪಶುಪಾಲನೆಗೆ ಹುಲ್ಲುಗಾವಲೆಂದು ಉಪಯೋಗಿಸಲಾಗುತ್ತಿತ್ತು. ಒಂದು ವೇಳೆ ಬೀಳು ಭೂಮಿ ಇರದಿದ್ದರೆ ಅಂತಹ ಊರುಗಳಲ್ಲಿ ನೂರು ಬಿಲ್ಲಳತೆಯ ಭೂಮಿಯನ್ನು ಕಾಯ್ದಿಡಬೇಕೆಂದು ಯಾಜ್ಞವಲ್ಕ್ಯ ಸ್ಮೃತಿ ಹೇಳುತ್ತದೆ.[೩] ಈಗಲೂ ಹೆಚ್ಚಾಗಿ ಪ್ರತಿಯೊಂದು ಊರಿನಲ್ಲಿ ಗೋಮಾಳಕ್ಕಾಗಿ ಭೂಮಿಯನ್ನು ಕಾಯ್ದಿಡುವ ಪದ್ಧತಿಯನ್ನು ಕಾಣಬಹುದು. ಇಂಥ ಭೂಮಿಯು ಸರಕಾರದ ವಶದಲ್ಲಿರುತ್ತಿರಬೇಕು. ಮೂರನೆಯ ಸೋಮೇಶ್ವರನ ಕಾಲದ ಶಾಸನಗಳು ಮಳವ ಭೂಮಿ,[೪] ಹಾಳುಬೆರ್ಪ್ಪರಲು,[೫] ಹಾಳುಭೂಮಿ,[೬] ಹದವಕ್ಕದ ಪೊಲ,[೭] ಬಡ್ಡಗಿ ಪೊಲ್[೮] ದಾನವಾಗಿ ಬಿಟ್ಟಿರುವುದನ್ನು ಕಾಣುತ್ತೇವೆ. ದಾನ ಪ್ರಸಂಗದಲ್ಲಿ ''ಬೆಳೆಯುವ ಕೆಯ್''ಗಳಂತೆ ಇಂಥ ಬಂಜರ ಭೂಮಿಯನ್ನು ದಾನವಾಗಿ ಬಿಟ್ಟಿರುವುದನ್ನು ನೋಡಿದರೆ ಅವೆಲ್ಲ ಗೋಮಾಳಗಳಾಗಿರಬಹುದು ಇನ್ನುಳಿದ ಹೆಚ್ಚುವರಿ ಭೂಮಿಯನ್ನು ವ್ಯವಸಾಯಯೋಗ್ಯವನ್ನಾಗಿ ಮಾಡಲಾಗುತ್ತಿತ್ತು. ಕಷ್ಟದಿಂದ ಕೂಡಿದ ಬೀಳುಭೂಮಿಯ ಸಾಗುವಳಿ ಮೇಲೆ ಕರವಿನಾಯತಿಯನ್ನು ಕೊಟ್ಟು ಪ್ರೋತ್ಸಾಹಿಸುತ್ತಿದ್ದರ ಪ್ರಸ್ತಾಪ ಕೌಟಿಲ್ಯನ ಅರ್ಥಶಾಸ್ತ್ರದಲ್ಲಿದೆ.[೯]

ಭೂಮಿಯ ಪ್ರಕಾರಗಳು:

ವ್ಯವಸಾಯ ಯೋಗ್ಯವಾದ ಭೂಮಿಯನ್ನು ಸಾಮಾನ್ಯವಾಗಿ ''ಕೆಯ್''ಎಂದು ಕೆರೆಯಲಾಗುತ್ತಿದ್ದರೂ ಮಳೆಯನ್ನವಲಂಬಿಸಿ ಸಾಗುವಳಿ ಮಾಡುವ ಭೂಮಿಯನ್ನು ''ದೇವಮಾತೃಕ''ವೆಂದೂ ನದಿ, ಕೆರೆ, ಬಾವಿ ಮುಂತಾದವುಗಳನ್ನು ಅವಲಂಬಿಸಿದುದನ್ನು 'ನದೀಮಾತೃಕ'ವೆಂದೂ ವಿಂಗಡಿಸಿ ಕರೆಯಲಾಗುತ್ತಿತ್ತು.[೧೦] ದೇವ ಮಾತೃಕದಲ್ಲಿ ಹೊಲ,[೧೧] ಗದ್ದೆ[೧೨] ಗಳನ್ನು ಸೇರಿಸಬಹುದು. ಮೂರನೆಯ ಸೋಮೇಶ್ವರನ ಕಾಲದ ಶಾಸನಗಳು ಹೊಲವನ್ನು ಪೊಲ[೧೩]ಎಂದು ಗದ್ದೆಯನ್ನು, ಗೞ್ದೆ[೧೪]ಎಂದೂ ಕರೆದಿವೆ. ಇಂದಿಗೂ ಅವು ಅದೇ ಅರ್ಥದಲ್ಲಿ ಬಳಕೆಗೊಳ್ಳುತ್ತಿರುವುದನ್ನು ಕಾಣುತ್ತೇವೆ. ತೋಟಗಳು ಹೆಚ್ಚಾಗಿ ಭಾವಿಯ ನೀರನ್ನು ಅವಲಂಬಿಸಿರುತ್ತಿದ್ದವು.

ಮಣ್ಣಿನ ಗುಣ, ಸ್ವರೂಪ ಮತ್ತು ಭೂಲಕ್ಷಣವನ್ನವಲಂಬಿಸಿ ಕೃಷಿ ಭೂಮಿಯಲ್ಲಿ ಎರೆ[೧೫] ಅಥವಾ ಕರಿಯನೆಲ,[೧೬] ಕೆಂಗಾಡು,[೧೭] ಹಸುಗೆಯಭೂಮಿ,[೧೮] ಹಕ್ಕಲಮತ್ತರು,[೧೯] ಈಳಿಯಗದ್ದೆ,[೨೦] ತೆಂಗಲು ಮತ್ತರು,[೨೧] ಕಾಶ್ಮೀರ ಭೂಮಿ,[೨೨] ದಶವಂದದಾ ಭೂಮಿ,[೨೩] ಮಳವಭೂಮಿ,[೨೪] ಬೆದ್ದಲೆ ಭೂಮಿ,[೨೫] ಕಳವೆಗದ್ದೆ,[೨೬] ಹಾಳುಭೂಮಿ,[೨೭] ಕೊಡಗೆಗದ್ದೆ,[೨೮] ಕಾರಗದ್ದೆ,[೨೯] ಎಂಬ ಪ್ರಕಾರಗಳಿರುವುದು ಮೂರನೆ ಸೋಮೇಶ್ವರನ ಕಾಲದ ಶಾಸನಗಳಿಂದ ತಿಳಿದು ಬರುತ್ತದೆ. ಅಲ್ಲದೇ ಸಮಕಾಲೀನ ಕೃತಿಯಾದ 'ಧರ್ಮಾಮೃತ'ದಲ್ಲಿ ಕೂಡ ಭೂಮಿಯ ಗುಣದ ಮೇಲಿಂದ ಸವಳು ಭೂಮಿ, ಕರಿಯ ಭೂಮಿಯ ಉಲ್ಲೇಖ ಕಂಡು ಬಂದರೆ[೩೦] ಮಾನಸೋಲ್ಲಾಸದಲ್ಲಿ ಬಿಳಿಯ ಬಣ್ಣದ ಭೂಮಿ, ಕೆಂಬಣ್ಣದ ಭೂಮಿ, ಹಳದಿಬಣ್ಣದ ಭೂಮಿ, ಕಪ್ಪು ಬಣ್ಣದ ಭೂಮಿಯ ಉಲ್ಲೇಖವಿದೆ[೩೧] ಈ ರೀತಿ ವಿವಿಧ ಪ್ರಕಾರದ ಭೂಮಿಗಳನ್ನು ಕಾಣಬಹುದು.

ಕೃಷಿ :

ಇತಿಹಾಸ ಪೂರ್ವಕಾಲದಿಂದಲೂ ಭಾರತದಲ್ಲಿ ಅನೂಚಾನವಾಗಿ ಬೆಳೆದುಬಂದ ವ್ಯವಸಾಯವೇ ಮೂರನೆಯ ಸೋಮೇಶ್ವರನ ಕಾಲದ ಅರ್ಥವ್ಯವಸ್ಥೆಯ ಜೀವನಾಡಿಯಾಗಿತ್ತು. ಬಹುಜನರ ಜೀವನೋಪಾಯದ ಮುಖ್ಯ ಕಸುಬಾದ ಕೃಷಿ, ವ್ಯಾಪಾರ, ಉದ್ಯೋಗ, ಕೈಗಾರಿಕೆಗಳನ್ನೊಳಗೊಂಡ ನಾಡಿನ ಸಮಸ್ತ ಆದಾಯಕ್ಕೆ ಮೂಲ ಕೇಂದ್ರಬಿಂದುವಾಗಿತ್ತು. ಆದ್ದರಿಂದ ಒಕ್ಕಲುತನದ ಅಭಿವೃದ್ಧಿ ಎಂದರೆ ಸಾಮ್ರಾಜ್ಯದ ಅಭಿವೃದ್ಧಿಯೆಂದು ಈತನೂ ಚನ್ನಾಗಿ ಮನಗಂಡಿದ್ದನು.

ಮೂರನೆಯ ಸೋಮೇಶ್ವರನ ಕಾಲದ ವ್ಯವಸಾಯ ಕ್ರಮದ ಕುರಿತಂತೆ ಶಾಸನಗಳು ಸ್ಪಷ್ಟವಾದ ಮಾಹಿತಿಯನ್ನು ಒದಗಿಸುವುದಿಲ್ಲ. ಕೌಟಿಲ್ಯನು ಕೂಡ ತನ್ನ ಅರ್ಥಶಾಸ್ತ್ರದಲ್ಲಿ ಕೃಷಿಕರು ಬಡವರಾದರೆ ಅವರಿಗೆ ಕೃಷಿ ಉಪಕರಣ, ಎತ್ತು, ಬಿತ್ತು, ಬೇಸಾಯದ ಖರ್ಚಿಗೆ ಹಣವನ್ನು ರಾಜನಾದವನು ಕೊಡುವದರೊಂದಿಗೆ ಒಕ್ಕಲುತನವನ್ನು ದಂಡ, ವಿಷ್ಠಿ ತೆರಿಗೆಗಳಿಂದ ನಾಶವಾಗದಂತೆ ರಕ್ಷಿಸಬೇಕೆಂದು ಹೇಳುತ್ತಾನೆ.[೩೨] ಅಲ್ಲದೆ ದಾನದ ವಸ್ತುಗಳಲ್ಲಿ ಪ್ರಥಮ

ಪ್ರಾಶಸ್ತ್ಯವಿರುವದು ವ್ಯವಸಾಯ ಯೋಗ್ಯ ಭೂಮಿಗೆ ಸಂದಿದ್ದು ಮೂರನೆಯ ಸೋಮೇಶ್ವರನ ಬಹುಪಾಲು ಶಾಸನಗಳು ಕೂಡ ಭೂದಾನಕ್ಕೆ ಸಂಬಂಧಿಸಿವೆ. ಯಾಜ್ಞವಲ್ಕ್ಯ ಸ್ಮೃತಿಯಲ್ಲಿ[೩೩] ಕೂಡ ''ದಾನ್ಯಾದಿ ಫಲಕೊಡುವ ಭೂಮಿಯನ್ನು ದಾನ ಮಾಡುವ ಧಾತೃ ಸ್ವರ್ಗಲೋಕದಲ್ಲಿ ಪೂಜ್ಯನಾಗುವನು''ಎಂದಿದೆ. ಶಾಸನಗಳ ಫಲ ಶೃತಿಗಳಲ್ಲಿ ಬರುವ ''ಸಾಮಾನ್ಯೋಯಂ ಧರ್ಮ್ಮ ಸೇತುನೃಪಾಣಾಂ ಕಾಲೇ ಕಾಲೇ ಪಾಲನಿಯೋಭಗವದ್ಧಿ''[೩೪] ಎನ್ನುವ ಮಾತುಕೂಡ ದಾನವಾಗಿ ಬಿಟ್ಟ ಭೂಮಿಯನ್ನು ಕಾಪಾಡುವವರಿಗೆ, ಕೆಡಿಸುವವರಿಗೆ ಪುಣ್ಯ-ಪಾಪಗಳುಂಟಾಗುತ್ತವೆಂಬಲ್ಲಿ ಒಕ್ಕಲುತನದ ಏಳು-ಬೀಳಿನ ಸೂಚನೆಯನ್ನು ಕಾಣಬಹುದು.

ಬೆಳೆಗಳು :

ಹೊಲ,ಗದ್ದೆ,ತೋಟಗಳಲ್ಲಿ ಬೆಳೆಯುತ್ತಿದ್ದ ಬೆಳೆಗಳ ಪ್ರಸ್ತಾಪ ಪ್ರಾಸಂಗಿಕವಾಗಿ ಕಾವ್ಯ-ಶಾಸನಗಳಲ್ಲಿ ಬಂದಿದೆ. ಮೂರನೆಯ ಸೋಮೇಶ್ವರನ ಸಾಮ್ರಾಜ್ಯದಲ್ಲಿ ಭತ್ತದ ಗದ್ದೆಗಳಿದ್ದುದನ್ನು ಸನಿಗರಂ,[೩೫] ನಾರಂಗವಾಡಿ,[೩೬] ನಿಂಬರಗಿ,[೩೭] ಸೇಡಂ[೩೮] ಶಾಸನಗಳು ಉಲ್ಲೇಖಿಸಿವೆ. ಈತನ ಕೃತಿಯಾದ ಮಾನಸೋಲ್ಲಾಸದಲ್ಲಿಯೂ ಕೂಡ ರಕ್ತಶಾಲಿ, ಮಹಾಶಾಲಿ, ಗಂಧಶಾಲಿ,ಕಲಿಂಗಕ, ಮುಂಡಶಾಲಿ, ಸ್ಥೂಲಶಾಲಿ, ಸೂಕ್ಷ್ಮಶಾಲಿ ಎಂಬ ವಿವಿಧ ಪ್ರಕಾರದ ಅಕ್ಕಿಯ ಉಲ್ಲೇಖ[೩೯] ಬರುವುದರಿಂದ ಗದ್ದೆಗಳಲ್ಲಿ ವಿವಿಧ ತಳಿಯ ಭತ್ತದ ಬೆಳೆಗಳನ್ನು ಬೆಳೆಯುತ್ತಿದ್ದರೆಂದು ಹೇಳಬಹುದು. ಗದ್ದೆಯಲ್ಲಿ ಬೆಳೆಯಬಲ್ಲ ಇನ್ನೊಂದು ಪ್ರಧಾನ ಬೆಳೆ ಕಬ್ಬು. ಆರ್ಥಿಕ ಬೆಳೆಯಾದ ಕಬ್ಬು ಹೆಚ್ಚು ನೀರಿನ ಆಶ್ರಯವಿರುವ ಭೂಮಿಯಲ್ಲಿ ತೋಟಗಳಲ್ಲಿ ಬೆಳೆಯುತ್ತಿದ್ದಂತೆ ತೋರುತ್ತದೆ. ನಿಂಬರಗಿ ಶಾಸನವು[೪೦] ಕಬ್ಬಿನ ತೋಟಗಳಿರುವುದನ್ನು ಉಲ್ಲೇಖಿಸಿದೆ. ಬೆದ್ದಲು ಭೂಮಿಗಳಲ್ಲಿ ಜನಪ್ರಿಯ ಆಹಾರಧಾನ್ಯ ಮತ್ತು ಪ್ರಮುಖ ಬೆಳೆಯಾದ ಜೋಳವನ್ನು ಬೆಳೆಯುತ್ತಿದ್ದರು. ಮುದನೂರು,[೪೧] ನಿಂಬರಗಿ[೪೨] ಶಾಸನಗಳು ಜೋಳವನ್ನು ಹೆಸರಿಸಿವೆ. ವಾಣಿಜ್ಯ ಬೆಳೆಗಳಾದ ಅರಿಶಿಣ, ಶುಂಠಿ, ಬೆಳ್ಳುಳ್ಳಿ, ಬಜೆ, ಜೀರಗಿ, ಮೆಣಸುಗಳನ್ನು ಬೆಳೆಯುತ್ತಿದ್ದರೆಂದು ಅರೆ ಶಾಸನ[೪೩]ವು ತಿಳಿಸುತ್ತದೆ. ಅಲ್ಲದೆ ಬೆಳ್ಳುಳ್ಳಿ, ಈರುಳ್ಳಿ, ಮೂಲಂಗಿ, ಅರಿಶಿಣ, ಬಿಳಿ ಸಾಸುವೆ, ಕರಿಎಳ್ಳು, ಮೆಣಸು, ಕಾಡುಹೆಸರು, ಕಾಡು ಉದ್ದು, ಏಲಕ್ಕಿ, ಕಡಲೆ, ಅಲಸಂದೆ, ಬಟಾಣಿ, ಕೊತ್ತಂಬರಿ, ಕರಿಸಾಸುವೆ, ದ್ರಾಕ್ಷಿ, ದಾಲ್ಚಿನ್ನಿ, ಕುಸುಬೆ, ಸೌತೇಕಾಯಿ, ಕುಂಬಳಕಾಯಿ, ಪಡುವಲಕಾಯಿ, ಅವರೆ, ಬದನೆಕಾಯಿ, ತೊಗರಿ, ಎಳ್ಳು, ಗೋಧಿ, ಕಡಲೆ, ಆಲೂಗಡ್ಡೆ ಮುಂತಾದ ಬೆಳೆಗಳನ್ನು ಸಹ ಮಾನಸೋಲ್ಲಾಸವು ಉಲ್ಲೇಖಿಸಿದೆ.[೪೪]

ಒಣಬೇಸಾಯ :

ಮೂರನೆಯ ಸೋಮೇಶ್ವರನ ಕಾಲದಲ್ಲಿ ಮಳೆ ಆಧಾರಿತ ಭೂಮಿಯೇ ಅಧಿಕವಾಗಿತ್ತೆಂದು ಹೇಳಬಹುದು. ಕೃಷಿಕರು ಈ ಮಳೆಯನ್ನು ನಂಬಿ ಸಾಗುವಳಿ ಮಾಡುತ್ತಿದ್ದರು ಮಳೆಗಾಗಿ ಆಕಾಶವನ್ನು ನೋಡುತ್ತ ಕೂಡ್ರುತ್ತಿದ್ದರು.

ಕೆಲವುಸಾರಿ ಈ ಮಳೆ ಕೈಕೊಟ್ಟಾಗ ರೈತರು ಕಂಗಾಲಾಗುತ್ತಿದ್ದರು. ಆದ್ದರಿಂದ ಅವರ ಜೀವನ ಯಾವಾಗಲೂ ಸುಖಮಯವಾಗುತ್ತಿರಲಿಲ್ಲ. ಈ ರೀತಿಯ ನಿಸರ್ಗದ ಕೋಪಕ್ಕೆ ಇಲ್ಲವೆ ಬೇರೆ ಬೇರೆ ಕಾರಣಗಳಿಗಾಗಿ ಕಷ್ಟ ಅನುಭವಿಸುತ್ತಿದ್ದರು.[೪೫] ಕೆಲವು ಸಾರಿ ಬೆಳೆ ಕೈಗೆ ಬಂದಿತೆನ್ನುವಷ್ಟರಲ್ಲಿ ನೈಸರ್ಗಿಕ ಹಾನಿಯುಂಟಾಗಿ ಅದು ನಾಶವಾಗಿ ತೊಂದರೆಗೆ ಒಳಪಡುತ್ತಿದ್ದರು.[೪೬] ಮಳೆಯನ್ನೇ ಅವಲಂಬಿಸಿ ಬಿಳಿಜೋಳ, ಗೋದಿ, ಎಣ್ಣೆಕಾಳುಗಳು ಮೊದಲಾದ ಬೆಳೆಗಳನ್ನು ಬೆಳೆಯುತ್ತಿದ್ದರು. ರೈತರು ದೊಡ್ಡ ದೊಡ್ಡ ಜೋಳದ ತೆನೆಗಳು ತೆಲೆದೂಗುವುದನ್ನು ನೋಡಿ ಅದು ತಮ್ಮ ಪುಣ್ಯವೆಂದು ಭಾವಿಸುತ್ತಿದ್ದರು. ಬೆಳೆ ಕೊಯ್ಲಿಗೆ ಬಂದ ಮೇಲೆ ಅದನ್ನು ಕೊಯ್ದು ಸೂಡು ಕಟ್ಟಿ ಮೆದೆಗಳನ್ನು ಗೂಡು ಹಾಕುತ್ತಿದ್ದರು. ಕಣದಲ್ಲಿ ತೆನೆ ಹಾಕಿ ಮುರಿದು ರಾಶಿ ಮಾಡುತ್ತಿದ್ದರು.[೪೭] ಎಳ್ಳಿನ ಗಿಡಗಳನ್ನು ಜಾಡಿಸಿ ಎಣ್ಣೆಕಾಳುಗಳನ್ನು ತೆಗೆಯುತ್ತಿದ್ದರು. ಈ ಎಳ್ಳಿನ ಗಿಡ ಕೊಯ್ದಾಗ ನೆಲದಲ್ಲಿ ಕೋಲಿಗಳು ಉಳಿಯುತ್ತಿದ್ದವು.[೪೮] ಒಕ್ಕುಲುತನಕ್ಕೆ ಎತ್ತು, ಕತ್ತೆ, ಕೋಣ, ಕುದುರೆಗಳನ್ನು ಉಪಯೋಗಿಸುತ್ತಿದ್ದರು. ಎತ್ತುಗಳಿಲ್ಲದವರು ನೆರೆ ಹೊಲದವರಿಂದ ಹೊಲಗಳನ್ನು ಬಿತ್ತಿಸಿಕೊಳ್ಳುತ್ತಿದ್ದರು. ಮುಯ್ಯಿಕೊಡುವ ಪದ್ದತಿಯಿತ್ತು. ಕೋಣಗಳನ್ನು ಹೂಡಿದ ಬಂಡಿಗಳಲ್ಲಿ ಜೋಳ ಹೇರಿಕೊಂಡು ಹೋಗುತ್ತಿದ್ದರು. ಭತ್ತದ ಹುಲ್ಲು ಕಣಿಕೆಯಿಂದ ಬಣವೆ ಒಟ್ಟುತ್ತಿದ್ದರು.[೪೯] ಔರಾದ್ ಶಾಸನ[೫೦]ದಲ್ಲಿ ಕೂಡ ಬಣವೆಯ ಉಲ್ಲೇಖಬಂದಿದೆ ಅಲ್ಲದೆ ಜೋಳವನ್ನು ಹಗೆಯೊಳಗೆ ಹಾಕುವ ಪದ್ದತಿಕೂಡ ಇತ್ತೆಂದು ತಿಳಿದುಬರುತ್ತದೆ.

ನೀರಾವರಿ :

ಕೃಷಿ ಉತ್ಪಾದನೆಗೆ ನೀರಾವರಿ ಅನಿವಾರ್ಯ. ಮಳೆಯನ್ನವಲಂಬಿಸದೆ ಕೃಷಿಉತ್ಪಾದನೆಯನ್ನು ಹೆಚ್ಚಿಸಲು ನೀರಾವರಿ ಸಂಪನ್ಮೂಲಗಳು ಅತ್ಯವಶ್ಯಕ. ವಿಶಾಲ ಭೂಪ್ರದೇಶದ ಒಡೆಯನಾದ ಮೂರನೆಯ ಸೋಮೇಶ್ವರನ ಕಾಲದಲ್ಲಿಯೂ ನೀರಾವರಿಗಾಗಿ ಅನೇಕ ಮೂಲಗಳನ್ನು ಅವಲಂಬಿಸಿರುವುದು ಕಂಡುಬರುತ್ತದೆ. ಇವನ ಕಾಲದ ಶಾಸನಗಳು ನದಿ, ಹಳ್ಳ ಕೆರೆ, ಬಾವಿ, ತಟಾಕ, ಹೊಂಡಗಳನ್ನು ಉಲ್ಲೇಖಿಸುತ್ತವೆ.

ಮೂರನೆ ಸೋಮೇಶ್ವರನ ಕಾಲದ ಶಾಸನಗಳಲ್ಲಿ ಗೋದಾವರಿ,[೫೧] ತುಂಗಭದ್ರಾ,[೫೨] ಗಂಗಾನದಿ,[೫೩] ಪಾವರಿನದಿ[೫೪]ಗಳ ಉಲ್ಲೇಖ ಕಂಡುಬಂದಿರೆ. ಆತನ ಕೃತಿಯಾದ ಮಾನಸೋಲ್ಲಾಸದಲ್ಲಿ ಗಂಗಾ, ಯಮುನಾ, ನರ್ಮಾದಾ, ತಾಪೀ,ಗೌತಮಿ, ಸರಸ್ವತಿ, ಯಮುನಾ, ತುಂಗಭದ್ರಾ, ಮಂಜಿರೆ (ಮಾಂಜರಾ), ಭೀಮ, ಕೃಷ್ಣಾ, ಮಲಪಹಾರಿ ನದಿಯ ಉಲ್ಲೇಖ ಕಂಡು ಬರುತ್ತದೆ.[೫೫] ಈ ನದಿಗಳನ್ನು ಮತ್ತು ಇವುಗಳ ಎಡ ಬಲ ದಂಡೆಯ ಭೂಮಿಯು ಈಗಲೂ ಫಲವತ್ತತೆಯಿಂದ ಕೂಡಿರುವುದನ್ನು ಕಾಣಬಹುದು. ಆದರೆ ನದಿಗಳಿಗೆ ಅಡ್ಡವಾಗಿ ಆಣೆಕಟ್ಟು ಕಟ್ಟಿಸಿದ ವಿಷಯ ಮತ್ತು ಈ ನದಿಗಳ ನೀರನ್ನು ವ್ಯವಸಾಯಕ್ಕೆ ಯಾವರೀತಿ ಉಪಯೋಗಿಸುತ್ತಿದ್ದರು ಎಂಬುದನ್ನು ಶಾಸನಗಳಾಗಲಿ, ಕಾವ್ಯಗಳಾಗಲಿ ನಿಖರವಾಗಿ ತಿಳಿಸುವುದಿಲ್ಲ.

ಹಳ್ಳ :

ಕೆರೆ-ತೊರೆಗಳಿಗೆ ಜೀವನಾಡಿಯಾದ ಹಳ್ಳ-ಕೊಳ್ಳಗಳು ಕೂಡ ಆಗಿನ ಜನಜೀವನದಲ್ಲಿ ಪ್ರಮುಖ ಪಾತ್ರವಹಿಸಿವೆ. ಹಳ್ಳಗಳ ನೀರನ್ನು ನಾಲೆಗಳ ಮೂಲಕ ಹರಿಸಿ ತೋಟ ಗದ್ದೆ ಗಳಿಗೆ ಉಪಯೋಗಿಸುತ್ತಿದ್ದಿರಬಹುದು. ಏಕೆಂದರೆ ಅನೇಕ ಶಾಸನಗಳಲ್ಲಿ ಹಳ್ಳಗಳ ಅಕ್ಕ-ಪಕ್ಕದಲ್ಲಿ ತೋಟ, ಗದ್ದೆಗಳ ಪ್ರಸ್ತಾಪ ಕಂಡುಬರುತ್ತವೆ.[೫೬] ಹೀಗಾಗಿ ಹಳ್ಳಗಳ ನೀರನ್ನು ಒಕ್ಕಲುತನಕ್ಕೆ ಬಳಸುತ್ತಿದ್ದರೆಂದು ಹೇಳಬಹುದು.

ಕೆರೆ :

''ಕೆಱೆಯಂ ಕಟ್ಟಿಸಿದಂ'',[೫೭] ''ಕೆರೆಯಂ ಕಟ್ಟಿಸಿ''[೫೮] ಎಂದು ಅನೇಕ ಶಾಸನಗಳಲ್ಲಿ ಕಂಡುಬರುತ್ತದೆ. ಹೀಗಾಗಿ ನಮ್ಮ ಪ್ರಾಚೀನರು ಈ ಕೆರೆ ಕಟ್ಟೆ ಬಾವಿಗಳನ್ನು ಕಟ್ಟಿಸುವುದು ಪುಣ್ಯಕರ ಶ್ರೇಯಸ್ಕವೆಂದು ನಂಬಿದ್ದರು. ಅವರೆಲ್ಲರ ಮನೋಭಾವದ ಫಲವಾಗಿ ಸೋಮೇಶ್ವರನ ಸಾಮ್ರಾಜ್ಯದ ಉದ್ದಗಲಕ್ಕೂ ಅನೇಕ ಕೆರೆ-ಕಟ್ಟೆಗಳು ವ್ಯಾಪಿಸಿ ನಿಂತಿದ್ದನ್ನು ಶಾಸನಗಳಲ್ಲಿ ಕಾಣಬಹುದು. ಈ ಕೆರೆ ಬಾವಿ-ಹೊಂಡಗಳನ್ನು ತೋಡುವ ಕಾರ್ಯವನ್ನು ಅದೋಮುಖ ನಕ್ಷತ್ರದಲ್ಲಿ ಮಾಡಬೇಕೆಂದು ಸೋಮೇಶ್ವರ ತನ್ನ ಮಾನಸೋಲ್ಲಾಸದಲ್ಲಿ ಹೇಳುತ್ತಾನೆ.[೫೯] ಕೆಂಡನಾಯಕನ ಕೆರೆ,[೬೦] ದೇವೆಯನ ಕೆರೆ[೬೧] ಎಂದು ಕೆಲವು ವ್ಯಕ್ತಿಗಳ ಹೆಸರುಗಳು ಕೆರೆಯ ಹಿಂದೆ ಶಾಸನಗಳಲ್ಲಿ ಉಲ್ಲೇಖ ಗೊಂಡಿರುವದರಿಂದ ಆ ಕೆರೆಗಳನ್ನು ಅವರೇ ನಿರ್ಮಿಸಿರಬಹುದೇ? ಎಂಬ ಸಂದೇಹ ಉಂಟಾಗುತ್ತದೆ. ಅಲ್ಲದೆ ಕೆಲವು ಕೆರೆಗಳನ್ನು ಹಿರಿಯರ ಸ್ಮರಣಾರ್ಥವಾಗಿ ನಿರ್ಮಿಸಿ ಅದಕ್ಕೆ ಅವರ ಹೆಸರಿಟ್ಟಿರುವುದು ಪುರದಕಟ್ಟೆ[೬೨] ಶಾಸನದಿಂದ ತಿಳಿದು ಬರುತ್ತದೆ. ಅಲ್ಲದೆ ಪೆರ್ಗಡೆ ವೈಜನಾಥಯ್ಯ ತಡವಲಿಗೆಯ ಪ್ರಭುದಂಡನಾಯಕ ಕರಿದೇವಯ್ಯಗಳು ಅಥರ್ಗಾದ[೬೩] ಕೆರೆಯ ಸಂರಕ್ಷಣೆಗಾಗಿ ಭೂದಾನ ನೀಡಿರುವುದನ್ನು ಗಮನಿಸಿದರೆ ಅವರು ಕೆರೆ-ಕಟ್ಟೆಗಳ ಬಗೆಗೆ ತಳೆದ (ಕೊಟ್ಟ, ಅಥವಾ ನೀಡಿದ) ಮಹತ್ವವನ್ನು (ನಿಲುವನ್ನು) ಸ್ಪಷ್ಟಪಡಿಸುತ್ತದೆ.

ಕಿಱು ಕೆಱೆ,[೬೪] ಹಿರಿಯ ಕೆರೆ[೬೫] ಎಂದು ಕೆರೆಯ ಆಕಾರವನ್ನು ಬಿಟ್ಟರೆ ಆದರಲ್ಲಿನ ನೀರಿನ ಪ್ರಮಾಣ ಅದರ ಉದ್ದಳತೆ ಇತ್ಯಾದಿಗಳ ಬಗೆಗೆ ಶಾಸನಗಳು ಯಾವ ಮಾಹಿತಿಯನ್ನು ಒದಗಿಸುವುದಿಲ್ಲ. (ಶಾಸನಗಳು ಮೌನವಾಗಿವೆ) ಆದರೆ ಮಾನಸೋಲ್ಲಾಸದಲ್ಲಿ ''ಒಡ್ಡು ಕಟ್ಟುವದರಿಂದ ಕಾಲುವೆಯಿಂದ ಹರಿದು ಸಂಗ್ರಹವಾದ ಮತ್ತು ಪ್ರತಿವರ್ಷಹೊಸ ನೀರು ಕೂಡಿಕೊಳ್ಳುವ ಜಲವು ಕೆರೆಯ ಜಲವೆನಿಸುತ್ತದೆ[೬೬] ಎಂದಿದೆ . ಆದರೆ ಅದು ಕೆರೆಯ ಆಕಾರವನ್ನಾಗಲೀ ನೀರಿನ ಪ್ರಮಾಣವನ್ನಾಗಲೀ ತಿಳಿಸುವುದಿಲ್ಲ. ''ಹರಿಯಬ್ಬೆ ಹಳ್ಳಿಯ ಕೆರೆಯೋಳಗದರಿ ಕೋಡಿಯಿಂ''[೬೭] ''ಹಿರಿಯ ಕೆರೆಯ ಕಟ್ಟ ತಂಬಿನ ಸಾಲ ಮಾವಿನ ಗದ್ದೆ''[೬೮] ''ಕಿರುಕೆರೆಯ ಕೋಡಿಯಲು ಬಿಟ್ಟ ಬೆಳ್ದಲ ಕಮ್ಮ '-೫೦೦' '' ಹಿರಿಯ ಕೆರೆಯ ಬಡಗಣ ಕೊಡಿಯಲು ಬಿಟ್ಟ ಬೆಳ್ದಲೆ ಕಮ್ಮ-೪೦೦''[೬೯], ''ಹೊಸಳ್ಳಯ ಕೆರೆಯ ನೀರು ಯೇತ ಗದ್ದೆಗೆ''[೭೦] ಮುಂತಾದ

ಉಲ್ಲೇಖಗಳನ್ನು ಗಮನಿಸಿದರೆ ಕೆರೆ-ಕಟ್ಟೆಗಳಿಂದ ಕೃಷಿನೀರಾವರಿ ನಡೆಯುತ್ತಿತ್ತೆಂದು ಸ್ಪಷ್ಟವಾಗುತ್ತದೆ. ಒಂದು ಊರಿನ ಕೆರೆಯ ನೀರನ್ನು ಇನ್ನೊಂದು ಊರಿನ ಹೊಲಗಳಿಗೆ ಹರಿಸಬೇಕಾದರೆ ನಾಡಿನ ಎಲ್ಲ ಪ್ರಭುಗಾವುಂಡರ ಒಪ್ಪಿಗೆಯನ್ನು ಪಡೆಯಬೇಕಾಗಿದ್ದಿತು.[೭೧] ಅಲ್ಲದೆ ಕೆರೆಯ ನೀರನ್ನು ಕೃಷಿಕಾರ್ಯಕ್ಕಲ್ಲದೆ ಕುಡಿಯಲುಕೂಡಾ ಬಳಸುತ್ತಿದ್ದರೆಂದು ತಿಳಿಯುತ್ತದೆ.[೭೨] ಮತ್ತು ಕೆಲವು ಸಲ ಎರೆ ಭೂಮಿಯ ಕೆರೆಗಳು ಬೇಸಗೆಯಲ್ಲಿ ಭತ್ತಿಹೋಗಿ ಕುಡಿಯುವ ನೀರಿಗೂ ಅಭಾವವಾಗುತ್ತಿತ್ತು.[೭೩]

ಬಾವಿ :

ತೋಟ,ಗದ್ದೆಗಳಲ್ಲಿ ಬಾವಿಗಳಿರುತ್ತಿದ್ದವು, ಏತಗಳಿಂದ ಮತ್ತು ಘಟಿಯಂತ್ರಗಳಿಂದ ತೋಟಕ್ಕೆ ನೀರು ಹಾಯಿಸುತ್ತಿದ್ದರು.[೭೪] ಈ ಘಟಿಯಂತ್ರಕ್ಕೆ ರಾಟಿಳ, ರಾಟಣ ಎಂದು ಕರೆಯುತ್ತಿದ್ದರು. ವಚನ ಮತ್ತು ಕಾವ್ಯಗಳಲ್ಲಿ ರಾಟಣದ ಉಲ್ಲೇಖಗಳು ಬರುತ್ತವೆ.[೭೫] ಬಸವಣ್ಣನವರ ವಚನದಲ್ಲಿ ಕೂಡ ತೆಲೆಬಾಗಿದ ಏತದ ಉಲ್ಲೇಖವಿದೆ.[೭೬] ತಿಳವಳ್ಳಿ ಶಾಸನದಲ್ಲಿ ಹಿರಿಯ ಏತದ ಉಲ್ಲೇಖವಿದ್ದರೆ[೭೭] ಕಾಮಧೇನು ಶಾಸನದಲ್ಲಿ ''ಬಾವಿಯ ಬಳಸಿಗ ತಿಂಥಣಿ ಪೂದೋಟದಲ್ಲಿ'' ಎಂದಿದೆ.[೭೮] ಇದರಿಂದ ಕೃಷಿಗೆ ಬಾವಿಯನ್ನು ಬಳಸುತ್ತಿದ್ದರೆಂದು ಸ್ಪಷ್ಟವಾಗಿ ತಿಳಿದು ಬರುತ್ತದೆ. ಅಲ್ಲದೆ ದೇವರ ಸೇವೆಗಾಗಿ ಕೂಡ ಬಾವಿಯನ್ನು ಕಟ್ಟಿಸಿದಾನ ಬಿಡುವ ಪದ್ದತಿಯಿತ್ತು.[೭೯] ಹೀಗೆ ಬಾವಿಯನ್ನು ಕೃಷಿಗೆ ದೇವರ ಸೇವೆಗಾಗಿ, ಸಾರ್ವಜನಿಕರ ಉಪಯೋಗಕ್ಕಾಗಿ ಬಳಸುತ್ತಿದ್ದರೆಂದು ಹೇಳಬಹುದು.

ತೋಟ :

ಕೆರೆ-ಕಟ್ಟೆ, ಬಾವಿ ಮೊದಲಾದ ಸತತ ನೀರಿನ ಆಶ್ರಯವಿರುವ ತೋಟಗಳಲ್ಲಿ ತೆಂಗು, ವಿಳ್ಯೆಯದೆಲೆ, ಅಡಿಕೆಗಳನ್ನು ಬೆಳೆಯಲಾಗುತ್ತಿತ್ತು. ಹಣ್ಣುಗಳಲ್ಲಿ ಮಾವು, ಹಲಸು, ಮಾಧುಫಲ ಈಳೆ, ನಿಂಬೆ ಮೊದಲಾದವುಗಳನ್ನು ಹೂಗಳಲ್ಲಿ ಮಲ್ಲಿಗೆ ಕೇದಿಗೆ, ಸುರ, ಹೊನ್ನೆ, ನೈದಿಲೆ (ಪದ್ಮ)ಗಳನ್ನು ಬೆಳೆಯುತ್ತಿದ್ದರೆಂದು ನಿಂಬರಗಿ ಶಾಸನ[೮೦] ತಿಳಿಸಿದರೆ ಮಾನಸೋಲ್ಲಾಸವು ಅಶೋಕ ನಿಂಬ (ಬೇವು) ಪ್ರನ್ನಾಗ, ವಕುಲ, ನಾಗಕೇಸರ, ಶಿರೀಪ, ತಿಲಕ, ಹಲಸು, ಬಾಳೆ, ತೆಂಗು, ದಾಳಿಂಬೆ ಮುಂತಾದವುಗಳನ್ನು ತೋಟಗಳಲ್ಲಿ ಬೆಳೆಯುತ್ತಿದ್ದರೆಂದು ತಿಳಿಸುತ್ತದೆ.[೮೧] ದೇವಾಲಯಗಳಿಗೆ ವೃತ್ತಿಯಾಗಿ (ದಾನವಾಗಿ) ಬಿಟ್ಟ ತೋಟಗಳಲ್ಲಿ ದೇವರ ಪೂಜೆಗಾಗಿ ಹೂಗಳನ್ನು ಬೆಳೆಯಲಾಗುತ್ತಿತ್ತು. ಈ ಹೂದೋಟಗಳನ್ನು ಮಾಡುವವರು ದೇವಸ್ಥಾನಕ್ಕೆ ಇಂತಿಷ್ಟು ಹೂಗಳನ್ನು ಕೊಡಬೇಕೆಂಬ ನಿಯಮವಿರುತ್ತಿತ್ತು.[೮೨] ಊರಿನ ಎಲ್ಲ ತೋಟಗಳ ರಕ್ಷಣೆಯನ್ನು ನೋಡಿಕೊಳ್ಳಲು ತೋಟಿಗ ಎಂಬ ಕಾವಲಿನವನನ್ನು ನೇಮಿಸಿಕೊಳ್ಳುತ್ತಿದ್ದರು. ತೋಟಿಗನ ಸಮಯ ಎನ್ನುವುದು ಆ ತೋಟಿಗರ ಜೀವನಕ್ಕಾಗಿ ಬೇರೆ ಬೇರೆ ತೋಟಿಗಳವರು ಕೊಡುತ್ತಿದ್ದ ಹಣ ಅಥವಾ ಧಾನ್ಯವನ್ನು ಸೂಚಿಸುತ್ತದೆ.[೮೩] ಕಾಮಧೇನು ಶಾಸನದಲ್ಲಿ[೮೪] ಬರುವ ''ಪೂದೋಟಂ ಸಾಕುವಾಳಿಂಗೆ ವರಿಷಂ ಪ್ರತಿ ಗದ್ಯಾಣ೧'' ಎಂಬ ಹೇಳಿಕೆ ಈ ಮೇಲಿನ ಮಾತಿಗೆ ಪುಷ್ಟಿ ನೀಡುತ್ತದೆ.

ಪಶುಪಾಲನೆ :

ಮೂರನೆಯ ಸೋಮೇಶ್ವರನ ಕಾಲದಲ್ಲಿ ಪಶುಪಾಲನೆ ಒಂದು ಪ್ರಧಾನ ಕಸುಬು ಆಗಿತ್ತು. ವ್ಯವಸಾಯ, ಸಾಗಾಣಿಕೆ, ಹೈನುಗಾರಿಗೆ ಮತ್ತು ಮಾಂಸಾಹಾರಕ್ಕಾಗಿ ಪ್ರಾಣಿಗಳನ್ನು ಸಾಕುತ್ತಿದ್ದರು. ಹೀಗಾಗಿ ರೈತರ ಆರ್ಥಿಕ ಪರಿಸ್ಥಿತಿ ಸುಧಾರಿಸಲು ಇವು ಸಹಾಯಕವಾಗಿದ್ದವು.

ಈಗಿನಂತೆ ಪ್ರಾಚೀನ ಮತ್ತು ಮಧ್ಯಕಾಲೀನ ಕಾಲದಲ್ಲಿ ಕೂಡ ಗೋವು ಪವಿತ್ರವಾದ ಪ್ರಾಣಿ ಎನಿಸಿದ್ದಿತು. ''ಗೋವನ್ನು'' ವಿಶೇಷ ಸಂಪತ್ತು ಎಂದು ಭಾವಿಸಲಾಗಿತ್ತು. ಇದನ್ನು ಅಪಹರಿಸುವುದು ಪಾಪಕೃತ್ಯವೆನಿಸುತ್ತಲ್ಲದೆ. ಅಂಥ ಸಮಯದಲ್ಲಿ ಅದನ್ನು ಸಂರಕ್ಷಿಸುವುದು ಆಯಾ ಊರಿನ ಜನರ ಮುಖ್ಯ ಕರ್ತವ್ಯವಾಗಿತ್ತು. ಇದನ್ನೇ ಕನ್ನಡ ಕಾವ್ಯ ಶಾಸನಗಳು ''ತುರುಗೋಳ್'' ಎಂದು ಗುರುತಿಸಿವೆ.[೮೫] ಅನೇಕ ಹಳ್ಳಿಗಳಲ್ಲಿ ದೊರಕುವ ಬಹುಪಾಲು ವೀರಗಲ್ಲುಗಳು ಅಂದು ತುರುಗೋಳ್‌ನಲ್ಲಿ ಮರಣ ಹೊಂದಿದ ವೀರರ ಸ್ಮಾರಕಗಳಾಗಿವೆ.[೮೬] ಗೋಹತ್ಯೆಯು ಮಹಾಪಾಪವೆನಿಸಿದ್ದು, ಬಿಟ್ಟದಾನ ಅಪಹರಿಸುವವರಿಗೆ ಅಂತಹ ದೋಷ ತಗಲುತ್ತೆದೆಂಬ ಸಂಗತಿ ಶಾಸನಗಳ ಫಲಶೃತಿಯಲ್ಲಿದೆ.[೮೭] ಪಂಚಮಹಾಪಾತಕಗಳಲ್ಲಿ ಗೋಹತ್ಯಯೂ ಒಂದಾಗಿತ್ತು.[೮೮]

ಭೂ-ಸಾಗುವಳಿ ಮತ್ತು ಬಾವಿಯಿಂದ ನೀರನ್ನೆತ್ತಲು ಸಾಮಾನ್ಯವಾಗಿ ಎತ್ತುಗಳನ್ನು ಬಳಸುತ್ತಿದ್ದರು. ಸಾರಿಗೆ ವ್ಯವಸ್ಥೆಯಲ್ಲಿ ದನಕರುಗಳ ಪಾತ್ರ ಪ್ರಮುಖವಾಗಿತ್ತು. ಎತ್ತು, ಕತ್ತೆ, ಕೋಣ, ಕುದುರೆಗಳನ್ನು[೮೯] ಸಾರಿಗೆಗೆ ಉಪಯೋಗಿಸುತ್ತಿದ್ದ ಸಂಗತಿ ಈ ನಾಡಿನ ಶಾಸನಗಳಲ್ಲಿ ಉಲ್ಲೇಖಗೊಂಡಿದೆ. ಆಕಳು, ಎಮ್ಮೆ ಮುಂತಾದವುಗಳಿಂದ ಹಾಲು, ಹೈನುಗಳೊಂದಿಗೆ ದನಕರುಗಳ ಸಂತಾನಾಭಿವೃದ್ಧಿಯೂ ಆಗುತ್ತಿತ್ತು. ಆಯಾ ಊರಿನವರು ತಮ್ಮ ಹಸುಗಳ ಗರ್ಭಧಾರಣಕ್ಕಾಗಿ ಸಾರ್ವಜನಿಕ ಗೂಳಿಯನ್ನು ಸಾಕುತ್ತಿದ್ದರು. ಅದು ಊರಿನ ಯಾವ ಹೊಲದಲ್ಲಾದರೂ ಯಾವ ನಿರ್ಭಂಧವೂ ಇಲ್ಲದೆ ಮೇಯಬಹುದಾಗಿತ್ತು.[೯೦]

ಶಾಸನಗಳಷ್ಟೇ ಅಲ್ಲದೆ ಸಮಕಾಲೀನ ಸಾಹಿತ್ಯ ಕೃತಿಗಳೂ ಕೂಡ ಗೋವುಗಳನ್ನು ಹೈನುಗಳಿಗಾಗಿ ಸಾಕುತ್ತಿದ್ದರು, ಇದು ಕೊಟ್ಟ ಹೋರಿ ಎತ್ತುಗಳನ್ನು ಕೃಷಿಗಾಗಿ ಬಳಸುತ್ತಿದ್ದರು.[೯೧] ಕರುಸತ್ತ ಹಸುವಿನ ಕರುವನ್ನು ಈದ ಹಸುವಿನ, ಎತ್ತುಗಳೊಡನೆ ಸಮಾಗಮ ಮಾಡಿದ ಹಸುವಿನ ಹಾಲನ್ನು ಹತ್ತು ದಿನಗಳ ವರೆಗೆ ಕುಡಿಯುತ್ತಿರಲಿಲ್ಲ.[೯೨] ಅಲ್ಲದೆ ಗಾಣಗಳಿಗೆ ಎತ್ತುಗಳನ್ನು ಹೂಡುವ, ದೇವರಿಗೆ ಗೂಳಿ ಬಿಡುವ ಪದ್ಧತಿಯೂ ಕೂಡ ಇತ್ತೆಂದು ತಿಳಿಸುತ್ತವೆ.[೯೩]

ಗೋವುಗಳಲ್ಲದೆ ಎಮ್ಮೆ, ಕೋಣ, ಕುದುರೆ, ಕತ್ತೆಗಳನ್ನು ಸಾಕುತ್ತಿದ್ದರು. ಎಮ್ಮೆಗಳನ್ನು ಹೈನುಗಳಿಗಾಗಿ ಸಾಕಿದರೆ, ಕೋಣಗಳನ್ನು ಕೃಷಿಗಾಗಿ, ಸಾರಿಗೆಗಾಗಿ ಬಳಸುತ್ತಿದ್ದರು.[೯೪] ಈ ಸಾಕು ಪ್ರಾಣಿಗಳಲ್ಲದೆ ಹುಲಿ, ಸಿಂಹ, ಆನೆ, ನರಿ ಮೊದಲಾದ ಕಾಡು ಪ್ರಾಣಿಗಳಿದ್ದವು. ಇಲ್ಲಿ ಸಾಕಷ್ಟು ಪಕ್ಷಿ ಸಂಕುಲವೂ ಇದ್ದಿತು. ಹೀಗೆ ನಾಡು ಪಶು ಪಕ್ಷಿಗಳಿಂದ ಸಮೃದ್ಧವಾಗಿತ್ತು.[೯೫]

ಶಾಸನಗಳಲ್ಲಿ ಕಂಡುಬರದ ಅನೇಕ ಕ್ರೂರ ಸಾಕು ಪ್ರಾಣಿ ಪಕ್ಷಿಗಳಾದ ಆಡು,ಕುರಿ, ಕೋಳಿ, ಒಂಟೆ, ಹುಲಿ, ನರಿ, ಬೆಕ್ಕು, ತೋಳ, ಕಾಗೆ, ಕೋತಿ, ಕರಡಿ, ಆನೆ, ಸಿಂಹ, ಕಾಡುಹಂದಿ, ಪಾರಿವಾಳ, ಗಿಡುಗ, ಹಂಸ, ಗೂಬೆ, ಬಕಪಕ್ಷಿ, ಜಿಂಕೆ, ನವಿಲು, ಕೋಗಿಲೆ, ಗೊರವಂಕ, ಹದ್ದು, ನಾಯಿ, ಕ್ರಿಮಿ, ಕೀಟಗಳು, ಪತಂಗ, ಹಲ್ಲಿ, ಓತಿಕೇತ, ಕಪ್ಪೆ, ಸರ್ಪ, ಮುಂಗುಸಿ, ಉಡ, ಮೊಸಳೆ, ನೀರುನಾಯಿ ಮುಂತಾದವುಗಳ ಉಲ್ಲೇಖ ಮಾನಸೋಲ್ಲಾಸ್[೯೬] ಕೃತಿಯಲ್ಲಿ ಕಂಡುಬರುವುದರಿಂದ ಈತನ ನಾಡು ಪಶು-ಪಕ್ಷಿಗಳಿಂದ ಸಮದ್ಧವಾಗಿತ್ತೆಂದು ಹೇಳಬಹುದು.

ಕೈಗಾರಿಕೆಗಳು :

ಅರ್ಥ ವ್ಯವಸ್ಥೆಯಲ್ಲಿ ಭೂಮಿಗಿರುವಷ್ಟೇ ಪ್ರಾಧಾನ್ಯತೆ ಕೈಗಾರಿಕೆಗಳಿಗೂ ಇದೆ. ವ್ಯವಸಾಯ ಹಾಗೂ ಭೂ-ಮೂಲದ ಕಚ್ಚಾ ಪ್ರದಾರ್ಥಗಳೇ ಕೈಗಾರಿಕೆಗಳ ಮೂಲವಾದುದರಿಂದ ಅವು ಒಂದನ್ನುಳಿದು ಮತ್ತೊಂದಿಲ್ಲವೆಂದೇ ಹೇಳಬೇಕು.

ಎಣ್ಣೆ ತಯಾರಿಕೆ :

ಪ್ರಾಚೀನ ಕಾಲದಿಂದಲೂ ಬೆಳೆದು ಬಂದ ಪ್ರಮುಖ ಕೈಗಾರಿಕೆಗಳಲ್ಲಿ ದಿನನಿತ್ಯದ ಬದುಕಿಗೆ ಅವಶ್ಯವಾದ ಗಾಣದೆಣ್ಣೆಯ ಉತ್ಪಾದನೆಯೂ ಒಂದು. ಎಣ್ಣೆಯನ್ನು ಹೆಚ್ಚಾಗಿ ಆಹಾರ ಪದಾರ್ಥಗಳಲ್ಲಿ ಮತ್ತು ದೀಪಗಳಿಗೆ ಉಪಯೋಗಿಸಲಾಗುತ್ತಿತ್ತು. ಎಣ್ಣೆ ತೆಗೆಯುವ ವೃತ್ತಿಯವರನ್ನು ಶಾಸನಗಳು ತೆಲ್ಲಿಗ,[೯೭] ಗಾಣಿಗ,[೯೮] ಎಂದು ಕರೆದಿವೆ. ಈ ತೆಲ್ಲಿಗರು ದೇವರ ನಂದಾದೀವಿಗೆಗೆ ದಾನಬಿಡುವ ಸಂದರ್ಭದಲ್ಲಿ ಕಾಣಿಸಿಕೊಂಡಿದ್ದು ತೆಲ್ಲಿಗರಯ್ವತ್ತೊಕ್ಕಲು[೯೯] ಅಥವಾ ಗಾಣದಐವತ್ತೊಕ್ಕಲು[೧೦೦] ಎಂಬ ತಮ್ಮದೇ ಆದ ಸಂಘವನ್ನು ಕಟ್ಟಿಕೊಂಡು ಸಮಾಜದಲ್ಲಿ ಪ್ರಭಾವಶಾಲಿಗಳಾಗಿದ್ದಂತೆ ತೋರುತ್ತದೆ. ಅವನ್ನು ತೆಲ್ಲಿಗರ ಕೊತ್ತಳಿ, ತೆಲ್ಲಿಗ ಶ್ರೇಣಿ, ಐವತ್ತೊಕ್ಕಲು ಗಾಣಿಗರೊಕ್ಕಲು, ಊರೈವತ್ತುಕ್ಕಲು ಎಂಬ ಹೆಸರಿನಿಂದಲೂ ಕರೆಯುತ್ತಿದ್ದರು.[೧೦೧] ಎಣ್ಣೆಯು ಆಗತ್ಯ ಸಾರ್ವತ್ರಿಕವಾದುದರಿಂದ ಬಹುಶಃ ಗಾಣಗಳಿಲ್ಲದ ಊರುಗಳೇ ಇದ್ದಿರಲಿಲ್ಲವೆಂದು ಹೇಳಬಹುದು. ಆದರೆ ಊರಿನ ವಿಸ್ತಾರ, ಜನಸಂಖ್ಯೆ, ಅವಶ್ಯಕತೆಗಳಿಗನುಗುಣವಾಗಿ ಅವು ಹೆಚ್ಚು ಕಡಿಮೆ ಇದ್ದಿರಬಹುದು. ಮೂರನೆಯ ಸೋಮೇಶ್ವರನ ಕಾಲದ ಇಂಗಳೇಶ್ವರ,[೧೦೨] ಕುಕನೂರು,[೧೦೩] ತಿಳವಳ್ಳಿ,[೧೦೪] ಕೊಲಿಮಿಗುಂಡ್ಲ,[೧೦೫] ಔರಾದ್[೧೦೬] ಮುಂತಾದ ಸ್ಥಳಗಳಲ್ಲಿ ಗಾಣಗಳಿದ್ದುದನ್ನು ಅಲ್ಲಿನ ಶಾಸನಗಳು ತಿಳಿಸುತ್ತವೆ.

ಎಣ್ಣೆ ಗಾಣದ ಕೈಗಾರಿಕೆಗಳಿಂದ ಸರ್ಕಾರಕ್ಕೆ ತೆರಿಗೆ ಸಂದಾಯವಾಗುತ್ತಿದ್ದು, ದೇವಸ್ಥಾನಗಳಿಗೆ ಗಾಣ, ಗಾಣದೆಣ್ಣೆ ದಾನವಾಗಿ ಬಿಟ್ಟಿರುವಂತೆ ಗಾಣದಸುಂಕ, ಗಾಣಾಯ ಎಂಬ ಉಲ್ಲೇಖಗಳಿಂದ ಸರಕಾರಕ್ಕೂ ಸುಂಕವನ್ನು ನೀಡುತ್ತಿದುದ್ದನು ಶಾಸನಗಳಲ್ಲಿ ಕಾಣಬಹುದು.[೧೦೭] ಎಣ್ಣೆ ತೆಗೆಯುವ ಗಾಣದ ಸ್ಥಳ, ವ್ಯಾಪಾರದ ಸ್ಥಳವೂ ಆಗಿರುತ್ತಿತ್ತು.

ಅಂದರೆ ಉತ್ಪಾದನೆ, ವಿನಿಮಯ ಒಂದೇ ಕಡೆ ನಡೆಯುತ್ತಿತ್ತು. ಎಳ್ಳು ಮೊದಲಾದ ಎಣ್ಣೆಬೀಜಗಳನ್ನು ಎತ್ತಿನಗಾಣ, ಕೈಗಾಣ, ಮೆಟ್ಟುಗಾಣಗಳಲ್ಲಿ ಹಾಕಿ ಎಣ್ಣೆ ತಯಾರಿಸುತ್ತಿದ್ದರು.[೧೦೮] ದೇವಾಲಯದ ನಂದಾದೀವಿಗೆ ನಡೆಯಲು ಆಯಾ ದೇವಾಲಯದ ಮುಂದೆ ಗಾಣವನ್ನು ಹಾಕುತ್ತಿದ್ದರು. ಇದರಿಂದ ತಮಗೆ ಪುಣ್ಯ ಪ್ರಾಪ್ತವಾಗುತ್ತದೆಂದು ಅವರು ನಂಬಿದ್ದರು. ತೆಲ್ಲಿಗಗೇರಿಯು ತೆಲ್ಲಿಗರು ವಾಸಿಸುವ ಸ್ಥಳ, ಇಲ್ಲವೆ ವ್ಯಾಪಾರದ ಸ್ಥಳವಾಗಿರಬೇಕು.[೧೦೯] ಮಾನಸೋಲ್ಲಾಸದಲ್ಲಿಯೂ ಕೂಡ ಎಣ್ಣೆ[೧೧೦]ಯ ಉಲ್ಲೇಖ ಬರುವುದರಿಂದ ಅವುಗಳನ್ನು ತಯಾರಿಸುವ ಕೈಗಾರಿಕೆಗಳು ಇದ್ದವೆಂದು ಹೇಳಬಹುದು.

ಬೆಲ್ಲ-ಸಕ್ಕರೆ :

ಕಬ್ಬನ್ನು ನೀರಾವರಿ ಬೆಳೆಯಾಗಿ ಬೆಳೆಯುತ್ತಿದ್ದರು. ಬೆಲ್ಲ-ಸಕ್ಕರೆಗೆ ಮೂಲವಸ್ತುವಾದ ಕಬ್ಬನ್ನು ಗಾಣದ ಕತ್ತರಿಯೊಳಗಿಟ್ಟು ರಸ ತೆಗೆದು ಅದರಿಂದ ಬೆಲ್ಲ-ಸಕ್ಕರೆ ತಯಾರಿಸುತ್ತಿದ್ದರು.[೧೧೧]

ಪ್ರಾಚೀನ ಕಾಲದಿಂದಲೂ ದಿನಿತ್ಯದ ಆಹಾರ, ಪಾನೀಯಗಳಲ್ಲಿ ಬಳಕೆಗೊಳ್ಳುತ್ತಿರುವ ಬೆಲ್ಲ-ಸಕ್ಕರೆಗಳಿಗಾಗಿ ಕಬ್ಬನ್ನು ಬೆಳೆಯುತ್ತಿದ್ದ ಉಲ್ಲೇಖ ಸಿಗುತ್ತದೆ.[೧೧೨] ಅಲ್ಲದೆ ಸೋಮೇಶ್ವರನ ಮಾನಸೋಲ್ಲಾಸದಲ್ಲಿಯೂ ಕೂಡ ಆಹಾರ ಪದಾರ್ಥವಾಗಿ ಮತ್ತು ಪಾನೀಯಗಳಲ್ಲಿ ಬೆಲ್ಲ-ಸಕ್ಕರೆ ಬಳಕೆಗೊಂಡಿರುವುದನ್ನು ಕಾಣುತ್ತೇವೆ.[೧೧೩]

ಉಪ್ಪು ತಯಾರಿಕೆ :

ದಿನನಿತ್ಯದ ಆಹಾರ ಪದಾರ್ಥಗಳಲ್ಲಿ ಬಳಕೆಗೊಳ್ಳುವ ಇನ್ನೊಂದು ಜೀವನಾಂಶಕ ಪದಾರ್ಥ ಉಪ್ಪು ಬಹು ಪ್ರಾಚೀನ ಕಾಲದಿಂದಲೂ ತಯಾರಿಸಲ್ಪಡುತ್ತಿತ್ತು.[೧೧೪] ಮಾನಸೋಲ್ಲಾಸದಲ್ಲಿಯೂ ಕೂಡ ಆಹಾರ ಪದಾರ್ಥಗಳಲ್ಲಿ ಉಪ್ಪನ್ನು ಬಳಸುತ್ತಿದ್ದುದನ್ನು ಕಾಣುತ್ತೇವೆ.[೧೧೫] ಶಾಸನದಲ್ಲಿಯೂ ಕೂಡ ಉಪ್ಪಿನ ಉಲ್ಲೇಖವನ್ನು ಕಾಣಬಹುದು.[೧೧೬]

ಗಣಿ ಕೈಗಾರಿಕೆ :

ಮೂರನೆಯ ಸೋಮೇಶ್ವರನ ಕಾಲದ ಜನರಿಗೆ ವಜ್ರ[೧೧೭] (ಕೆಂಪು, ಹಳದಿ, ಕಪ್ಪು ಬಿಳಿ) ಚಿನ್ನ,[೧೧೮] ಬೆಳ್ಳಿ,[೧೧೯] ತವರ,[೧೨೦] ಸೀಸ,[೧೨೧] ಮೊದಲಾದ ಲೋಹಗಳೂ, ಅನೇಕ ರೀತಿಯ ರತ್ನಗಳು[೧೨೨] (ಬಿಳಿ, ಹಳದಿ, ಕೆಂಪು, ಕಪ್ಪು) ಪರಿಚಯವಿತ್ತು. ಆದರೆ ಇವುಗಳನ್ನು ಯಾವ ಗಣಿಗಳಿಂದ ತೆಗೆಯುತ್ತಿದ್ದರೆಂಬುದರ ವಿವರಗಳು ಶಾಸನಗಳಿಂದಾಗಲೀ, ಸಾಹಿತ್ಯ ಕೃತಿಗಳಿಂದಾಗಲೀ ತಿಳಿಯುವುದಿಲ್ಲ.

ಗಣಿಗಳಿಂದ ರಾಜ್ಯಕ್ಕೆ ಹೆಚ್ಚಿನ ಆದಾಯ ಬರುತ್ತಿತ್ತು. ಗಣಿಗಳ ಎಲ್ಲ ಉತ್ಪನ್ನವನ್ನು ರಾಜನು ವಹಿಸಿಕೊಳ್ಳಬೇಕೆಂದು ವಿಷ್ಣುವು ಹೇಳಿದರೆ, ರಾಜನು ಅಂತಹ ಉತ್ಪನ್ನದಲ್ಲಿ ಅರ್ಧವನ್ನು ಮಾತ್ರ ತೆಗೆದುಕೊಳ್ಳಬೇಕೆಂದು

ಮನು ಹೇಳುತ್ತಾನೆ.[೧೨೩] ಅಂದರೆ ಗಣಿಗಳನ್ನು ಸ್ವತಂತ್ರ ಉದ್ಯಮಿಗಳು ನಡೆಸಬಹುದಾಗಿತ್ತು. ಇದೇ ಅಭಿಪ್ರಾಯವನ್ನೇ ಮಾನಸೋಲ್ಲಾಸಕಾರನೂ ಅನುಮೋದಿಸಿದ್ದು ರಾಜನು ಚಿನ್ನ, ಬೆಳ್ಳಿ, ಮುತ್ತು, ರತ್ನಗಳ ಗಣಿಗಳ ಮೇಲೆ ತೆರಿಗೆಯನ್ನು ಹಾಕಬೇಕೆಂದು ಹೇಳಿದ್ದಾನೆ.[೧೨೪] ಸೋಮೇಶ್ವರನ ಈ ಹೇಳಿಕೆಯಿಂದ ಈತನ ಕಾಲದಲ್ಲಿ ಸ್ವತಂತ್ರ ಉದ್ದಿಮೆದಾರರು ಕೆಲವು ಗಣಿಗಳನ್ನಾದರೂ ನಡೆಸುತ್ತಿದ್ದರೆಂಬುದನ್ನು ಸ್ಪಷ್ಟಪಡಿಸುತ್ತದೆ. ಉತ್ಪಾದಕ ವಿನಿಮಯ ವೃತ್ತಿಗಳಾದ ನೇಕಾರಿಕೆ, ಕುಂಬಾರಿಕೆ, ಬಡಿಗತನ, ಚಿನಿವಾರಿಕೆ, ಅಕ್ಕಸಾಲಿಗ ಮೊದಲಾದವರು ಜೀವನಾವಶ್ಯಕವಾದ ಮತ್ತು ವ್ಯವಸಾಯಕ್ಕೆ ಪೂರಕವಾದ ವಸ್ತುಗಳನ್ನು ತಯಾರಿಸುತ್ತಿದ್ದರು. ಇಂತಹ ಕೈಗಾರಿಕೆಗಳು ಈ ಕಾಲದಲ್ಲಿ ಹೇರಳವಾಗಿ ಇದ್ದವು.[೧೨೫] ಇವರು ಆಯಾ ವಸ್ತುಗಳನ್ನು ಉತ್ಪಾದಿಸುವುದರೊಂದಿಗೆ ವ್ಯಾಪಾರವನ್ನು ಮಾಡುತ್ತಿದ್ದರು. ಹೀಗೆ ಉತ್ಪಾದನೆ-ಮಾರಾಟ ಕಾರ್ಯಗಳೆರಡೂ ಜೊತೆ ಜೊತೆಯಾಗಿ ನಡೆಯುತ್ತಿದ್ದವೆಂದು ಹೇಳಬಹುದು.

ವಾಣಿಜ್ಯ ವ್ಯವಹಾರ :

ವಾಣಿಜ್ಯವು ವೃತ್ತಿ ಕೈಗಾರಿಕೆಗಳ ಉತ್ಪಾದನೆಯನ್ನು ವಿತರಿಸುವ ಪ್ರಮುಖ ಮಾಧ್ಯಮವಾಗಿದೆ. ಸಾಮಾನ್ಯವಾಗಿ ರಾಜಧಾನಿ, ಉಪವಿಭಾಗಗಳ ಮುಖ್ಯ ಸ್ಥಳಗಳು, ಪಟ್ಟಣಗಳು ವ್ಯಾಪಾರಿ ಕೇಂದ್ರಗಳಾಗಿದ್ದವು. ಘಟಾನ್‌ಚೆರು[೧೨೬] ರಾಗಿಮುಸಲವಾಡ,[೧೨೭] ವಿಜಾಪುರ,[೧೨೮] ಔರಾದ,[೧೨೯] ಸಿರಿವಾಳ[೧೩೦] ಮುಂತಾದ ಪಟ್ಟಣಗಳು ಪ್ರಮುಖ ವ್ಯಾಪಾರಿ ನೆಲೆಗಳಾಗಿದ್ದವೆಂದು ಹೇಳಬಹುದು.

ಪ್ರತಿಯೊಂದು ಗ್ರಾಮ ಪಟ್ಟಣಗಳಲ್ಲಿ ನಿಗದಿತ ದಿನಗಳಂದು ನಡೆಯುವ ಸಂತೆಯನ್ನು ಬಿಟ್ಟರೆ ದಿನನಿತ್ಯದ ಅಗತ್ಯ ವಸ್ತು-ವಿನಿಮಯಕ್ಕಾಗಿ ಪ್ರತಿ ಊರುಗಳಲ್ಲಿ ಅಂಗಡಿಗಳಿರುತ್ತಿದ್ದವು. ಪಟ್ಟಣದ ಮುಖ್ಯ ಬೀದಿಗಳಲ್ಲಿ ಅಂಗಡಿ ಸಾಲುಗಳಿರುತ್ತಿದ್ದರೆ ಊರುಗಳ ಒಳಭಾಗದಲ್ಲಿ ಬಿಡಿ ಬಿಡಿಯಾದ ಅಂಗಡಿಗಳಿರುತ್ತಿದ್ದವು. ದೇವಾಲಯಗಳಿಗೆ ದಾನ ಬಿಡುವ ವಸ್ತುಗಳಲ್ಲಿ ಅಂಗಡಿಯೂ ಒಂದಾಗಿದ್ದು, ಕುಕನೂರು ಶಾಸನ[೧೩೧]ದಲ್ಲಿ ''ಅಂಗಡಿಯ ಬಾಚಿಮಯ್ಯ ನಾಯಕರು ಬಿಟ್ಟ ಮೂಡವಾಗಿಲ ಅಂಗಡಿ ೧'' ಮುದನೂರು ಶಾಸನ[೧೩೨]ದಲ್ಲಿ ''ನಖರಂಗಳು ಅಂಗಡಿಯಲು ಬಿಟ್ಟ ಸೊಂಟಿಗೆ ಜೋಳಮಾನ ೧'' ಎಂದಿದೆ.

ಅಂಗಡಿಯಲ್ಲಿ ಸೆಟ್ಟಿ ಕುಳಿತು ವ್ಯಾಪಾರ ಮಾಡುತ್ತಿದ್ದರೆ[೧೩೩] ಸಣ್ಣಪುಟ್ಟ ವ್ಯಾಪಾರಿಗಳು ಸರಕನ್ನು ತಮ್ಮ ತಲೆಯ ಮೇಲೆ ಹೊತ್ತುಕೊಂಡು ಹೋಗಿ ಮಾರುತ್ತಿದ್ದರು. ಎಣ್ಣೆಯನ್ನು ಕೊಡಗಳಲ್ಲಿ ತುಂಬಿ ಮಾರುತ್ತಿದ್ದರು.[೧೩೪] ಸೋಮೇಶ್ವರನ ಕಾಲದ ಸಂತೆ ಪೇಟೆಗಳಿಗೆ ಬರುತ್ತಿದ್ದ ಮತ್ತು ಮಾರಾಟವಾಗುತ್ತಿದ್ದ ವಸ್ತುಗಳಲ್ಲಿ ಭತ್ತ, ಜೋಳ ಮೊದಲಾದ ದವಸ-ಧಾನ್ಯಗಳು ಜೀವನಾವಶ್ಯಕ ವಸ್ತುಗಳಾದ ಬೆಲ್ಲ, ಎಲೆ, ಅಡಿಕೆ, ಹಣ್ಣು-ಹಂಪಲು, ತರಕಾರಿ, ಮೆಣಸು, ಜೀರಿಗೆ ಮೊದಲಾದ ಪದಾರ್ಥಗಳು ಸೇರಿವೆ. ಈ ಎಲ್ಲ ಪದಾರ್ಥಗಳು ಬೆಳೆಯುತ್ತಿದನ್ನು ಈತನ ಕಾಲದ ಶಾಸನಗಳು ಸಾಹಿತ್ಯ ಕೃತಿಗಳು ಸ್ಪಷ್ಟಪಡಿಸಿವೆ.

ವ್ಯಾಪಾರ ವಹಿವಾಟಿಗಾಗಿ ಮತ್ತು ಜನಸಂಪರ್ಕಕ್ಕಾಗಿ ವಿವಿಧ ಪ್ರದೇಶದ ಊರುಗಳೊಂದಿಗೆ ಮಾರ್ಗಗಳ ಅವಶ್ಯಕತೆಯನ್ನು ಯಾರೂ ಹೇಳಬೇಕಾಗಿಲ್ಲ. ಊರೂರಿನ ಮಧ್ಯದ ಸಂಪರ್ಕಕ್ಕಾಗಿ ಅವು ಸಹಜವಾಗಿಯೇ ಜನರಿಂದ ನಿರ್ಮಾಣಗೊಳ್ಳುತ್ತಿರಬೇಕು. ಯುದ್ಧ ಸಂದರ್ಭದಲ್ಲಿ ಸೈನಿಕ ಕಾರ್ಯಾಚರಣೆಯ ಅಗತ್ಯವಾಗಿ ಮತ್ತು ರಾಜ್ಯದ ಇತರ ಭಾಗಗಳು ರಾಜಧಾನಿಯೊಂದಿಗೆ ಸಂಬಂಧ ಪಡೆಯಲು ವ್ಯವಸ್ಥಿತ ಮಾರ್ಗಗಳ ಅವಶ್ಯಕತೆಯಿದ್ದಿತು. ಇಂಥ ರಸ್ತೆಗಳ ಮೇಲ್ವಿಚಾರಣೆಗಾಗಿ ಮಾರ್ಗಾಧಿಕಾರಿಗಳನ್ನು ನಿಯಮಿಸುತ್ತಿದ್ದುದನ್ನು ಸೋಮೇಶ್ವರ ತಿಳಿಸಿದ್ದಾನೆ.[೧೩೫] ಈತನ ಕಾಲದ ಶಾಸನಗಳಲ್ಲಿಯೂ ಕೂಡ ಬಟ್ಟೆ[೧೩೬] ದಾರಿ[೧೩೭]ಗಳ ಉಲ್ಲೇಖವಿದೆ. ದಾನ ಬಿಡುವ ಭೂಮಿಯ ಸೀಮಾ ನಿರ್ದೇಶನದ ಸಂದರ್ಭಗಳಲ್ಲಿ ಕೂಡ ಊರುಗಳ ದಾರಿಯ ನಿರ್ದೇಶನವಿದೆ.[೧೩೮] ದಾರಿ, ಬಟ್ಟೆಗಳು ಚಿಕ್ಕವಾಗಿದ್ದು ಹೆಬ್ಬಟ್ಟೆ[೧೩೯] ರಾಜ ಬೀದಿಗಳು, ಇಂದಿನ ರಾಷ್ಟ್ರೀಯ ಹೆದ್ದಾರಿಗಳಂತೆ ನೀಳ-ವಿಶಾಲವಾಗಿರುತ್ತಿದ್ದವು.[೧೪೦] ಸಾರಿಗೆಗಾಗಿ ಎತ್ತು, ಕೋಣ, ಕತ್ತೆಗಳನ್ನು ಬಳಸುತ್ತಿದ್ದರು.[೧೪೧] ತೆಪ್ಪ, ದೋಣಿಗಳ ಮೂಲಕ ನದಿ, ಹಳ್ಳಗಳನ್ನು ದಾಟುತ್ತಿದ್ದು ಇಂತಹ ಮಾರ್ಗಗಳಿಗೆ ಕಡಹುಗಳೆನ್ನುತ್ತಿದ್ದರು.[೧೪೨] ಅಲ್ಲದೆ ಸಾಗರ ಮಾರ್ಗದ ಮೂಲಕವೂ ವ್ಯಾಪಾರ ನಡೆಯುತ್ತಿತ್ತು. ಇವರನ್ನು ಸಾಗರಯುಕರು[೧೪೩] ಎನ್ನುತ್ತಿದ್ದರು.

ವರ್ತಕರ ಸಂಘಗಳು :

ಮಾನವ ಜನಾಂಗದ ಆರ್ಥಿಕ ಬದುಕನ್ನು ರೂಪಿಸುವ ಹಲವಾರು ಅಂಶಗಳಲ್ಲಿ ವರ್ತಕರು ಮತ್ತು ವರ್ತಕ ಸಂಘಗಳು ಮುಖ್ಯವೆನಿಸಿವೆ. ವೈಯಕ್ತಿಕವಾಗಿ, ಸಾಂಘಿಕವಾಗಿ ಈ ವರ್ತಕರು ಕೈಗೊಂಡ ವ್ಯಾಪಾರ ವೃತ್ತಿಯಿಂದ ಸಮಾಜದ ಜೀವನಸ್ಥಿತಿ, ನಾಡಿನ ಆರ್ಥಿಕ ಪರಿಸ್ಥಿತಿಗಳು ಒಂದು ಆಕಾರ ಪಡೆಯುತ್ತವೆ.

ವರ್ತಕರು ಮತ್ತು ವ್ಯಾಪಾರದ ಕೆಲವು ಉಲ್ಲೇಖಗಳನ್ನು ಬಿಟ್ಟರೆ ಪೇಟೆ, ಪಟ್ಟಣ, ಅಂಗಡಿಗಳ ವರ್ಣನೆಗಳು ಕಾವ್ಯಗಳಲ್ಲಿ ಬಂದರೂ ಅದು ಹೆಚ್ಚು ವಾಸ್ತವವಾಗಿರದೆ ಸಾಂಪ್ರದಾಯಕತೆ, ಉತ್ಪ್ರೇಕ್ಷೆಗಳಿಂದ ಕೂಡಿದುದಾಗಿರುತ್ತದೆ. ಹೀಗಾಗಿ ವಸ್ತುನಿಷ್ಠತೆಯಿಂದ ಕೂಡಿರುವ ಶಾಸನಗಳು ಮಾತ್ರ ಕಾವ್ಯಗಳಿಗಿಂತ ಹೆಚ್ಚು ಪ್ರಯೋಜನಕಾರಿಯೆನಿಸಿ ಒಂದು ನಾಡಿನ ಆರ್ಥಿಕ ವ್ಯವಸ್ಥೆಯ ಮೂಲಭೂತ ಘಟಕಗಳಾದ ವರ್ತಕರ ಮತ್ತು ವರ್ತಕ ಸಂಘಗಳ ಇತಿಹಾಸವನ್ನು ತಿಳಿಸುತ್ತದೆ. ಹೀಗಾಗಿ ವರ್ತಕ ಸಂಘಗಳ ಅಧ್ಯಯನ ಅತ್ಯಂತ ಮಹತ್ವದ್ದೆನಿಸುತ್ತದೆ.

ಮೂರನೆಯ ಸೋಮೇಶ್ವರನ ಕಾಲದ ಶಾಸನಗಳಲ್ಲಿ ಸಂಘಕ್ಕೆ ಪರ್ಯಾಯವಾಗಿ ಕೊತ್ತಳಿ,[೧೪೪] ಒಕ್ಕಲು,[೧೪೫] ಹಿಟ್ಟು[೧೪೬] ಮುಂತಾದವುಗಳು ಬಳಕೆಯಾಗಿವೆ. ಇವುಗಳಲ್ಲಿ ಸಂಘ ಸೂಚಿಯಾಗಿ ಸಂಖ್ಯೆಗಳನ್ನೇ ಪ್ರಾಚೀನಕಾಲದಲ್ಲಿ ಅಧಿಕವಾಗಿ ಬಳಸಲಾಗಿದೆ.

ವರ್ತಕರು :

ವ್ಯಾಪಾರವನ್ನೇ ವೃತ್ತಿಯಾಗಿಸಿಕೊಂಡ ವರ್ತಕರಲ್ಲಿ ವಿವಿಧ ಪಂಗಡಗಳಿದ್ದವು. ಅವರಲ್ಲಿ ಬಣಂಜಿಗ, ಸೆಟ್ಟಿ, ಸೆಟ್ಟಿಗುತ್ತ, ನಕರ, ಮುಮ್ಮುರಿದಂಡ, ವಡ್ಡವ್ಯವಹಾರಿ, ಗಾತ್ರಿಗ, ನಾನಾದೇಸಿ, ಉಭಯನಾನಾದೇಸಿ ಮೊದಲಾದವರು ಸೇರ್ಪಡೆಯಾಗಿರುತ್ತಾರೆ.

ಬಣಂಜಿಗ, ಸೆಟ್ಟಿ :

ಸಂಸ್ಕೃತದ 'ವಣಿಜ', 'ಶ್ರೇಷ್ಠನ್' ಪದಗಳ ಕನ್ನಡ ರೂಪ 'ಬಣಂಜಿಗ', 'ಸೆಟ್ಟಿ' ಮೂಲದಲ್ಲಿ ವಣಿಜ (ಬಣಂಜಿಗ) ವೃತ್ತಿ ಸೂಚಿ, ಶ್ರೇಷ್ಠನ (ಸೆಟ್ಟಿ) ಪ್ರತಿಷ್ಠಾ ಸೂಚಿಯಾಗಿದ್ದು ಕ್ರಮೇಣ ಈ ಎರಡೂ ಪದಗಳು ವೃತ್ತಿ ಸೂಚಿಯಾಗಿ ನಂತರ ಜಾತಿ ಸೂಚಕವಾಗಿ ಬೆಳೆದವು.[೧೪೭] ಮೂರನೆಯ ಸೋಮೇಶ್ವರನ ಶಾಸನಗಳಲ್ಲಿ ಇವರನ್ನು ಬಣಜ,[೧೪೮] ಬಳಂಜಿಗ,[೧೪೯] ಸ್ಥಾನ,[೧೫೦] ತಳದ,[೧೫೧] ಬಣಂಜಿಗರು, ಬೀರವಣಿಗ,[೧೫೨] ಸೆಟ್ಟಿಯರು,[೧೫೩] ಸ್ಥಳ, ತಳದ ಸೆಟ್ಟಿಯರು,[೧೫೪] ಹೇರುವ ಸೆಟ್ಟಿಯರು,[೧೫೫] ಎತ್ತಿನಲು ಹೇರುವ ಸೆಟ್ಟಿಗಳು,[೧೫೬] ಗಂಧವಣಿಗ[೧೫೭] ಎಂದು ಗುರುತಿಸಿದೆ. ಇವರಲ್ಲಿ ಕೆಲವರು ಸರಕುಗಳನ್ನು ಎತ್ತು, ಕತ್ತೆ, ಕೋಣಗಳ ಮೇಲೆ ಹೇರಿಕೊಂಡು ವ್ಯಾಪಾರ ಮಾಡುತ್ತಿದ್ದರಿಂದ ಹೇರಿನ ಸೆಟ್ಟಿಯರು ಎನಿಸಿದರು.[೧೫೮]

ಬಣಂಜಿಗರು-ಸೆಟ್ಟಿಯರು ಸ್ವಗ್ರಾಮದಲ್ಲಿ ವ್ಯಾಪಾರ ಮಾಡುತ್ತಿದ್ದರಿಂದ ಹೇರಿನ ಸೆಟ್ಟಿಯರು ಸ್ವಗ್ರಾಮದಲ್ಲಿ ವ್ಯಾಪಾರ ವೃತ್ತಿ ಕೈಕೊಂಡಿರುವುದರಿಂದಲೋ, ಅನ್ಯಗ್ರಾಮದ ವರ್ತಕರಿಂದ ಭಿನ್ನವಾಗಿಸಲೋ ಸ್ಥಳದ-ತಳದ ವಿಶೇಷಣಗಳಿಂದ ಗುರುತಿಸಲ್ಪಟ್ಟಿದ್ದಾರೆ. ಬೀರವಣಿಗರ ಕುರಿತು ಹೆಚ್ಚಿನ ವಿಷಯ ತಿಳಿದುಬರುವುದಿಲ್ಲ.

ನಾಲ್ಕೂರಸೆಟ್ಟಿ[೧೫೯] ಎಂಬ ಉಲ್ಲೇಖದಿಂದ ಆಯಾ ಗ್ರಾಮ ಮತ್ತು ಪ್ರದೇಶಗಳ ವರ್ತಕರ ಸಂಖ್ಯೆಯನ್ನು ಗುರುತಿಸಲು ಸಾಧ್ಯವಾಗುತ್ತದೆ. ಅಲ್ಲದೆ ಚೆವ್ವಿಸೆಟ್ಟಿ,[೧೬೦] ಪ್ರಭು ಕನ್ನಪಯ್ಯಸೆಟ್ಟಿ,[೧೬೧] ಕೂಚಿಸೆಟ್ಟಿ,[೧೬೨] ರಾವಸೆಟ್ಟಿ[೧೬೩] ಇವರು ಆಡಳಿತ ಅಧಿಕಾರಿಗಳಾಗಿದ್ದುದನ್ನು ಶಾಸನಗಳು ಸೂಚಿಸುತ್ತವೆ. ಅಲ್ಲದೆ ತ್ರೈಲೋಕ್ಯಮಲ್ಲ ಸೆಟ್ಟಿ,[೧೬೪] ಬಮ್ಮಿಸೆಟ್ಟಿ,[೧೬೫] ವೆಸಪಯ್ಯ ಸೆಟ್ಟಿ,[೧೬೬] ಅರಸರಲ್ಲಿ ವರ್ತಕರಾಗಿದ್ದರು. ಇವರ ಅಭಿಧಾನ, ರಾಜಶ್ರೇಷ್ಠಿ.

ಬಣಂಜಿಗ ಎಂಬ ಬದಕ್ಕೆ ಸಂಬಂಧಿಸಿದ ವೀರ ಬಣಂಜಿಗ ಮತ್ತು ವೀರವಣಿಗ ಸಮಾನಾರ್ಥಕ ಪದಗಳಾಗಿರಬೇಕು. ಶೈವಕ್ಕೆ ಉಪಾಧಿಯಾಗಿದ್ದಂತೆ ಬಣಂಜು ಪದಕ್ಕೂ 'ವೀರ' ಎಂಬುದು ಉಪಾಧಿಯಾಗಿದೆ. ಇದನ್ನು ಗಮನಿಸಿ ವೀರಬಣಂಜುದವರೇ ವೀರಶೈವರಾದರೆಂದು ಕೆಲವರು ಊಹಿಸಿದ್ದು ಅದಕ್ಕೆ ಆಧಾರಗಳ ಕೊರತೆ ಎದ್ದು ಕಾಣುತ್ತದೆ.[೧೬೭] ಆದರೆ ಈ ವರ್ತಕರೆಲ್ಲರೂ ಜೈನರಾಗಿದ್ದರೆಂದು ಕೆಲವರು ಅಭಿಪ್ರಾಯ ಪಡುತ್ತಾರೆ. ಅದಕ್ಕೆ ಅವರು ಕೊಡುವ ಆಧಾರ ''ವೀರ ಬಣಂಜುಗಳ ಧ್ವಜವು ಗುಡ್ಡಧ್ವಜ,[೧೬೮] ಗುಡ್ಡ ಎಂಬುದು ಜೈನರ ಉಕ್ತಿ. ಅದರ ಅರ್ಥ

'ಸಾಮಾನ್ಯ ಶಿಷ್ಯ' ಎಂದು ಇಲ್ಲಿ ಬೆಟ್ಟ ಎನ್ನುವ ಅರ್ಥವನ್ನು ಹೇಳುವ ಯತ್ನ ನಡೆದಿದೆ. ಆದರೆ ಆ ಅರ್ಥವು ಇಲ್ಲಿಗೆ ಹೊಂದುವುದಿಲ್ಲ. ಆದರೆ ಗುಡ್ಡ ಎಂಬುದು ಜೈನರ ಪದವಲ್ಲ ದ್ರಾವಿಡ ಪದ ತಮಿಳು-ಕುಟ್ಟಂ (= ಚಿಕ್ಕತನ, ಕೋತಿಯಮರಿ), ಕುಟ್ಟಿ (ಮರಿ, ಚಿಕ್ಕ ಹುಡುಗಿ) ಮಲೆಯಾಳ-ಕುಟ್ಟಿ (=ಬಾಲಕ, ಮರಿ) ಕನ್ನಡ-ಗಿಡ್ಡಿ, ಗಿಡ್ಡು ಇತ್ಯಾದಿಗಳನ್ನು ಪರಿಶೀಲಿಸಬಹುದು. ಮೂಲತಃ ಕುಟ್ಟಿ ಅಥವಾ ಗುಡ್ಡಕ್ಕೆ ಚಿಕ್ಕದು ಎಂಬ ಅರ್ಥವಿದ್ದು ಚಿಕ್ಕ ಹುಡುಗ ಎಂಬರ್ಥ ಒಂದು ವಾತ್ಸಲ್ಯದ ಶಿಷ್ಯ ಎಂಬ ಅರ್ಥವು ಮುಂದೆ ಬಂದಿರುವಂತೆ ಕಾಣುತ್ತದೆ. ಗುಡ್ಡ (= ಚಿಕ್ಕ ಬೆಟ್ಟ) ಎಂಬುದೂ ಈ ಶ್ರೇಣಿಗೆ ಸೇರಿದ ಪದ ಅಲ್ಲದೆ, ಜೈನರಲ್ಲದೆ ಜೈನೇತರರಲ್ಲೂ ''ಗುಡ್ಡು (ಡ್ಡ)' ಎಂಬ ಪದವನ್ನು 'ಶಿಷ್ಯ' ಎಂಬ ಅರ್ಥದಲ್ಲಿ ಬಳಸುತ್ತಾರೆ.[೧೯] ಅನೇಕ ವರ್ತಕರು ಹಿಂದುಗಳಾಗಿದ್ದರೆಂದು ಹೇಳಲು ಆಧಾರಗಳಿವೆ. ಅವರು ತಮ್ಮನ್ನು 'ಭಗವತಿಯ ಮಕ್ಕಳು'[೨೦] ಎಂದೂ 'ಕಾಳಿಕಾದೇವಿ ಲಬ್ಧವರಪ್ರಸಾದರು'[೨೧] ಎಂದೂ ಕರೆದುಕೊಳ್ಳುತ್ತಾರೆ. 'ಬಳಂಜು ಧರ್ಮ'ವು ಬ್ರಹ್ಮ, ವಿಷ್ಣು ಮಹೇಶ್ವರ 'ಮಂಥನದಿಂದ' ಆದುದೆಂದು ಅನೇಕ ಕಡೆ ಶಾಸನಗಳಲ್ಲಿ ಹೇಳಿವೆ. ಆದ್ದರಿಂದ ಇವರು ಮೂಲತಃ ಹಿಂದುಗಳು. ಕೆಲವರು ಜೈನ ಧರ್ಮಕ್ಕೆ ಪರಿವರ್ತನೆ ಹೊಂದಿರಬಹುದು ಅಥವಾ ಜೈನರಾಗಿದ್ದವರು ವ್ಯಾಪಾರವನ್ನಾರಂಭಿಸಿ ವರ್ತಕರ ಶ್ರೇಣಿಗೆ ಸೇರಿರಬಹುದು.[೨೨]

ಸೆಟ್ಟಿಗುತ್ತ :

ಸೆಟ್ಟಿಗುತ್ತ ಎಂಬುದು ಸೆಟ್ಟಿಯವರಲ್ಲಿ ಉನ್ನತ ವರ್ಗವನ್ನು ಸೂಚಿಸುತ್ತದೆ.[೨೩] ಸೆಟ್ಟಿಗುತ್ತ ಎಂದರೆ ಹಿರಿಯ ವರ್ತಕ ಇಲ್ಲವೆ ವರ್ತಕರಲ್ಲಿಯೇ ಶ್ರೇಷ್ಠ ಎಂದಾಗುತ್ತದೆ. ತೇರದಾಳ,[೨೪] ರಾಗಿಮುಸಲವಾಡ,[೨೫] ವಿಜಾಪುರ,[೨೬] ಕೊಲ್ಲಾಪುರ,[೨೭] ಶಾಸನಗಳು ಸೆಟ್ಟಿಗುತ್ತರನ್ನು ಸೂಚಿಸುವುದರಿಂದ ಇವು ಇವರ ವ್ಯಾಪಾರದ ಇಲ್ಲವೆ ವಾಸಿಸುವ ನೆಲೆಗಳಾಗಿದ್ದವೆಂದು ಹೇಳಬಹುದು. ವೀಚಿಸೆಟ್ಟಿ,[೨೮] ಹೋಲಿಸೆಟ್ಟಿ,[೨೯] ಆ ಕಾಲದ ಪ್ರಧಾನ ಸೆಟ್ಟಿಗುತ್ತರಾಗಿ ಶಾಸನಗಳಲ್ಲಿ ಕಾಣಿಸಿಕೊಂಡಿದ್ದಾರೆ.

ಸೆಟ್ಟಿಗುತ್ತರಲ್ಲಿಯೇ ತಳದ ಸೆಟ್ಟಿಗುತ್ತರನ್ನೂ ಕಾಣುತ್ತೇವೆ. ಸ್ವಗ್ರಾಮದ ವರ್ತಕರನ್ನು ಪರಗ್ರಾಮದವರಿಂದ ಬೇರ್ಪಡಿಸಿ ಹೇಳುವಾಗ ಇವರಿಗೆ 'ತಳದ', 'ಸ್ಥಳದ' ಎಂದು ಬಳಸಿದುದು ಕಂಡುಬರುತ್ತದೆ. ಹೀಗಾಗಿ 'ತಳದ ಸೆಟ್ಟಿಗುತ್ತರು' ಸ್ವಗ್ರಾಮದವರು ಅಥವಾ ಸ್ಥಳೀಯ ಸೆಟ್ಟಿಗುತ್ತರು. ವಿಜಾಪುರ ಶಾಸನವು[೩೦] ತಳದ ಸೆಟ್ಟಿಗುತ್ತರಲ್ಲಿ ಸೆಟ್ಟಿಯರನ್ನು ಉಲ್ಲೇಖಿಸುತ್ತದೆ. ದೇವರನಾವದಗಿ[೩೧] ಶಾಸನವು ನಾಡಸೆಟ್ಟಿಗುತ್ತರನ್ನು ಹೆಸರಿಸುತ್ತದೆ. ಇವರು ಆಯಾ ನಾಡಿನ ಸೆಟ್ಟಿಯರನ್ನು ಪ್ರತಿನಿಧಿಸುವ ಸೆಟ್ಟಿಗುತ್ತರಾಗಿದ್ದರೆಂದು ಹೇಳಬಹುದು.

ನಕರರು :

ಮಧ್ಯಕಾಲೀನ ಕರ್ನಾಟಕದ ಪಟ್ಟಣಗಳ ವ್ಯಾಪಾರದಲ್ಲಿ ನಕರರು ಗಮನಾರ್ಹವಾದ ಪಾತ್ರವಹಿಸಿದ್ದಾರೆ. ಶಾಸನಗಳು ಇವರನ್ನು ಅಂಗಡಿ ಸೆಟ್ಟಿಯರೆಂದು ಕರೆದಿರುವುದರಿಂದ ಇವರು ಸಂತೆ, ಪೇಟೆಗಳಿಗೆ ವಿವಿಧ ಸರಕುಗಳನ್ನು

ಖರೀದಿಸಿ ಸ್ಥಿರವಾದ ಅಂಗಡಿ ಇಲ್ಲವೆ ಮಳಿಗೆಗಳನ್ನಿಟ್ಟು ಮಾರುವ ವ್ಯಾಪಾರಿಗಳೆಂದು ಹೇಳಬಹುದು.[೧೮೨] ತೇರದಾಳ,[೧೮೩] ಅಡಕಿ,[೧೮೪] ಪಟಾನ್‌ಚೆರು,[೧೮೫] ಕಾಮಧೇನು,[೧೮೬] ಮುದನೂರು,[೧೮೭] ಬಳ್ಳಿಗಾವೆ,[೧೮೮] ವಿಜಾಪುರ,[೧೮೯] ಲಕ್ಷ್ಮೇಶ್ವರ,[೧೯೦] ಏರಗಿ,[೧೯೧] ಬಸ್ತಿಹಳ್ಳಿ,[೧೯೨] ಸಿರಿವಾಳ್[೧೯೩] ಇವು ಮೂರನೆಯ ಸೋಮೇಶ್ವರನ ಕಾಲದಲ್ಲಿ ನಕರರು ವಾಸಿಸುತ್ತಿದ್ದ ಇಲ್ಲವೆ ವ್ಯಾಪಾರ ಮಾಡುತ್ತಿದ್ದ ಪಟ್ಟಣಳಾಗಿದ್ದವು.

ಮುಮ್ಮುರಿದಂಡ :

ಮುಮ್ಮುರಿದಂಡ ವ್ಯಾಪಾರಿಗಳ ಸೈನ್ಯವೆಂಬ ಅಭಿಪ್ರಾಯವನ್ನು ಕೆಲವಿದ್ವಾಂಸರು ವ್ಯಕ್ತಪಡಿಸಿರುವರಾದರೂ[೧೯೪] ಅವರು ಮಧ್ಯಕಾಲೀನ ಕರ್ನಾಟಕದ ಪ್ರಮುಖ ವರ್ತಕರ ಪ್ರಕಾರವೆಂಬುದು ಈಗ ಸ್ಥಿರಪಟ್ಟಿದೆ.[೧೯೫] ಡಾ. ಆರ್. ಎನ್. ಗುರುವ ಅವರು ಎತ್ತು, ಕತ್ತೆ, ಕೋಣ, ಈ ಮೂರು ತರಹದ ವಾಹನ ಮೇಲೆ ಸರಕುಗಳನ್ನು ಹೇರಿಕೊಂಡು ವ್ಯಾಪಾರ ಮಾಡುವ ವರ್ತಕ ತಂಡ ಎಂದು ಹೇಳಿದ್ದಾರೆ.[೧೯೬] ಆದ್ದರಿಂದ ಇವರು ಸರಕು ಹೇರಿಕೊಂಡು ಸಂತೆ, ಪೇಟೆಗಳಿಗೆ ಹೋಗಿ ಮಾರಾಟ ಮಾಡುವ ವರ್ತಕರೆಂದು ಹೇಳಬಹುದು. ಕೆಲವು ಸಲ ಅಲ್ಲಿಯೇ ಸರಕು ಖರೀದಿಸಿ ಬೇರೆ ಬೇರೆ ಸ್ಥಳಗಳಲ್ಲಿ ಮಾರುತ್ತಿದ್ದರು. ಇವರು ಎಲೆ, ಅಡಿಕೆ, ಅರಿಶಿಣ, ಮೆಣಸು, ಜೀರಿಗೆ, ಅಜವಾನ ಮೊದಲಾದವುಗಳ ವ್ಯವಹಾರ ನಡೆಸುತ್ತಿದ್ದರು.[೧೯೭] ಇದರಿಂದ ಅವರು ಸಂಚರಿಸುವ ವರ್ತಕರೆಂದು ಸ್ಪಷ್ಟವಾಗುತ್ತದೆ. ಜೆಡಜರ್ಲ್,[೧೯೮] ನಾಡ,[೧೯೯] ಸೇಡಂ[೨೦೦] ಪಟ್ಟಣಗಳು ಗ್ರಾಮ, ಸೋಮೇಶ್ವರನ ಕಾಲದ ಮುಮ್ಮುರಿದಂಡಗಳ ವ್ಯಾಪಾರಿ ನೆಲೆಗಳಾಗಿದ್ದವು.

ವಡ್ಡ ವ್ಯವಹಾರಿ:

ಹಿರಿಯ ವ್ಯಾಪಾರಿ ಎಂಬರ್ಥದ ವಡ್ಡ ವ್ಯಾಪಾರಿಗಳು,[೨೦೧] ಅರಸನಿಂದ ನಿಯಮಿತಗೊಂಡು ಬೆಲೆ ಬಾಳುವ ವಸ್ತುಗಳ ಸಗಟು ವ್ಯಾಪಾರ ಕೈಕೊಂಡಿದ್ದರು. ಮೂರನೆಯ ಸೋಮೇಶ್ವರನ ಕಾಲದ ರಾಮದುರ್ಗ ಶಾಸನದಲ್ಲಿ[೨೦೨] ಮಹಾಮಂಡಳೇಶ್ವರ ವೀರನೊಳಂಬ ಇರುಂಗೋಳ ಚೋಳ ಮಹಾರಾಜನು ವಡ್ಡವ್ಯಾವಹಾರಿ ಬೀವಿಸೆಟ್ಟಿ ಪ್ರತಿಷ್ಠೆ ಮಾಡಿಸಿದ ಭೀಮೇಶ್ವರ ದೇವರ ಸೇವೆಗೆ ಆರು ಮತ್ತರು ಭೂಮಿ ಒಂದು ಹೂದೋಟ, ಒಂದುಗಾಣ, ಒಂದು ಮನೆ, ನಿವೇಶನಗಳನ್ನು ದತ್ತಿ ನೀಡಿದ ವಿವರವನ್ನಲ್ಲದೆ, ಬೀವಿಸೆಟ್ಟಿಯ ವಂಶಾವಳಿಯನ್ನು ಸಹ ದಾಖಲಿಸಿದೆಯಲ್ಲದೆ ಬೀವಿಸೆಟ್ಟಿಯನ್ನು 'ಬಂಧುಜನ ಕಲ್ಪವ್ರಿಕ್ಷಂ, ಗುಣನಿಧಿನಿಧಾನಂ, ಸತ್ಯರತು ನಾಕರಂ ಪರಾಂಗನಾಪುತ್ರಂ ಶ್ರೀ ಭೀಮೇಶ್ವರದೇವಲಬ್ದವರ ಪ್ರಸಾದಂ'' ಎಂದು ಗುಣಗಾನ ಮಾಡಿದೆ. ಇದರಿಂದ ಈ ಭೀಮೇಶ್ವರ ದೇವರ ಭಕ್ತನೆಂಬ ಅಂಶ ಹೊರಬೀಳುತ್ತದೆ. ಶಾಸನದಲ್ಲಿ ಬರುವ ಬೀವಿಸೆಟ್ಟಿಯ ವಂಶಾವಳಿ ಹೀಗಿದೆ.

ಬಾಪುಸೆಟ್ಟಿ + ಬಮ್ಮಿಕವ್ವೆ

ಬೀವಿಸೆಟ್ಟಿ

ದುಗ್ಗವತ್ತಿ ಶಾಸನದ[೨೦೩] ವಡ್ಡವ್ಯಾಪಾರಿ ನಂಬಿಗಣ್ಣ ಸೆಟ್ಟಿಯರು ಕೋಗಳಿಯಿಯನೂಱ ಬಳಿಯ ಬಿಕ್ಕಿಗನೆಳ್ಪತ್ತರೊಳಧಿ ಗ್ರಾಮ.

ಗವಚಿ-ಗಾತ್ರಿಗ :

ಕನ್ನಡ ಶಾಸನಗಳಲ್ಲಿ ವಿಳ್ಯೆದೆಲೆ ಮಾರಾಟಕ್ಕೆ ಸಂಬಂಧಿಸಿದಂತೆ ಗವಚಿ-ಗಾತ್ರಿಗರ ಉಲ್ಲೇಖ ಕಂಡುಬರುತ್ತದೆ. ಆದರೆ ಗವಚಿ-ಗಾತ್ರಿಗ ಶಬ್ದ ನಿಷ್ಪತ್ತಿ ಅವರು ಎಲೆ ಮಾರಾಟಗಾರರೆಂಬುದನ್ನು ಸಾಬೀತುಪಡಿಸುವುದಿಲ್ಲ. ಈ ಪದಗಳ ಅರ್ಥದ ಬಗೆಗೆ ವಿದ್ವಾಂಸರಲ್ಲಿ ಖಚಿತವಾದ ಅಭಿಪ್ರಾಯಗಳಿಲ್ಲ. ಡಾ. ಚಿದಾನಂದ ಮೂರ್ತಿಯವರು 'ಗವಚಿ' ಎಂಬುದು ವರ್ತಕರಿಗೆ ಇದ್ದ ಸಾಮಾನ್ಯ ಹೆಸರು ಎಂದು ಹೇಳಿದರೆ,[೨೦೪] ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು ವರ್ತಕರಲ್ಲಿನ ಒಂದು ಬಗೆಯ ವರ್ಗವೆಂದು ಹೇಳಿದೆ. ಡಾ. ಬಿ. ಆರ್. ಹಿರೇಮಠರವರು ಗವಚಿ, ಕತ್ತೆ ಮೊದಲಾದ ಪ್ರಾಣಿಗಳ ಮೇಲೆ ವೀಳ್ಯದೆಲೆ ಹೇರಿಕೊಂಡು ಊರಿಂದೂರಿಗೆ ಅಲೆಯುತ್ತ ವ್ಯಾಪಾರ ಮಾಡುವ ವರ್ತಕರ ಪ್ರಕಾರ[೨೦೫] ಎಂದು ಗುರುತಿಸಲು ಪ್ರಯತ್ನಿಸಿದ್ದಾರೆ. ಆದರೆ ಇಂದಿನ ವೀರಶೈವ ಬಣಜಿಗರ ಅಡ್ಡ ಹೆಸರುಗಳಾದ ಗೌರ (ಗವರಿ), ಗೌರಶಟ್ಟಿ (ಗವರಶಟ್ಟಿ), ಕೋರಿ, ಕೋರಿಶೆಟ್ಟಿ, ಕವದಿ (ಕೌದಿ), ಕವಳಿ ಕತ್ತಿಗಳ ಹಿನ್ನೆಲೆಯಲ್ಲಿ ಗವಚಿ-ಗಾತ್ರಿಗ ಶಬ್ದ ನಿಷ್ಪತ್ತಿಯನ್ನು ಇನ್ನೂ ನಿರ್ದಿಷ್ಟವಾಗಿ ಗುರುತಿಸಹೊರಟ ಡಾ. ಎಂ. ಎಂ. ಕಲಬುರ್ಗಿಯವರು ಗವಚಿ ಎಂಬುದರ ನಿಜರೂಪ 'ಕವರೆ' ಇರಬಹುದು. ಇದರ ಇನ್ನೊಂದು ರೂಪ 'ಕವರೆ' (ಎತ್ತು, ಗೂಳಿ) ಹೀಗಾಗಿ ಗವಳೆಗಳು ಎಂದರೆ ಕವಲೆ ಎತ್ತಿನ[೨೦೬] ಮೇಲೆ ವಸ್ತುಗಳನ್ನು ಹೇರಿಕೊಂಡು ವ್ಯಾಪಾರ ಮಾಡುವವರು ''ಎತ್ತಿನ ವಣಿಜರು'' ಎಂಬ ಉಲ್ಲೇಖ ಇವರನ್ನೇ ಸೂಚಿಸುವಂತೆ ಇದೆ. ಹೀಗಾಗಿ ಡಾ. ಬಿ. ಆರ್. ಹಿರೇಮಠರವರು ವೀಳ್ಯದೆಲೆಯನ್ನೇ ಮಾರುವವರು ಆಗಿರಲಿಕ್ಕಿಲ್ಲ, ಎತ್ತನ್ನು ಮಾತ್ರ ಸಾರಿಗೆ-ಸಾಧನನ ಮಾಡಿಕೊಂಡು ಯಾವುದೇ ವಸ್ತುವನ್ನು (ಎಲೆ ಸಹಿತ) ಮಾರಾಟ ಮಾಡುವ ವ್ಯಾಪಾರಿಗಳಾಗಿರಬೇಕು ಎಂದಿದ್ದಾರೆ.[೨೦೭]

ಇನ್ನೂ ಮುಂದುವರೆದು ಕಲಬುರ್ಗಿಯವರು ಶಾಸನದಲ್ಲಿ ಗವಚಿ-ಗಾತ್ರಿಗ ಎಂಬ ವರ್ತಕ ಸೂಚಿಪದಗಳು ಜೊತೆ-ಜೊತೆಯಾಗಿಯೇ ಬರುವುದರಿಂದ ಗವಚಿಗಳು ಎತ್ತು ಬಳಸುವವರಾದರೆ ಗಾತ್ರಿಗರು ಕತ್ತೆ ಬಳಸುವ ವರ್ತಕರೇ? ಎಂಬ ಅನುಮಾನವನ್ನು (ಗಾತ್ರಿಗ > ಕಾತ್ತಿರಿಗ > ಕಾತ್ತಿರಿ > ಕಾತ್ತಿಕ > ಕತ್ತೆ > ಕತ್ತಿ) ವ್ಯಕ್ತಪಡಿಸಿದ್ದಾರೆ. ಕ್ರಿ.ಶ. ೧೧೯೨ರ ವೀರಗಲ್ಲು ಶಾಸನದಲ್ಲಿ ಈ ವ್ಯಾಪಾರಿ ವರ್ಗವನ್ನು ಕತ್ತೆಯ ಶೆಟ್ಟಿಯೆಂದು ನೇರವಾಗಿ ಕರೆಯಲಾಗಿದೆ ಎಂದಿದ್ದಾರೆ.[೨೦೮] ಇಲ್ಲಿ ಕಲಬುರ್ಗಿಯವರ ನಿಷ್ಪತ್ತಿಯನ್ನು ಒಪ್ಪಬಹುದಾದರೂ ಗವಚಿ-ಗಾತ್ರಿಗರು ವೀಳ್ಯೆದೆಲೆಯನ್ನೇ ಮಾರುವವರಾಗಿರದೆ ಯಾವುದೇ ವಸ್ತುವನ್ನು (ಎಲೆ-ಸಹಿತ) ಮಾರಾಟ ಮಾಡುವ ವ್ಯಾಪಾರಿಗಳಾಗಿರಬೇಕು ಎಂಬ ವಾದವನ್ನು ಶಾಸನಗಳು ಸಮರ್ಥಿಸುವುದಿಲ್ಲ. ಆದರೆ ಗವಚಿ-ಗಾತ್ರಿಗ ಪದ ಶಾಸನಗಳಲ್ಲಿ ವೀಳ್ಯೆದೆಲೆ ಮಾರಾಟಕ್ಕೆ ಸಂಬಂಧಿಯಾಗಿ ಮಾತ್ರ ಕಾಣಿಸಿಕೊಂಡಿದೆ.

ಅರೆ ಶಾಸನವು[೧೯೯] ಗವರೆ-ಗಾತ್ರಿಗರು ಮತ್ತು ಇತರ ವ್ಯಾಪಾರಿಗಳು ಸೇರಿ ಕೊಲ್ಹಾಪುರದ ರೂಪನಾರಾಯಣ ಬಸದಿ ಆಚಾರ್ಯ ಶ್ರುತಕೀರ್ತಿ ದೇವರ ಸಮ್ಮುಖದಲ್ಲಿ ದಾನ ನೀಡುದದನ್ನು ಗಮನಿಸಿದರೆ ಇವರು ಧಾರ್ಮಿಕ ಕಾರ್ಯದಲ್ಲಿಯೂ ಸಹ ಭಾಗವಹಿಸುತ್ತಿದ್ದರೆಂಬುದು ತಿಳಿದುಬರುತ್ತದೆ.

ವೀಳ್ಯದೆಲೆ ವರ್ತಕರಲ್ಲಿ ಗವರೆ ಗಾತ್ರಿಗ ಈ ಎರಡು ಪಂಗಡಗಳಲ್ಲದೆ ತಂಬುಲಿಗರೆಂಬ ಪಂಗಡವೂ ಇದ್ದಿತು. ಸಿರಿವಾಳವು ಸೋಮೇಶ್ವರನ ಕಾಲದಲ್ಲಿ ತಂಬುಲಿಗ ಸಾಸಿರ್ವರ ನೆಲೆಗಳಲ್ಲೊಂದಾಗಿತ್ತು.[೨೦೦] ಗವರೆ-ಗಾತ್ರಿಗರು ಈ ಸಂಘದ ಸದಸ್ಯರಾಗಿದ್ದರೋ ಇಲ್ಲವೋ ಎಂಬುದು ತಿಳಿದು ಬರುವುದಿಲ್ಲ. ಅಲ್ಲದೆ ಈ ಮೂರು ಪಂಗಡಗಳ ಕಾರ್ಯ ಚಟುವಟಿಕೆಯ ವ್ಯಾಪ್ತಿ ಅವುಗಳ ಸ್ಥಾನ, ಸ್ವರೂಪ, ಸಾಮ್ಯ, ವೈಶಮ್ಯ ಸಾಮಾಜಿಕ ಸ್ಥಿತಿಗಳು ಶಾಸನಗಳಿಂದ ಸ್ಪಷ್ಟಗೊಳ್ಳುವುದಿಲ್ಲ.

ಅಯ್ಯಾವೊಳೆ ಐನೂರ್ವರು :

ಇಂದಿನ ಬಿಜಾಪುರ ಜಿಲ್ಲೆಯ ಇತಿಹಾಸ ಪ್ರಸಿದ್ಧ ಐಹೊಳೆಯು ಐದುನೂರು ವರ್ತಕ ಸದಸ್ಯರ ಸುಪ್ರಸಿದ್ಧ ಕೇಂದ್ರವಾಗಿತ್ತು. ಹತ್ತನೆಯ ಶತಮಾನದ ಪೂರ್ವದಲ್ಲಿದ್ದ, ಈ ವರ್ತಕ ಸಂಘ ಅನಂತರ ಕಾಲದಲ್ಲಿ ಐಹೊಳೆಯಲ್ಲಿ ಅಸ್ತಿತ್ವದಲ್ಲಿರಲಿಲ್ಲ. ಆದರೂ ಮಧ್ಯಕಾಲೀನ ಕರ್ನಾಟಕದ ವರ್ತಕರಾದ ಬಣಂಜಿಗ, ಸೆಟ್ಟಿ, ನಕರ, ಮುಮ್ಮುರಿದಂಡ ಗವರೆ-ನಾನಾದೇಶಿ ಮೊದಲಾದವರು ಈ ವರ್ತಕ ಸಂಘದ ಹೆಸರಿನಿಂದ ತಮ್ಮನ್ನು ಗುರುತಿಸಿಕೊಂಡಿದ್ದಾರೆ.[೨೦೧] ಸೋಮೇಶ್ವರನ ಕಾಲದ ಐಹೊಳೆ,[೨೦೨] ಜಡಜರ್ಲ ಶಾಸನಗಳು ಅಯ್ಯಾವೊಳೆ ಐನೂರ್ವರನ್ನು ಹೆಸರಿಸಿವೆ.[೨೦೩]

ನಾನಾದೇಶಿ-ಉಭಯ ನಾನಾದೇಶಿ :

ಮೂರನೆಯ ಸೋಮೇಶ್ವರನ ಕಾಲದಲ್ಲಿ ಕಂಡುಬರುವ ನಾನಾದೇಶಿ,[೨೦೪] ಉಭಯ,[೨೦೫] ನಾನಾದೇಶಿಗಳು ವರ್ತಕರಾದರೂ ವಿಶಿಷ್ಟ ವರ್ತಕ ವರ್ಗಕ್ಕೆ ಸೇರಿದವರಲ್ಲ. ಮಧ್ಯಕಾಲೀನ ಕರ್ನಾಟಕದಲ್ಲಿ 'ದೇಶ' ಒಂದು ನಾಡಿನ ವ್ಯಾಪ್ತಿಯಲ್ಲಿ ಬಳಕೆಗೊಳ್ಳುವ ಪದವಾಗಿತ್ತು. ಕಾರಣ ನಾನಾದೇಶಿ ಎಂದರೆ ವಿವಿಧ ನಾಡುಗಳ ವರ್ತಕರೆಂದು ಹೇಳಬಹುದು. ಪಾದಮಾರ್ಗ, ಜಲಮಾರ್ಗ, ಇಲ್ಲವೆ ದೇಶ, ನಾನಾದೇಶಗಳಲ್ಲಿ ವ್ಯಾಪಾರ ಮಾಡುವವರು ಉಭಯ ನಾನಾದೇಶಿಗಳು,[೨೦೬] ಗಂಗಾಪುರಂ ಶಾಸನ[೨೦೭]ದಲ್ಲಿ ಕಂಡುಬರುವ ''ಸಾಗರಯುಕರು ಕೋಟಿಸೆಟ್ಟಿ, ಪೋಟಿಸೆಟ್ಟಿ, ಪೆರ್ಮಾಡಿ ಸೆಟ್ಟಿ'' ಎಂಬ ಉಲ್ಲೇಖ ಗಮನಿಸಿದರೆ ಇವರು ಜಲಮಾರ್ಗದ ಮೂಲಕ ವ್ಯಾಪಾರ ಮಾಡುವ ವರ್ತಕರೆಂದು ಹೇಳಬಹುದು ಅಲ್ಲದೆ ಉಭಯ ನಾನಾದೇಶಿಗಳು ಸೆಟ್ಟಿಯರು, ಸೆಟ್ಟಿಗುತ್ತರು, ಮುಮ್ಮುರಿದಂಡಗಳೊಂದಿಗೆ ಸೇರಿ ದೇವಾಲಯಗಳಿಗೆ ದಾನ-ದತ್ತಿಗಳನ್ನು ಬಿಡುವ ಕಾರ್ಯವನ್ನು ಮಾಡುತ್ತಿದ್ದರೆಂದು ಕಾಣುತ್ತದೆ.

ವರ್ತಕ ಸಂಘ (ಶ್ರೇಣಿ)ಗಳು :

ವೇದಕಾಲದಿಂದ ಮುಂದುವರೆದುಕೊಂಡು ಬಂದ ವ್ಯಾಪಾರ ಸಮೂಹದ ಚಟುವಟಿಕೆಗಳು ಉತ್ಪಾದನೆಯ ವಿತರಣೆಯ ಸಂಘಟನೆಯಿಂದಾಗಿ ಪ್ರಾಚೀನ ನಗರ ಜೀವನದ ಮಹತ್ವದ ಬಾಗವಾಗಿದ್ದವು. ಇದರಿಂದ ''ದೊಡ್ಡ ಸಂಖ್ಯೆಯ'' ಆಯಾ ವೃತ್ತಿ ಸಂಘಗಳನ್ನು ರಚಿಸಿದರು. ಹೀಗೆ ಸಮಾನ ವೃತ್ತಿಯವರು ಒಟ್ಟಾಗಿ ಸಹಕಾರದಿಂದ ವ್ಯವಹರಿಸುವುದು ಸಂಘ (ಶ್ರೇಣಿ)ಗಳಿಗೆ ಮೂಲವಾಗಿದೆ.

ಶ್ರೇಣಿ (ಸಂಘ) ಮೊದಮೊದಲು ಯಾವುದೇ ವರ್ಣದ ಕಸಬುದಾರರ ಅಥವಾ ಸಣ್ಣ ವ್ಯಾಪಾರಿಗಳ ಸಂಘಟನೆಯನ್ನು ಸೂಚಿಸುತ್ತಿತ್ತು. ನಂತರ ಮಧ್ಯಕಾಲೀನ ಕೃತಿಗಳಲ್ಲಿ ಉಲ್ಲೇಖಗೊಂಡ ಅಷ್ಟಾದಶ ಶ್ರೇಣಿಗಳು ಜಾತಿಯ ಪರ್ಯಾಯ ಪದಗಳಂತೆ ಬಳಕೆಯಾಗತೊಡಗಿದವು.[೨೦೮] ಹೆಸರೊಂದನ್ನು ಬಿಟ್ಟರೆ ಮೊದಲಿನ ಶ್ರೇಣಿಗಳನ್ನು ಯಾವುದರಲ್ಲಿಯೂ ಹೋಲದ ಈ ಸ್ಥಳೀಯ ಸಂಘ, ಶ್ರೇಣಿಗಳನ್ನು ಒಂದರ್ಥದಲ್ಲಿ ಮೊದಲಿನವುಗಳ ವಿಕೃತ ರೂಪಗಳೆಂದು ಕರೆಯಬಹುದು.[೨೦೯]

ಮೂರನೆಯ ಸೋಮೇಶ್ವರನ ಕಾಲದ ಶಾಸನಗಳಲ್ಲಿ ತಂಬುಲಿಗ ಸಾಸಿರ್ವ್ವರು,[೨೧೦] ಅಯ್ಯಾವೊಳೆ ಐನೂರ್ವರು[೨೧೧] ಮೂಲಿಗರು (ರೋಕ ವ್ಯಾಪಾರಿಗಳು)[೨೧೨] ಕೊತ್ತಳಿ ಒಡೆಯರು,[೨೧೩] ಮೊದಲಾದ ಸಂಘ ಸಮೂಹಗಳು ಉತ್ಪಾದನೆ-ವಿತರಣೆಯಲ್ಲಿ ತೊಡಗಿದ್ದವು. ಇವುಗಳಲ್ಲಿ ಅಯ್ಯಾವೊಳೆ ಐನೂರ್ವರು ಗ್ರಾಮಸೂಚಿಯಾಗಿದ್ದರೆ ಉಳಿದವು ವೃತ್ತಿ ಸೂಚಿ ಹೆಸರುಗಳಾಗಿವೆ.

ಇನ್ನು ಶಾಸನಗಳಲ್ಲಿ ಕಾಣಸಿಕೊಳ್ಳುವ ಬಣಂಜಿಗರಯ್ನೂರ್ವರು, ತಳದವಯ್ನೂರ್ವರು ಮತ್ತು ವಣಜಿಗ ಸ್ವಾಮಿಗಳಯ್ನೂರ್ವರು ಮೊದಲಾದವು ವರ್ತಕ ಸಂಘದ ಪ್ರಕಾರಗಳನ್ನು ಸೂಚಿಸದೆ ವರ್ತಕರನ್ನು ತಿಳಿಸುತ್ತವೆ. ಸೋಮೇಶ್ವರನ ಕಾಲದ ಆರ್ಥಿಕಾಭಿವೃದ್ಧಿಯಲ್ಲಿ ಗಮನಾರ್ಹವಾದ ಪಾತ್ರವಹಿಸಿದ ಈ ವರ್ತಕರು ವ್ಯಾಪಾರವನ್ನೆಲ್ಲ ತಮ್ಮ ಹಿಡಿತದಲ್ಲಿಟ್ಟುಕೊಂಡು ನಾಡಿನ ವ್ಯಾಪಾರೋದ್ಯಮವನ್ನು ವ್ಯಾಪಕವಾಗಿ ಬೆಳೆಸಿದರೆನ್ನಬಹುದು.

ನಾಣ್ಯಗಳು :

ಕಲ್ಯಾಣದ ಚಾಲುಕ್ಯರು ತಮ್ಮ ರಾಜಕೀಯ ಸಾಧನೆಗಳಿಂದಾಗಿ ಇತಿಹಾಸಕಾರರ ಗಮನವನ್ನು ಸೆಳೆದರೂ ಸಹ ಅವರ ಕಾಲದಲ್ಲಿನ ನಾಣ್ಯಪದ್ಧತಿಯು ಅಷ್ಟೊಂದು ಉತ್ತಮವಾಗಿರಲಿಲ್ಲ. ತೀರಾ ಇತ್ತೀಚಿನವರೆಗೂ ಇವರ ಕಾಲದ ನಾಣ್ಯಚಲಾವಣೆ ಪದ್ಧತಿಯ ಬಗ್ಗೆ ಅಷ್ಟೊಂದು ವ್ಯವಸ್ಥಿತವಾದ ಅಧ್ಯಯನಗಳು ಆಗಿಲ್ಲ. ಆದರೂ ಸಹ ಕೃಷ್ಣಶಾಸ್ತ್ರಿ, ದೇಶಿಕಾಚಾರಿ, ಅಲ್ತೇಕರ, ಭಂಡಾರಕರ, ರಾಮರಾವ್, ಎಮ್. ಎಚ್. ಕೃಷ್ಣ ಮೊದಲಾದ ವಿದ್ವಾಂಸರು ಇವರ ಕಾಲದ ನಾಣ್ಯಗಳ ಕುರಿತು ಕೆಲವು ಲೇಖನಗಳನ್ನು ಪ್ರಕಟಿಸಿದ್ದಾರೆ.[೨೧೪]

ಮೂರನೆಯ ಸೋಮೇಶ್ವರನ ನಾಣ್ಯ ವ್ಯವಸ್ಥೆಯನ್ನು ಇವನ ಕಾಲದ ಶಾಸನಗಳಲ್ಲಿ ಬರುವ ವಿವರಣೆ ಮತ್ತು ಸಮಕಾಲೀನ ಸಾಹಿತ್ಯಿಕ ಆಧಾರಗಳಲ್ಲಿ ಕಂಡುಬರುವ ಮಾಹಿತಿಯ ಮೇಲಿಂದ (ಆಧಾರದಿಂದ) ಅಧ್ಯಯನ ಮಾಡಬಹುದು. ಆದರೆ ಶಾಸನಗಳಲ್ಲಿ ಕಂಡುಬರುವ ಕೊರತೆಯೆಂದರೆ ಅವು ಕೂಲಂಕುಷವಾದ ಮಾಹಿತಿ ನೀಡದೆ ಕೇವಲ ಸ್ಥೂಲ ಪರಿಚಯ ನೀಡುತ್ತವೆ. ಈತನ ಕಾಲದ ಶಾಸನಗಳಲ್ಲಿ ಮೇಲಿಂದ ಮೇಲೆ ಉಲ್ಲೇಖಿಸಲ್ಪಟ್ಟಿರುವ ನಾಣ್ಯಗಳೆಂದರೆ ಗದ್ಯಾಣ,[೨೨೫] ಪೊನ್ನು,[೨೨೬] ವೀಸ, ಅರೆವೀಸ,[೨೨೭] ಹೊಂಗೆಯರ ವೀಸ,[೨೨೮] ಹಾಗ,[೨೨೯] ಪೊಂಗೆ,[೨೩೦] ಗುಳಿಕೆ,[೨೩೧] ಈ ನಾಣ್ಯಗಳನ್ನು ಟಂಕಿಸುತ್ತಿದ್ದ ಸ್ಥಳಗಳನ್ನು ಕಮ್ಮಟ[೨೩೨]ಗಳೆಂದು ಅಚ್ಚಿನ ಟಂಕಶಾಲೆಗಳೆಂದು ಕರೆಯುತ್ತಿದ್ದರು.[೨೩೩] ಅಕ್ಕಸಾಲಿಗಳು ಅಥವಾ ಕಮ್ಮಟದೋಜುಗಳು,[೨೩೪] ಪ್ರತ್ಯೇಕವಾಗಿ ಶ್ರೇಣಿಗಳನ್ನು ಸ್ಥಾಪಿಸಿಕೊಂಡಿದ್ದರು. ದೋರಸಮುದ್ರ,[೨೩೫] ಲೊಕ್ಕಿಗುಂಡಿ,[೨೩೬] ಸೂಡಿ,[೨೩೭] ಮುಂತಾದ ಪ್ರದೇಶಗಳಲ್ಲಿರುವ ಕಮ್ಮಟಗಳು ಪ್ರಸಿದ್ಧವಾಗಿದ್ದವು. ರಾಜನು ಈ ಕಮ್ಮಟಗಳ ಮೇಲ್ವಿಚಾರಣೆಗೆ ಅಧಿಕಾರಿಗಳನ್ನು ನೇಮಿಸುತ್ತಿದ್ದನು.[೨೩೮] ಕೆಲವೊಮ್ಮೆ ದೇವಸ್ಥಾನಗಳೂ ಕೂಡ ಈ ಕೆಲಸವನ್ನು ನಿರ್ವಹಿಸುತ್ತಿದ್ದವು.[೨೩೯]

ಗದ್ಯಾಣ (ಲ್ಯಾಟಿನ್ ಭಾಷೆಯ ಗಾರ್ಡಿಯನ್) ಚಿನ್ನದ ನಾಣ್ಯವಾದುದರಿಂದ ಅದನ್ನು 'ಪೊನ್ನು' ಎಂದು ಕರೆಯಲಾಗಿದೆ. ಇದರ ತೂಕವು ೫೮ ರಿಂದ ೬೦.೧ ಗ್ರೇನುಗಳೆಂದು ಕಾಂಗ್ರಿಂಗ್‌ಟನ್[೨೪೦] ಹೇಳಿದರೆ, ಸುಮಾರು ೯೬ ಗ್ರೇನುಗಳೆಂದು ಡಾ. ಅಲ್ತೇಕರರು, ಅಪ್ಪಾದೊರೆಯವರು ೬೩ ಗ್ರೇನಗಳೆಂದು ಅಭಿಪ್ರಾಯ ಪಡುತ್ತಾರೆ.[೨೪೧] ಇದರಿಂದ ಗದ್ಯಾಣ, ಪೊನ್ (ನಾಣ್ಯಗಳು) ಪ್ರಾದೇಶಿಕ ವ್ಯತ್ಯಾಸ ಪಡೆದಿರುವುದು ಸ್ಪಷ್ಟವಾಗುತ್ತದೆ. ಈ ಕಾಲದ ಶಾಸನಗಳು ಪೊನ್ನು[೨೪೨] ಲೊಕ್ಕಿಯ ಪೊನ್ನು[೨೪೩] ಹೆಸರಿಸುತ್ತವೆ. ಕಟಕ ಗದ್ಯಾಣ ರಾಜಧಾನಿಯಲ್ಲಿ (ಕಟಕ) ಟಂಕಿಸಿದ ಗದ್ಯಾಣವೆನ್ನುತ್ತಾರೆ. ಡಾ. ಕೆ. ವಿ. ರಮೇಶ್[೨೪೪] ಅದರಂತೆ ಲೊಕ್ಕಿಗುಂಡಿಯಲ್ಲಿ ಟಂಕಿಸಿದ್ದು ಲೊಕ್ಕಿ ಪೊನ್ನು ಆಗಿರಬಹುದು. ಹಾಗೆಯೇ ವೀಸದಲ್ಲಿ ಕೊಡವೀಸ,[೨೪೫] ಅರೆವೀಸ,[೨೪೬] ಹೊಂಗಿಯರೆ ವೀಸ[೨೪೭] ಮುಂತಾದ ನಾಣ್ಯಗಳು ಚಲಾವಣೆಯಲ್ಲಿದ್ದವು.

ಅಂದು ಬಳಕೆಯಲ್ಲಿದ್ದ ನಾಣ್ಯಗಳ ಸಂಬಂಧವನ್ನು ರಾಜಾದಿತ್ಯ ತನ್ನ ''ವ್ಯವಹಾರ ಗಣಿತ''ದಲ್ಲಿ ಹೇಳಿದ್ದಾನೆ.[೨೪೮] ಅವನ ಪ್ರಕಾರ ಗದ್ಯಾಣಕ್ಕೂ ಉಳಿದ ನಾಣ್ಯಗಳಿಗೂ ಇರುವ ಸಂಬಂಧವನ್ನು ಗುರುತಿಸಬಹುದು.

೪ ಕಾಣಿ	=	೧ ವೀಸ
೫ ವೀಸ	=	೧ ಹಾಗ
೪ ಹಾಗ	=	೧ ಪಣ
೧೦ ಪಣ	=	೧ ಗದ್ಯಾಣ

ರಾಜಾದಿತ್ಯನ ''ಲೀಲಾವತಿ ಗಣಿತ'' ಇನ್ನೂ ವಿವರವಾಗಿ ನಾಣ್ಯಗಳ ಸಂಬಂಧವನ್ನು ಹೀಗೆ ತಿಳಿಸುತ್ತದೆ.[೨೫೯]

೧ ವರಹ	=	೨ ಹೊನ್ನು
೧ ಹೊನ್ನು	=	೫ ಪಣ
೧ ಹಣ	=	೨ ಅಡ್ಡ
೧ ಅಡ್ಡ	=	೨ ಹಾಗ
೧ ಹಾಗ	=	೨ ಬೇಳೆ
೧ ಬೇಳೆ	=	೨ ವೀಸ
೧ ವೀಸ	=	೨ ಅರೆವೀಸ
೧ ಅರೆವೀಸ	=	೨ ಕಾಣಿ
೧ ಕಾಣಿ	=	೪ ಗಿದ್ದಾಣಿ

ಇಲ್ಲಿನ 'ವರಹ' ಗದ್ಯಾಣವಾಗಿದ್ದು ಅದು ೨ ಹೊನ್ನುಗಳಿಗೆ ಸಮಾನವೆನ್ನುವುದನ್ನು ನೋಡಿದರೆ ಶಾಸನಗಳಲ್ಲಿ ಬರುವ 'ಪೊನ್' ಅರ್ಧ ಗದ್ಯಾಣವೆನ್ನಬೇಕಾಗುತ್ತದೆ. ನಾಣ್ಯಗಳಲ್ಲಿ ಕಡಿಮೆ ಬೆಲೆ ಉಳ್ಳದ್ದು ಗಿದ್ಯಾಣಿ ಎಂಬುದು ಸ್ಪಷ್ಟ. ಬಸವಣ್ಣನವರ ವಚನದಲ್ಲಿ ಕೂಡ ಅರ್ಧಕಾಣಿಯ ಉಲ್ಲೇಖವಿದೆ.[೨೬೦]

ತೂಕ ಮತ್ತು ಅಳತೆಗಳು :

ದವಸ ಧಾನ್ಯಗಳನ್ನು ತೂಗಿ ಮಾರುವ ಮತ್ತು ಅಳೆದು ಮಾರುವ ಪದ್ಧತಿ ಸೋಮೇಶ್ವರನ ಕಾಲದಲ್ಲಿಯೂ ಕೂಡ ಜಾರಿಯಲ್ಲಿದ್ದಿತು. ತೂಗುವ ತಕ್ಕಡಿಯನ್ನು ವಚನಗಳು 'ತ್ರಾಸು' ಎಂದಿವೆ.[೨೬೧] ಬಸವಣ್ಣನವರ ವಚನದಲ್ಲಿ ಕೂಡ ಬಣಜಿಗರು ತೂಗಲು ಬೆನಕವನ್ನು ಉಪಯೋಗಿಸುತ್ತಿದ್ದುದರ ಉಲ್ಲೇಖವಿದೆ.[೨೬೨] ''ಬಣ್ಣವಂ ತೂಗಿಸಿ ಕೊಂಡಲ್ಲಿ'' ಎನ್ನುವುದು ತೂಕದ ಸರಕನ್ನು ಸೂಚಿಸಿರುವಂತಿದೆ.[೨೬೩] ಭಾರ, ಮಳವೆ, ಫಲ, ಬಿಸಿಗೆ, ಕೊಡಿಗೆ, ಬೆಲ್ಲಳಿಗೆ ಮೊದಲಾದ ತೂಕ ವಿಶೇಷಗಳನ್ನು ವಸ್ತುಗಳನ್ನು ತೂಗಲು ಬಳಸುತ್ತಿದ್ದರು.[೨೬೪] ಮಳವೆ,[೨೬೫] ಜವಳ,[೨೬೬] ಫಲ,[೨೬೭] ಈತನ ಕಾಲದ ಶಾಸನಗಳಲ್ಲಿ ಕಾಣಿಸಿಕೊಂಡಿವೆ. ಅಲ್ಲದೆ ವ್ಯವಹಾರ ಗಣಿತವು ಕೂಡ ಅಂದಿನ ತೂಕಗಳನ್ನು ಹೀಗೆ ಹೇಳಿದೆ.[೨೬೮]

೪ ಸುವರ್ಣ	=	೧ ಕರ್ಷ
೪ ಕರ್ಷ	=	೧ ಫಲ
೨೦ ಫಲ	=	೧ ಬಿಸಿಗೆ
೪ ಬಿಸಿಗೆ	=	೧ ತೊಲಿ
೨೦ ತೊಲಿ	=	೧ ಭಾರ

ಅಕ್ಕಿ, ಭತ್ತ, ಮೆಣಸು ಮತ್ತು ಎಣ್ಣೆಯನ್ನು ತುಂಬಿ ಅಳೆಯಲು ಕೊಳಗ,[೨೫೯] ದೇವಮಾನ,[೨೬೦] ಮಾನ,[೨೬೧] ಸೊಳಸ,[೨೬೨] ಸೊಂಟಿಗೆ,[೨೬೩] ಮೊದಲಾದ ಅಳತೆಗಳನ್ನು ಸೋಮೇಶ್ವರನ ಕಾಲದಲ್ಲಿ ಉಪಯೋಗಿಸುತ್ತಿದ್ದರು. ರಾಜಾದಿತ್ಯನು ತನ್ನ ವ್ಯವಹಾರ ಗಣಿತದಲ್ಲಿ ಇವುಗಳ ಸಂಬಂಧವನ್ನು ಹೀಗೆ ಹೇಳಿದ್ದಾನೆ.[೨೬೪]

೪ ಗಿದ್ದ	=	೧ ಸೊಲ್ಲಿಗೆ
೪ ಸೊಲ್ಲಿಗೆ	=	೧ ಮಾನ
೪ ಮಾನ	=	೧ ಬಳ್ಳ
೪ ಬಳ್ಳ	=	೧ ಕೊಳಗ
೨೦ ಕೊಳಗ	=	೧ ಖಂಡುಗ

ಆದರೆ ಸಟ್ಟುಗ ಸೊಳಸಗಳ ಸಂಬಂಧ ಸ್ಪಷ್ಟವಾಗುವದಿಲ್ಲವಾದರೂ ಅವು ಸೊಲಿಗೆಗಿಂತ ಚಿಕ್ಕ ಮಾಪನಗಲಾಗಿರಬೇಕು.

ಎಣ್ಣೆ, ತುಪ್ಪಗಳಂತಹ ದ್ರವ ಪದಾರ್ಥಗಳನ್ನಳೆಯಲು 'ಕೊಡ'[೨೬೫]ವನ್ನು ಉಪಯೋಗಿಸುತ್ತಿದ್ದರು ಎಂದು ತಿಳಿದುಬರುತ್ತದೆ.

ಭೂ-ಮಾಪನ :

ರಾಜಾದಿತ್ಯ ತನ್ನ ವ್ಯವಹಾರ ಗಣಿತದಲ್ಲಿ ಹೊಲಗಳನ್ನಳೆಯಲು ಗಳೆ (ಕೋಲು)ಗಳನ್ನು ಬಳಸುವುದನ್ನೂ ಒಂದೊಂದು ಊರಿಗೂ ಪ್ರತ್ಯೇಕವಾದ 'ಗಳೆ'ಗಳಿರುವುದನ್ನೂ ಹೇಳಿದ್ದಾನೆ.[೨೬೬] ಈ ಅಳತೆಗೋಲುಗಳು ಅವುಗಳನ್ನು ಹೊರಡಿಸಿದವರ ಬಿರುದು ಇಲ್ಲವೆ ಹೆಸರು ಅಥವಾ ದೇವಸ್ಥಾನದ ಹೆಸರು ಅಥವಾ ಬೇರೆ ಬೇರೆ ಪ್ರಮಾಣವನ್ನೊಳಗೊಂಡಿರುವುದು ಕಂಡುಬರುತ್ತದೆ. ಮೂರನೆಯ ಸೋಮೇಶ್ವರನ ಕಾಲದ ಶಾಸನಗಳಲ್ಲಿ ಮುಂಜನಕೋಲು,[೨೬೭] ವಿಷ್ಣುವರ್ಧನನ ಕೋಲು,[೨೬೮] ಧರಣಿದೇವನ ಕೋಲು,[೨೬೯] ಮೂಡಲ ಮಾಣಿಕೇಶ್ವರನ ಕೋಲು,[೨೭೦] ಬೆಳುವಂಕನ ಕೋಲು,[೨೭೧] ಬೀರೊದ್ದನ ಕೋಲು,[೨೭೨] ನಿಗರಂ ಕೋಲು,[೨೭೩] ಕರಿದುಕೋಲು,[೨೭೪] ಹಿರಿಯಕೋಲು,[೨೭೫] ಹಾರುವಕೋಲು,[೨೭೬] ೩೨ ಗೇಣ ಕೋಲು,[೨೭೭] ವಿಷ್ಣುವರ್ಧನನಗಳೆ,[೨೭೮] ಭಯರಾಯಬೆಂಕೊಳ್ವನ ಐವತ್ತು ನಾಲ್ಗೇಣು ಘಳೆ,[೨೭೯] ೪೮ ಗೇಣ ಗಳೆ[೨೮೦] ಮುಂತಾದ ಅಳತೆಕೋಲುಗಳು ಕಂಡುಬರುತ್ತವೆ. ಊರಿಂದೂರಿಗೆ ಭಿನ್ನವಾದ ಈ ಅಳತೆಗೋಲುಗಳನ್ನು ರಾಜನು ನಿರ್ಧರಿಸುತ್ತಿದ್ದನೆನ್ನುವುದಕ್ಕಿಂತ,[೨೮೧] ಆಯಾ ಪ್ರದೇಶದ ಊರುಗಳ ಭೂ-ಫಲವತ್ತತೆ, ಬೆಳೆ, ತೆರಿಗೆಗಳನ್ನನುಸರಿಸಿ ಆಯಾ ಭಾಗದ ಅಧಿಕಾರಿಗಳು, ಪುರ ಪ್ರಮುಖರು

ನಿರ್ಧರಿಸುತ್ತಿದ್ದರೆನ್ನುವುದು ಸಮಂಜಸವೆನಿಸುತ್ತದೆ. ಅಲ್ಲದೆ ಇದರಿಂದ ಆಯಾ ಕೋಲುಗಳ ಬಳಕೆಯ ಕಾಲ ಪ್ರದೇಶ ವ್ಯಾಪ್ತಿಯನ್ನು ಸ್ಪಷ್ಟವಾಗಿ ಗುರುತಿಸಬಹುದಾಗಿದೆ.

ಈ ಕೋಲುಗಳ ಸಹಾಯದಿಂದ ಭೂಮಿಯನ್ನು ಕಮ್ಮ,[೨೮೨] ಮತ್ತರು,[೨೮೩]ಗಳಲ್ಲಿ ಅಳೆಯುತ್ತಿದ್ದರು. ಊರಿಂದೂರಿಗೆ ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿರುವ ಅಂದಿನ ಅಳತೆಗೋಲುಗಳ ಹಿನ್ನೆಲೆಯಲ್ಲಿ ಮತ್ತರು ಮತ್ತು ಕಂಭಗಳ ಪ್ರಮಾಣವನ್ನು ಖಚಿತವಾಗಿ ಹೇಳಲು ಸಾಧ್ಯವಾಗದು. ಒಂದು ಶಾಸನದಂತೆ ೧ ಮತ್ತರಿಗೆ ೫೦೦[೨೮೪] ಕಂಭಗಳಾದರೆ, ಮತ್ತೊಂದು ಶಾಸನದ ಪ್ರಕಾರ ೨೦೦ ಕಂಭಗಳು[೨೮೫] ಡಿ.ಸಿ. ಸರಕಾರ ಅವರು ಮತ್ತರಿಗೆ ೧೦೦ ಕಂಭಗಳೆಂದಿದ್ದಾರೆ.[೨೮೬] ಅಲ್ಲದೆ ಮತ್ತರನ್ನು ಇಂದಿನ ಎಕರೆಯೊಂದಿಗೆ ಸರಿತೂಗಿಸುವ ಪ್ರಯತ್ನಗಳೂ ನಡೆದಿವೆ.

ಮನೆ ಮತ್ತು ಇತರ ನಿವೇಶನಗಳ ಉದ್ದಳತೆಯನ್ನು ಗೇಣು,[೨೮೭] ಕಯ್ಯ,[೨೮೮] ಅಥವಾ ಹಸ್ತಗಳಿಂದ ಅಳೆಯುತ್ತಿದ್ದರು.

ರಾಜಾದಿತ್ಯನು ಕೊಡುವ ಕೋಷ್ಟಕ ಹೀಗಿದೆ[೨೮೯]

೧೨ ಬೆರಳು	=	೧ ಗೇಣು
೨ ಗೇಣು	=	೧ ಮೊಳ
೨ ಮೊಳ	=	೧ ಹಸ್ತ
೪ ಮೊಳ	=	೧ ದಂಡ
೨೦೦೦ ದಂಡ	=	೧ ಕ್ರೋಷ
೪೦೦೦ ಕ್ರೋಷ	=	೧ ಯೋಜನ

ಬಸವಣ್ಣನವರ ವಚನವೊಂದರಲ್ಲಿ ಉಕ್ತವಾದ ಉದ್ದಳತೆಯ ವಿವರ ಹೀಗಿದೆ.[೨೯೦]

೧೨ ಅಂಗುಲ	=	೧ ಗೇಣ
೨ ಗೇಣ	=	೧ ಮೊಳ
೨ ಮೊಳ	=	೧ ಹಸ್ತ
೨ ಹಸ್ತ	=	೧ ಮಾರು
೨ ಮಾರು	=	೧ ಜಂಪೆ
೭೭೦ ಜಂಪೆ	=	೧ ಪದದಾಯ
೨೮೦೦ ಪದಚ್ಛಯ	=	೧ ಕೂಗಳತೆ

೪ ಕೂಗಳತೆ	=	೧ ಹರದಾರಿ
೪ ಹರದಾರಿ	=	೧ ಯೋಜನ

ಸಾಲದ ಸೌಲಭ್ಯ :

ರೈತರಾಗಲಿ ಇತರ ಉದ್ಯೋಗಿಗಳಾಗಲಿ ತಮ್ಮ ತಮ್ಮ ಕೆಲಸಗಳನ್ನು ಸರಿಯಾಗಿ ಸಾಗಿಸಿಕೊಂಡು ಹೋಗಲು ಆಗಾಗ್ಗೆ ಸಾಲವನ್ನು ಮಾಡುವ ಅವಶ್ಯಕತೆ ಬರುತ್ತದೆ. ಸಾಲವನ್ನು ಪಡೆಯುತ್ತಿದ್ದ ವಿಧಾನದ ಚಿತ್ರವು ಶಾಸನಗಳಲ್ಲಿ ಸ್ಪಷ್ಟವಾಗಿ ದೊರೆಯುವುದಿಲ್ಲ. ಹೀಗಾಗಿ ಸಮಕಾಲೀನ ಸಾಹಿತ್ಯ ಕೃತಿಯಾದ ಧರ್ಮಾಮೃತ ನೆರವಿಗೆ ಬರುತ್ತದೆ. ಇದರಲ್ಲಿ ಸಾಲವನ್ನು ಪಡೆದವನು ಸಾಕ್ಷಿಗಳ ಮುಂದಸಾಲ ಪತ್ರವನ್ನು ಬರೆದುಕೊಡುತ್ತಿದ್ದನು. ಸಾಲವನ್ನು ತೆಗೆದುಕೊಂಡವನು ಕೊಡಬೇಕಾದ ಸಾಲವನ್ನು ಹಿಂದಿರುಗಿಸಿದ ಮೇಲೆ ಬರೆದುಕೊಟ್ಟ ಪತ್ರವನ್ನು ಸೀಳಿ ಹಾಕುತ್ತಿದ್ದನು.[೫೧] ಸಾಹುಕಾರರು ಸಾಲಗಾರರನ್ನು ಕಾಡಿ ಹೊಡೆಯುತ್ತಿದ್ದರು. ಆದುದರಿಂದ ಸಾಹುಕಾರರನ್ನು ಕಂಡರೆ ಅವರು ಗಡಗಡ ನಡುಗುತ್ತಿದ್ದರು.[೫೨] ಸಾಲಗಾರರನ್ನು ಹಿಯಾಳಿಸಿ ನುಡಿಯುತ್ತಿದ್ದದೂ ಉಂಟು.[೫೩] ಹೆಸರರಿಯದೆ ಸಾಲ ಕೊಡುವವನನ್ನೂ, ಸಾಲಿಸದೆ ಬಡ್ಡಿ ಬೇಡುವವನನ್ನೂ ಜನರು ಮೂರ್ಖನೆಂದು ಕರೆಯುತ್ತಿದ್ದರು.[೫೪] ಒಂದು ಶಾಸನದಲ್ಲಿ[೫೫] ಬಡ್ಡಿಯ ದರ ಈ ರೀತಿ ಇದೆ. ಒಂದು ಪೊನ್ನಿಗೆ ಒಂದು ತಿಂಗಳಿಗೆ ಒಂದು ಹಾಗ ಬಡ್ಡಿ, ಒಂದು ಪೊನ್ನು ಅಥವಾ ಗದ್ಯಾಣಕ್ಕೆ ಹತ್ತು ಪಣ, ಒಂದು ಪಣಕ್ಕೆ ನಾಲ್ಕು ಹಾಗ ಎಂದರೆ ಒಂದು ಗದ್ಯಾಣ ಅಥವಾ ನಲವತ್ತು ಹಾಗಗಳಿಗೆ ವರ್ಷಕ್ಕೆ ಹನ್ನೆರಡು ಹಾಗ ಬಡ್ಡಿ ಎಂದರೆ ವರ್ಷಕ್ಕೆ ಶೇಕಡಾ ಮೂವತ್ತರಷ್ಟು ಬಡ್ಡಿಯೆಂದಾಯಿತು. ಇನ್ನೊಂದು ಶಾಸನದಲ್ಲಿ ಒಂದು ಪೊನ್ನಿಗೆ ಒಂದು ವರ್ಷಕ್ಕೆ ಎರಡು ಪಣ ಬಡ್ಡಿ ಎಂದು ಹೇಳಿದೆ.[೫೬] ಎಂದರೆ ಬಡ್ಡಿಯದರ ಶೇಕಡಾ ಇಪ್ಪತ್ತು. ಆದ್ದರಿಂದ ಬಡ್ಡಿಯೆಂದರೆ ಶೇಕಡಾ ಇಪ್ಪರಿಂದ ಮೂವತ್ತು ಎಂದು ಊಹಿಸಬಹುದು ಮತ್ತು ಬಡ್ಡಿಯಿಂದ ಬಂದ ಹಣವನ್ನು ದೇವಾಲಯಕ್ಕೆ, ಪೂಜಾರಿಗೆ, ಹಾಡುವವರು, ಹರೆಕಾರರು, ಮಾಲೆಗಾರರ ಜೀವನಕ್ಕೆ ಗುರುದೇವನು ನೀಡಿದುದನ್ನು ಸಹ ಕುಕನೂರಿನ[೫೭] ಶಾಸನವು ತಿಳಿಸುತ್ತದೆ.

ರಾಜ್ಯಾದಾಯ :

ಒಂದು ನಾಡಿನ ಅಭಿವೃದ್ಧಿ ಮತ್ತು ಸುಭದ್ರತೆಗಳು ಅದರ ಹಣಕಾಸಿನ ವ್ಯವಸ್ಥೆಯನ್ನು ಅವಲಂಬಿಸಿರುತ್ತದೆ. ಆದ್ದರಿಂದ ರಾಜ್ಯದ ಏಳು ಅಂಗಗಳಲ್ಲಿ ಕೋಶವೂ ಒಂದಾಗಿದ್ದು ಭಾರತೀಯ ಪ್ರಾಚೀನ ದೊರೆಗಳು ಅದಕ್ಕೆ ಬಹಳಷ್ಟು ಪ್ರಾಧಾನ್ಯತೆ (ಮನ್ನಣೆ) ನೀಡಿದ್ದಾರೆ. ಈ ಕೋಶವನ್ನು ಸಂಗ್ರಹಿಸುವ ಮಾರ್ಗವೇ ತೆರಿಗೆಯಾಗಿದ್ದು ಕೆಲವೊಮ್ಮೆ ಇತರ ಮೂಲಗಳಿಂದಲೂ ರಾಜ್ಯದ ಬೊಕ್ಕಸಕ್ಕೆ ಆದಾಯ ಬರುತ್ತಿತ್ತು.

ತೆರಿಗೆ ಮತ್ತು ಸುಂಕ :

ಒಂದು ನಾಡಿನ ಭದ್ರ ಅರ್ಥವ್ಯವಸ್ಥೆಗೆ ಭೂಮಿಯೇ ಮೂಲವಾದುದರಿಂದ ರಾಜ್ಯಾದಾಯದಲ್ಲಿ ಭೂಕಂದಾಯದ ಮೊತ್ತ ದೊಡ್ಡದಾಗಿರುತ್ತಿತ್ತು. ಕೃಷಿ ಪ್ರಧಾನವಾದ ಪ್ರದೇಶಗಳೆಲ್ಲಕ್ಕೂ ಇದು ಅನಿವಾರ್ಯವೂ ಆಗಿತ್ತು. ಭೂಕಂದಾಯ ಪದ್ಧತಿ ಪರಂಪರಾನುಗತವಾಗಿ ನಡೆದು ಬಂದರೂ, ಸಾಗುವಳಿ, ಭೂಮಿಯ ಫಲವತ್ತತೆ ಮತ್ತು ಅಳತೆಯ ಪ್ರಮಾಣಕ್ಕನುಗುಣವಾಗಿ ನಿರ್ಧರಿತವಾಗುತ್ತಿತ್ತು. ಶಾಸನಗಳಲ್ಲಿ ಕರಭೂಮಿಗಾಗಿಯೇ ವಿಶೇಷವಾಗಿ ಭೂಮಾಪನಗಳಿದ್ದುದನ್ನು ಉಲ್ಲೇಖಿಸಿವೆ.[೨೯೮] ಇದರಿಂದ ಮೌಲ್ಯಮಾಪನ ಮಾಡಿದ ನಂತರವೇ ಕರಾಕರಣೆ ಮಾಡಲಾಗುತ್ತಿತ್ತೆಂದು ತಿಳಿದುಬರುತ್ತದೆ. ಇದನ್ನೇ ಸೂಕ್ತಿ ಸುಧಾರರ್ಣದ'ಸಿದ್ದಾಯ'ವೆಂದು ಕರೆದಿದೆ.[೨೯೯] ಮೊದಲೇ ನಿಗದಿಪಡಿಸಿದ ಈ ಆಯ ಭೂಕಂದಾಯಕಷ್ಟೇ ಸೀಮಿತವಾಗಿರದೆ ಮನೆ, ಅಂಗಡಿಗಳ ಮೇಲೂ ಆಕರಿಸುತ್ತಿದ್ದುದಾಗಿ ತಿಳಿದು ಬರುತ್ತದೆ.[೩೦೦]

ಶಾಸನಗಳಲ್ಲಿ ಬರುವ ಕರಭೂಮಿ ಅರುವಣ ದಶವಂದ[೩೦೧] ಮೊದಲಾದವುಗಳು ಭೂ ಕಂದಾಯವನ್ನು ಸೂಚಿಸುತ್ತವೆ. ದಶವಂದ (ದಸವಂದ) ಉತ್ಪಾದನೆಯ ೧/೧೦ನೆಯ ಭಾಗವನ್ನು ಭೂನೀರಾವರಿಗೆ ಬಿಡುವ ಕರವೆನ್ನಲಾಗಿದೆ.[೩೦೨] ಇದರಂತೆ 'ಕವಲಿ' ಕಾಲುವೆಯ ನೀರಿಗೆ ಕೊಡುವ ಸುಂಕವನ್ನು ಸೂಚಿಸುತ್ತದೆ.[೩೦೩] ಮಾನಸೋಲ್ಲಾಸ ಕೃತಿಯಲ್ಲಿಯೂ ಕೂಡ ಭೂಮಿ ವಿಸ್ತಾರಕ್ಕೆ ಅನುಗುಣವಾಗಿ ಧಾನ್ಯರೂಪದ ಕರವನ್ನು ತೆಗೆದುಕೊಳ್ಳಬೇಕು, ಧಾನ್ಯದಲ್ಲಿ ೧/೬, ೧/೮, ೧/೨ ಭಾಗ ಕರವನ್ನು ತೆಗೆದುಕೊಳ್ಳಬೇಕು ಎಂದಿದೆ.[೩೦೪]

ಭೂಮಿಯ ಹಾಗೆಯೇ ನಿವೇಶನ ಮತ್ತು ಪ್ರಾಣಿಗಳ ಮೇಲೂ ತೆರಿಗೆಯನ್ನು ಹಾಕಲಾಗುತ್ತಿತ್ತು. ನಿವೇಶನಗಳಿಗೆ ಸಂಬಂಧಿಸಿದಂತೆ ಮನೆದೆರೆ,[೩೦೫] ತಿಪ್ಪೆಸುಂಕ[೩೦೬]ಗಳ ಉಲ್ಲೇಖ ಇಲ್ಲಿನ ಶಾಸನಗಳಲ್ಲಿ ಕಂಡುಬರುತ್ತದೆ. ಕುದುರೆಗಾಡಿ[೩೦೭] ಕುದುರೆ ಮೇಲಿನ ಸುಂಕವಾಗಿದ್ದರೆ ವ್ಯಾಪಾರ ಮಾಡಲು ಬಳಸುತ್ತಿದ್ದ ಕೋಣ, ಎತ್ತು, ಕತ್ತೆಗಳ ಮೇಲೆ ಹೇರಿನ ಸುಂಕವನ್ನು ಹಾಕಲಾಗುತ್ತಿತ್ತು.[೩೦೮] ಮಾನಸೋಲ್ಲಾಸದಲ್ಲಿಯೂ ಕೂಡ ಪಶುಸಂಪತ್ತಿನ ಮೇಲೆ ೧/೫೦ ಭಾಗ ಕರವನ್ನು ತೆಗೆದುಕೊಳ್ಳಬೇಕು ಎಂದು ಹೇಳಿದೆ.[೩೦೯] ಇದಲ್ಲದೆ ಗಾಣಗಳ ಮೇಲೆ ಗಾಣದದೆರೆ,[೩೧೦] ನೇಕಾರರ ಮೇಲೆ ಮಗ್ಗದೆರೆ,[೩೧೧] ವೃತ್ತಿಯ ಮೇಲೆ ಸೆಟ್ಟಿದೆರೆ,[೩೧೨] ಊರೊಡೆಯ ಅಥವಾ ಮನ್ನೆಯರ ಮೇಲೆ ಸಾಮ್ಯದ ತೆರೆ[೩೧೩] ಹಾಕಲಾಗುತ್ತಿತ್ತು. ವ್ಯಾಪಾರಿ ತೆರಿಗೆಗಳಲ್ಲಿ ಹೆಜ್ಜುಂಕ,[೩೧೪] ವಡ್ಡರಾವುಳ,[೩೧೫] ಬಿಲ್ಕೋಡೆ,[೩೧೬] ಪನ್ನಾಯ,[೩೧೭] ಸಾದ,[೩೧೮] ಕುಳ,[೩೧೯] ಬಾರಾಸುಂಕ,[೩೨೦] ಸಿದ್ದಾಯ,[೩೨೧] ಕಿರುಕುಳ,[೩೨೨] ಕೂಡ ವೀಸ[೩೨೩] ಮುಖ್ಯವಾಗಿದೆ.

ಈ ಕಾಲದ ಶಾಸನಗಳಲ್ಲಿ ಕಂಡುಬರುವ ಕೊಟ್ಟಲ್ಲಿ-ಕೊಂಡಲ್ಲಿ, ಮಾರಿದಲ್ಲಿ ಇತ್ಯಾದಿಪದಗಳು ಕೊಡು-ಕೊಳ್ಳುವ ವ್ಯವಹಾರವನ್ನು ಸೂಚಿಸುತ್ತಿದ್ದು ಸಂತೆ-ಪೇಟೆಗಳಿಗೆ ಬರುತ್ತಿದ್ದ ವಿವಿಧ ಸರಕುಗಳ ಮೇಲೆ ಆಕರಿಸುತ್ತಿದ್ದ ಸುಂಕದ

ವಿವರಗಳನ್ನು ಸೂಚಿಸುತ್ತದೆ. ಸುಂಕವನ್ನು ಸರಕುಗಳ ತೂಕ, ತುಂಬಿದ ವಸ್ತುವಿನ ಗಾತ್ರ, ಸಾಗಿಸುವ ವಾಹನ ಸರಕಿನ ಬೆಲೆ, ರಾಶಿ ಇತ್ಯಾದಿಗಳ ಮೇಲೆ ನಿಗದಿಪಡಿಸಿರುವುದು ತಿಳಿದು ಬರುತ್ತದೆ.[೨೧೪] ವರ್ತಕರು ಮಾರಾಟ ಮಾಡುವ ವಸ್ತುಗಳ ಮೇಲೆ ತೆರಿಗೆ ಇರುವಂತೆಯೇ ಅವರು ತಮ್ಮ ವ್ಯಾಪಾರಕ್ಕಾಗಿ ಸಂತೆಯಲ್ಲಿ ಕೊಂಡುಕೊಳ್ಳುವ ಸರಕುಗಳ ಮೇಲೆಯೂ ತೆರಿಗೆ ಇತ್ತು. ಇದನ್ನೇ ಡಾ. ಬಿ. ಆರ್. ಹಿರೇಮಠರವರು ಮಾರಾಟ ಸುಂಕ, ಸಂತೆಯ ಸುಂಕವೆಂದು ಕರೆದಿದ್ದಾರೆ.[೨೧೫] ಮೂರನೆಯ ಸೋಮೇಶ್ವರನ ಶಾಸನಗಳಲ್ಲಿ ದವಸ-ಧಾನ್ಯಗಳ ತೆರಿಗೆ ಕೊಟ್ಟಲ್ಲಿ-ಕೊಂಡಲ್ಲಿ ಸಮನಾಗುತ್ತಿದ್ದರ ಉಲ್ಲೇಖ ಕಂಡುಬರುತ್ತದೆ.[೨೧೬] ಸಿದ್ದಾಯವನ್ನು ಚಿದಾನಂದ ಮೂರ್ತಿಯವರು ಭೂಮಿಯ ಗುಣದ ಮೇಲೆ ನಿರ್ಧರಿಸಲಾಗುತ್ತಿದ್ದ ಕಂದಾಯವೆಂದು ಸ್ಪಷ್ಟಪಡಿಸಿದ್ದಾರೆ.[೨೧೭] ನಾಗವಂದ,[೨೧೮] ಶಾಸನದಲ್ಲಿ ಕಂಡುಬರುವ 'ಹಂದರ ಹಣ' ಎಂಬುದು ಮದುವೆಯ ಮೇಲೆ ಹಾಕುವ ತೆರಿಗೆಯನ್ನು ಸೂಚಿಸಿದರೆ ಮುದನೂರು[೨೧೯] ಶಾಸನದಲ್ಲಿ ಬರುವ ಸೇಸೆ ಎಂಬ ತೆರಿಗೆಯನ್ನು ರಾಜ ಅಥವಾ ಚಕ್ರವರ್ತಿ ಮದುವೆಯ ಸಂದರ್ಭದಲ್ಲಿ ಜನರು ಕೊಡುತ್ತಿದ್ದ ತೆರಿಗೆ ಇರಬಹುದೇ (?) ಎಂದು ಚಿದಾನಂದಮೂರ್ತಿಯವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.[೨೨೦] ಬೀರವಣ ಎಂಬ ತೆರಿಗೆಯನ್ನು ಯುದ್ಧದ ಖರ್ಚಿಗಾಗಿ ಆಕರಿಸುವ ಸುಂಕವೆಂದು ಡಾ. ಎಸ್. ಕೆ. ಕೊಪ್ಪಾರವರು ಹೇಳುತ್ತಾರೆ.[೨೨೧] ಅಲ್ಲದೆ 'ಬಿಟ್ಟಿ' ಎಂಬ ಪುಕ್ಕಟೆ ಕೆಲಸವನ್ನು ಸೂಚಿಸುವ ತೆರಿಗೆಯನ್ನು ರಾಯಭಾಗ,[೨೨೨] ಮುದೇನೂರ,[೨೨೩] ಶಾಸನಗಳಲ್ಲಿ ಕಾಣಬಹುದು. ಸಾಮಾಜಿಕ, ಧಾರ್ಮಿಕ ಕಾರ್ಯವಾದ ಸತ್ರಗಳಿಗೆ ಕೂಡ ತೆರಿಗೆ ನೀಡಿರುವುದನ್ನು ಕಾಮಧೇನು,[೨೨೪] ಕುಕನೂರು,[೨೨೫] ಕರಕಾಂತಪುರ,[೨೨೬] ಶಾಸನಗಳು ತಿಳಿಸುತ್ತದೆ.

ಹೀಗೆ ಶಾಸನಗಳಲ್ಲಿ ಕಂಡುಬರುವ ಈ ಎಲ್ಲ ತೆರಿಗೆಗಳನ್ನು ಅವಲೋಕಿಸಿದರೆ ಅಂದಿನ ಜನತೆಗೆ ಈ ತೆರಿಗೆ ಭಾರವಾಗಿದ್ದಿತೆಂದು ಹೇಳಬಹುದು. ಏಕೆಂದರೆ ಒಬ್ಬ ರೈತ ಮನೆ, ಹೊಲ, ತೋಟ, ತಿಪ್ಪೆ, ಬಣಿವೆ, ದನ-ಕರು ಅಲ್ಲದೆ ತಾನು ಬೆಳೆದುದನ್ನು ಮಾರಲು ಸಂತೆಗೆ ಕೊಂಡೊಯ್ದರೆ ಅಲ್ಲಿಯೂ ಸುಂಕುವನ್ನು ಕೊಡಬೇಕಾಗಿದ್ದಿತು. ಹೀಗೆ ಎಲ್ಲ ಕಡೆಗೆ ತೆರಿಗೆ ತೆತ್ತ ಮೇಲೆ ಅವನಿಗೆ ಉಳಿಯುವುದಾದರೂ ಏನು ಎಂಬ ಪ್ರಶ್ನೆ ಸಹಜವಾಗಿ ಉದ್ಭವಿಸುತ್ತದೆ. ಹೀಗಾಗಿ ಜನ ಸುಂಕಕ್ಕಂಜಿ ಬೇರೆ ಮಾರ್ಗವನ್ನು ಹಿಡಿಯುತ್ತಿರಬೇಕು. ಹೀಗಾಗಿ ಅದನ್ನು ನೋಡಿಕೊಳ್ಳುವುದಕ್ಕಾಗಿಯೇ ಅಧಿಕಾರಿಗಳ ತಂಡವೊಂದಿದ್ದು, ಅವರು ರಾಜ್ಯದಾದ್ಯಂತ ಸಂಚರಿಸುತ್ತಿದ್ದರು. ವಿವಿಧ ತೆರಿಗೆಗಳ ಸಂಗ್ರಹದಲ್ಲಿ ನಿರತರಾಗಿದ್ದ ಅಧಿಕಾರಿಗಳನ್ನು ಸೋಮೇಶ್ವರನ ಕಾಲದ ಆಡಳಿತ ವ್ಯವಸ್ಥೆಯಲ್ಲಿ ಪರಿಚಯಿಸಲಾಗಿದೆ.

ಖರ್ಚು :

ನಮ್ಮ ಪ್ರಾಚೀನ ಕೃತಿಗಳಾದ ಅರ್ಥಶಾಸ್ತ್ರ, ನೀತಿಶಾಸ್ತ್ರ ಮತ್ತು ಸ್ಮೃತಿಗಳು ಆದಾಯದ ವಿಧಿ-ವಿಧಾನಗಳನ್ನು ನಿರೂಪಿಸಿದಂತೆ ಖರ್ಚಿನ ನಿಯಮಗಳನ್ನೂ ರೂಪಿಸಿದೆ. ಆದರೆ ತೆರಿಗೆಯನ್ನು ಕುರಿತು ಲಭ್ಯವಾದ ಮಾಹಿತಿಗಳು, ಅದರ ವಿನಿಯೋಗದ ವಿಷಯದಲ್ಲಿ ದೊರಕುವುದಿಲ್ಲ. ಹೆಚ್ಚಿನ ತೆರಿಗೆಯಲ್ಲಿ ರಾಜರ ವೈಭವ, ರಾಜ್ಯರಕ್ಷಣೆ, ಅಧಿಕಾರಿಗಳ

ವೇತನ, ಸೈನ್ಯ, ಆಯುಧ ಮೊದಲಾದ ಆಡಳಿತ ವ್ಯವಸ್ಥೆಗಾಗಿ ವ್ಯಯವಾಗುತ್ತಿತ್ತು. ಬಹಳಷ್ಟು ತೆರಿಗೆಗಳನ್ನು ಆಯಾ ಊರಿನ ದೇವಸ್ಥಾನ, ಸತ್ರ ಮತ್ತು ಅಗ್ರಹಾರಗಳಿಗೆ ಬಿಟ್ಟುಕೊಡುವುದರ ಮೂಲಕ ಆಯಾ ಊರಿನ ತೆರಿಗೆಯ ಆದಾಯದಲ್ಲಿ ಸ್ವಲ್ಪ ಭಾಗವನ್ನು ಅಲ್ಲಿಯ ವ್ಯವಸ್ಥೆಗೆ ನೇರವಾಗಿ ಉಪಯೋಗಿಸಿದಂತಾಗುತ್ತಿತ್ತು. ದಾನ ಶಾಸನಗಳುದ್ದಕ್ಕೂ ಕಂಡುಬರುವ ಸಾರ್ವಭಾದಾ ಪರಿಹಾರ ಮೊದಲಾದ ಮಾತುಗಳು ದಾನ-ದತ್ತಿಗಳು ಕರ ವಿನಾಯತಿಗಳಿಂದ ಮುಕ್ತವಾದ ಉಪಭೋಗವನ್ನು ಸೂಚಿಸುತ್ತದೆ.

ಮೂರನೆಯ ಸೋಮೇಶ್ವರನ ಕಾಲದ ಆರ್ಥಿಕ ಪರಿಸ್ಥಿತಿಯನ್ನು ಅವಲೋಕಿಸಿದಾಗ, ಆ ಕಾಲದ ಜನರು ಸುಖವಾಗಿದ್ದರೇ? ಆರ್ಥಿಕ ವ್ಯವಸ್ಥೆಯು ಅವರ ಸುಖವನ್ನು ಹೆಚ್ಚಿಸಲು ಸಾಧಕವಾಗಿದ್ದೀತೆ? ಎಂಬ ಪ್ರಶ್ನೆಗಳಿಗೆ ಉತ್ತರ ಹೇಳುವುದು ಕಷ್ಟ. ಏಕೆಂದರೆ ನಮ್ಮ ಅಧ್ಯಯನದ ಅವಧಿ ಸುಮಾರು ಎಂಟು ಶತಮಾನಗಳಷ್ಟು ಹಿಂದಿನದು, ಅಲ್ಲದೇ ಶಾಸನಗಳು ಸಹ ಜನಜೀವನದ ಒಂದು ಮುಖವನ್ನು ಮಾತ್ರ ಚಿತ್ರಿಸುತ್ತವೆ. ಶ್ರೀಮಂತರ ಶ್ರೀಮಂತಿಕೆಯನ್ನು, ದಾನಿಗಳ ಔದಾರ್ಯವನ್ನು ಚಿತ್ರಿಸಿರುವಂತೆ, ದರಿದ್ರರ ಸಮಸ್ಯೆಗಳನ್ನು, ಅವರ ಕಷ್ಟಗಳನ್ನು ಚಿತ್ರಿಸಿರುವುದಿಲ್ಲ. ಹೀಗಾಗಿ ದರಿದ್ರರ ಸಮಸ್ಯೆಗಳನ್ನು, ಅವರ ಕಷ್ಟಗಳನ್ನು ಅರಿಯಲು ಸಾಹಿತ್ಯ ಗ್ರಂಥಗಳನ್ನು ಅವಲೋಕಿಸಬೇಕಾಗುತ್ತದೆ, ಇವುಗಳೂ ಸಹ ಅಷ್ಟೊಂದು ಪರಿಪೂರ್ಣವಾದ ಮಾಹಿತಿಯನ್ನೊದಗಿಸುವುದಿಲ್ಲ. ಆದರೂ ಸಹ ಮೂರನೆಯ ಸೋಮೇಶ್ವರನ ಕಾಲದ ಆರ್ಥಿಕ ಪರಿಸ್ಥಿತಿಯನ್ನು ಅವಲೋಕಿಸಿದಾಗ ಆ ಕಾಲದ ಜನರು ಸುಖವಾಗಿದ್ದರೆಂದು ಹೇಳಬಹುದು.

ಅಡಿ ಟಿಪ್ಪಣಿಗಳು

೧. ಗೋಗಿ ಹನುಮಾಕ್ಷಿ (ಸಂ), *ಸುರಪುರ ತಾಲೂಕಿನ ಶಾಸನಗಳು*, ನಂ. ೨೨, ಕಕ್ಕೇರಿ, ಕ್ರಿ.ಶ. ೧೧೨೭, ಮಾರ್ಚ್, ೨೧.

೨. ಗಣೇಶ, ಕೆ. ಆರ್., ಶೇಷಶಾಸ್ತ್ರಿ ಆರ್. (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೫*, ನಂ. ೩೦೧, ಪೆದ್ದತುಂಬಳಂ, ಕ್ರಿ.ಶ. ೧೧೩೩, ಡಿಸೆಂಬರ್ ೨೩.

೩. ಕುಲಕರ್ಣಿ, ನಾಗೇಶ ರಂಗೋ (ಅನು), *'ಯಾಜ್ಞವಲ್ಕ್ಯ ಸ್ಮೃತಿ'*, ಪು. ೧೯೧.

೪. ಎಸ್. ಆಯ್. ಆಯ್, ಸಂಪುಟ- XX, ನಂ.೧೦೫, (ಜಿ) ಬಿಜಾಪುರ, ತಾ. ಇಂಡಿ (೧) ಮಣ್ಣೂರ, ಕ್ರಿ.ಶ. ೧೧೩೪, ಜುಲೈ, ೨೩.

೫. ಎ.ಕ., ಸಂಪುಟ- X, ನಂ.೬೦, ಶಾನಗೇರಿ (V ಅ.ಕೆ. ೪೫) ಕ್ರಿ.ಶ. ೧೧೩೨.

೬. ದೇವರಕೊಂಡಾರೆಡ್ಡಿ (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೨*, ನಂ. ೫೩, ಕುಕನೂರು, ಕ್ರಿ.ಶ. ೧೧೨೯, ಡಿಸೆಂಬರ್, ೨೫.

೭. ಕೆ. ಆಯ್., ಸಂಪುಟ-I, ನಂ.೨೩, ತಿಳವಳ್ಳಿ, ಕ್ರಿ.ಶ. ೧೧೨೯, ಅಕ್ಟೋಬರ್, ೧೫.

೮. ಉಪಾಧ್ಯ ಜಿ.ಎಸ್.(ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೬*, ಏರಿಗೆ, ಕ್ರಿ.ಶ. ೧೧೩೮, ಸೆಪ್ಟೆಂಬರ್ ೧.

೯. ಕೃಷ್ಣಭಟ್ಟ ಕೆ, (ಅನು), *ಕೌಟಿಲ್ಯನ ಅರ್ಥಶಾಸ್ತ್ರ*, ಪು.೯೮.

೧೦. ಚಿದಾನಂದಮೂರ್ತಿ ಎಂ., *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ*, ಪು. ೩೬೪.

೧೧. ಗಣೇಶ, ಕೆ. ಆರ್. (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೫*, ನಂ. ೫೦೩, ಗಂಗಾಪುರಂ, ಕ್ರಿ.ಶ. ೧೧೩೪, ಜೂನ್, ೮.

೧೨. ಗೋಪಾಲ, ಬಾ. ರಾ., (ಸಂ.) *ಮಾನವಿಕ ಕರ್ನಾಟಕ*, ಸಂ.೩, ಆಣದೂರು, ಕ್ರಿ.ಶ. ೧೧೩೪, ಡಿಸೆಂಬರ್, ೮.

೧೩. ದೇವರಕೊಂಡಾರೆಡ್ಡಿ (ಸಂ), *ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ-೭*, ನಂ. ೬, ಮುಕ್ಕುಂದಿ, ಕ್ರಿ.ಶ. ೧೧೩೪, ಜುಲೈ ೨೩.

೧೪. ಗಣೇಶ, ಕೆ. ಆರ್. (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೫*, ಭಾಗ-೨, ನಂ.೩೦೧, ಪೆದ್ದತುಂಬಳಂ, ಕ್ರಿ.ಶ. ೧೧೩೩, ಜೂನ್, ೨೩.

೧೫. ದೇವರಕೊಂಡಾರೆಡ್ಡಿ (ಸಂ), *ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ-೩*, ನಂ. ೩೮, ಕುಕನೂರು, ಕ್ರಿ.ಶ. ೧೧೩೨, ಮಾರ್ಚ್ ೩.

೧೬. ಅದೇ, ಸಂಪುಟ-೭, ನಂ. ೬, ಮುಕ್ಕುಂದಿ, ಕ್ರಿ.ಶ. ೧೧೩೪, ಜುಲೈ ೨೩.

೧೭. ಎಸ್.ಆಯ್.ಆಯ್, ಸಂಪುಟ- IX (i), ನಂ.೨೧೪.

೧೮. ಅದೇ, ಸಂಪುಟ- XX, ನಂ.೧೦೧, ಕಾಮಧೇನು, ಕ್ರಿ.ಶ. ೧೧೨೯, ಮಾಚ್ ೨೩.

೧೯. ಅದೇ,

೨೦. ಕೆ. ಆಯ್., ಸಂಪುಟ-I, ನಂ.೨೩, ತಿಳವಳ್ಳಿ, ಕ್ರಿ.ಶ. ೧೧೨೯, ಅಕ್ಟೋಬರ್, ೧೫.

೨೧. ದೇವರಕೊಂಡಾರೆಡ್ಡಿ (ಸಂ), *ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ-೩,* ನಂ. ೩೮, ಕುಕನೂರು, ಕ್ರಿ.ಶ. ೧೧೩೨, ಮಾರ್ಚ್ ೨೫.

೨೨. ಎಸ್.ಆಯ್.ಆಯ್, ಸಂಪುಟ- IX (i), ನಂ.೨೨೫, ಬೆಲೂರು, ಕ್ರಿ.ಶ. ೧೧೩೧, ಜನೆವರಿ ೨೫.

೨೩. ದೇವರಕೊಂಡಾರೆಡ್ಡಿ (ಸಂ), *ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ-೭,* ನಂ.೬೭, ಕಲ್ಲೂರು, ಕ್ರಿ.ಶ. ೧೧೩೪, ನವ್ಹೆಂಬರ್, ೨೮.

೨೪. ಎಸ್.ಆಯ್.ಆಯ್., ಸಂಪುಟ-XX, ನಂ.೧೦೫, ಮಣ್ಣೂರ, ಕ್ರಿ.ಶ. ೧೧೩೪, ಜುಲೈ ೨೩.

೨೫. ಎ.ಕ., ಸಂಪುಟ-VIII, ನಂ. , ಪೂವಿಗಾವೆ, ಕ್ರಿ.ಶ. ೧೧೩೯, ಡಿಸೆಂಬರ್ ೨೫.

೨೬. ಐ.ಎಫ್.ಎನ್.ಡಿ., ಏರಿಗೆ, ೧೯೩೦-೪೦.

೨೭. ದೇವರಕೊಂಡಾರೆಡ್ಡಿ (ಸಂ), *ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ-೩,* ನಂ. ೩೮, ಕುಕನೂರು.

೨೮. ಎ.ಕ., ಸಂಪುಟ-VIII, ನಂ.೬೮, ವೈದ್ಯನಾಥಪುರ, ಕ್ರಿ.ಶ. ೧೧೩೨.

೨೯. ಅದೇ, ನಂ.೬೬, ಯಲೆಗುಂದ, ಕ್ರಿ.ಶ. ೧೧೩೫.

೩೦. ಮಹೀಶವಾಡಿ, ಬಿ.ಬಿ., (ಸಂ), *ಧರ್ಮಾಮೃತ,* ೯-೭೫.

೩೧. ಕಲಬುರ್ಗಿ, ಎಂ.ಎಂ. (ಸಂ), *ಮಾನಸೋಲ್ಲಾಸ,* ಪು. ೧೭೪.

೩೨. ಕೃಷ್ಣಭಟ್ಟ ಕೆ, (ಅನು), *ಕೌಟಿಲ್ಯನ ಅರ್ಥಶಾಸ್ತ್ರ,* ಪು.೯೮-೯೯.

೩೩. ಕುಲಕರ್ಣಿ, ನಾಗೇಶ ರಂಗೋ (ಅನು), 'ಯಾಜ್ಞವಲ್ಕ್ಯ ಸ್ಮೃತಿ', ಪು. ೭೪.

೩೪. ಎಸ್.ಆಯ್.ಆಯ್.,ಸಂಪುಟ- XV, ನಂ.೧೨, ಇಂಗಳೇಶ್ವರ, ಕ್ರಿ.ಶ. ೧೧೨೮, ನವ್ಹೆಂಬರ್ ೮.

೩೫. ಗಣೇಶ, ಕೆ. ಆರ್. (ಸಂ), *ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ-೫,* ಭಾಗ-೨, ನಂ.೪೧೧, ಸನಿಗರಂ, ಕ್ರಿ.ಶ. ೧೧೨೮.

೩೬. ಉಪಾಧ್ಯ ಜಿ.ಎಸ್.(ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೬,* ನಂ.೧೫, ನಾರಂಗವಾಡಿ, ಕ್ರಿ.ಶ. ೧೧೨೯, ಅಕ್ಟೋಬರ್ ೨೯.

೩೭. ಗೋಗಿ ಹನುಮಾಕ್ಷಿ(ಸಂ), *ಕಲ್ಬುರ್ಗಿ ಜಿಲ್ಲೆಯ ಶಾಸನಗಳು,* ನಂ.೩, ನಿಂಬರಗಿ, ಕ್ರಿ.ಶ. ೧೧೩೪.

೩೮. ಅದೇ, ನಂ. ೧೭, ಸೇಡಂ, ಕ್ರಿ.ಶ. ೧೧೩೭.

೩೯. ಕಲಬುರ್ಗಿ, ಎಂ. ಎಂ. (ಸಂ), *ಮಾನಸೋಲ್ಲಾಸ*, ಪು. ೩೬೬.

೪೦. ಗೋಗಿ ಹನುಮಾಕ್ಷಿ(ಸಂ), *ಕಲ್ಬುರ್ಗಿ ಜಿಲ್ಲೆಯ ಶಾಸನಗಳು*, ನಂ.೩, ನಿಂಬರಗಿ, ಕ್ರಿ.ಶ. ೧೧೩೪.

೪೧. ಗೋಗಿ ಹನುಮಾಕ್ಷಿ(ಸಂ), *ಸುರಪುರ ತಾಲೂಕಿನ ಶಾಸನಗಳು*, ನಂ.೬೭, ಮುದನೂರು, ಕ್ರಿ.ಶ. ೧೧೨೯, ಡಿಸೆಂಬರ್ ೨೪.

೪೨. ಗೋಗಿ ಹನುಮಾಕ್ಷಿ(ಸಂ), *ಕಲ್ಬುರ್ಗಿ ಜಿಲ್ಲೆಯ ಶಾಸನಗಳು*, ನಂ.೩, ನಿಂಬರಗಿ, ಕ್ರಿ.ಶ. ೧೧೩೪.

೪೩. ಉಪಾಧ್ಯ ಜಿ.ಎಸ್.(ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೬*, ನಂ.೨೬, ಆರೆ, ಕ್ರಿ.ಶ. ೧೧೩೫, ಅಕ್ಟೋಬರ್ ೨೯.

೪೪. ಕಲಬುರ್ಗಿ, ಎಂ.ಎಂ., (ಸಂ), *ಮಾನಸೋಲ್ಲಾಸ*, ಪು.೩೩೬-೩೬೩.

೪೫. ಮಹೀಶವಾಡಿ, ಬಿ. ಬಿ, (ಸಂ), *ಧರ್ಮಾಮೃತ*, ಪು. ೧-೬೦.

೪೬. ಅದೇ, ಪು. ೨-೭೧.

೪೭. ಅದೇ, ೩-೨೧, ೩-೭೭, ೧೪-೬೦.

೪೮. ಅದೇ, ೧೪-೩೪.

೪೯. ಅದೇ, ೭-೯೭, ೮-೯೧, ೩-೭೭, ೯-೨೩.

೫೦. ಉಪಾಧ್ಯ ಜಿ.ಎಸ್.(ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೬*, ನಂ.೧೩೭, ಔರಾದ, ಕ್ರಿ.ಶ. ೧೧೩೫, ಮಾರ್ಚ್, ೧೧.

೫೧. ಗೋಗಿ ಹನುಮಾಕ್ಷಿ(ಸಂ), *ಕಲ್ಬುರ್ಗಿ ಜಿಲ್ಲೆಯ ಶಾಸನಗಳು*, ನಂ.೩, ನಿಂಬರಗಿ, ಕ್ರಿ.ಶ. ೧೧೩೪.

೫೨. ಕೆ. ಆಯ್., ಸಂಪುಟ-VI, ನಂ.೨೫, ನಾಗವಂದ, ಕ್ರಿ.ಶ. ೧೧೨೮, ನವ್ಹೆಂಬರ್, ೮, ದೇವರಕೊಂಡಾರೆಡ್ಡಿ (ಸಂ), *ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ-೧*, ನಂ. ೬೪, ಸಿಂಧವಾಳ, ಕ್ರಿ.ಶ. ೧೧೩೦, ಅಕ್ಟೋಬರ್ ೪.

೫೩. ಕೆ. ಆಯ್., ಸಂಪುಟ-II, ನಂ.೨೪, ನರಗುಂದ, ಕ್ರಿ.ಶ. ೧೧೩೮, ಏಪ್ರಿಲ್ ೨೬.

೫೪. ಎಸ್.ಆಯ್.ಆಯ್.,ಸಂಪುಟ- XVIII, ನಂ.೧೩೬, ಹಾವೇರಿ, ಕ್ರಿ.ಶ. ೧೧೩೪, ಡಿಸೆಂಬರ್ ೨೨.

೫೫. ಕಲಬುರ್ಗಿ, ಎಂ.ಎಂ. (ಸಂ), *ಮಾನಸೋಲ್ಲಾಸ*, ಪು. ೧೩-೧೪.

೫೬. ಗಣೇಶ, ಕೆ. ಆರ್. (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೫*, ನಂ.೩೦೧, ಪೆದ್ದಕುಂಬಳ, ಕ್ರಿ.ಶ. ೧೧೩೩ ಡಿಸೆಂಬರ್, ೨೩, ''ಕೋಗಳಿ ಹಾಳ ಹೊಲವೇರಿಯ ಹಳ್ಳದಿಂ ತೆಂಕರಿನ್ನೆಸರುವಾಡವಾಗಿ ಬಿಟ್ಟ ಕೇಯಿ ಮತ್ತರು, ೧೬, ಉಪಾಧ್ಯ, ಜಿ.ಎಸ್. (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೬*, ನಂ. ೬೨, ಐರಿಗೆ, ಕ್ರಿ.ಶ. ೧೧೩೪, ಜುಲೈ ೨೩, ''ಹಳ್ಳದ ನೀರ್ಕ್ಕಾಲಂ ಕೆಳಗೆ ಸರ್ವ್ವನಮಸ್ಯವಾಗಿ ಕೊಟ್ಟ ತೋಂಟ ಕಾಲ ಮತ್ತೆರೊಂದು''

೫೭. ಎ. ಕ., ಸಂಪುಟ- VIII, ನಂ. ೧೧೩, ಚಿಕ್ಕಕಡಲೂರು, ಕ್ರಿ.ಶ. ೧೧೩೦-೩೧.

೫೮. ಅದೇ, ಸಂಪುಟ- II, ನಂ. ೫೫೨, ಬೊಮ್ಮೇನಹಳ್ಳಿ, ಕ್ರಿ.ಶ. ೧೧೪೦.

ಅದೇ, ಸಂಪುಟ- X, ನಂ. ೧೩೫, ಬಾಳಗಂಚಿ, ಕ್ರಿ.ಶ. ೧೧೩೨-೩೩.

೫೯. ಕಲಬುರ್ಗಿ ಎಂ.ಎಂ. (ಸಂ), ಮಾನಸೋಲ್ಲಾಸ, ಪು.೮.

೬೦. ಎಸ್.ಆಯ್.ಆಯ್., ಸಂಪುಟ- XX, ನಂ.೧೧೧, ಕಾಮಧೇನು, ಕ್ರಿ.ಶ. ೧೧೨೯, ಮಾರ್ಚ್, ೨೩.

೬೧. ದೇವರಕೊಂಡಾರೆಡ್ಡಿ (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೩*, ನಂ.೫೩, ಕುಕನೂರು, ಕ್ರಿ.ಶ. ೧೧೨೯, ಡಿಸೆಂಬರ್ ೨೫.

೬೨. ಎ. ಕ., ಸಂಪುಟ-VII, ನಂ. ೧೭, ಪುರದಕಟ್ಟೆ, ಕ್ರಿ.ಶ. ೧೧೩೯, ''ಕನ್ನಗೆರೆ ಎರಡ ಕಟ್ಟಿಸಿ ತಮ್ಮಯ್ಯನ ಪೆಸರು ಮಾಚಸಮುದ್ರವೆಂದು ತಮ್ಮವ್ವೆಯ ಪೆಸರಲು ಮಾಕಸ ಸಮುದ್ರಮೆನ್ನು ಪೆಸರಿಟ್ಟು ಧರ್ಮಮಂ ಮಾಡಿಸಿದೆಡೆ''

೬೩. ಎಸ್.ಆಯ್.ಆಯ್.,ಸಂಪುಟ- XX, ನಂ.೧೦೩, ಅಥರ್ಗಾ, ಕ್ರಿ.ಶ. ೧೧೩೩, ಜನೆವರಿ, ೧೩.

೬೪. ಎ. ಕ., ಸಂಪುಟ- X, ನಂ. ೯೮, ಬೆಳಗುಲಿ, ಕ್ರಿ.ಶ. ೧೧೩೩.

೬೫. ಅದೇ, ಸಂಪುಟ- X, ನಂ. ೭೩, ಕಣೇಕಟ್ಟೆ, ಕ್ರಿ.ಶ. ೧೧೨೯.

೬೬. ಕಲಬುಗಿ, ಎಂ.ಎಂ. (ಸಂ), ಮಾನಸೋಲ್ಲಾಸ, ಪು. ೩೬೩.

೬೭. ಎ. ಕ., ಸಂಪುಟ- IX, ನಂ.೧೦೬, ಬೆಲೂರು, ಕ್ರಿ.ಶ. ೧೧೩೬.

೬೮. ಅದೇ, ಸಂಪುಟ-X, ನಂ. ೭೩, ಕಣೇಕಟ್ಟೆ, ಕ್ರಿ.ಶ. ೧೧೨೯.

೬೯. ಅದೇ, ನಂ. ೯೮, ಬೆಳಗಲಿ, ಕ್ರಿ.ಶ. ೧೧೩೩.

೭೦. ಅದೇ, ಸಂಪುಟ- VII, ನಂ. ೭, ನಾಗಮಂಗಲ, ಕ್ರಿ.ಶ. ೧೧೩೪.

೭೧. ಅದೇ, ನಂ. ೩೫೯, ಶ್ರವಣಬೆಳಗೊಳ, ಕ್ರಿ.ಶ. ೧೧೨೯.

೭೨. ಅದೇ, ಸಂಪುಟ- X, ನಂ. ೬೦, ಶಾನೆಗೆರೆ, ಕ್ರಿ.ಶ. ೧೧೩೪.

''ಊರು ನೀರುಂಬ ಕೆರೆ''

೭೩. ಮಹೀಶವಾಡಿ, ಬಿ.ಬಿ, *ಧರ್ಮಾಮೃತ*, ೭-೪೬, ೭೫.

೭೪. ಚಿದಾನಂದಮೂರ್ತಿ, *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ*, ಪು.೩೬೬.

೭೫. ನಾರಾಯಣ, ಪಿ. ವಿ., *ವಚನ ಸಾಹಿತ್ಯ : ಒಂದು ಸಾಂಸ್ಕೃತಿಕ ಅಧ್ಯಯನ*, ಪು. ೧೪೯.

೭೬. ''ಏತ ತಲೆ ಬಾಗಿದಡೇನು ಗುರುಭಕ್ತನಾಗಬಲ್ಲುದೇ'', ಬಸವ, ವ. ೧೨೫.

೭೭. ಕೆ. ಆಯ್., ಸಂಪುಟ-I, ನಂ.೨೦, ತಿಳವಳ್ಳಿ, ಕ್ರಿ.ಶ. ೧೧೩೧, ಅಕ್ಟೋಬರ್, ೪, ''ತೋಟದ ಹಿರಿಯ ಏತದ ಹೆಬ್ಬರಿಯಂ''

೭೮. ಎಸ್.ಆಯ್.ಆಯ್.,ಸಂಪುಟ- XX, ನಂ.೧೦೧, ಕಾಮಧೇನು, ಕ್ರಿ.ಶ. ೧೧೨೯, ಮಾರ್ಚ್, ೨೩.

೭೯. ದೇವರಕೊಂಡಾರೆಡ್ಡಿ (ಸಂ), *ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ-೧,* ನಂ. ೩೪, ರಾಗಿಮುಸಲವಾಡ, ಕ್ರಿ.ಶ. ೧೧೨೭, ಜುಲೈ ೧೦.

೮೦. ಗೋಗಿ ಹನುಮಾಕ್ಷಿ(ಸಂ), *ಕಲಬುರ್ಗಿ ಜಿಲ್ಲೆಯ ಶಾಸನಗಳು,* ನಂ.೩, ನಿಂಬರಗಿ, ಕ್ರಿ.ಶ. ೧೧೩೪.

೮೧. ಕಲಬುರ್ಗಿ ಎಂ.ಎಂ. (ಸಂ), *ಮಾನಸೋಲ್ಲಾಸ,* ಪು. ೧೯-೩೭.

೮೨. ಚಿದಾನಂದ ಮೂರ್ತಿ, *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ,* ಪು.೩೬೫.

೮೩. ಅದೇ, ಪು. ೩೬೬.

೮೪. ಎಸ್.ಆಯ್.ಆಯ್., ಸಂಪುಟ- XX, ನಂ.೧೦೧, ಕಾಮಧೇನು, ಕ್ರಿ.ಶ. ೧೧೨೯, ಮಾರ್ಚ್, ೨೩.

೮೫. ವಿವರಗಳಿಗೆ ನೋಡಿ ಶೇಷಾದ್ರಿ ಆರ್. ಕರ್ನಾಟಕದ ವೀರಗಲ್ಲುಗಳು, ಪು. ೧೪೦-೪೫.

೮೬. ಎ. ಕ., ಸಂಪುಟ- X, ನಂ. ೧೧೭, ಬೆಳಗುಂಬ, ಕ್ರಿ.ಶ. ೧೧೩೯-೪೦, ಅದೇ, ಸಂಪುಟ- XI, ನಂ. ೧೨೫, ಕರ್ರೆಗಾಲು, ಕ್ರಿ.ಶ. ೧೧೪೦.

೮೭. ಎಸ್.ಆಯ್.ಆಯ್.,ಸಂಪುಟ- XV, ನಂ.೧೨, ಇಂಗಳೇಶ್ವರ, ಕ್ರಿ.ಶ. ೧೧೨೮, ನವ್ಹೆಂಬರ್ ೮., ಗಣೇಶ, ಕೆ. ಆರ್. (ಸಂ), *ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ-೫,* ನಂ.೪೧೧, ಸನಿಗರಂ, ಕ್ರಿ.ಶ. ೧೧೨೮., ಎಸ್.ಆಯ್.ಆಯ್, ಸಂಪುಟ- XX, ನಂ.೧೦೧, ಕಾಮಧೇನು, ಕ್ರಿ.ಶ. ೧೧೨೯, ಮಾರ್ಚ್, ೨೩., ಗೋಗಿ ಹನುಮಾಕ್ಷಿ(ಸಂ), *ಕಲಬುರ್ಗಿ ಜಿಲ್ಲೆಯ ಶಾಸನಗಳು,* ನಂ.೬೭, ಮುದನೂರು, ಕ್ರಿ.ಶ. ೧೧೨೯, ಡಿಸೆಂಬರ್,೨೪., ದೇವರಕೊಂಡಾರೆಡ್ಡಿ (ಸಂ), *ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ-೭,* ಮುಕ್ಕುಂದಿ, ಕ್ರಿ.ಶ. ೧೧೩೪, ಜುಲೈ ೨೩.

೮೮. ಕೆ. ಆಯ್., ಸಂಪುಟ-I, ನಂ.೨೦, ತಿಳವಳ್ಳಿ, ಕ್ರಿ.ಶ. ೧೧೩೧, ಅಕ್ಟೋಬರ್, ೪., ದೇವರಕೊಂಡಾರೆಡ್ಡಿ (ಸಂ), *ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ-೭,*ನಂ. ೬೭, ಕ್ರಿ.ಶ. ೧೧೩೪, ನವ್ಹೆಂಬರ್ ೨೮., ಗಣೇಶ, ಕೆ. ಆರ್. (ಸಂ), *ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ-೫,* ನಂ.೪೧೧, ಉರುವಕೊಂಡ, ಕ್ರಿ.ಶ. ೧೧೩೫, ಮೇ ೨೭., ಎಸ್.ಆಯ್.ಆಯ್., ಸಂಪುಟ- XX, ನಂ.೧೩೯, ಬಂಕಾಪುರ, ಕ್ರಿ.ಶ. ೧೧೩೭, ನವ್ಹೆಂಬರ್ ೨೭.

೮೯. ಜೆ.ಆಯ್.ಎಸ್.ಆಯ್., ನಂ.೫, ಕ್ರಿ.ಶ. ೧೧೩೮.

೯೦. ಚಿದಾನಂದ ಮೂರ್ತಿ, ಎಂ., *ಕನ್ನಡ ಶಾಸನದ ಸಾಂಸ್ಕೃತಿಕ ಅಧ್ಯಯನ,* ಪು.೩೬೮.

೯೧. ಮಹೀಶವಾಡಿ, ಬಿ.ಬಿ.(ಸಂ), *ಧರ್ಮಾಮೃತ,* ೯-೧೦೮, ೫-೯೯.

೯೨. ಕಲಬುರ್ಗಿ ಎಂ.ಎಂ.(ಸಂ), *ಮಾನಸೋಲ್ಲಾಸ,* ಪು. ೬.

೯೩. ಮಹೀಶವಾಡಿ, ಬಿ.ಬಿ.(ಸಂ), *ಧರ್ಮಾಮೃತ*, ೫-೯೯, ೧೨-೧೧೯.

೯೪. ಅದೇ, ೧-೧೬೯, ೧-೧೮೩, ೧೪-೪, ೮-೯೧.

೯೫. ವಿವರಣೆಗಳಿಗೆ ನೋಡಿ ಬಿ.ವ್ಹಿ. ಮಲ್ಲಾಪುರ, 'ನಯಸೇನ ಮತ್ತು ಅವನ ಕೃತಿಗಲು', ಪು. ೩೨೫-೩೩೪.

೯೬. ಕಲಬುರ್ಗಿ ಎಂ. ಎಂ.(ಸಂ), *ಮಾನಸೋಲ್ಲಾಸ*, ಪು. ೫.

೯೭. ಎಸ್. ಆಯ್. ಆಯ್., ಸಂಪುಟ- XV, ನಂ.೧೬, ಮದನಬಾವಿ, ಕ್ರಿ.ಶ. ೧೧೩೮, ಜನವರಿ, ೨೭.

೯೮. ಹಿರೇಮಠ ಚನ್ನಬಸವ, *ಕುರಗೋಡು ಸಿಂಧರು : ಒಂದು ಸಾಂಸ್ಕೃತಿಕ ಅಧ್ಯಯನ*, ಪು. ೧೮೫.

೯೯. ಕೊಪ್ಪಾ ಎಸ್. ಕೆ., *ತರ್ದವಾಡಿ ನಾಡು : ಒಂದು ಸಾಂಸ್ಕೃತಿಕ ಅಧ್ಯಯನ*, ಪು. ೧೫೭.

೧೦೦. ಹಿರೇಮಠ, ಬಿ. ಆರ್., *ಶಾಸನದಲ್ಲಿ ಕರ್ನಾಟಕದ ವರ್ತಕರು*, ಪು. ೧೦೪.

೧೦೧. ಅದೇ, ಪು. ೧೦೩.

೧೦೨. ಎಸ್.ಆಯ್.ಆಯ್., ಸಂಪುಟ- XX, ನಂ.೧೨, ಇಂಗಳೇಶ್ವರ, ಕ್ರಿ.ಶ. ೧೧೨೮, ನವ್ಹೆಂಬರ್, ೮.

೧೦೩. ದೇವರಕೊಂಡಾರೆಡ್ಡಿ (ಸಂ), *ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ-೨*, ನಂ. ೩೮, ಕುಕನೂರು, ಕ್ರಿ.ಶ. ೧೧೩೨, ಮಾರ್ಚ್ ೩.

೧೦೪. ಕೆ. ಆಯ್., ಸಂಪುಟ-II, ನಂ.೨೦, ತಿಳವಳ್ಳಿ, ಕ್ರಿ.ಶ. ೧೧೩೧, ಅಕ್ಟೋಬರ್ ೪.

೧೦೫. ಗಣೇಶ, ಕೆ. ಆರ್. (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೫*, ನಂ.೩೬೨, ಕೊಲಿಮಿಗುಂಡ್ಲ, ಕ್ರಿ.ಶ. ೧೧೩೪, ಡಿಸೆಂಬರ್, ೨೫.

೧೦೬. ಉಪಾಧ್ಯ, ಜಿ. ಎಂ., (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೬*, ನಂ. ೧೩೭, ಔರಾದ್, ಕ್ರಿ.ಶ.೧೧೩೫, ಮಾರ್ಚ್ ೧೧.

೧೧೧. ಮಹೀಶವಾಡಿ, ಬಿ.ಬಿ.(ಸಂ), *ಧರ್ಮಾಮೃತ*, ೧೩-೧೮೫, ೭-೧೨೨, ೬-೧೭೫.

೧೧೨. ಗೋಗಿ ಹನುಮಾಕ್ಷಿ(ಸಂ), *ಕಲಬುರ್ಗಿ ಜಿಲ್ಲೆಯ ಶಾಸನಗಳು*, ನಂ.೩, ನಿಂಬರಗಿ, ಕ್ರಿ.ಶ. ೧೧೩೪.

೧೧೩. ಕಲಬುರ್ಗಿ ಎಂ.ಎಂ.(ಸಂ), *ಮಾನಸೋಲ್ಲಾಸ*, ಪು.೩೫೭.

೧೧೪. ಮನುಷ್ಯರಿಗೂ ಪಶುಗಳಿಗೂ ಉಪಯೋಗ ಬೀಳುವ ಉಪ್ಪು ವ್ಯಾಪಾರದ ವಸ್ತುವಾಗಿರುವುದನ್ನು ಪಾಣಿನಿ ಹೇಳಿದ್ದಾರೆ.

೧೧೫. ಕಲಬುರ್ಗಿ ಎಂ.ಎಂ.(ಸಂ), *ಮಾನಸೋಲ್ಲಾಸ*, ಪು.೩೫೦.

೧೧೬. ಜೆ. ಆಯ್. ಎಸ್. ಆಯ್., ನಂ.೧, ಕ್ರಿ.ಶ. ೧೦೯೪.

೧೧೭. ಕಲಬುರ್ಗಿ ಎಂ.ಎಂ.(ಸಂ), *ಮಾನಸೋಲ್ಲಾಸ*, ಪು.೭೯.

೧೧೮. ಅದೇ, ಪು. ೭೮.

೧೧೯. ಅದೇ, ಪು. ೭೬.

೧೨೦. ಅದೇ, ಪು.೭೭.

೧೨೧. ಅದೇ,

೧೨೨. ಅದೇ,

೧೨೩. ಚಿದಾನಂದ ಮೂರ್ತಿ, ಎಂ., *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ*, ಪು.೩೭೪.

೧೨೪. ಕಲಬುರ್ಗಿ ಎಂ.ಎಂ.(ಸಂ), *ಮಾನಸೋಲ್ಲಾಸ*, ಪು.೯೧-೯೨.

೧೨೫. ನೋಡಿ ಮಲ್ಲಾಪುರ ಬಿ.ವ್ಹಿ., *ನಯಸೇನ ಮತ್ತು ಅವನ ಕೃತಿಗಳು*, ಪು. ೨೮೬-೨೯೦.

೧೨೬. ಗಣೇಶ, ಕೆ. ಆರ್. (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೫*, ನಂ.೬೦೪, ಪಟಾನ್‌ಚೆರು, ಕ್ರಿ.ಶ. ೧೧೨೭, ಫೆಬ್ರುವರಿ, ೨೦.

೧೨೭. ದೇವರಕೊಂಡಾರೆಡ್ಡಿ (ಸಂ), *ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ-೧*, ನಂ. ೩೪, ರಾಗಿಮುಸಲವಾಡ, ಕ್ರಿ.ಶ. ೧೧೨೭, ಜುಲೈ ೧೦.

೧೨೮. ಎಸ್. ಆಯ್. ಆಯ್., ಸಂಪುಟ- XX, ನಂ.೧೦೦, ಬಿಜಾಪುರ, ಕ್ರಿ.ಶ. ೧೧೨೯, ಜನೆವರಿ, ೧೭.

೧೨೯. ಉಪಾಧ್ಯ, ಜಿ. ಎಂ., (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೬*, ನಂ. ೧೩೭, ಔರಾದ್, ಕ್ರಿ.ಶ.೧೧೩೫, ಮಾರ್ಚ್ ೧೧.

೧೩೦. ಗೋಗಿ ಹನುಮಾಕ್ಷಿ(ಸಂ), *ಕಲಬುರ್ಗಿ ಜಿಲ್ಲೆಯ ಶಾಸನಗಳು*, ನಂ.೩೨, ಸಿರಿವಾಳ, ಕ್ರಿ.ಶ. ೧೧೩೭.

೧೩೧. ದೇವರಕೊಂಡಾರೆಡ್ಡಿ (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೩*, ನಂ. ೩೯, ಕುಕನೂರು,

೧೩೨. ಗೋಗಿ ಹನುಮಾಕ್ಷಿ(ಸಂ), *ಸುರಪುರ ತಾಲೂಕಿನ ಶಾಸನಗಳು*, ನಂ. ೭ ಮಾದಿನೂರು, ಕ್ರಿ.ಶ. ೧೧೨೯, ಡಿಸೆಂಬರ್, ೨೪.

೧೩೩. ಹಿರೇಮಠ, ಆರ್.ಸಿ. (ಸಂ), *ಬಸವಣ್ಣನವರ ವಚನಗಳು* ವ. ೧೧೫, ಪು. ೫೪, *"ಧರಿಣಿಯ ಮೇಲೊಂದು ಹಿರಿದಪ್ಪ ಅಂಗಡಿಯ ನಿಕ್ಕಿ ಹರದ ಕುಳ್ಳಿರ್ದ್ದ ನಮ್ಮ ಮಹದೇವಶೆಟ್ಟಿ"*

೧೩೪. ಎ. ಕ., ಸಂಪುಟ- XI, ನಂ. ೩೪, ಕ್ರಿ.ಶ. ೧೧೨೩.

೧೩೫. R. Shama Sastry (Ed), *Abhilashitarthachintamani*, p. 316.

೧೩೬. ಎಸ್. ಆಯ್. ಆಯ್., ಸಂಪುಟ- XX, ನಂ.೧೦೪, ಮಲಘಾನ, ಕ್ರಿ.ಶ. ೧೧೩೩, ಅಗಸ್ಟ್, ೨.

೧೩೭. ದೇವರಕೊಂಡಾರೆಡ್ಡಿ (ಸಂ) *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೧*, ನಂ. ೬೪, ಸಿಂದವಾಳ, ಕ್ರಿ.ಶ. ೧೧೩೦, ಅಕ್ಟೋಬರ್, ೪.

೧೩೮. ಗಣೇಶ, ಕೆ. ಆರ್. (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೫,* ನಂ.೩೬೨, ಕೊಲಿಮಿಗುಂಡ್ಲ, ಕ್ರಿ.ಶ. ೧೧೩೪, ಡಿಸೆಂಬರ್ ೨೫.

೧೩೯. ಎ. ಕ., ಸಂಪುಟ- XI, ನಂ. ೨೧೧, ಸಿಂಧಗಿರಿ, ಕ್ರಿ.ಶ. ೧೧೩೭.

೧೪೦. ನೋಡಿ ಕೊಪ್ಪಾ ಎಸ್.ಕೆ., *ತರ್ದವಾಡಿ ನಾಡು : ಒಂದು ಸಾಂಸ್ಕೃತಿಕ ಅಧ್ಯಯನ,* ಪು. ೨೧೩.

೧೪೧. ಜೆ.ಪಿ.ಎಸ್.ಡಿ., ನಂ. ೫, ಕ್ರಿ.ಶ. ೧೧೩೮.

೧೪೨. ಎ. ಕ., ಸಂಪುಟ- XI, ನಂ. ೧೨೨, ಕ್ರಿ.ಶ. ೧೧೪೦.

೧೪೩. ಗಣೇಶ, ಕೆ. ಆರ್. (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೫,* ನಂ.೫೦೩, ಗಂಗಾಪುರಂ, ಕ್ರಿ.ಶ. ೧೧೩೪, ಜೂನ್, ೮.

೧೪೪. ಕೆ. ಆಯ್., ಸಂಪುಟ-I, ನಂ.೨೦, ತಿಳವಳ್ಳಿ, ಕ್ರಿ.ಶ. ೧೧೩೧, ಅಕ್ಟೋಬರ್ ೪.

೧೪೫. ಉಪಾಧ್ಯ, ಜಿ. ಎಂ., (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೫,* ನಂ. ೬೨, ಏರಿಗೆ, ಕ್ರಿ.ಶ.೧೧೩೫, ಜುಲೈ ೧೧.

೧೪೬. ಗಣೇಶ, ಕೆ. ಆರ್. (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೫,* ನಂ.೬೦೪, ಪಟಾನ್‌ಚೆರು, ಕ್ರಿ.ಶ. ೧೧೨೭, ಫೆಬ್ರುವರಿ ೨೦.

೧೪೭. ಹಿರೇಮಠ, ಬಿ.ಆರ್., *ಶಾಸನದಲ್ಲಿ ಕರ್ನಾಟಕ ವರ್ತಕರು,* ಪು. ೭೧.

೧೪೮. ಎಸ್. ಆಯ್. ಆಯ್., ಸಂಪುಟ- XX, ನಂ.೧೪೧, ಹಪನಹಳ್ಳಿ, ಕ್ರಿ.ಶ. ೧೧೩೬.

೧೪೯. ಗಣೇಶ, ಕೆ. ಆರ್. (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೫,* ನಂ.೫೪೨, ಹೇರೂರು, ಕ್ರಿ.ಶ. ೧೧೧೯, ಮೇ ೧೧.

೧೫೦. ಎಸ್. ಆಯ್. ಆಯ್., ಸಂಪುಟ- XX, ನಂ.೧೩೮, ತದ್ದಲಬಾಗಿ, ಕ್ರಿ.ಶ. ೧೧೩೬.

೧೫೧. ಅದೇ, ನಂ.೧೧೧, ದೇವರನಾವದಗಿ, ಕ್ರಿ.ಶ. ೧೧೪೦.

೧೫೨. ಹಿರೇಮಠ, ಬಿ. ಆರ್., *ಶಾಸನದಲ್ಲಿ ಕರ್ನಾಟಕ ವರ್ತಕರು,* ಪು. ೧೫.

೧೫೩. ಎಸ್. ಆಯ್.ಆಯ್. ಸಂಪುಟ- XX, ನಂ.೮೫, ಹಿರೇಬೇವಿನೂರ, ಕ್ರಿ.ಶ. ೧೧೨೪.

೧೫೪. ಕೊಪ್ಪಾ ಎಸ್. ಕೆ, *ತರ್ದವಾಡಿ ನಾಡು : ಒಂದು ಅಧ್ಯಯನ,* ಪು. ೨೧೩.

೧೫೫. ಉಪಾಧ್ಯ, ಜಿ. ಎಂ., (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೬,* ನಂ. ೬೨, ಏರಿಗೆ, ಕ್ರಿ.ಶ.೧೧೩೫, ಜುಲೈ ೨೩.

೧೫೬. ಕೊಪ್ಪಾ ಎಸ್. ಕೆ, *ತರ್ದವಾಡಿ ನಾಡು : ಒಂದು ಅಧ್ಯಯನ,* ಪು. ೨೧೩.

೧೫೭. ಅದೇ,

೧೫೮. ನೋಡಿ ಹಿರೇಮಠ, ಬಿ.ಆರ್., *ಶಾಸನದಲ್ಲಿ ಕರ್ನಾಟಕದ ವರ್ತಕರು*, ಪು.೧೨.

೧೫೯. ಗಣೇಶ, ಕೆ. ಆರ್. (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೫*, ನಂ.೬೦೪, ಪಟಾನಚೇರು, ಕ್ರಿ.ಶ. ೧೧೨೭, ಫೆಬ್ರುವರಿ, ೨೦.

೧೬೦. ಎ.ಕ., ಸಂಪುಟ- VII, ಶಿಕಾರಿಪುರ, ನಂ. ೧೭೦, ಮೂಡಿ, ಕ್ರಿ.ಶ. ೧೧೨೬.

೧೬೧. ಎ.ಇ., ಸಂಪುಟ- XIX, ಕೊಲ್ಲಾಪುರ, ಕ್ರಿ.ಶ. ೧೧೩೫, ಪು. ೩೦-೩೪.

೧೬೨. ಎಸ್. ಆಯ್.ಆಯ್., ಸಂಪುಟ- XX(I), ನಂ.೨೩೨, ಗೂಟಿ, ಕ್ರಿ.ಶ. ೧೧೩೫.

೧೬೩. ಎ.ಇ., ಸಂಪುಟ- XIX, ಕೊಲ್ಲಾಪುರ, ಕ್ರಿ.ಶ. ೧೧೩೫, ಪು. ೩೦-೩೪.

೧೬೪. ಎಸ್. ಆಯ್.ಆಯ್., ಸಂಪುಟ- XVIII, ನಂ.೧೩೮, ರಾಣೇಬೆನ್ನೂರ, ಕ್ರಿ.ಶ. ೧೧೨೮.

೧೬೫. ಎ.ಇ., ಸಂಪುಟ- XIX, ಕೊಲ್ಲಾಪುರ, ಕ್ರಿ.ಶ. ೧೧೩೫, ಪು. ೩೦-೩೪.

೧೬೬. ಅದೇ,

೧೬೭. ಉಮಾಪತಿಶಾಸ್ತ್ರಿ, ಜಿ.ಎಂ., (ಸಂ), *ಪಾರಮಾರ್ಥ ಪ್ರಕಾಶಿಕೆ*, ಅರಿಕೆ, ಪು.೩೧.

೧೬೮. ಗಣೇಶ, ಕೆ. ಆರ್. (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೫*, ನಂ.೫೦೮, ಜಡಜರ್ಲ, ಕ್ರಿ.ಶ. ೧೧೨೫, ಫೆಬ್ರುವರಿ, ೧೯.

೧೬೯. ಚಿದಾನಂದಮೂರ್ತಿ, ಎಂ., *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ*, ಪು. ೩೭೯.

೧೭೦. ದೇವರಕೊಂಡಾರೆಡ್ಡಿ (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೧*, ನಂ. ೩೪, ರಾಗಿಮುಸಲವಾಡ, ಕ್ರಿ.ಶ. ೧೧೨೭, ಜುಲೈ ೧೦.

೧೭೧. ಎ. ಕೆ., ಸಂಪುಟ-VI, ಕ್ರಿ.ಶ. ೧೧೩೧.

೧೭೨. ಚಿದಾನಂದಮೂರ್ತಿ, ಎಂ., *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ*, ಪು. ೩೭೯-೮೦.

೧೭೩. ಹಿರೇಮಠ ಬಿ.ಆರ್., *ಶಾಸನದಲ್ಲಿ ಕರ್ನಾಟಕದ ವರ್ತಕರು*, ಪು. ೨೯-೩೦.

೧೭೪. ಕೆ. ಆಯ್., ಸಂಪುಟ- V, ನಂ. ೨೧, ತೇರದಾಳ, ಕ್ರಿ.ಶ. ೧೧೨೫.

೧೭೫. ಎಸ್.ಆಯ್.ಆಯ್., ಸಂಪುಟ- IX (I), ನಂ. ೨೨೩, ರಾಗಿಮುಸಲವಾಡ, ಕ್ರಿ.ಶ. ೧೧೨೭.

೧೭೬. ಅದೇ, ಸಂಪುಟ- XX, ನಂ. ೧೦೦, ವಿಜಾಪುರ, ಕ್ರಿ.ಶ. ೧೧೨೯.

೧೭೭. ಎ.ಕ., ಸಂಪುಟ- XIX, ಪು. ೩೦-೩೪, ಕೊಲ್ಹಾಪುರ, ಕ್ರಿ.ಶ. ೧೧೩೫.

೧೭೮. ಎಸ್.ಆಯ್.ಆಯ್., ಸಂಪುಟ- XVIII, ನಂ. ೧೪೪, ವಿಜಾಪುರ, ಕ್ರಿ.ಶ. ೧೧೩೯.

೧೭೯. ಅದೇ,

೧೮೦. ಅದೇ,

೧೮೧. ಎಸ್. ಆಯ್.ಆಯ್., ಸಂಪುಟ- XX, ನಂ.೧೧೧, ದೇವರನಾವದಗಿ, ಕ್ರಿ.ಶ. ೧೧೪೦.

೧೮೨. ಹಿರೇಮಠ ಬಿ.ಆರ್., *ಶಾಸನಗಳಲ್ಲಿ ಕರ್ನಾಟಕ ವರ್ತಕರು*, ಪು. ೩೪.

೧೮೩. ಕೆ. ಆಯ್., ಸಂಪುಟ-V, ನಂ. ೨೧, ತೇರದಾಳ, ಕ್ರಿ.ಶ. ೧೧೨೫.

೧೮೪. Desai, P.B., *Jainism in South India and Some Jaina Epigraphs* ಪು. ೩೧೫, ಅಡಕಿ, ಕ್ರಿ.ಶ. ೧೧೨೬.

೧೮೫. ಹೈ.ಆ.ಸಿ. III, ನಂ.೧, ಪಟಾನ್‌ಚೆರು, ಕ್ರಿ.ಶ. ೧೧೨೭, ಫೆಬ್ರುವರಿ ೨೦.

೧೮೬. ಎಸ್.ಆಯ್.ಆಯ್., ಸಂಪುಟ-XX, ನಂ. ೧೮೧, ಕಾಮಧೇನು, ಕ್ರಿ.ಶ. ೧೧೨೯, ಮಾರ್ಚ್ ೨೩.

೧೮೭. ಗೋಗಿ ಹನುಮಾಕ್ಷಿ. (ಸಂ), *ಸುರಪುರ ತಾಲೂಕಿನ ಶಾಸನಗಳು*, ನಂ. ೬೭, ಮುದನೂರು, ಕ್ರಿ.ಶ. ೧೧೨೯, ಡಿಸೆಂಬರ್ ೨೪.

೧೮೮. ಎ.ಕ., ಸಂಪುಟ-VII, ಶಿಕಾರಿಪುರ, ನಂ. ೮೭, ಬಳ್ಳಿಗಾವೆ, ಕ್ರಿ.ಶ. ೧೧೩೧.

೧೮೯. ಎಸ್.ಆಯ್.ಆಯ್., ಸಂಪುಟ- XVIII, ನಂ. ೧೪೪, ವಿಜಾಪುರ, ಕ್ರಿ.ಶ. ೧೧೩೯.

೧೯೦. ಅದೇ, XX, ನಂ. ೧೦೦, ವಿಜಾಪುರ, ಕ್ರಿ.ಶ. ೧೧೨೯.

೧೯೧. ಅದೇ, ನಂ. ೧೦೨, ಲಕ್ಷ್ಮೇಶ್ವರ, ಕ್ರಿ.ಶ. ೧೧೩೨.

೧೯೨. ಎ.ಕ., ಸಂಪುಟ- XV, ಬೇಲೂರು, ೩೩೫, ಬಸ್ತಿಹಳ್ಳಿ ಕ್ರಿ.ಶ. ೧೧೩೮.

೧೯೩. ಗೋಗಿ ಹನುಮಾಕ್ಷಿ.(ಸಂ), *ಕಲಬುರ್ಗಿ ಜಿಲ್ಲೆಯ ಶಾಸನಗಳು*, ನಂ.೩೨, ಸಿರಿವಾಳ, ಕ್ರಿ.ಶ. ೧೧೩೭.

೧೯೪. Gururajachar S., *Some Aspects of Economic and Social Life in Karnataka,* P. 48.

೧೯೫. ಹಿರೇಮಠ ಬಿ.ಆರ್., *ಶಾಸನಗಳಲ್ಲಿ ಕರ್ನಾಟಕ ವರ್ತಕರು*, ಪು. ೪೨.

೧೯೬. ಕೊಪ್ಪಾ ಎಸ್. ಕೆ., *ತರ್ದವಾಡಿ ನಾಡು : ಒಂದು ಅಧ್ಯಯನ*, ಪು. ೨೧೫.

೧೯೭. ಹಿರೇಮಠ ಬಿ.ಆರ್., *ಶಾಸನಗಳಲ್ಲಿ ಕರ್ನಾಟಕ ವರ್ತಕರು*, ಪು. ೪೨.

೧೯೮. ಗಣೇಶ, ಕೆ. ಆರ್. (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೫*, ನಂ.೫೦೮, ಜಡಜಲ್ಗ, ಕ್ರಿ.ಶ. ೧೧೨೫, ಫೆಬ್ರುವರಿ, ೧೯.

೧೯೯. ಎಸ್.ಆಯ್.ಆಯ್., ಸಂಪುಟ- XX, ನಂ. ೧೦೬, ನಾಡ, ಕ್ರಿ.ಶ. ೧೧೩೪, ಅಕ್ಟೋಬರ್, ೨೫.

೨೦೦. ಗೋಗಿ ಹನುಮಾಕ್ಷಿ.(ಸಂ), *ಕಲಬುರ್ಗಿ ಜಿಲ್ಲೆಯ ಶಾಸನಗಳು*, ಸೇಡಂ, ಕ್ರಿ.ಶ. ೧೧೩೫.

೨೦೧. ಹಿರೇಮಠ ಬಿ.ಆರ್., *ಶಾಸನಗಳಲ್ಲಿ ಕರ್ನಾಟಕ ವರ್ತಕರು*, ಪು. ೪೯.

೨೦೨. ಗಣೇಶ, ಕೆ. ಆರ್. (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೫*, ನಂ. ೩೩೧, ರಾಮದುರ್ಗ, ಕ್ರಿ.ಶ. ೧೧೩೪, ಜುಲೈ, ೨೩.

೨೦೩. ಎಸ್.ಆಯ್.ಆಯ್., ಸಂಪುಟ- XX (I), ನಂ. ೨೧೫, ದುಗ್ಗವತ್ತಿ, ಕ್ರಿ.ಶ. ೧೧೨೬.

೨೦೪. ಚಿದಾನಂದ ಮೂರ್ತಿ, ಎಂ., *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ,* ಪು.೩೭೮.

೨೦೫. ಹಿರೇಮಠ ಬಿ.ಆರ್., *ಶಾಸನಗಳಲ್ಲಿ ಕರ್ನಾಟಕ ವರ್ತಕರು,* ಪು. ೫೯.

೨೦೬. ಇಂದಿಗೂ ಕವಲೆತ್ತು, ಕಪಲಿ ಎಂಬ ಪದ ಬಳಕೆ ಸಾಧು (ಹೇರಿಕೆಯುಳ್ಳ) ಎತ್ತುಗಳಿಗೆ ಬಳಕೆಗೊಳ್ಳುವುದನ್ನು ಇಲ್ಲಿ ಜ್ಞಾಪಿಸಬಹುದು.

೨೦೭. ಕಲಬುರ್ಗಿ ಎಂ.ಎಂ., ವೀರಶೈವ ವರ್ತಕ ವರ್ಗದ ಅಡ್ಡ ಹೆಸರುಗಳು, 'ಶಿವಚಿಂತನ' ಡಾ. ಎಚ್. ತಿಪ್ಪೇರುದ್ರಸ್ವಾಮಿ, ಅವರ ಅಭಿನಂದನ ಗ್ರಂಥ, ಪು. ೪೬೯-೪೭೦.

೨೦೮. ಅದೇ,

೨೦೯. ಉಪಾಧ್ಯ, ಜಿ.ಎನ್. (ಸಂ.) *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೬,*ನಂ.೨೬, ಅರೆ, ಕ್ರಿ.ಶ. ೧೧೩೫, ಅಕ್ಟೋಬರ್ ೨೯.

೨೧೦. ಗೋಗಿ ಹನುಮಾಕ್ಷಿ.(ಸಂ), *ಕಲಬುರ್ಗಿ ಜಿಲ್ಲೆಯ ಶಾಸನಗಳು,* ನಂ. ೩೨, ಸಿರಿವಾಳ, ಕ್ರಿ.ಶ. ೧೧೩೭.

೨೧೧. ನೋಡಿ ಹಿರೇಮಠ ಸಿ.ಬಿ., *ಕುರಗೋಡು ಸಿಂಧರು : ಒಂದು ಸಾಂಸ್ಕೃತಿಕ ಅಧ್ಯಯನ,* ಪು. ೨೨೫.

೨೧೨. ಎಸ್.ಆಯ್.ಆಯ್., ಸಂಪುಟ-XV, ನಂ. ೮೫, ಐಹೊಳೆ, ಕ್ರಿ.ಶ. ೧೧೩೬, ಜುಲೈ, ೧೨.

೨೧೩. ಗಣೇಶ, ಕೆ. ಆರ್. (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೫,* ನಂ.೫೦೮, ಜಡಜರ್ಲ, ಕ್ರಿ.ಶ. ೧೧೨೫, ಫೆಬ್ರುವರಿ, ೧೯.

೨೧೪. ದೇವರಕೊಂಡಾರೆಡ್ಡಿ (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೧,* ನಂ. ೩೪, ರಾಗಿಮುಸಲವಾಡ, ಕ್ರಿ.ಶ. ೧೧೨೭, ಜುಲೈ ೧೦.

೨೧೫. ಗೋಗಿ ಹನುಮಾಕ್ಷಿ.(ಸಂ), *ಕಲಬುರ್ಗಿ ಜಿಲ್ಲೆಯ ಶಾಸನಗಳು,* ನಂ.೧೭, ಸೇಡಂ, ಕ್ರಿ.ಶ. ೧೧೩೭.

೨೧೬. ಹಿರೇಮಠ ಬಿ.ಆರ್., *ಶಾಸನದಲ್ಲಿ ಕರ್ನಾಟಕದ ವರ್ತಕರು,* ಪು. ೬೬.

೨೧೭. ಗಣೇಶ, ಕೆ.ಆರ್. (ಸಂ.), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೫,* ನಂ. ೫೦೩, ಗಂಗಾಪುರಂ, ಕ್ರಿ.ಶ. ೧೧೩೪, ಜೂನ್ ೮.

೨೧೮. ಕೊಪ್ಪಾ ಎಸ್. ಕೆ., *ತರ್ದವಾಡಿ ನಾಡು : ಒಂದು ಅಧ್ಯಯನ,* ಪು. ೨೧೮, ಅಡಿಟಿಪ್ಪಣಿ, ೨೩೩, ಪು. ೨೪೬.

೨೧೯. ಅದೇ, ಪು. ೨೧೮, ಅಡಿಟಿಪ್ಪಣಿ, ೨೩೩, ಪು. ೨೪೬.

೨೨೦. ಗೋಗಿ ಹನುಮಾಕ್ಷಿ.(ಸಂ), *ಕಲಬುರ್ಗಿ ಜಿಲ್ಲೆಯ ಶಾಸನಗಳು,* ನಂ. ೩೨, ಸಿರಿವಾಳ, ಕ್ರಿ.ಶ. ೧೧೩೭.

೨೨೧. ಗಣೇಶ, ಕೆ.ಆರ್. (ಸಂ.), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೫,* ನಂ. ೫೦೩, ಜಡಜರ್ಲ, ಕ್ರಿ.ಶ. ೧೧೨೫, ಫೆಬ್ರುವರಿ ೧೯.

೨೨೨. ಉಪಾಧ್ಯ, ಜಿ.ಎನ್. (ಸಂ.) *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೬*, ನಂ.೧೩೭, ಔರಾದ, ಕ್ರಿ.ಶ. ೧೧೩೫, ಮಾರ್ಚ್ ೧೧.

೨೨೩. ಕೆ. ಆಯ್., ಸಂಪುಟ-V, ನಂ. ೨೦, ತಿಳವಳ್ಳಿ, ಕ್ರಿ.ಶ. ೧೧೩೧, ಅಕ್ಟೋಬರ್ ೪.

೨೨೪. Krishna Murari, *The Chalukyas of Kalyani*, (973-1200 AD).

೨೨೫. ಎಸ್.ಆಯ್.ಆಯ್., ಸಂಪುಟ- XX, ನಂ. ೧೦೦, ವಿಜಾಪುರ, ಕ್ರಿ.ಶ. ೧೧೨೯, ಜನವರಿ, ೧೭.

೨೨೬. ಕೆ. ಆಯ್., ಸಂಪುಟ-V, ನಂ. ೨೦, ತಿಳವಳ್ಳಿ, ಕ್ರಿ.ಶ. ೧೧೩೧, ಅಕ್ಟೋಬರ್ ೪.

೨೨೭. ಗೋಗಿ ಹನುಮಾಕ್ಷಿ.(ಸಂ), *ಸುರಪುರ ತಾಲೂಕಿನ ಶಾಸನಗಳು*, ನಂ. ೬೭, ಮುದನೂರು, ಕ್ರಿ.ಶ. ೧೧೨೯, ಡಿಸೆಂಬರ್ ೨೪.

೨೨೮. ದೇವರಕೊಂಡಾರೆಡ್ಡಿ (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೭*, ನಂ. ೨೭, ಹಿರೇರಾಯಕುಂಪಿ. ಕ್ರಿ.ಶ. ೧೧೩೦, ಡಿಸೆಂಬರ್ ೨೫.

೨೨೯. ಅದೇ, *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೧*, ನಂ. ೩೪, ರಾಗಿಮುಸಲವಾಡ., ಕ್ರಿ.ಶ. ೧೧೨೭, ಜುಲೈ ೧೦.

೨೩೦. ಗೋಗಿ ಹನುಮಾಕ್ಷಿ.(ಸಂ), *ಕಲಬುರ್ಗಿ ಜಿಲ್ಲೆಯ ಶಾಸನಗಳು*, ನಂ.೩, ಸಿರಿವಾಳ, ಕ್ರಿ.ಶ. ೧೧೩೭.

೨೩೧. ಎಸ್.ಆಯ್.ಆಯ್., ಸಂಪುಟ-XV, ನಂ. ೧೫, ಇಂಗಳೇಶ್ವರ, ಕ್ರಿ.ಶ. ೧೧೩೭, ಸೆಪ್ಟೆಂಬರ್ ೯.

೨೩೨. ಚಿದಾನಂದಮೂರ್ತಿ, ಎಂ., *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ*, ಪು. ೩೮೭.

೨೩೩. ಗಣೇಶ, ಕೆ.ಆರ್. (ಸಂ.), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೫*, ನಂ. ೩೦೧, ಪೆದ್ದತುಂಬಳಂ, ಕ್ರಿ.ಶ. ೧೧೩೩, ಡಿಸೆಂಬರ್ ೨೩.

೨೩೪. ಎ.ಕ., ಸಂಪುಟ-XV, BI, ೩೩೫, ಕ್ರಿ.ಶ. ೧೧೩೮.

೨೩೫. ಅದೇ, ಸಂಪುಟ-V, BI, ೩೩೫, ಕ್ರಿ.ಶ. ೧೧೩೮.

೨೩೬. ಬಿ. ಕೆ.ಡಿ., ಸಂಪುಟ- I.(II), ೨೦೨, ಕ್ರಿ.ಶ. ೧೧೦೩.

೨೩೭. ಅದೇ, ಸಂಪುಟ- I.(II), ೧೫೩, ಕ್ರಿ.ಶ. ೧೧೦೩.

೨೩೮. ಎ.ಕ., ಸಂಪುಟ- XII, ೩೪, ಕ್ರಿ.ಶ. ೧೧೩೪.

೨೩೯. ಚಿದಾನಂದಮೂರ್ತಿ, ಎಂ., *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ*, ಪು. ೩೮೮.

೨೪೦. Nilakanta Sastri K. A., *The Cholas*, P. 613.

೨೪೧. Altekar, A. S., *The Rastrakutas and their Times*, P. 367 and *Economic Conditions in South India*, P. 710.

೨೪೨. ಕೆ. ಆಯ್., ಸಂಪುಟ- V, ನಂ. ೨೩, ತಿಳವಳ್ಳಿ, ಕ್ರಿ.ಶ. ೧೧೨೯, ಅಕ್ಟೋಬರ್ ೧೫.

೨೪೩. ಎಸ್.ಆಯ್.ಆಯ್., ಸಂಪುಟ- XX, ನಂ. ೧೧೧, ಕಾಮಧೇನು, ಕ್ರಿ.ಶ. ೧೧೨೯, ಮಾರ್ಚ್ ೨೩.

೨೪೪. Narasimha Murthy A. V., *The Coins of Karnataka,* P. 79.

೨೪೫. ದೇವರಕೊಂಡಾರೆಡ್ಡಿ (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೭*, ನಂ.೩೪, ರಾಗಿಮುಸವಾಡ, ಕ್ರಿ.ಶ. ೧೧೨೭, ಜುಲೈ ೧೦.

೨೪೬. ಅದೇ,

೨೪೭. ಅದೇ, ನಂ. ೨೭, ಹಿರೇರಾಯಕುಂಪಿ, ಕ್ರಿ.ಶ. ೧೧೩೦, ಡಿಸೆಂಬರ್ ೨೫.

೨೪೮. ಮರಿಯಪ್ಪ ಭಟ್ಟ, ಎಂ. (ಸಂ), *ವ್ಯವಹಾರಗಣಿತ*, ೧-೨೪.

೨೪೯. ಲೀಲಾವತಿ ಗಣಿತ, ೧-೨, ಉಲ್ಲೇಖ, *ಕನ್ನಡ ಸಾಹಿತ್ಯ ಚರಿತ್ರೆ*, ಸಂ.೪, ಭಾಗ-೨, ಪು. ೧೦೫೦.

೨೫೦. ಹಿರೇಮಠ, ಆರ್.ಸಿ. (ಸಂ), *ಬಸವಣ್ಣನವರ ವಚನಗಳು*- ೧೧೫.

೨೫೧. ನಾರಾಯಣ ಪಿ. ವಿ., *ವಚನ ಸಾಹಿತ್ಯ : ಒಂದು ಸಾಂಸ್ಕೃತಿಕ ಅಧ್ಯಯನ*, ಪು.೧೮೪.

೨೫೨. ಹಿರೇಮಠ, ಆರ್.ಸಿ. (ಸಂ), *ಬಸವಣ್ಣನವರ ವಚನಗಳು*-೪೫೦.

೨೫೩. ಹಿರೇಮಠ ಸಿ.ಬಿ, *ವಚನ ಸಾಹಿತ್ಯ : ಒಂದು ಸಾಂಸ್ಕೃತಿಕ ಅಧ್ಯಯನ*, ಪು. ೧೮೪.

೨೫೪. ಹಿರೇಮಠ, ಬಿ.ಆರ್., *ಶಾಸನಗಳಲ್ಲಿ ಕರ್ನಾಟಕ ವರ್ತಕರು*, ಪು. ೧೩೦.

೨೫೫. ಎಸ್.ಆಯ್.ಆಯ್., ಸಂಪುಟ- XVIII, ನಂ. ೧೩೪, ಮುದೇನೂರು, ಕ್ರಿ.ಶ. ೧೧೨೮, ಜುಲೈ ೨೭.

೨೫೬. ಗಣೇಶ, ಕೆ.ಆರ್. (ಸಂ.), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೫*, ನಂ. ೫೦೩, ಜಡಜರ್ಲ, ಕ್ರಿ.ಶ. ೧೧೨೫, ಫೆಬ್ರುವರಿ ೧೯.

೨೫೭. ಅದೇ,

೨೫೮. ಮರಿಯಪ್ಪ ಭಟ್ಟ, ಎಂ. (ಸಂ), *ವ್ಯವಹಾರಗಣಿತ*, ೧-೨೫.

೨೫೯. ಎಸ್.ಆಯ್.ಆಯ್., ಸಂಪುಟ-XX, ನಂ. ೧೦೧, ಕಾಮಧೇನು, ಕ್ರಿ.ಶ. ೧೧೨೯, ಮಾರ್ಚ್ ೨೩.

೨೬೦. ಗೋಗಿ ಹನುಮಾಕ್ಷಿ.(ಸಂ), *ಕಲಬುರ್ಗಿ ಜಿಲ್ಲೆಯ ಶಾಸನಗಳು*, ನಂ. ೩೨, ಸಿರಿವಾಳ, ಕ್ರಿ.ಶ. ೧೧೩೭.

೨೬೧. ಎಸ್.ಆಯ್.ಆಯ್., ಸಂಪುಟ- XX, ನಂ. ೧೦೦, ವಿಜಾಪುರ, ಕ್ರಿ.ಶ. ೧೧೨೯, ಜನವರಿ ೧೭.

೨೬೨. ಗೋಗಿ ಹನುಮಾಕ್ಷಿ.(ಸಂ), *ಕಲಬುರ್ಗಿ ಜಿಲ್ಲೆಯ ಶಾಸನಗಳು*, ನಂ. ೩೨, ಸಿರಿವಾಳ, ಕ್ರಿ.ಶ. ೧೧೩೭.

೨೬೩. ಗೋಗಿ ಹನುಮಾಕ್ಷಿ.(ಸಂ), *ಸುರಪುರ ತಾಲೂಕಿನ ಶಾಸನಗಳು*, ನಂ. ೬೭, ಮುದನೂರು, ಕ್ರಿ.ಶ. ೧೧೨೯, ಡಿಸೆಂಬರ್ ೨೪.

೨೬೪. ಮರಿಯಪ್ಪ ಭಟ್ಟ, ಎಂ., (ಸಂ), *ವ್ಯವಹಾರ ಗಣಿತ*, ೧-೨೬.

೨೬೫. ದೇವರಕೊಂಡಾರೆಡ್ಡಿ (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೩*, ನಂ. ೫೩, ಕುಕನೂರು,

ಕ್ರಿ.ಶ. ೧೧೩೮, ಡಿಸೆಂಬರ್ ೨೫.

೨೬೬. ಮರಿಯಪ್ಪ ಭಟ್ಟ, ಎಂ., (ಸಂ), *ವ್ಯವಹಾರ ಗಣಿತ*, ಅನುಬಂಧ-೨೯, ಪು. ೧೮.

೨೬೭. ಗೋಗಿ ಹನುಮಾಕ್ಷಿ.(ಸಂ), *ಸುರಪುರ ತಾಲೂಕಿನ ಶಾಸನಗಳು*, ನಂ. ೨೨, ಕಕ್ಕೇರಿ, ಕ್ರಿ.ಶ. ೧೧೨೭, ಮಾರ್ಚ್ ೨೧.

೨೬೮. ಕೆ. ಆಯ್., ಸಂಪುಟ-V, ನಂ. ೨೦, ತಿಳವಳ್ಳಿ, ಕ್ರಿ.ಶ. ೧೧೨೯, ಅಕ್ಟೋಬರ್ ೧೫.

೨೬೯. ದೇವರಕೊಂಡಾರೆಡ್ಡಿ (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೭*, ನಂ. ೨೭, ಹಿರೇರಾಯಕುಂಪಿ, ಕ್ರಿ.ಶ. ೧೧೩೦, ಡಿಸೆಂಬರ್ ೨೫.

೨೭೦. ಎಸ್.ಆಯ್.ಆಯ್., ಸಂಪುಟ-XX, ನಂ. ೧೦೩, ಅಥರ್ಗಾ, ಕ್ರಿ.ಶ. ೧೧೩೩, ಜನೆವರಿ, ೧೩.

೨೭೧. ಗೋಗಿ ಹನುಮಾಕ್ಷಿ.(ಸಂ), *ಸುರಪುರ ತಾಲೂಕಿನ ಶಾಸನಗಳು*, ನಂ. ೧೫, ಹುಣಸಗಿ, ಕ್ರಿ.ಶ. ೧೧೩೬, ಫೆಬ್ರುವರಿ ೫.

೨೭೨. ಅದೇ,

೨೭೩. ಗೋಪಾಲ, ಬಾ. ರಾ., *ಮಾನವಿಕ ಕರ್ನಾಟಕ*, ಸಂ.೩, ಸಂ.೩ ಮೇ ೧೯೭೩.

೨೭೪. ಅದೇ,

೨೭೫. ಎಸ್.ಆಯ್.ಆಯ್., ಸಂಪುಟ-XV, ನಂ. ೧೬, ಮದನಬಾವಿ, ಕ್ರಿ.ಶ. ೧೧೩೮, ಜನೆವರಿ, ೨೭.

೨೭೬. ಉಪಾಧ್ಯ, ಜಿ.ಎನ್. (ಸಂ.), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೬*, ನಂ.೧೩೪, ಸೊಲ್ಲಾಪುರ, ಕ್ರಿ.ಶ. ೧೧೩೬, ಜನೆವರಿ ೩೦.

೨೭೭. ಗೋಗಿ ಹನುಮಾಕ್ಷಿ. (ಸಂ), *ಕಲಬುರ್ಗಿ ಜಿಲ್ಲೆಯ ಶಾಸನಗಳು*, ನಂ. ೩೨, ಸಿರಿವಾಳ, ಕ್ರಿ.ಶ. ೧೧೩೭.

೨೭೮. ಕೆ. ಆಯ್., ಸಂಪುಟ- I, ನಂ. ೨೦, ತಿಳವಳ್ಳಿ, ಕ್ರಿ.ಶ. ೧೧೩೧, ಅಕ್ಟೋಬರ್ ೪.

೨೭೯. ದೇವರಕೊಂಡಾರೆಡ್ಡಿ (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೧*, ನಂ. ೬೪, ಸಿಂಧವಾಳ, ಕ್ರಿ.ಶ. ೧೧೩೦, ಅಕ್ಟೋಬರ್ ೪.

೨೮೦. ಅದೇ, *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೭*, ನಂ. ೫, ಮುಕ್ಕುಂದಿ, ಕ್ರಿ.ಶ. ೧೧೩೪ ಜುಲೈ ೨೩.

೨೮೧. ಚಿದಾನಂದಮೂರ್ತಿ, ಎಂ., *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ*, ಪು. ೩೯೦.

೨೮೨. ದೇವರಕೊಂಡಾರೆಡ್ಡಿ (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೨*, ನಂ.೨೬, ಮಾದಿನೂರು, ಕ್ರಿ.ಶ. ೧೧೩೬, ಡಿಸೆಂಬರ್ ೧೦.

೨೮೩. ಗೋಗಿ ಹನುಮಾಕ್ಷಿ. (ಸಂ), *ಸುರಪುರ ತಾಲೂಕಿನ ಶಾಸನಗಳು*, ನಂ. ೨೨, ಕಕ್ಕೇರಿ, ಕ್ರಿ.ಶ. ೧೧೨೭, ಮಾರ್ಚ್ ೨೧.

೨೮೪. ಗಣೇಶ, ಕೆ. ಆರ್. (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೫*, ನಂ. ೩೦೧, ಪೆದ್ದತುಂಬಳಂ, ಕ್ರಿ.ಶ. ೧೧೩೩, ಡಿಸೆಂಬರ್ ೨೩.

೨೮೫. ದೇವರಕೊಂಡಾರೆಡ್ಡಿ (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೨,* ನಂ.೨೬, ಮಾದಿನೂರು, ಕ್ರಿ.ಶ. ೧೧೩೬, ಡಿಸೆಂಬರ್ ೧೦.

೨೮೬. Sarkar, D.C., Indian Epigraphical Glossary, P. 141.

೨೮೭. ಎಸ್.ಆಯ್.ಆಯ್., ಸಂಪುಟ-XV, ನಂ. ೬೪, ಮಲಘಾಣ, ಕ್ರಿ.ಶ. ೧೧೦೦.

೨೮೮. ಕೆ. ಆಯ್., ಸಂಪುಟ-V, ನಂ. ೯೩, ಗೌಳಿಹಳ್ಳಿ, ಕ್ರಿ.ಶ. ೧೧೮೩, ಫೆಬ್ರುವರಿ ೭.

೨೮೯. ಮರಿಯಪ್ಪ ಭಟ್ಟ, ಎಂ., (ಸಂ), *ವ್ಯವಹಾರ ಗಣಿತ,* ೧-೨೮.

೨೯೦. ಉಮಾಪತಿ (ಸಂ), *ಬಸವಣ್ಣನವರ ಹೆಚ್ಚಿನ ವಚನ,* ಪ್ರಕ, ಸಂ. ೫೦, ಸಂ. ೨, ಪು. ೪೭.

೨೯೧. ಮಹೀಶವಾಡಿ, ಬಿ. ಬಿ., *ಧರ್ಮಾಮೃತ,* ೧೦-೫.

೨೯೨. ಅದೇ, ೨-೧೭; ೯-೧೯೩.

೨೯೩. ಅದೇ, ೨-೭೧.

೨೯೪. ಅದೇ, ೬-೧೫೬, ೧೨-೨೪, ೧೧-೪೨.

೨೯೫. ಎ.ಕ., ಸಂಪುಟ-III, in ೧೨೯, ಕ್ರಿ.ಶ. ೧೧೩೬.

೨೯೬. ಬಿ. ಕೆ. ಆಯ್. ೧೭೩, ಕ್ರಿ.ಶ. ೧೧೨೪.

೨೯೭. ದೇವರಕೊಂಡಾರೆಡ್ಡಿ (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೩,* ನಂ. ೩೮, ಕುಕನೂರು, ಕ್ರಿ.ಶ. ೧೧೩೨, ಮಾರ್ಚ್ ೩.

೨೯೮. ಉಲ್ಲೇಖ, ಕೊಪ್ಪಾ ಎಸ್., *ತರ್ದವಾಡಿ ನಾಡು: ಒಂದು ಅಧ್ಯಯನ,* ಅಡಿಟಿಪ್ಪಣಿ, ೩೯೧, ೩೯೨, ಪು. ೨೫೨.

೩೯೯. ಅನಂತರಂಗಾಚಾರ್ಯ, ಎನ್. (ಸಂ), *"ಸೂಕ್ತಿಸುಧಾರ್ಣವ",* ಮಂತ್ರವರ್ಣನಂ-೧೩, ಪು. ೩೫೭.

೩೦೦. Gurujachar. S. *Some Aspects of Economic and Social Life in Karnatak*, P. 143.

೩೦೧. ದೇವರಕೊಂಡಾರೆಡ್ಡಿ (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೭,* ನಂ. ೬೭, ಕಲ್ಲೂರು, ಕ್ರಿ.ಶ. ೧೧೩೪, ನವ್ಹೆಂಬರ್, ೨೮.

೩೦೨. Ghatapandi S. G., *Taxation in Ancient and Medival Karnataka,* (Unpublished Thesis, K.U.D., P. 74)

೩೦೩. ಶ್ರೀನಿವಾಸ ರಿತ್ತಿ (ಸಂ), *ಪ್ರಾಚೀನ ಕರ್ನಾಟಕದ ಆಡಳಿತ ಪರಿಭಾಷಾಕೋಶ,* ಪು. ೪೨.

೩೦೪. ಕಲಬುರ್ಗಿ ಎಂ. ಎಂ. (ಸಂ), *ಮಾನಸೋಲ್ಲಾಸ,* ಪು. ೫೮.

೩೦೫. ಎಮ್. ಎ. ಆರ್. (೧೯೩೨) ಪು. ೧೭೧, ಕ್ರಿ.ಶ. ೧೧೨೪.

೩೦೬. ಎ.ಕ., ಸಂಪುಟ-IV, ಎನ್.ಜಿ.,-೧೦೩, ಕ್ರಿ.ಶ. ೧೧೨೦.

೩೦೭. ಬಿ.ನಂ. ೯೯/೭೭-೭೮, ೧೧೨೧-೧೧೩೯, ಕೊಂಚಗೆರೆ.

೩೦೮. ಗೋಗಿ ಹನುಮಾಕ್ಷಿ (ಸಂ), *ಕಲಬುರ್ಗಿ ಜಿಲ್ಲೆಯ ಶಾಸನಗಳು*, ನಂ. ೧೭, ಸೇಡಂ, ಕ್ರಿ.ಶ. ೧೧೩೭.

೩೦೯. ಕಲಬುರ್ಗಿ ಎಂ. ಎಂ. (ಸಂ), *ಮಾನಸೋಲ್ಲಾಸ*, ಪು.೧೬೩.

೩೧೦. ಚಿದಾನಂದ ಮೂರ್ತಿ, ಎಂ.ಎಂ., *ಕನ್ನಡ ಶಾಸನ ಸಾಂಸ್ಕೃತಿಕ ಅಧ್ಯಯನ*, ಪು. ೩೯೮.

೩೧೧. ಕೊಪ್ಪಾ ಎಸ್. ಕೆ., *ತರ್ದವಾಡಿ ನಾಡು : ಒಂದು ಅಧ್ಯಯನ*, ಪು. ೨೨೯.

೩೧೨. ಗೋಗಿ ಹನುಮಾಕ್ಷಿ.(ಸಂ), *ಸುರಪುರ ತಾಲೂಕಿನ ಶಾಸನಗಳು*, ನಂ. ೬೭, ಮುದನೂರು, ಕ್ರಿ.ಶ. ೧೧೨೯, ಡಿಸೆಂಬರ್ ೨೪.

೩೧೩. ಹಿರೇಮಠ ಚನ್ನಬಸಯ್ಯ, *ಕುರಗೋಡು ಸಿಂದರು : ಒಂದು ಅಧ್ಯಯನ*, ಪು. ೨೩೧.

೩೧೪. ಎಸ್.ಆಯ್.ಆಯ್., ಸಂಪುಟ-XVIII, ನಂ. ೧೩೪, ಮುದೇನೂರು, ಕ್ರಿ.ಶ. ೧೧೨೮, ಜುಲೈ ೨೭.

೩೧೫. ದೇವರಕೊಂಡಾರೆಡ್ಡಿ (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೨*, ನಂ. ೧೬, ಕಲ್ಲೂರು, ಕ್ರಿ.ಶ. ೧೧೩೨, ಡಿಸೆಂಬರ್ ೨೪.

೩೧೬. ಉಪಾಧ್ಯ, ಜಿ.ಎನ್. (ಸಂ.) *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೬*, ನಂ.೧೫, ನಾರಂಗವಾಡಿ, ಕ್ರಿ.ಶ. ೧೧೨೯, ಅಕ್ಟೋಬರ್ ೨೯.

೩೧೭. ದೇವರಕೊಂಡಾರೆಡ್ಡಿ (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೨*, ನಂ.೨೬, ಮಾದಿನೂರು, ಕ್ರಿ.ಶ. ೧೧೩೬, ಡಿಸೆಂಬರ್ ೧೦.

೩೧೮. ಗಣೇಶ, ಕೆ.ಆರ್. (ಸಂ.), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೫*, ನಂ. ೫೦೯, ರಾಚೂರು, ಕ್ರಿ.ಶ. ೧೧೩೬.

೩೧೯. ದೇವರಕೊಂಡಾರೆಡ್ಡಿ (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೩*, ನಂ. ೩೮, ಕುಕನೂರು, ಕ್ರಿ.ಶ. ೧೧೩೨, ಮಾರ್ಚ್ ೩.

೩೨೦. ಗಣೇಶ, ಕೆ.ಆರ್. (ಸಂ.), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೫*, ನಂ. ೫೦೩, ಗಂಗಾಪುರಂ, ಕ್ರಿ.ಶ. ೧೧೩೪, ಜೂನ್ ೮.

೩೨೧. ಗೋಗಿ ಹನುಮಾಕ್ಷಿ. (ಸಂ), *ಕಲಬುರ್ಗಿ ಜಿಲ್ಲೆಯ ಶಾಸನಗಳು*, ನಂ. ೩, ನಿಂಬರಗಿ, ಕ್ರಿ.ಶ. ೧೧೩೪.

೩೨೨. ಎಸ್.ಆಯ್.ಆಯ್., ಸಂಪುಟ-XX, ನಂ. ೧೦೭, ಲಕ್ಷ್ಮೇಶ್ವರ, ಕ್ರಿ.ಶ. ೧೧೩೮, ನವ್ಹೆಂಬರ್ ೧೮.

೩೨೩. ದೇವರಕೊಂಡಾರೆಡ್ಡಿ (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೧*, ನಂ. ೩೪, ರಾಗಿಮುಸಲವಾಡ, ಕ್ರಿ.ಶ. ೧೧೨೭, ಜುಲೈ ೧೦.

೩೨೪. ಹಿರೇಮಠ, ಬಿ. ಆರ್, *ಶಾಸನಗಳಲ್ಲಿ ಕರ್ನಾಟಕ ವರ್ತಕರು,* ಪು. ೧೨೩.

೩೨೫. ಅದೇ,, ಪು. ೧೨೩-೧೨೪.

೩೨೬. ಗೋಗಿ ಹನುಮಾಕ್ಷಿ. (ಸಂ), *ಸುರಪುರ ತಾಲೂಕಿನ ಶಾಸನಗಳು,* ನಂ. ೨೨, ಕಕ್ಕೇರಿ, ಕ್ರಿ.ಶ. ೧೧೨೭, ಮಾರ್ಚ್, ೨೭.

೩೨೭. ಚಿದಾನಂದ ಮೂರ್ತಿ, ಎಂ., *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ,* ಪು. ೪೦೧.

೩೨೮. ಕೆ.ಆಯ್., ಸಂಪುಟ-VI, ನಂ. ೨೫, ನಾಗವಂದ, ಕ್ರಿ.ಶ. ೧೧೨೮, ನವೆಂಬರ್ ೮.

೩೨೯. ಗೋಗಿ ಹನುಮಾಕ್ಷಿ.(ಸಂ), *ಸುರಪುರ ತಾಲೂಕಿನ ಶಾಸನಗಳು,* ನಂ. ೬೭, ಮುದನೂರು, ಕ್ರಿ.ಶ. ೧೧೨೯, ಡಿಸೆಂಬರ್ ೨೪.

೩೩೦. ಚಿದಾನಂದಮೂರ್ತಿ ಎಂ., *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ,* ಪು. ೪೦೧.

೩೩೧. ಕೊಪ್ಪಾ ಎಸ್.ಕೆ., *ತರ್ದವಾಡಿ ನಾಡು : ಒಂದು ಅಧ್ಯಯನ,* ಪು. ೨೩೩.

೩೩೨. ಆಯ್.ಎನ್. ಕೆ. ಆ್ಯಂಡ್ ಕೆ, ನಂ. ೬, ರಾಯಭಾಗ, ಕ್ರಿ.ಶ. ೧೧೨೭.

೩೩೩. ಎಸ್.ಆಯ್.ಆಯ್., ಸಂಪುಟ- XX, ನಂ. ೧೩೪, ಮುದೇನೂರು, ಕ್ರಿ.ಶ. ೧೧೨೮, ಮಾರ್ಚ್ ೨೩.

೩೩೪. ಅದೇ, ನಂ. ೧೦೧, ಕಾಮಧೇನು, ಕ್ರಿ.ಶ. ೧೧೨೯, ಮಾರ್ಚ್ ೨೩.

೩೩೫. ದೇವರಕೊಂಡಾರೆಡ್ಡಿ (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೩,* ನಂ. ೩೮, ಕುಕನೂರು, ಕ್ರಿ.ಶ. ೧೧೩೨, ಮಾರ್ಚ್ ೩.

೩೩೬. ಗಣೇಶ, ಕೆ. ಆರ್. (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೫,* ನಂ. ೨೭೬, ಕರಕಾಂತಪುರ, ಕ್ರಿ.ಶ. ೧೧೩೨, ಮಾರ್ಚ್ ೨೩.

ಅಧ್ಯಾಯ - ಆರು Chapter - 6

ಸಾಮಾಜಿಕ ಪರಿಸ್ಥಿತಿ

ಶಾಸನಗಳು ಸಂಕೀರ್ಣ ಸಮಾಜದ ಎಲ್ಲ ಸಂಗತಿಗಳನ್ನು ತಿಳಿಸದಿದ್ದರೂ, ಹಲವು ವಿಷಯಗಳನ್ನು ಸಾಂದರ್ಭಿಕವಾಗಿ ಪ್ರಸ್ತಾಪಿಸುತ್ತವೆ. ಮೂರನೆಯ ಸೋಮೇಶ್ವರನ ಕಾಲದ ಸಮಾಜದ ಕೆಲವು ಪ್ರಮುಖ ವ್ಯವಸ್ಥೆಗಳನ್ನು ಆ ಕಾಲದ ಶಾಸನಗಳು ಹಾಗೂ ಸಮಕಾಲೀನ ಸಾಹಿತ್ಯ ಕೃತಿಗಳ ಆಧಾರದಿಂದ ಅವಲೋಕಿಸಬಹುದಾಗಿದೆ.

ಭಾರತೀಯ ಸಮಾಜದಲ್ಲಿ ವರ್ಗ-ವರ್ಣ-ಜಾತಿಗಳು (ವರ್ಣಾಶ್ರಮ ಪದ್ಧತಿ) ಬಹುಪ್ರಾಚೀನ ಕಾಲದಿಂದಲೂ ಮಹತ್ತರ ಪಾತ್ರ ನಿರ್ವಹಿಸುತ್ತ ಬಂದಿದೆ. ಸಮಾಜವನ್ನು ಚತುರ್ವರ್ಣಗಳಲ್ಲಿ ವಿಭಜಿಸುವುದನ್ನು ಉಲ್ಲೇಖಿಸುವ ಪ್ರಾಚೀನ ದಾಖಲೆ ಎಂದರೆ ಋಗ್ವೇದದ ಪುರುಷ ಸೂಕ್ತ. ಇದನ್ನು ಪ್ರಕ್ಷಿಪ್ತವೆಂದು ಹೇಳಲಾಗುತ್ತದೆ. ವೇದಗಳ ಕಾಲದಲ್ಲಿ ವರ್ಣವ್ಯವಸ್ಥೆಯು ಬಿಗಿಯಾದದ್ದಾಗಿರಲಿಲ್ಲ. ಶೂದ್ರರನ್ನುಳಿದು ಯಾರು ಯಾವ ವರ್ಗವನ್ನಾದರೂ ಸೇರುವ ಸೌಲಭ್ಯವಿತ್ತು. ಈ ವರ್ಗವಿಭಜನೆಯ ವೃತ್ತಿಯನ್ನು ಅವಲಂಬಿಸಿ ಮಾಡಲಾಗುತ್ತಿತ್ತು. ಮುಂದೆ ಬ್ರಾಹ್ಮಣರ ಕಾಲದಲ್ಲಿ ವರ್ಗವ್ಯವಸ್ಥೆಯನ್ನು ವರ್ಣವ್ಯವಸ್ಥೆಯೆಂದು ಕರೆದು ಅದನ್ನು ಬಿಗಿಗೊಳಿಸಲಾಯಿತು ಮತ್ತು ವ್ಯಕ್ತಿಯ ವರ್ಣವು ವ್ಯಕ್ತಿತ್ವವಾಗಿರದೆ ಅವನ ಹುಟ್ಟು ನಿರ್ಣಯಿಸತೊಡಗಿತು.[1]

ವರ್ಣ ಸಾಂಕರ್ಯದಿಂದ ಬೇರೆ ಬೇರೆ ಜಾತಿಗಳು ಹುಟ್ಟಿದವೆಂದು ಮನು ಅಭಿಪ್ರಾಯ ಪಡುತ್ತಾನೆ. ಆದರೆ ಈ ಜಾತಿ ಪದ್ಧತಿಯು ಹೇಗೆ ಬಳಕೆಗೆ ಬಂದಿತೆಂಬುದರ ಬಗೆಗೆ ಅನೇಕ ಭಿನ್ನಾಭಿಪ್ರಾಯಗಳಿವೆ. ಕಲ್ಯಾಣ ಚಾಲುಕ್ಯರ ಕಾಲಕ್ಕಾಗಲೇ ಜಾತಿಗಳು ತಮ್ಮದೇ ಆದ ಪ್ರಾಮುಖ್ಯತೆಯನ್ನು ಪಡೆದುಕೊಂಡು ಸಮಾಜದಲ್ಲಿ ಆಳವಾದ ಬೇರುಬಿಟ್ಟಿದ್ದವು. ಅಂದು ಪ್ರಚಲಿತದಲ್ಲಿದ್ದ ಜಾತಿಗಳೆಂದರೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ.

ಬ್ರಾಹ್ಮಣ

ಇವರು ಚಾತುರ್ವರ್ಣದಲ್ಲಿ ಉನ್ನತ ಸ್ಥಾನಮಾನಗಳನ್ನು ಹೊಂದಿ ಸಮಾಜದಲ್ಲಿ ಅತ್ಯಂತ ಪ್ರತಿಷ್ಠಿತರೆನಿಸಿದ್ದರು. ರಾಜಕೀಯವಾಗಿ, ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಮುಂದುವರಿದವರಾಗಿದ್ದರು. ಧಾರ್ಮಿಕ ಕ್ಷೇತ್ರದಲ್ಲೂ ಗೌರವಾನ್ವಿತರಾಗಿದ್ದರು. ಆಸನ ವ್ಯಸನಾದಿಗಳ ಚಿಂತೆಯಿಲ್ಲದೆ ತಮ್ಮ ವಿದ್ಯಾಭ್ಯಾಸವನ್ನು ಮುಂದುವರೆಸಲೆಂದು ರಾಜ, ಸಾಮಂತರು, ಮಾಡಲೀಕ ಅರಸರು, ಊರ ಪ್ರಮುಖರು ಮುಂತಾದವರು ನೂರಾರು ದತ್ತಿಗಳನ್ನು ಬ್ರಾಹ್ಮಣರಿಗೆ ಬಿಟ್ಟುಕೊಟ್ಟುದುದನ್ನು ಶಾಸನಗಳಲ್ಲಿ ಕಾಣುತ್ತೇವೆ. ಅವುಗಳನ್ನು ಬ್ರಹ್ಮದೇಯಗಳೆಂದು[2] ಹೇಳುತ್ತಾರೆ ಮತ್ತು ಗ್ರಾಮಗಳನ್ನು ಅಗ್ರಹಾರಗಳನ್ನಾಗಿ ಪರಿವರ್ತಿಸಿ ಬ್ರಾಹ್ಮಣರಿಗೆ ದಾನ ಮಾಡುತ್ತಿದ್ದರು.

ಬ್ರಾಹ್ಮಣರು ರಾಜಕೀಯ ಕ್ಷೇತ್ರದಲ್ಲಿಯೂ ಬಹುಮುಖ್ಯವಾದ ಪಾತ್ರವನ್ನು ನಿರ್ವಹಿಸುತ್ತಿದ್ದರು. ಮಾಂಡಲಿಕರು, ಸಾಮಂತರು ಹಲವು ಬ್ರಾಹ್ಮಣರನ್ನು ಮಂತ್ರಿಗಳನ್ನಾಗಿ ನೇಮಿಸಿಕೊಂಡಿದ್ದರು. ಸಿಂದವಂಶದ ಕಣ್ಣರಸನ ಮಗ ಬಾಚಿರಾಜನು ತನ್ನ ಪ್ರಧಾನನಾಗಿ ಬೆನಿಚಿಮಯ್ಯ ಎಂಬ ಬ್ರಾಹ್ಮಣನನ್ನು ನೇಮಿಸಿಕೊಂಡಿದ್ದನು.[೩] ವಿಪ್ರಕುಳ ತಿಳಕನಾಗಿದ್ದ ಏಚಣ ಎಂಬ ದಂಡನಾಯಕನನ್ನು 'ಹೊಯ್ಸಳ ರಾಜ್ಯ ಸಮುದ್ಧರಣ'ನೆಂದು ಒಂದು ಶಾಸನದಲ್ಲಿ ಹೇಳಿದೆ.[೪] ಮಾಣಿಕಭಟ್ಟನೆಂಬ ಬ್ರಾಹ್ಮಣನು ಮಾಣಿಕ್ಯವನ್ನು ಪರೀಕ್ಷಿಸುವ ಅಧಿಕಾರಿಯಾಗಿದ್ದನು.[೫] ಹೀಗೆ ಬ್ರಾಹ್ಮಣರ ಮೇಧಾಶಕ್ತಿಯನ್ನು, ಶಾಸ್ತ್ರಪರಿಜ್ಞಾನವನ್ನು ಆಡಳಿತದ ಅನುಕೂಲಕ್ಕಾಗಿ, ರಾಜ್ಯದ ಅಭಿವೃದ್ಧಿಗಾಗಿ ಬಳಸಿಕೊಳ್ಳುತ್ತಿದ್ದರೆಂದು ಹೇಳಬಹುದು.

ಬ್ರಾಹ್ಮಣರನ್ನು ಷಟ್ಕರ್ಮನಿರತರು[೬] ಎಂದು ಶಾಸನಗಳು ಬಣ್ಣಿಸುತ್ತವೆ. ಯಜನ, ಯಾಜನ, ಅಧ್ಯಯನ, ಅಧ್ಯಾಪನ, ದಾನ, ಪ್ರತಿಗ್ರಹ ಇವೆ ಆ ಷಟ್ಕರ್ಮಗಳು. ಯಮನಿಯಮ ಸ್ವಾಧ್ಯಾಯ, ಧ್ಯಾನ, ಧಾರುಣ, ಮೋನಾನುಷ್ಠಾನ, ಜಪ, ಸಮಾಧಿಶೀಲ ಸಂಪನ್ನರು,[೭] ಚತುರ್ವ್ವೇದ ಪಾರಂಗತರು,[೮] ಸದಾಚಾರ ನಿರತರು,[೯] ಧರ್ಮಶಾಸ್ತ್ರ ಪ್ರವೀಣರು[೧೦] ಎಂದು ಅವರ ಪಾಂಡಿತ್ಯವನ್ನು ಶಾಸನಗಳು ವರ್ಣಿಸಿವೆ. ಅಲ್ಲದೆ ಶಾಸನಗಳಲ್ಲಿ ಕಂಡುಬರುವ ಅಶ್ವಮೇಧ,[೧೧] ಚಂಡಿಕ ಹೋಮ,[೧೨] ಅಗ್ನಿಷ್ಟೋಮಾದ್ಯನೇಕ ಯಜ್ಞ[೧೩]ಗಳನ್ನು ಮಾಡುತ್ತಿದ್ದರೆಂದು ಹೇಳಬಹುದು. ಮಾದಿನೂರು[೧೪] ಶಾಸನದಲ್ಲಿ ಬರುವ 'ಯಜ್ಞ ಕ್ರಿಯಾ ನಿರತರುಂ' ಎಂಬ ಉಲ್ಲೇಖ ಈ ಮೇಲಿನ ಮಾತನ್ನು ಸ್ಪಷ್ಟಪಡಿಸುತ್ತದೆ. ಮಾನಸೋಲ್ಲಾಸದಲ್ಲಿಯೂ ಕೂಡ ಇಹದ ಶ್ರೇಯಸ್ಸಿಗಾಗಿ ನೃಯಜ್ಞ, ಬ್ರಹ್ಮಯಜ್ಞ ಹಾಗೂ ದೇವಯಜ್ಞಗಳನ್ನು, ಪರರ ಶ್ರೇಯಸ್ಸಿಗಾಗಿ ಭೂತಯಜ್ಞ ಮತ್ತು ಪಿತೃಯಜ್ಞಗಳನ್ನು ಮಾಡಬೇಕು, ಜೋತಿಷ್ಟೋಮಾದಿಯಜ್ಞಗಳನ್ನು, ಅಶ್ವಮೇಧಾದಿಯಜ್ಞಗಳನ್ನು ಶರತ್ಕಾಲ, ವಸಂತಕಾಲದಲ್ಲಿ ವಿಧಿಪೂರ್ವಕವಾಗಿ ಆಚರಿಸಬೇಕು. ಆಯತಹೋಮ, ಲಕ್ಷ ಹೋಮ, ಕೋಟಿ ಹೋಮ ಮತ್ತು ಶಾಂತಿಹೋಮಗಳನ್ನು ಶುಭವಾಗಲಿ ಎಂಬ ಆಕಾಂಕ್ಷೆಯಿಂದ ಬ್ರಾಹ್ಮಣೋತ್ತಮರನ್ನು ಕರೆಸಿ ಮಾಡಿಸಬೇಕು[೧೫] ಎಂದು ಹೇಳಿದೆ.

ಮೂರನೆಯ ಸೋಮೇಶ್ವರನ ಶಾಸನಗಳು ರಿತಿಜ್ವ ಬ್ರಾಹ್ಮಣರು,[೧೬] ಮಾನಸ ಬ್ರಾಹ್ಮಣರನ್ನು,[೧೭] ಹೆಸರಿಸುತ್ತವೆ ಮತ್ತು ಬ್ರಾಹ್ಮಣರ ವಿವಿಧ ಗೋತ್ರಗಳಾದ ಕೌಂಡಿಲ್ಯ,[೧೮] ಆತ್ರೇಯ,[೧೯] ವಿಶ್ವಾಮಿತ್ರ,[೨೦] ಕಾಶ್ಯಪ,[೨೧] ಅಗಸ್ತ್ಯ,[೨೨] ವಶಿಷ್ಠ[೨೩] ಗೋತ್ರಗಳನ್ನು ಉಲ್ಲೇಖಿಸಿವೆ.

ಕ್ಷತ್ರಿಯರು

ಚಾತುರ್ವರ್ಣದಲ್ಲಿ ದ್ವಿತೀಯ ಸ್ಥಾನದಲ್ಲಿರುವ ಇವರು ಆಡಳಿತ ವರ್ಗಕ್ಕೆ ಸೇರಿದವರಾಗಿದ್ದು, ಸಮಾಜದಲ್ಲಿ ಉನ್ನತ ಸ್ಥಾನದಲ್ಲಿದ್ದರು. (ವಿವರಣೆಗಳಿಗೆ ನಾಲ್ಕನೇ ಅಧ್ಯಾಯ ನೋಡಿ) ನಯಸೇನ ಇವರನ್ನು ಕುರಿತು,

''...ಸಮಂತೊಸೆದೂರಂ ಗುಣಮಂಮಹಾ ಪುರುಷ ರೊಳ್ಪಂ ಶೌಚಿಕೇಳಂತು ರಕ್ಷಿಸುವಂ ಮೋಹದಿನಂತೆ ರಕ್ಷಿಪುದು ಧಾತ್ರಿಚಕ್ರಮಂ ಕ್ಷತ್ರಿಯಂ'' ಎಂದು ಹೇಳಿದ್ದಾನೆ.[೨೪] ಇದರಿಂದ ಕ್ಷತ್ರಿಯರು ಮಹಾಪುರುಷರಲ್ಲಿಯೇ ಶುಚಿತ್ವ ಹೊಂದಿದ್ದು, ಭೂಮಂಡಲವನ್ನು ರಕ್ಷಿಸುವ ಕಾರ್ಯದಲ್ಲಿ ನಿರತರಾದವರೆಂದು ತಿಳಿಯುತ್ತದೆ.

ವೈಶ್ಯ

ವೈಶ್ಯರು ಚಾತುರ್ವರ್ಣ ವ್ಯವಸ್ಥೆಯಲ್ಲಿ ಮೂರನೆಯವರು. ಮುಖ್ಯವಾಗಿ ಇವರು ವ್ಯಾಪಾರಸ್ಥರು. ಇವರಲ್ಲಿ ಮುಮ್ಮುರಿದಂಡ, ಗವರೆ, ಗಾತ್ರಿಗ, ಬೀರವಣಿಗ, ಸೆಟ್ಟಿ, ಸೆಟ್ಟಿಗುತ್ತ ಮುಂತಾದ ಪಂಗಡಗಳಿದ್ದವು. ಇವರನ್ನು ಕುರಿತು ಆರ್ಥಿಕ ವ್ಯವಸ್ಥೆಯ ಅಧ್ಯಾಯದಲ್ಲಿ ವಿವರಿಸಲಾಗಿದೆ.

ಶೂದ್ರ

ಚಾತುರ್ವರ್ಣ ವ್ಯವಸ್ಥೆಯಲ್ಲಿ ಕೊನೆಯ ಸ್ಥಾನದಲ್ಲಿರುವವರು ಶೂದ್ರರು. ಇವರು ಬಹುಶಃ ಮೇಲಿನ ಮೂರು ವರ್ಣ(ವರ್ಗ)ದವರ ಸೇವೆಯನ್ನು ಮಾಡಿಕೊಂಡು ಹೋಗುತ್ತಿದ್ದರಲ್ಲದೆ, ಬೇಸಾಯದ ಕೆಲಸವನ್ನು (ಜೀವನವನ್ನು) ಮಾಡಿಕೊಂಡು ಕಷ್ಟಕರ ಜೀವನವನ್ನು ಸಾಗಿಸುತ್ತಿದ್ದರು. ಸಾಮಾಜಿಕವಾಗಿ, ಆರ್ಥಿಕವಾಗಿ ಬಹಳ ನಿಷ್ಕೃಷ್ಟಾವಸ್ಥೆಯಲ್ಲಿರುವ ಇವರು ಇತರರ ಅಲಕ್ಷ ಮತ್ತು ಅವಹೇಳನೆಗಳಿಗೆ ಗುರಿಯಾಗಿ ಕೀಳು ಜೀವನವನ್ನು ನಡೆಸುತ್ತಿದ್ದರೆನ್ನಬಹುದು. ಇಂಥ ಹೊಲೆಯರ ಶೀಲ, ಸ್ವಭಾವ ಅವರು ಮಾಡುತ್ತಿದ್ದ ಕಾರ್ಯ ಮತ್ತು ಸಮಾಜದಲ್ಲಿ ಅವರಿಗಿದ್ದ ಸ್ಥಿತಿಯನ್ನು ತಿಳಿಸಲು ಶಾಸನಗಳು ಮೌನವಾಗಿದ್ದರೂ ನಯಸೇನನ ಹೇಳಿಕೆಗಳು ಇಲ್ಲಿ ನೆರವಾಗುತ್ತವೆ.

ನಯಸೇನನ 'ಧರ್ಮಾಮೃತ'ದಲ್ಲಿ 'ಪೊಲೆಯನಂತೆ ವರ್ಣಕ್ಕೆ ಸಲ್ಲದು' ಎಂದಿದೆ.[೨೫] ಇದರಿಂದ ಹೊಲೆಯರು ವರ್ಣ ವ್ಯವಸ್ಥೆಯ ಹೊರಗಿದ್ದರೆಂಬುದು ಸ್ಪಷ್ಟವಾಗುತ್ತದೆ. ಈ ಕಾರಣಕ್ಕಾಗಿಯೇ ಇವರನ್ನು 'ಪಂಚಮರು'[೨೬] 'ಅಂತ್ಯಜರು' ಎಂದೂ ಕರೆದಂತೆ ಕಾಣುತ್ತದೆ. ಅವರು ಧನಕ್ಕೊಡೆಯರಾಗಿದ್ದರೂ ಮೇಲ್ಜಾತಿಯವರಿಗೆ ಸಿಗುವ ಗೌರವ ಅವರಿಗೆ ಸಿಗುತ್ತಿರಲಿಲ್ಲ.[೨೭] ಹೊಲೆಯರು ವಾಸಿಸುವ ಓಣಿ(ಕೇರಿ)ಗಳನ್ನು ನಯಸೇನ 'ಪೊಲಗೇರಿ' ಎಂದು ಕರೆದಿದ್ದಾನೆ.[೨೮] ಅವರ ಮನೆಗಳು ಅಶುಚಿಯಾಗಿರುತ್ತಿದ್ದವು.[೨೯] ಹೊಲಗೇರಿಗಳು ಮೂಳೆಮಯವಾಗಿರುತ್ತಿದ್ದವು.[೩೦] ಅವರ ಬಾಯಿಯಿಂದ ಹೆಚ್ಚಾಗಿ 'ಕೊಯ್' ಎಂಬ ಶಬ್ದ ಹೆಚ್ಚಾಗಿ ಬರುತ್ತಿತ್ತು.[೩೧] ಏಕೆಂದರೆ ಅವರ ಪ್ರಮುಖ ಆಹಾರ ಮಾಂಸವೇ ಆಗಿತ್ತು.[೩೨] ''ಸಂಸಾರದ ಫಲ ಯಾವುದೋ ಬಿಸುಟು ಕಳ್ಳಮಂ ಮಾಸಮಂ'' ಎಂಬುದರಿಂದ ಮಾಂಸದೊಂದಿಗೆ ಸೆರೆಗೂ ಆದ್ಯತೆ ಕೊಟ್ಟಿದ್ದರೆಂದು ತಿಳಿದುಬರುತ್ತದೆ. ಇವೆರಡನ್ನು ಬಿಟ್ಟರೆ ಸಂಸಾರದಲ್ಲಿ ಸ್ವಾರಸ್ಯವಿಲ್ಲವೆಂದು ಅವರು ಭಾವಿಸಿದ್ದರು.[೩೩] ಹೀಗಾಗಿ ಊರನ್ನು ಬಿಟ್ಟು ಹೊಲಗೇರಿಯಲ್ಲಿ ಮಲಗುವವನಿಗೆ ಬೆಲೆ ಇರಲಿಲ್ಲ.[೩೪] ಅಲ್ಲದೆ ಹೊಲೆಯರ ಮಕ್ಕಳಿಗೆ ಮೇಲ್ವರ್ಗದವರ ಮಕ್ಕಳಂತೆ ರಕ್ಷಣೆ ಮನ್ನಣೆಗಳಿರಲಿಲ್ಲ.[೩೫]

ಹೊಲೆಯರು ಮುದ್ದಳೆ,[೩೬] ಕಹಳೆ, ಪರೆ (ಒಂದು ಚರ್ಮವಾದ್ಯ)ಗಳನ್ನು ನುಡಿಸುತ್ತಿದ್ದರು.[೩೭] ಮದುವೆ, ಶವಸಂಸ್ಕಾರ, ದೇವರ ಉತ್ಸವ ಮೊದಲಾದ ಸಂದರ್ಭದಲ್ಲಿ ಬಹುಶಃ ಈ ವಾದ್ಯಗಳನ್ನು ನುಡಿಸುತ್ತಿದ್ದಿರಬಹುದು. ಕುಕನೂರು ಶಾಸನ[೩೮]ದಲ್ಲಿ ಕಂಡುಬರುವ ಹಲಗೆಯರ ಲಕ್ಕರಸನೂ ಕೂಡ ಇದೇ ಜಾತಿಯವನಾಗಿರಬಹುದು. ಹೊಲೆಯರು ನೇಯ್ಗೆ ಕೆಲಸವನ್ನು ಮಾಡುತ್ತಿದ್ದರು.[೩೯] ಇವರ ಆರ್ಥಿಕ ಸ್ಥಿತಿ ಉತ್ತಮವಾಗಿರಲಿಲ್ಲ. ಆದುದರಿಂದ ಬಂಗಾರ ಸಿಕ್ಕರೆ ಆಗುವ ಆನಂದಕ್ಕೆ ಪಾರವೇ ಇರಲಿಲ್ಲ.[೪೦] ಹಿತ್ತಾಳೆಯ ಒಡವೆಗಳನ್ನೇ ಬಂಗಾರವೆಂದು ಭಾವಿಸಿ ಧರಿಸುತ್ತಿದ್ದರು.[೪೧] ಸತ್ತ ದನಗಳನ್ನು ಹೊತ್ತು ತಂದು ಕೃಷಿಕರಿಗೆ ಬೇಕಾಗುವ ತೊಗಲಿನ ಮಿಣಿ ಮೊದಲಾದ ವಸ್ತುಗಳನ್ನು ಮಾಡಿಕೊಡುತ್ತಿದ್ದರು.[೪೨] ಉಚ್ಚಜಾತಿಯ ಜನ ಮಿತ್ರರಾಗಿದ್ದರೂ ಕೆಟ್ಟದ್ದನ್ನು ಹೊಲೆಯರಿಗೆ ಹೇಳಬಾರದೆಂಬುದು ಅವರ ಅಭಿಪ್ರಾಯವಾಗಿತ್ತು.[೪೩] ಹೀಗೆ ಹೊಲೆಯರನ್ನು ಕುರಿತು ನಯಸೇನ ಧರ್ಮಾಮೃತದಲ್ಲಿ ಹಲವು ಸಂಗತಿಗಳನ್ನು ಹೇಳಿದ್ದಾನೆ.[೪೪]

ಮಾದಿಗರು

ಅಸ್ಪೃಶ್ಯ ಜಾತಿಗಳಲ್ಲಿ ಹೊಲೆಯರ ನಂತರದ ಸ್ಥಾನ ಮಾದಿಗರದ್ದು. ಇವರಿಗೆ ''ಜಾಂಬವರೆಂದೂ ಪದ್ಮಜಾತಿಯವರೆಂದೂ'' ಹೆಸರಿವೆ.[೪೫] ಮಾದಿಗರ ಮುಖ್ಯ ಕಸುಬು ಚರ್ಮ ಹದಮಾಡುವುದು, ಮೆಟ್ಟು, ಬಾರು ಮೊದಲಾದವುಗಳನ್ನು ತಯಾರಿಸುವುದಾಗಿತ್ತು. ಇದನ್ನೇ ನಯಸೇನ ''ಮಾದಿಗನಂತೆ ಮೆಟ್ಟೆನ್ನುತ್ತಂ'', ''ಮಾದೆಗನಂತೆ ಬಾರೆತ್ತುವರ್'' ಎಂದು ಹೇಳಿದ್ದಾನೆ.[೪೬] ಅಲ್ಲದೆ ಸತ್ತ ದನಗಳನ್ನು ಎಳೆತಂದು ಊರ ಹೊರಗೆ ಹಾಕುವುದು, ಬಿಟ್ಟಿ ಕೆಲಸ ಮಾಡುವುದು ಇವೇ ಮೊದಲಾದ ಕೆಲಸಗಳನ್ನು ಮಾಡುತ್ತಿದ್ದರು.[೪೭] ಪ್ರದೇಶದಿಂದ ಪ್ರದೇಶಕ್ಕೆ ಈ ಕೆಲಸಗಳಲ್ಲಿ ಭಿನ್ನತೆಯನ್ನು ಕಾಣಬಹುದು. ಆದರೆ ಹಣಪಡೆದು ಕೂಸುಗಳನ್ನು ಕೊಂದು ಬರುವ ಕೆಲಸವನ್ನು ಅವರು ಒಮ್ಮೊಮ್ಮೆ ಮಾಡುತ್ತಿದ್ದುದನ್ನು ನಯಸೇನ ಉಲ್ಲೇಖಿಸಿದ್ದಾನೆ.[೪೮]

ಇತರ ಜಾತಿಗಳು :

ಮೂರನೆಯ ಸೋಮೇಶ್ವರನ ಕಾಲದಲ್ಲಿ ಇತರ ವೃತ್ತಿಗಳನ್ನು ಮಾಡುವ ಅನೇಕ ಜಾತಿಗಳಿದ್ದವು. ಅವುಗಳಲ್ಲಿ ಮುಖ್ಯವಾದ ಕಮ್ಮಾರ, ಕುಂಬಾರ, ಅಕ್ಕಸಾಲಿ, ಕಂಚುಗಾರ, ತಳವಾರ, ಬಳೆಗಾರ ಮೊದಲಾದವುಗಳನ್ನು ಇಲ್ಲಿ ಪರಿಚಯಿಸಲಾಗಿದೆ.

ಕಮ್ಮಾರ : ಮದನಭಾವಿ ಶಾಸನ[೪೯]ದಲ್ಲಿ ಕಮ್ಮಾರ-ಮಾಚ ಎಂಬುವವನ ಉಲ್ಲೇಖ ಬಂದಿದೆ. ಅಲ್ಲದೆ ನಯಸೇನನು ''ಕಮ್ಮಾರರಿಲ್ಲದೆ ಖಡ್ಗಾದಿ ಶಸ್ತ್ರಂಗಳಾಗದು'' ಎಂಬ ಮಾತಿನಿಂದ ಅವರ ವೃತ್ತಿ ಖಡ್ಗ ಮೊದಲಾದ ಶಸ್ತ್ರಗಳನ್ನು ತಯಾರಿಸುವುದಾಗಿತ್ತು ಎಂಬುದು ಸ್ಪಷ್ಟವಾಗುತ್ತದೆ.[೫೦] ''ಕರ್ಬುನಂ ಎನಿಸು ಕಾಯ್ದು'', ''ಕಮ್ಮಾರನಂತೆ ಕಾಸಿಬಡೆವರ್''

ಎಂಬ ಮಾತುಗಳಿಂದ ಕೂಡ ಕಬ್ಬಿಣವನ್ನು ಕಾಸಿ ಬಡಿದು ಬೇಕಾದ ಸಾಮಾನುಗಳನ್ನು ಜನರಿಗೆ ಮಾಡಿಕೊಡುತ್ತಿದ್ದರು.[೫೧] ಈ ಕಬ್ಬಿಣವನ್ನು ಕಾಯಿಸಲು 'ತಿದಿ'ಯ ಬಳಕೆಯೂ ಅವರಿಗೆ ಗೊತ್ತಿತ್ತು. ಕಮ್ಮಾರರು ಒಂದೆಡೆ ಕುಳಿತು ಕಬ್ಬಿಣದ ಕೆಲಸವನ್ನು ಮಾಡುವ ಸ್ಥಳಕ್ಕೆ 'ಕಮ್ಮಾರಸಾಲೆ' ಎಂದು ಕರೆಯುತ್ತಿದ್ದರು.[೫೨] ಈಗಲೂ ಹಳ್ಳಿಗಳಲ್ಲಿ ಈ ಹೆಸರು ಬಳಕೆಗೊಳ್ಳುವುದನ್ನು ಕಾಣುತ್ತೇವೆ.

ಕುಂಬಾರ : ಜಿಗುಟಾದ ಜೇಡಿಮಣ್ಣನ್ನು ಗಡಿಗೆ-ಮಡಿಕೆಗಳನ್ನು ಮಾಡಲು ಬಳಸುತ್ತಿದ್ದರು.[೫೩] ಅದನ್ನು ಹದ ಮಾಡಿ ಮಿದಿಯುತ್ತಿದ್ದರು. ಮಣ್ಣನ್ನು ಅಗೆದು ತೋಡಿದ್ದರಿಂದ ದೊಡ್ಡ ದೊಡ್ಡ ಕುಳಿಗಳು ಬಿದ್ದಿರುತ್ತಿದ್ದವು. ನಯಸೇನ ಅಂಥ ಕುಳಿಯಲ್ಲಿ ಅಡಗಿ ಕುಳಿತ 'ಬೋಳು ಮುಂಡೆಯ ಕುಂಬಾರ'ನನ್ನು ಉಲ್ಲೇಖಿಸಿದ್ದಾನೆ.[೫೪] ಮಾನಸೋಲ್ಲಾಸದಲ್ಲಿ[೫೫] ಅರೆ ಶಾಸನ[೫೬]ದಲ್ಲಿ ಕೂಡ ಮಡಿಕೆಯ ಉಲ್ಲೇಖ ಬಂದಿರುವುದರಿಂದ ಕುಂಬಾರರು ಇದ್ದರೆಂದು ಹೇಳಬಹುದು.

ಅಕ್ಕಸಾಲಿಗ : ಧರ್ಮಾಮೃತದಲ್ಲಿ ''ಪೊನ್ನಾಭರಣಂ ಮಾಡುವ ಅಕ್ಕಸಾಲಿಗಂ'' ಎಂಬ ಉಲ್ಲೇಖವಿದೆ.[೫೭] ಇದರಿಂದ ಅಕ್ಕಸಾಲಿಗರು ಬಂಗಾರದಿಂದ ಆಭರಣಗಳನ್ನು ಮಾಡುತ್ತಿದ್ದರು. ಬಂಗಾರ ಪರೀಕ್ಷಿಸುವುದನ್ನು ಅಕ್ಕಸಾಲಿಗರು ಬಲ್ಲವರಾಗಿದ್ದರು.[೫೮]

ಕಂಚುಗಾರ : ಇವರು ಕಂಚು, ಹಿತ್ತಾಳೆ, ತಾಮ್ರ ಮೊದಲಾದ ಲೋಹಗಳಿಂದ ತಳಿಗೆ, ಕನ್ನಡಿ, ಸಿಪ್ಪು, ಕಂಚಿನ ಸಟ್ಟುಗ, ತೆಱುವಟ್ಟಿಲ, ಕೈಮಳೆ, ತಾಳಗಿಣ್ಣಲು ಇತ್ಯಾದಿ ವಸ್ತುಗಳನ್ನು ಮಾಡಿ ಮಾರುತ್ತಿದ್ದರು.[೫೯] ಇವರು ಅಂಗಡಿಯಲ್ಲಿಟ್ಟು ಮಾರುವ ವರ್ತಕ ಸಮೂಹದ ಘಟಕವಾಗಿದ್ದು, ವಿಶ್ವಕರ್ಮ ಜಾತಿಗೆ ಸೇರಿದವರು.[೬೦] ರಾಗಿಮುಸಲವಾಡ ಶಾಸನ[೬೧]ದಲ್ಲಿ ಇವರ ಉಲ್ಲೇಖವನ್ನು ಕಾಣುತ್ತೇವೆ.

ಬಡಗಿ : ಇವರು ಕಟ್ಟಿಗೆ ಕೆಲಸ ಮಾಡುವವರು, ಕಟ್ಟಿಗೆಯ ಕರಕುಶಲ ಕೆಲಸ ಮಾಡುವ ಬುದ್ಧಿವಂತ ಬಡಗಿಗಳಾಗಿದ್ದರು.[೬೨] ಕಾಡುಗಳಿಂದ ಮರಗಳನ್ನು ಕಡಿದು ಕಟ್ಟಿಗೆ ಸಂಗ್ರಹಿಸಿಟ್ಟುಕೊಳ್ಳುತ್ತಿದ್ದರು. ಕಾಡಿಗೆ ಮರ ಕಡಿಯಲು ಹೋದ ಬಡಗಿಯೊಬ್ಬನನ್ನು ಆನೆಯೊಂದು ಅಟ್ಟಿಸಿಕೊಂಡು ಬರಲು ಆತ ಜೀವಭಯದಿಂದ ಮರವೇರಿ ಕುಳಿತ ಸಂಗತಿಯನ್ನು ನಯಸೇನ ಹೇಳಿದ್ದಾನೆ.[೬೩] ಅಲ್ಲದೆ ರಾಗಿಮುಸಲವಾಡ ಶಾಸನದಲ್ಲಿ ಕೂಡಾ ಬಡಗಿಯ ಉಲ್ಲೇಖವನ್ನು ಕಾಣುತ್ತೇವೆ.[೬೪]

ಬಂಟರು : 'ಬಂಟರು' ಅಗ್ರಹಾರ ಅಥವಾ ಪಟ್ಟಣಗಳ ಮಹಾಜನಗಳ ಸಂರಕ್ಷಣೆಗಾಗಿ ನೇಮಕಗೊಳ್ಳುತ್ತಿದ್ದರು. ಸಹಜವಾಗಿಯೇ ಶೂರರಾದ ಇವರನ್ನು ಜನರು ಇಷ್ಟಪಟ್ಟು ನೇಮಿಸಿಕೊಳ್ಳುತ್ತಿದ್ದರು.[೬೫] ಹೇಡಿಗಳಾಗಿ ಹಿಂದಿರುಗುವ ಬಂಟರ ಬಗೆಗೆ ಜನರಲ್ಲಿ ತಿರಸ್ಕಾರವಿತ್ತು.[೬೬] ಉತ್ತಮ ಸೇವೆ ಮಾಡುವ ಬಂಟರನ್ನು ಪ್ರಶಂಶಿಸುತ್ತಿದ್ದರು.[೬೭] ಈ ಬಂಟರು ತಮ್ಮದೇ ಆದಂತಹ ಬಂಟಸಿರ್ವರು ಎಂಬ ಸಂಘವನ್ನು ಸ್ಥಾಪಿಸಿಕೊಂಡಿದ್ದರು. ಇಂತಹ ಸಂಘದ ಉಲ್ಲೇಖವನ್ನು ನಾವು ತಿಳವಳ್ಳಿ ಶಾಸನದಲ್ಲಿ ಕಾಣುತ್ತೇವೆ[೬೮] ಮತ್ತು ಅಂದಿನ ಕಾಲದಲ್ಲಿ ಈ ಬಂಟರನ್ನು ದೇಹಾರಗಳನ್ನು (ದೇವಾಲಯ-ಅಗ್ರಹಾರ) ಕಾಯಲು ಇಟ್ಟುಕೊಳ್ಳುತ್ತಿದ್ದರೆಂದು ನಯಸೇನನು ಹೇಳುತ್ತಾನೆ.[೬೯]

ಮಾಲೆಗಾರರು : ಪಟ್ಟಣಗಳಲ್ಲಿ ಮಾಲೆಗಾರರ ಸಾಲುಗಳೇ ಇರುತ್ತಿದ್ದವು.[೭೦] ದೇವರ ಸೇವೆಗಾಗಿ ಹೂಗಳನ್ನು ಒದಗಿಸುವುದು ಇವರ ಕರ್ತವ್ಯವಾಗಿತ್ತು. ಇಂತಹ ಮಾಲೆಗಾರರ ಮತ್ತು ಮಾಲೆಗಾರರಿಗಾಗಿ ದಾನ ನೀಡಿದುದನ್ನು ಸಿರಿವಾಳ[೭೧], ಏರಿಗೆ[೭೨] ಶಾಸನಗಳಲ್ಲಿ ಕಾಣುತ್ತೇವೆ.

ಎಂಟು ಹಿಟ್ಟು : ಮೂರನೆಯ ಸೋಮೇಶ್ವರನ ಕಾಲದ ಏರಿಗೆ ಶಾಸನ[೭೩]ದಲ್ಲಿ 'ಎಂಟು ಹಿಟ್ಟು' ಕಾಣಿಸಿಕೊಂಡಿದೆ. 'ಹನ್ನೆರಡು ಹಿಟ್ಟು' ಎಂಬುದೂ ಇದೇ ವರ್ಗಕ್ಕೆ ಸೇರಿದೆ ಆದರೆ ಈತನ ಶಾಸನಗಳಲ್ಲಿ ಇದರ ಉಲ್ಲೇಖ ಕಂಡುಬರುವುದಿಲ್ಲ. 'ಎಂಟು ಹಿಟ್ಟು' ಹಾಗೂ 'ಹನ್ನೆರಡು ಹಿಟ್ಟು' ಎಂಬುದು ಗ್ರಾಮದಲ್ಲಿಯ ಪ್ರಮುಖ ಸಂಸ್ಥೆ.[೭೪] ಈ ಸಂಸ್ಥೆ ಸದಸ್ಯರು ಎಷ್ಟೆಂಬುದನ್ನು ಅಲ್ಲಿಯ ಸಂಖ್ಯೆಗಳೇ ತೋರಿಸಿಕೊಡುತ್ತವೆ. ಎಂಟು ಹಿಟ್ಟಿನಲ್ಲಿ ಮೂವರು ಗ್ರಾಮಾಧಿಕಾರಿಗಳು, ಗೌಡ, ಸೇನಭೋವ, ತಳವಾರ ಹಾಗೂ ಐವರು ಗ್ರಾಮದ ಪಂಚಕಾರುಕರ ಪ್ರತಿನಿಧಿಗಳು- ಬಡಗಿ, ಕಮ್ಮಾರ, ಅಕ್ಕಸಾಲೆ, ಅಗಸ, ಅಂಬಿಗ (ಅಂಬಿಗನಿರದಿದ್ದರೆ ಕುಂಬಾರ, ಕಂಚುಗಾರ ಇಲ್ಲವೆ ತತ್ಸಮ ಕರ್ಮಕಾರ)ರು ಸದಸ್ಯರಾಗಿರುತ್ತಾರೆ.[೭೫] 'ಹನ್ನೆರಡು ಹಿಟ್ಟು' ಸಂಸ್ಥೆಯಲ್ಲಿ 'ಎಂಟು ಹಿಟ್ಟು' ಸದಸ್ಯರಿಗೆ ಇನ್ನೂ ನಾಲ್ವರು ಕಸಬುದಾರರನ್ನು ಸೇರಿಸಿಕೊಂಡಿರಬಹುದಾಗಿದೆ. ಎಂಟು ಹಿಟ್ಟು ಹಾಗೂ ಹನ್ನೆರಡು ಹಿಟ್ಟುಗಳ ಉಲ್ಲೇಖಗಳು ಶಾಸನಗಳಲ್ಲಿ ಹಿಂದುಮುಂದಾಗಿ ಬರುವುದರಿಂದ ಒಂದು ಮತ್ತೊಂದರ ಬೆಳೆದ ಇಲ್ಲವೆ ಸವೆದ ಸ್ವರೂಪ ಎಂದು ಹೇಳಲಿಕ್ಕಾಗುವುದಿಲ್ಲ.[೭೬] ಹಿಟ್ಟಿನ ಸದಸ್ಯರನ್ನು 'ಹಿಟ್ಟುಕಾರ'ರೆಂದೂ ಗುರುತಿಸಲಾಗುತ್ತದೆ. ಕುಕನೂರು ಶಾಸನ[೭೭]ದಲ್ಲಿ ಮೂಗಿನ ಚವುಣ್ಡಮಯ್ಯನು ಶ್ರೀಮೂಲಸ್ಥಾನದೇವರಿಗೆ, ಹಾಡುವ ವರ್ಗದವರಿಗೆ, ಅಲ್ಲಿಯ ಹಿಟ್ಟಿನ ಹರೆಕಾರ ಬಮ್ಮೋಜನಿಗೆ ಭೂದಾನ ನೀಡಿದ್ದನ್ನು ಉಲ್ಲೇಖಿಸುತ್ತದೆ.

ಈ ಸಂಸ್ಥೆಗಳವರು ಯಾವುದೇ ಸಾರ್ವಜನಿಕ ಕಾರ್ಯದಲ್ಲಿ ಭಾಗವಹಿಸುತ್ತಿದ್ದರು. ಏರಿಗೆ ಶಾಸನ[೭೮]ದಲ್ಲಿ ಕೇಶವ ದೇವರಿಗೆ ದತ್ತಿ ಬಿಡುವ ಪ್ರಸಂಗದಲ್ಲಿ ಎಂಟು ಹಿಟ್ಟಿನವರು ಉಪಸ್ಥಿತರಿದ್ದರು. ಹಿಟ್ಟುಗಳಲ್ಲಿ ಅಂದು ಸಮಾವೇಶಗೊಳ್ಳುತ್ತಿದ್ದ ಬಡಗಿ, ಕಮ್ಮಾರ ಮುಂತಾದವರು ಈಗಿನಂತೆ ಕೇವಲ 'ಆಯಗಾರ'ರೆಂದು ಕರೆಯಿಸಿಕೊಳ್ಳದೇ ಗ್ರಾಮಾಂತರ ಆಡಳಿತದಲ್ಲಿ ಪಾಲುಗಾರರಾಗಿದ್ದರೆಂದು ಹೇಳಬಹುದು.

ನಲುವತ್ತೊಕ್ಕಲು : ಮೂರನೆಯ ಸೋಮೇಶ್ವರನ ಕಾಲದ ಪನಾಟ್‌ಚೆರು ಶಾಸನ[೭೯]ದಲ್ಲಿ ನಲವತ್ತೊಕ್ಕಲುಗಳ ಪ್ರಸ್ತಾಪ ಬಂದಿದೆ. ಇದು ಗ್ರಾಮದಲ್ಲಿ ಒಕ್ಕಲುತನ ಮಾಡುವ ರೈತರ ಸಂಘ, ರೈತರು ತಮ್ಮ ಕಾರ್ಯ, ಸೌಕರ್ಯ, ಸಾಮಾಜಿಕ ಸ್ಥಾನಮಾನ, ಸ್ವಹಿತ ಸಂರಕ್ಷಣೆ ಮುಂತಾದವುಗಳಿಗಾಗಿ ತಮ್ಮದೇ ಆದ ಒಂದು ಪ್ರತ್ಯೇಕ ಸಂಘವನ್ನು ಊರೂರಿಗೆ ಕಟ್ಟಿಕೊಂಡಿದ್ದರು. ಈ ಸಂಘದಲ್ಲಿ ಸದಸ್ಯರ ಸಂಖ್ಯೆ ಎಷ್ಟೇ ಇದ್ದರೂ ಅವರಿಂದ ರಚಿತವಾದ ಈ ಸಂಘಕ್ಕೆ 'ಅರುವತ್ತೊಕ್ಕಲು' ಎಂದು ಹೆಸರು.[೮೦]

'ಅರುವತ್ತೊಕ್ಕಲು' ಸಂಘಕ್ಕೆ ಗ್ರಾಮದಲ್ಲಿ ಹಿರಿದಾದ ಸ್ಥಾನಮಾನವಿದ್ದುದು ಶಾಸನಗಳಿಂದ ವ್ಯಕ್ತವಾಗುತ್ತದೆ. ಗ್ರಾಮದ ಕಂದಾಯದ ಆಡಳಿತದಲ್ಲಿ ಈ ಸಂಘಕ್ಕೆ ಮಹತ್ವದ ಸ್ಥಾನವಿತ್ತು, ಗ್ರಾಮದ ಭೂಮಿ ಹಾಗೂ ಭೂಮಿ ಮೇಲಿನ ತೆರಿಗೆಯನ್ನು ದಾನಮಾಡುವ ಹಕ್ಕು ಸ್ವತಂತ್ರವಾಗಿ ಅಥವಾ ಇತರ ಸಂಘ-ಸಂಸ್ಥೆಗಳ ಸಂಗಡ ಈ ಸಂಘಕ್ಕೆ ಇತ್ತು.[೮೧] ದೊರೆಯು ಮಹಾಮಂಡಳೇಶ್ವರ ಮಲ್ಲಿಯಣ್ಣ ಹಾಗೂ ಮಹಾಪ್ರಧಾನ ವೆಚ್ಚಪ್ಪಯ್ಯರ ಬಿನ್ನಹದಂತೆ ಪೊಟ್ಟಳಕೆರೆಯ ಚಿನ್ತಾಮಣಪುರ ಕೊಳಗದಾಯ ದತ್ತಿಯನ್ನು ಕೊಟ್ಟಿದುದನ್ನು ನಲುವತ್ತೊಕ್ಕಲು ಮತ್ತು ಇತರರು ಪ್ರತಿಪಾಲಿಸಬೇಕೆಂದು ಪಟಾನ್‌ಚೇರು ಶಾಸನ[೮೨] ತಿಳಿಸುತ್ತದೆ. ಇದರಿಂದ ಹೀಗೆ ಬಿಟ್ಟ ದತ್ತಿಗಳನ್ನು ಪಾಲಿಸಿಕೊಂಡು ಹೋಗುವ ಹೊಣೆಯನ್ನು ನಲ್ವತ್ತೊಕಲು ವಹಿಸಿದುದುಂಟು.

ಈ ಸಂಘಕ್ಕೆ ಊರೊಡೆಯ ಇಲ್ಲವೆ ಊರಗೌಡ, ಗ್ರಾಮದಲ್ಲಿ ಹೆಗ್ಗಡೆಯಿದ್ದ ಪಕ್ಷದಲ್ಲಿ ಆತನೂ ಗೌಡನ ಜೊತೆ ಪ್ರಮುಖನಾಗಿರುತ್ತಿದ್ದನೆಂದು ಹೇಳಲಾಗಿದೆ.[೮೩] ಹೀಗೆ ಹೇಳುವಲ್ಲಿ 'ಮುಖ್ಯ' ಹಾಗೂ 'ಪ್ರಮುಖ' ಶಬ್ದಗಳ ಹಿಂದೆ ಹೇಳಲಾದವರನ್ನೇ ಸಂಘದ ಮುಖ್ಯಸ್ಥರೆಂದು ಭಾವಿಸಲಾಗಿದೆ.

ಕುಟುಂಬ ವ್ಯವಸ್ಥೆ :

ಕುಟುಂಬವು ಸಮಾಜದ ಒಂದು ಅವಿಭಾಜ್ಯ ಅಂಗ ಅದನ್ನು ಒಂದು ದೃಷ್ಟಿಯಲ್ಲಿ ಪ್ರಥಮ ಸಮಾಜವೆಂದು ಕರೆಯಬಹುದು. ಇದಕ್ಕೆ ಗಂಡು ಹೆಣ್ಣುಗಳ ಸಂಬಂಧವೇ ಮೂಲ. ಅದರ ಉದ್ದೇಶ ಮಾನವನ ಲೈಂಗಿಕ ಜೀವನವನ್ನು ವ್ಯವಸ್ಥೆಗೊಳಿಸಿ ಮನುಕುಲದ ಬೆಳವಣಿಗೆಗೆ ಅವಕಾಶ ಕಲ್ಪಿಸುವುದು. ಇದನ್ನೇ ಹಿಂದೂಸಂಸ್ಕಾರಗಳು ವಿವಾಹವೆಂದು ಕರೆದಿವೆ.

ಮದುವೆಗಳು ಸಾಮಾನ್ಯವಾಗಿ ಸವರ್ಣೀಯರಲ್ಲಿಯೇ ನಡೆಯುತ್ತಿರಬೇಕು. ವಧು-ವರರನ್ನು ಆಯ್ಕೆ ಮಾಡುವ ವಿಷಯವನ್ನು ಶಾಸನಗಳು ಉಲ್ಲೇಖಿಸುವುದಿಲ್ಲ. ಅರಸುಮನೆತನಗಳು ತಮ್ಮ ಸರಿಸಮಾನರಾದ ಇತರ ಅರಸರೊಂದಿಗೆ ಸಂಬಂಧವನ್ನು ಬೆಳೆಸುವುದು ಸಾಮಾನ್ಯವಾದರೂ ಕೆಲವುಸಲ ರಾಜಕೀಯ ಕಾರಣಕ್ಕಾಗಿ ಸಾಮಂತ ಮಾಂಡಲೀಕರೊಂದಿಗೆ ಸಂಬಂಧವನ್ನು ಬೆಳೆಸುತ್ತಿದ್ದುದಕ್ಕೆ ಉದಾಹರಣೆಗಳಿವೆ. ಸಾಮಂತ ಕದಂಬ ಜಯಕೇಶಿ ಆರನೆಯ ವಿಕ್ರಮಾದಿತ್ಯನ ಮಗಳು ಮೈಳಲದೇವಿಯನ್ನು,[೮೪] ವಿಷ್ಣುವರ್ಧನನು ಪೆರ್ಗಡೆ ಮಾರಸಿಂಗಮಯ್ಯನ ಮಗಳು ಶಾಂತಲೆಯನ್ನು,[೮೫] ದಂಡನಾಯಕ ಸಿಂಗನೆಂಬುವನು ವಿಷ್ಣುವರ್ಧನನ ಮಗಳು ಹರಿಯಲದೇವಿಯನ್ನು[೮೬] ಮದುವೆಯಾದುದು ಕಂಡುಬರುತ್ತದೆ. ಪ್ರಖ್ಯಾತ ದಂಡನಾಯಕ ಅನಂತಪಾಳನ ಸೋದರಿ ಪದ್ಮಾದೇವಿಯನ್ನು ಕೃಷ್ಣನೆಂಬುವ ಮದುವೆಯಾಗಿದ್ದು, ಇವಳನ್ನು ಆರನೆಯ ವಿಕ್ರಮಾದಿತ್ಯನ ದಂಡನಾಯಕ ಗೋವಿಂದರಾಜನ ಸೊಸೆಯೆಂದು ಶಾಸನವೊಂದು ಹೇಳಿದೆ.[೮೭] ಹೀಗೆ ಆಯಾ ಅಂತಸ್ತಿನವರು ತಮಗೆ ಸಮ್ಮತವಾದ ಅಂತಸ್ತಿನವರೊಂದಿಗೆ ಸಂಬಂಧ ಬೆಳೆಸುತ್ತಿದ್ದರೆಂದು ಗೊತ್ತಾಗುತ್ತದೆ.

ಒಂದು ಕುಟುಂಬದ ಅಕ್ಕ-ತಂಗಿಯರನ್ನು ಇನ್ನೊಂದು ಕುಟುಂಬದ ಅಣ್ಣ-ತಮ್ಮಂದಿರಿಗೆ ವಿವಾಹ ಮಾಡಿಕೊಡಲಾಗುತ್ತಿತ್ತು. ಈ ಪದ್ಧತಿಯನ್ನು ನಾವು ಇಂದಿಗೂ ಕಾಣಬಹುದು. ಮಹಾಪ್ರಧಾನ ನಿಂಬಣ್ಣಯ್ಯ ತನ್ನ ಇಬ್ಬರು ಹೆಣ್ಣು ಮಕ್ಕಳಾದ ನಾಗಲದೇವಿ ಹಾಗೂ ಗಂಗಣಬ್ಬೆಯರನ್ನು ಶಂಕರಾಚಾರ್ಯ ಹಾಗೂ ಅವನ ತಮ್ಮ ಮಹಾದೇವನಿಗೆ ವಿವಾಹ ಮಾಡಿಕೊಡಲಾಗಿತ್ತು.[೮೮] ಮದುವೆ ಮಾಡಿದುದರ ಪ್ರತಿಫಲವಾಗಿ ಸ್ಥಳೀಯ ದೇವಾಲಯಗಳಿಗೆ ಆಯ ಅಥವಾ ತೆರಿಗೆ ಬಿಟ್ಟಿರುವುದನ್ನು ಕೆಲವು ಶಾಸನಗಳು ಉಲ್ಲೇಖಿಸುತ್ತವೆ.[೮೯] ಮದುವೆಯ ಸಮಯದಲ್ಲಿ ಮದುವಣಿಗ ಮತ್ತು ಮದುವಣಿಗೆಯರು ತಲಾ ಒಂದು ಪಣವನ್ನು ಕೊಡಬೇಕೆಂದು ಬಳ್ಳಿಗಾವೆಯ ಸಿದ್ದಿಗರ ಸಂಘವು ತೀರ್ಮಾನಿಸಿ ಆ ಹಣವನ್ನು ಕುಸುಮೇಶ್ವರ ದೇವಸ್ಥಾನಕ್ಕೆ ಕೊಡಬೇಕೆಂದು ನಿರ್ಧರಿಸುತ್ತಾರೆ.[೯೦] ಇದನ್ನೇ 'ಹಂದರ ಹಣ'ವೆಂದು ಶಾಸನಗಳಲ್ಲಿ ಕರೆದಿರುವುದು.[೯೧] ಅಲ್ಲದೆ ನಯಸೇನನು ಕೂಡ ಗೋತ್ರವನ್ನು ತಿಳಿಯದೆ ಹೆಣ್ಣು ಕೊಡುತ್ತಿರಲಿಲ್ಲ. ಹಾಗೆ ಮಾಡುವವರನ್ನು ಮೂರ್ಖರೆಂದೂ, ಎಗ್ಗರೆಂದು ಜನರು ಭಾವಿಸುತ್ತಿದ್ದರು.[೯೨] ಸೋದರಳಿಯನಿಗೆ ಮಗಳನ್ನು ಕೊಡುತ್ತಿದ್ದರು.[೯೩] ನೈಮಿತ್ತಿಕರಿಂದ ಮುಹೂರ್ತ ಕೇಳಿ ಶುದ್ಧ ಮಾಸದೊಳ್ ತಾರಾಬಲ ಚಂದ್ರಬಲ ಕೂಡಿ ಬಂದಾಗ ಮದುವೆ ಮಾಡುತ್ತಿದ್ದರು.[೯೪] ಶ್ರೀಮಂತರ ಮದುವೆಗಳು ಬಹಳ ವಿಜ್ರಂಭಣೆಯಿಂದ ನಡೆಯುತ್ತಿದ್ದವು. ವಿವಾಹ ಮಂಟಪವನ್ನು ಬಹಳ ಸುಂದರವಾಗಿ ಸಿಂಗರಿಸುತ್ತಿದ್ದರು. ದುಕೋಲಧ್ವಜ, ಮಲಯಜದ, ಎಳದಳಿರತೋರಣ, ಮುಕ್ತಾವಳಿ, ಪೊಸರಂಗವಲ್ಲಿಗಳು ಅಲ್ಲಿ ಶೋಭಿಸುತ್ತಿದ್ದವು.[೯೫] ಮದುವಣಿಗನನ್ನು ಕೂಡಿಕೊಂಡು ದಿಬ್ಬಣ ಹೊರಡುತ್ತಿತ್ತು.[೯೬] ಮದುಮಗಳ ಶೋಭೆಯೇ ಶೋಭೆಯೆಂದು ಅವರ ತಿಳುವಳಿಕೆ.[೯೭] ಮದುವೆಯ ಮನೆಯ ಒಸಗೆಗೆ ಅಲ್ಲಿಯ ಊಟಕ್ಕೆ ಮರಳುಗೊಂಡವರೂ ಇದ್ದರು.[೯೮] ಪೆರರ ಮನೆಯ ಮದುವೆಯಲ್ಲಿ ಲೋಗರಂ ನೆಂಟರ್ ಮಾಡಿಕೊಳ್ಳುವ ಜಾಣರಿಗೂ ಕೊರತೆಯಿರಲಿಲ್ಲ.[೯೯]

ಕನ್ಯಾದಾನ

ಕನ್ಯಾದಾನ, ವಿವಾಹ ಸಮಾರಂಭದ ಆಚರಣೆಗಳ ವಿಷಯ ಕಾವ್ಯಗಳಲ್ಲಿ ವಿವರವಾಗಿ ಬರುತ್ತಿದ್ದರೆ, ಶಾಸನಗಳು ಕೆಲವೇ ಸಂಗತಿಗಳನ್ನು ತಿಳಿಸುತ್ತವೆ. ಆರನೆಯ ವಿಕ್ರಮಾದಿತ್ಯನ ಮಗಳು ಮೈಳಲದೇವಿ ಮತ್ತು ಕದಂಬ ಜಯಕೇಶಿಯರ ವಿವಾಹ ವರ್ಣನೆಯ ಪದ್ಯವೊಂದು ಹೀಗಿದೆ.

ಎಂದು ವಿಭೂತಿಯಂ ಧರಿಸಿ ದೇಮನಗೇಂದ್ರಮೆ ಮುಂದೆ ಬಂದು ನಿಂ
ನಂದದಿನಪ್ಪುಕೆಯ್ದು ಮಣಿಮಂಡಪದೊಳ್ಪದಪದ್ಮಮಂ ನಿಜಾ
ನಂದದೆ ಕರ್ಚಿ ಪೂರ್ಣಕಳಶೋಜ್ವಳಧಾರೆ ವಿರಾಜಿಸಲ್ಕೆ ತಾಂ
ನನ್ದನೆಯಂ ಕುಮಾರಕ ಶಿಖಾಮಣಿಗಿತ್ತ ನಿಳಾತಳೇಶ್ವರಂ॥

ಮಾವನಾದ ವಿಕ್ರಮಾದಿತ್ಯನು ವಿಭೂತಿಯನ್ನು ಧರಿಸಿಕೊಂಡು ಹೇಮಪರ್ವತದಂತೆ ನಡೆದು ಬಂದು ವಿವಾಹ ಮಂಟಪದಲ್ಲಿ ಕುಳಿತ ಅಳಿಯನ ಪಾದಗಳನ್ನು ತೊಳೆದು ಮಗಳನ್ನು ಸಂತೋಷದಿಂದ ಧಾರೆಯೆರೆದನೆಂದು ಈ ಪದ್ಯ ಹೇಳುತ್ತದೆ.[೧೦೦] ಇದರಂತೆ "ನಿಜಪ್ರಧಾನದಂಡನಾಥ ಪುತ್ರಿಯಂ ಕನ್ಯಾರತ್ನಮಂ ತಂದು ವಿಷ್ಣುವರ್ಧನದೇವಂ ತಾನೆ ಕನಕಳಶವನೆತ್ತಿ ಕೈನೀರೆರೆದು ಕನ್ಯಾದಾನ" ಮಾಡುವುದರ ಮೂಲಕ ಬಿಟ್ಟಿಯಣ್ಣನ ವಿವಾಹವನ್ನು ನೆರವೇರಿಸಿದನೆಂಬ ಸಂಗತಿ ಬೇಲೂರಿನ ಶಾಸನದಲ್ಲಿದೆ.[೧೦೧]

ಮೂರನೆಯ ಸೋಮೇಶ್ವರನು ತನ್ನ ಮಾನಸೋಲ್ಲಾಸದಲ್ಲಿ ವಿವಾಹವರ್ಣನೆಯನ್ನು ಬಹಳ ಸುಂದರವಾಗಿ ಮಾಡಿದ್ದಾನೆ. ವಿವಾಹಮಂಟಪವನ್ನು ಶೋಭಾಯಮಾನವಾದ, ವಿಶಾಲವಾದ, ಮಧ್ಯವೇದಿಕೆಯಿಂದ ವಿರಾಜಿಸುತ್ತಿರುವ, ರೇಶಿಮೆಯ ಪಟ್ಟಿಯಿಂದ ಕೂಡಿದ, ಕಮಾನು ಹೊದಿಕೆಯಿಂದ ಕೂಡಿದ, ಕಂಬ ತೋರಣದಿಂದ ಅಲಂಕೃತವಾದ ದ್ವಾರ, ಗೋಮಯ ಲಿಪ್ತವಾದ ನೆಲ, ಪುಷ್ಪರಾಶಿ ಇವುಗಳಿಂದ ಶೋಭಿಸುತ್ತಿರಬೇಕು. ಗಣಿಕರು ಹೇಳಿದ ಶುಭಮುಹೂರ್ತದಲ್ಲಿ ಪುಣ್ಯಾಹವಾಚನವನ್ನು ಮಾಡಿ, ಮಧು ಪರ್ಕದಿಂದ ಸಮ್ಮಾನಿತನಾದ ಶ್ವೇತ ವರ್ಷದಿಂದ ವಿಭೂಷಿತನಾದ, ಉಂಗುರಗಳಿಂದ ಅಲಂಕೃತನಾದ ಪುತ್ರನನ್ನು ವೇದಿಕೆಯ ಮೇಲೆ ಮೆಲ್ಲನೆ ಹತ್ತಿಸಬೇಕು. ಒಂದರ ಪಕ್ಕದಲ್ಲೊಂದರಂತೆ ಅಕ್ಕಿಕಾಳುಗಳ ಎರಡು ಗುಂಪುಗಳನ್ನು ಯೋಜಿಸಬೇಕು. ಅವುಗಳ ಮಧ್ಯದಲ್ಲಿ ಬಿಳಿ ರೇಷ್ಮೆ ಬಟ್ಟೆಯನ್ನು ಸಾವಧಾನವಾಗಿ ಇಳಿಬಿಡಬೇಕು. ಒಂದು ಅಕ್ಕಿರಾಶಿಯ ಮೇಲೆ ಪುತ್ರನನ್ನು ಪೂರ್ವಕ್ಕೆ ಮುಖಮಾಡಿ ಕುಳ್ಳಿರಿಸಬೇಕು. ಅದೇ ರೀತಿ ಪಶ್ಚಿಮಾಭಿಮುಖವಾಗಿ ಕನ್ಯೆಯನ್ನು ಕುಳ್ಳಿರಿಸಬೇಕು. ಸರಿಯಾದ ಮುಹೂರ್ತ ಪ್ರಾಪ್ತವಾದಾಗ ಮಧ್ಯದ ಬಟ್ಟೆಯನ್ನು ಸರಿಸಬೇಕು. ಆಗ ವಧು-ವರರು ತಮ್ಮ ಕೈಯಲ್ಲಿರುವ ಅಕ್ಕಿಕಾಳುಗಳನ್ನು ಒಬ್ಬರ ಮೇಲೊಬ್ಬರು ಹಾಕಬೇಕು. ಕನ್ಯಾಪಿತೃ ತನ್ನ ಮಗಳನ್ನು ಧಾರೆ ಎರೆದು ಕೊಡಬೇಕು ಎಂದು ಹೇಳಿದ್ದಾನೆ. ಈ ರೀತಿಯ ವಿವಾಹ ಪದ್ಧತಿಯನ್ನು ನಾವು ಇಂದಿಗೂ ಕಾಣುತ್ತೇವೆ. ವಿವಾಹ ಮಹೋತ್ಸವವನ್ನು ನಾಲ್ಕು ದಿನಗಳ ಕಾಲ ನಿರಂತರವಾಗಿ ಆಚರಿಸಬೇಕು ಎಂದು ಹೇಳುತ್ತಾನೆ. ಅಲ್ಲದೆ ನಾಲ್ಕನೇಯ ದಿನ ವಧುವರರನ್ನು ಅಲಂಕೃತವಾದ ಅಂಬಾರಿಯ ಮೇಲೆ ಕುಳ್ಳಿರಿಸಿ ಪಟ್ಟಣದಲ್ಲಿ ಮೆರವಣಿಗೆಯನ್ನು ಮಾಡಬೇಕೆಂದು ಹೇಳಿದ್ದಾನೆ.[೧೦೨]

ಮದುವೆಯ ಉಡುಗೊರೆ :

ಮದುವೆಯಲ್ಲಿ ವರನಿಗೆ ಉಡುಗೊರೆಯನ್ನು ಕೊಡುತ್ತಿದ್ದರು. ಇದು ವಧುವಿನ ತಂದೆ-ತಾಯಿಗಳು ಮಾಡಬೇಕಾದ ಕರ್ತವ್ಯವಾಗಿದ್ದು, ಕೆಲವು ಸಲ ಆಳುತ್ತಿದ್ದ ಅರಸನೋ, ಮಂತ್ರಿಪ್ರಮುಖರೋ ಇದರಲ್ಲಿ ಸಹಭಾಗಿಗಳಾಗುತ್ತಿದ್ದರು. ಇದು ಪ್ರಭುವರ್ಗದವರಲ್ಲಿ ದೊಡ್ಡ ಪ್ರಮಾಣದಲ್ಲಿ ಮಧ್ಯಮ ಮತ್ತು ಸಾಮಾನ್ಯವರ್ಗದವರಲ್ಲಿ ಅವರ ಗೌರವಕ್ಕೆ ತಕ್ಕಂತೆ ನಡೆಯುತ್ತಿತ್ತು.[೧೦೩]

ಚಟ್ಟಿಯ ದೇವನೆಂಬ ಗೋವೆಯ ಕದಂಬವಂಶದ ರಾಜಕುವರರಿಗೆ ಮುಮ್ಮರಿನೃಪನು 'ಪುತ್ರಿಯಂ ಸವಿಸ್ತರದೊಳಕೊಟ್ಟು' ಅಳಿಯನಿಗೆ ೫ ಲಕ್ಷ ಸುವರ್ಣ ನಾಣ್ಯಗಳನ್ನು ಅರ್ಪಿಸಿರುವನು. ಈ ಚಟ್ಟಿದೇವನ ಮಗ ಮೊದಲನೆಯ ಜಯಕೇಶಿದೇವನು ಆರನೆಯ ವಿಕ್ರಮಾದಿತ್ಯನಿಗೆ 'ತನ್ನ ಮಗಳಂ ಧಾರಾನ್ವಿತಂ ಕೊಟ್ಟು' ''ಪೆರ್ಚ್ಚಿದಲಂಪಂ ಪಲವ....ಯಂ ಕುದುರೆಯಂ ಬಣ್ಣಾರಮಂ ಲೆಕ್ಕವಿಲ್ಲದೆ ತೆಲ್ಲಂಟಿಯಂ'' ಕೊಟ್ಟನೆಂದು ನರೇಂದ್ರ ಶಾಸನ ತಿಳಿಸಿದೆ.[೧೦೪] ಆರನೆಯ ವಿಕ್ರಮಾದಿತ್ಯ ಮಗಳಾದ ಮೈಳಲದೇವಿಯ ಮದುವೆಯಲ್ಲಿ ಅಳಿಯ ಎರಡನೆಯ ಜಯಕೇಶಿಗೆ ನೀಡಿದ ಕಾಣಿಕೆಯನ್ನು -

ಕನರೌದ್ರ್ಯಗ್ರಂಗಳೇನಚ್ಚರಿಯೆ ಪಲವೆನಲ್ ಹೇಮಪುಂಜಂಗಳಂ ರೋ
ಹನಗೇಂದ್ರವ್ರಾತವಿತ್ತೆತ್ತೆನೆ ಪಲವು ಮಹಾರತ್ನ ಪುಂಜಂಗಳಂ ಶ
ಕ್ರನ ಗಂಧೇಭಕ್ಕಮುಚ್ಚೈಶ್ರವದ ಮಹಿಮೆಗಂ ಮೇಲೆನಲ್ಸಂದು ವಂ ನೂ
ತನ ಭದ್ರೇಭಾಶ್ವಕೋಟಿ ಪ್ರಕರಮನಳಿಯಂಗಿತ್ತನಾ ಕುಂತಳಾಧೀಶಂ ॥

ಎಂಬ ಪದ್ಯ ಸೂಚಿಸುತ್ತದೆ.[೧೦೫] ಇದು ಮದುವೆ ಸಮಾರಂಭದಲ್ಲಿ ಪ್ರಭುವರ್ಗದವರು ವರನಿಗೆ ಕೊಡುವ ಉಡುಗೊರೆ ಮತ್ತು ಮದುವೆಯ ಕಾಲಕ್ಕೆ ಕೈಕೊಳ್ಳುತ್ತಿದ್ದ ದಾನ-ಧರ್ಮವೆಂದು ಹೇಳಬಹುದು.

ಬಹುಪತ್ನಿತ್ವ :

ಪ್ರಾಚೀನ ಕಾಲದಲ್ಲಿ ಸಮಾಜವು ಬಹುಪತ್ನಿತ್ವವನ್ನು ಒಪ್ಪಿಕೊಂಡು ಬಂದಿತ್ತು.[೧೦೬] ಪ್ರಭುವರ್ಗದವರಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕಂಡುಬರುತ್ತಿದ್ದ ಈ ಪದ್ಧತಿ ಸಾಮಾನ್ಯರಲ್ಲಿ ಇರಲಿಲ್ಲವೆನ್ನುವಷ್ಟು ವಿರಳವಾಗಿತ್ತು. ಚಕ್ರವರ್ತಿಗಳು ಮತ್ತು ಇತರ ಸಾಮಂತ ಅರಸರಂತೂ ಬಹುಪತ್ನೀವಲ್ಲಭರಾಗಿದ್ದರು. ಚಾಲುಕ್ಯ ಆರನೆಯ ವಿಕ್ರಮಾದಿತ್ಯನಿಗೆ ಹತ್ತೊಂಬತ್ತು ಜನ ರಾಣಿಯರಿದ್ದ ಸಂಗತಿ ಈವರೆಗಿನ ದಾಖಲೆಗಳಿಂದ ತಿಳಿದುಬಂದಿದೆ.[೧೦೭] ಮೂರನೆಯ ಸೋಮೇಶ್ವರನಿಗೆ ಬಮ್ಮಲದೇವಿ[೧೦೮] ಮತ್ತು ರಾಜಲದೇವಿ[೧೦೯] ಎಂಬ ಇಬ್ಬರು ರಾಣಿಯರಿದ್ದರು. ಈತನ ಸಾಮಂತನಾದ ವಿಷ್ಣುವರ್ಧನನಿಗೆ ಶಾಂತಲದೇವಿ ಎಂಬ ಹೆಸರಿನ ಈರ್ವರು ಬಮ್ಮಲದೇವಿ, ಲಕ್ಷ್ಮೀ ಮಹಾದೇವಿ, ದೇವಕಿದೇವಿ, ರಾಜಲದೇವಿಯರೆಂಬ ರಾಣಿಯರಿದ್ದರು.

ರಾಣಿಯರ 'ಸವತಿ ಮತ್ಸರ' ಶಾಸನಗಳಲ್ಲಿ ಪದೇ ಪದೇ ಉಲ್ಲೇಖವಾಗಿದೆ. ಕಿರಿಯ ರಾಣಿಯರನ್ನು ಹಿರಿಯರಾಣಿ ಅಂದು ಕಟ್ಟು ನಿರ್ಭಂದನೆಯಲ್ಲಿಡಲು ಶ್ರಮಿಸುತ್ತಿದ್ದುದುಂಟು. ಮೂರನೆಯ ಸೋಮೇಶ್ವರನ ತಾಯಿ ಚಂದಲದೇವಿಯು 'ಸವತಿಮದ ಭಂಜನೆ'[೧೧೦] ''ಸವತಿ ಶಿರೋವಜ್ರಮುಷ್ಠಿ''[೧೧೧] ಎಂಬ ಪ್ರಶಸ್ತಿ ಸವತಿಯರ ವಿಷಯವಾಗಿ ಇವಳಿಗಿದ್ದ ದರ್ಪವನ್ನು ಸೂಚಿಸುತ್ತದೆ. ವಿಷ್ಣುವರ್ಧನನ ಮಡದಿ ಶಾಂತಲೆದೇವಿ ''ಮದ್ವಿಭ್ರುತ್ತಸವತಿಗಂಧ

ವಾರಣೆಯಂ''[೧೧೨] ''ಸವತಿಗಂಧಹಸ್ತಿ''[೧೧೩] ಎಂಬ ಹೇಳಿಕೆಗಳು ಬಹುಪತ್ನಿತ್ವದ ಜೊತೆಗೆ ರಾಣಿಯರಲ್ಲಿದ್ದ ಸವತಿ ಮಾತ್ಸರ್ಯವನ್ನು ಎತ್ತಿ ಹೇಳುತ್ತವೆ. ಈ ಸವತಿಮತ್ಸರವನ್ನು ಸೂಚಿಸುವ ಬಿರುದುಗಳೂ ರಾಣಿಯರಿಗೆ ತುಂಬ ಇಷ್ಟವಾಗಿದ್ದವೆಂದು ತೋರುತ್ತದೆ. ಹೊಯ್ಸಳ ವಿಷ್ಣುವರ್ಧನನ ಮಡದಿ ಶಾಂತಲದೇವಿ ಶ್ರವಣಬೆಳಗೊಳದಲ್ಲಿ ನಿರ್ಮಿಸಿದ ''ಸವತಿಗಂಧವಾರಣ'' ಹೆಸರಿನ ಬಸದಿ ಇದಕ್ಕೆ ಸಾಕ್ಷಿಯಾಗಿದೆ.[೧೧೪]

ದಾಂಪತ್ಯ

ಭಾರತೀಯ ಪರಂಪರೆ ಯಾವಾಗಲೂ ಆದರ್ಶ ದಾಂಪತ್ಯವನ್ನು ಎತ್ತಿ ಹಿಡಿದಿದೆ. ಮನಸಾ ಒಂದುಗೂಡುವ ಅಭೀಪ್ಸೆ ಮತ್ತು ಒಂದುಗೂಡಿದ ದಂಪತಿಗಳ ಚಿತ್ರ ವೇದದಲ್ಲಿದೆ.[೧೧೫] ಸತಿಪತಿಗಳಿಬ್ಬರೂ ಜೀವದುದ್ದಕ್ಕೂ ಸಹಯಾತ್ರಿಕರು ಧಾರ್ಮಿಕ ಆಚರಣೆಯಲ್ಲಂತೂ ಅವರು ಕೂಡಿಯೇ ಇರಬೇಕು. ಋಗ್ವೇದದ ಸೂತ್ರಗಳು ದೇವತೆಗಳಿಗೆ ಒಟ್ಟಾಗಿ ಆಹುತಿಯನ್ನರ್ಪಿಸುವ ದಂಪತಿಗಳನ್ನು ಅನುಗ್ರಹಿಸುವಂತೆ ಪ್ರಾರ್ಥಿಸುತ್ತವೆ.[೧೧೬]

ಪತಿಯ ಧರ್ಮಾರ್ಥ, ಕಾಮ, ಮೋಕ್ಷಗಳಲ್ಲಿ ಸಹಭಾಗಿನಿ ಸತಿ ಪತಿಯ ಸುಖ ದುಃಖಗಳಲ್ಲಿಯೇ ತನ್ನ ಸುಖ ದುಃಖಗಳನ್ನು ಕಂಡುಕೊಂಡ ಇವಳು ಜೀವನದುದ್ದಕ್ಕೂ ಅವನನ್ನು ನೆರಳಿನಂತೆ ಹಿಂಬಾಲಿಸಿ ದಾಂಪತ್ಯದಲ್ಲಿಯೇ ಜೀವನ ಸಾರ್ಥಕ್ಯವನ್ನು ಅರಸಿದವಳು. ಮೂರನೆಯ ಸೋಮೇಶ್ವರನ ಕಾಲದ ಗೃಹಿಣಿಯರ ದಾಂಪತ್ಯ ಜೀವನದ ಕೆಲವು ಮುಖಗಳು ಶಾಸನದುದ್ದಕ್ಕೂ ಹೀಗೆ ಎರಕಗೊಂಡು ನಿಂತಿದೆ.

ಕುಲಪುತ್ರ ಹುಟ್ಟಿದ ಮನೆಯ ಜ್ಯೋತಿಯನ್ನು ಬೆಳಗಿದರೆ ಕುಲಪುತ್ರಿ ಬೆಳಗುವುದು ಹುಟ್ಟಿದ ಮತ್ತು ಕೊಟ್ಟ ಮನೆಗಳ ಜ್ಯೋತಿಯನ್ನು. ಇದನ್ನು ಮನಗಂಡ ಪ್ರಾಚೀನ ಕರ್ನಾಟಕದ ಸ್ತ್ರೀಯರು ಗೃಹಣಿಕತ್ವಕ್ಕೆ ಹೆಚ್ಚಿನ ಮಹತ್ವವನ್ನು ನೀಡಿದುದು ಕಂಡುಬರುತ್ತದೆ. ಗೃಹಿಣಿಯ ದೈನಂದಿನ ಆಚರಣೆಯ ಬಗೆಗೆ ಶಾಸನಗಳು ಮೌನವಾಗಿದ್ದರೂ,

ಪರಮಪದಾರ್ಥ ನಿರ್ಣಯಮನಾಂತ ವಿದಗ್ಧತೆ ದುರ್ನಯಂಗಳೊಳ್
ಪರಿಚಯಮೆಂದುಮಿಲ್ಲದತಿಮುಗ್ಧತೆ ತನ್ನಿನಿಯಂಗೆ ಚಿತ್ರದೊಳ್
ಪಿರಿವನುರಾಗಮಂ ಪಡೆಯ ರೂಪು ವಿನೇಯಜನಾಂತರಂಗದೊಳ್
ನಿರುಪಮಭಕ್ತಿಯಂ ಪಡೆವ ಪೆಂಪು ಲಕ್ಷ್ಮಲೆಗೆಂದು ಮನ್ವಿತಂ ॥

ಎಂಬ ಗಂಗರಾಜನ ಸತಿ ಲಕ್ಷ್ಮಲೆಯ ಗುಣಮಹತ್ವವನ್ನು ತಿಳಿಸುವ ಪದ್ಯ ಗೃಹಿಣಿಯೊಬ್ಬಳ ಆದರ್ಶ ಭಾವನೆಗಳನ್ನು ಪ್ರತಿನಿಧಿಸುತ್ತದೆ.[೧೧೭]

''ಚಿಣ್ಣಸೆಟ್ಟಿಯ ಕಾನ್ತೆಯನೀ ಕಾಳಿಯಕ್ಕನಂ ಗುಣನಿಧಿಯಂ ಸನ್ತತಮೆ ದಾನಶೀಳೆಯನೆನ್ತು ಪೊಗಳುತ್ತಮಿಪ್ಪರ್ಪರೀ ವಸುಮತಿಯೊಳಂ''[೧೧೮] ಎಂಬ ಮಾತು ''ಬೋಚರಸನ ವಧುಪುಣ್ಯಮೂರ್ತಿ

ಮಾಚಿಯಬ್ಬರಸಿ''[೧೧೯] ಎಂಬುದು ಗೃಹಿಣಿಯರ ಶ್ರೇಷ್ಠತೆಯನ್ನು ಎತ್ತಿ ತೋರಿಸಿವೆ. ಎಲಿಶಿರೂರ ಶಾಸನದ ಅಗ್ರಭಾಗದಲ್ಲಿ ಕೆತ್ತಲಾದ ಶಿವಲಿಂಗದ ಎಡಬಲಗಳಲ್ಲಿ ಗಂಡ-ಹೆಂಡತಿಯ ವಿಗ್ರಹವನ್ನು ಬಿಡಿಸಿ ''ಲಕ್ಷ್ಮೀದೇವಿಯಂ ಪದ್ಮರಸನುಂ ಸದಾಶಿವನ ಸ್ತುತಿಯಿಸುತ್ತಿರ್ದ್ದಪ್ಪರು''[೧೨೦] ಎಂಬುದನ್ನು ಕಾಣಬಹುದು. ಹೊಯ್ಸಳ ವಿಷ್ಣುವರ್ಧನನ ಪಾಲಿಗೆ ಶಾಂತಲೆ ''ಸತತಂನೋರ್ಪಡೆ ಲಕ್ಷ್ಮೀದೇವತೆ ರಣವ್ಯಾಪಾರದೊಳ್ ಖಡ್ಗದೇವತೆ''ಯಾಗಿದ್ದಳೆಂದು ಹೇಳುವಲ್ಲಿ[೧೨೧] ಪತಿಯ ವ್ಯಕ್ತಿತ್ವದೊಂದಿಗೆ ಸತಿಯ ವ್ಯಕ್ತಿತ್ವ ಸಮರಸವಾಗಬೇಕೆಂಬ ಧ್ವನಿಯಿದೆ.

ಹೀಗೆ ಪತಿನಿಷ್ಠೆಯುಳ್ಳ ಮಹಿಳೆಯರನ್ನು ಶಾಸನಗಳು ''ಪತಿವ್ರತೆ'', ''ಪುರುಷವ್ರತೆ'' ಎಂದು ಕರೆದಿವೆ.[೧೨೨] ಸಾನ್ತಣ್ಣನ ಪತ್ನಿ ಮಾಕಣಬ್ಬೆಯನ್ನು ''ವಿನಯೋಪೇತೆ ಮಹಾಸತಿ ಪ್ರತಿಬ್ರತಾ ಗುಣದೆಡೆಯೊಳ್ ಸೀತೇಯನೆ ಪೋಲ್ತಳದಱುಂ'' ಎಂದು ಶಾಸನವೊಂದು ತಿಳಿಸಿದೆ.[೧೨೩]

ವೇಶ್ಯೆಯರು :

ಋಗ್ವೇದದಲ್ಲಿ ಗಣಿಕೆಯರೆಂದು ಉಲ್ಲೇಖಗೊಂಡ ವೇಶ್ಯೆಯರ ಧರ್ಮವನ್ನು ಕುರಿತು ಗೌತಮ, ಮನು, ನಾರದ, ಮತ್ಸ್ಯಪುರಾಣ ಮುಂತಾದ ಪ್ರಾಚೀನ ಕೃತಿ-ಕೃತಿಕಾರರು ಪ್ರಸ್ತಾಪಿಸಿದ್ದಾರೆ.[೧೨೪] ಅಂದರೆ ಈ ಪದ್ಧತಿಯು ತೀರ ಹಿಂದಿನಿಂದಲೂ ನಡೆದು ಬಂದಿರುವುದು ವೇದ್ಯವಾಗುತ್ತದೆ. ದೇವರ ಹೆಸರಿನಲ್ಲಿ ಬಿಟ್ಟ ಸೂಳೆಯರಲ್ಲಿ ವಿವಿಧ ವರ್ಗಗಳಿರುವುದನ್ನು ಡಾ. ಚೆನ್ನಕ್ಕ ಎಲಿಗಾರ ಅವರು ಗುರುತಿಸಿದ್ದಾರೆ.[೧೨೫] ನಯಸೇನನಂತೂ ಈ ಕಾಲದ ಸೂಳೆಯರ ವಿಷಯವಾಗಿ ಸಾಕಷ್ಟು ಹೇಳಿದ್ದಾನೆ.[೧೨೬] 'ಸೂಳೆ' ಎಂಬ ಪದಕ್ಕೆ ಪರ್ಯಾಯವಾಗಿ ನಯಸೇನ ವೇಶ್ಯೆಯರು, ಗಣಿಕೆಯರು ಮತ್ತು ಬೆಲೆವೆಣ್ಣುಗಳು ಎಂದೂ; ಇಲ್ಲಿ ಬರುವವರನ್ನು ವಿಟರು, ಬೊಜಂಗರು ಮತ್ತು ಮಿಂಡರೆಂದೂ ಕರೆದಿದ್ದಾನೆ.[೧೨೭] ನಗರ ಮತ್ತು ಗ್ರಾಮಗಳಲ್ಲಿ ಸೂಳೆಯರ ಕೇರಿಗಳಿದ್ದವು. ನಗರ ಸೂಳೆಯರನ್ನು ಪುರದ ಸೂಳೆಯರೆಂದೂ ನಯಸೇನ ಕರೆದಿದ್ದಾನೆ.[೧೨೮] ಸೂಳೆಯರು ಶೃಂಗಾರ ಮಾಡಿಕೊಂಡು ತಮ್ಮ ಚೆಲುವನ್ನು ಇನ್ನಷ್ಟು ಹೆಚ್ಚಿಸಿಕೊಳ್ಳುತ್ತಿದ್ದರು. ಹೊಸದಾಗಿ ಸೂಳೆಗಾರಿಕೆ ಮಾಡುವವರಿಗೆ ಪುರುಷರನ್ನು ಆಕರ್ಷಿಸುವ ಕಲೆಯನ್ನು ಮುದಿ ಸೂಳೆಯರು ಕಲಿಸಿಕೊಡುತ್ತಿದ್ದರು.[೧೨೯] ಏಕೆಂದರೆ ನಯವಿಲ್ಲದ ಸೂಳೆಯರನ್ನು ಬೋಜಂಗರು ಒಪ್ಪುತ್ತಿರಲಿಲ್ಲ.[೧೩೦] ಪ್ರಾಯದ ಸೂಳೆಯರ ಗಳಿಕೆ ಸಾಮಾನ್ಯವಾಗಿ ಹೆಚ್ಚಿಗೆ ಇರುತ್ತಿತ್ತು. ಇಂಥವರಲ್ಲಿಗೆ ದೊಡ್ಡ ದೊಡ್ಡ ವ್ಯಕ್ತಿಗಳೂ ಬರುತ್ತಿದ್ದರಿಂದ ಇವರು ಶ್ರೀಮಂತರೆನಿಸಿಕೊಳ್ಳುತ್ತಿದ್ದರು. ಕೆಲವು ಜನ ಸೂಳೆಯರಂತೂ ಕೇವಲ ಶ್ರೀಮಂತರಿಗೆ ಮಾತ್ರ ಲಭ್ಯವಿರುತ್ತಿದ್ದರು.[೧೩೧] ಇನ್ನು ಕೆಲವರು 'ಬಡ ಸೂಳೆ'ಯರಾಗಿಯೇ ಇದ್ದರು.[೧೩೨] ಬಡ ಬೊಜಂಗರು ಇಂಥ ಸೂಳೆಯರನ್ನು ಹೊಗಳಿ ಸಂತಸಪಡುತ್ತಿದ್ದರು.[೧೩೩]

ಸೂಳೆಯರು ತಮ್ಮ ಜೊತೆ ವ್ಯವಹರಿಸುವ ವಿಟರೊಂದಿಗೆ ಕೆಲವು ಸಂದರ್ಭಗಳಲ್ಲಿ ಸಿಡಿಮಿಡಿಗೊಳ್ಳುತ್ತಿದ್ದರು. ಸೂಳೆಯರ ಮೇಲೂ ವಿಟರು ಉಗ್ರಾಟೋಪ ಮಾಡುತ್ತಿದ್ದರು.[೧೩೪] ಮತ್ತು ಈ ಕೇರಿಯ ಬೆಲೆವೆಣ್ಣುಗಳು ಆ ಕೇರಿಯ

ವಂದಿಯರೊಂದಿಗೆ ಮತ್ತು ಆ ಕೇರಿಯ ಬೆಲೆವೆಣ್ಣುಗಳು ಈ ಕೇರಿಯ ವಂದಿಯರೊಂದಿಗೆ ಕೂಡುತ್ತಿದ್ದರೆಂದು ತಿಳಿಯುತ್ತದೆ.[೧೩೫] ಅನಂಗಸೌಂದರಿ, ಮೃಗಸೇನೆ, ಸೌಂದರಿಯರೆಂಬ ಸೂಳೆಯರಿದ್ದ ಉಲ್ಲೇಖವಿದೆ.[೧೩೬] 'ಪರದರೊಳ್ಮರುಳರಿಲ್ಲ ಸೂಳೆ ಸಾಧುವಲ್ಲ' ಎಂಬ ಮಾತು ಸೂಳೆಯರು ಸಂಭಾವಿತರಲ್ಲವೆಂಬುದನ್ನು, ಪರದರಂತೆ ಇವರೂ ವ್ಯವಹಾರ ಚತುರರೆಂಬುದನ್ನು ಸೂಚಿಸುತ್ತದೆ.[೧೩೭]

ವೇಶ್ಯೆಯರನ್ನು ಹೊಂದುವುದು ಆ ಕಾಲದಲ್ಲಿ ವೈಭವದ ಪ್ರತೀಕವಾಗಿದ್ದಿತು. ಅನೇಕ ಅರಸರು ತಮ್ಮ ಬಿರುದುಗಳಲ್ಲಿ 'ವೇಶ್ಯಾಭುಜಂಗ',[೧೩೮] 'ವಿಟಚಕ್ರವರ್ತಿ'[೧೩೯] ಮುಂತಾದ ಬಿರುದುಗಳನ್ನು ಧರಿಸಿದುದು ಶಾಸನಗಳಿಂದ ತಿಳಿದುಬರುತ್ತವೆ. ರಾಜನ ಆಸ್ಥಾನದಲ್ಲಿ ಕೂಡ ಪ್ರಸಿದ್ಧರಾದ ವೇಶ್ಯೆಯರಿಗೆ ಅವರ ಅಂತಸ್ತಿಗೆ ತಕ್ಕಂತೆ ಉಚಿತ ಆಸ್ಥಾನವನ್ನು ನೀಡಲಾಗುತ್ತಿತ್ತು.[೧೪೦] ವೇಶ್ಯಾವೃತ್ತಿಯ ಮೇಲೆ ಅಂದಿನ ಸರಕಾರ ತೆರಿಗೆಯನ್ನು ವಿಧಿಸುತ್ತಿತ್ತು. ಶಾಸನಗಳಲ್ಲಿ 'ಸೂಳೆದೆರೆ', 'ಸೂಳೆಯರಲ್ಲಿನ ಕನ್ನಡಿವಣ' ಎಂದು ಕರೆಯಲಾಗಿದೆ.[೧೪೧]

ಸ್ತ್ರೀ ಆಡಳಿತಗಾರರು :

ರಾಜಮನೆತನದ ಸ್ತ್ರೀಯರಲ್ಲಿ ಕೆಲವರು ರಾಜತಂತ್ರದಲ್ಲಿ ನಿಪುಣರಾಗಿದ್ದು ಆಡಳಿತಾತ್ಮಕ ವಿಷಯದಲ್ಲಿ ಸಲಹೆ-ಸೂಚನೆಗಳನ್ನು ನೀಡುತ್ತಿದ್ದರೆಂದು ಹೇಳಬಹುದು.

ಮೂರನೆಯ ಸೋಮೇಶ್ವರನ ತಾಯಿಯಾದ ಚಂದಲದೇವಿಯು ಕೆಲವು ಭತ್ತಗ್ರಾಮಗಳನ್ನು, ಅಗ್ರಹಾರಗಳನ್ನು ಆಳುತ್ತಿದ್ದಳು. ಹುಣಸಿ ಹಡಗಲಿ ಶಾಸನ[೧೪೨]ದಲ್ಲಿ ''ಶ್ರೀಮತ್ಪಿರಿಯರಸಿ ಚನ್ದಲದೇವಿಯರು ಅಲಂದೆಸಾಸಿರ ಪ್ರಮುಖವನೇಕ ಭತ್ತಗ್ರಾಮಂಗಳುಮಂ ದುಷ್ಟನಿಗ್ರಹ ಶಿಷ್ಟಪ್ರತಿಪಾಳನರಿಂದಾಳ್ದು(ಳ್ದ)ರಸುಗೆಯ್ಯುತ್ತಮಿರೆ'' ಎಂದು ಬರುತ್ತದೆ. ಇದರಿಂದ ಅಳಂದೆ ಸಾಸಿರದಲ್ಲಿ ತನ್ನ ಉಪಜೀವನಕ್ಕಾಗಿ ಕೊಟ್ಟ ಭತ್ತಗ್ರಾಮಗಳ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದುದು ಗೊತ್ತಾಗುತ್ತದೆ.

ಕೆಲವಾರು ಅಧಿಕಾರಿಗಳು ಚಂದಲದೇವಿಯ ಪಾದಪದ್ಮೋಪಜೀವಿಗಳಾಗಿದ್ದುದು ತಿಳಿದುಬರುತ್ತದೆ. ಮಹಾಮಂಡಳೇಶ್ವರ ಬಿಬ್ಬರಸನು[೧೪೩] ಈಕೆಯ ಪಾದ ಪದ್ಮೋಪಜೀವಿಯಾಗಿದ್ದನು. ಚಿನ್ನತುಂಬಳ ಶಾಸನ[೧೪೪]ದಲ್ಲಿ ಕಲಿಗಭೂಪನನ್ನು ''ಚಂದಲದೇವಿಯ ಗಂಧವಾರಣ ತ್ರಿಭುವನಮಲ್ಲದೇವ ಪಾದಸಳ್ಚರಣ ಗುಣಾಭರಣ'' ಎಂದು ಮುಂತಾಗಿ ಕರೆಯಲಾಗಿದೆ. ಈ ಕಲಿಗನನ್ನೇ ಬಂಕಾಪುರ ಶಾಸನವು[೧೪೫] ''ಮಹಾಮಂಡಳೇಶ್ವರ ಕಲಿಯಮರಸ''ನೆಂದು ಹೇಳಿ ''ಚನ್ದಲದೇವಿಯ ಗನ್ದವಾರಣಂ'' ಎಂದು ಕರೆದಿದೆ. ಇದರಿಂದ ಕಲಿಯಮರಸನು ಚಂದಲದೇವಿಗೆ ನಿಕಟವರ್ತಿಯಾಗಿದ್ದನೆಂದು ಸ್ಪಷ್ಟವಾಗುತ್ತದೆ.

ದುರ್ಜಯ ವಂಶದ ಎರ್ರನರೇಂದ್ರನ ರಾಣಿ ಕಾಮವಸಾನಿಯು ಕಾಕತೀಯ ಬೇತನಿಗೆ ಸಹಾಯ ಮಾಡಿ ಬಲ್ಲವರಾಯನೊಂದಿಗೆ ನಿಯೋಗ ಹೋಗಿ ಕಾಕತೀಯ ದೊರೆಯನ್ನು ಕಾಕತಿಯಲ್ಲಿ ನಿಲ್ಲುವಂತೆ ಮಾಡಿದಳೆಂದು ಗುಡೂರು ಶಾಸನ[೧೪೬]ವು ತಿಳಿಸುತ್ತದೆ. ಇದು ಆಕೆಯ ರಾಜಕೀಯ ದೂರದೃಷ್ಟಿಯನ್ನು (ಮುತ್ಸದ್ಧಿತನವನ್ನು) ತಿಳಿಸುತ್ತದೆ. ರಾಗಿಮುಸಲವಾಡ ಶಾಸನ[೧೪೭]ದಲ್ಲಿ ''ಶ್ರೀಮನ್ಮಹಾನಾಯಕಿ ದಣ್ಡನಾಯಕಿ ರತ್ನದೇವಿಯಕ್ಕಂಗಳು'' ಎಂದಿದೆ. ಅಂದರೆ ಪುರುಷರಂತೆ ಸ್ತ್ರೀಯರೂ ಸಹ ಯುದ್ಧದಲ್ಲಿ ಭಾಗವಹಿಸುತ್ತಿದ್ದರೆಂದು ಹೇಳಬಹುದು. ಸಿದ್ದಾಪುರ ಶಾಸನ[೧೪೮]ವು ''ಶ್ರೀಮಜ್ಜಯಕೇಸಿದೇವರುಂ ಮೈಳಲಮಹಾದೇವಿಯರುಂ ಬೊಗೂರ ನೆಲೆವೀಡಿನೊಳು ಸುಖಸಂಕಥಾವಿನೋದದಿಂ ರಾಜ್ಯಂಗೆಯುತ್ತಮಿರಲು'' ಎಂದಿದೆ. ಇದರಿಂದ ಆ ಕಾಲದ ಮಹಿಳೆಯರು ಸಹ ಆಡಳಿತದಲ್ಲಿ ಭಾಗವಹಿಸುತ್ತಿದ್ದರೆಂದು ಶಾಸನಗಳಿಂದ ವಿಧಿತವಾಗುತ್ತದೆ.

ಮಹಿಳೆ ಮತ್ತು ಧರ್ಮ :

ಕೌಟುಂಬಿಕ ಕ್ಷೇತ್ರವನ್ನು ಬಿಟ್ಟರೆ ಮಹಿಳೆಯರು ಕಾರ್ಯನಿರ್ವಹಿಸಲು ಅವಕಾಶವಿದ್ದ ಇನ್ನೊಂದು ಕ್ಷೇತ್ರವೆಂದರೆ ಧರ್ಮ. ಸಂಸ್ಕೃತಿಯ ವಿಕಾಸದಲ್ಲಿ ಮಹತ್ತರ ಪಾತ್ರವಹಿಸಿದ ಈ ಧರ್ಮವೆಂಬುದು ಮಾನವ ಧರ್ಮಸೂಚಕವಾಗಿದ್ದರೂ ಕಾಲಾಂತರದಲ್ಲಿ ಇದು ಮತಗಳಾಗಿ ಬೆಳೆಯಿತು. ಮೂರನೆಯ ಸೋಮೇಶ್ವರನ ಕಾಲದಲ್ಲಿ ನೆಲೆನಿಂತ ಇಂಥ ಜೈನ, ಶೈವ, ವೈದಿಕ ಮತ್ತು ಇತರ ಮತ ಪಂಥಗಳ ಕ್ರಿಯಾ ಕಲಾಪಗಳಲ್ಲಿ ಮಹಿಳೆಯರೂ (ಸ್ತ್ರೀಯರೂ) ತೊಡಗಿಸಿಕೊಂಡಿದ್ದನ್ನು ಶಾಸನಗಳಿಂದ ಅರಿಯಬಹುದಾಗಿದೆ.

ಶೈವಧರ್ಮ :

ಹೊಯ್ಸಳ ಬಲ್ಲಾಳನ ಅರಸಿ ತುಪ್ಪಲಭಾಗಲದೇವಿ ಬಲ್ಲೇಶ್ವರ ದೇವರ ನಿವೇದ್ಯಕ್ಕೆ ಪೂಜಾರಿಗಳಿಗೆ ದೇವಕಾರ್ಯಕ್ಕೆ ಕೆಲವು ಗದ್ಯಾಣಗಳನ್ನು ಬಿಟ್ಟು ಅವನ್ನು ವರ್ಷವರ್ಷಕ್ಕೆ ವೃದ್ಧಿಯಾಗುವಂತೆ ಉಪಯೋಗಿಸಬೇಕೆಂದೂ, ಅದರಲ್ಲಿ ಎರಡು ಹೊನ್ನನ್ನು ಮಲ್ಲೇಶ್ವರ ದೇವರಿಗೆ ಕೊಡಬೇಕೆಂದು ಕೊಂಡದ ಪೂಜಾರಿ ಲೋಕಿಮಯ್ಯನ ಕಾಲುತೊಳೆದು ಬಿಟ್ಟುಕೊಟ್ಟಿರುವಳು.[೧೪೯] ಮಹಾಮಂಡಳೇಶ್ವರ ಜಯಕೇಶಿದೇವ, ಪಟ್ಟಮಹಿಷಿ ಮೈಳಲದೇವಿಯೊಂದಿಗೆ ಕುಡಿಯೇಶ್ವರ ದೇವರಿಗೆ ಸುಂಕದಾನ ಬಿಟ್ಟಿರುವರು. ಅಲ್ಲದೆ ಈ ಜಯಕೇಶಿದೇವ, ಮೈಳಲದೇವಿಯರು ಮಕ್ಕಳಾದ ಯುವರಾಜ ಪೆರ್ಮಾಡಿದೇವ ಮತ್ತು ವಿಜಯಾದಿತ್ಯ ಕುಮಾರರೊಂದಿಗೆ ಮನ್ದೂರ ಸ್ವಯಂಭೂ ಕಲಿದೇವರಿಗೆ ಹಿರಿಯ ಕೋಲಲು ೬ ಮತ್ತರು ಭೂಮಿಯನ್ನು ಬಿಟ್ಟಿರುವರು.[೧೫೦] ಚಿಕ್ಕಶಾಂತಲೆ ಮತ್ತು ಮಗಳು ಬೊಪ್ಪಲೆ ಮಡಿಯಲು ಅವಳ ತಾಯಿ ಜಕ್ಕಿಯಬ್ಬೆ ಮಗಳು ಮೊಮ್ಮಗಳ ಹೆಸರಿನಲ್ಲಿ ಶಾಂತಲೇಶ್ವರ, ಬೊಪ್ಪಲೇಶ್ವರ ದೇಗುಲ ನಿರ್ಮಾಣ ಮಾಡಿದುದು ಕಂಡುಬರುತ್ತದೆ.[೧೫೧] ತ್ರಿಭುವನಮಲ್ಲದೇವನ ಅರಸಿ ರೆಬ್ಬಲದೇವಿ ತ್ರೈಪುರುಷದೇವಾಲಯಕ್ಕೆ ದಾನ ನೀಡಿದುದನ್ನು[೧೫೨] ನೋಡಬಹುದು.

ವೈದಿಕ ಧರ್ಮ:

ಕದಂಬ ಜಯಕೇಶಿಯ ಮಡದಿ ಮೈಳಲದೇವಿ ಗೂಗಿಕಟ್ಟೆಯಲ್ಲಿ ಕೇಶವ ದೇವರ ಪ್ರತಿಷ್ಠೆ ಮಾಡಿಸಿರುವಳು.[೧೫೩] ವಿಷ್ಣುವರ್ಧನನ ಪತ್ನಿಯಾದ ಬಮ್ಮಲದೇವಿ ನಾಗಮಂಗಲದಲ್ಲಿ ಶಂಕರನಾರಾಯಣ ದೇವಾಲಯ ಜೀರ್ಣೋದ್ಧಾರ ಮಾಡಿಸಿದಳು.[೧೫೪] ಈ ರೀತಿ ಸ್ತ್ರೀಯರು ವೈದಿಕ ಧರ್ಮಕ್ಕೂ ಪ್ರೋತ್ಸಾಹ ನೀಡಿದರು.

ಜೈನ ಧರ್ಮ:

ವಿಷ್ಣುವರ್ಧನನ ಪತ್ನಿ ಶಾಂತಲೆಯು ಬೆಳ್ಗೊಳ ತೀರ್ಥದಲ್ಲಿ 'ಸವತಿಗಂಧವಾರಣ' ಬಸದಿ ನಿರ್ಮಿಸಿ ಅಲ್ಲಿಯ ದೇವತಾಪೂಜೆ, ಮುನಿಗಳ ಆಹಾರ ದಾನಕ್ಕೋಸ್ಕರ 'ಕಲ್ಕಣಿನಾಡ ಮೊಟ್ಟೆನವಿಲೆ' ಗ್ರಾಮವನ್ನು ತನ್ನ ಗುರುಗಳಾದ ಪ್ರಭಾಚಂದ್ರ ಸಿದ್ಧಾಂತದೇವರಿಗೆ ಬಿಟ್ಟುಕೊಟ್ಟಿರುವಳು. ಅಲ್ಲದೆ 'ಎಳಸನಕಟ್ಟುವ ಕೆರೆಯಾಗಿ ಕಟ್ಟಿಸಿ ಸವತಿಗಂಧ ಹಸ್ತಿ ಬಸದಿಗೆ ಸರುಗಿಗೆ ದೇವಿಯರು ಜಿನಾಲಯಕ್ಕೆ ಬಿಟ್ಟರು' ಎಂಬ ಉಲ್ಲೇಖವಿದೆ.[೧೫೫] ಪತಿ ವಿಷ್ಣುವರ್ಧನನ್ನು ಬೇಡಿಕೊಂಡು ತಾನು ನಿರ್ಮಿಸಿದ ಸವಧಿಗಂಧವಾರಣ ಬಸದಿಗೆ ಶಾಂತಲದೇವಿ ಗಂಗಸಮುದ್ರದ ಕೆಳಗಿನ ನಡುಬಯಲಿನಲ್ಲಿ ೫೦ ಕೊಳಗ ಗದ್ದೆ ತೋಟವನ್ನು, ನಾಲ್ವತ್ತು ಗದ್ಯಾಣ ಹೊನ್ನನಿಕ್ಕಿ ಕಟ್ಟಿಸಿ ಚರುಂಗಿಗೆ ವಿಳಸನ ಕಟ್ಟಮುಮಂ ಗುರು ಪ್ರಭಾಚಂದ್ರರಿಗೆ ಬಿಟ್ಟುಕೊಟ್ಟಳು.[೧೫೬]

ಸಾಮಾನ್ಯವರ್ಗದ ಮಹಿಳೆಯರ ದಾನ :

ಉನ್ನತವರ್ಗದ ಮಹಿಳೆಯರಂತೆ ಸಾಮಾನ್ಯವರ್ಗದ ಮಹಿಳೆಯರ ಉಲ್ಲೇಖ ಶಾಸನಗಳಲ್ಲಿ, ಕಾವ್ಯಗಳಲ್ಲಿ ಹೆಚ್ಚಾಗಿ ಕಂಡುಬರುವುದಿಲ್ಲ. ಆದರೂ ಉನ್ನತವರ್ಗದ ಮಹಿಳೆಯರಂತೆ ಈ ಸಾಮಾನ್ಯವರ್ಗದ ಮಹಿಳೆಯರಿಗೆ ಸ್ವತಂತ್ರವಾಗಿ ದೇವಸ್ಥಾನ ನಿರ್ಮಾಣ ಮಾಡಿ ಅದರ ಪೂಜೆ ಪುನಸ್ಕಾರಕ್ಕೆ ದತ್ತಿ ಬಿಟ್ಟುಕೊಡುವಷ್ಟು ಯೋಗ್ಯತೆ ಇಲ್ಲದೆ ಹೋದರೂ ಕೈಲಾದ ದಾನ ಮಾಡಿದ ಗೌರವ ಅವರಿಗಿದೆ.

ಹಿರಿಯೊಕ್ಕಲ ಮಾಹಣ್ಣ ಕಾಳಿಮಗೇರಿಯ ಹೃಷಿಕೇಶವ ರಂಗಭೋಗಕ್ಕೆ ೩ ಬಾವಿಗಳನ್ನು ಅವನ ಬ್ರಾಹ್ಮಣಿ ಮಾಳಿಯಕ್ಕ ದೇವಕಾರ್ಯಕ್ಕೆ ತನ್ನ ಮೇರೆಯ ೫ ಮತ್ತರು ಹೊಲವನ್ನು ಬಿಟ್ಟಿರುವಳು. ಇದರೊಂದಿಗೆ ಮಾಳಿಯಕ್ಕ ಕಾಳ್ಪತ್ತಿಯ ೧೨ ಮತ್ತರು ಭೂಮಿಯನ್ನು ದೇವರಂಗಭೋಗಕ್ಕೆ ''ತನ್ನಿಂ ಪರೋಕ್ಷದೊಳು'' ಬಿಟ್ಟಂತೆ ಗದುಗಿನ ಶಾಸನವೊಂದು ತಿಳಿಸಿದೆ. ಬ್ರಾಹ್ಮಿಣಿ ಕಂಚಿಕಬ್ಬೆ ''ತಕ್ಕರ ಮಗ್ಗಿಗರ ಭೋಜನಕ್ಕೆ ಹೊನ್ನಿಗೆ ವರುಷಕ್ಕೆ ಇಪ್ಪಣ ವೃದ್ಧಿಯಿಂದ ೫ ಗದ್ಯಾಣ ಹಣವನ್ನು ಕೊಟ್ಟಿರುವ ವಿಷಯ ಬೆಟದೂರ ಶಾಸನದಲ್ಲಿದೆ.[೧೫೭] ಹೀಗೆ ಅಗ್ರಹಾರಗಳಲ್ಲಿ ವಾಸಿಸುತ್ತಿದ್ದ ಬ್ರಾಹ್ಮಣರ ಮಡದಿಯರೂ ದಾನಕಾರ್ಯಗಳಲ್ಲಿ ಭಾಗವಹಿಸುತ್ತಿದ್ದುದು ಕಂಡುಬರುತ್ತದೆ. ಗಂದಾಧರಯ್ಯ ನಾಯಕನ ಮಗಳು ಕಾಮಿಯಕ್ಕನು ಹೆಗ್ಗೆರೆಯಲ್ಲಿ ೨ ಮತ್ತರು ಎರೆಭೂಮಿಯನ್ನು ಸತ್ರಕ್ಕಾಗಿ ಬಿಡುತ್ತಾಳೆ ಮತ್ತೆ ಅವರಣ್ಣನಾದ

ಶ್ರೀಪತಿನಾಯಕನ ಪತ್ನಿ ಜಾಮಿಕವ್ವೆಯು ಸಾಸಿರ್ವ್ವರ ಕಯ್ಯಲ್ಲಿ ಸರ್ವನಮಸ್ಯವಾಗಿ ಪಡೆದು ಶ್ರೀಮೂಲಸ್ಥಾನ ದೇವರ ನಿವೇದ್ಯಕ್ಕೆ ತಮ್ಮ ಸ್ಥಳವಾದ ಹೆಗ್ಗೆರೆಯಲ್ಲಿ ಕಾಮಿಯಕ್ಕನ ಭಾಗ ೧ ಮತ್ತರು ೪೫೦ ಕಮ್ಮ ಭೂಮಿಯನ್ನು ಬಿಡುತ್ತಾಳೆ. ಇದರ ಉತ್ಪತ್ತಿಯಲ್ಲಿ ದೇವರ ಶ್ರೀಖಂಡಕ್ಕೆ ವರ್ಷಂ ಪ್ರತಿ ಒಂದು ಹೊನ್ನು ಕಳೆದು ಮಿಕ್ಕ ಆದಾಯವನ್ನು ಶ್ರೀ ಮೂಲಸ್ಥಾನದೇವರ ನಿವೇದ್ಯಕ್ಕೆ ಬಳಸಬೇಕೆಂದು ವಿಧಿಸಿರುತ್ತಾಳೆ.[೧೫೮] ಮತ್ತು ಶ್ರೀಮಲ್ಲಿಕಾರ್ಜುನ ದೇವರಿಗೆ ಬಡವರ ಬೇಲಿಯ ಸೊಸೆ ಗಂಗಿಯಕ್ಕ ಒಂದು ಮನೆಯನ್ನು ಬಿಡುತ್ತಾಳೆ.[೧೫೯] ಈ ರೀತಿ ಸಾಮಾನ್ಯ ಮಹಿಳೆಯೂ ಕೂಡ ಮೂರನೆಯ ಸೋಮೇಶ್ವರನ ಕಾಲದಲ್ಲಿ ಧಾರ್ಮಿಕ ಕ್ಷೇತ್ರದಲ್ಲಿ ಭಾಗವಹಿಸುತ್ತಿದ್ದರೆಂದು ಹೇಳಬಹುದು.

ಸಂಪ್ರದಾಯ ನಂಬಿಕೆಗಳು :

ದೈನಂದಿನ ಹಲವಾರು ಪದ್ಧತಿಗಳಿಗೆ ಕೆಲವು ಕಲ್ಪನೆಗಳು, ಉದ್ದೇಶಗಳು ಸೇರಿ ಅದೊಂದು ಸಂಪ್ರದಾಯಕವಾಗಿ ರೂಪುಗೊಳ್ಳುತ್ತದೆ. ಮನುಷ್ಯನ ಅಂತರಂಗದ ಪ್ರತಿಕ್ರಿಯೆಗಳನ್ನೇ ನಂಬಿಕೆಗಳೆನ್ನಬಹುದು. ಹೀಗೆ ಮಾನವನು ಈ ಸಂಪ್ರದಾಯ ಮತ್ತು ನಂಬಿಕೆಗಳ ಆಧಾರದ ಮೇಲೆ ತನ್ನ ಜೀವನವನ್ನು ರೂಢಿಸಿಕೊಂಡಿದ್ದಾನೆ. ಅವು ಆಯಾದೇಶ, ಕಾಲ, ಸಮಾಜಗಳ ಹಿನ್ನೆಲೆಯಲ್ಲಿ ಬೆಳೆದು ಬಂದಿವೆ. ಇಂಥ ಸಂಪ್ರದಾಯ ಮತ್ತು ನಂಬಿಕೆಗಳ ಹುಟ್ಟಿಗೆ ಧಾರ್ಮಿಕ ಪದ್ಧತಿಯೇ ಕಾರಣವೆಂದು ಸಮಾಜಶಾಸ್ತ್ರಜ್ಞರು ಹೇಳುತ್ತಾರೆ. ಈ ಹಿನ್ನೆಲೆಯಲ್ಲಿ ದಾನ-ವ್ರತ, ನದಿ-ತೀರ್ಥಸ್ಥಾನ, ಪಾಪ-ಪುಣ್ಯಗಳ ಕಲ್ಪನೆ ಬೆಳೆದು ಬಂದಿದೆ.

ದಾನ-ವ್ರತ :

ದಾನ ಬಿಡುವ ಪದ್ಧತಿಯು ಆಗಿನ ಜನರ ಜೀವನದ ಒಂದು ಅವಿಭಾಜ್ಯ ಅಂಗವಾಗಿತ್ತು. ಅದು ವ್ಯಕ್ತಿಯ ಶ್ರೇಯಸ್ಸು ಮತ್ತು ಪುಣ್ಯಾರ್ಜನೆಗಿರುವ ಒಂದು ಮುಖ್ಯ ಸಾಧನವಾಗಿದ್ದಿತು. ರಾಜರು ವಿವಿಧ ಅಧಿಕಾರಿಗಳು, ಸ್ತ್ರೀಯರು ದಾನಬಿಟ್ಟ ಉಲ್ಲೇಖಗಳನ್ನು ಕಡ್ಲೇವಾಡ,[೧೬೦] ನವಿಲೆ,[೧೬೧] ಲಕ್ಷ್ಮೇಶ್ವರ,[೧೬೨] ನಾರಂಗವಾಡಿ,[೧೬೩] ಉರುವಕೊಂಡ,[೧೬೪] ಕರಾಡಖೇಡ,[೧೬೫] ಗಂಗಾಪುರ,[೧೬೬] ಏರಿಗೆ,[೧೬೭] ಹುಣಸಗಿ[೧೬೮] ಮುಂತಾದ ಶಾಸನಗಳಲ್ಲಿ ಕಾಣುತ್ತೇವೆ. ಪ್ರಭುವರ್ಗದವರು ಹೆಚ್ಚಾಗಿ ಪುತ್ರೋತ್ಸವ, ಪಟ್ಟಾಭಿಷೇಕ, ಶ್ರಾದ್ಧ ಮೊದಲಾದ ಸಂದರ್ಭದಲ್ಲಿ ದಾನ-ಧರ್ಮ ಮಾಡುತ್ತಿದ್ದರು. ದಾನವನ್ನು ಬಿಡಲು ಹಬ್ಬ-ಹರಿದಿನ, ಸೂರ್ಯಗ್ರಹಣ, ಚಂದ್ರಗ್ರಹಣ, ಸಂಕ್ರಾಂತಿಯ ದಿನಗಳು ಪ್ರಶಸ್ತವೆನ್ನುವ ನಂಬಿಕೆ ಇತ್ತು. ದಾನವನ್ನು ಸಾಮಾನ್ಯವಾಗಿ ದೇವಾಲಯಗಳ ಪರಿಸರದಲ್ಲಿಯೇ ಬಿಟ್ಟಿರುವುದನ್ನು ಆ ಕಾಲದ ಶಾಸನಗಳಲ್ಲಿ ಕಾಣುತ್ತೇವೆ. ಇಮ್ಮಡಿ ಜಗದೇಕಮಲ್ಲ ಪಟ್ಟ ಬಂಧೋತ್ಸವ ಮಾಡಿಸಿಕೊಂಡ ಸಮಯದಲ್ಲಿ ಅಣಂದೂರಿನ ನಾರಣೇಶ್ವರ ದೇವರ ದೇವಾಲಯಕ್ಕೆ ಕಳಶಾರೋಹಣವನ್ನು ಮಾಡಿ ಆ ದೇವರ ಪೂಜೆಗೆ ಹಾಗೂ ತಪೋಧನರ ಅನ್ನದಾನಕ್ಕೆ ಭೂದಾನ ಮಾಡಿದನೆಂದು ಅಣಂದೂರು ಶಾಸನ[೧೬೯]ವು ತಿಳಿಸುತ್ತದೆ.

ನದಿಸ್ನಾನ- ತೀರ್ಥಸ್ನಾನ :

ಹಬ್ಬ-ಹರಿದಿನ ಮತ್ತು ಗ್ರಹಣ ಸಂದರ್ಭದಲ್ಲಿ ನದೀ ಮತ್ತು ತೀರ್ಥಸ್ನಾನ ಮಾಡುವುದು ಒಂದು ಸಂಪ್ರದಾಯವಾಗಿ ಬೆಳೆದು ಬಂದಿದೆ. ಗಂಗಾನದಿಯು ಪವಿತ್ರವಾದುದೆಂಬ ಭಾವನೆ ಭಾರತೀಯರಲ್ಲಿದೆ. 'ಗಂಗಾಸ್ನಾನ-ತುಂಗಾಪಾನ'ವೆಂಬ ನಾಣ್ಣುಡಿಯೂ ಇದೇ ಅರ್ಥವನ್ನು ಸೂಚಿಸುತ್ತದೆ. ದೂರದ ಉತ್ತರಕ್ಕೆ ಹೋಗಿ ಸ್ನಾನ ಮಾಡುವುದು ಸರ್ವಕಾಲದಲ್ಲಿಯೂ ಅಸಂಭವ, ಆದ್ದರಿಂದಲೇ ನಮ್ಮವರು ನದಿ ನೀರನ್ನೆಲ್ಲಾ ಗಂಗೆ ಎಂದೇ ಕರೆದಿದ್ದಾರೆ. ಇಂಥ ಸ್ಥಳದಲ್ಲಿರುವ ದೇವಾಲಯಕ್ಕೆ ದತ್ತಿ ಬಿಡುವುದನ್ನು ಅವರು ಶ್ರೇಷ್ಠವೆಂದೇ ತಿಳಿದಿದ್ದರು. ಮಹಾಮಂಡಳೇಶ್ವರ ಇರುಂಗೋಳ ಚೋಳ ಮಹಾರಾಜನು ಭೀಮೇಶ್ವರ ದೇವರಿಗೆ ತುಂಗಭದ್ರಾ ನದೀ ತೀರದಲ್ಲಿ ದಾನ ಬಿಡುವುದು[೧೨೦], ಮುದ್ದಕನ ಚಟ್ಟನು ಮತ್ತು ಭೂವನು ಮಾರ್ಗಶಿರ ಸೋಮಗ್ರಹಣದಂದು ''ತುಂಗಭದ್ರಾದೇವಿಯ ಸಂನಿಧಿಯಲೆಡೆವಟ್ಟವೆಪ್ಪತ್ತಱ ಬಳಿಯ ನಾಗಾರ್ಜುನದ ಬ್ರಹ್ಮೇಶ್ವರ ದೇವರ ನಂದಾ ದೀವಿಗೆಗೆ ಬಿಟ್ಟ ಹಂದರಹಣ''[೧೨೧] ಇದನ್ನೇ ಸೂಚಿಸುತ್ತದೆ. ಅಲ್ಲದೇ ಮೂರನೆಯ ಸೋಮೇಶ್ವರನ ಮಾನಸೋಲ್ಲಾಸದಲ್ಲಿ ಕೂಡಾ ಗಂಗೆಯು ನದಿಗಳಲ್ಲಿ ಶ್ರೇಷ್ಠವಾದುದು. ಯಮುನಾ ಮತ್ತು ನರ್ಮದಾ ನದಿಗಳು ಶುಭಕರವಾದುವು. ತಾಪೀನದಿಯು ಪುಣ್ಯಕರವಾದುದು. ಗೌತಮಿ ನದಿಯು ಪಾಪವಿನಾಶಿನಿಯಾದುದು. ಸರಸ್ವತಿಯಲ್ಲಿ ಮೂರು ಸಲ ಸ್ನಾನ ಮಾಡಿದರೆ, ಯಮುನಾ ನದಿಯಲ್ಲಿ ಐದು ಸಲ ಸ್ನಾನ ಮಾಡಿದರೆ, ಗಂಗೆಯಲ್ಲಿ ಒಂದು ಸಲ ಸ್ನಾನ ಮಾಡಿದರೆ ಪಾಪ ಪರಿಹಾರವಾಗುತ್ತದೆ. ತುಂಗಭದ್ರಾ ಮತ್ತು ನರ್ಮದೆಯ ದರ್ಶನ ಮಾತ್ರದಿಂದ ಪಾಪ ನಾಶವಾಗುತ್ತದೆ. ಈ ನದಿಗಳು ಮತ್ತು ಇತರ ನದಿಗಳು, ಸಾಗರಗಳು, ಸರೋವರಗಳು, ಜಲಾಶಯಗಳು, ಕೊಳಗಳು, ಕುಂಡಗಳು, ಕೂಪಗಳು, ಗಿರಿಪ್ರವಾಹಗಳು, ಪುಷ್ಕರಗಳು, ಪುಣ್ಯಪ್ರವಾದವುಗಳು. ಈ ಎಲ್ಲ ಪುಣ್ಯತೀರ್ಥಗಳಲ್ಲಿ ಸ್ನಾನಮಾಡಿ ಪಾಪವಿಮೋಚನೆಯನ್ನು ಹೊಂದಬೇಕು[೧೨೨] ಎಂದು ಹೇಳಿದೆ. ಇದರಿಂದ ನದೀಸ್ನಾನ - ತೀರ್ಥಸ್ನಾನಕ್ಕೆ ಅಂದಿನ ಜನರು ನೀಡಿದ ಮಹತ್ವವನ್ನು ನಾವು ಅರಿಯಬಹುದು.

ಪಾಪ-ಪುಣ್ಯ:

ಸಮಾಜದ ಸ್ವಾಸ್ಥ್ಯವನ್ನು ಕಾಪಾಡುವ ಮೂಲೋದ್ದೇಶದಿಂದ ಪಾಪ-ಪುಣ್ಯ, ಸ್ವರ್ಗ-ನರಕಗಳ ಕಲ್ಪನೆ ಮೊದ ಮೊದಲು ಜನ್ಮ ತಾಳಿರಬಹುದಾದರೂ, ಒಂದು ನಂಬುಗೆಯಾಗಿ ಬಹುಪ್ರಾಚೀನ ಕಾಲದಿಂದಲೂ ಬೆಳೆದು ಬಂದಿದೆ. ಎಲ್ಲ ಪ್ರಾಚೀನ ಋಷಿಗಳು ಪಾಪವನ್ನು ಸ್ಥೂಲವಾಗಿ ಮಹಾಪಾತಕ ಮತ್ತು ಉಪಪಾತಕಗಳೆಂದು ಎರಡು ವಿಧವಾಗಿ ವಿಂಗಡಿಸಿದ್ದಾರೆ.[೧೨೩] ಮೂರನೆಯ ಸೋಮೇಶ್ವರನ ಶಾಸನಗಳ ಫಲಶ್ರುತಿಯಲ್ಲಿ ಸಾಮಾನ್ಯವಾಗಿ ಪಂಚಮಹಾಪಾತಕ ಎಂದು ಹೇಳಲಾಗಿದೆ. ಬಿಟ್ಟಿರುವ ದಾನಗಳನ್ನು ಕಾಪಾಡಿದವರಿಗೆ ಶ್ರೇಯಸ್ಸು ಹಾಗೂ ಅವುಗಳನ್ನು ಅಪಹರಿಸಿದವರಿಗೆ

ಪಾಪಗಳು ಒದಗುತ್ತವೆ ಎಂಬುದನ್ನು ಪುರಾಣಗಳಿಂದಾದರಿಸಿದ ಪ್ರಸಿದ್ಧ ಶ್ಲೋಕಗಳ ಮೂಲಕ ಹೇಳಿವೆ.[೧೨೪] ಆದರ ಉದ್ದೇಶ ಮುಖ್ಯವಾಗಿ ಕೊಟ್ಟದಾನ ಅಪಹೃತವಾಗದೇ ಉಳಿಯಬೇಕು ಎನ್ನುವುದಾಗಿದೆ. ಪಾಪಗಳಿಂದುಂಟಾದ ದೋಷಗಳ ನಿವಾರಣೆಗಾಗಿಯೇ ದಾನ, ಧರ್ಮ, ವ್ರತಗಳಂತ ಆಚರಣೆಗಳು ಹುಟ್ಟಿಕೊಂಡಿರಬೇಕು.

ಶಕುನಗಳು :

ಆಶಾಜೀವಿಯಾದ ಮಾನವನು ಯಾವಾಗಲೂ ತನ್ನ ಜೀವನದ ಪ್ರತಿಯೊಂದು ಚಟುವಟಿಕೆಗಳಲ್ಲಿ ಯಶಸ್ಸನ್ನು, ಮಂಗಳವನ್ನು ಬಯಸುವುದು ಸಹಜ. ಅಂತೆಯೇ ಅವನು ತನ್ನ ಜೀವನದ ಕಾರ್ಯಕಲಾಪಗಳ ಆಗುಹೋಗುಗಳ, ಭವಿಷ್ಯಾಪೇಕ್ಷೆಯಿಂದ ಶುಭಾಶುಭಗಳನ್ನು ತಿಳಿಯಲು ಭವಿಷ್ಯ, ಶಕುನ ಇತ್ಯಾದಿಗಳನ್ನು ಅವಲಂಬಿಸಿರುತ್ತಾನೆ. ಇವುಗಳು ಮಾನವನ ಕಾರ್ಯ ಫಲಿತಾಂಶದ ಮಾನಸಿಕ ತುಮುಲವನ್ನು ಹಗುರಗೊಳಿಸುವ ಭವಿಷ್ಯ ಸೂಚಕಗಳಾಗಿವೆ ಎನ್ನಬಹುದು. ಮುಂದಾಗಬಹುದಾದ ಶುಭಾಶುಭ ಘಟನೆಗಳ ಸಂಗತಿಗಳ ಪೂರ್ವಸೂಚನೆ ಕೊಡುವುದೇ ಶಕುನಶಾಸ್ತ್ರ.[೧೨೫] ಶಕುನಗಳು ಯಾವುದೊಂದು ಕಾರ್ಯ ಘಟನೆಗಳ ಕುರಿತು ಮುಂದಾಗಬಹುದಾದ ಯಾವುದೇ ವಿವರಣೆಯನ್ನು ನೀಡದೇ ಒಳಿತಾಗುವುದು, ಕೆಡುಕಾಗುವುದು, ಸಿದ್ಧಿಸುವುದು, ಸಿದ್ಧಿಸುವುದಿಲ್ಲ ಎಂಬ ನಕಾರಾತ್ಮಕ ಇಲ್ಲವೇ ಸಕಾರಾತ್ಮಕ ಸೂಚನೆಗಳನ್ನು ಮಾತ್ರ ನೀಡುತ್ತವೆ.

ಶಕುನಗಳಲ್ಲಿ ಮುಖ್ಯವಾಗಿ ಅವುಗಳ ಫಲಾಫಲಗಳನ್ನು ಗಮನಿಸಿ ಶುಭಶಕುನ (ಮಂಗಲ ಶಕುನ), ಅಪಶಕುನ (ಅಮಂಗಲ ಶಕುನ) ಎಂದು ಎರಡು ವಿಧವಾಗಿ ವಿಂಗಡಿಸಬಹುದು. ಧಾರ್ಮಿಕ ನಿಯಮಗಳಲ್ಲಿ ಅಡಕವಾದ ನಂಬಿಕೆಗಳು ಧಾರ್ಮಿಕ ನಿಯಮದಾವರಣದಿಂದ ಹೊರತಾದ ನಂಬಿಕೆಗಳು ಎಂದು ಶಕುನಗಳಲ್ಲಿ ಎರಡು ಬಗೆಯನ್ನು ಗುರುತಿಸಬಹುದು. ಧಾರ್ಮಿಕ ನಿಯಮದಲ್ಲಿನ ನಂಬಿಕೆಗಳು ಬಹುಪಾಲು ಶಿಷ್ಟಸಂಪ್ರದಾಯಕ್ಕೆ ಸೇರಿದವು. ಅವುಗಳನ್ನು ಜೋತಿಷ್ಯವೆಂದೂ, ಎರಡನೆಯದನ್ನು ಜನಸಾಮಾನ್ಯರ ಪರಂಪರೆಯಿಂದ ಬಂದದ್ದೆಂದೂ ಹೇಳಬಹುದು.[೧೨೬] ಮೂರನೆಯ ಸೋಮೇಶ್ವರನು ತನ್ನ ಮಾನಸೋಲ್ಲಾಸದಲ್ಲಿ ಮಂಗಲಶಕುನ, ಅಮಂಗಲ ಶಕುನ, ಶ್ವಾನಶಕುನ, ನರಿ ಹಲ್ಲಿ ಕಾಗೆ ಶಕುನ, ಪೋತಕೀ ಶಕುನ, ಪಿಂಗಳಾ ಶಕುನ, ವಾಕ್ ಶೃತಿ ಶಕುನಗಳ ವಿವರಣೆಯನ್ನು ನೀಡಿದ್ದಾನೆ.[೧೨೭] ಇವು ಪ್ರಯಾಣಕ್ಕೆ ಸಂಬಂಧಿಸಿದವುಗಳೆನ್ನಬಹುದು. ಚಾವುಂಡರಾಯನ 'ಲೋಕಾಪಕಾರಂ'ನಲ್ಲಿಯೂ ಕೂಡ ಕೀಟಶಕುನ, ಯಾತ್ರಾಶಕುನ, ಸ್ವಪ್ನಶಕುನ, ಜನನ-ಮರಣದ ಶಕುನಗಳನ್ನು ಕಾಣುತ್ತೇವೆ.[೧೨೮]

ಮೂರನೆಯ ಸೋಮೇಶ್ವರನು ಸನ್ಯಾಸಿ, ಚಂಡಾಲರು, ಕಿವಿ-ಮೂಗು ಮೊದಲಾದ ಅಂಗಗಳಿಲ್ಲದವರು, ಕೂದಲಿಲ್ಲದ ಬೋಳು ತಲೆಯವರು, ಕಪ್ಪುಬಟ್ಟೆಯನ್ನುಟ್ಟಿರುವವರು, ಕೂದಲನ್ನು ಕೆದರಿಕೊಂಡಿರುವವರು, ಮುಟ್ಟಾಗಿರುವವರು, ಗರ್ಭಿಣಿಯರು, ವಿಧವೆಯರು, ಹುಚ್ಚರು, ನಪುಂಸಕರು, ಕುರುಡರು, ಕಿವುಡರು ಈ ಜನರ

ದರ್ಶನವಾದಾಗ ಯಾವಾಗಲೂ ಪ್ರಯಾಣ ಹೋಗಬಾರದು ಎಂದು ಹೇಳುತ್ತಾನೆ. ಮತ್ತು ಗಂಡುನಾಯಿ ಮುಂದುಗಡೆ ಮೂತ್ರಿಸುತ್ತ ಹೋದರೆ ಆಗ ಪ್ರಯಾಣ ಮಾಡುತ್ತಿರುವವನಿಗೆ ಅಭೀಪ್ಸಿತ ಕಾರ್ಯವು ನಿಶ್ಚಯವಾಗಿ ಸಿದ್ದಿಸುತ್ತದೆಂದೂ, ಅಂತರೀಕ್ಷದಲ್ಲಾಗಲೀ, ಮರದ ಮೇಲಾಗಲಿ, ತಲೆಯ ಮೇಲಾಗಲಿ[೮೯] ಸುಸ್ವರದಿಂದ ಕಾಗೆಯು ಕೂಗಿದರೆ ಸರ್ವಕಾಲದಲ್ಲಿಯೂ ಶುಭಪ್ರದ ಎಂದು ಹೇಳುತ್ತಾನೆ. ಇಂತಹ ಕೆಲ ಶಕುನಗಳನ್ನು ಬಹುತೇಕ ಜನ ಇಂದಿಗೂ ನಂಬುತ್ತಾರೆ. ಉದಾ: ಬೆಕ್ಕು ಅಡ್ಡ ಹಾಯ್ದು ಹೋದರೆ ಒಳ್ಳೆಯದಲ್ಲ, ತುಂಬಿದ ಕೊಡ ಶುಭ ಇತ್ಯಾದಿ. ಕೆಲ ಶಕುನಗಳನ್ನು ಬಹುತೇಕ ಜನ ಈಗಲೂ ಗೊಣಗುವರು. ಆದರೆ ಅವುಗಳಿಗೆ ಕಟ್ಟುಬಿದ್ದು ಅನುಸರಿಸುವುದಿಲ್ಲವೆನ್ನಬಹುದು. ಅನುಸರಿಸುವವರಿದ್ದರೂ ಬೆರಳೆಣಿಕೆಯಷ್ಟು. ಒಂದು ಸಮಾಜ ನಾಗರೀಕತೆಯತ್ತ ವಾಲಿದಂತೆಲ್ಲ ತಾರ್ಕಿಕವಲ್ಲದ ನಂಬಿಕೆಗಳು ಶಿಥಿಲಗೊಂಡು ಒಂದೊಂದಾಗಿ ಕೈಬಿಟ್ಟು ಹೋಗುವ ಸಾಧ್ಯತೆಯುಂಟು ಎಂದು ಹೇಳಬಹುದು.

ಹಬ್ಬಗಳು :

'ಪರ್ವ' ಎಂಬ ಸಂಸ್ಕೃತ ಪದವು 'ಪಬ್ಬ', 'ಹಬ್ಬ'ವೆಂದು ಕನ್ನಡದಲ್ಲಿ ರೂಪುಗೊಂಡಿವೆ. ಪರ್ವಗಳಲ್ಲಿ ಪಂಚಪರ್ವಗಳೆಂಬುದಿದ್ದು, ಡಾ. ಚಿದಾನಂದ ಮೂರ್ತಿಯವರು ಅಂದು ದೇವಾಲಯಗಳಲ್ಲಿ ನಡೆಯುತ್ತಿದ್ದ ಎರಡು ಪೂಜಾ ಉತ್ಸವಗಳಾದ ಚೈತ್ರ ಮತ್ತು ಪವಿತ್ರಗಳ ಜೊತೆಗೆ ಮಂತ್ರಪುಷ್ಪ ದವನಾರೋಪಣ ಫಲ ಪೂಜೆ, ಕಾರ್ತಿಕ, ಕೃತಿಕಾ, ದೀಪಪೂಜೆ ಮತ್ತು ವಸಂತೋತ್ಸವಗಳು ಸೇರಿ ಐದು ಹಬ್ಬಗಳೆಂದು ಹೇಳಿರುವುದನ್ನು ಡಾ. ಎಸ್.ಕೆ.ಕೊಪ್ಪಾ ಅವರು ಒಪ್ಪದೆ ಡಾ. ಬೆಟಗೇರಿ ಕೃಷ್ಣಶರ್ಮ ಹೇಳುವ ಒಂದು ವರ್ಷದ ಅವಧಿಯಲ್ಲಿ ಬರುವ ಹನ್ನೆರಡು ಹುಣ್ಣಿಮೆ, ಅಮವಾಸ್ಯೆ ಮತ್ತು ಸಂಕ್ರಮಣಗಳ ಜೊತೆಗೆ ಪ್ರತಿ ಪಕ್ಷದಲ್ಲಿಯೂ ಬರುವ ಅಷ್ಟಮಿ, ಚತುರ್ದಶಿ, ತಿಥಿಗಳೆರಡನ್ನು ಸೇರಿಸಿ ಪಂಚಪರ್ವಗಳೆಂದು ಕರೆದಿರುವುದರ ಕಡೆಗೆ ಹೆಚ್ಚು ಒತ್ತನ್ನು ನೀಡಿದ್ದಾರೆ.[೯೦]

ಮೂರನೆಯ ಸೋಮೇಶ್ವರನ ಕಾಲದ ಶಾಸನಗಳಲ್ಲಿ ಕಾರ್ತಿಕ ಪೌರ್ಣಮೆ[೯೧] (ಗೌರಿಹುಣ್ಣಿಮೆ), ಕಾರ್ತಿಕದ ಅಮವಾಸ್ಯೆ[೯೨] (ದೀಪಾವಳಿ), ಶ್ರಾವಣಶುದ್ಧ[೯೩] (ನಾಗರಪಂಚಮಿ), ಉತ್ತರಾಯಣ ಸಂಕ್ರಾಂತಿ ಮಹಾಪರ್ವ,[೯೪] ಮಾಘದ ಪೌರ್ಣಮೆ[೯೫] (ಭಾರತ ಹುಣ್ಣಿಮೆ), ಆಷಾಡದಮವಾಸ್ಯೆ[೯೬] (ನಾಗರ ಅಮವಾಸ್ಯೆ), ಶ್ರಾವಣದಮವಾಸ್ಯೆ[೯೭] (ಬೆನಕನ ಅಮವಾಸ್ಯೆ) ಜೇಷ್ಠದ ಹುಣ್ಣಿಮೆ[೯೮] (ಕಾರ ಹುಣ್ಣಿಮೆ) ಮುಂತಾದವುಗಳು ಉಲ್ಲೇಖಗೊಂಡಿವೆ. ಡಾ. ಎಸ್.ಕೆ.ಕೊಪ್ಪಾ ಅವರು ಗುರುತಿಸಿರುವಂತೆ ಸಂಕ್ರಮಣ, ವನದುಯ್ಯಲ(ನಾಗರಪಂಚಮಿ), ದೀಪಾವಳಿ, ನೂಲಹುಣ್ಣಿಮೆ ಮತ್ತು ಯುಗಾದಿಗಳೇ ಪಂಚಪರ್ವಗಳಾಗಿದ್ದು[೯೯] ಈ ಕಾಲದ ಶಾಸನಗಳಲ್ಲಿ ಮೂರು ಪರ್ವಗಳ ಹೆಸರುಗಳನ್ನು ಕಾಣಬಹುದು.

ಆಹಾರ ಪಾನೀಯಗಳು :

ಪ್ರಸಿದ್ಧವಾದ ೬೪ ಕಲೆಗಳಲ್ಲಿ ಆಹಾರ-ಪಾನೀಯಕ್ಕೆ ಸಂಬಂಧಿಸಿದ 'ವಿಚಿತ್ರಶಾಖಯಾಷಭಕ್ಷ ವಿಕಾರ ಕ್ರಿಯಾ' ಮತ್ತು 'ಪಾನಕರಸರಾಗಾಸವ ಯೋಜನಾ' ಗಳೂ ಸೇರಿವೆ.[೧೯೦] ಪ್ರಾಚೀನ ಭಾರತದಲ್ಲಿ ಭೋಜನವನ್ನು ಒಂದು ಭೋಗ (ಅನ್ನ ಭೋಗ)ವಾಗಿ ಪರಿಗಣಿಸಿದ್ದರಿಂದ ಅಡುಗೆಯನ್ನು ಒಂದು ಕಲೆಯಾಗಿ ಕಲಿಯುತ್ತಿದ್ದರು. ನಳ-ಭೀಮಸೇನರು ಪಾಕಶಾಸ್ತ್ರದಲ್ಲಿ ಪರಿಣಿತರಾಗಿದ್ದರಿಂದ ಅವರ ಹೆಸರುಗಳಿಂದಲೇ ಆ ಶಾಸ್ತ್ರಗಳು ರಚನೆಗೊಂಡವು.[೧೯೧] ಮೂರನೆಯ ಸೋಮೇಶ್ವರನ ಮಾನಸೋಲ್ಲಾಸ ಮತ್ತು ಎರಡನೆಯ ಚಾವುಂಡರಾಯನ ಲೋಕೋಪಹಾರಗಳಲ್ಲಿ ಪಾಕಶಾಸ್ತ್ರಕ್ಕೆ ಸಂಬಂಧಿಸಿದ ಭಾಗಗಳಿವೆ.

ಮೂರನೆಯ ಸೋಮೇಶ್ವರನ ಶಾಸನಗಳು ಎಲ್ಲಿಯೂ ನೇರವಾಗಿ ಆಹಾರಾದಿ ವಿಷಯಗಳನ್ನು ಹೇಳಿಲ್ಲ. ದಾನ ಬಿಡುವ ಮತ್ತು ವ್ಯಾಪಾರಾದಿ ಸಂದರ್ಭಗಳಲ್ಲಿ ದವಸ-ಧಾನ್ಯಗಳ ಪ್ರಸ್ತಾಪ ಅನೇಕ ಕಡೆ ಬಂದಿದೆ. ಆಹಾರ ಪದಾರ್ಥಗಳಾದ ಭತ್ತ,[೧೯೨] ಜೋಳ,[೧೯೩] ಜೀರಿಗೆ,[೧೯೪] ಮೆಣಸು, ಅರಿಶಿಣ,[೧೯೫] ಬಾಳೆ[೧೯೬] ಮುಂತಾದವು ಶಾಸನಗಳಲ್ಲಿ ಉಲ್ಲೇಖಿಸಲ್ಪಟ್ಟಿವೆ. ದೇವಾಲಯಗಳ ನೈವೇದ್ಯಕ್ಕೆ, ಬ್ರಾಹ್ಮಣರ ಭೋಜನಕ್ಕೆ ಅನೇಕ ದಾನ-ದತ್ತಿಗಳನ್ನು ಬಿಡಲಾಗಿದೆ. ಆದರೆ ಅಲ್ಲಿನ ಆಹಾರ ವೈವಿಧ್ಯತೆಯ ವಿಷಯವನ್ನು ಶಾಸನಗಳು ಉಲ್ಲೇಖಿಸುವುದಿಲ್ಲ.

ಮೂರನೆಯ ಸೋಮೇಶ್ವರನ ಮಾನಸೋಲ್ಲಾಸ ಗ್ರಂಥವು ಆಹಾರ ವೈವಿಧ್ಯತೆಯನ್ನು ಕುರಿತಂತೆ ಸ್ಥೂಲವಾದ ವಿವರಣೆಯನ್ನು ನೀಡುತ್ತದೆ. ಅಲ್ಲದೆ ವಿವಿಧ ಬಗೆಯ (ಶಾಖಾಹಾರ, ಮಾಂಸಾಹಾರ) ಆಹಾರ ಮಾಡುವ ಪದ್ಧತಿಯನ್ನು ಸಹ ತಿಳಿಸುತ್ತದೆ. ದೊಡ್ಡ ಜಾತಿಯ ಹೆಸರು, ಬಿಳಿ ಅವರೆ, ಕಡಲೆ, ಕಪ್ಪು ಉದ್ದು, ಕಾಡು ಕಡಲೆ ಮತ್ತು ಅಲಸಂದೆ ಈ ಏಳು ಧಾನ್ಯಗಳನ್ನು ಸೂಪ (ಸಾರು) ತಯಾರಿಸಲು ಉಪಯೋಗಿಸಬೇಕು.[೧೯೭] ರಕ್ತಶಾಲಿ, ಮಹಾಶಾಲಿ, ಗಂಧಶಾಲಿ, ಕಲಿಂಗಕ, ಮುಂಡಶಾಲಿ, ಸ್ಥೂಲಶಾಲಿ ಮತ್ತು ಸಷಷ್ಠಿಕಶಾಲಿ ಅಕ್ಕಿಗಳ ಅನ್ನವನ್ನು ಭೋಗಿಸಬೇಕು.[೧೯೮] ಅಲ್ಲದೆ ಮಂಡಿಕಾ (ಮಂಡಿಗೆ),[೧೯೯] ಸೋಹಲ(ಪೂರಿ), ಕಾಸಾಲ (ಪಾಯಸಪೂರಿ),[೨೦೦] ಉದ್ದಿನ, ಅಲಸಂದೆಯ ಮತ್ತು ಬಟಾಣಿಯ ದೋಸೆ[೨೦೧]ಗಳನ್ನು, ಕಟಕರ್ಣ (ಗಾರಿಗೆ ಅಥವಾ ಕರಿಗಡಬು),[೨೦೨] ಇಡರಿಕಾ (ಇಡ್ಲಿ),[೨೦೩] ವಟಿಕಾ (ವಡೆ)[೨೦೪] ಕ್ಷೀರ ಪ್ರಕಾರ (ಖೀರ)[೨೦೫] ಮಾಡುವ (ತಯಾರಿಸುವ) ಬಗೆಯನ್ನು ಮತ್ತು ಜಿಂಕೆ, ಮೊಲ, ಕುರಿ, ಮೀನು, ಇಲಿ, ಹಂದಿ, ಆಡು, ವಿವಿಧ ಪಕ್ಷಿಗಳು, ಆಮೆ, ಏಡಿ ಮುಂತಾದ ಪ್ರಾಣಿಗಳ ಮಾಂಸದಿಂದ ಚಕ್ಕುಲಿ, ವಡೆ, ಕವಚಂದಿ,ಪುಯಲ ಭಡಿತ್ರಕ, ಕೃಷ್ಣಪಾಕ, ಭೂಕ್ಷಿಕ, ಕೋಶಲೀ, ಪೂರಭಟ್ಟಾಕ ಪಂಚವರ್ಣೀ, ಅಂತ್ರಶುಂಠಕ, ಮಂಡಲೀಯ, ವರ್ಣಶುಂಠಕ, ಉಪಖಂಡಕ, ಖಾರಖಂಡ, ನಂದ್ಯಾವರ್ತ, ಘೃತಕರ್ಕಟ ಮುಂತಾದ ಆಹಾರವನ್ನು (ಅಡಿಗೆಯನ್ನು) ತಯಾರಿಸುತ್ತಿದ್ದರು.

ಸೋಮೇಶ್ವರನ ಕಾಲದಲ್ಲಿ ವಿವಿಧ ಬಗೆಯ ಪಾನೀಯಗಳನ್ನು ತಯಾರಿಸುತ್ತಿದ್ದರು. ಮಾನಸೋಲ್ಲಾಸ ಗ್ರಂಥವು ಅವುಗಳನ್ನು ತಯಾರಿಸುವ ವಿಧವನ್ನೂ ಸಹ ತಿಳಿಸುತ್ತದೆ. ಹೊಚ್ಚ ಹೊಸ ಬೆಣ್ಣೆಯನ್ನು ಸ್ವಚ್ಛವಾಗಿ ತೊಳೆದು, ನೀರು

ಬೆರಸದ ತುಪ್ಪದ ಪಾತ್ರೆಯಲ್ಲಿಟ್ಟು ಮಂದವಾದ ಬೆಂಕಿಯಲ್ಲಿ ಕಾಯಿಸಬೇಕು. ಅದು ಚೆನ್ನಾಗಿ ಕಾಯ್ದಾಗ ಗೋಧಿ ಕಾಳುಗಳನ್ನು ಹಾಕಬೇಕು. ವೀಳೆಯದೆಲೆಯನ್ನು ಹಾಕಿ ಕೆಳಗಿಳಿಸಬೇಕು. ಅಕ್ಕಿಯನ್ನು ತೊಳೆದ ನೀರಿನಲ್ಲಿ ಹುಣಸೆ ಹಣ್ಣಿನ ಹುಳಿಯನ್ನು ಬೆರೆಸಿ, ಸ್ವಲ್ಪ ಮಜ್ಜಿಗೆ ಹಾಗೂ ಸಕ್ಕರೆಯನ್ನು ಸೇರಿಸಬೇಕು. ಏಲಕ್ಕಿ ಪುಡಿ, ಹಸಿಶುಂಠಿಯ ರಸವನ್ನು ಸೇರಿಸಿ, ಹಿಂಗಿನ ಒಗ್ಗರಣೆ ಹಾಕಿದರೆ ಅದಕ್ಕೆ 'ವ್ಯಂಜನ'ವೆನ್ನುತ್ತಾರೆ. ಸ್ವಚ್ಛವಾದ ಯಲಚಿ(ಬೋರೆ) ಹಣ್ಣನ್ನು ಆಮ್ಲದಲ್ಲಿ ಮತ್ತು ಉಪ್ಪಿನಲ್ಲಿ ಬೆರೆಸಿ, ಹಿಂಗಿನ ಅಥವಾ ಜೀರಿಗೆಯ ಒಗ್ಗರಣೆ ಹಾಕಿದರೆ 'ಧೂಪಕಾಂಜಿಕ' ಎನ್ನುತ್ತಾರೆ. ಮೊಸರನ್ನು ನೀರಿಲ್ಲದೆ ಕಡೆದರೆ 'ಉದಸ್ವಿತ್', ಅರ್ಧ ನೀರು ಹಾಕಿ ಕಡೆದರೆ 'ಅನ್ವಿತ್' ಎಂದೂ ಕರೆಯಲಾಗಿದೆ. ಅಲ್ಲದೆ ದಿವ್ಯ, ಅಂತರೀಕ್ಷ, ನಾದೇಯ, ನೈರ್ಝರ, ಸಾರಸ, ಭೌಮ, ಚಾಂಡ, ತಾಡಾಗ ಮತ್ತು ಔದ್ಭಿಧ ಎಂಬ ಒಂಬತ್ತು ಜಲಭೇದಗಳನ್ನು ಉಲ್ಲೇಖಿಸುತ್ತಾನೆ. ಮತ್ತು ವಾರ್ಕ್ಷ (ಎಳನೀರು), ಪಿಂಡವಾಸ, ಪುಷ್ಪವಾಸ ಪಾನೀಯಗಳ ಬಗ್ಗೆ ತಿಳಿಸುತ್ತಾ ಶರತ್ಕಾಲದಲ್ಲಿ ದಿವ್ಯಜಲವನ್ನು, ಹೇಮಂತ ಕಾಲದಲ್ಲಿ ನದೀ ಜಲವನ್ನು, ಶಿಶಿರ ಕಾಲದಲ್ಲಿ ತಡಾಗ ಜಲವನ್ನು, ವಸಂತ ಕಾಲದಲ್ಲಿ ಸರೋಜಲವನ್ನು, ಬೇಸಿಗೆಯಲ್ಲಿ ನಿರ್ಝಲವನ್ನು ಮತ್ತು ಮಳೆಗಾಲದಲ್ಲಿ ಭೌಮಜಲವನ್ನು ಕುಡಿಯಬೇಕು. ಹಂಸೋದಕ ಮತ್ತು ಪಥ್ಯಕರವಾದ ನಾರಿಕೇಲ(ಎಳನೀರು) ಜಲವನ್ನು ರುಚಿಗೆ ತಕ್ಕಹಾಗೆ ಕುಡಿಯಬೇಕು ಎಂದು ಹೇಳುತ್ತಾನೆ.[೨೦೬]

ಇದೇ ರೀತಿಯಾಗಿ ಸೋಮೇಶ್ವರನು ಆಹಾರವನ್ನು ಸೇವಿಸುವ ವಿಧಿ ವಿಧಾನ ಮತ್ತು ಕ್ರಮವನ್ನೂ ಸಹ ತನ್ನ ಮಾನಸೋಲ್ಲಾಸದಲ್ಲಿ ತಿಳಿಸಿದ್ದಾನೆ. ಪೂರ್ವದಿಕ್ಕಿನ ಕಡೆಗೆ ಮುಖಮಾಡಿ ಕುಳಿತು ಊಟ ಮಾಡಿದರೆ ಹೆಚ್ಚಿನ ಆಯುಷ್ಯವನ್ನು, ದಕ್ಷಿಣ ದಿಕ್ಕಿನ ಕಡೆ ಮುಖಮಾಡಿ ಕುಳಿತು ಊಟ ಮಾಡಿದರೆ ಹೆಚ್ಚಿನ ಕೀರ್ತಿಯನ್ನು, ಪಶ್ಚಿಮ ದಿಕ್ಕಿನ ಕಡೆಗೆ ಕುಳಿತು ಊಟ ಮಾಡಿದರೆ ವಿಪುಲವಾದ ಸಂಪತ್ತನ್ನು, ಉತ್ತರದ ಕಡೆ ಮುಖಮಾಡಿದರೆ ಸತ್ಯವಾಕ್ಯದ ಫಲವನ್ನು ಪಡೆಯುತ್ತಾನೆಂದು ಹೇಳುತ್ತಾನೆ. ಮತ್ತು ವಸಂತ ಋತುವಿನಲ್ಲಿ ಖಾರವನ್ನು ಭೋಗಿಸಬೇಕು. ಬೇಸಿಗೆಯಲ್ಲಿ ಮಧುರವೂ, ಶೀತಲವೂ ಆದ ಆಹಾರವನ್ನು ತೆಗೆದುಕೊಳ್ಳಬೇಕು. ಮಳೆಗಾಲದಲ್ಲಿ ಉಪ್ಪು ಪ್ರಧಾನವಾದುದನ್ನೂ, ಶರತ್ಕಾಲದಲ್ಲಿ ಸಿಹಿಯನ್ನು ಸೇವಿಸಬೇಕು. ಹೇಮಂತ ಕಾಲದಲ್ಲಿ ತೈಲಮಿಶ್ರಿತ ಬಿಸಿ ಆಹಾರವನ್ನು, ಶಿಶಿರದಲ್ಲಿ ಬಿಸಿ ಆಮ್ಲವನ್ನು ಸೇವಿಸಬೇಕು[೨೦೭] ಎಂದು ಆಹಾರದ ವೈವಿಧ್ಯತೆಯ ವಿಷಯವನ್ನು ತನ್ನ ಮಾನಸೋಲ್ಲಾಸ ಗ್ರಂಥದಲ್ಲಿ ತಿಳಿಸಿದ್ದಾನೆ.

ವೀಳ್ಯ ಭಾರತೀಯರ ಜೀವನದಲ್ಲಿ ಬಹಳ ಹಿಂದಿನಿಂದಲೂ ಹಾಸುಹೊಕ್ಕಾಗಿದೆ. ದೇವಾಲಯಕ್ಕೆ ಬಿಡುವ ದಾನಗಳಲ್ಲಿ, ದೇವರಿಗೆ ನಡೆಸುವ ಸೇವೆಗಳಲ್ಲಿ ವೀಳ್ಯ - ಅಡಕೆಗಳೂ ಸೇರಿವೆ.[೨೦೮] ಮಾನಸೋಲ್ಲಾಸವು ತಾಂಬೂಲದ ವರ್ಣನೆಗಾಗಿಯೇ ಒಂದು ಅಧ್ಯಾಯವನ್ನು ಮೀಸಲಾಗಿಟ್ಟಿದೆ.[೨೦೯] ಇದರಲ್ಲಿ ನೈಲವರ್ತಿಪುರದಲ್ಲಿ, ಈಶ್ವರ ಪುರದಲ್ಲಿ ಇಲ್ಲವೆ ಕಂಡಿಕಾಪುರದಲ್ಲಿ ಬೆಳೆದು ಚೆನ್ನಾಗಿ ಬೆಳೆದ ಅಡಿಕೆಯನ್ನು, ನದಿ ನೀರಿನಲ್ಲಿ ಬೆಳೆದ ಬಿಳಿಯ ಬಣ್ಣದ ಎಲೆಗಳನ್ನು,

ಕರ್ಪೂರದ ಸ್ಪಟಿಕದಂತಿರುವ ಸುಣ್ಣವನ್ನು, ಪರಿಮಳಯುಕ್ತ ಕಾಚಿನ ಚೂರ್ಣವನ್ನು, ಕಸ್ತೂರಿ ಚೂರ್ಣದೊಂದಿಗೆ ಬೆರೆಸಿ ಜಗಿಯಬೇಕು ಎಂದು ತಾಂಬೂಲದ ವರ್ಣನೆಯನ್ನು ಸೋಮೇಶ್ವರನು ತಿಳಿಸುತ್ತಾನೆ.

ಉಡುಗೆ-ತೊಡುಗೆ- ಆಭರಣ (ವೇಷ ಭೂಷಣಗಳು):

ರಾಜರ, ಶ್ರೀಮಂತ ಕುಲೀನರ, ಮಾಂಡಳಿಕರ ವೇಷ ಭೂಷಣಗಳು ಆಡಂಭರಪೂರ್ಣವಾಗಿದ್ದವು. ರತ್ನಖಚಿತ ಕಂಠಹಾರಗಳೂ, ಮಿಸುನಿಯ ಶಿರೋಭೂಷಣಗಳೂ, ಅವರ ಮೈ-ಕೈಗಳನ್ನು ನಿತ್ಯವೂ ಅಲಂಕರಿಸುತ್ತಿದ್ದವು. ರೇಷ್ಮೆಯ ನೂಲುಗಳಿಂದ ನೇಯ್ದ, (ಕುರಿ ಮುಂತಾದ ಪ್ರಾಣಿಗಳು) ಉಣ್ಣೆಯಿಂದ ಸಿದ್ಧವಾದ ಮತ್ತು ನಾನಾ ಬಣ್ಣಗಳಿಂದ ಕೂಡಿದ ಪಟ್ಟಿಕಾ, ಪಟೀಪಟ್ಟಿ, ಪಟ್ಟಿ, ವಿವಿಧ ರೀತಿಯಿಂದ ಶುಭಕರವಾಗಿರುವ ಅಂಗಿ, ರುಮಾಲು, ವಿವಿಧಾಕಾರದ ಉತ್ತರೀಯಗಳನ್ನು ಧರಿಸುತ್ತಿದ್ದರು. ಅಲ್ಲದೆ ಐದು, ಏಳು, ಒಂಭತ್ತು ಸರಗಳನ್ನು ಮತ್ತು ಮಾಣಿಕ್ಯಗಳಿಂದ ಸುಂದರವಾದ ಪದಕಗಳಿಂದ ಜೋಡಿಸಿ ಧರಿಸುತ್ತಿದ್ದರು. ಬ್ರಹ್ಮಸೂತ್ರ, ಬಂಧುರ, ಕೇಯೂರ, ಅಂಗದ, ರವಿಮಂಡಲ, ನಂದ್ಯಾವರ್ತ, ನವಗ್ರಹ, ವಜ್ರವೇಷ್ಟಕ, ತ್ರಿಹೀರಕ, ಶಕ್ತಿಮುದ್ರಿಕೆ, ಮುಕ್ತಾತಾಡಕ, ದ್ವಿರಾಜಿತ, ತ್ರಿರಾಜಿತ, ಪೂರ್ಣಮಧ್ಯ, ಅಲರ್ಣಕ, ಕುಂಡಲ, ಹಂಸತಿಲಕ (ಬೈತಲೆಯಲ್ಲಿ ಧರಿಸಲು ಯೋಗ್ಯವಾದ), ಪದ್ಮ (ಜಡೆಬಿಲ್ಲೆ), ಚೂಡಿ (ಜಟೆಯ ಆಭರಣ), ಮುಕುಲ (ಕಂಠಾಭರಣ), ಸರಿಕೆ (ಸರಿಗೆ), ಕಂಚುಕ, ಚುಡಕ, ಅರ್ಧಚುಡ, ಕಾಂಚಿರಾಮ (ನಡುಪಟ್ಟಿ), ಕಟಿಕ, ಪಾದಾಲ, ಪಾದಘರ್ಘರಿಕಾ, ರಾಢಕ, ಅಂದುಕ (ಕಾಲಂದುಗೆ), ಶೇಖರ, ಶಿರೋವೇಷ್ಟನ, ಮಸ್ತಕಭೂಷಣ, ದಲಕ ಮುಂತಾದ ಆಭರಣಗಳನ್ನು ಸ್ತ್ರೀ ಮತ್ತು ಪುರುಷರು ಧರಿಸಬೇಕೆಂದು ಸೋಮೇಶ್ವರನು ತನ್ನ ಮಾನಸೋಲ್ಲಾಸದಲ್ಲಿ ತಿಳಿಸುತ್ತಾನೆ.[೨೦೦] ಶುಕ್ರಗ್ರಹದಲ್ಲಿ (ವಾರದಲ್ಲಿ) ಹೊಸ ಬಟ್ಟೆ ಧರಿಸುವುದರಿಂದ ಆಯುಷ್ಯ ವೃದ್ಧಿಯಾಗುತ್ತದೆ. ಮನೆಗಳಲ್ಲಿಯ ಉತ್ಸವಗಳಲ್ಲಿ ವಿವಾಹದಲ್ಲಿ, ಪರಭೂಪಾಲದರ್ಶನದಲ್ಲಿ ಇತರ ಉತ್ಸವಗಳಲ್ಲಿ ನೃತ್ಯಗೀತಾದಿ ವಿನೋದಗಳಲ್ಲಿ, ದಾನಕರ್ಮಗಳಲ್ಲಿ, ಯಜ್ಞದಲ್ಲಿ, ಯುದ್ಧ ಮಹೋತ್ಸವದಲ್ಲಿ ಹಾಗೂ ಜಯದ ಸಮಯದಲ್ಲಿ ಹೊಸ ಬಟ್ಟೆ ಧರಿಸಲು ನಕ್ಷತ್ರ ನೋಡಬೇಕಾಗಿಲ್ಲ ಎಂದು ಮಾನಸೋಲ್ಲಾಸವು ತಿಳಿಸುತ್ತದೆ.[೨೦೧] ಅಲ್ಲದೆ ದೇವಾಲಯಗಳಲ್ಲಿ ಕಂಡುಬರುವ ಸ್ತ್ರೀ ಪುರುಷರ ವಿಗ್ರಹಗಳನ್ನು ಅವಲೋಕಿಸಿದಾಗ ಮೇಲೆ ಉಲ್ಲೇಖಿಸಿರುವ ಕೆಲವೊಂದು ಆಭರಣಗಳು ಕಂಡುಬರುವುದರಿಂದ ಇವು ಬಳಕೆಯಲ್ಲಿದ್ದವೆಂದು ಊಹಿಸಬಹುದಾಗಿದೆ. ಅಲ್ಲದೆ ನಯಸೇನನೂ ಕೂಡಾ ತನ್ನ ಧರ್ಮಾಮೃತದಲ್ಲಿ ಮುಕುಟಮಣಿಕುಂಡಲ, ಹಾರ, ಕೇಯೂರ, ತೋಳಮಣಿ, ಕಂಕಣಮುದ್ರಿಕೆ ಮೊದಲಾದ ಆಭರಣಗಳನ್ನು, ಬಡವರು ನೂಲಿನ ಸೀರೆಗಳನ್ನು ಮತ್ತು ತಾಳಿ, ಕಾಜಿನ ತೊಡವು, ಪೊಸೆದ ನೂಲಿನಲ್ಲಿ ಪೋಣಿಸಿ ಮಾಡಿದ ಮುತ್ತಿನ ಮತ್ತು ಮಣಿಯ ಹಾರಗಳನ್ನು ಧರಿಸುತ್ತಿದ್ದರು. ಮುತ್ತು ಸಾಮಾನ್ಯ ಮುತ್ತುಗಳಾಗಿರುತ್ತಿದ್ದವು. ಬಡವರು ನೂಲಿನ ತೊಡವುಗಳನ್ನು ಧರಿಸುತ್ತಿದ್ದಂತೆ ತೋರುತ್ತದೆ. ಹೆಣ್ಣುಮಕ್ಕಳು ಕಣ್ಣಿಗೆ ಕಾಡಿಗೆ ಹಚ್ಚಿಕೊಳ್ಳುತ್ತಿದ್ದರು ಎಂದು ನಯಸೇನ ಹಲವಾರು ಕಡೆ ಉಲ್ಲೇಖಿಸಿದ್ದಾನೆ. ಮುಡಿಯಿಲ್ಲದ ಶೃಂಗಾರ

ವ್ಯರ್ಥವೆಂದು ಅಂದಿನವರ ಭಾವನೆ. ಕೂದಲುಗಳನ್ನು ಪಣಿಗೆಯಿಂದ ಹಿಕ್ಕಿ ಬಗೆ ಬಗೆಯ ಮಾಟದ ಮುಡಿ ಕಟ್ಟುತ್ತಿದ್ದರು. ಒಬಿಲ್ಮುಡಿ, ಸೋರ್ಮುಡಿ,ಪೂಮುಡಿ, ಮೊದಲಾದ ಬೇರೆ ಬೇರೆ ಮುಡಿಗಳ ಹೆಸರುಗಳನ್ನು ಕೊಟ್ಟಿದ್ದಾನೆ. ಆದರೆ ಸಾಮಾನ್ಯ ಗಂಡಸರ ಭೂಷಣಾಧಿಗಳ ಬಗೆಗೆ ಹೆಚ್ಚಿನ ವಿವರ ನಯಸೇನನಲ್ಲಿಲ್ಲ.[೨೦೨]

ಮನರಂಜನೆಗಳು :

ಜನರ ಮನರಂಜನೆಯ ಸಾಧನಗಳ ಉಲ್ಲೇಖ ಮಾನಸೋಲ್ಲಾಸದಲ್ಲಿ ತುಂಬಾ ಸವಿಸ್ತಾರವಾಗಿ ಬರುತ್ತದೆ. ಇದರಲ್ಲಿ ಅವನು ಇಪ್ಪತ್ತು ವಿನೋದ, ಇಪ್ಪತ್ತು ಕ್ರೀಡೆಗಳ ಬಗ್ಗೆ ಉಲ್ಲೇಖಿಸಿದ್ದಾನೆ. ಶಸ್ತ್ರವಿನೋದ, ಶಾಸ್ತ್ರವಿನೋದ, ಗಜವಾಹ್ಯಾಲೀವಿನೋದ, ತುರಗವಾಹ್ಯಾಲೀವಿನೋದ, ಅಂಕವಿನೋದ, ಮಲ್ಲವಿನೋದ, ಕುಕ್ಕುಟ ವಿನೋದ, ಲಾವಕವಿನೋದ, ಮೇಷವಿನೋದ, ಮಹಿಷವಿನೋದ, ಪಾರಾವತವಿನೋದ, ಸಾರಮೇಯವಿನೋದ, ಶ್ಯೇನವಿನೋದ, ಮತ್ಸ್ಯವಿನೋದ, ಮೃಗಯಾವಿನೋದ, ಗೀತವಿನೋದ, ವಾದ್ಯವಿನೋದ, ನೃತ್ಯವಿನೋದ, ಕಥಾವಿನೋದ, ಚಮತ್ಕಾರವಿನೋದ, ಕ್ರೀಡೆಗಳಾದ ಬೂಧರಕ್ರೀಡೆ, ವನಕ್ರೀಡೆ, ಅಂದೋಲನಕ್ರೀಡೆ, ಸೇಚನಕ್ರೀಡೆ, ಜಲಕ್ರೀಡೆ, ಶಾದ್ವಲಕ್ರೀಡೆ, ವಾಲುಕಾಕ್ರೀಡೆ, ಜೋತ್ಸ್ನಾಕ್ರೀಡೆ, ಸಸ್ಯಕ್ರೀಡೆ, ಮದಿರಾಪಾನಕ್ರೀಡೆ, ಪ್ರಹೇಳಿಕಾಕ್ರೀಡೆ, ಚದುರಂಗಕ್ರೀಡೆ, ಪಾಶಕಕ್ರೀಡೆ, ವರಾಟಿಕಾಕ್ರೀಡೆ, ಫಣಿದಾಕ್ರೀಡೆ, ಫಂಜಿಕಾಕ್ರೀಡೆ, ತಿಮಿರಕ್ರೀಡೆ, ವೀರಕ್ರೀಡೆ, ಪ್ರೇಮಕ್ರೀಡೆ, ಸುರತಕ್ರೀಡೆಗಳ ವಿವರಣೆಯನ್ನು ಮಾನಸೋಲ್ಲಾಸದಲ್ಲಿ ನೀಡುತ್ತಾನೆ.[೨೦೩] ಇವುಗಳಲ್ಲಿ ಕೆಲವೊಂದು ಕ್ರೀಡೆ ವಿನೋದಗಳು ಇಂದಿಗೂ ಪ್ರಚಲಿತದಲ್ಲಿದ್ದುದನ್ನು ಕಾಣಬಹುದು.

ಮೃಗಯಾ ವಿನೋದದಲ್ಲಿ ಬರುವ ದೀಪಮೃಗಗಳ ವಿವರ, ಕನ್ನಡ ಕಾವ್ಯಗಳಲ್ಲಿ ಪದೇ ಪದೇ ಕಾಣಿಸಿಕೊಳ್ಳುವ ದೀಪದ ಮೃಗಗಳ ಬಗೆಗಿನ ನಮ್ಮ ತಿಳುವಳಿಕೆಯನ್ನು ಹೆಚ್ಚಿಸುತ್ತದೆ. ''ಕುಕ್ಕುಟ ವಿನೋದ''ದಲ್ಲಿ ಗೆದ್ದವರು ಸೋತವರ ಹೆಗಲನ್ನೇರಿ ಕುಳಿತು ಪರಿಹಾಸ್ಯದ ಮಾತುಗಳನ್ನಾಡಬೇಕು. ಸೋತವರನ್ನು ನಾಚಿಕೆಗೀಡುಮಾಡಬೇಕು. ಪರಿಹಾಸ್ಯದ ಅರ್ಥ ತುಂಬಿರುವ, ಮರ್ಮಬೇಧಕವಾದ ಬೈಗುಳಗಳಿಂದ ಕೂಡಿದ ತ್ರಿಪದಿ ಪದ್ಯಗಳನ್ನು ರಾಗಸಹಿತವಾಗಿ ಸೋತವರನ್ನು ಉದ್ದೇಶಿಸಿ ಹಾಡಬೇಕು. ಸೋತವರ ಧ್ವಜದ ಸ್ತಂಭವನ್ನು ಜೋರಾಗಿ ಕಿತ್ತುಕೊಂಡು.... ಗೆಲುವನ್ನು ಗಳಿಸಿದ ಹುಂಜವನ್ನು ಹೆಣ್ಣಾನೆಯ ಮೇಲೆ ಕುಳ್ಳಿರಿಸಿ ಪಟ್ಟಣದ ಬೀದಿಗಳಲ್ಲಿ ಮೆರವಣಿಗೆ ಮಾಡಿಸಬೇಕು. ಸೋತವನ..... ಹಣೆ, ತೋಳು, ಎದೆಗಳ ಮೇಲೆ ಗೆದ್ದವನು ಕುಂಕುಮದಿಂದ ಹುಂಜದ ಗುರುತುಗಳನ್ನು ಮಾಡಬೇಕು ಎಂದು ಹೇಳಿರುವ ವಿವರಗಳು ತುಂಬಾ ಕುತೂಹಲಕಾರಿಯಾಗಿವೆ. ''ಗಜವೈಹಾರಿ ವಿನೋದ'' ಅಧ್ಯಾಯದಲ್ಲಿ ಆನೆಯಿಂದ ಅಟ್ಟಿಸಿಕೊಂಡು ಓಡುವ ಸ್ಪರ್ಧೆಯ ವಿವರವಿದೆ. ''ತುರುಗವಾಹ್ಯಾಲೀ ವಿನೋದ'' ಪ್ರಕರಣದಲ್ಲಿ ಗೆದ್ದಿಕಾ ಬಳಸಿ ಆಡುವ ಆಟದ ವಿವರಿವಿದೆ.[೨೦೪]

''ಗೀತ ವಿನೋದಾಧ್ಯಾಯ''ವು ದೇಶಿ ವಿಷಯಗಳಿಗೆ ಸಂಬಂಧಿಸಿದಂತೆ ಅನೇಕ ಮಹತ್ವದ ಅಂಶಗಳನ್ನೊಳಗೊಂಡಿದೆ. ಇಲ್ಲಿ ದ್ರಾವಿಡ ಛಂದಸ್ಸಿನ ಅಂಶಗಣ ವಿಚಾರವನ್ನು ಹೇಳಿ, ಕನ್ನಡದ ತ್ರಿಪದಿ ಲಕ್ಷಣವನ್ನು ಪ್ರಸ್ತಾಪಿಸುತ್ತ ಕನ್ನಡ ಪದ್ಯವನ್ನೇ ಉದಾಹರಣೆಯಾಗಿ ಕೊಟ್ಟುದುದು ವಿಶೇಷವೆನಿಸಿದೆ. ''ಕುಕ್ಕುಟ ವಿನೋದಾಧ್ಯಾಯ''ದಲ್ಲಿ ಗೆದ್ದವರು ಸೋತವರನ್ನು ಪರಿಹಾಸ್ಯಕ್ಕೆ ಗುರಿಪಡಿಸಲು ತ್ರಿಪದಿಯನ್ನು ಹಾಡಬೇಕೆಂದು ಸೂಚಿಸಲಾಗಿದೆ.[೨೧೫]

''ಮದಿರಾಪಾನ ಕ್ರೀಡಾ'' ಅಧ್ಯಾಯದಲ್ಲಿ ಅನೇಕ ಪ್ರಕಾರದ ಮದಿರೆಗಳ ಲಕ್ಷಣ ಹೇಳುತ್ತ ಕುಡಿಯುವ ಮೊದಲು ಎಡಗೈಯ ಅನಾಮಿಕ ಬೆರಳಿನಿಂದ ಮಧ್ಯದ ಹನಿಗಳನ್ನು ತಲೆಯ ಮೇಲೆ ಎರಚಬೇಕು ಎಂಬ ಆಚರಣೆಯನ್ನು ಸೂಚಿಸಲಾಗಿದೆ.[೨೧೬] ವೀರಪುರುಷರಿಗೆ 'ವೀರಕ್ರೀಡೆ'ಯನ್ನು ಹೇಳಿದ್ದಾನೆ.

ಸಾರ್ವಜನಿಕ ಚಟುವಟಿಕೆಗಳು :

ಮಾನವನ ಎಲ್ಲ ಸಾರ್ವಜನಿಕ ಚಟುವಟಿಕೆಗಳ ಮೂಲಪ್ರೇರಣೆ ಧರ್ಮವೇ ಆಗಿದೆ. ಮಾನವನಿಗೆ ಲೌಕಿಕ ಕಟ್ಟಳೆಗಳನ್ನು ಪಾಲಿಸಿದ್ದರಷ್ಟರಿಂದಲೇ ಸಮಾಧಾನ ಸಿಗಲಿಲ್ಲ. ಅದರಿಂದಾಗಿ ಅವನ ವೈಯಕ್ತಿಕ ಹಂಬಲ ಸಾಮಾಜಿಕ ಜೀವನದಲ್ಲಿ ಸತ್ಕಾರ್ಯದ ಮೂಲಕ ಪುಣ್ಯ ಗಳಿಸುವುದಾಯಿತು. ಇದಕ್ಕೆ ಜಾತಿ, ಮತ ಪಂಥಗಳಾವವೂ ಅಡ್ಡ ಬರಲಿಲ್ಲ. ಸೇವೆ ಮತ್ತು ತ್ಯಾಗ ವೃತ್ತಿಯಿಂದ ಸಮರ್ಪಣಾಭಾವವನ್ನು ಮೆರೆದಿದ್ದಾನೆ. ಒಂದು ಶಾಸನ ಇದನ್ನೇ 'ಪರಹಿತವೃತ್ತಿ' ಎಂದು ಯಥಾರ್ಥವಾಗಿ ಬಣ್ಣಿಸಿದೆ.[೨೧೭] ಇದರಿಂದ ಅನೇಕ ದೇವಾಲಯ, ಬಾವಿ, ಕೆರೆ-ಕಟ್ಟೆ, ಸತ್ರ, ಅರವಟ್ಟಿಗೆಗಳು ನಿರ್ಮಾಣಗೊಂಡುದುದಲ್ಲದೆ, ಅವುಗಳ ಸುವ್ಯವಸ್ಥೆಯ ಕಾರ್ಯವೂ ಮುಂದುವರೆಯಿತು. ಈ ಕೆಲಸ ಕಾರ್ಯಗಳಿಗೆ ಮೇಲು-ಕೀಳೆನ್ನದೆ, ಬಡವ-ಬಲ್ಲಿದರೆನ್ನದೆ ಆ ಕಾಲದ ಜನ ಉದಾರವಾಗಿ ದಾನ-ದತ್ತಿಗಳನ್ನು ನೀಡಿದ್ದಾರೆ.

ಮಾನವನ ಜೀವನಾಧಾರದ ಮೂಲ ಅಗತ್ಯಗಳಲ್ಲಿ ಗಾಳಿ, ಅನ್ನ, ನೀರು ಪ್ರಮುಖ ನೈಸರ್ಗಿಕ ಸಂಪನ್ಮೂಲಗಳಾಗಿವೆ. ಇವುಗಳ ಉಪಯುಕ್ತತೆ ಜನವಸತಿ ಹೆಚ್ಚಿದಂತೆಲ್ಲ ಹೆಚ್ಚಿ ಹೊಸ ಆಯಾಮಗಳನ್ನು ಪಡೆದುಕೊಂಡಿತು. ಅವುಗಳಲ್ಲಿ ನಮ್ಮ ಪ್ರಾಚೀನರು ನೀರಿನ ಪೂರೈಕೆಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಿದ್ದಾರೆ. ''ಕನ್ನಡಿಗರ ಔದಾರ್ಯ ಮುಖ್ಯವಾಗಿ ಪ್ರಕಟವಾಗಿರುವುದು ಒಂದು ದೇವಸ್ಥಾನ ನಿರ್ಮಾಣದಲ್ಲಿ ಮತ್ತೊಂದು ತಟಾಕ ನಿರ್ಮಾಣದಲ್ಲಿ'' ಎಂಬ ಮಾತು ಅಕ್ಷರಶಃ ಸತ್ಯವಾಗಿದೆ.[೨೧೮] ಯಾವ ವ್ಯಕ್ತಿಯು ಕಟ್ಟಿಸಿದ ಕೆರೆಯಲ್ಲಿ ಹಸುಗಳು, ಪ್ರಾಣಿಗಳು, ಪಕ್ಷಿಗಳು, ಮನುಷ್ಯರು, ನೀರನ್ನು ಕುಡಿದು ತೃಪ್ತರಾಗುವರೋ ಅವನು ಅಶ್ವಮೇಧಯಾಗದ ಫಲವನ್ನು ಪಡೆಯುತ್ತಾನೆಂದು ಮಹಾಭಾರತವು ಹೇಳುತ್ತದೆ.[೨೧೯] ಈ ಕಾಲದ ಶಾಸನಗಳಲ್ಲಿಯೂ ಅನೇಕ ಕೆರೆ, ಬಾವಿಗಳ ಪ್ರಸ್ತಾಪ ಬಂದಿದೆ. (ವಿವರಗಳಿಗೆ ಅಧ್ಯಾಯ- ೫ ಆರ್ಥಿಕ ಪರಿಸ್ಥಿತಿ ನೋಡಿರಿ).

ಅರವಟ್ಟಿಗೆ :

ಪ್ರಯಾಣಿಕರ ಬಾಯಾರಿಕೆಗಾಗಿ ಮಾರ್ಗಮಧ್ಯದಲ್ಲಿ ಅರವಟ್ಟಿಗೆಗಳನ್ನು ನಿರ್ಮಿಸುತ್ತಿದ್ದರು. ಇವು ಸತ್ರ, ದೇವಸ್ಥಾನಗಳಿಗೆ ಹೊಂದಿಕೊಂಡಿರುತ್ತಿದ್ದವು. ರಾಗಿ ಮುಸಲವಾಡ ಶಾಸನ[೨೨೦]ದಲ್ಲಿ ನಾನಾದೇಶಿಗಳು, ಸೆಟ್ಟಿಯರು, ಸೆಟ್ಟಿಗುತ್ತರು ಸೇರಿ ಅರವಂಟಿಗೆಗೆ ದಾನ ಬಿಟ್ಟಿರುವುದನ್ನು ಕಾಣುತ್ತೇವೆ. ಮತ್ತು ನಿಂಬರಗಿಯ ಶಾಸನ[೨೨೧]ವು ಅರವಂಟಿಗೆಯ ನೀರನೆರೆಯುವ ಬ್ರಾಹ್ಮಣನಿಗೆ ದಾನ ಬಿಟ್ಟಿದ್ದನ್ನು ತಿಳಿಸುತ್ತದೆ.

ಸತ್ರ :

ಅರವಟ್ಟಿಗೆಗಳಲ್ಲಿ ಪ್ರಯಾಣಿಕರಿಗೆ ನೀರು ಸಿಕ್ಕರೆ, ಸತ್ರಗಳಲ್ಲಿ ಆಹಾರ, ವಿಶ್ರಾಂತಿ ತೆಗೆದುಕೊಳ್ಳಲು ವಸತಿಯೂ ದೊರೆಯುತ್ತಿತ್ತು. ಒಂದು ರೀತಿಯಲ್ಲಿ ಅತಿಥಿ ಸತ್ಕಾರದ ವಿಸ್ತೃತ ರೂಪವೇ ಸತ್ರವೆನ್ನಬಹುದು. ಸತ್ರಗಳು ಬಹುಮಟ್ಟಿಗೆ ದೇವಸ್ಥಾನ, ಮಠಗಳಿಗೆ ಹೊಂದಿಕೊಂಡಿರುತ್ತಿದ್ದವು. ಅಲ್ಲದೇ ಸೋಮೇಶ್ವರನ ಕಾಲದ ಜನತೆ ಭೂದಾನ, ವಿದ್ಯಾದಾನಗಳಿಗಿಂತ ಅನ್ನದಾನವೇ ಶ್ರೇಷ್ಠವೆಂದು ನಂಬಿದ್ದರು. ಮಾನಸೋಲ್ಲಾಸದಲ್ಲಿಯೂ ಕೂಡ ''ನೀರಡಿಸಿ ಹಸಿದು ಬಳಸಿ ಪರಸ್ಥಳದಿಂದ ಬಂದ ಕುಲ ನಾಮಗಳು ಗೊತ್ತಿಲ್ಲದಿರುವ ಅಪರಿಚಿತ ವ್ಯಕ್ತಿಯನ್ನು ಅತಿಥಿ ಎಂದು ಭಾವಿಸಲಾಗುತ್ತದೆ. ಅತಿಥಿಯನ್ನು ಪೂಜಿಸಿದರೆ ವಿಷ್ಣುವನ್ನೇ ಪೂಜಿಸಿದಂತಾಗುತ್ತದೆ ಎಂಬುದರಲ್ಲಿ ಸಂದೇಹವಿಲ್ಲ'' ಎಂದು ಹೇಳಿದೆ.[೨೨೨]

ಸತ್ರಗಳು ಪ್ರವಾಸಿಗರಿಗೆ, ಅನಾಥರಿಗೆ ಮತ್ತು ಅಲ್ಲಿಯ ಮಠಗಳಲ್ಲಿ ಓದುವ ವಿದ್ಯಾರ್ಥಿ, ತಪೋಧನರಿಗೆ ಆಹಾರವನ್ನು ಒದಗಿಸುತ್ತಿದ್ದವು. ಗಂಗಾಧರಯ್ಯನ ಮಗಳಾದ ಕಾಮಿಯಕ್ಕನು ಹೆಗ್ಗರೆಯ ಎರೆ ಭೂಮಿಯಲ್ಲಿ ೨ ಮತ್ತರು ಭೂಮಿಯನ್ನು ಸತ್ರಕ್ಕಾಗಿ ಬಿಡುತ್ತಾಳೆ.[೨೨೩] ಕಾಮಧೇನು ಶಾಸನ[೨೨೪]ವು ''ಪಸಿದು ಬಂದವರ್ಗಂಬಲಿಯ ಸತ್ರವಂ ನಡೆಸುವವರು'' ಎಂದು ಹೇಳಿದೆ. ಇದರಿಂದ ಅಂಬಲಿಯನ್ನು ಮಾತ್ರ ಕೊಡುವ ಸತ್ರಗಳಿದ್ದವೆಂದು ಹೇಳಬಹುದು. ಅಲ್ಲದೆ ಬ್ರಾಹ್ಮಣರಿಗೆ ಪ್ರತ್ಯೇಕ ಸತ್ರದ ವ್ಯವಸ್ಥೆಯಿದ್ದಂತೆ ತೋರುತ್ತದೆ. ''ಶ್ರೀ ಮೂಲಸ್ಥಾನ ದೇವರ ಸ್ಥಾನದಲು ಬ್ರಾಹ್ಮಣರುಂಬನ್ತಾಗಿ ಸತ್ರಕ್ಕೆ'' ಎಂದು ಕುಕನೂರು ಶಾಸನ[೨೨೫]ವು ತಿಳಿಸುತ್ತದೆ. ಮತ್ತು ಸತ್ರಕ್ಕೆ ಬಿಟ್ಟಿರುವ ದತ್ತಿಯ ಆದಾಯದ ಮಿತಿಯನ್ನು ನೋಡಿಕೊಂಡು ಆ ಸತ್ರದಲ್ಲಿ ಊಟ ಮಾಡಬೇಕಾದವರ ಸಂಖ್ಯೆಯನ್ನು ನಿರ್ದಿಷ್ಟಗೊಳಿಸುತ್ತಿದ್ದರು. ಕೆಲವು ಸತ್ರಗಳಲ್ಲಿ ಇಬ್ಬರಿಗೆ, ಕೆಲವೆಡೆ ನಾಲ್ವರಿಗೆ, ಕೆಲವೆಡೆ ಎಂಬತ್ತು ಜನರಿಗೆ ಹೀಗೆಲ್ಲಾ ಅವಕಾಶ ಕಲ್ಪಿಸುತ್ತಿದ್ದರು.[೨೨೬] ಮೂರನೆಯ ಸೋಮೇಶ್ವರನ ಕುಕನೂರು ಶಾಸನ[೨೨೭]ವು ಆರು ಜನ ಬ್ರಾಹ್ಮಣರಿಗೆ ಅವಕಾಶ ಕಲ್ಪಿಸಿದ್ದನ್ನು ತಿಳಿಸುತ್ತದೆ.

ಅಗ್ಗಿಷ್ಟಗೆ :

ಪ್ರಾಚೀನ ಕಾಲದಲ್ಲಿ ಚಕಮಕಿ ಕಲ್ಲಿನಿಂದಲೂ, ಎರಡು ಮರದ ತುಂಡುಗಳನ್ನು ಉಜ್ಜುವುದರಿಂದಲೂ ಬೆಂಕಿಯನ್ನು ಸೃಷ್ಟಿಸಿಕೊಳ್ಳುತ್ತಿದ್ದುದು ಎಲ್ಲರಿಗೂ ತಿಳಿದ ಸಂಗತಿ. ಆದರೆ ಪ್ರತಿನಿತ್ಯವೂ ಪ್ರತಿ ಮನೆಯಲ್ಲಿಯೂ ಹೀಗೆ ಬೆಂಕಿಯನ್ನು ಮಾಡಿಕೊಳ್ಳುವುದು ತೊಂದರೆದಾಯಕವಾಗಿದ್ದು, ಒಮ್ಮೆ ಹೊತ್ತಿಸಿದ ಬೆಂಕಿಯನ್ನು ಆರದಂತೆ ಏರ್ಪಾಟು ಮಾಡಿರುವುದೇ ಅಗ್ಗಿಷ್ಟಿಗೆ.[೨೨೮] ಬನ್ನೂರು ಶಾಸನ[೨೨೯]ವು ಮಹಾಮಂಡಳೇಶ್ವರ ವಿಷ್ಣುವರ್ಧನನು ಅಗ್ಗಿಷ್ಟಿಗೆಕಾಗಿ ಮೂರು ಗದ್ಯಾಣ ದಾನ ನೀಡಿದುದನ್ನು ತಿಳಿಸುತ್ತದೆ. ಔರಾದ್ ಶಾಸನದಲ್ಲಿಯೂ ಕೂಡ[೨೩೦] ಅಗ್ಗಿಷ್ಟಿಗೆಯ ಉಲ್ಲೇಖ ಕಂಡುಬಂದಿದೆ. ಇದರಿಂದ ಮೂರನೆಯ ಸೋಮೇಶ್ವರನ ಕಾಲದಲ್ಲಿಯೂ ಕೂಡ ಅಗ್ಗಿಷ್ಟಿಗೆಯನ್ನು ಇಡುವ ಸಂಪ್ರದಾಯವಿತ್ತೆಂದು ಹೇಳಬಹುದು.

ಮೇಲಿನ ಮೂರು ವ್ಯವಸ್ಥೆಗಳು ಆಧುನಿಕ ಕಾಲದಲ್ಲಿ (ಅರವಟ್ಟಿಗೆ, ಸತ್ರ, ಅಗ್ಗಿಷ್ಟಗೆ) ಕುಸಿದು ಬಿದ್ದಿದೆ. ಅರವಟ್ಟಿಗೆಗಳನ್ನು ನಾವು ಅಲ್ಲಲ್ಲಿ ಕಾಣಬಹುದಾದರೂ, ಬೆಂಕಿಯ ಪೊಟ್ಟಣಗಳ ಸೌಕರ್ಯವಿರುವ ಈಗ ಅಗ್ಗಿಷ್ಟಿಗೆಯ ಅವಶ್ಯಕತೆ ಏನೇನೂ ಇಲ್ಲ. ಮತ್ತು ಸತ್ರಗಳು ಸಾಕಷ್ಟು ಸಂಖ್ಯೆಯಲ್ಲಿದ್ದರೂ ಬರಿಯ ವಸತಿಯನ್ನು ಕೊಡುವ ಸತ್ರಗಳೇ ಹೆಚ್ಚು (ಹೆಚ್ಚಾಗಿ ಕಂಡುಬರುತ್ತವೆ).

ಅಡಿಟಿಪ್ಪಣಿಗಳು :

೧. ಈರಣ್ಣ, ಕೆ.ಪಿ., *ಬಾದಾಮಿ ಚಾಲುಕ್ಯರ ಸಾಂಸ್ಕೃತಿಕ ಪರಂಪರೆ*, ಪುಟ. ೭೭.

೨. ಚಿದಾನಂದಮೂರ್ತಿ, ಎಂ., *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ*, ಪು. ೪೩೧.

೩. ದೇವರಕೊಂಡಾರೆಡ್ಡಿ (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ* -೬, ನಂ. ೫, ಮುಕ್ಕುಂದಿ, ಕ್ರಿ.ಶ. ೧೧೩೪, ಜುಲೈ ೨೩.

೪. ಎ.ಕ.ಸಂಪುಟ- IV, ನಂ. ೨೮, ಕ್ರಿ.ಶ.ಸು. ೧೧೨೫.

೫. ಮಹೀಶವಾಡಿ, ಬಿ. ಬಿ. (ಸಂ.), *ಧರ್ಮಾಮೃತ*, ೪-೪೬, ೭-೭೩.

೬. ಈರಣ್ಣ, ಕೆ.ಪಿ., *ಬಾದಾಮಿ ಚಾಲುಕ್ಯರ ಸಾಂಸ್ಕೃತಿಕ ಪರಂಪರೆ*, ಪುಟ. ೭೮.

೭. ಎಂ.ಎ.ಆರ್. ೧೯೩೦, ನಂ. ೮೦, ಸಾಸಲೂರು, ಕ್ರಿ.ಶ. ೧೧೩೭.

೮. ಉಪಾಧ್ಯ, ಜಿ.ಎನ್. (ಸಂ.) *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ* -೬, ನಂ.೧೫, ನಾರಂಗವಾಡಿ, ಕ್ರಿ.ಶ. ೧೧೨೯, ಅಕ್ಟೋಬರ್ ೨೯.

೯. ದೇವರಕೊಂಡಾರೆಡ್ಡಿ (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ* -೩, ನಂ. ೫೩, ಕುಕನೂರು, ಕ್ರಿ.ಶ. ೧೧೨೯, ಡಿಸೆಂಬರ್ ೨೫.

೧೦. ಎಸ್.ಆಯ್.ಆಯ್.ಸಂಪುಟ- XX, ನಂ. ೧೦೧, ಕಾಮಧೇನು, ಕ್ರಿ.ಶ. ೧೧೨೯, ಮಾರ್ಚ್ ೨೩.

೧೧. ಉಪಾಧ್ಯ, ಜಿ.ಎನ್. (ಸಂ.) *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ* -೬, ನಂ.೭೨, ಕರಾಡಖೇಡ, ಕ್ರಿ.ಶ. ೧೧೩೦, ಡಿಸೆಂಬರ್ ೨೬.

೧೨. ದೇವರಕೊಂಡಾರೆಡ್ಡಿ (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ* -೩, ನಂ. ೧೬, ಕಲ್ಲೂರು, ಕ್ರಿ.ಶ. ೧೧೩೨, ಡಿಸೆಂಬರ್ ೨೪.

೧೩. ಎಸ್.ಆಯ್.ಆಯ್. ಸಂಪುಟ- XX, ನಂ. ೧೦೧, ಕಾಮಧೇನು, ಕ್ರಿ.ಶ. ೧೧೨೯, ಮಾರ್ಚ್ ೨೩.

೧೪. ದೇವರಕೊಂಡಾರೆಡ್ಡಿ (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ* -೩, ನಂ. ೨೬, ಮಾದಿನೂರು, ಕ್ರಿ.ಶ. ೧೧೩೬, ಡಿಸೆಂಬರ್ ೧೦.

೧೫. ಕಲಬುರ್ಗಿ, ಎಂ.ಎಂ. (ಸಂ.), *ಮಾನಸೋಲ್ಲಾಸ*, ಪುಟ. ೭-೮.

೧೬. ಉಪಾಧ್ಯ, ಜಿ.ಎನ್. (ಸಂ.) *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ* -೬, ನಂ.೧೩೭, ಔರಾದ, ಕ್ರಿ.ಶ. ೧೧೩೫, ಮಾರ್ಚ್ ೧೧.

೧೭. ದೇವರಕೊಂಡಾರೆಡ್ಡಿ (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ* -೩, ನಂ. ೫೩, ಕುಕನೂರು, ಕ್ರಿ.ಶ. ೧೧೨೯, ಡಿಸೆಂಬರ್ ೨೫.

೧೮. ಕೆ. ಆಯ್. ಸಂಪುಟ- V, ನಂ. ೨೩, ತಿಳವಳ್ಳಿ, ಕ್ರಿ.ಶ. ೧೧೨೯, ಅಕ್ಟೋಬರ್ ೧೫.

೧೯. ದೇವರಕೊಂಡಾರೆಡ್ಡಿ (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ* -೩, ನಂ. ೨೬, ಮಾದಿನೂರು, ಕ್ರಿ.ಶ. ೧೧೩೬, ಡಿಸೆಂಬರ್ ೧೦.

೨೦. ಅದೇ.

೨೧. ಅದೇ.

೨೨. ಅದೇ.

೨೩. ಗೋಪಾಲ, ಬಿ.ಆರ್., (ಸಂ), ಮಾನವಿಕ ಕರ್ನಾಟಕ, ಸಂ. ೩, ಸಂ.೩, ಮೇ೧೯೭೩.

೨೪. ಮಹೀಶವಾಡಿ, ಬಿ.ಬಿ. (ಸಂ.), *ಧರ್ಮಾಮೃತಂ*, ಆಶ್ವಾಸ-೨,ಪದ್ಯ-೫೩, ಪು. ೬೨.

೨೫. ಅದೇ, ೪-೧೭೪.

೨೬. ದೇವರಕೊಂಡಾರೆಡ್ಡಿ (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ* -೩, ನಂ. ೨೬, ಮಾದಿನೂರು, ಕ್ರಿ.ಶ. ೧೧೩೬, ಡಿಸೆಂಬರ್ ೧೦.

೨೭. ಮಹೀಶವಾಡಿ, ಬಿ.ಬಿ. (ಸಂ.), *ಧರ್ಮಾಮೃತ*, ೧೧-೧೨೬.

೨೮. ಅದೇ, ೪-೧೭೪.

೨೯. ಅದೇ, ೧೪-೧೦೪.

೩೦. ಅದೇ, ೪-೧೭೫.

೩೧. ಅದೇ, ೧೨-೭೧.

೩೨. ಅದೇ, ೯-೧೩೨.

೩೩. ಅದೇ, ೨-೧೯೮.

೩೪. ಅದೇ, ೧೧-೧೬೨.

೩೫. ಅದೇ, ೧೧-೧೬೨.

೩೬. ದೇವರಕೊಂಡಾರೆಡ್ಡಿ (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ* -೭, ನಂ. ೨೭, ಹಿರೇರಾಯಕುಂಪಿ, ಕ್ರಿ.ಶ. ೧೧೩೦, ಡಿಸೆಂಬರ್ ೨೫.

೩೭. ಅದೇ, ೫-೧೦೩.

೩೮. ದೇವರಕೊಂಡಾರೆಡ್ಡಿ (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ* -೩, ನಂ. ೩೮, ಕುಕನೂರು, ಕ್ರಿ.ಶ. ೧೧೩೨, ಮಾರ್ಚ್ ೩.

೩೯. ಮಹೀಶವಾಡಿ, ಬಿ. ಬಿ. (ಸಂ.), ಧರ್ಮಾಮೃತ, ೯-೧೦೮.

೪೦. ಅದೇ, ೧೧-೧೫.

೪೧. ಅದೇ, ೪-೩೫.

೪೨. ಅದೇ, ೬-೧೪೨.

೪೩. ಅದೇ, ೧೦-೧೮೨.

೪೪. ವಿವರಣೆಗೆ ನೋಡಿ ಬಿ.ವ್ಹಿ.ಮಲ್ಲಾಪುರ- ನಯಸೇನ ಮತ್ತು ಅವನ ಕೃತಿಗಳು, ಪು. ೨೯೬-೯೭.

೪೫. ಚಿದಾನಂದಮೂರ್ತಿ ಎಂ., ಮಧ್ಯಕಾಲೀನ ಕನ್ನಡ ಸಾಹಿತ್ಯ ಮತ್ತು ಅಸ್ಪೃಶ್ಯತೆ, ಪು. ೨೮.

೪೬. ಮಹೀಶವಾಡಿ, ಬಿ. ಬಿ. (ಸಂ.), ಧರ್ಮಾಮೃತ, ೨-೭೧, ೩-೭೩.

೪೭. ಅದೇ, ೬-೧೪೨.

೪೮. ಅದೇ, ೧೦-೫೩.

೪೯. ಎಸ್.ಆಯ್.ಆಯ್.ಸಂಪುಟ- XV, ನಂ. ೧೬, ಮದನಬಾವಿ, ಕ್ರಿ.ಶ. ೧೧೩೮, ಜನೇವರಿ ೨೭.

೫೦. ಮಹೀಶವಾಡಿ, ಬಿ. ಬಿ. (ಸಂ.), ಧರ್ಮಾಮೃತ, ೨-೪೭.

೫೧. ಅದೇ, ೭-೪೭, ೩-೭೩, ೪-೭೫.

೫೨. ಅದೇ, ೧೨-೧೯.

೫೩. ಅದೇ, ೩-೭೭.

೫೪. ಅದೇ, ೨-೧೭೮.

೫೫. ಕಲಬುರ್ಗಿ, ಎಂ.ಎಂ. (ಸಂ.), ಮಾನಸೋಲ್ಲಾಸ, ಪು. ೩೫೧.

೫೬. ಉಪಾಧ್ಯ, ಜಿ.ಎನ್. (ಸಂ.) ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೬, ನಂ.೨೬, ಅರೆ, ಕ್ರಿ.ಶ. ೧೧೩೫, ಅಕ್ಟೋಬರ್ ೨೯.

೫೭. ಮಹೀಶವಾಡಿ, ಬಿ. ಬಿ. (ಸಂ.), ಧರ್ಮಾಮೃತ, ೧೨-೨೪.

೫೮. ಅದೇ, ೯-೧೦೧.

೫೯. ಅದೇ, ೨-೨೫, ೨೬.

೬೦. ಅದೇ, ೨-೭೧.

೬೧. ದೇವರಕೊಂಡಾರೆಡ್ಡಿ (ಸಂ), ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೧, ನಂ. ೩೪, ರಾಗಿಮುಸಲವಾಡ, ಕ್ರಿ.ಶ. ೧೧೨೭, ಜುಲೈ ೧೦.

೬೨. ಮಹೀಶವಾಡಿ, ಬಿ. ಬಿ. (ಸಂ.), *ಧರ್ಮಾಮೃತ*, ೧೨-೯೯.

೬೩. ಅದೇ, ೧೨-೧೦೦, ೧೦೧.

೬೪. ದೇವರಕೊಂಡಾರೆಡ್ಡಿ (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ* -೧, ನಂ. ೩೪, ರಾಗಿಮುಸಲವಾಡ, ಕ್ರಿ.ಶ. ೧೧೨೭, ಜುಲೈ ೧೦.

೬೫. ಮಹೀಶವಾಡಿ, ಬಿ. ಬಿ. (ಸಂ.), *ಧರ್ಮಾಮೃತ*, ೯-೧೦೮.

೬೬. ಅದೇ, ೯-೨೩, ೧೧-೪೨.

೬೭. ಅದೇ, ೧೪-೧೩೪.

೬೮. ಕೆ. ಆಯ್.ಸಂಪುಟ- I, ನಂ. ೩೦, ತಿಳವಳ್ಳಿ, ಕ್ರಿ.ಶ. ೧೧೩೧, ಅಕ್ಟೋಬರ್ ೪.

೬೯. ಮಹೀಶವಾಡಿ, ಬಿ. ಬಿ. (ಸಂ.), *ಧರ್ಮಾಮೃತ*, ೬-೧೦೪.

೭೦. ಮಲ್ಲಾಪುರ, ಬಿ. ವ್ಹಿ., *ನಯಸೇನ ಮತ್ತು ಅವನ ಕೃತಿಗಳು*., ಪು. ೨೮೮.

೭೧. ಗೋಗಿ ಹನುಮಾಕ್ಷಿ., (ಸಂ.), *ಕಲಬುರ್ಗಿ ಜಿಲ್ಲೆಯ ಶಾಸನಗಳು*., ನಂ. ೩೨, ಸಿರಿವಾಳ, ಕ್ರಿ.ಶ. ೧೧೩೭.

೭೨. ಉಪಾಧ್ಯ, ಜಿ.ಎನ್. (ಸಂ.) *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ* -೬, ನಂ. ೬೩, ಏರಿಗೆ, ಕ್ರಿ.ಶ. ೧೧೩೮, ಸೆಪ್ಟಂಬರ್ ೧.

೭೩. ಉಪಾಧ್ಯ, ಜಿ.ಎನ್. (ಸಂ.) *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ* -೬, ನಂ. ೬೨, ಏರಿಗೆ, ಕ್ರಿ.ಶ. ೧೧೩೫, ಜುಲೈ ೨೩.

೭೪. ಗುರವ, ಆರ್.ಎಸ್., ಎಂಟು ಹಿಟ್ಟು ಹಾಗೂ ಬಾರಾಬಲುತೆ, *ಜಾನಪದ ಸಾಹಿತ್ಯದರ್ಶನ*, ಭಾಗ-೭, ಪು. ೭೧-೮೫.

೭೫. ಅದೇ.

೭೬. ಅದೇ.

೭೭. ದೇವರಕೊಂಡಾರೆಡ್ಡಿ (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ* -೩, ನಂ. ೫೩, ಕುಕನೂರು, ಕ್ರಿ.ಶ. ೧೧೩೨, ಮಾರ್ಚ್ ೩.

೭೮. ಉಪಾಧ್ಯ, ಜಿ.ಎನ್. (ಸಂ.) *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ* -೬, ನಂ. ೬೨, ಏರಿಗೆ, ಕ್ರಿ.ಶ. ೧೧೩೫, ಜುಲೈ ೨೩.

೭೯. ಗಣೇಶ, ಕೆ.ಆರ್. (ಸಂ.), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ* -೫, ನಂ. ೬೦೪, ಪಟಾನ್‌ಚೇರು, ಕ್ರಿ.ಶ. ೧೧೨೭, ಫೆಬ್ರುವರಿ ೨೦.

೮೦. ಗುರವ.ಆರ್.ಎನ್., 'ಕರ್ನಾಟಕ ಭಾರತಿ', ಸಂ.೮, ಸಂ.೩, 'ಅರುವತ್ತೊಕ್ಕಲು', ಪು.೭೭.

೮೧. ಅದೇ.

೮೨. ಗಣೇಶ, ಕೆ.ಆರ್. (ಸಂ.), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೫,* ನಂ. ೬೦೪, ಪಟಾನ್‌ಚೇರು, ಕ್ರಿ.ಶ. ೧೧೨೭, ಫೆಬ್ರುವರಿ ೨೦.

೮೩. ಗುರವ.ಆರ್.ಎನ್., 'ಕರ್ನಾಟಕ ಭಾರತಿ', ಸಂ.೮, ಸಂ.೩, 'ಅರುವತ್ತೊಕ್ಕಲು', ಪು.೭೭.

೮೪. ಕಲಬುರ್ಗಿ, ಎಂ.ಎಂ., (ಸಂ.), *ಧಾರವಾಡ ತಾಲೂಕಿನ ಶಾಸನಗಳು,* ನಂ. ೩೯, ನರೇಂದ್ರ, ಕ್ರಿ.ಶ. ೧೧೨೫.

೮೫. ಎ.ಕ., ಸಂಪುಟ-II, ಶ್ರವಣಬೆಳಗೊಳ, ೧೩೨, ಕ್ರಿ.ಶ. ೧೧೨೩.

೮೬. ಎ.ಕ., ಸಂಪುಟ-VI, ಮೂಡಗೆರೆ, ೨೨, ಹಂತೂರು, ಕ್ರಿ.ಶ. ೧೧೨೯.

೮೭. ಗುರವ, ಆರ್.ಎನ್., *ತರ್ದವಾಡಿ,* ಪು. ೬೬.

೮೮. ದೇವರಕೊಂಡಾರೆಡ್ಡಿ (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೭,* ನಂ. ೪೪, ಕುರಡಿ, ಕ್ರಿ.ಶ. ೧೧೩೭, ಡಿಸೆಂಬರ್ ೨೫.

೮೯. ಅದೇ.

ಎಸ್.ಆಯ್.ಆಯ್. XVII, ನಂ. ೧೩೬, ಕ್ರಿ.ಶ. ೧೧೩೪, ಡಿಸೆಂಬರ್ ೨೨,

೯೦. ಎ.ಕ. ಸಂಪುಟ- VII, SK ೧೧೨, ಕ್ರಿ.ಶ. ೧೧೩೯.

೯೧. ಕೆ.ಆಯ್. ಸಂಪುಟ- VI, ನಂ. ೨೫, ನಾಗವಂದ, ಕ್ರಿ.ಶ. ೧೧೨೮, ನವೆಂಬರ್ ೮.

೯೨. ಮಹೀಶವಾಡಿ, ಬಿ. ಬಿ. (ಸಂ.), *ಧರ್ಮಾಮೃತ,* ೧-೬೭.

೯೩. ಅದೇ, ೩-೨೫೦.

೯೪. ಅದೇ, ೧೦-೨೪೩, ೧೨-೫.

೯೫. ಅದೇ, ೩-೧೩, ೨೫೦, ೨೫೨.

೯೬. ಅದೇ, ೪-೫೦.

೯೭. ಅದೇ, ೭-೧೨೨.

೯೮. ಅದೇ, ೮-೫೧, ೨೧೫.

೯೯. ಅದೇ, ೧೧-೯೦.

೧೦೦. ಕಲಬುರ್ಗಿ, ಎಂ.ಎಂ., (ಸಂ.), *ಧಾರವಾಡ ತಾಲೂಕಿನ ಶಾಸನಗಳು,* ನಂ. ೩೯, ನರೇಂದ್ರ, ಕ್ರಿ.ಶ. ೧೧೨೫.

೧೦೧. ಎ.ಕ. ಸಂಪುಟ- V, ಬೇಲೂರು ೧೭, ಬೇಲೂರು, ಕ್ರಿ.ಶ. ೧೧೩೬.

೧೦೨. ಕಲಬುರ್ಗಿ, ಎಂ.ಎಂ. (ಸಂ.), *ಮಾನಸೋಲ್ಲಾಸ*, ಪುಟ. ೩೩೨-೩೩೫.

೧೦೩. ಎಲಿಗಾರ ಚನ್ನಕ್ಕ., *ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ.*, ಪು.೧೯.

೧೦೪. ಕಲಬುರ್ಗಿ, ಎಂ.ಎಂ., (ಸಂ.), *ಧಾರವಾಡ ತಾಲೂಕಾ ಶಾಸನಸೂಚಿ*, ನಂ. ೩೯, ನರೇಂದ್ರ, ಕ್ರಿ.ಶ. ೧೧೨೫.

೧೦೫. ಅದೇ.

೧೦೬. ಬ್ರಾಹ್ಮಣರು ನಾಲ್ಕು ಜನರನ್ನು, ಕ್ಷತ್ರಿಯ ಮೂರು ಜನರನ್ನು, ವೈಶ್ಯ ಇಬ್ಬರನ್ನು, ಶೂದ್ರ ಒಬ್ಬಳನ್ನು ಮದುವೆಯಾಗಬಹುದು ಎಂಬುದನ್ನು ಅಲ್ಬೆರೂನಿ ಗುರುತಿಸಿದ್ದಾನೆ. (ನಾಗೇಗೌಡ, ಎಚ್.ಎಲ್., 'ಪ್ರವಾಸಿ ಕಂಡ ಇಂಡಿಯಾ,, ಸಂ.೧, ಪು. ೩೮೫.)

೧೦೭. ನಾಗಯ್ಯ, ಜಿ.ಎಂ., *ಆರನೆಯ ವಿಕ್ರಮಾದಿತ್ಯನ ಶಾಸನಗಳು : ಒಂದು ಅಧ್ಯಯನ.*, ಪು. ೩೧.

೧೦೮. ಗೋಗಿ ಹನುಮಾಕ್ಷಿ., (ಸಂ.), *ಕಲ್ಬುರ್ಗಿ ಜಿಲ್ಲೆಯ ಶಾಸನಗಳು.*, ನಂ.೩, ನಿಂಬರಗಿ, ಕ್ರಿ.ಶ. ೧೧೩೪.

೧೦೯. ಉಪಾಧ್ಯ, ಜಿ.ಎನ್. (ಸಂ.) *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೬*, ನಂ.೯, ಅಣದೂರು, ಕ್ರಿ.ಶ. ೧೧೩೭.

೧೧೦. ಎ.ಪಿ.ಜಿ.ಎ.ಎಸ್. -೩, *ಕನ್ನಡ ಇನ್ಸ್ಕ್ರಿಪ್ಷನ್ಸ್ ಆಫ್ ಎ.ಪಿ. I*, ಆಳಂದ, ಡಿಸೆಂಬರ್ ೨೫.

೧೧೧. Desai, P.B., *Jainism in South India and Some Jaina Epigraphs*, No.2, 1098, January 5, Hunasihadagali.

೧೧೨. ಎ.ಕ. ಸಂಪುಟ-II, ಶ್ರವಣಬೆಳಗೊಳ ಚಿಕ್ಕಬೆಟ್ಟ, ನಂ. ೧೭೬, ಕ್ರಿ.ಶ. ೧೧೩೧.

೧೧೩. ಎ.ಕ. ಸಂಪುಟ-V, ಬೇಲೂರು ೧೬, ಹಳೇಬೀಡು, ಕ್ರಿ.ಶ. ೧೧೨೩.

೧೧೪. ಎ.ಕ. ಸಂಪುಟ-II, ಶ್ರವಣಬೆಳಗೊಳ , ನಂ. ೩೨ (೫೬), ಕ್ರಿ.ಶ. ೧೧೨೩.

೧೧೫. ಚಕ್ಲಕಾರ, ಎಚ್.ಸಿ., *ಪ್ರಾಚೀನ ಭಾರತದ ಸಾಮಾಜಿಕ ಜೀವನದ ಕೆಲವು ಮುಖಗಳು* (ಅನು.) ಅನಂತರಾಮಯ್ಯ, ಆರ್.ಎಲ್., ಮು.ಭಾ.ಸಂ., ಸಂ.೨, ಪು. ೪೩೫.

೧೧೬. ಅದೇ.

೧೧೭. ಎ.ಕ. ಸಂಪುಟ-II, ಶ್ರವಣಬೆಳಗೊಳ, ನಂ. ೧೭೮, ಕ್ರಿ.ಶ. ೧೧೨೧.

೧೧೮. ಎಸ್.ಆಯ್.ಆಯ್. ಸಂಪುಟ- XX, ನಂ. ೧೦೧, ಕಾಮಧೇನು, ಕ್ರಿ.ಶ. ೧೧೨೯, ಮಾರ್ಚ್ ೨೩.

೧೧೯. ಉಪಾಧ್ಯ, ಜಿ.ಎನ್. (ಸಂ.) *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೬*, ನಂ.೧೫, ನಾರಂಗವಾಡಿ, ಕ್ರಿ.ಶ. ೧೧೨೯, ಅಕ್ಟೋಬರ್ ೨೯.

೧೨೦. ಬಿ.ಕೆ.ಆಯ್.-I (1)-50, ಎಲಿಶಿರೂರ, ಗದಗ, ಕ್ರಿ.ಶ. ೧೧೩೮.

೧೨೧. ಎ.ಕ. V, ಹಾಸನ, ನಂ. ೧೧೬, ಕ್ರಿ.ಶ. ೧೧೨೨.

೧೨೨. ಎಲಿಗಾರ ಚನ್ನಕ್ಕ., *ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ*, ಪು.೨೮.

೧೨೩. ಎಸ್.ಆಯ್.ಆಯ್. ಸಂಪುಟ- XX, ನಂ. ೧೦೧, ಕಾಮಧೇನು, ಕ್ರಿ.ಶ. ೧೧೨೯, ಮಾರ್ಚ್ ೨೩.

೧೨೪. ಶ್ರೀಕಂಠಶಾಸ್ತ್ರಿ, ಎಸ್., ಭಾರತೀಯ ಸಂಸ್ಕೃತಿ, ೧೯೭೫, ಪು. ೨೦೫, ಅಡಿಟಿಪ್ಪಣಿ.

೧೨೫. ಎಲಿಗಾರ ಚನ್ನಕ್ಕ., ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ., ಪು.೪೭.

೧೨೬. ಮಲ್ಲಾಪೂರ, ಬಿ. ವ್ಹಿ., ನಯಸೇನ ಮತ್ತು ಅವನ ಕೃತಿಗಳು., ಪು. ೨೯೪-೨೯೫.

೧೨೭. ಮಹೀಶವಾಡಿ, ಬಿ. ಬಿ. (ಸಂ.), ಧರ್ಮಾಮೃತ, ೨-೨೫, ೨೭, ೬೯, ೪-೨೯, ೯-೫೧.

೧೨೮. ಅದೇ, ೨-೧೩.

೧೨೯. ಅದೇ, ೭-೩೯, ೫-೬೪, ೩-೧೨೬.

೧೩೦. ಅದೇ, ೧-೭೧.

೧೩೧. ಅದೇ, ೧೨-೪೦, ೮-೭೭.

೧೩೨. ಅದೇ, ೩-೨೭.

೧೩೩. ಅದೇ, ೮-೭೭.

೧೩೪. ಅದೇ, ೩-೩೫, ೨-೨೫.

೧೩೫. ಅದೇ, ೨-೨೭.

೧೩೬. ಅದೇ, ೨-೬೯, ೧೦-೧೧೨, ೭-೪೧.

೧೩೭. ಅದೇ, ೧-೩೫.

೧೩೮. ಎ.ಕ. XI, ಹಂತೂರು, ನಂ. ೧೮, ಕ್ರಿ.ಶ. ೧೧೨೯.

೧೩೯. ಚಿದಾನಂದಮೂರ್ತಿ, ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ., ಪು. ೪೨೭.

೧೪೦. ಕಲಬುರ್ಗಿ, ಎಂ.ಎಂ., (ಸಂ.), ಮಾನಸೋಲ್ಲಾಸ, ಪು. ೩೮೩.

೧೪೧. ಚಿದಾನಂದಮೂರ್ತಿ, ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ., ಪು. ೪೨೭.

೧೪೨. Desai, P.B., *Jainism in South India and Some Jaina Epigraphs,* No.2, 1098, January 5, Hunasihadagali.

೧೪೩. ಎಸ್.ಆಯ್.ಆಯ್.ಸಂಪುಟ- IX(I), ನಂ. ೧೬೧, ಚಿನ್ನತುಂಬಳ, ಕ್ರಿ.ಶ. ೧೧೯೨, ಏಪ್ರಿಲ್ ೨೪.

೧೪೪. ಅದೇ.

೧೪೫. ಎಸ್.ಆಯ್.ಆಯ್. ಸಂಪುಟ- XVIII, ನಂ. ೯೭, ಬಂಕಾಪುರ, ಕ್ರಿ.ಶ. ೧೧೯೦, ಫೆಬ್ರುವರಿ ೭.

೧೪೬. ಗಣೇಶ, ಕೆ.ಆರ್. (ಸಂ.), ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೬, ನಂ. ೪೧೯, ಗುಡೂರು ಕ್ರಿ.ಶ. ೧೧೨೪ ಡಿಸೆಂಬರ್ ೨೪.

೧೪೭. ದೇವರಕೊಂಡಾರೆಡ್ಡಿ (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೧*, ನಂ. ೩೪, ರಾಗಿಮುಸಲವಾಡ, ಕ್ರಿ.ಶ. ೧೧೨೭, ಜುಲೈ ೧೦.

೧೪೮. ಕಲಬುರ್ಗಿ, ಎಂ.ಎಂ., (ಸಂ.), ಧಾರವಾಡ ತಾಲೂಕಾ ಶಾಸನಗಳು, ನಂ. ೬೭, ಸಿದ್ದಾಪುರ, ಕ್ರಿ.ಶ. ೧೧೩೫, ಜನವರಿ ೧೬.

೧೪೯. ಎ.ಕ. ಸಂಪುಟ- VII, ಶಿಕಾರಿಪುರ, ನಂ. ೮೭, ಬಳ್ಳಿಗಾವೆ, ಕ್ರಿ.ಶ. ೧೧೩೧.

೧೫೦. ಕಲಬುರ್ಗಿ, ಎಂ.ಎಂ., (ಸಂ.), *ಧಾರವಾಡ ತಾಲೂಕಿನ ಶಾಸನಗಳು*, ನಂ. ೧೮, ಕುರಡಿಕೇರಿ, ಕ್ರಿ.ಶ. ೧೧೨೬.

೧೫೧. ಎ.ಕ. ಸಂಪುಟ- V, ಹಾಸನ, ನಂ. ೮೯, ಯಲಗುಂದ, ಕ್ರಿ.ಶ. ೧೧೩೬.

೧೫೨. ದೇವರಕೊಂಡಾರೆಡ್ಡಿ (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೨*, ನಂ. ೨೬, ಮಾದಿನೂರು, ಕ್ರಿ.ಶ. ೧೧೩೬, ಡಿಸೆಂಬರ್ ೧೦.

೧೫೩. ಎಸ್.ಆಯ್.ಆಯ್. ಸಂಪುಟ- XV, ನಂ. ೮, ಧಾರವಾಡ, ಕ್ರಿ.ಶ. ೧೧೨೫.

೧೫೪. ಎ.ಕ. ಸಂಪುಟ- IV, ನಾಗಮಂಗಲ, ನಂ. ೩, ನಾಗಮಂಗಲ, ಕ್ರಿ.ಶ. ೧೧೩೫.

೧೫೫. ಎ.ಕ. ಸಂಪುಟ- II, ಶ್ರವಣಬೆಳಗೊಳ, ೧೬೩, ಕ್ರಿ.ಶ. ೧೧೨೩.

೧೫೬. ಎ.ಕ. ಸಂಪುಟ- II, ಶ್ರವಣಬೆಳಗೊಳ, ೧೭೬, ಕ್ರಿ.ಶ. ೧೧೩೧.

೧೫೭. ಎಸ್.ಆಯ್.ಆಯ್. ಸಂಪುಟ- XVIII, ನಂ. ೧೩೮, ಗದಗ, ಕ್ರಿ.ಶ. ೧೧೩೬.

೧೫೮. ದೇವರಕೊಂಡಾರೆಡ್ಡಿ (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೩*, ನಂ. ೩೮, ಕುಕನೂರು, ಕ್ರಿ.ಶ. ೧೧೩೨, ಮಾರ್ಚ್ ೩.

೧೫೯. ದೇವರಕೊಂಡಾರೆಡ್ಡಿ (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೩*, ನಂ. ೩೯, ಕುಕನೂರು.

೧೬೦. ಎಸ್.ಆಯ್.ಆಯ್., XX, ನಂ. ೯೮, ಕಡ್ಲೇವಾಡ, ಕ್ರಿ.ಶ. ೧೧೨೭, ಡಿಸೆಂಬರ್ ೨೫.

೧೬೧. ದೇವರಕೊಂಡಾರೆಡ್ಡಿ (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೭*, ನಂ. ೭, ನವಿಲೆ, ಕ್ರಿ.ಶ. ೧೧೨೮, ಮಾರ್ಚ್ ೩.

೧೬೨. ಎಸ್.ಆಯ್.ಆಯ್., ಸಂಪುಟ- XX, ನಂ.೯೯, ಲಕ್ಷ್ಮೇಶ್ವರ, ಕ್ರಿ.ಶ. ೧೧೨೮, ಜುಲೈ ೪.

೧೬೩. ಉಪಾಧ್ಯ, ಜಿ.ಎನ್. (ಸಂ.) *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೬*, ನಂ.೧೫, ನಾರಂಗವಾಡಿ, ಕ್ರಿ.ಶ. ೧೧೨೯, ಅಕ್ಟೋಬರ್ ೨೯.

೧೬೪. ಗಣೇಶ, ಕೆ.ಆರ್. (ಸಂ.), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೫*, ನಂ. ೧೧೪, ಉರುವಕೊಂಡ, ಕ್ರಿ.ಶ. ೧೧೩೫ , ಮೇ ೨೭.

೧೬೫. ಉಪಾಧ್ಯ, ಜಿ.ಎನ್. (ಸಂ.) *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೬*, ನಂ.೭೪, ಕರಾಡಖೇಡ, ಕ್ರಿ.ಶ. ೧೧೩೩, ಆಗಸ್ಟ್ ೨.

೧೬೬. ಗಣೇಶ, ಕೆ.ಆರ್. (ಸಂ.), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೫*, ನಂ. ೫೦೩, ಗಂಗಾಪುರಂ, ಕ್ರಿ.ಶ. ೧೧೩೪, ಜೂನ್ ೮.

೧೬೭. ಉಪಾಧ್ಯ, ಜಿ.ಎನ್. (ಸಂ.), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೬*, ನಂ. ೬೨, ಏರಿಗೆ, ಕ್ರಿ.ಶ. ೧೧೩೫, ಜುಲೈ ೨೩.

೧೬೮. ಗೋಗಿ ಹನುಮಾಕ್ಷಿ., (ಸಂ.), *ಸುರಪುರ ತಾಲೂಕಿನ ಶಾಸನಗಳು.*, ನಂ.೧೫, ಹುಣಸಗಿ, ಕ್ರಿ.ಶ. ೧೧೩೬, ಫೆಬ್ರುವರಿ ೫.

೧೬೯. ಗೋಪಾಲ, ಬಿ.ಆರ್., ಮಾನವಿಕ ಕರ್ನಾಟಕ, ಸಂ. ೩, ಸಂ.೩, ಮೇ ೧೯೭೩, ಕ್ರಿ.ಶ. ೧೧೩೮, ಡಿಸೆಂಬರ್ ೮.

೧೭೦. ಗಣೇಶ, ಕೆ.ಆರ್. (ಸಂ.), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೫*, ನಂ. ೩೩೧, ರಾಮದುರ್ಗ, ಕ್ರಿ.ಶ. ೧೧೩೪, ಜುಲೈ ೨೩.

೧೭೧. ಕೆ.ಆಯ್. ಸಂಪುಟ-VI, ನಂ. ೨೫, ನಾಗವಂದ, ಕ್ರಿ.ಶ. ೧೧೨೮, ನವೆಂಬರ್ ೮.

೧೭೨. ಕಲಬುರ್ಗಿ, ಎಂ.ಎಂ., (ಸಂ.), ಮಾನಸೋಲ್ಲಾಸ, ಪು. ೧೩-೧೪.

೧೭೩. ಭಟ್ಟಾಚಾರ್ಯ, ದಿನೇಶಚಂದ್ರ., ಪ್ರಾಯಶ್ಚಿತ್ತಗಳು ಮತ್ತು ವ್ರತಗಳು, ಯು.ಭಾ.ಸಂ., ಸಂ.೨, ಪು. ೨೮೨.

೧೭೪. ಶ್ಲೋಕಗಳಿಲ್ಲದ ಶಾಸನಗಳಲ್ಲಿ ಅವುಗಳ ಸಾರವನ್ನು ಕನ್ನಡದಲ್ಲಿ ನೀಡಿವೆ.

೧೭೫. ಜೋಗಳೇಕರ ಎನ್.ಕೆ., *ಶಕುನ ಜೋತಿಷ್ಯ*, ಧಾರವಾಡ, ೧೯೮೧, ಪು. ೮.

೧೭೬. ದಾಸೇಗೌಡ, ಜಿ.ವಿ., *ನಮ್ಮ ಜನಪದ ನಂಬಿಕೆಗಳು*, ೧೯೭೩, ಮೈಸೂರು, ಪು. ೩.

೧೭೭. ಕಲಬುರ್ಗಿ, ಎಂ.ಎಂ., ಮಾನಸೋಲ್ಲಾಸ, ಪು. ೧೭೬.

೧೭೮. ಮುದಿಗೌಡರ, ಜೆ.ಎಸ್., *ಲೋಕೋಪಕಾರಂ*, ಪು. ೧೩೮. (ಕ.ವಿ.ವಿ.ಯ ಅಪ್ರಕಟಿತ ಪಿಎಚ್.ಡಿ. ಪ್ರಬಂಧ-೧೯೯೯)

೧೭೯. ಕಲಬುರ್ಗಿ, ಎಂ.ಎಂ., (ಸಂ.), ಮಾನಸೋಲ್ಲಾಸ, ಪು. ೧೭೬.

೧೮೦. ಕೊಪ್ಪಾ, ಎಸ್.ಕೆ., *ತರ್ದವಾಡಿ ನಾಡು ಒಂದು ಅಧ್ಯಯನ*, ಪು. ೧೭೧.

೧೮೧. ಗಣೇಶ, ಕೆ.ಆರ್. (ಸಂ.), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೫*, ನಂ. ೫೬೧, ಕೋಲನುಪಾಕ ಕ್ರಿ.ಶ. ೧೧೧೦, ಅಕ್ಟೋಬರ್ ೨೯.

೧೮೨. ಗೋಗಿ ಹನುಮಾಕ್ಷಿ., (ಸಂ.), *ಕಲ್ಬುರ್ಗಿ ಜಿಲ್ಲೆಯ ಶಾಸನಗಳು*, ನಂ.೩೨, ಸಿರಿವಾಳ, ಕ್ರಿ.ಶ. ೧೧೩೭.

೧೮೩. ಎಸ್.ಆಯ್.ಆಯ್. ಸಂಪುಟ- XV, ನಂ. ೮೫, ಐಹೊಳೆ, ಕ್ರಿ.ಶ. ೧೧೩೬, ಜುಲೈ ೧೨.

೧೮೪. ಗಣೇಶ, ಕೆ.ಆರ್. (ಸಂ.), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೫*, ನಂ. ೩೦೧, ಪೆದ್ದತಂಬಳಂ, ಕ್ರಿ.ಶ. ೧೧೩೩, ಜನೇವರಿ ೨೩.

೧೮೫. ಉಪಾಧ್ಯ, ಜಿ.ಎನ್. (ಸಂ.) *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೬*, ನಂ.೧೩೪, ಸೊಲ್ಲಾಪುರ, ಕ್ರಿ.ಶ. ೧೧೩೬, ಜನೆವರಿ ೩೦.

೧೮೬. ದೇವರಕೊಂಡಾರೆಡ್ಡಿ (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೧*, ನಂ. ೩೪, ರಾಗಿಮುಸಲವಾಡ, ಕ್ರಿ.ಶ. ೧೧೨೭, ಜುಲೈ ೧೦.

೧೮೭. ಎಸ್.ಆಯ್.ಆಯ್. ಸಂಪುಟ- XX, ನಂ. ೧೦೪, ಮಲಘಾನ, ಕ್ರಿ.ಶ. ೧೧೩೩, ಆಗಸ್ಟ್ ೨.

೧೮೮. ಎಸ್.ಆಯ್.ಆಯ್. ಸಂಪುಟ- XX, ನಂ. ೧೦೨, ಲಕ್ಷ್ಮೇಶ್ವರ, ಕ್ರಿ.ಶ. ೧೧೩೨, ಮೇ ೩೧.

೧೮೯. ಕೊಪ್ಪಾ, ಎಸ್.ಕೆ., *ತರ್ದವಾಡಿ ನಾಡು ಒಂದು ಅಧ್ಯಯನ*, ಪು. ೧೭೧.

೧೯೦. ಶ್ರೀಧರಮೂರ್ತಿ. ಮ., *೬೪ ಕಲೆಗಳು*, ಪು. ೨೭-೨೯.

೧೯೧. ಅದೇ.

೧೯೨. ಉಪಾಧ್ಯ, ಜಿ.ಎನ್. (ಸಂ.) *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೬*, ನಂ.೧೫, ನಾರಂಗವಾಡಿ, ಕ್ರಿ.ಶ. ೧೧೨೯, ಅಕ್ಟೋಬರ್ ೨೯.

೧೯೩. ಗೋಗಿ ಹನುಮಾಕ್ಷಿ., (ಸಂ.), *ಸುರಪುರ ತಾಲೂಕಿನ ಶಾಸನಗಳು.*, ನಂ. ೬೭, ಮುದನೂರು, ಕ್ರಿ.ಶ. ೧೧೨೯, ಡಿಸೆಂಬರ್ ೨೪.

೧೯೪. ಗೋಗಿ ಹನುಮಾಕ್ಷಿ., (ಸಂ.), *ಕಲ್ಬುರ್ಗಿ ಜಿಲ್ಲೆಯ ಶಾಸನಗಳು*, ನಂ. ೩, ನಿಂಬರಗಿ, ಕ್ರಿ.ಶ. ೧೧೩೪.

೧೯೫. ಅದೇ, ನಂ. ೧೭, ಸೇಡಂ, ಕ್ರಿ.ಶ. ೧೧೩೭.

೧೯೬. ಅದೇ, ನಂ. ೩, ನಿಂಬರಗಿ, ಕ್ರಿ.ಶ. ೧೧೩೪.

೧೯೭. ಕಲಬುರ್ಗಿ ಎಂ.ಎಂ. (ಸಂ.), *ಮಾನಸೋಲ್ಲಾಸ*, ಪು. ೩೩೭.

೧೯೮. ಅದೇ, ಪು. ೩೩೬.

೧೯೯. ಅದೇ, ಪು. ೩೩೯.

೨೦೦. ಅದೇ, ಪು. ೩೪೦.

೨೦೧. ಅದೇ, ಪು. ೩೪೧.

೨೦೨. ಅದೇ.

೨೦೩. ಅದೇ.

೨೦೪. ಅದೇ, ಪು. ೩೪೨.

೨೦೫. ಅದೇ.

೨೦೬. ಅದೇ, ಪು. ೩೫೭, ೩೫೮, ೩೬೦-೩೬೩.

೨೦೭. ಅದೇ, ಪು. ೩೫೯-೩೬೦.

೨೦೮. ಅದೇ.

೨೦೯. ಅದೇ, ಪು. ೨೯೮-೨೯೯.

೨೧೦. ಅದೇ, ಪು. ೩೦೨-೩೧೪.

೨೧೧. ಕಲಬುರ್ಗಿ ಎಂ.ಎಂ. (ಸಂ.), ಮಾನಸೋಲ್ಲಾಸ, ಪು. ೩೦೩.

೨೧೨. ಮಲ್ಲಾಪುರ, ಬಿ.ವ್ಹಿ., *ನಯಸೇನ ಮತ್ತು ಅವನ ಕೃತಿಗಳು.*, ಪು. ೩೨೦-೩೨೧.

೨೧೩. ಕಲಬುರ್ಗಿ ಎಂ.ಎಂ. (ಸಂ.), *ಮಾನಸೋಲ್ಲಾಸ*, ಪ್ರಸ್ತಾವನೆ, ಪು. xx.

೨೧೪. ಅದೇ, ಪು. xxi.

೨೧೫. ಅದೇ, ಪು. xx.

೨೧೬. ಅದೇ.

೨೧೭. ಮುಗಳಿ, ರಂ.ಶ್ರೀ., *ಕರ್ನಾಟಕದ ಸಾಂಸ್ಕೃತಿಕ ಪರಂಪರೆ,* (ಅನು.) ಶಾಸ್ತ್ರಿ, ಕೆ.ಜಿ. ಮತ್ತು ಪಾಟೀಲ, ಎಸ್.ಪಿ., ಪು. ೧೪೨.

೨೧೮. ಚಿದಾನಂದಮೂರ್ತಿ, ಎಂ., *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ.*, ಪು. ೪೫೨.

೨೧೯. Appadorai A., *Economic Condition in South India.* II, p. 738.

೨೨೦. ದೇವರಕೊಂಡಾರೆಡ್ಡಿ (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೧,* ನಂ. ೩೪, ರಾಗಿಮುಸಲವಾಡ, ಕ್ರಿ.ಶ. ೧೧೨೭, ಜುಲೈ ೧೦.

೨೨೧. ಗೋಗಿ ಹನುಮಾಕ್ಷಿ., (ಸಂ.), *ಕಲ್ಬುರ್ಗಿ ಜಿಲ್ಲೆಯ ಶಾಸನಗಳು,* ನಂ. ೩, ನಿಂಬರಗಿ, ಕ್ರಿ.ಶ. ೧೧೩೪.

೨೨೨. ಕಲಬುರ್ಗಿ ಎಂ.ಎಂ. (ಸಂ.), *ಮಾನಸೋಲ್ಲಾಸ,* ಪು. ೧೨.

೨೨೩. ದೇವರಕೊಂಡಾರೆಡ್ಡಿ (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೩,* ನಂ. ೫೩, ಕುಕನೂರು, ಕ್ರಿ.ಶ. ೧೧೩೨, ಮಾರ್ಚ್ ೩.

೨೨೪. ಎಸ್.ಆಯ್.ಆಯ್.ಸಂಪುಟ- XX, ನಂ. ೧೦೧, ಕಾಮಧೇನು, ಕ್ರಿ.ಶ. ೧೧೨೯, ಮಾರ್ಚ್ ೨೩.

೨೨೫. ದೇವರಕೊಂಡಾರೆಡ್ಡಿ (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ* -೩, ನಂ. ೫೩, ಕುಕನೂರು, ಕ್ರಿ.ಶ. ೧೧೩೨, ಮಾರ್ಚ್ ೩.

೨೨೬. ಚಿದಾನಂದಮೂರ್ತಿ, ಎಂ., *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ.*, ಪು. ೪೪೮.

೨೨೭. ದೇವರಕೊಂಡಾರೆಡ್ಡಿ (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ* -೩, ನಂ. ೫೩, ಕುಕನೂರು, ಕ್ರಿ.ಶ. ೧೧೨೯, ಡಿಸೆಂಬರ್ ೨೫.

೨೨೮. ಈರಣ್ಣ, ಕೆ.ಪಿ., *ಬಾದಾಮಿ ಚಾಲುಕ್ಯರ ಸಾಂಸ್ಕೃತಿಕ ಪರಂಪರೆ*, ಪುಟ. ೯೨.

೨೨೯. ಎ.ಕ. ಸಂಪುಟ- V, ಟಿ.ನರಸೀಪುರ, ನಂ. ೬೯, ಬನ್ನೂರು, ಕ್ರಿ.ಶ. ೧೧೩೫.

೨೩೦. ಉಪಾಧ್ಯ, ಜಿ.ಎನ್., (ಸಂ.), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ* -೬, ನಂ. ೧೩೭, ಔರಾದ, ಕ್ರಿ.ಶ. ೧೧೩೫, ಮಾರ್ಚ್ ೧೧.

ಅಧ್ಯಾಯ - ಏಳು Chapter- 7
ಶಿಕ್ಷಣ ಮತ್ತು ಸಾಹಿತ್ಯ

ವಿದ್ಯೆಯ ಮಹತ್ವ:

ವಿದ್ಯೆಗೆ ಮಾನವನ ಬದುಕಿನಲ್ಲಿ ಬಹಳ ಮಹತ್ತರವಾದ ಸ್ಥಾನವಿದೆ. ಮಾನವ ಸಮಾಜದಲ್ಲಿ ಉತ್ತಮವಾಗಿ ಬಾಳಲು ತನ್ನ ತಪ್ಪುಗಳನ್ನು ತಿದ್ದಿಕೊಂಡು ನಡೆಯಲು, ಜೀವಿಸಿದ್ದಕ್ಕೊಂದು ಶಾಶ್ವತತೆಯ ರೂಪು ದೊರಕಿಸುವ ಮಹತ್ತರವಾದ ಕಾರ್ಯವನ್ನು ಸಾಧಿಸಲು ವಿದ್ಯೆಯು ನೆರವಾಗುತ್ತದೆ. ಇಂಥ ವಿದ್ಯೆಯ ಬಗೆಗೆ ಇರುವ ಭಾರತೀಯ ನಂಬಿಕೆಯು ಬಹಳ ಗಾಢವಾದದ್ದು. ಆದ್ದರಿಂದಲೇ ವಿದ್ಯೆ ಇಲ್ಲದ ಮನುಷ್ಯನನ್ನು ಪಶುವಿಗೆ ಸಮಾನನೆಂದು ಪರಿಗಣಿಸಲಾಗುತ್ತಿತ್ತು.[೧] ವಿದ್ಯೆಯು ಮಾನವನನ್ನು ತಾಯಿಯಂತೆ ಕಾಪಾಡುತ್ತದೆ, ತಂದೆಯಂತೆ ಒಳ್ಳೆಯ ಮಾರ್ಗದಲ್ಲಿ ನಡೆಸುತ್ತದೆ. ಮಡದಿಯಂತೆ ಕಷ್ಟಗಳನ್ನು ಹೋಗಲಾಡಿಸಿ ಸಂತೋಷಗೊಳಿಸುತ್ತದೆ. ಐಶ್ವರ್ಯವನ್ನು ತರುತ್ತದೆ, ಕೀರ್ತಿಯನ್ನು ಹರಡುತ್ತದೆ.[೨] ಆದಕ್ಕಾಗಿಯೇ ವಿದ್ಯೆಯಿಂದ ವಿನಯ, ವಿನಯದಿಂದ ಪಾತ್ರತೆ, ಪಾತ್ರತೆಯಿಂದ ಧನ, ಧನದಿಂದ ಧರ್ಮ, ಧರ್ಮದಿಂದ ಸುಖ ಪ್ರಾಪ್ತವಾಗುತ್ತದೆ ಎಂಬ ಮಾತೂ ಇದೆ.[೩]

ವಿದ್ಯೆಯು ಎರಡು ತೆರನಾದುದು ಒಂದು ಪರಾವಿದ್ಯೆ ಮತ್ತೊಂದು ಅಪರಾವಿದ್ಯೆ.[೪] ಮನುಷ್ಯನ ಆತ್ಮವಿಕಾಸಕ್ಕೆ ಸಾಧಕವಾದುದು ಪರಾವಿದ್ಯೆ ಇದೇ ಶ್ರೇಷ್ಠವಾದುದು. ಲೌಕಿಕ ಸುಖಕ್ಕೆ ಸಾಧಕವಾದುದು ಅಪರಾವಿದ್ಯೆ.

ವಿದ್ಯಾಭ್ಯಾಸ-ಪ್ರಾಚೀನತೆ:

ವೈದಿಕ ಯುಗದಲ್ಲಿ ವಿದ್ಯಾಕೇಂದ್ರಗಳೆಂದು ಕರೆಯಿಸಿಕೊಳ್ಳುವ ಕೇಂದ್ರಗಳಿದ್ದಿಲ್ಲ. ಗುರುವಿನ ಮನೆಯೇ ಪಾಠಶಾಲೆಯಾಗಿತ್ತು. ಶಿಷ್ಯನಾದವನು ಗುರುವಿನ ಮನೆಯಲ್ಲಿ ಗುರುಸೇವೆ ಮಾಡುತ್ತ ಭಿಕ್ಷಾನ್ನದಿಂದ ಜೀವಿಸಬೇಕಾಗಿತ್ತು. ತನ್ನ ಪ್ರತಿದಿನದ ಬದುಕಿನ ಎಲ್ಲಾ ಚಟುವಟಿಕೆಗಳಿಗೂ ಗುರು ಅಥವಾ ಗುರುವಿನ ಕುಟುಂಬದ ಅನುಮತಿಯನ್ನು ಪಡೆಯಬೇಕಾಗಿತ್ತು. ಅಂದರೆ ಶಿಷ್ಯನಾದವನು ತನ್ನ ವಿದ್ಯಾಭ್ಯಾಸದ ಅವಧಿಯಲ್ಲಿ ಸಂಪೂರ್ಣವಾಗಿ ಗುರುವಿನ ಅಧೀನದಲ್ಲಿರುತ್ತಿದ್ದನು. ಮತ್ತು ಈ ಕಾಲದಲ್ಲಿ ಗುರುಮುಖೇಣ ಶಿಷ್ಯಪರಂಪರೆಗೆ ವಾಕ್‌ರೂಪದಲ್ಲಿ ಬೋಧಿಸಲ್ಪಡುತ್ತಿದ್ದಾಗ ಶ್ರವಣ, ಮನನ, ಧ್ಯಾನಗಳು ಬಹಳ ಮುಖ್ಯವಾಗಿದ್ದವು.

ಕ್ರಮೇಣ ಲಿಪಿಗಳು ಸೃಷ್ಟಿಯಾದವು ಅಲ್ಲದೆ ಜ್ಞಾನದ ವಿವಿಧ ಶಾಖೆಗಳೂ ಬೆಳೆಯತೊಡಗಿದವು. ಇದಕ್ಕನುಗುಣವಾಗಿ ಅವುಗಳನ್ನು ಕಲಿಸುವ ಪದ್ಧತಿಯಲ್ಲಿಯೂ ವಿಕಾಸ ತಲೆದೋರಿತು. ವಿದ್ಯಾಸಂಸ್ಥೆಗಳು ರೂಪುಗೊಂಡವು ಮತ್ತು ಬೆಳೆಯುತ್ತಿರುವ ಜ್ಞಾನವನ್ನು ಕಲಿಸುವ ಕ್ರಮದಲ್ಲಿ ಒಂದು ವ್ಯವಸ್ಥೆಯನ್ನುಂಟುಮಾಡುವ ಪ್ರಯತ್ನ ನಡೆಯಿತು.

ಉಪನಿಷತ್ತುಗಳ ವೇಳೆಗಾಗಲೇ ವಿದ್ಯಾಭ್ಯಾಸ ಪದ್ಧತಿ ಒಂದು ಹಂತವನ್ನು ತಲುಪಿತ್ತೆನ್ನಬಹುದು. ವಿದ್ಯಾಭ್ಯಾಸದ ಉದ್ದೇಶ ಮತ್ತು ವ್ಯಾಪ್ತಿಗಳನ್ನು ಕುರಿತಾದ ಒಂದು ಸ್ಪಷ್ಟವಾದ ಕಲ್ಪನೆ ರೂಪುಗೊಂಡಿತ್ತು. ಆಧ್ಯಾತ್ಮಿಕ ತಳಹದಿಯ ಮೇಲೆ ಪ್ರಾರಂಭವಾದ ಧಾರ್ಮಿಕ ಶಿಕ್ಷಣವೇ ಆಗ ವಿದ್ಯಾಭ್ಯಾಸದ ಸರ್ವಸ್ವವಾಗಿತ್ತೆನ್ನಬಹುದು.

ಇತಿಹಾಸ, ಪುರಾಣಗಳು ಮತ್ತು ಸ್ಮೃತಿಗಳ ಕಾಲದ ವೇಳೆಗಾಗಲೇ ಅಧ್ಯಯನದ ವಿಷಯಗಳು ವಿಪುಲವಾಗಿ ಬೆಳೆದಿದ್ದವು. ಕೇವಲ ವೇದಪಾಠಗಳಲ್ಲದೆ, ವೇದಾಂಗಗಳು, ತರ್ಕ. ವ್ಯಾಕರಣ, ಮೀಮಾಂಸೆ, ಸಾಹಿತ್ಯ, ಅಲಂಕಾರ, ಜ್ಯೋತಿಷ್ಯ, ಖಗೋಳಾದಿ ಶಾಸ್ತ್ರಗಳೂ ಪಠ್ಯ ವಿಷಯಗಳಾಗಿದ್ದವು. ತಮಗೆ ಇಷ್ಟವಾದ ವಿಷಯಗಳನ್ನು ಆಯ್ದುಕೊಂಡು ಅದರಲ್ಲಿ ಪರಿಣತಿಯನ್ನು ಪಡೆಯುತ್ತಿದ್ದರು. ವೇದಪಾರಾಂಗತರಲ್ಲಿ ದ್ವಿವೇದಿ, ತ್ರಿವೇದಿ, ಚತುರ್ವೇದಿ ಇತ್ಯಾದಿ ಮಾತುಗಳನ್ನು ನೋಡಿದರೆ, ಅಷ್ಟಷ್ಟು ವೇದಗಳನ್ನು ಅವರು ಅಭ್ಯಾಸ ಮಾಡಿಕೊಂಡಿರುತ್ತಿದ್ದಂತೆ ತೋರುತ್ತದೆ.

ಬೌದ್ಧಧರ್ಮ ಪ್ರಬಲವಾದ ಮೇಲೆ ಅದು ವಿದ್ಯಾರಂಗದಲ್ಲಿ ಬಹುದೊಡ್ಡ ಪ್ರಭಾವವನ್ನು ಬೀರಿತು. ಅಶೋಕನ ಕಾಲದಲ್ಲಿಯಂತೂ ಅದು ರಾಷ್ಟ್ರಧರ್ಮವಾಗಿ ಪರಿಣಮಿಸಿ, ಧರ್ಮದ ಉದಾತ್ತ ತತ್ವಗಳನ್ನು ಸಾರ್ವತ್ರಿಕವಾಗಿ ಹರಡಲು ಪ್ರಯತ್ನಿಸಿತು. ಬೌದ್ಧ ವಿಹಾರಗಳೂ ಸಂಘಾರಾಮಗಳೂ ವಿದ್ಯಾಕೇಂದ್ರಗಳಾದವು. ನಳಂದ, ತಕ್ಷಶಿಲೆ ಮೊದಲಾದ ಕಡೆಗಳಲ್ಲಿ ಬೆಳೆದ ವಿಶ್ವವಿದ್ಯಾನಿಲಯಗಳಂತೂ ಆ ಕಾಲದ ಅತ್ಯುತ್ತಮ (ಶ್ರೇಷ್ಠವಾದ) ವಿದ್ಯಾಸಂಸ್ಥೆಗಳಾಗಿದ್ದವೆಂದರೆ ಅತಿಶಯೋಕ್ತಿಯೇನಲ್ಲ. ನಂತರ ಬೌದ್ಧರಂತೆ ಜೈನರೂ ಸಹ ದೇಶದ ವಿದ್ಯಾಭ್ಯಾಸವನ್ನು ರೂಪಿಸುವುದರಲ್ಲಿ ಪ್ರಮುಖ ಪಾತ್ರವಹಿಸಿದರು. ಅವರ ಚೈತ್ಯಾಲಯಗಳೂ ಬಸದಿಗಳೂ ಸಾಂಸ್ಕೃತಿಕ ಕೇಂದ್ರಗಳಾಗಿ ವಿದ್ಯಾರ್ಥಿಗಳನ್ನು ಆಕರ್ಷಿಸಿ ವಿದ್ಯೆಯ ಪ್ರಸಾರಕ್ಕೆ ಕಾರಣವಾದವು.[೫]

ಕ್ರಮೇಣ ಭೂಮಿಪಾಲಕರೆನಿಸಿಕೊಂಡಿದ್ದ ರಾಜರು, ತಮ್ಮ ಆಡಳಿತ ವ್ಯಾಪ್ತಿಯ ಪ್ರದೇಶದಲ್ಲಿನ ಆಶ್ರಮಗಳು ಗುರು, ಶಿಷ್ಯವರ್ಗಗಳ ಯೋಗಕ್ಷೇಮಗಳಿಗಾಗಿ ಆಸಕ್ತಿ ತೆಳದು, ಅವುಗಳ ಅನಿರ್ಬಾಧಿತ ವ್ಯವಸ್ಥೆಗಾಗಿ ದಾನ-ದತ್ತಿಗಳನ್ನು ನೀಡತೊಡಗಿದರು. ತಮ್ಮ ರಾಜ್ಯದ ಜನತೆಯು ವಿದ್ಯಾವಂತರಾಗಿ, ಸುಸಂಸ್ಕೃತರಾಗಿ ತಮ್ಮ ಬದುಕನ್ನು ಹಸನು ಮಾಡಿಕೊಂಡು, ಜೀವನವನ್ನು ನಡೆಸಬೇಕೆಂಬ ಹಿರಿಯಾಸೆಯು ಆ ಕಾಲದ ರಾಜರುಗಳಿಗೆ ಇತ್ತೆಂದು ತಿಳಿಯುತ್ತದೆ. ಆದ್ದರಿಂದಲೇ ಆಶ್ರಮಗಳಲ್ಲಿ ಗುರು-ಶಿಷ್ಯರ ಜೀವನಕ್ಕಾಗಿ, ಅಡ್ಡಿ-ಆತಂಕಗಳಿಲ್ಲದ ವಿದ್ಯಾಭ್ಯಾಸಕ್ಕಾಗಿ, ಅನುಕೂಲಗಳನ್ನು ಒದಗಿಸಲು ರಾಜರು, ಅಧಿಕಾರಿಗಳು, ಶ್ರೀಮಂತರು ಮುಂದೆ ಬರುತ್ತಿದ್ದರು.[೬]

ಪ್ರಾಚೀನ ಕರ್ನಾಟಕದ ವಿದ್ಯಾಭ್ಯಾಸದಲ್ಲಿ ಕಂಡುಬರುವ ಮತ್ತೊಂದು ಪ್ರಮುಖವಾದ ಅಂಶವೆಂದರೆ, ಊರೂರುಗಳಲ್ಲಿ ಹಳ್ಳಿಗಳಲ್ಲಿ ಅಗ್ರಹಾರಗಳೂ, ಮಠಗಳೂ, ಘಟಿಕಾಸ್ಥಾನಗಳೂ ನಿರ್ಮಾಣವಾಗಿ ವಿದ್ಯೆಯನ್ನು ಸಾಧ್ಯವಾಗುವಷ್ಟು ವ್ಯಾಪಕವನ್ನಾಗಿ ಮಾಡುವ ಪ್ರಯತ್ನ. ಮೂರನೆಯ ಸೋಮೇಶ್ವರನ ನಾಡಿನ ಆದ್ಯಂತವೂ ದೊರಕುವ ಹಲವಾರು ಶಾಸನಗಳು ಆ ಕಾಲದ ವಿದ್ಯಾಭ್ಯಾಸದ ಪದ್ಧತಿಯ ಪರಿಚಯಕ್ಕೆ ಪುಷ್ಟಿಯನ್ನು ಕೊಡುತ್ತವೆ.

ವಿದ್ಯಾಭ್ಯಾಸ: ಮಠಗಳು ಮತ್ತು ದೇವಸ್ಥಾನಗಳು:

ವೇದಕಾಲದ ಆಶ್ರಮಗಳ ಬದಲಿಗೆ ಅದೇ ಜಾಡಿನಲ್ಲಿ ಬೆಳದ ಮಠಗಳು ವಿದ್ಯಾಕೇಂದ್ರಗಳಾಗಿ ಕೆಲಸ ಮಾಡುತ್ತಿದ್ದವು. ಈ ಮಠಗಳು ದೇವಾಲಯಗಳ ಜೊತೆಗೇ ಇರುತ್ತಿದ್ದವು. ದೇವಸ್ಥಾನದ ಜವಾಬ್ದಾರಿಯನ್ನು ವಹಿಸಿಕೊಂಡಿದ್ದ ಸ್ಥಾನಿಕ ಅಥವಾ ಧಾರ್ಮಿಕ ಗುರುವು ವಿದ್ಯಾಭ್ಯಾಸದ ಜವಾಬ್ದಾರಿಯನ್ನು ಒಪ್ಪಿಕೊಂಡಿದ್ದನು. ವಿದ್ಯಾಭ್ಯಾಸದ ಕ್ರಮ, ಬೋಧನೆ, ಬೋಧನಾ ವಿಷಯಗಳು, ಪರೀಕ್ಷೆ ಇತ್ಯಾದಿಗಳ ನಿರ್ವಹಣೆಯ ಜವಾಬ್ದಾರಿಯೂ ಸ್ಥಾನಿಕನ ಮೇಲೆಯೇ ಇರುತ್ತಿತ್ತು. ಅಲ್ಲಿ ಯಾವ ಲೋಪ-ದೋಷಗಳೂ ಸಂಭವಿಸುವಂತಿರಲಿಲ್ಲ. ವಿದ್ಯಾಕೇಂದ್ರದ ಕಷ್ಟ-ಸುಖ ಎಲ್ಲಕ್ಕೂ ಸ್ಥಾನಿಕನೇ ಹೊಣೆಯಾಗಬೇಕಿತ್ತು. ಅಲ್ಲಿನ ವ್ಯವಸ್ಥೆಗಾಗಿ ಆಳುವ ರಾಜ, ಮಾಂಡಳಿಕ, ಅಧಿಕಾರಿಗಳಿಂದ ಹೇರಳವಾದ ಸಹಾಯವು ದೊರಕುತ್ತಿತ್ತು. ಇದರಿಂದ ವಿದ್ಯಾಕೇಂದ್ರಗಳು ಸ್ವಾಯತ್ತ ಸಂಸ್ಥೆಗಳಾಗಿದ್ದವು ಎಂದು ತಿಳಿಯಬಹುದು.

ದೇವಾಲಯಗಳು ಅವುಗಳಿಗೆ ಸೇರಿದ ಮಠಗಳು, ಅವಕ್ಕೆ ಹೊಂದಿಕೊಂಡ ವಿದ್ಯಾಕೇಂದ್ರಗಳು, ಎಲ್ಲವೂ ಬಹುತೇಕ ನೈಷ್ಠಿಕ ತಪೋಧನರ ಆಡಳಿತಕ್ಕೆ ಮತ್ತು ನಿಯಂತ್ರಣಕ್ಕೆ ಒಳಪಡುತ್ತಿದ್ದುದರಿಂದ ಆ ವಾತಾವರಣದ ಶಿಸ್ತು ಕಟ್ಟುನಿಟ್ಟಿನದಾಗಿರುತ್ತಿತ್ತು. ವಿದ್ಯಾಭ್ಯಾಸದ ಅವಧಿಯಲ್ಲಿ ಅಂತಹ ಶಿಸ್ತು ಅವಶ್ಯಕವೂ ಆಗಿರುತ್ತಿತ್ತು.

ದೇವಾಲಯಕ್ಕೆ ದೊರೆತಷ್ಟೇ ಪ್ರಾಮುಖ್ಯತೆಯು ಮಠ ಮತ್ತು ವಿದ್ಯಾಕೇಂದ್ರಗಳಿಗೂ ದೊರೆತಿದೆ. ದೇವರು, ಧರ್ಮ, ವಿದ್ಯೆ ಈ ಮೂರು ಪರಸ್ಪರ ಹೆಣೆದುಕೊಂಡಿದ್ದವು. ರಾಜ್ಯದ ಎಲ್ಲ ವರ್ಗದ ಜನರಿಗೆ ದೇವರು ತನ್ಮೂಲಕ ದೇವಸ್ಥಾನವು ಪೂಜ್ಯ ಸ್ಥಾನವಾಗಿತ್ತು. ಭಕ್ತರಾದವರಲ್ಲಿ ಕೆಲವರು ಧಾರ್ಮಿಕ ವಿಚಾರಗಳಲ್ಲಿ ಹೆಚ್ಚಿನ ಪ್ರೀತಿ ಬೆಳೆಸಿಕೊಳ್ಳುತ್ತಿದ್ದರು. ಅದಕ್ಕಾಗಿ ಧರ್ಮವು ವಿಶೇಷ ಸ್ಥಾನವನ್ನು ಪಡೆದಿತ್ತು. ಧರ್ಮವನ್ನು ಉಳಿಸಲು, ಬೆಳೆಸಲು, ವೇದ-ವೇದಾಂಗ, ಪುರಾಣ ಇತ್ಯಾದಿ ಶಾಸ್ತ್ರಗಳನ್ನು ಉಳಿಸಲು ವಿದ್ಯಾಭ್ಯಾವು ಅವಶ್ಯಕವಾಗಿತ್ತು. ಹೀಗೆ ಪರಸ್ಪರ ಸಂಬಂಧ ಪಡೆದಿದ್ದ ದೇವರು-ದೇವಾಲಯ, ಧರ್ಮ ಮತ್ತು ವಿದ್ಯೆಗಳು ಅಧಿಕಾರ ಮತ್ತು ಐಶ್ವರ್ಯವಿದ್ದು ಕೊಡಬೇಕೆನ್ನುವ ಮನಸ್ಸಿದ್ದವರಿಂದ ವಿಶೇಷವಾದ ಸಹಾಯ ಪಡೆದವು. ದಾನಿಗಳು ವಿದ್ಯಾದಾನವನ್ನು ಆದರಿಸಿದ್ದರು ವಿದ್ಯಾಭ್ಯಾಸವು ಮುಂದುವರಿಯಲು ಜನತೆ ನೆರವಾಗುತ್ತಿತ್ತು.

ಕರಾಡಖೇಡ ಶಾಸನವು[೧] "ಶ್ರೀ ಸ್ವಯಂಭೂ ಸೋಮನಾಥ ದೇವರ ಅಂಗಭೋಗ ರಂಗಭೋಗ ವಿದ್ಯಾದಾನ ಖಂಡಸ್ಫುಟಿತ ಜೀರ್ಣೋದ್ಧಾರಕ್ಕಂ ಸಕ್ಕರ-೮೦ ರ ಬಳಿಯ ಭಾಯಿಗಾವೆಯ ಸಾಮಂತಭೋಗಮಂ ಬಿಟ್ಟರು" ಎಂದು ಉಲ್ಲೇಖಿಸಿದೆ. ಕಣಿಕಟ್ಟೆ ಶಾಸನವು[೨] "ದೇವರಂಗಭೋಗ ನಿವೇದ್ಯಕ್ಕಂ ತಪೋಧನರ ಆಹಾರದಾನಕ್ಕಂ ವಿದ್ಯಾದಾನಕ್ಕಂ" ಎಂದು ಭೂದಾನ ಮಾಡಿರುವುದನ್ನು ತಿಳಿಸಿದೆ. ಹೀಗೆ ವಿದ್ಯಾಪ್ರಸಾರವು ನಿರಂತರವಾಗಿ ನಡೆಯಲೆಂಬ ಉದ್ದೇಶದಿಂದ ಸಾಧ್ಯವಿದ್ದ ಜನರೆಲ್ಲಾ ವಿದ್ಯಾದಾನಕ್ಕೆ ನೆರವಾಗಲು ದಾನ ದತ್ತಿಗಳನ್ನು ನೀಡಿದ್ದಾರೆ.

ಕೆಲವು ದೇವಾಲಯಗಳಲ್ಲಿ ಪ್ರಾಥಮಿಕ ಮತ್ತು ಉನ್ನತ ಶಿಕ್ಷಣಗಳೆರಡಕ್ಕೂ ವ್ಯವಸ್ಥೆಯಿದ್ದರೆ, ಇನ್ನು ಕೆಲವು ದೇವಾಲಯಗಳಲ್ಲಿ ಕೇವಲ ಉನ್ನತ ಶಿಕ್ಷಣಕ್ಕೆ ಮಾತ್ರ ವ್ಯವಸ್ಥೆಯಿತ್ತು. ಉದಾ: ತಾಳಗುಂದದ ಪ್ರಣವೇಶ್ವರ ದೇವಾಲಯಕ್ಕೆ ಹೊಂದಿಕೊಂಡಂತೆ ಇದ್ದ ದೇವಾಲಯ ವಿದ್ಯಾಪೀಠದಲ್ಲಿ ಪ್ರಾಥಮಿಕ ಮತ್ತು ಉನ್ನತ ಶಿಕ್ಷಣಗಳೆರಡಕ್ಕೂ ವ್ಯವಸ್ಥೆಯಿತ್ತು. ಅಲ್ಲಿ ಆರುಜನ ಪಂಡಿತರು ಋಗ್ವೇದ, ಯಜುರ್ವೇದ, ಪದಪಾಠ, ಸಾಮವೇದ, ವ್ಯಾಕರಣ, ರೂಪಾವತಾರ, ನ್ಯಾಸ, ಪ್ರಭಾಕರ ಮತ್ತು ವೇದಾಂತಗಳನ್ನು ಹೇಳಿಕೊಡುತ್ತಿದ್ದರು. ಅಲ್ಲದೇ ಅಲ್ಲಿ ಕನ್ನಡ (ಕಂನಡಕ್ಷರಸಿಕ್ಷೆ ಘಳಿಯಾರವಾರುಂಖಂಡಿಕದುಪಾಧ್ಯಾಯ)[೯] ಅಕ್ಷರಗಳನ್ನು ಕಲಿಸುತ್ತಿದ್ದ ಉಪಾಧ್ಯಾಯರಿಗೆ ಪ್ರತ್ಯೇಕವಾದ ದತ್ತಿಯನ್ನು ಬಿಡಲಾಗಿದೆ. ಇದರಿಂದ ದೇವಾಲಯವೂ ಉನ್ನತ ಶಿಕ್ಷಣ ಕೇಂದ್ರವಾಗಿದ್ದಂತೆ ಪ್ರಾಥಮಿಕ ಶಿಕ್ಷಣದ ಕೇಂದ್ರವೂ ಆಗಿತ್ತೆಂಬುದು ಸ್ಪಷ್ಟವಾಗುತ್ತದೆ.

ವಿದ್ಯಾಕೇಂದ್ರಗಳಲ್ಲಿ ವಿದ್ಯಾದಾನ ಮಾಡುವುದಷ್ಟೇ ಮುಖ್ಯ. ವಿದ್ಯೆಯನ್ನು ಬೋಧಿಸುವ ಗುರುವಿಗೆ ಅದರ ಉಸ್ತುವಾರಿಯ ಜವಾಬ್ದಾರಿಯೂ ಸೇರಿದರೆ ಅದರಿಂದ ತೊಂದರೆಯಷ್ಟೇ ಹೊರತು ಅನುಕೂಲವೇನಿಲ್ಲ. ಆದ್ದರಿಂದ ವಿದ್ಯಾಕೇಂದ್ರದ ಪ್ರಧಾನ ಭಾಗವಾಗಿದ್ದ ದೇವಾಲಯ, ಮಠಗಳ ನಿರ್ವಹಣೆಯ ಜವಾಬ್ದಾರಿಯಿಂದ ಮುಕ್ತರಾಗಲು ಗುರುಗಳು ಯೋಚಿಸುತ್ತಿದ್ದುದಕ್ಕೆ ಬಳ್ಳಿಗಾವೆಯ ಒಂದು ಶಾಸನ ಒಳ್ಳೆಯ ಉದಾಹರಣೆಯಾಗಿದೆ. ಕೇದಾರೇಶ್ವರ ಮಠದ ಗುರುಗಳಲ್ಲಿ ಒಬ್ಬರಾದ ವಿದ್ಯಾಭರಣ ಪಂಡಿತದೇವರು ''ವಿದ್ಯಾಭರಣ ವ್ಯಾಸಾಂಗವಲ್ಲದಿತರ ವಾಸಂಗಮನೊಲ್ಲದೆ'' ಮಠ ವ್ಯಾಸಂಗವನ್ನು ತನ್ನ ಶಿಷ್ಯರಲ್ಲಿ ಮುಖ್ಯನಾದ ವಾಮಶಕ್ತಿ ಮುನಿಗೆ ನಿಯೋಜಿಸುತ್ತಾರೆ.[೧೦] ಇಲ್ಲಿ 'ಮಠದ ವ್ಯಾಸಾಂಗ' ಎಂಬುದು ವಿಶೇಷ ಗಮನಸೆಳೆಯುವ ವಿಷಯವಾಗಿದೆ. ಇದು ಮಠದಲ್ಲಿ ನಡೆಯುವ ವಿದ್ಯಾಭ್ಯಾಸ. ಮನೆಗಳಲ್ಲಿ, ಮಠಗಳಲ್ಲಿ, ಅಗ್ರಹಾರಗಳಲ್ಲಿ, ಬ್ರಹ್ಮಪುರಿಗಳಲ್ಲಿ, ಘಟಿಕಾಸ್ಥಾನಗಳಲ್ಲಿ ವಿದ್ಯಾಭ್ಯಾಸಕ್ರಮ ಮತ್ತು ವಿಷಯಗಳು ಪ್ರತ್ಯೇಕವಾಗಿರುತ್ತಿತ್ತು ಎಂದು ಭಾವಿಸಲು 'ಮಠ ವ್ಯಾಸಾಂಗ' ಶಬ್ದವು ಕಾರಣವಾಗುತ್ತದೆ. ವಿದ್ಯಾಭರಣ ಪಂಡಿತನು ಮಠ ವ್ಯಾಸಂಗಕ್ಕೆ ವಾಮಶಕ್ತಿ ಮುನಿಯನ್ನು ಮಠಾಧಿಪತ್ಯಕ್ಕೆ ಗೌತಮ ಮುನಿಯನ್ನು, ನಿಯೋಜಿಸುವುದರಿಂದ ಬೋಧನ ವೃತ್ತಿ ಮತ್ತು ಆಡಳಿತಾಧಿಕಾರ ಎರಡನ್ನೂ ದೊಡ್ಡ ವಿದ್ಯಾಕೇಂದ್ರಗಳಲ್ಲಿ ಒಟ್ಟಿಗೇ ನಿರ್ವಹಿಸಲು ಸಾಧ್ಯವಾಗುತ್ತಿರಲಿಲ್ಲ ಎಂದು ತಿಳಿಯುತ್ತದೆ. ಬೋಧನೆ ಮತ್ತು ಆಡಳಿತಗಳು ಒಟ್ಟಿಗೆ ಇರುವುದು ಅನಪೇಕ್ಷಣೀಯ ಹಾಗೂ ವ್ಯಕ್ತಿಯ ಮೇಲಿನ ಜವಾಬ್ದಾರಿಯ ಒತ್ತಡದಿಂದಲೂ ಹಿತಕರವಲ್ಲ ಎಂಬ ಕಾರಣದಿಂದ ಜವಾಬ್ದಾರಿಯನ್ನು ವಿದ್ಯಾಭರಣ ಪಂಡಿತರು ಇಬ್ಬರು ಶಿಷ್ಯರಿಗೆ ಹಂಚಿರಬೇಕು.

ತಪೋಧನರ ಆಹಾರ ಕಪ್ಪಡದಾನಕ್ಕಂ,[೧೧] ನೈಷ್ಠಿಕ ತಪೋಧನರಾಹಾರದಾನಕ್ಕಂ,[೧೨] ತಪೋಧನರ ಗ್ರಾಸಕ್ಕಂ,[೧೩] ಎಂಬ ಉಲ್ಲೇಖಗಳು ವಿದ್ಯಾಭ್ಯಾಸ ಮಾಡುತ್ತಿದ್ದ ವಿದ್ಯಾರ್ಥಿ, ತಪೋಧನರ ಊಟದ ವ್ಯವಸ್ಥೆಯನ್ನು ಪರೋಕ್ಷವಾಗಿ ಸೂಚಿಸುತ್ತವೆ. ಮತ್ತು ತಪೋಧನರ ಅವಶ್ಯಕತೆಗಳು (ಅಶನ, ಆಚ್ಛಾದನ) ದಾನಿಗಳಿಂದ ಪೂರೈಸಲ್ಪಡುತ್ತಿದ್ದವು.

ಇದು ಆಗಿನ ಜನರಿಗೆ ವಿದ್ಯಾಭ್ಯಾಸದ ಬಗೆಗಿದ್ದ ತೀವ್ರವಾದ ಆಸಕ್ತಿಯನ್ನು ಸ್ಪಷ್ಟಪಡಿಸುತ್ತದೆ. ಮಠವು ದೇವಾಲಯದ ಒಂದು ಅಂಗವಾಗಿರುತ್ತಿತ್ತು. ಮತ್ತು ಅಲ್ಲಿ ವಿದ್ಯಾಭ್ಯಾಸಕ್ಕೆ ಅವಕಾಶ ಕಲ್ಪಿಸಲಾಗುತ್ತಿತ್ತು. ''ಮಠದ ತಪೋಧನರಾಹಾರದಾನಕ್ಕಂಯಥಿಯಭ್ಯಾಗತ ವಿದ್ಯಾರ್ಥಿಗಳ್ಗಂ'' ದಾನ ನೀಡಿರುವುದನ್ನು ಹಾರನಹಳ್ಳಿಯ ಒಂದು ಶಾಸನವು ತಿಳಿಸಿದೆ.[೧೪]

ಜೈನ ಬಸದಿಗಳಲ್ಲಿ ಸಹ ವಿದ್ಯಾಭ್ಯಾಸವು ನಡೆಯುತ್ತಿದ್ದಿತು.[೧೫] ಜೈನರು ವಿದ್ಯೆಯ ಮೂಲ ಸೂತ್ರವಾದ ''ವಿದ್ಯೋದಯಸ್ತನಮು ದೋನ್ತಿ'' (ಕ್ರಿ.ಶ.೧೧೨೯ರ ೬೭) ಎಂಬುದನ್ನು ಅರಗಿಸಿಕೊಂಡವರಾಗಿದ್ದರು.[೧೬] ಬಸದಿಗಳಲ್ಲಿ ವಾಸಿಸುವ ಮುನಿಗಳು ಉಪಾಧ್ಯಾಯರಾಗಿದ್ದರು. ಇವರಲ್ಲಿಗೆ ಬರುವ ಶಿಷ್ಯರು ವಿದ್ಯೆಕಲಿಯಲು ಆಸಕ್ತಿ ತೋರಿಸುತ್ತಿದ್ದರು.[೧೭] ಗುರುಗಳ ಬಗೆಗೆ ಇವರಿಗೆ ಅಪಾರವಾದ ಗೌರವವಿತ್ತು.[೧೮] ಅಂದು ಅಂಜನ, ಕವಾಚೋದ್ಘಾಟನ, ಗಗನಗಾಮಿ, ಅವಲೋಕಿನಿ, ವಿದ್ಯಾಧರಕರಣ, ಪರ್ಣಲಘ, ಅವಧಿಲೋಚನ ಮೊದಲಾದ ವಿದ್ಯೆಗಳನ್ನು ಕಲಿಸುತ್ತಿದ್ದರು.[೧೯] ಅಕ್ಷರ, ಗಣಿತ, ಅರವತ್ನಾಲ್ಕು ಕಲೆಗಳು, ಕುಲಜಾತಿಸಾಧಿತ ವಿದ್ಯೆಗಳು ಸಹ ಬೋಧಿಸಲ್ಪಡುತ್ತಿದ್ದವು.[೨೦] ಮೂರನೆಯ ಸೋಮೇಶ್ವರನ ಕಾಲದ ಶಾಸನಗಳು ಸಹ ಶೈಕ್ಷಣಿಕ ವಿಚಾರಗಳ ಬಗ್ಗೆ ಹಲವಾರು ವಿಷಯಗಳನ್ನು ಪ್ರಸ್ತಾಪಿಸುತ್ತವೆ.

ಘಟಿಕಾಸ್ಥಾನಗಳು, ಅಗ್ರಹಾರ, ಬ್ರಹ್ಮಪುರಿ, ಮಠ ಮತ್ತು ದೇವಾಲಯಗಳು ಶಿಕ್ಷಣದ ಕೇಂದ್ರಗಳಾಗಿದ್ದವು. ಕಲ್ಯಾಣ ಚಾಲುಕ್ಯರ ಶಾಸನಗಳಲ್ಲಿ ಪ್ರಾಥಮಿಕ ಶಿಕ್ಷಣಕ್ಕಿಂತಲೂ ಉಚ್ಚ ಶಿಕ್ಷಣಕ್ಕೆ ಬಿಟ್ಟ ದತ್ತಿಯೇ ಅಧಿಕವಾಗಿದ್ದು ಉನ್ನತ ಶಿಕ್ಷಣವು ಅಂದು ಪ್ರಮುಖ ಸ್ಥಾನವನ್ನು ಪಡೆದುಕೊಂಡಿತ್ತು. ತೀರ್ಥಯಾತ್ರೆಗಳಿಂದ, ಪುಣ್ಯತೀರ್ಥಕ್ಷೇತ್ರಗಳಲ್ಲಿ ಮೀಯುವುದರಿಂದ (ಸ್ನಾನಮಾಡುವುದರಿಂದ) ಹೇಗೆ ಪುಣ್ಯ ಲಭಿಸುತ್ತದೆಯೋ, ಯಜ್ಞಯಾಗಗಳನ್ನು ಮಾಡುವುದರಿಂದ ಯಾವ ಪುಣ್ಯ ಬರುತ್ತದೆಯೋ ಹಾಗೆ ಶಿಕ್ಷಣಕ್ಕೆ ದಾನ-ದತ್ತಿಗಳನ್ನು ನೀಡುವವನಿಗೆ ಅದಕ್ಕಿಂತಲೂ ಮಿಗಿಲಾದ ಕೋಟಿ ಪಾಲು ಪುಣ್ಯ ಬರುತ್ತದೆ.[೨೧] ಶಾಸನಗಳಲ್ಲಿಯೂ ಉಚ್ಚ ಶಿಕ್ಷಣ ಕೇಂದ್ರಗಳಿಗೆ ಅವುಗಳ ಜೀರ್ಣೋದ್ಧಾರಕ್ಕಾಗಿ, ಸಂರಕ್ಷಣೆಗಾಗಿ, ಭೂಮಿ, ಹಣ, ಗ್ರಾಮ ಮುಂತಾದವುಗಳನ್ನು ದತ್ತಿ ಬಿಡುವುದರ ಮೂಲಕ ರಾಜರು, ರಾಣಿಯರು, ದಂಡನಾಯಕರು, ಸಾಮಾನ್ಯ ಜನರು ಪ್ರೋತ್ಸಾಹ ನೀಡುತ್ತಿದ್ದುದ್ದನ್ನು ಕಾಣಬಹುದಾಗಿದೆ.

ಘಟಿಕಾಸ್ಥಾನ

ಘಟಿಕಾಸ್ಥಾನ ಎನ್ನುವುದು ಘಟಿಕಾ, ಘಟಿಗೆ, ಘಟಿಕೆ ಎಂದು ಕೆಲವು ಶಾಸನಗಳು ಕರೆದಿವೆ. ಘಟಿಕಾಸ್ಥಾನವು ಒಂದು ಉನ್ನತ ಶಿಕ್ಷಣ ಕೇಂದ್ರವಾಗಿತ್ತು. ಘಳಿಗೆ ಎಂದರೆ ವೇಳೆಯ ನಿರ್ದಿಷ್ಟ ಭಾಗ ೩೦ ನಿಮಿಷಕ್ಕೆ ಸಮವಾಗಿದೆ.[೨೨]

ಆದರೆ ಕೆಲವು ವಿದ್ವಾಂಸರು ಇದನ್ನು ೨೪ ನಿಮಿಷಗಳೆಂದು ಹೇಳುವುದುಂಟು.[೨೩] ಘಟಿಕಾಸ್ಥಾನವನ್ನು ಪ್ರಾಚೀನ ಮತ್ತು ಮಧ್ಯಕಾಲೀನ ಕರ್ನಾಟಕದಲ್ಲಿ ಒಂದು ಪ್ರಮುಖ ವಿದ್ಯಾಕೇಂದ್ರವೆಂದು ಕರೆಯುತ್ತಿದ್ದರು. ಘಟಿಕಾಸ್ಥಾನದಲ್ಲಿ ಈಗಿನ ವಿಶ್ವವಿದ್ಯಾಲಯದ ಮಾದರಿಯಲ್ಲಿ ಶಿಕ್ಷಣವನ್ನು ನೀಡುತ್ತಿದ್ದಂತೆ ಕಂಡುಬರುತ್ತದೆ. ಇವು ಸಂಖ್ಯೆಯಲ್ಲಿ ಕಡಿಮೆಯಿದ್ದರೂ ಅತೀ ಪ್ರಾಚೀನ ಕಾಲದಿಂದಲೂ ಇದ್ದ ವಿದ್ಯಾಮಂದಿರಗಳಾಗಿವೆ.

ಘಟಿಕಾಸ್ಥಾನವೆಂದರೆ ಉಚ್ಚ ಶಿಕ್ಷಣ ಕೇಂದ್ರಗಳು ಎಂಬ ಅಭಿಪ್ರಾಯದಲ್ಲಿ ಬೇಧವಿಲ್ಲ. ಅವುಗಳ ಸ್ವರೂಪದ ಬಗೆಗಿನ ಭಿನ್ನಾಭಿಪ್ರಾಯಗಳನ್ನು ಕ್ರೋಢಿಕರಿಸುವುದಾದರೆ, 'ಧಾರ್ಮಿಕ ಕೇಂದ್ರ',[೨೪] 'ಬ್ರಾಹ್ಮಣರು ಒಂದೆಡೆ ಸೇರುತ್ತಿದ್ದ ಸಾರ್ವಜನಿಕ ಮಂದಿರ',[೨೫] ಬ್ರಹ್ಮಪುರಿ ಎಂಬ ಅಭಿಪ್ರಾಯಗಳೇ ಅಲ್ಲದೆ ''ಉಪಾಧ್ಯಾಯರೂ, ವಿದ್ವಾಂಸರೂ, ವಿದ್ಯಾರ್ಥಿಗಳೂ ಒಟ್ಟಾಗಿ ಪರಸ್ಪರ ಚರ್ಚೆಯಿಂದ ಧರ್ಮದ ವಿಷಯದಲ್ಲಿ ಹೆಚ್ಚಿನ ಜ್ಞಾನವನ್ನು ಪಡೆಯಲು ಸಾಧ್ಯವಾಗಿದ್ದ ಸಂಸ್ಥೆ'' ಎಂಬ ಅಭಿಪ್ರಾಯವೂ ಇದೆ.[೨೬]

ದೇವಸ್ಥಾನ, ಮಠಗಳ ಜೊತೆಗೆ ಉಚ್ಚ ಶಿಕ್ಷಣ ಸಂಸ್ಥೆಯೂ ಇದ್ದುದರಿಂದ ಅಲ್ಲಿಯ ಪ್ರತಿಯೊಂದು ಕಾರ್ಯವೂ ಕಾಲಕ್ಕೆ ತಕ್ಕಂತೆ ಶಿಸ್ತಿನಿಂದ ನಡೆಯಲೇಬೇಕಾಗಿತ್ತು. ಶಿಕ್ಷಣ ಸಂಸ್ಥೆಯಲ್ಲಂತೂ ಸಮಯದ ಶಿಸ್ತು ಅನಿವಾರ್ಯವೂ ಮಹತ್ವಪೂರ್ಣವೂ ಆಗಿರುತ್ತಿತ್ತು. ಆದುದರಿಂದ ಘಟಿಕಾಯಂತ್ರಗಳನ್ನು ಸ್ಥಾಪಿಸಿ ಅದನ್ನು ನೋಡಿಕೊಳ್ಳಲು ಘಳಿಗೆಯ ಮಾಣಿ ಅಥವಾ ಘಳಿಯಾರದ ಮಾಣಿಯರನ್ನು ನೇಮಿಸಲಾಗುತ್ತಿತ್ತು. ಘಟಿಕಾಯಂತ್ರದ ನಿರ್ವಹಣೆಯ ಜವಾಬ್ದಾರಿಯು ಘಳಿಯಾರದ ಮಾಣಿಗಳಿಗೆ ಸೇರಿತ್ತು. ಕಾಲಸೂಚಕ ಸದ್ದನ್ನು ಆಯಾ ಸಮಯಕ್ಕೆ ಸರಿಯಾಗಿ ಮಾಡುತ್ತಿದ್ದವನೇ 'ಘಟಿಕಾಪ್ರಹಾರಿ'.

ಘಟಿಕಾಸ್ಥಾನದಲ್ಲಿ ಪರೀಕ್ಷೆಗಳನ್ನು ನಡೆಸುವಾಗಲೂ ಅವಧಿಯ ಗಣನೆ ಮುಖ್ಯವಾಗಿದ್ದಿರಲೇಬೇಕು. ಚರ್ಚೆ ನಡೆಯುವಾಗಲೂ ಸಮಯದ ಮಿತಿಯನ್ನು ಹಾಕಿಕೊಂಡಿರುತ್ತಿದ್ದರು ಎಂದು ಭಾವಿಸಿದರೆ ತಪ್ಪಾಗಲಾರದು.

ಚರ್ಚೆಯಲ್ಲಿ ಭಾಗವಹಿಸಿ ಸಮಯದ ಎಚ್ಚರವಹಿಸಿ ಗೆಲುವು ಪಡೆಯುತ್ತಿದ್ದ ವಿದ್ವಾಂಸರನ್ನೇ ಘಟಿಕಾಸಾಹಸಿ, ಘಳಿಸಾಸಿ, ಘೈಸಾಸ ಎಂದು ಕರೆಯುತ್ತಿದ್ದಂತೆ ತೋರುತ್ತದೆ. ಘಟಿಕಾಸ್ಥಾನಗಳಲ್ಲಿ ನಡೆಯುತ್ತಿದ್ದ ಚರ್ಚೆ, ವಾದ, ಸ್ಪರ್ಧೆಗಳು ವಿದ್ವಾಂಸನ ಬುದ್ಧಿವಂತಿಕೆ, ವಿದ್ಯಾಸಾಮರ್ಥ್ಯ, ಪ್ರತಿಭೆ ಇತ್ಯಾದಿಗಳು ಪರೀಕ್ಷೆಗಳ ಗುರಿಗಳಾಗಿದ್ದವು. ಅಂತಹ ಪರೀಕ್ಷೆಗಳಲ್ಲಿ ಜಯಶಾಲಿಯಾದವನೇ 'ಘಟಿಕಾಸಾಹಸಿ'.

ಪ್ರಾಚೀನ ಕರ್ನಾಟಕದಲ್ಲಿ ಹಲವಾರು ಘಟಿಕಾಸ್ಥಾನಗಳಿದ್ದವೆಂದು ಶಾಸನಗಳಿಂದ ತಿಳಿದುಬರುತ್ತದೆ. ಅದರಂತೆ ಮೂರನೆಯ ಸೋಮೇಶ್ವರನ ಶಾಸನಗಳೂ ಸಹ ''ಶ್ರೀಮನ್ಮಹಾಘಟಿಕಾಸ್ಥಾನವಗ್ರಹಾರ ಹೂವಿನಬಾಗೇವಾಡಿ'',[೨೭] ''ಶ್ರೀ ಸೋಮೇಶ್ವರದೇವರ ಮಹಾಘಟಿಕಾಸ್ಥಾನ'',[೨೮] ಶ್ರೀ ಸ್ವಯಂಭು ದಕ್ಷಿಣ ಸೋಮನಾಥದೇವರ

ಘಳಿಗೆ''[೨೯]ಗಳನ್ನು ಉಲ್ಲೇಖಿಸಿವೆ. ಪ್ರೊ. ಎಸ್.ವೆಂಕಟೇಶ್ವರರವರು ಉಪಾಧ್ಯಾಯರು, ವಿದ್ಯಾರ್ಥಿಗಳು ಕೂಡಿ ಚರ್ಚೆ ನಡೆಸುತ್ತಿದ್ದ ಮತ್ತು ಮಹಾವಿದ್ವಾಂಸರ ಸಂಪರ್ಕದಿಂದ ಧಾರ್ಮಿಕ ಸಾಹಿತ್ಯದಲ್ಲಿ ಅತ್ಯುತ್ತಮ ಜ್ಞಾನವನ್ನು (ಪ್ರವಚನಂ ಖಲಂ) ಪಡೆಯಲು ಸಾಧ್ಯವಾಗಿದ್ದ ಶ್ರೇಷ್ಟತಮ ಸಂಸ್ಥೆಯೇ ಘಟಿಕಾಸ್ಥಾನ ಎಂದಿದ್ದಾರೆ. ಅಲ್ಲಿಯ ವಿದ್ಯಾಭ್ಯಾಸದ ಮಟ್ಟ ಎಷ್ಟು ದೊಡ್ಡದಾಗಿತ್ತೆಂದರೆ ಅಧ್ಯಯನವನ್ನೆಲ್ಲಾ ಮುಗಿಸಿದ ವಿದ್ವಾಂಸರೂ ಕೂಡ ವಿನಯದಿಂದ ಈ ಸಂಸ್ಥೆಯನ್ನು ಸಮೀಪಿಸಿ ಜ್ಞಾನದ ತುಣುಕುಗಳನ್ನು ಆರಿಸಿಕೊಳ್ಳಬೇಕಿತ್ತು ಎಂದು ತಿಳಿಸುತ್ತಾರೆ.[೩೦] ಡಿ.ಸಿ.ಸರ್ಕಾರರವರು "An educational institution for advanced studies a university" ಎಂದು ಅಭಿಪ್ರಾಯಪಟ್ಟಿದ್ದಾರೆ.[೩೧] ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು ಘಟೀ ಯಂತ್ರಕ್ಕೆ ನೀರೆತ್ತುವ ರಾಟೆ ಅಥವಾ ಯೇತ ಎಂಬ ಎರಡು ಅರ್ಥಗಳನ್ನು ನೀಡುತ್ತದೆ. ಘಟಿಕಾಸ್ಥಳ, ಘಟಿಕಾಸ್ಥಾನ, ಘಟಿಕಾ ಮಹಾಸ್ಥಾನಗಳಿಗೆ ಧಾರ್ಮಿಕ ವಿದ್ಯಾಪೀಠ, ಧಾರ್ಮಿಕ ಉಚ್ಚ ಶಿಕ್ಷಣಕೇಂದ್ರ, ಸಿದ್ಧಿಕ್ಷೇತ್ರ ಇತ್ಯಾದಿ ಅರ್ಥಗಳನ್ನು ನೀಡಲಾಗಿದೆ.[೩೨]

ಘಟಿಕಾಸ್ಥಾನಗಳನ್ನು ರಾಜಮನೆತನದವರು, ಅಧಿಕಾರಿಗಳು ಸ್ಥಾಪಿಸುತ್ತಿದ್ದಂತೆ ತಿಳಿಯುತ್ತದೆ. ಉದಾ: ಪುಲಿಗೆರೆಯ ಘಟಿಕೆಯನ್ನು ಮಹಾಮಂಡಲೇಶ್ವರ ಜಯಕೇಶಿದೇವನು ಸ್ಥಾಪಿಸಿದನೆಂದು ಲಕ್ಷ್ಮೇಶ್ವರ ಶಾಸನ[೩೩] ತಿಳಿಸುತ್ತದೆ.

ಘಟಿಕಾಸ್ಥಾನಗಳು ತನ್ನದೇ ಆದ ಕೆಲವು ವಿಶೇಷ ಲಕ್ಷಣಗಳನ್ನು ಹೊಂದಿದ್ದವೆಂದು ತಿಳಿದುಬರುತ್ತದೆ. ಅವುಗಳೆಂದರೆ-

- ಉನ್ನತ ಮಟ್ಟದ ವಿದ್ವಾಂಸರು
- ಅಧಿಕ ಸಂಖ್ಯೆಯ ವಿದ್ಯಾರ್ಥಿಗಳು
- ವ್ಯವಸ್ಥಿತವಾದ ಗ್ರಂಥಾಲಯ
- ನಿರ್ದಿಷ್ಟ ವೇಳಾಪಟ್ಟಿ
- ಗ್ರಂಥಾಲಯಕ್ಕೆ ಉದಾರವಾದ ದೇಣಿಗೆ

ಘಟಿಕಾಸ್ಥಾನದ ಆಡಳಿತ:

ಘಟಿಕಾಸ್ಥಾನಗಳಂತಹ ವಿದ್ಯಾಲಯಗಳಲ್ಲಿ ಘಟಿಕಾಸ್ಥಾನ, ದೇವಾಲಯ, ಮಠ ಈ ಮೂರು ಘಟಕಗಳೂ ಸಂಯುಕ್ತವಾಗಿದ್ದು, ಘಟಿಕಾಸ್ಥಾನವೇ ಪ್ರತ್ಯೇಕ ಆಡಳಿತಾತ್ಮಕ ವ್ಯವಸ್ಥೆಯನ್ನು ಹೊಂದಿದ್ದರೂ ಮೂರೂ ಘಟಕಗಳಿಗೆ ಸೇರಿ ಒಬ್ಬನೇ ಸ್ಥಾನಾಧಿಪತಿಯು ಮುಖ್ಯಸ್ಥನಾಗಿರುತ್ತಿದ್ದನು.[೩೪] ಕ್ರಿ.ಶ.೧೧೩೯ರ ಶಾಸನವೊಂದರಲ್ಲಿ[೩೫] ''ಶ್ರೀಮನ್ಮಹಾಘಟಿಕಾಸ್ಥಾನವಗ್ರಹಾರಂ ಪೂವಿನಬಾಗೆಯೋರೆಡೆಯ ಪ್ರಮುಖ ವಿಶೇಷ ಮಹಾಜನಙ್ಗಳು ಸ್ವಧರ್ಮದಿಂದ ಪ್ರತಿಪಾಳಿಸುವರು'' ಎಂದಿದೆ. ಅಂದರೆ ಅದರ ಆಡಳಿತವನ್ನು ಮಹಾಜನರು ನೋಡಿಕೊಂಡು

ಹೋಗುತ್ತಿದ್ದರೆಂದು ಹೇಳುತ್ತದೆ. ಇದರಿಂದ ಊರ ಮಹಾಜನರೂ ಘಟಿಕಾಸ್ಥಾನದ ಆಡಳಿತದಲ್ಲಿ ಭಾಗವಹಿಸುತ್ತಿದ್ದರೆಂದು ಹೇಳಬಹುದು.

ಘಟಿಕಾಸ್ಥಾನ ಮತ್ತು ಇತರೆ ಶೈಕ್ಷಣಿಕ ಸಂಸ್ಥೆಗಳಿಗೆ ಇರುವ ಸಂಬಂಧ:

ಘಟಿಕಾಸ್ಥಾನಗಳಿಗೆ ಮತ್ತು ಇತರೆ ಶೈಕ್ಷಣಿಕ ಸಂಸ್ಥೆಗಳಾದ ದೇವಾಲಯ, ಮಠ, ಅಗ್ರಹಾರ, ಬ್ರಹ್ಮಪುರಿಗಳ ನಡುವೆ ಇರುವ ಸಂಬಂಧವನ್ನು ಕಲ್ಯಾಣ ಚಾಲುಕ್ಯರ ಕೆಲವು ಶಾಸನಗಳು ಸ್ಪಷ್ಟಪಡಿಸುತ್ತವೆ. ಇದರಿಂದ ಘಟಿಕಾಸ್ಥಾನವು ಉನ್ನತ ಶಿಕ್ಷಣ ಕೇಂದ್ರವಾಗಿತ್ತೆಂಬ ಅಂಶವು ತಿಳಿಯುತ್ತದೆ.

ಅಗ್ರಹಾರ:

ಅಗ್ರಹಾರ ಇದರ ಮೂಲರೂಪ ಅಗ್ರಾಹಾರ ಎಂದಿರಬೇಕೆಂದು, ಅದು ಅಗ್ರ+ಹಾರ ಎಂಬ ಎರಡು ಪದಗಳ ಸಮಾಸವೆಂದು ಡಿ.ಎಲ್.ನರಸಿಂಹಾಚಾರ್ಯರ ಅಭಿಪ್ರಾಯ.[೩೬] ಅಗ್ರ ಎಂದರೆ ಶ್ರೇಷ್ಠ, ಆಹಾರ ಎಂದರೆ ದೇಶ ಅಥವಾ ಸ್ಥಳ. ಅಗ್ರಹಾರವೆಂದರೆ ಶ್ರೇಷ್ಠರಿಗೆ ಕೊಟ್ಟಿರುವಂತಹ ಸ್ಥಳ ಅಥವಾ ಊರು ಎಂದರ್ಥ. ಈ ಊರುಗಳಲ್ಲಿ ಬ್ರಾಹ್ಮಣರೇ ಇರಬೇಕಿಲ್ಲ. ಬೇರೆ ಬೇರೆ ಜಾತಿ-ಜನಾಂಗದವರೂ ಇರಬಹುದು. ಆದರೆ ಊರಿನ ಆದಾಯವೆಲ್ಲವೂ ಬ್ರಾಹ್ಮಣರಿಗೇ ಸಲ್ಲುತ್ತಿತ್ತು.[೩೭] ಅಗ್ರಹಾರವೆನ್ನುವುದು ಬ್ರಾಹ್ಮಣರಿಗೆ ಧಾರ್ಮಿಕವಾಗಿ ದಾನಕೊಡಲಾದ ದತ್ತಿ ಅದರ ಸರ್ವಾಧಿಕಾರ ಅವರಿಗೆ ಸೇರಿದ್ದು ಎಂದು ಕೆ.ಎಮ್.ಗುಪ್ತಾ ಅವರು ಅಭಿಪ್ರಾಯಪಡುತ್ತಾರೆ.[೩೮]

ಕಲ್ಯಾಣದ ಚಾಲುಕ್ಯರ ಕಾಲಕ್ಕೆ ಆಗಲೇ ಅಗ್ರಹಾರಗಳು ಪ್ರಮುಖ ಸ್ಥಾನವನ್ನು ಪಡೆದುಕೊಂಡಿದ್ದವು. ಅವುಗಳನ್ನು ಶಾಸನಗಳಲ್ಲಿ ವಿವಿಧ ಹೆಸರುಗಳಿಂದ ಕರೆಯಲಾಗಿದೆ.

೧. ಉತ್ತಮದಗ್ರಹಾರ

೨. ಸರ್ವನಮಸ್ಯದಗ್ರಹಾರ

೩. ಮಹಾಗ್ರಹಾರ

೪. ಅನಾದಿಯಗ್ರಹಾರ

೫. ಪಿರಿಯ ಅಗ್ರಹಾರ

೬. ಹರಿಶ್ಚಂದ್ರದತ್ತಿ ಅಗ್ರಹಾರ

೭. ಶ್ರೀರಾಮರ ದತ್ತಿಯ ಅಗ್ರಹಾರ

೮. ಪರಮೇಶ್ವರ ದತ್ತಿಯಗ್ರಹಾರ

೯. ಶ್ರೀಮಜ್ಜನಮೇಜಯದತ್ತಿಯ ಅಗ್ರಹಾರ

೧೦. ವಿಶೇಷ ಅಗ್ರಹಾರ

೧೧. ಸಾಮಾನ್ಯ ಅಗ್ರಹಾರ

ಮೇಲೆ ಹೇಳಿದ ಅಗ್ರಹಾರಗಳ ಹೆಸರುಗಳಲ್ಲಿ ಒಂದಕ್ಕೊಂದು ಇರುವ ಸಂಬಂಧವಾಗಲಿ, ವ್ಯತ್ಯಾಸವಾಗಲಿ ಗೊತ್ತಾಗುವುದಿಲ್ಲ. ಸರ್ವನಮಸ್ಯದಗ್ರಹಾರ ಎಲ್ಲ ಜಾತಿ-ಜನಾಂಗದವರು ಸೇರಿ (ಕೂಡಿ) ಕಲಿಯುವ ಅಗ್ರಹಾರ, ಪಿರಿಯ ಅಗ್ರಹಾರ ಈಗಿನ ಪದವಿ ಕಾಲೇಜಿನಂತಿರುವ ಅಗ್ರಹಾರ, ವಿಶೇಷ ಅಗ್ರಹಾರವೆಂದರೆ ಬಹುಶಃ ಒಂದು ವಿಷಯಕ್ಕೆ ಪ್ರಾಧಾನ್ಯತೆ ಕೊಟ್ಟು ಕಲಿಸುವಂತಹದ್ದು, ಅನಾದಿ ಅಗ್ರಹಾರ ಪ್ರಾಚೀನವಾದದ್ದು ಆಗಿದ್ದಿರಬಹುದು. ಇವುಗಳಿಗೆ ನಿರ್ದಿಷ್ಟವಾದ ಅರ್ಥವಿವರಣೆಯನ್ನು ನೀಡುವುದು ಕಷ್ಟ. ಮೂರನೆಯ ಸೋಮೇಶ್ವರನ ಕಾಲದ ಶಾಸನಗಳಲ್ಲಿ ಕಂಡುಬರುವ ಮೊದಲ ಅಗ್ರಹಾರವೆಂದರೆ ಕ್ರಿ.ಶ. ೧೧೨೯ ರ ತಿಳುವಳ್ಳಿ ಶಾಸನದ ಶ್ರೀಮದಗ್ರಹಾರ ಮತ್ತು ನರಗುಂದದಲ್ಲಿ ಕ್ರಿ.ಶ. ೧೧೩೮ ರ ಶಾಸನದಲ್ಲಿ ಉಲ್ಲೇಖವಾಗಿರುವ ಶ್ರೀ ಮನ್ಮಹಾಗ್ರಹಾರ ಕೊನೆಯ ಅಗ್ರಹಾರವಾಗಿದೆ. ಹೀಗೆ ಒಟ್ಟು ೧೭ ಅಗ್ರಹಾರಗಳ ಉಲ್ಲೇಖ ಈತನ ಕಾಲದಲ್ಲಿ ಕಂಡುಬರುತ್ತವೆ. ಈ ಅಗ್ರಹಾರಗಳ ಪಟ್ಟಿಯನ್ನು ಪುರವಣಿ-೧ರಲ್ಲಿ ನೀಡಲಾಗಿದೆ.

ಅಗ್ರಹಾರಗಳಲ್ಲಿ ಉಪಾಧ್ಯಾಯರು :

ಅಗ್ರಹಾರಗಳಲ್ಲಿ ವಿವಿಧ ವಿಷಯಗಳಲ್ಲಿ ಪಾಂಡಿತ್ಯ ಪಡೆದಂತಹ ಹಲವಾರು ಉಪಾಧ್ಯಾಯರಿರುತ್ತಿದ್ದರು. ಕೊಂಡಗೂಳಿ ಅಗ್ರಹಾರದಲ್ಲಿ ಮೂರು ಜನರು ಉಪಾಧ್ಯಾಯರಿರುತ್ತಿದ್ದರೆಂದು ಕ್ರಿ.ಶ.೧೧೩೨ರ ಶಾಸನದಿಂದ ತಿಳಿದುಬರುತ್ತದೆ.[೫] ಅವರು ಪ್ರಾಥಮಿಕ ಮತ್ತು ಉನ್ನತ ಶಿಕ್ಷಣವನ್ನು ಬೋಧಿಸುತ್ತಿದ್ದರು. ಒಬ್ಬ ಉಪಾಧ್ಯಾಯ ಸೂತ್ರಸಂಹಿತ ಮತ್ತು ಹಿರಿಯ ಗ್ರಂಥ ಬೋಧಿಸುತ್ತಿದ್ದರೆ, ಇನ್ನೊಬ್ಬ ಉಪಾಧ್ಯಾಯ ಮತ್ತು ಯಾಜ್ಞವಲ್ಕ್ಯ ಕಿರಿಯ ಗ್ರಂಥಗಳನ್ನು ಬೋಧಿಸುತ್ತಿದ್ದ. ಇಲ್ಲಿ ಸೂತ್ರಸಂಹಿತೆ ಸ್ಕಂದಪುರಾಣದ ಒಂದು ಭಾಗ ಎಂದು ಹೇಳಬಹುದು. ಆದರೆ ಹಿರಿಯ ಗ್ರಂಥದ ಅರ್ಥ ಹೇಳುವುದು ಕಷ್ಟಸಾಧ್ಯ. ಬಹುಶಃ ಅದು ಧರ್ಮಶಾಸ್ತ್ರದ ಒಂದು ಭಾಗವಾಗಿರಬಹುದೆಂದು ಹೇಳಬಹುದು. ಕಿರಿಯ ಗ್ರಂಥದ ಬಗೆಗೂ ವಿವರಣೆ ಕೊಡುವುದು ಸುಲಭವಲ್ಲ. ಬಹುಶಃ ಅವು ಕಾವ್ಯ ನಾಟಕಗಳ ಅಧ್ಯಯನವಿರಬಹುದು.

ಈ ಮೇಲಿನ ವಿಷಯಗಳನ್ನು ಬೋಧಿಸುತ್ತಿದ್ದ ಇಬ್ಬರು ಉಪಾಧ್ಯಾಯರುಗಳಿಗೆ ೩೦ ಲೊಕ್ಕಿಯ ಗದ್ಯಾಣಗಳಿಂದ ಬಂದ ಆದಾಯ ವರ್ತಕ ಲೊಕ್ಕಿ ಗದ್ಯಾಣಗಳನ್ನು ಕೊಡಲಾಗುತ್ತಿತ್ತು. ಆ ಶಾಸನಗಳಲ್ಲಿ ಉಲ್ಲೇಖವಾಗಿರುವ ಮೂರನೆಯ ಉಪಾಧ್ಯಾಯ ಅಕ್ಷರ ವ್ಯಾಕರಣ ರೂಪಾವತಾರ ಮುಂತಾದ ವಿಷಯಗಳನ್ನು ಹೇಳುತ್ತಿದ್ದನು.

ಅಗ್ರಹಾರದ ಆಡಳಿತ :

ಅಗ್ರಹಾರವನ್ನು ದಾನವಾಗಿ ಪಡೆದ ಮಹಾಜನರೇ ಅದರ ಪ್ರಭುಗಳು. ಅವರೆಲ್ಲರೂ ಒಟ್ಟಾಗಿ ಅದರ ಆಡಳಿತ ವ್ಯವಸ್ಥೆಯನ್ನು ನೋಡಿಕೊಳ್ಳುತ್ತಿದ್ದರು. ಪ್ರತಿ ಅಗ್ರಹಾರದ ಅಥವಾ ಅವುಗಳ ಸಮೂಹದ ಆಡಳಿವನ್ನು ಒಂದು ವ್ಯವಸ್ಥಿತ ಸಂಸ್ಥೆ ನೋಡಿಕೊಳ್ಳುತ್ತಿತ್ತು. ಈ ಸಂಸ್ಥೆಯ ಸದಸ್ಯರುಗಳನ್ನು ಮಹಾಜನರು ಎಂದು ಕರೆಯಲಾಗುತ್ತಿತ್ತು. ಇವರು ಹಳ್ಳಿಯ ಆಡಳಿತದ ವಿಷಯದಲ್ಲಿ ಸಂಪೂರ್ಣವಾದ ಅಧಿಕಾರವನ್ನು ಹೊಂದಿದ್ದರು.[೪೦] ಅಗ್ರಹಾರಗಳ ಮಹಾಜನರ ಸಂಖ್ಯೆಯು ಅಗ್ರಹಾರಗಳಿಂದ ಅಗ್ರಹಾರಗಳಿಗೆ ಭಿನ್ನವಾಗಿರುವುದನ್ನು ಕಾಣಬಹುದು. ಕ್ರಿ.ಶ.೧೧೩೦ರ ಶಾಸನವು ಅಗ್ರಹಾರದಲ್ಲಿ ೧೦೦೦ ಮಹಾಜನರು ಇದ್ದುದನ್ನು ಹೇಳುತ್ತದೆ.[೪೧]

ಬ್ರಹ್ಮಪುರಿ :

ನಗರಗಳಲ್ಲಿ ಅಥವಾ ಪಟ್ಟಣಗಳಲ್ಲಿ ಬ್ರಾಹ್ಮಣ ವಿದ್ವಾಂಸರು ವಾಸಿಸುವ ಭಾಗವೇ ಬ್ರಹ್ಮಪುರಿ.[೪೨] ಅಗ್ರಹಾರಗಳು ಊರುಗಳಾದರೆ, ಬ್ರಹ್ಮಪುರಿಗಳು ಪಟ್ಟಣಗಳ ಭಾಗಗಳು. ಅಗ್ರಹಾರಗಳಿಗಿಂತ ಬ್ರಹ್ಮಪುರಿಗಳ ಸಂಖ್ಯೆ ಬಹಳ ಕಡಿಮೆ. ಏಕೆಂದರೆ ಪ್ರಾಚೀನ ಕರ್ನಾಟಕದಲ್ಲಿ ಹಳ್ಳಿಗಳ ಸಂಖ್ಯೆ ಹೆಚ್ಚು, ನಗರರಗಳ ಸಂಖ್ಯೆ ಕಡಿಮೆ. ಅಗ್ರಹಾರಗಳಲ್ಲಿದ್ದ ಬ್ರಾಹ್ಮಣರು ಆ ಊರುಗಳ ಒಡೆಯರು. ಆದರೆ ಬ್ರಹ್ಮಪುರಿಗಳಲ್ಲಿದ್ದ ಬ್ರಾಹ್ಮಣರು ಆ ಊರಿನ ಇತರ ಪಂಗಡಗಳ ಜನರಿದ್ದಂತೆ ಅಷ್ಟೆ.[೪೩] ಅಗ್ರಹಾರದ ಬ್ರಾಹ್ಮಣರಿಗಿದ್ದ ಅಧಿಕಾರ ಇವರಿಗಿರಲಿಲ್ಲ. ಮೂರನೆಯ ಸೋಮೇಶ್ವರನ ಕಾಲದ ಏರಿಗೆ,[೪೪] ನಿಂಬರಗಿ,[೪೫] ಶಾಸನಗಳು ಬ್ರಹ್ಮಪುರಿಗಳನ್ನು ಉಲ್ಲೇಖಿಸಿವೆ.

ವಿದ್ಯಾರ್ಥಿಗಳು:

ಶೈಕ್ಷಣಿಕ ಸಂಸ್ಥೆಗಳಾದ ಅಗ್ರಹಾರ, ಬ್ರಹ್ಮಪುರಿ, ಘಟಿಕಾಸ್ಥಾನ ಮತ್ತು ದೇವಾಲಯಗಳಲ್ಲಿ ಎಷ್ಟು ಜನರು ವಿದ್ಯಾರ್ಥಿಗಳು ಅಭ್ಯಾಸ (ವ್ಯಾಸಂಗ) ಮಾಡಿಕೊಂಡಿರುತ್ತಿದ್ದರು (ನಡೆಸುತ್ತಿದ್ದರು) ಎಂದು ಹೇಳುವುದು ಕಷ್ಟ. ಆದರೆ ಕೆಲವೊಂದು ಶಾಸನಗಳು (ಬೆರಳೆಣಿಕೆಯಷ್ಟು ಶಾಸನಗಳು) ಮಾತ್ರ ಈ ಬಗ್ಗೆ ಮಾಹಿತಿಯನ್ನು ನೀಡುತ್ತವೆಯೆಂದು ಹೇಳಬಹುದು. ಮೂರನೆಯ ಸೋಮೇಶ್ವರನ ಕಾಲದ ಒಂದು ಶಾಸನದಲ್ಲಿ ''ಶ್ರೀಮದಗ್ರಹಾರ ಪಾವರಿಯ ನಾಲ್ನೂರ್ವ್ವರ್ದ್ವಿಜೋತ್ತಮರ'' ಎಂಬ ಉಲ್ಲೇಖವಿದೆ.[೪೬] ಇದರಿಂದ ಪಾವರಿಯ ಅಗ್ರಹಾರದಲ್ಲಿ ೪೦೦ ಜನ ವಿದ್ಯಾರ್ಥಿಗಳು ವ್ಯಾಸಾಂಗ ಮಾಡುತ್ತಿದ್ದರೆಂದು ಹೇಳಬಹುದು.

ಅಧ್ಯಯನದ ವಿಷಯಗಳು :

ಮೂರನೆಯ ಸೋಮೇಶ್ವರನ ಕಾಲದ ಶಾಸನಗಳು ಪಠ್ಯಕ್ರಮಗಳ ಬಗ್ಗೆ ಹೆಚ್ಚಿನ ವಿವರಗಳನ್ನು ನೀಡುವುದಿಲ್ಲ. ಪ್ರಾಥಮಿಕ ಹಂತದಿಂದ ಪ್ರೌಢ ವಿದ್ಯಾಭ್ಯಾಸದವರೆಗೆ ಇಲ್ಲಿ ಅಧ್ಯಯನ, ಅಧ್ಯಾಪನಗಳು ನಡೆಯುತ್ತಿರಬೇಕು.

ಅಲ್ಬೆರೂನಿಯು[೪೭] ಪಾಠಶಾಲೆಗಳಲ್ಲಿ ಕಪ್ಪುಹಲಗೆಯ ಮೇಲೆ ಬಿಳಿಯ ಬಳಪದಿಂದ ಎಡಗಡೆಯಿಂದ ಬಲಕ್ಕೆ ಮಕ್ಕಳು ಬರೆಯುತ್ತಿದ್ದರೆಂದು ತಿಳಿಸುತ್ತಾನೆ. ತಾಳಗುಂದ ಶಾಸನದಲ್ಲಿ[೪೮] ಋಗ್ವೇದದ ಮಂತ್ರಗಳನ್ನು ಬಾಲಕರಿಗೆ ಬಾಯಿಪಾಠ ಮಾಡಿಸುತ್ತಿದ್ದ ಉಪಾಧ್ಯಾಯನನ್ನು ಶಾಸನವು ಬಾಲಶಿಕ್ಷೆಶಾಸ್ತ್ರದವನೆಂದು ಕರೆದಿದೆ. ಕನ್ನಡಕ್ಷರ ಶಿಕ್ಷೆಗಾಗಿ ಕನ್ನಡದ ಉಪಾಧ್ಯಾಯರಿಗೆ ದತ್ತಿ ಬಿಟ್ಟುಕೊಟ್ಟ ಉಲ್ಲೇಖವಿದೆ. ಅಂದರೆ ಪ್ರಾಥಮಿಕ ಹಂತದಲ್ಲಿಯೇ ಸಂಸ್ಕೃತ, ಕನ್ನಡ ಮಾಧ್ಯಮದ ಮೂಲಕ ವಿದ್ಯಾಭ್ಯಾಸ ನಡೆಯುತ್ತಿರಬಹುದೆಂದು ಊಹಿಸಬಹುದು. ಸುಮಾರು ಐದರಿಂದ ಏಳನೆಯ ವಯಸ್ಸಿನಲ್ಲಿ ವಿದ್ಯಾಭ್ಯಾಸದ ಪ್ರಥಮ ಸಂಸ್ಕಾರವಾದ ಉಪನಯನವು ನಡೆಯುತ್ತಿದ್ದು, ಅನಂತರ ಮಕ್ಕಳು ವಿದ್ಯಾಭ್ಯಾಸದಲ್ಲಿ ತೊಡಗುತ್ತಿದ್ದರು.[೪೯] ಉಪನಯನದ ಸಮಾರಂಭಗಳಲ್ಲಿ ಗುರುವಿಗೆ ದಕ್ಷಿಣೆಯನ್ನು ಕೊಡಬೇಕಾಗುತ್ತಿತ್ತು.[೫೦]

ವೇದಗಳನ್ನು ವಿವಿಧ ಭಾಗಗಳನ್ನಾಗಿ ಮಾಡಿ ಅಧ್ಯಯನ ಮಾಡುವುದನ್ನು 'ವೇದಖಂಡಿಕ'ವೆಂದು ಕರೆಯುತ್ತಿದ್ದರು. ಡಾ.ಚಿದಾನಂದಮೂರ್ತಿಯವರು ಇಂಥ ಬೇರೆ ಬೇರೆ ವೇದಗಳ ಭಾಗಗಳನ್ನು ಕಲಿಸಿಕೊಡುವ ಉಪಾಧ್ಯಾಯನನ್ನು ಖಂಡಿಕೋಪಾಧ್ಯಾಯನೆಂದೂ ವಿದ್ಯಾರ್ಥಿಯನ್ನು ಖಂಡಿಕ ವಿದ್ಯಾರ್ಥಿಯೆಂದೂ ಶಾಸನಗಳು ಕರೆದಿರುವುದನ್ನು ಗಮನಿಸಿದ್ದಾರೆ.[೫೧]

ಮೂರನೆಯ ಸೋಮೇಶ್ವರನ ಕಾಲದ ಮಹಾಜನಗಳು ವೇದಾರ್ಥ ತತ್ಪರರಾಗಿದ್ದರು.[೫೨] ವೇದ-ವೇದಾಂಗಗಳಿಗೆ ಹೆಚ್ಚಿನ ಪ್ರಾಶಸ್ತ್ಯವನ್ನು ನೀಡಿದ್ದ ಅವರು ಪ್ರೌಢ ವಿದ್ಯಾಭ್ಯಾಸದಲ್ಲಿ ನಿರತರಾಗಿರಬೇಕು. ಇಂಥ ಪ್ರೌಢ ವ್ಯಾಸಂಗವನ್ನು ಮಾಡುತ್ತಿದ್ದ ವಿದ್ಯಾರ್ಥಿಗಳನ್ನು 'ಛಾತ್ರ'ರೆಂದು ಕರೆಯಲಾಗಿದೆ. ಛಾತ್ರರು ಅಶನಾಚ್ಛಾದನಕ್ಕೆ ಹಾಗೂ ಅವರಿಗೆ ವಿದ್ಯಾಭ್ಯಾಸ ಮಾಡಿಸುತ್ತಿದ್ದ ಉಪಾಧ್ಯಾಯರಿಗೆ 'ಭಟ್ಟವೃತ್ತಿ' ಬಿಟ್ಟುಕೊಟ್ಟಿದ್ದನ್ನು ಡಾ.ಚಿದಾನಂದಮೂರ್ತಿಯವರು ಶಾಸಗಳಿಂದ ಗುರುತಿಸಿದ್ದಾರೆ.[೫೩] ಭಟ್ಟವೃತ್ತಿಯು ಪುರಾಣ, ಬಾಲಶಿಕ್ಷೆ, ನ್ಯಾಸದ ವ್ಯಾಖ್ಯಾನಗಳಿಗೂ ಅನ್ವಯಿಸುತ್ತಿತ್ತು.[೫೪]

ಅಧ್ಯಯನದ ಪಠ್ಯವಿಷಯಗಳ ಬಗ್ಗೆ ಆ ಕಾಲದ ಶಾಸನಗಳು ಹೆಚ್ಚಿನ ಮಾಹಿತಿ ನೀಡುವುದಿಲ್ಲ. ಸ್ಥಾನಾಚಾರ್ಯರು ಯಮ ನಿಯಮ ಸ್ವಾಧ್ಯಾಯಾಯಧ್ಯಾನ ಧಾರಣ ಮೌನಾನುಷ್ಠಾನ ಜಪ ಸಮಾಧಿ ಸೀಳಸಂಪನ್ನರಪ್ಪ[೫೫] ಸ್ವಸ್ತ್ಯನೇಕಶಿವತತ್ವಾಗಮ ಸಂಪನ್ನರುಂ ಶಿಷ್ಟಪ್ರಸನ್ನರುಂ ಸಕಳಶಾಸ್ತ್ರ ಪಾರಗರುಂ ಚೌಷಷ್ಟಿಕಳಾಧಾರರುಂ ಪಶುಪತಿಮತತಪಃಪ್ರಭಾವ ಮಾರ್ಗ್ಗಸುಬೋಧ ನಿಯಮಿತ ಮಾಹೇಶ್ವರ ಜನಶಿವಮುನಿಗಣ ಶಿಕ್ಷೋಕ್ತ ದೀಕ್ಷಾದಕ್ಷರುಂ[೫೬]ರಾಗಿರುವುದರ ಜೊತೆಗೆ ''ಮೋನಾನುಷ್ಠಾನ ಪರಾಯಣರ್ದ್ವಿದಿತವೇದಾರ್ತ್ಥ ವಿದ್ಯಾಪಾರಗರ್ಷಟ್ಕರ್ಮ ನಿರತಸ್ಸ[ಪ್ತ] [ಸೋಮಸಂಸ್ಥಾ]ಭೃಥಾವಗಾ[ಹನ] ಪವಿತ್ರೀಕೃತ ಶರೀರಚ್ಚತುರ್ವ್ವೇದಪಾರಗರಷ್ಟಾದಶಧರ್ಮ ಶಾ[ಸ್ತ್ರ] ಕುಶಲರೇಕವಾಕ್ಯರಚಳಿತಧೈರ್ಯ[ರ್ಧೈ]

ಯ್ಯ್ಯಪರಾಕ್ರಮರಾಶ್ರಿತ ಜನಕಲ್ಪವೃಕ್ಷ[ರಹಿ]ತಪಕ್ಷಕ್ಷಯಕರರ್ಕ್ಕಲಿಯುಗಗಾಂಗೇಯಪ್ಪ್ರರವ ಪರೋಪಕಾರಿಗಳಾಹವಧುರಂ[ದ]-[ರಶ್ಯಾ]ಪಾನುಗ್ರಹಸಮರ್ತ್ಥಕ್ಕಾರ್ಯ್ಯ ಬೃಹಸ್ಪತಿಗಳೇಕೈಕ ಪಂಡಿತಗ್ಗ್ರಾಮಾಮೋತ್ತಮ [ವ್ವೈ]ಷ್ಣವ ಗೀತಿಮನೋಹರಪ್ಪಾಪಭೀರುಗಳು ಪರನಾರೀದೂರ[ದ್ದು]ಷ್ಟವಿದ್ವಂಸಕವ್ವಿಶಿಷ್ಟಜನಾಶ್ರಯ''[೫೭]ರೆನಿಸುವುದರ ಜೊತೆಗೆ ವಿಭುದಪ್ರಸನ್ನರುಂ ಯಜನ ಯಾಜನಾಧ್ಯಯನಾಧ್ಯಾಪನದಾನ ಪ್ರತಿಗ್ರಹಣಪ್ರಣೂತಷಟ್ಕರ್ಮನಿರತರುಂ ಮನು ಮುನೀಂದ್ರ ಚರಿತರು ಮನೇಕತರ್ಕ್ಕವ್ಯಾಕರಣ ಪುರಾಣ ಕಾವ್ಯನಾಟಕ ಭರತವಾತ್ಸ್ಯಾಯನಾದಿ ವಿದ್ಯಾಸಾರಾಸಾರ ವಿಚಾರಚಾರು ಚತುರಾನನರುಂ ಪರವಾದಿ ಕುಂಬಿಕುಂಭ ಸ್ಥಳವಿದಾರಣ ಪ್ರಚಣ್ಡ ಪಂಚಾನನರುಂ ಸಕಳದಿಗನ್ತರ ವ್ಯಾಪ್ತಸುಧಾಧವಳದೀಧಿತಿ ಪ್ರವರ್ತ್ತಿತ ಕೀರ್ತಿಗಳು ನ್ಯಾಯವೈಶೇಷಿಕಲೋಕಾಯತ ಸೌಂಖ್ಯದೌದ್ಧಾರ್ಹತ ಮೀಮಾಂಸಕ ಪ್ರಬಳಷಡ್ದರ್ಶನ ಸರೋವರ ವಿರಾಜಿತ ರಾಜಹಂಸರುಂ ಭಾರತೀಕರ್ಣ್ಣಾವತಂಸರುಂ ನಯವಿನಯ ಸತ್ಯ ಶೌಚಾಚಾರಚಾರುಚಾರಿತ್ರರುಂ ಸಪ್ತಸೋಮಸಂಸ್ಥಾವಭೃಥಾವಗಾಹನ ಪವಿತ್ರೀಕೃತಗಾತ್ರರುಂ ಸರ್ವ್ವಾತಿಥ್ಯಭ್ಯಾಗತ ಪೂಜಾಗ್ರಗಣ್ಯರುಂ ಸ್ವೀಕೃತಪುಣ್ಯರುಂ ಸಕಳವೇದ ವೇದಾಂಗೋಪಾಂಗಾಷ್ಟಾದಶಸ್ಮೃತಿ ಪುರಾಣಾನೇಕ ಧರ್ಮ್ಮಶಾಸ್ತ್ರಭೂಭೃತ್ಕ್ರಡಾಕುಂಜರರುಂ ಗೋಬ್ರಾಹ್ಮಣೌ[ಕ್ಲೋ]ಶಪರೀಕ್ಷಕರುಂ ನಾನಾನಯೊಪ್ರೌಢಯೌಗನ್ಧರ ಸದೃಕ್ಷಕರು[೫೮]ರೆನಿಸಿದ್ದರು. ಇವುಗಳನ್ನು ಗಮನಿಸಿದರೆ ಸ್ಥಾನಾಚಾರ್ಯರು ಅವುಗಳನ್ನೇ ವಿದ್ಯಾರ್ಥಿಗಳಿಗೆ ಕಲಿಸಿಕೊಡುತ್ತಿದ್ದರಬಹುದೆಂದು ಊಹಿಸಬಹುದು.

ಸ್ತ್ರೀ ಶಿಕ್ಷಣ :

ವೇದಗಳ ಕಾಲದಲ್ಲಿ ಪುರುಷರೊಂದಿಗೆ ಮಹಿಳೆಯರೂ ವಿದ್ಯಾಭ್ಯಾಸದಲ್ಲಿ ತೊಡಗಿದ್ದರು. ಆದರೆ ಧರ್ಮಶಾಸ್ತ್ರಗಳ ಕಾಲಕ್ಕೆ ಸ್ಮೃತಿ, ಶಾಸ್ತ್ರಗಳ, ಕಟ್ಟಳೆಯಿಂದಾಗಿ ಅವಳು ಶಿಕ್ಷಣದಿಂದ ವಂಚಿತಳಾದಳು. ಪ್ರಾಚೀನ ಕರ್ನಾಟಕದ ಸ್ತ್ರೀಯರೂ ಇದಕ್ಕೆ ಹೊರತಾಗಿಲ್ಲ. ಹೀಗಾಗಿ ಕನ್ನಡ ಶಾಸನಗಳಲ್ಲಿ ವಿದ್ಯಾರ್ಥಿನಿಯರ, ಪಂಡಿತೆಯರ ಹೆಸರುಗಳು ಕಡಿಮೆ ಎನ್ನಬಹುದು. ವಿದ್ಯಾಭ್ಯಾಸಕ್ಕೆ ಬಿಟ್ಟಿರುವ ದತ್ತಿಗಳೆಲ್ಲ ಪುರುಷ ಶಿಕ್ಷಣಕ್ಕೆ ಮೀಸಲಾಗಿವೆ.[೫೯] ಕ್ರಿ.ಶ.ಪ್ರಾರಂಭದ ಹಾಲನ 'ಗಾಥಾಸಪ್ತಸತಿ'ಯಲ್ಲಿ ರೇವಾ, ರೋಹಾ, ಮಾಧವಿ, ಅನುಲಕ್ಷ್ಮಿ, ಪಾಹೈ, ವದ್ಧಾವಹೀ ಮತ್ತು ಶಶಿಪ್ರಭಾ ಎಂಬ ಏಳು ಜನ ಕವಯತ್ರಿಯರ ಉಲ್ಲೇಖ ಕಂಡುಬರುತ್ತದೆ.[೬೦] ಬಾದಾಮಿ ಚಾಲುಕ್ಯರ ಕಾಲಕ್ಕೆ ಬಂದರೆ ಪುಲಕೇಶಿಯ ಮಗ ಚಂದ್ರಾದಿತ್ಯನ ಮಡದಿ ವಿಜಯಭಟ್ಟಾರಿಕೆ ಕರ್ನಾಟಕದ ಪ್ರಥಮ ಕವಯತ್ರಿಯಾಗಿ ಗೋಚರಿಸುತ್ತಾಳೆ. ಇವಳು ರಚಿಸಿರಬಹುದಾದ ಅನುಪಲಬ್ಧ 'ಕೌಮುದಿಮಹೋತ್ಸವ'ವೆಂಬ ನಾಟಕ ಸಂಸ್ಕೃತ ಭಾಷೆಯಲ್ಲಿದ್ದುದಾಗಿ ತಿಳಿದುಬಂದಿದೆ.

ಪ್ರಭುವರ್ಗದ ಪುರುಷರಿಗೆ ಸಮಾನಮಟ್ಟದ ವಿದ್ಯಾಭ್ಯಾಸ ಸ್ತ್ರೀಯರಿಗೆ ದೊರೆತಿಲ್ಲವೆಂದು ಹೇಳಬಹುದು. ಆದರೆ ಅವರು ಸಂಗೀತ, ನೃತ್ಯಕಲೆಗಳನ್ನು ಹೆಚ್ಚಾಗಿ ಅಭ್ಯಸಿಸುತ್ತಿದ್ದರು. ಶಾಸನಗಳಲ್ಲಿ ಸಹ 'ನರ್ತ್ತಕೀ ನರ್ತ್ತನ ಸೂತ್ರಧಾರಂ',[೮೧] 'ಗೀತವಾದ್ಯ ನ್ರಿತ್ಯಕ್ಕಂ'[೮೨] ಎಂಬ ಉಲ್ಲೇಖಗಳು ಬರುತ್ತವೆ. ರಾಜರನ್ನು ಆಕರ್ಷಿಸಲು ರೂಪ-ಯೌವನಗಳ ಜೊತೆಗೆ ಇಂತಹ ಕಲೆಗಳ ಅವಶ್ಯಕತೆಯೂ ಹೆಚ್ಚಿದ್ದಂತೆ ತೋರುತ್ತದೆ. ಈ ವಿಷಯವಾಗಿ ನೇರ ಉಲ್ಲೇಖಗಳಿಲ್ಲದಿದ್ದರೂ ಪ್ರಾಚೀನ ಕರ್ನಾಟಕದ ರಾಣಿಯರ ಬಿರುದು, ವಿಶೇಷಣಗಳು ಮಾತ್ರ ಕೆಲವು ಸಂಗತಿಗಳನ್ನು ತಿಳಿಸಿಕೊಡುತ್ತವೆ. ಇವರನ್ನು ಬಿಟ್ಟರೆ ಈ ಕಲೆಗಳಲ್ಲಿ ಪ್ರವೀಣರಾದವರೆಂದರೆ ದೇವಾಲಯದ ಸೂಳೆ ಸಮುದಾಯದ ಪಾತ್ರದವರು, ಸಂಗೀತಗೋಷ್ಠಿ, ವಾದ್ಯಗೋಷ್ಠಿಯವರೆಂದು ಹೇಳಬಹುದು.

ಅಲ್ಲಲ್ಲಿ ಚದುರಿದಂತೆ ಕಂಡುಬರುವ ಈ ವಿದ್ಯಾವಿಶೇಷತೆಯ ಪೂರ್ಣನೋಟ ಕಂಡುಬರುವುದು ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಎಂದು ಹೇಳಬಹುದು. ಮೂರನೆಯ ಸೋಮೇಶ್ವರನ ತಾಯಿಯಾದ ಚಂದಲದೇವಿಯು ನೃತ್ಯವಿದ್ಯಾಧರಿ[೮೩] ಅಭಿನವಸರಸ್ವತಿ ಋಗ್ವೇದ ಖಂಡಿಕ ಮತ್ತು ಶಾಸ್ತ್ರಖಂಡಿಕೆಗಳಿಗೆ ದತ್ತಿಯನ್ನು ಬಿಟ್ಟುಕೊಟ್ಟಳೆಂದು[೮೪] ಕೆಲವು ಭತ್ತಗ್ರಾಮಗಳನ್ನು, ಅಗ್ರಹಾರಗಳನ್ನು ಆಳುತ್ತಿದ್ದಳೆಂದು[೮೫] ಮಹಾಮಂಡಳೇಶ್ವರ ಬಿಬ್ಬರಸ[೮೬] ಮಹಾಮಂಡಳೇಶ್ವರ ಕಲಿಯಮರಸ[೮೭]ರು ಈಕೆಯ ಪಾದಪದ್ಮೋಪಜೀವಿಗಳಾಗಿದ್ದರು. ಮೂರನೆಯ ಸೋಮೇಶ್ವರನ ಮಹಾಮಂಡಳೇಶ್ವರನಾದ ವಿಷ್ಣುವರ್ಧನನ ಹೆಂಡತಿ ಶಾಂತಲೆ ಒಬ್ಬ ಅಪೂರ್ವ ವ್ಯಕ್ತಿ. ಅವಳಿಗೆ ಸಕಳಾಗಮಗಳಲ್ಲಿಯೂ ಪರಿಣಿತಿಯಿತ್ತು. ಅವಳು ವಿವೇಕದಲ್ಲಿ ಬೃಹಸ್ಪತಿಗೆ ಸಮಾನೆ, ಗೀತವಾದ್ಯ ನೃತ್ಯಾದಿಗಳಿಗೆ ಸೂತ್ರಧಾರೆ ಎಂದು ಮುಂತಾಗಿ ಶಾಸನಗಳು ಹೊಗಳುತ್ತವೆ.[೮೮] ಮಹಾಮಂಡಳೇಶ್ವರ ಜಯಕೇಶಿದೇವನ ಪತ್ನಿಯಾದ ಮೈಳಲಮಹಾದೇವಿ ಬೋಗೂರನ್ನು ಆಳುತ್ತಿದ್ದಳು.[೮೯] ಎರ್ರನರೆಂದ್ರನ ರಾಣಿ ಕಾಮವಸಾನಿಯು ಕಾಕತೀಯ ಬೇತನಿಗೆ ಸಹಾಯಮಾಡಿ ಬಲ್ಲವರಾಯನೊಂದಿಗೆ ನಿಯೋಗ ಹೋಗಿ ಕಾಕತಿಯ ದೊರೆಯನ್ನು ಕಾಕತಿಯಲ್ಲಿ ನಿಲ್ಲುವಂತೆ ಮಾಡುತ್ತಾಳೆ.[೯೦] ಇದು ಆಕೆಯ ರಾಜಕೀಯ ದೂರದೃಷ್ಟಿತ್ವವನ್ನು ತಿಳಿಸುತ್ತದೆ. ಈ ರೀತಿಯಾಗಿ ಮೂರನೆಯ ಸೋಮೇಶ್ವರನ ಕಾಲದಲ್ಲಿಯೂ ಸ್ತ್ರೀಯರು ವಿದ್ಯಾವಂತರಾಗಿ ಆಡಳಿತದಲ್ಲಿ ಭಾಗವಹಿಸುತ್ತಿದ್ದರೆಂದು ತಿಳಿದುಬರುತ್ತದೆ.

ಪರೀಕ್ಷೆಗಳು ಮತ್ತು ಪದವಿಗಳು:

ಈಗಿನಂತೆ ಪ್ರಾಚೀನ ಕಾಲದಲ್ಲಿ ಬಹುಸಂಖ್ಯೆಯ ವಿದ್ಯಾರ್ಥಿಗಳಿಗೆ ಉಪನ್ಯಾಸ ಮಾಡುವ ಪದ್ಧತಿಯಿರಲಿಲ್ಲ. ಒಬ್ಬೊಬ್ಬ ಉಪಾಧ್ಯಾಯನಿಗೂ ಮಿತ ಸಂಖ್ಯೆಯ ವಿದ್ಯಾರ್ಥಿಗಳಿರುತ್ತಿದ್ದುದರಿಂದ ವಿದ್ಯಾರ್ಥಿಯ ವ್ಯಾಸಂಗಕ್ಕೆ, ಚಾರಿತ್ರ್ಯಕ್ಕೆ ಗಮನಹರಿಸಲು ಸಾಧ್ಯವಾಗುತ್ತಿತ್ತು. ವಿದ್ಯಾಭ್ಯಾಸಕ್ಕೆ ಕೊನೆ ಎಂಬುದು ಇಲ್ಲವಾದರೂ ಪ್ರತಿವರ್ಷ ಅಥವಾ ಉಪಾಧ್ಯಾಯರು ಸೂಕ್ತ ಎಂದು ಪರಿಗಣಿಸಿದಾಗ ವಿದ್ಯಾರ್ಥಿಗಳಿಗೆ ಪರೀಕ್ಷೆಗಳನ್ನು ನಡೆಸಲಾಗುತ್ತಿತ್ತು. ಆದರೆ

ಈಗಿನಂತೆ ಅಧ್ಯಯನವು ಮುಗಿದ ನಂತರ ವರ್ಷದ ಕೊನೆಯಲ್ಲಿ ಪರೀಕ್ಷೆಗಳನ್ನು ನಡೆಸುವ ಸಂಪ್ರದಾಯ ಆ ಕಾಲದಲ್ಲಿರಲಿಲ್ಲ. ವಿದ್ಯಾರ್ಥಿಯು ಹಿಂದಿನ ಪಾಠವನ್ನೊಪ್ಪಿಸಿದ ಮೇಲೆಯೇ ಮುಂದಿನ ಪಾಠಕ್ಕೆ ಹೋಗುತ್ತಿದ್ದುದರಿಂದ ವಿದ್ಯಾರ್ಥಿಗೆ ದಿನನಿತ್ಯದ ಅಭ್ಯಾಸವು ಪರೀಕ್ಷೆಯೇ ಆಗಿತ್ತು. ಆ ನಂತರ ಅವರ ಅವರೆಗಿನ ವಿದ್ಯಾಭ್ಯಾಸದ ವಿಷಯಗಳಿಗೆ ತಕ್ಕಂತೆ ಕ್ರವಿಂತ (ಕ್ರಮವಿತ್-ಕ್ರಮಬದ್ಧವಾಗಿ ವೇದಾಭ್ಯಾಸ ಮಾಡಿದವನು), ಷಡಂಗಿ (ಷಡಂಗವಿತ್-ಷಡಂಗಗಳ ಅಭ್ಯಾಸ ಮಾಡಿದವನು), ದ್ವೇದಿ, ತ್ರಿವೇದಿ, ಚತುರ್ವೇದಿ (ಅಭ್ಯಾಸ ಮಾಡಿದ ವೇದಗಳ ಸಂಖ್ಯೆ) ಇತ್ಯಾದಿ ಪದವಿಗಳನ್ನು ನೀಡಲಾಗುತ್ತಿತ್ತು. ಇವುಗಳು ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಘಟಿಕಾಸ್ಥಾನಗಳಲ್ಲಿ ನಡೆಸಲಾಗುತ್ತಿತ್ತು. ಇವುಗಳು ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಗೆಲುವು ಪಡೆದವನೇ ಘಟಿಕಾಸಾಹಸಿ; ಘಟಿಕಾಸಾಹಸಿಯೇ, ಘಳಿಸಾಸಿ, ಘೈಸಾಸಿ ಎಂಬ ಹೆಸರಿನಿಂದಲೂ ಪರಿಚಿತನಾಗಿದ್ದಾನೆ.[೭೧]

ಶಾಸನಗಳಲ್ಲಿ ಕಂಡುಬರುವ 'ಭಟ್ಟೋಪಾಧ್ಯಾಯ' ಎಂಬುದು ಉಪಾಧ್ಯಾಯ ವೃತ್ತಿಯನ್ನು ಸೂಚಿಸಿದರೆ, 'ಘೈಸ' ಎಂಬುದು ಪದವಿಯನ್ನು ಸೂಚಿಸುವುದು ಖಚಿತ ಎಂದು ಚಿದಾನಂದಮೂರ್ತಿಯವರು ಅಭಿಪ್ರಾಯಪಡುತ್ತಾರೆ. ವಿಶ್ವವಿದ್ಯಾಕೋವಿದ, ವಿಶ್ವವಿದ್ಯಾಲಂಬುಜದ್ಯುಮಣಿ ಎಂಬ ಉಲ್ಲೇಖಗಳು ಅವರು ಪಡೆದ ಪದವಿಗಳನ್ನು ಸೂಚಿಸುತ್ತಿರಬಹುದು. ಗೋಬ್ರಾಹ್ಮಣೌ[ಕ್ಲೋ]ಶ ಪರೀಕ್ಷಕರುಂ ಎಂಬ ಉಲ್ಲೇಖವು ಇವರನ್ನು ಪರೀಕ್ಷೆ ನಡೆಸುತ್ತಿದ್ದ ಉಪಾಧ್ಯಾಯರನ್ನು ಸೂಚಿಸುತ್ತದೆ ಎಂದು ಹೇಳಬಹುದು.

ಶಾಸನಗಳಲ್ಲಿ ಕಂಡುಬರುವ ವೇದ, ವೇದಾಂಗ, ಸ್ಮೃತಿ, ಪುರಾಣ, ಧಮ್ಮಶಾಸ್ತ್ರ, ತರ್ಕ ಮುಂತಾದ ವಿಷಯಗಳು ಮತ್ತು ನಮ್ಮ ಅಧ್ಯಯನದ ಕಾಲದಲ್ಲಿ ಬರುವ ಲೋಕೋಪಕಾರ, ಮಾನಸೋಲ್ಲಾಸ ಗ್ರಂಥಗಳು ರಚನೆಯಾಗಿರುವುದು ಆ ಕಾಲದ ಆಸಕ್ತ ವಿಷಯಗಳಾವವು ಎಂಬುದನ್ನು ಸೂಚಿಸಿವೆ.

ಶೈಕ್ಷಣಿಕ ಸಂಸ್ಥೆಗಳಿಗೆ ದಾನಗಳು :

ಪ್ರಾಚೀನ ಮತ್ತು ಮಧ್ಯಕಾಲೀನ ವಿದ್ಯಾಭ್ಯಾಸ ಕೇಂದ್ರಗಳಲ್ಲಿ ಅಗ್ರಹಾರ, ಬ್ರಹ್ಮಪುರಿ, ಘಟಿಕಾಸ್ಥಾನ, ದೇವಸ್ಥಾನ ಮತ್ತು ಅದಕ್ಕೆ ಹೊಂದಿಕೊಂಡಿರುವ ಮಠಗಳು ಪ್ರಮುಖವಾಗಿವೆ. ಇವುಗಳು ನೈಷ್ಠಿಕ ಬ್ರಹ್ಮಚಾರಿಗಳಾದ ಸ್ಥಾನಪತಿ ಹಾಗೂ ತಪೋಧನರ ವಾಸಸ್ಥಾನಗಳೂ ಆಗಿದ್ದವು. ಇವುಗಳಿಗೆ ದಾನವನ್ನು ನೀಡುವುದರಿಂದ ತಮಗೆ ಪುಣ್ಯ ಪ್ರಾಪ್ತಿಯಾಗುತ್ತದೆಯೆಂದು ಆ ಕಾಲದ ಜನರ ನಂಬಿಕೆಯಾಗಿತ್ತು. ಈ ಕಾರಣದಿಂದ ಅನೇಕ ದಾನದತ್ತಿ ನೀಡಿದುದನ್ನು ಆ ಕಾಲದ ಶಾಸನಗಳು ತಿಳಿಸುತ್ತವೆ. ದಂಡನಾಯಕ ಸಾಯಿಪಯ್ಯನ ಶ್ರೀಕರಣದ ಅಧಿಕಾರಿ ನೀಲಕಂಠನಾಯಕ ನೀಲಕಂಠದೇವರ ಅಂಗಭೋಗಕ್ಕೆ ನಿವೇದ್ಯಕ್ಕೆ ಪುರಾಣಖಂಡಿಕಕ್ಕೆ[೭೨] ರೆಪ್ರೋಲ ಕುರುವರಾಜು ಎಂಬುವವನು ಖಣ್ಡಿಸನಗರದ ಕೊಮ್ಮೇಶ್ವರ ದೇವರ ಸೇವೆಗೆ ತಪೋಧನರ ಆಹಾರದಾನಕ್ಕೆ ಕಪ್ಪಡ ದಾನಕ್ಕೆ ಭೂಮಿಯನ್ನು

ದತ್ತಿಯಾಗಿ ನೀಡಿದನು.[೭೩] ದೇಮೆಯ ಷಣಂಗಿಯು ಗಣೇಶ್ವರ ದೇವಾಲಯದಲ್ಲಿ ರುದ್ರಾದಿತ್ಯ ಫೈಸಾಸನು ಮಾಡಿಸಿದ ಸತ್ರದ ಮನೆಯಲ್ಲಿ ಪ್ರತಿದಿವಸವೂ ೬ ಜನ ಬ್ರಾಹ್ಮಣರು ಊಟ ಮಾಡುವಂತೆ ಭೂದಾನವನ್ನು ನೀಡುತ್ತಾನೆ. ಇದರೊಂದಿಗೆ ಮತ್ತೆ ೧೨ ಜನರು ಊಟಮಾಡಲು ರುದ್ರಾದಿತ್ಯ ಫೈಸಾಸನು ಮತ್ತೆ ಭೂದಾನ ನೀಡುತ್ತಾನೆ.[೭೪] ದಂಡನಾಯಕ ಅನಂತಪಾಲಯ್ಯನು ಕರಿಕಂಠಜೀಯನ ಆಹಾರ, ಆಚ್ಛಾದನಕ್ಕೆ ಹಾಗೂ ಪೂಜಾರಿ ಚಂದ್ರಭೂಷಣರಿಗೆ ಭೂಮಿಯನ್ನು ದಾನವಾಗಿ ನೀಡಿದನು.[೭೫] ಇದೇ ರೀತಿ ಕಾಮಧೇನು,[೭೬] ತಿಳವಳ್ಳಿ,[೭೭] ಕರಾಡಖೇಡ[೭೮] ಕಲ್ಲೂರು,[೭೯] ಕೊಲಿಮಿಗುಂಡ್ಲ,[೮೦] ನಿಂಬರಗಿ,[೮೧] ಸಿದ್ದಾಪುರ,[೮೨] ಮುದನೂರು,[೮೩] ಪೂಮೆಗಾಮೆ,[೮೪] ಗೌಳಿಹಳ್ಳಿ[೮೫] ಮುಂತಾದ ಶಾಸನಗಳು ಶೈಕ್ಷಣಿ ಸಂಸ್ಥೆಗಳು ಮತ್ತು ಅವುಗಳಲ್ಲಿ ವಾಸಿಸುತ್ತಿದ್ದ ತಪೋಧನರಿಗೆ, ಶೈಕ್ಷಣಿಕ ಸಂಸ್ಥೆಗಳ ಜೀರ್ಣೋದ್ಧಾರಕ್ಕಾಗಿ ದಾನ ನೀಡಿದುದನ್ನು ತಿಳಿಸುತ್ತವೆ.

ಶಾಸನ ಕವಿಗಳು :

ಸಾಮಾನ್ಯವಾಗಿ ಒಂದು ಶಾಸನ ನಿರ್ಮಾಣಗೊಳ್ಳಲು ಶಾಸನಕವಿ, ಲಿಪಿಕಾರ ಮತ್ತು ರೂವಾರಿಗಳ ಪರಿಶ್ರಮವಿರುತ್ತದೆ. ಕವಿಯು ಶಾಸನ ಪಾಠವನ್ನು ರಚಿಸಿದರೆ, ಅದನ್ನು ಕಲ್ಲಮೇಲೆ ಬರೆಯುವವನು ಲಿಪಿಕಾರ. ಮುಂದೆ ರೂವಾರಿ ಅಥವಾ ಕಲ್ಲುಕುಟಿಗನು ಅದನ್ನು ಕಂಡರಿಸುತ್ತಿದ್ದನು. ಕೆಲವೊಮ್ಮೆ ಈ ಮೂರು ಕೆಲಸಗಳನ್ನು ಒಬ್ಬನೋ ಇಲ್ಲವೇ ಇಬ್ಬರೂ ಕೂಡಿ ಮಾಡಿರುವುದು ಕಂಡುಬರುತ್ತದೆ. ಕೆಲವು ಕಡೆ 'ಶಾಸನವ ಬರೆದಂ', 'ಬರೆಪಂ' ಎಂಬಂಥ ಉಲ್ಲೇಖಗಳಿಂದ ಅವರು ಶಾಸನಕವಿಗಳೆಂದು ಗುರುತಿಸುವುದು ಕಷ್ಟ. ಇನ್ನು ಕೆಲವು ಕಡೆ ಅಪರೂಪವಾಗಿ ಹೆಮ್ಮೆಯಿಂದ ತಮ್ಮ ಹೆಸರನ್ನು ಸ್ಪಷ್ಟವಾಗಿ ಶಾಸನಕವಿಗಳು ಹೇಳಿಕೊಂಡಿದ್ದಾರೆ.

ಕೊಮ್ಮೋಜ (ಕ್ರಿ.ಶ. ೧೧೨೪):

ಆಂಧ್ರಪ್ರದೇಶದ ವಾರಂಗಲ್ ಜಿಲ್ಲೆಯ ಜನಗಾಂ ತಾಲೂಕಿನ ಗುಡೂರು ಗ್ರಾಮದಲ್ಲಿ ನಿಲ್ಲಿಸಿರುವ ಕಂಬದ ಮೇಲಿರುವ ಈ ಶಾಸನವು ಕ್ರಿ.ಶ. ೧೧೨೪ ಕ್ಕೆ ಸೇರಿದೆ. ಶಾಸನದ ಕೊನೆಯಲ್ಲಿರುವ -

ಸೂತ್ರಧಾರಿ ಕೊಮ್ಮೋಜನ ಬರಹ ಶ್ರೀ ಶ್ರೀ ಶ್ರೀ
ಅಡಪಗಟ್ಟು ದೇವರಕು ಜನು॥

ಎಂಬ ಸಾಲಿನಿಂದ ಈ ಶಾಸನವು ಕುಮಾರ ಮೂರನೆಯ ಸೋಮೇಶ್ವರನ ಆಳ್ವಿಕೆಯ ಕಾಲದಲ್ಲಿ ಕೊಮ್ಮೋಜ ಬರೆದುದಾಗಿ ತಿಳಿದುಬರುತ್ತದೆ. ಈ ಶಾಸನದ ಪದ್ಯಗಳಲ್ಲಿ ಕೆಲವನ್ನು ಉಲ್ಲೇಖಿಸಲಾಗಿದೆ.

ವಿರಿಯಾಲಾನ್ವಯ ನೀರಜಾಕರ ದಿನೇಶಂ ನಿರ್ಮ್ಮಳ ಕ್ಷೀರ
ಸಾಗರ ಸಂಕಾಶ ವಿಶುದ್ಧ ಕೀರ್ತ್ತಿ ಕನಕಾದ್ರ್ಯಂದ್ರೋಂನ್ನತಂ
ವಂದಿಸಾಕ್ಷರ ಸಿಷ್ಟೇಷ್ಟ ಕವೀಂದ್ರ ಕೀರ ಸಹಕಾ

ರಂ ವೈರಿಗಂದೇಭಕೇಸರಿ ಮಿಕ್ಕಂ ವಿಭುಸೂರನುಂನ್ನತ ಗು

ಣಾಧಾರಂ ಧರಾಚಕ್ರದೊಳು [ಸಾಲು: ೭೩-೭೭]

ಧರೆಯಂ ಸುರಾದ್ರಿ

ಯುಂ ಸಾಗರಮಂ ಚಂದ್ರಾರ್ಕ್ಕರುಂ ಮಹೇಶ್ವರರುಂ

ದಿಕ್ಕರಿಚಯಮು ಮುಳ್ಳಿ ಗೆ[೦] ಸುಖಮಿರುಮಲ್ಲ

ಕವೀಂದ್ರಬೃಂದಮಂ [ಪೊ] ರೆಯುತ್ತ [ಸಾಲು:೯೮-೧೦೧]

ಕೇಶವರಾಜ (ಕ್ರಿ.ಶ.೧೧೨೬):

ಕೇಶವರಾಜ ಒಬ್ಬ ಶಾಸನಕವಿ.[೮೬] ಗದಗ ಜಿಲ್ಲೆಯ ಕುರ್ತಕೋಟಿ ಗ್ರಾಮದ ನರಸಿಂಹ ದೇವಾಲಯದ ಎದುರು ನಿಲ್ಲಿಸಿರುವ ಶಾಸನದಲ್ಲಿ ''ಕೇಶವರಾಜಂ ದೋಣಿಯ ಶಾಸನಮಂ ಬರೆಸಿ ಧರ್ಮಮಂ ಪ್ರಕಟಿಸಿದಂ''[೮೭] ಎಂಬ ಉಲ್ಲೇಖ ಬರುತ್ತದೆ. ಈ ಶಾಸನದ ಕಾಲ ಕ್ರಿ.ಶ.೧೧೨೬.

ಕೇಶವರಾಜನು ಬರೆದ ಅಬ್ಬಲೂರಿನ ಶಾಸನ ಕೇವಲ ಶರಣನೊಬ್ಬನ ಚರಿತ್ರೆಯಾಗಿ ನಿಲ್ಲದೆ ಧಾರ್ಮಿಕ, ಐತಿಹಾಸಿಕ, ರಾಜಕೀಯ ಸಂಗತಿಗಳ ಮಹತ್ವದ ದಾಖಲೆಯಾಗಿದೆ.[೮೮] ಅದಕ್ಕೆ ಕಾವ್ಯದ ಲೇಪನವನ್ನಿತ್ತಿರುವುದು ಕೇಶವರಾಜನ ಹಿರಿಮೆಯಾಗಿದೆ. ಅಲ್ಲಿ ಬರುವ

''ಕೇಶವರಾಜ ಚಮೂಪಂ

ಶಾಸನಮಂ ಪೇಳ್ದನಂತದಂ ತಿರ್ದಿನಿರಾ

ಯಾಸದೆ ಬರೆದವನೀಶನ

ದಾಸಂ ಶಿವಚರಣಕಮಲ ಶರಣಂ ಸರಣಂ''[೮೯] [ಸಾಲು: ೧೦೧]

ಎಂಬ ಪದ್ಯವೊಂದರಿಂದ ಕೇಶವರಾಜ ಬರದ ಶಾಸನವನ್ನು 'ಸರಣ'ನೆಂಬುವನು ತಿದ್ದಿದನು ಎಂಬುವುದು ಸ್ಪಷ್ಟವಾಗುತ್ತದೆ. ಇದರಿಂದ ಮೇಲೆ ಉಲ್ಲೇಖಿಸಿದಂತೆ ದೋಣಿಯ ಶಾಸನವನ್ನು ಕೇಶವರಾಜ ಬರೆದು ನಂತರ ಈ ಸರಣನಿಂದ ತಿದ್ದಿ ಬರೆಯಿಸಿರಬೇಕೆಂದು ತೋರುತ್ತದೆ.

ಭಾಸ್ಕರ (ಕ್ರಿ.ಶ.೧೧೨೭):

ಆಂಧ್ರಪ್ರದೇಶದ ಸಂಗಾರೆಡ್ಡಿ ತಾಲ್ಲೂಕಿನ ಮೆದಕ್ ಜಿಲ್ಲೆಯ ಪಟಾನ್‌ಚೆರು ಶಾಸನವು ಪ್ರಸ್ತುತ ಕೆ.ಬಿ.ಮ್ಯೂಜಿಯಂನಲ್ಲಿದೆ. ಇದರ ಕಾಲ ಕ್ರಿ.ಶ. ೧೧೨೭. ಈ ಶಾಸನವನ್ನು ಭಾಸ್ಕರಯ್ಯ ಬರೆದುದಾಗಿ ಆ ಶಾಸನದ ಅಂತ್ಯದಲ್ಲಿರುವ -

ನಿರತಿಶಯೋನ್ನತ ಮತಿ ಭಾ।

ಸ್ಕರ ಸರಸಕವೀಂದ್ರ ರಚಿತ ಶಾಸನಮಂ ಬಿ।

ತ್ತರದಿಂ ಪ್ರತಿಕಂಠ ಸಾ।

ಕ್ಷರ ನಿಳಯಂತಿಜ್ದು ಭಾಸ್ಕರಯ್ಯ ಬರೆದಂ॥

ಎಂಬ ಪದ್ಯದಿಂದ ತಿಳಿಯುತ್ತದೆ. ಅಲ್ಲದೇ ಇವನು ಬರೆದುದನ್ನು ಭಾಸ್ಕರಯ್ಯನೆಂಬುವನು ತಿದ್ದಿ ಬರೆದಂತೆಯೂ ತಿಳಿಯುತ್ತದೆ. ಭಾಸ್ಕರನು ಬ್ರಾಹ್ಮಣ ಕವಿಯೆಂದು ತೋರುತ್ತದೆ. ಈ ಶಾಸನವು ಚಾಳುಕ್ಯ ರಾಜನಾದ ಭೂಲೋಕಮಲ್ಲ ಸೋಮೇಶ್ವರನ ಆಳ್ವಿಕೆಯಲ್ಲಿ ಕ್ರಿ.ಶ.೧೧೨೭ರಲ್ಲಿ ಹುಟ್ಟಿದೆ. ಇದರಲ್ಲಿ ದೊರೆ ತನ್ನ ಪಟ್ಟಬಂಧೋತ್ಸವ ಸಮಯದಲ್ಲಿ ನನ್ನಯಭಟ್ಟನಿಗೆ ಭೂಮಿಯನ್ನು ಕೊಟ್ಟಂತೆ ಹೇಳಿದೆ. ಈ ಶಾಸನದ ಒಂದೆರಡು ಪದ್ಯಗಳು ಹೀಗಿವೆ -

ಶ್ರೀ ಮಚ್ಚಾಳುಕ್ಯವಂಶೋದ್ಭವನನು

ಪಮಿತೋದ್ಯದ್ಭುಜಾದಂಡ ಶೌರ್ಯ್ಯೋ

ದ್ದಾಮಂ ವೀರಾರಿಭೂಭೃತ್ಪ್ರಕರ ನಿಶಿತ

ವಜ್ರಾಯುಧಂ ಕ್ಷತ್ರ ವಿದ್ಯಾಧಾ

ಮಂ ರಟ್ಟಾನ್ವವಾಯ ಪ್ರಬಳತರ[ತ]

ಮಸ್ತೋಮ ಮಾರ್ತ್ತಾಂಡತೇಜಸ್ತೋಮಂ

ನೆಂಬಿನಂ ಮಿಕ್ಕೆಸೆದನಸಿತ್ತೈಲ[ಪ]

ಕ್ಷೋಣಿ ಪಾಳ॥[ಸಾಲು: ೫-೧೩]

ಮೌಳೀವೆತ್ತೆತ್ತಿದ ತೋಳಬಾಳಜಳಧಿಂ ಮೇಯ್ಗೊಂ

ಡ ಮಿತ್ರಾಂಗನಾಕುಳಬಾಷ್ಪದ್ರವದಿಂ ತ

ಳಿರ್ತ್ತು ರಿಪುಸೇನಾಚಕ್ರರಕ್ತಾಂಬುದಿಂ ಬಳೆ

ದತ್ತೀಗಳು ಪಾಹಿತಾಹಿತಗಳತ್ಕಾಳಿಂ

ಗ ಮಾತಂಗಸಂಕುಳ ದಾನಪ್ಲವದಿಂ ಪ

ರಾಕ್ರಮವನಂ ಭೂಲೋಕಮಲ್ಲಾಂಕನ॥[ಸಾಲು: ೪೧-೪೬]

ಸುಬ್ಬ (ಕ್ರಿ.ಶ.೧೧೨೭):

ಧಾರವಾಡ ಜಿಲ್ಲೆಯ ರಾಣೆಬೆನ್ನೂರು ತಾಲ್ಲೂಕಿನ ಅಸುಂಡಿ[೦] ಗ್ರಾಮದ ಕಲಿದೇವ ಸ್ವಾಮಿಯ ದೇವಾಲಯದ ಮುಂದಿರುವ ಶಾಸನವು ಕ್ರಿ.ಶ. ೧೧೨೭ ಕ್ಕೆ ಸೇರಿದ್ದಾಗಿದೆ. ಈ ಶಾಸನದ ಕೊನೆಯಲ್ಲಿ-

''ಮದವದರಿಬಿರುದಲೇಖಕ ಮದಗಜಭಿದುವಿದಳ ಸಿಂಹನ ತನಯ
ವಿನಯಾಸ್ಪದ ಲಿಖಿತಜನಸು
ಮಿತ್ರಂ ಮೃದುಲಲಿತವಿಚಿತ್ರಲಿಖಿತತಿಬ್ಬಂ ಸುಬ್ಬಂ
ಬ[ರೆ] ವರ ಮಿತ್ರಂ ಸುಬ್ಬಂ ವಿರಚಿಸಿ ಪೇರ್ದ್ದೆಸೆವ ಗದ್ಯಪದ್ಯೋಕ್ತಿಗಳಿಂ
ಬರೆದ ಶಾಸನಮನಿದಂ
ಧರೆಯೋಳ್ ಬುಧರೋಲ್ದು ಪೊಗಳೆ ಲಲಿತಾಕ್ಷರದಿಂ॥
ಮರವೆಸನಿಟ್ಟಿಗೆಕಲಾಕಣ್ಡರಣೆಯಲೊಪ್ಪದೊಳ್ ಚಿತ್ರದೊಳ್ ಪ್ರಾಸಾ[ದೋತ್ಕ]
ರ ವಿದ್ಯಾಕುಂಸಳನಿದಂ
ಕಣ್ಡರಿಸಿದನತಿ . . . . . . ದ್ಧ ಭಾವಕಂ ಮಾದೋಜಂ''

ಎಂಬ ಪದ್ಯದಿಂದ ಈತನು ಕವಿಯಾಗಿದ್ದಂತೆ ತಿಳಿಯುತ್ತದೆ. ಮತ್ತು ಈ ಶಾಸನವನ್ನು ಕಣ್ಡರಿಸಿದವನು ಮಾದೋಜ ಈ ಶಾಸನದ ಒಂದೆರಡು ಪದ್ಯಗಳನ್ನು ಈ ಕೆಳಗೆ ತಿಳಿಸಲಾಗಿದೆ.

ರತಿಪತಿಕೋಮಳಾಂಗಂ ವರರೂಪದೊಳುಂನತಿವೆತ್ತ ಗೋಮಿನೀ ಪತಿ
ನಿಪುಣೋತ್ತ ವೀಣ ಬ
ಹುಕೌಷಳಭಾವದ ಕಾವ್ಯ ಶಬ್ದ ವಾಕ್ಪತಿ ಚತುರೋಕ್ತಮ . . . . ತ
ಸಚೀಪತಿ ವೈಭವದೇಳ್ಗೆಯೋಳ್ ಬೃಹಸ್ಪತಿ ದೃಢಮಂತ್ರದೊಳ್ನೆಗರ್ದ
ಪೆಗ್ಗಡೆ ಮಾಚಣನೀ
ಧರಿತ್ರಿಯೋಳ್॥[ಸಾಲು: ೨೪-೨೬]
ವರತೇಜಪ್ರಭೆಯೊ[ಳ್ಪಿನಾ] ಧಿಪತಿಯಂ ಭಾಸ್ವತ್ಕಳಾ ಶೇಷದೊಳ್
ದೊರೆವೆತ್ತಿರ್ದ್ದ ಶರನ್ನಿಶಾಪತಿಯ
ಸಾದಾಯ್ರ್ಯದೊಳ್ ಕರ್ಣ್ನನಂ ಸ್ಥಿರಧೈಯ್ರ್ಯಕ್ಕೆ ಕುಳಾಚಳಂ . . . .
ತೆಯಂ ವಿಕ್ರಾನ್ತದೊಳ್ ಸಿಂಹದೊಳ್ ಸರಿಯಾದಂ ಜಡರೂರುಗರ್ದ್ದೊರೆಯೆ
ಪೇಳ್ ಶ್ರೀಬಮ್ಮಗಾವುಣ್ಡನೊಳ್ [ಸಾಲು: ೪೪-೪೬]

ನಯಸೇನ:

ಕನ್ನಡ ಸಾಹಿತ್ಯವನ್ನು ಸಮೃದ್ಧಗೊಳಿಸಿದ ಕೀರ್ತಿ ಜೈನಕವಿಗಳಿಗೆ ಸಲ್ಲುತ್ತದೆ. ಅಂದಿನ ಸಾಮಾಜಿಕ, ಧಾರ್ಮಿಕ ಹಾಗೂ ರಾಜಕೀಯ ಹಿನ್ನೆಲೆಯಲ್ಲಿ ಸಾಹಿತ್ಯ ಸೃಷ್ಟಿಮಾಡಿದ್ದು ಅವರ ಹೆಗ್ಗಳಿಕೆಯಾಗಿದೆ. ಒಬ್ಬ ಕವಿಯ ಸುತ್ತಲಿನ ಪರಿಸರ ಅವನ ದರ್ಶನಗಳು ವೈಯಕ್ತಿಕ ಸಂವೇದನೆಗಳು ಸಾಹಿತ್ಯ ಕೃತಿಯೊಂದರಲ್ಲಿ ಸಾಂಸ್ಕೃತಿಕ ಜೀವನ ಅರಳಲು

ಕಾರಣವಾಗುತ್ತದೆ. ಈ ದೃಷ್ಟಿಯಿಂದ ಮೂರನೆಯ ಸೋಮೇಶ್ವರನ ಸಮಕಾಲೀನನಾದ ನಯಸೇನನ 'ಧರ್ಮಾಮೃತ' ಅತ್ಯಮೂಲ್ಯ ಕೃತಿಯಾಗಿದೆ. ಇದು ಕನ್ನಡ ಸಾಹಿತ್ಯ ಲೋಕಕ್ಕೆ ಈತ ನೀಡಿದ ಅಪರೂಪದ ಕಾಣಿಕೆಯೆಂದು ಹೇಳಬಹುದು.

ಚರಿತ್ರೆಯಲ್ಲಿ ಐದು ಜನ ನಯಸೇನರು ಬರುತ್ತಾರೆ. ೧. ಚಾವುಂಡರಾಯ ಪುರಾಣದಲ್ಲಿ ಬರುವ ನಯಸೇನ, ೨. ನಯಸೇನ ಮುಮುಕ್ಷು, ೩. ವ್ಯಾಕರಣದ ನಯಸೇನ, ೪. ಪುಣ್ಯಾಸ್ರವಕಥಾಸಾರದ ಕರ್ತೃ ನಯಸೇನ ಮತ್ತು ೫. ಧರ್ಮಾಮೃತದ ಕರ್ತೃ ನಯಸೇನ.[೧] ನಯಸೇನನ ಕಾಲ ಪಂಡಿತರಲ್ಲಿ ಹೆಚ್ಚಿನ ವಿವಾದಕ್ಕೆ ಎಡೆಕೊಟ್ಟಿಲ್ಲ. ಕಾರಣ ತನ್ನ ಕೃತಿಯಾದ ಧರ್ಮಾಮೃತ ಗ್ರಂಥದ ೧೪ನೆಯ ಆಶ್ವಾಸದಲ್ಲಿ

ಗಿರಿಶಿಖಿವಾಯುಮಾರ್ಗಶಶಿಸಂಖ್ಯೆಯೊಳಾವಗಮೊಂದಿವರ್ತಿಸು
ತ್ತಿರೆಶಕಕಾಲಮುನ್ನತಿಯ ನಂದನವತ್ಸರದೊಳ್ ಮಹೋತ್ಸವಂ
ಬೆರಸೆಸೆದಿರ್ದಭಾದ್ರಪದಮಾಸದೋಳ್ಗದ ಶುಕ್ಲ ಪಕ್ಷ ದೊಳ್
ನಿರುಪಮಮಪ್ಪ ಪಾಡಿವದೊಳೊಪ್ಪುವ ಹಸ್ತ ಯುತಾರ್ಕವಾರದೊಳ್
ಧರಣಿಪೂಜ್ಯಂ ಭವ್ಯೋ
ತ್ಕರವಂದ್ಯಂ ಕಾವ್ಯರತ್ನಮಮಳಯಶಶ್ರೀ
ಕರಮೆನಿಸಿರ್ದೀಗ್ರಂಥಂ
ನಿರುತಂ ನಿರ್ವಾಹಮಾಯ್ತು ನಿರ್ವಿಘ್ನತೆಯಿಂ[೨]

ಇದರಿಂದ ಅವನ ಕಾಲವನ್ನು ಕ್ರಿ.ಶ.೧೧೧೨ ಎಂದು ಹೇಳಬಹುದು.

ನಯಸೇನನು ಸೇನಗಣಕ್ಕೆ ಸೇರಿದವನಾಗಿದ್ದು,[೩] ಈತನಿಗೆ ವಾತ್ಸಲ್ಯರತ್ನಾಕರ, ಸುಕವಿಜನಮನಃ, ಪದ್ಮಿನೀರಾಜಹಂಸ, ಸಹಜಕವಿಜನಪೆಯ, ಪೆಯೋಧಿವಿಹಿಕರ, ನುತಭಾವಯುತದಿಗಂಬರದಾಸ, ಸುಕವಿನಿಕರಪಿಕಮಾಕಂದ, ನೂತ್ನಕವಿತಾವಿಳಾಸ ಎಂಬ ಬಿರುದುಗಳಿದ್ದವು.[೪] 'ಧರ್ಮಾಮೃತದ' ಹಲವು ಪದ್ಯಗಳಲ್ಲಿ ನಯಸೇನ ತನ್ನ ಗುರುಪರಂಪರೆಯನ್ನು ಹೇಳಿಕೊಂಡಿದ್ದಾನೆ. ಈತನ ಗುರು ಎರಡನೆಯ ನರೇಂದ್ರಸೇನನೆಂದು ಧರ್ಮಾಮೃತದಲ್ಲಿ ಹೆಮ್ಮೆಯಿಂದ ಹೇಳಿಕೊಂಡಿದ್ದಾನೆ.

ಪೋಡವೀಶಭರ್ುವನ್ನೆಕಮಲ್ಲನುತಪಾದಾಂಭೋಜರತ್ಯೂರ್ಜಿತರ್
ದೃಢಚಿತ್ತರ್ ಗುಣಚಂದ್ರಪಂಡಿತರಿಳಾಲೋಕೈಕ ಪೂಜ್ಯರ್ ಮನಂ
ಬಿಡೆತ್ರೈವಿದ್ಯಮಹಾಭಿಧಾನಮನದಂ ಕೂರ್ತಟ್ಟಿಕೆಂಕೊಟ್ಟರೆಂ
ದೊಡೆತ್ರೈವಿದ್ಯನರೇಂದ್ರಸೇನಮುನಿವೋಲ್ ವಾಗ್ಮೀಶರಾರ್ ಲೋಕದೊಳ್[೫]

ನಯಸೇನ ಹೇಳುವ ಗುರುಪರಂಪರೆಯನ್ನು ಹೀಗೆ ನಿರೂಪಿಸಬಹುದು.

ಅಜಿತಸೇನ (ಕ್ರಿ.ಶ.೯೬೩)

↓

ಎರಡನೆಯ ಕನಕಸೇನ (ಕ್ರಿ.ಶ.೯೯೩)

↓

ಒಂದನೆಯ ನರೇಂದ್ರಸೇನ (ಕ್ರಿ.ಶ.೧೦೨೩)

↓

ಒಂದನೆಯ ನಯಸೇನ [ವ್ಯಾಕರಣದ ನಯಸೇನ] (ಕ್ರಿ.ಶ.೧೦೫೩)

↓

ಎರಡನೆಯ ನರೇಂದ್ರಸೇನ (ಕ್ರಿ.ಶ.೧೦೮೩)

↓

ಎರಡನೆಯ ನಯಸೇನ [ಧರ್ಮಾಮೃತದ ಕರ್ತೃ] (ಕ್ರಿ.ಶ.೧೧೧೩)

ನಯಸೇನ ತನ್ನನ್ನು ರಾಜಪೂಜ್ಯಂ ನೃಪವಂದ್ಯಂ ಎಂದು ಕರೆದುಕೊಂಡಿದ್ದಾನೆ.[೯೬] ಇದರಿಂದ ಈ ಮೊದಲಿನ ಜೈನಮುನಿಗಳಿಗಿದ್ದ ರಾಜಗೌರವ ಈತನಿಗೂ ಇದ್ದಿರಬಹುದು; ಆದರೆ ಸ್ಪಷ್ಟ ವಿವರಗಳಿಲ್ಲ.

ನಯಸೇನನ ಸ್ಥಳದ ಬಗೆಗೆ ವಾದವಿವಾದ, ಉಹಾಪೋಹಗಳಿಗೆ ಎಡೆಯೇ ಇಲ್ಲ. ಏಕೆಂದರೆ, ಸ್ವತಃ ಅವನೇ ತನ್ನ ಧರ್ಮಾಮೃತದಲ್ಲಿ ಮುಳುಗುಂದದ ಬಸದಿಯೊಂದರಲ್ಲಿದ್ದು ಧರ್ಮಾಮೃತ ಕಾವ್ಯವನ್ನು ರಚಿಸಿರುವುದಾಗಿ ಸ್ಪಷ್ಟವಾಗಿ ಹೇಳಿಕೊಂಡಿದ್ದಾನೆ.

ಮುಳುಗುಂದದೊಳಿದ್ದುರ್ಜ ಮಹೋ

ಜ್ವಳ ಧರ್ಮಾಮೃತಮನರ್ತಿಯಿಂದಂ ಭವ್ಯಾ

ವಳಿಗಱಿಪಿದಂ ಧರಿತ್ರೀ

ತಳಪೂಜ್ಯಂ ಸುಕವಿನಿಕರಪಿಕಮಾಕಂದರ್[೭]

ಹತ್ತನೆಯ ಶತಮಾನದಲ್ಲಿ ತುಂಬ ಪ್ರಬಲವಾಗಿದ್ದ ಜೈನಧರ್ಮ ನಯಸೇನನ ಕಾಲಕ್ಕೆ ತನ್ನ ಮಹತ್ವವನ್ನು ಕಳೆದುಕೊಳ್ಳಲಾರಂಭಿಸಿತ್ತು. ಇಂತಹ ಸಂದಿಗ್ಧ ಸಮಯದಲ್ಲಿ ಜೈನಧರ್ಮದ ತತ್ವಗಳನ್ನು ಸಾರುವ ಮಹತ್ವದ ಕಾವ್ಯವೊಂದನ್ನು ರಚಿಸಿ ಈ ಧರ್ಮಕ್ಕೆ ಒದಗಿದ ದುಸ್ಥಿತಿಯನ್ನು ಹೀಗೆ ಹೇಳಿದ್ದಾನೆ.

ಸಸಿಕಿಡುಗುಂ ತೃಣಂಬಹಳಮಕ್ಕುಮಸತ್ಯಮೆ ಪೆರ್ಚುಗುಂ ಶ್ರುತಂ

ಕುಸಿಗುಮನಿಷ್ಟಕಾರಿಗಳೆ ಬಾಳ್ವರುದಾರರೆ ಸಾವರೆತ್ತಟಂ

ಮಿಸುಕದು ಜೈನಧರ್ಮದ ನೆಗರೆ ಕುಲಿಂಗಿಗಳುಂ ಕುದೈವಮುಂ

ವಸುಧೆಯೊಳುರ್ವುಗುಂ ನಿಮಿರ್ದುಃಷಮ ಕಾಲದೇಳ್ಗೆ ಯೊಳ್[೧೦]

ಅಂದರೆ ದುಷಮ ಕಾಲದಲ್ಲಿ ಪೈರು ಹಾಳಾಗುತ್ತದೆ, ಹುಲುಸಾಗುತ್ತದೆ, ಅಸತ್ಯ ಹೆಚ್ಚಿ ಶಾಸ್ತ್ರ ಕುಸಿಯುತ್ತದೆ. ದುಷ್ಟರು ಬದುಕಿ ಒಳ್ಳೆಯವರು ಸಾಯುತ್ತಾರೆ. ಜೈನಧರ್ಮದ ಏಳ್ಗೆಯಾಗದೆ ಭೂಮಿಯ ಮೇಲೆ ನೀಚದೈವ ಕೆಟ್ಟಧರ್ಮದವರು ಹೆಚ್ಚುತ್ತಾರೆ. ಇದೇ ಅರ್ಥದ ಮತ್ತೊಂದು ಪದ್ಯ ಹೀಗಿದೆ -

ದುರಿತದೊಳಾರ್ತುರ್ಕೂರ್ತೆಸಗಿದುರ್ಮತಮಂ ಪಿಡಿದುರ್ಕಿ ಸೊಕ್ಕಿನಿ

ಷ್ಟುರನರಕಾಬ್ಧಿ ಯೊಳ್ ಕಡೆದುದು:ಖಮನುಣ್ಣ ವರುರ್ವಿಯೊಳ್ಪಲರ್

ನಿರುಪಮಮಪ್ಪ ಜೈನಪದಸೇವನೆಯಿಂ ಸುರಲೋಕಕ್ಕೆ ಯ್ದುವರ್

ಧರೆಯೊಳ್ಪೂರ್ವಮಚ್ಚರಿವಿಚಾರಿಸೆ ದುಷಮಕಾಲದೇಳ್ಗೆ ಯೊಳ್[೧೧]

ಈ ಕೆಟ್ಟ ಕಾಲದಲ್ಲಿ ಪಾಪಿಗಳು ಸಮರ್ಥರಾಗುತ್ತಾರೆ. ಕೆಟ್ಟಧರ್ಮಗಳನ್ನು ಆಶ್ರಯಿಸಿ ಗರ್ವದಿಂದ ಉಬ್ಬಿ ಕ್ರೂರವಾದ ನರಕ ಸಮುದ್ರದಲ್ಲಿ ಬಿದ್ದು ದುಃಖವನ್ನು ಅನುಭವಿಸುತ್ತಾರೆ. ಎಣೆಯಿಲ್ಲದ ಜೈನಧರ್ಮ ಪಾಲಿಸಿ ದೇವಲೋಕಕ್ಕೆ ಹೋಗುವವರು ವಿರಳ ಎಂಬ ನಯಸೇನನ ಮಾತುಗಳು ಅಂದಿನ ಕಾಲದ ಜೈನಧರ್ಮದ ಸ್ಥಿತಿ ಹೇಗಿತ್ತು ಎಂಬುದನ್ನು ಸ್ಪಷ್ಟಪಡಿಸುತ್ತದೆ. ಇಂಥಹ ಸಂದಿಗ್ಧ ಸಮಯದಲ್ಲಿ ಜೈನಧರ್ಮದ ಹಿರಿಮೆಯನ್ನು ಪ್ರಚಾರಗೊಳಿಸಲು ಜನಪ್ರಿಯ ಕಥಾ ಮಾಧ್ಯಮವೊಂದನ್ನು ಆಯ್ಕೆ ಮಾಡಿಕೊಂಡು 'ಧರ್ಮಾಮೃತ'ವನ್ನು ರಚಿಸಿದನು.

ಇದರಲ್ಲಿ ಒಟ್ಟು ೧೪ ಕಥೆಗಳಿದ್ದು ೧೪ ಆಶ್ವಾಸಗಳಲ್ಲಿ ಹರಡಿಕೊಂಡಿವೆ. ಇವುಗಳಿಗೆ ಮೂಲ ಆಕರಗಳಾಗಿ ಯಶಸ್ತಿಲಕ ಚಂಪೂ, ವಡ್ಡಾರಾಧನೆ ಇತ್ಯಾದಿ ಕಥಾಕೋಶಗಳನ್ನು ಅನುಸರಿಸಿರುವುದು ಸ್ಪಷ್ಟವಿದೆ. ಇಲ್ಲಿಯ ಹದಿನಾಲ್ಕು ಕಥೆಗಳಲ್ಲಿ ಜೈನಧರ್ಮದ ಸಮ್ಯಗ್‌ದರ್ಶನ ಮತ್ತು ಅದರ ಎಂಟು ಅಂಗಗಳಾದ ನಿಶ್ಶಂಕೆ, ನಿಷ್ಕಾಂಕ್ಷೆ, ನಿರ್ವಿಚಿಕಿತ್ಸೆ, ಅಮೂಢದೃಷ್ಟಿತ್ವ, ಉಪಗೂಹನ ಸ್ಥಿರೀಕರಣ, ವಾತ್ಸಲ್ಯ ಹಾಗೂ ಧರ್ಮ ಪ್ರಭಾವನೆಗಳನ್ನು ಬೋಧಿಸಲಾಗಿದೆ. ಅಲ್ಲದೇ ಅಹಿಂಸೆ, ಸತ್ಯ, ಆಸ್ತೇಯ, ಬ್ರಹ್ಮಚರ್ಯ ಹಾಗೂ ಅಪರಿಗ್ರಹ ಎಂಬ ಪಂಚಾಣು ವ್ರತಗಳನ್ನೂ ಸಹ ಹೇಳಲಾಗಿದೆ. ಈ ಮಹಾತತ್ವರತ್ನಗಳನ್ನು ಈ ಕೆಳಗಿನ ಒಂದೊಂದು ಕಥೆಗಳಲ್ಲಿ ಪ್ರತಿಪಾದಿಸಲಾಗಿದೆ.

೧. ದಯಾಮಿತ್ರಶೆಟ್ಟಿ ಮತ್ತು ವಸೂಭೂತಿ ಕಥೆಯಲ್ಲಿ ಜೈನಧರ್ಮದ ರತ್ನತ್ರಯಗಳಲ್ಲೊಂದಾದ ಸಮ್ಯಗ್‌ದರ್ಶನದ ಮಹಿಮೆಯನ್ನು ಸಾರುತ್ತದೆ. ವಸೂಭೂತಿಯು ಸನ್ಯಾಸಿಯಾಗಲು ಒಪ್ಪಿಕೊಂಡು ಅನುಭವಿಸಿದ ಕಷ್ಟ, ಕೊನೆಯಲ್ಲಿ ಜೈನಧರ್ಮದ ಶ್ರೇಷ್ಠತೆ ಅರಿತು ಅದನ್ನು ಸ್ವೀಕರಿಸಿ ಉತ್ತಮ ಸ್ಥಿತಿಗೇರುವುದನ್ನು ತೋರಿಸಲಾಗಿದೆ. ಇಲ್ಲಿ ನಯಸೇನ ವಿಶಿಷ್ಟ ಕಥನ ತಂತ್ರವನ್ನು ಅನುಸರಿಸಿ ಉತ್ತಮ

ಕಥೆಗಾರನೆಂಬ ಕೀರ್ತಿಗೆ ಪಾತ್ರನಾಗಿದ್ದಾನೆ. ಈ ಕಥೆಯ ನಿರೂಪಣೆಯು ಸೊಗಸಾಗಿದ್ದು, ಅವನ ಕಥನ ಕೌಶಲ್ಯಕ್ಕೆ ಉತ್ತಮ ನಿದರ್ಶನವಾಗಿದೆ.

೨. ಲಲಿತಾಂಗನ ಕಥೆಯು ಜೈನಧರ್ಮದಲ್ಲಿ ಶಂಕೆಯನ್ನು ತಾಳದೆ ವಿಶ್ವಾಸವಿಟ್ಟು ಆಚರಿಸಿದರೆ ಮೋಕ್ಷಪ್ರಾಪ್ತಿ ಎಂಬುದನ್ನು ಬಿಂಬಿಸುತ್ತದೆ.

೩. ಅನಂತಮತಿಯ ಕಥೆಯಲ್ಲಿ ನಿಷ್ಕಾಂಕ್ಷೆಯ ಮಹತ್ವವಿದ್ದು, ಸಂಸಾರ ಸುಖಕ್ಕೆ ವಿಮುಖಳಾಗಿ ಪರಮಾರ್ಥವನ್ನರಸುತ್ತ ತೊಂದರೆಗಳನ್ನು ನಿವಾರಿಸಿ ದೀಕ್ಷೆ ಪಡೆದು ಸದ್ಗತಿ ಹೊಂದುವ ಚಿತ್ರ ಈ ಕಥೆಯಲ್ಲಿದೆ.

೪. ಬುದ್ಧಾಯನ ಮತ್ತು ಅವನ ಹೆಂಡತಿ ಪದ್ಮಾವತಿ ಕುಷ್ಠರೋಗಿಯಾದ ವಾಸವದತ್ತನ ಸೇವೆಮಾಡಿ ಕೃತಾರ್ಥರಾಗಿ, ಪ್ರಾಪಂಚಿಕ ವೈರಾಗ್ಯವನ್ನು ಹೊಂದಿ, ದೀಕ್ಷೆ ಪಡೆದು ಉತ್ತಮಗತಿ ಹೊಂದುವುದನ್ನು ಶೀಲವತಿ ಕಥೆಯಲ್ಲಿ ಬಿಂಬಿಸಲಾಗಿದೆ.

೫. ಅಮೂಢದೃಷ್ಟಿತ್ವ ದರ್ಶನಸಿದ್ಧಿಗೆ ಅಗತ್ಯವಾಗಿ ಬೇಕಾದ ಅಂಶವೇನೆಂಬುದನ್ನು ರೇವತಿದೇವಿ ಕಥೆಯಲ್ಲಿ ತೋರಿಸಲಾಗಿದೆ.

೬. ಕಳ್ಳನೊಬ್ಬನಿಗೆ ಜಿನದೀಕ್ಷೆ ಕೊಟ್ಟು ಅವನ ಮನಸ್ಸನ್ನು ಪರಿವರ್ತನೆ ಮಾಡುವ ಉಪಗೂಹನತ್ವವನ್ನು ಜಿನಭಕ್ತಸೆಟ್ಟಿ ಕಥೆಯಲ್ಲಿ ಪ್ರತಿಪಾದಿಸಲಾಗಿದೆ.

೭. ವಾರಿಷೇಣನ ಕಥೆಯಲ್ಲಿ ಯೌವ್ವನದಲ್ಲಿ ವೈರಾಗ್ಯತಾಳಿ ಜಿನದೀಕ್ಷೆ ಪಡೆದು ಉತ್ತಮಗತಿ ಹೊಂದುವದನ್ನು ಹೇಳಲಾಗಿದೆ. ಇದನ್ನು ಸ್ಥಿರೀಕರಣದ ಕಥೆ ಎನ್ನಲಾಗುತ್ತದೆ.

೮. ದರ್ಶನಾಂಗದ ವಾತ್ಸಲ್ಯತತ್ವವನ್ನು ಯಜ್ಞದತ್ತೆ ಮತ್ತು ಸೋಮದತ್ತರ ಮಗ ವಜ್ರಕುಮಾರನ ಕಥೆ ಹೇಳುತ್ತದೆ.

೯. ಧರ್ಮ ಪ್ರಭಾವನೆಯಿಂದ ಅಕಂಪನಾಚಾರ್ಯರನ್ನು ಉಳಿಸಿದ ಕಥೆ ಇಲ್ಲಿದೆ.

೧೦. ಪಂಚಾಣುವ್ರತಗಳಲ್ಲಿ ಮೊದಲನೆಯದಾದ ಅಹಿಂಸೆಯನ್ನು ಜೈನಗೃಹಸ್ಥರು ಪಾಲಿಸಿದರೆ ಕಷ್ಟಗಳೆಲ್ಲ ನಿವಾರಣೆಯಾಗಿ ಪೂಜ್ಯರಾಗಿ ಬಾಳಬಹುದೆಂಬುದನ್ನು ಈ ಕಥೆ ತಿಳಿಸುತ್ತದೆ. ಹಲವು ದೃಷ್ಟಿಯಿಂದ ಈ ಕಥೆ ಗಮನಾರ್ಹವಾಗಿದ್ದು ಅರ್ಥಪೂರ್ಣವಾಗಿದೆ.

೧೧. ಧನಮಹಾರಾಜನು ಅಸತ್ಯವನ್ನಾಡಿ ಕಣ್ಣು ಕಳೆದುಕೊಂಡು ನರಕ ಸೇರಿದ ಸಂಘಶ್ರೀಯಂತಾಗದೆ ಬದುಕಿನಲ್ಲಿ ಸತ್ಯವನ್ನು ಅಳವಡಿಸಿಕೊಂಡು ಸ್ವಧರ್ಮದ ಆಚರಣೆಯ ಮೂಲಕ ಸದ್ಗತಿಪಡೆದ ಕಥೆಯಿದಾಗಿದೆ.

೧೨. ಅಸ್ತೇಯ ವ್ರತದ ಕಥೆಯಲ್ಲಿ ಕಳ್ಳತನ ಮಾಡದ ವ್ರತದಿಂದ ಶ್ರೇಷ್ಠರಾದವರನ್ನು ವರ್ಣಿಸಲಾಗಿದೆ.

೧೩. ಬ್ರಹ್ಮಚರ್ಯವ್ರತದ ಕಥೆಯಲ್ಲಿ ಪರಸ್ತ್ರೀಗೆ ಆಶಿಸಿದ ಸುವೇಗನಂತಾಗದೆ ದ್ರೋಣಾಚಾರ್ಯರಲ್ಲಿ ಬಿಲ್ವಿದ್ದೆ ಕಲಿತು ಬ್ರಹ್ಮಚರ್ಯೆ ಪರಿಪಾಲನೆ ಮಾಡಿ ಸಾಹಸವನ್ನು ಮೆರೆದ ಪ್ರಮಾಥಿಕುಮಾರನ ಜೀವನವನ್ನು ಚಿತ್ರಿಸಲಾಗಿದೆ.

೧೪. ಅಪರಿಗ್ರಹ ವ್ರತದ ಕಥೆಯಲ್ಲಿ ಪರಿಗ್ರಹದ ತೊಡಕುಗಳು ಹೆಚ್ಚಾದಷ್ಟೂ ಮನಸ್ಸಿನ ದುಃಖಗಳು ಹೆಚ್ಚಾಗುತ್ತವೆ. ಪರಿಗ್ರಹ ತ್ಯಜಿಸಿದವನೇ ದೇವರೆಂದು ಶ್ರಾವಂತಿಪುರದ ಅರಸನಾದ ಉಪಚರಮಹಾರಾಜನ ಕಥೆಯಲ್ಲಿ ಹೇಳಲಾಗಿದೆ.

ಹೀಗೆ ಧರ್ಮವನ್ನು ನಿರಾಕರಿಸಿ ಕ್ರೂರನರಕವನ್ನು ಅನುಭವಿಸುವ ಎಲ್ಲರಿಗೂ ತಿಳಿಯುವ ಹಾಗೆ ಜೈನಧರ್ಮವನ್ನು ಪ್ರತಿಪಾದಿಸಿರುವುದಾಗಿ ನಯಸೇನ ಸ್ಪಷ್ಟವಾಗಿ ಹೇಳಿಕೊಂಡಿದ್ದಾನೆ.[೧೦೦] ಈ ಮೂಲಕ ಅವನು 'ಜಿನವಾಕ್ಯಾಂಬುಧಿ'ಯನ್ನು ಈಜಿದುದು ಸಹಜವಾಗಿದೆ. ಅವನ ಲೋಕಕಲ್ಯಾಣ ದೃಷ್ಟಿ ಮತ್ತು ಸ್ವಧರ್ಮಾಚರಣೆಯ ಅಭಿಮಾನಗಳಿಂದ ಜನರನ್ನು ಉದಾತ್ತರನ್ನಾಗಿಸುವ ಹಂಬಲವೇ ಧರ್ಮಾಮೃತವನ್ನು ಉತ್ತಮ ಕಾವ್ಯವನ್ನಾಗಿಸಿದೆ ಎಂದು ಹೇಳಬಹುದು. ಇದರಲ್ಲಿ ಕಂಡುಬರುವ 'ಸುವ್ರತಾಂಬೋಧಿನಿ', 'ಜೈನಧರ್ಮಾಂಬರ ದಿನಕರಂ', 'ಉದ್ಯತ್‌ತಪೋಮೂರ್ತಿ' ಎಂಬ ಮಾತುಗಳು ಅವನ ಜಿನಧರ್ಮಪರವಾದ ನಿಲುವನ್ನು ಪ್ರತಿಪಾದಿಸುತ್ತವೆ.

ಧಾರ್ಮಿಕ ದೃಷ್ಟಿಯಿಂದ 'ಧರ್ಮಾಮೃತ' ರಚನೆಯಾಗಿದ್ದರೂ ಸಾಮಾಜಿಕ, ಸಾಂಸ್ಕೃತಿಕ ಅಂಶಗಳನ್ನು ತನ್ನಲ್ಲಿ ಗರ್ಭೀಕರಿಸಿಕೊಂಡು ''ಕರ್ನಾಟಕದ ಸಾಮಾಜಿಕ ಅಧ್ಯಯನಕ್ಕೆ ಅತ್ಯಮೂಲ್ಯ ಸಾಮಗ್ರಿಗಳನ್ನು ಒದಗಿಸುತ್ತದೆ''.[೧೦೧] ಅದು ಉತ್ತಮ ಕಾವ್ಯದ ಎಲ್ಲ ಗುಣಗಳನ್ನು ಅಳವಡಿಸಿಕೊಂಡಿದೆ. ''ಕಾವ್ಯವೆನ್ನುವುದು ರಸಭಾವ, ಗಮಕ, ನಾಣ್ನುಡಿ ದೇಸಿಯ ಹೊಸನುಡಿ ಹಾಗೂ ಮಾರ್ಗಕವಿತೆಯ ಪ್ರೌಢಿಮೆಗಳಿಂದ ಶೋಭಿಸುತ್ತದೆ.[೧೦೨] ಈ ಕಾರಣದಿಂದ ತನ್ನ ಕಾವ್ಯ ಶ್ರೇಷ್ಠವಾಗಬೇಕೆಂಬ ಉದ್ದೇಶದಿಂದ ಹಿಂದಿನ ಕವಿಗಳ ಕಾವ್ಯಗಳಲ್ಲಿಯ ಉತ್ತಮಾಂಶಗಳು ತನ್ನ ಕೃತಿಯಲ್ಲಿ ಶಾಶ್ವತವಾಗಿ ನೆಲೆಸಲೆಂದು

''ಅಸಗನದೇಸಿ ಪೊನ್ನನಮಹೊನ್ನತಿವೆತ್ತ ಬೆಡಂಗು ಪಂಪನೊಂ
ದಿಸದೃಶ್ಯಮಪ್ಪ ಪೂರ್ವರಸಮೆಯ್ದೆ ಗಜಾಂಕುಶನೊಳ್ಪುವೆತ್ತುರಂ
ಜಿಸುವಸದರ್ಥದೃಷ್ಟಿ ಗುಣವರ್ಮನ ಜಾಣ್ಕವಿರತ್ನನೋಜೆ ಶೋ
ಭಿಸೆ ನೆಲೆಸಿರ್ಕೆ ಧಾರಿಣಿಮನಂಗೊಳೆ ಮತ್ಕೃತಿಯೊಳ್ನಿರಂತರಂ'[೧೦೩]

ಎಂದು ಹಾರೈಸಿದ್ದಾನೆ. ತನ್ನ ಕೃತಿ ಈ ಎಲ್ಲ ಅಂಶಗಳನ್ನು ಒಳಗೊಳ್ಳುವ ನಿಟ್ಟಿನಲ್ಲಿ ನಯಸೇನ ತಕ್ಕ ಮಟ್ಟಿನ ಪ್ರಯತ್ನವನ್ನು ಮಾಡಿದ್ದಾನೆ.

ಸಾಹಿತ್ಯ ಕೃತಿಯೊಂದರ ಅಧ್ಯಯನದಲ್ಲಿ ಅದರ ವಸ್ತುವಿನ ನಿರ್ವಹಣೆಗೆ ವಿಶೇಷ ಸ್ಥಾನವಿದೆ. ಜೈನ ಶ್ರಾವಕರ ಜೀವನವನ್ನೊಳಗೊಂಡ ಹದಿನಾಲ್ಕು ಕಥೆಗಳು 'ಧರ್ಮಾಮೃತ'ದ ವಸ್ತುವಿಷಯವಾಗಿದ್ದರೂ ಇಲ್ಲಿ ಬರುವ ಒಂದೊಂದು ಕಥೆಯೂ ಜಿನತತ್ವಗಳ ಹಿರಿಮೆಯನ್ನು ಸಾರಲು ನಿರ್ಮಿಸಿಕೊಂಡ ಪಾತ್ರಗಳಿಂದ, ಸನ್ನಿವೇಶಗಳಿಂದ, ವರ್ಣನೆಗಳಿಂದ ಕೂಡಿವೆ. ಇವು ವಿಶಿಷ್ಟ ಕಥಾ ತಂತ್ರಗಳಿಂದಾಗಿ ಸಾಹಿತ್ಯಿಕ ಮೌಲ್ಯ ಪಡೆದುಕೊಂಡಿವೆ. ಉದಾಹರಣೆಗೆ ಕಾವ್ಯಕೌಶಲ್ಯಕ್ಕೆ ಅವನ ಅಹಿಂಸಾವ್ರತದ ಕಥೆ ಉತ್ತಮ ನಿದರ್ಶನವಾಗಿದೆ. ವಸುಭೂತಿಯ ಕಥೆಯು ನಯಸೇನನು ಹುಟ್ಟು ಕಥೆಗಾರನೆಂಬುದನ್ನು ತೋರಿಸುತ್ತದೆ. ಸತ್ಯವ್ರತದ ಕಥೆಯಲ್ಲಿ ಬರುವ ಸೆಟ್ಟಿ ಮತ್ತು ಜೈನ ಸನ್ಯಾಸಿಗಳ ಸಂಭಾಷಣೆಯ ಮಾದರಿ ಕಥೆಗಳ ನಿರೂಪಣೆ ಸ್ವಾರಸ್ಯಕರವಾಗಿದ್ದು, ಹೊಸ ರೀತಿಯಾಗಿದೆ. ಒಟ್ಟಿನಲ್ಲಿ 'ಧರ್ಮಾಮೃತ' ಒಂದು ಕನ್ನಡದ ಚಿಕ್ಕ ಕಥಾಕೋಶದಂತಿದೆ ಎಂದು ಹೇಳಬಹುದು.

'ಧರ್ಮಾಮೃತ' ಕಾವ್ಯದ ವಸ್ತು ಚಿಕ್ಕದಾಗಿದ್ದರೂ ಅಲ್ಲಿ ಬರುವ ವಿವಿಧ ವರ್ಣನೆಗಳಿಂದಾಗಿ ಅದು ವಿಸ್ತಾರತೆಯನ್ನು ಪಡೆದಿದೆ. ಸ್ತ್ರೀವರ್ಣನೆ, ಋತುಗಳ ವರ್ಣನೆ, ಸಮುದ್ರ, ಯುದ್ಧ, ಪಟ್ಟಣಗಳ ವರ್ಣನೆ, ವನವಿಹಾರ, ಜಲಕೇಳಿಗಳ ವರ್ಣನೆಗಳು ಆಯಾ ಕಥೆಗಳ ಸನ್ನಿವೇಶಕ್ಕನುಗುಣವಾಗಿ ಮೂಡಿಬಂದಿವೆ. ವಾರಿಷೇಣನ ಐನೂರು ರಾಣಿಯರ ವರ್ಣನೆ,[೧೦೪] ಅನಂತಮತಿಯ ಸೌಂದರ್ಯ ವರ್ಣನೆ, ಒದ್ದಾಯನನ ಓಲಗದ ವಿಲಾಸಿನಿಯರ ವರ್ಣನೆ ಮುಂತಾದ ವರ್ಣನೆಗಳನ್ನು ನೋಡಿದರೆ ನಯಸೇನ ಸ್ತ್ರೀ ವರ್ಣನೆಗೆ ನೀಡಿರುವ ಆದ್ಯತೆ ತಿಳಿದುಬರುತ್ತದೆ.[೧೦೫]

ನಯಸೇನನಿಗೆ ಮಾನವನ ದೋಷಗಳನ್ನು ಎತ್ತಿ ತೋರಿಸಿ, ಯಾರ ಮನಸ್ಸಿಗೂ ನೋವಾಗದಂತೆ ಜನರನ್ನು ವಿಡಂಬಿಸುವ ಕಲೆ ಸಿದ್ಧಿಸಿದೆ. ಜೈನಧರ್ಮ ತನ್ನ ಪ್ರಾಬಲ್ಯವನ್ನು ಕಳೆದುಕೊಳ್ಳುತ್ತಿರುವ ಸಂದಿಗ್ಧ ಸಮಯದಲ್ಲಿ ಪರಮತ ವಿಡಂಬನೆ ಸಹಜವಾಗಿ ಬಂದಿದೆ. ಉದಾಹರಣೆಗೆ "ದೇವರ್ ಫಲರಿಲ್ಲ ನಿರ್ದೋಷಿಯಪ್ಪನೋರ್ವನೆ ಪರಮಾತ್ಮನುಂ ಶಾಂತರೂಪನಲ್ಲದೆ ಕ್ರೂರನಲ್ಲಂ ಮನೋಜ ವಿದ್ರಾಣನಲ್ಲದೆ ವಿಟನಲ್ಲ[೧೦೬] ವಿಟನಪ್ಪಪ್ರಭುವಂ ಮೊದಲಾಗೆ ಬಗೆಯನೆಂದೊಡೆ ವಿಟನಪ್ಪ ದೇವನೆಂತು ಬಗೆದರ್[೧೦೭] ಇಲ್ಲಿ ಯಾವಧರ್ಮದ ದೇವರುಗಳನ್ನೂ ಹೆಸರಿಸದೆ ವಿಡಂಬಿಸಿರುವುದನ್ನು ಕಾಣಬಹುದು. ಮೈಲಾರ, ಮಾರಿಕಬ್ಬೆ, ಬನದಬ್ಬೆ ಮೊದಲಾದ ದೇವತೆಗಳನ್ನು ಸಹ ವಿಡಂಬಿಸಿದ್ದಾನೆ.[೧೦೮]

ವೈದಿಕ ಮತದ ವಿಡಂಬನೆಯನ್ನು ವಸುಭೂತಿಯ ಕಥೆಯಲ್ಲಿ ನೋಡಿದರೆ, ಬೌದ್ಧಧರ್ಮದ ವಿಡಂಬನೆಯನ್ನು ಸತ್ಯವ್ರತದ ಕಥೆಯಲ್ಲಿ ಕಾಣಬಹುದು (ನೋಡಬಹುದು). ಹೀಗೆ ನಯಸೇನ ಅನ್ಯಮತಗಳ ವಿಡಂಬನೆ ಮಾಡಿದ್ದರೂ, ಅದು ಸೌಮ್ಯಸ್ವರೂಪದ್ದಾಗಿದೆ. ಚಂಡಪ್ರದ್ಯೋತನ ಕಾಮುಕತನ ಸೂರ್ಪನ ಕಳ್ಳತನಗಳನ್ನು ಬಣ್ಣಿಸುವಾಗ ಮಾಡಿದ ವಿಡಂಬನೆ ಸ್ವಲ್ಪ ಕಟುವೆನಿಸಿದರೂ ಅರ್ಥಪೂರ್ಣವಾಗಿದೆ.[೧೦೯] ವ್ಯಕ್ತಿವಿಡಂಬನೆಗಳಿಗೂ ಧರ್ಮಾಮೃತದಲ್ಲಿ ಕೊರತೆಯಿಲ್ಲ ಎಂದು ಹೇಳಬಹುದು. ನಯಸೇನನ ಕಣ್ಣಿಗೆ ಬಿದ್ದ ಕೆಲವು ಡಾಂಭಿಕ ಮುನಿಗಳೂ ಸಹ ವಿಡಂಬನೆಗೆ

ಗುರಿಯಾಗಿದ್ದಾರೆ.[೧೧೦] ವಾರಿಷೇಣನ ಕಥೆಯಲ್ಲಿ ತರುಣಿಯರನ್ನು ಹೆಬ್ಬುಲಿಗೂ, ಹರಿಣಾಕ್ಷಿಯನ್ನು ಕ್ರೂರಸೀರ್ಕರಡಿಗೂ ಹೋಲಿಸಿ ವಿಡಂಬಿಸಿದ್ದಾನೆ.[೧೧೧]

ವಿಡಂಬನೆಯ ಮೂಲಕ ಹಾಸ್ಯರಸಕ್ಕೆ ಹೆಚ್ಚಿನ ಅವಕಾಶವನ್ನು ನಯಸೇನ ಕಲ್ಪಿಸಿದ್ದರೂ ಇತರ ರಸಗಳನ್ನು ಕಡೆಗಣಿಸಿಲ್ಲ. ಸ್ತ್ರೀಯರ ವರ್ಣನೆಯಲ್ಲಿ ಶೃಂಗಾರರಸವಿದ್ದರೂ ಅಷ್ಟು ಪರಿಣಾಮಕಾರಿಯಾಗಿಲ್ಲ. ಪುಷ್ಪದಂತ ಐನೂರು ಜನ ಸಾಧುಗಳಿಗೆ ಗರ್ಜಿಸುವ ಮಾತುಗಳು ವೀರರಸದಿಂದ ಕೂಡಿವೆ.[೧೧೨] ಧರ್ಮಾಮೃತ ಜೈನ ಧಾರ್ಮಿಕ ಕಾವ್ಯವಾಗಿದ್ದರಿಂದ ಜೀವನದ ಜಿಗುಪ್ಸೆ, ದೇಹದ ನಶ್ವರತೆ, ವೈರಾಗ್ಯದ ಚಿತ್ರಣ ಮೊದಲಾದ ಸಂದರ್ಭಗಳಲ್ಲಿ ಶಾಂತರಸಕ್ಕೆ ಪ್ರಾಮುಖ್ಯತೆ ನೀಡಿದೆ.

ಜೀವನದ ಅನುಭವಗಳಿಂದ ಎತ್ತಿ ತಂದ ಹೋಲಿಕೆಗಳ ಸಂಖ್ಯೆ ಧರ್ಮಾಮೃತದಲ್ಲಿ ಅಧಿಕವಾಗಿದೆ. ಉದಾ 'ಅಳಿಯನಂ ಕಂಡೆತ್ತೆಯಂತೆ ಲಜ್ಜಿಸದೆ', 'ಕಾಗೆಯಂ ಕಂಡ ಕೋಗಿಲೆಯಂತೆ ಬೆರ್ಚಿ' ಇತ್ಯಾದಿ ಅಲಂಕಾರಗಳು ಕಾವ್ಯದ ಕಲಾತ್ಮಕತೆಗೆ ಸಹಾಯಕವಾಗಿವೆ.[೧೧೩] ಆದುದರಿಂದ ನಯಸೇನನ್ನು 'ಸಾದೃಶ್ಯದ ಲಕ್ಷಾಧೀಶ', 'ಹೋಲಿಕೆಯ ದುಂದುಗಾರ', 'ಉಪಮಾಲಂಪಟ' ಎಂದು ಕರೆಯಲಾಗಿದೆ.[೧೧೪] ಧರ್ಮಾಮೃತ ಕಾವ್ಯದಲ್ಲಿ ಅಭಿವ್ಯಕ್ತಗೊಂಡ ಸಮಕಾಲೀನ ಜನಜೀವನದಿಂದಾಗಿ ಅದಕ್ಕೆ ಸರ್ವಕಾಲೀನತೆ ಪ್ರಾಪ್ತವಾಗಿದೆ. ಈ ಕಾರಣಕ್ಕಾಗಿ ಧರ್ಮಾಮೃತ ಬಾಹ್ಯರೂಪದಲ್ಲಿ ಚಂಪೂಕಾವ್ಯ, ಅಂತಃಸತ್ವದಲ್ಲಿ ಜಾನಪದ ಕಾವ್ಯವಾಗಿದೆ.[೧೧೫] ನಯಸೇನ ಈ ನಾಡಿನ ಜನಪರ ಜೀವನವನ್ನು ಅವರ ಆಡುಭಾಷೆಯ ಸತ್ವವನ್ನು ತನ್ನ ಕಾವ್ಯದಲ್ಲಿ ವಚನಕಾರರಿಗಿಂತ ಪೂರ್ವದಲ್ಲಿಯೇ ಬಳಸಿಕೊಂಡಿರುವುದು ಗಮನಾರ್ಹವಾಗಿದೆ. ಇಂದಿನ ಮೊಹರಂ ಹಬ್ಬಗಳಲ್ಲಿ ಹಾಕುತ್ತಿರುವ ಹಗಲುವೇಷಗಳನ್ನು 'ಧರ್ಮಾಮೃತ'ದಲ್ಲಿ 'ಪಗರಣ'ವೆಂದು ಕರೆಯಲಾಗಿದೆ. ಜನರಿಗೆ ಮನರಂಜನೆ ಒದಗಿಸುವ ಈ ಕಲೆ ಜನಪದ ಜೀವನದ ಅಂಗವಾಗಿದೆ. ಪ್ರಾಣಿಗಳ, ರಾಜರ ವೇಷ ಹಾಕಿ ಪರೆಗಳ ನಾದಕ್ಕೆ ತಕ್ಕಂತೆ ಕುಣಿದು, ಪಗರಣದ ಈ ವೇಷಗಾರರು ಮನರಂಜನೆ ಒದಗಿಸುತ್ತಿದ್ದರೆಂದು ತೋರುತ್ತದೆ. ಮೂರು ದಿನದ ಪಗರಣಕ್ಕೆ ಗಡ್ಡಮೀಸೆ ಮಂಡೆಯಂಬೋಳಿಸಿಕೊಳ್ವಂತೆ[೧೧೬] ಎಂಬ ಮಾತು ಪಗರಣದ ಸ್ವರೂಪವನ್ನು ತಿಳಿಸುತ್ತದೆ. ''ಜಾತ್ಯಾಶ್ವಮಂ ಬಿಟ್ಟು ಮರಗಾಲಂ ಕೊಳ್ವೆ'' ಎಂಬುದು ಮರಗಾಲು ಕಟ್ಟಿಕೊಂಡು ಕುದುರೆ ಕುಣಿತ ಕುಣಿಯುವ ಸಂಪ್ರದಾಯವಿದ್ದಿತೆಂಬುದನ್ನು ತಿಳಿಸುತ್ತದೆ.[೧೧೭] ಮೈಲಾರದೇವರ ಭಕ್ತರು, ದೇವರು ಮೈಮೇಲೆ ಬಂದವರಂತೆ ನಟಿಸಿ ತಮ್ಮನ್ನೇ ತಾವು ಬಡಿದುಕೊಳ್ಳುವ ಪದ್ಧತಿಯೊಂದು ಇದ್ದಿತು. ಇಂದಿಗೂ ಈ ವಿಚಿತ್ರ ಪದ್ಧತಿಯನ್ನು ಮೈಲಾರನ ಭಕ್ತರಲ್ಲಿ ಕಾಣಬಹುದು.

'ಧರ್ಮಾಮೃತ'ವೊಂದು ಜಾನಪದ ಕಾವ್ಯವೆಂಬುದಕ್ಕೆ ನಾಡಿನಲ್ಲಿ ಪ್ರಚಲಿತವಿದ್ದ ಜನಪದ ವೈದ್ಯಪದ್ಧತಿ ಮೂಲಕ ತೋರಿಸಿದ್ದಾನೆ. ಉದಾಹರಣೆಗೆ ದನಗಳಿಗೆ ನರಡುರೋಗ ಬಂದಾಗ ಅದರ ನಾಲಿಗೆಗೆ ಉಪ್ಪಿನಕಾಯಿ

ತಿಕ್ಕುತ್ತಿದ್ದರು. ಕಣ್ಣುನೋವಿಗೆ, ಗರ್ಭಪಾತಕ್ಕೆ ಹುಣಿಸೆಕೊನರು ಉಪಯೋಗಿಸುತ್ತಿದ್ದರು. ಇಂಥ ಜಾನಪದ ಜೀವನವಿಧಾನಕ್ಕೆ ಸಂಬಂಧಿಸಿದ ಹಲವು ಸಂಗತಿಗಳು ಈ ಕಾವ್ಯದ ಅಂತಃಸತ್ವವಾಗಿದೆ. ಇವೆಲ್ಲವುಗಳಿಂದ ರನ್ನ ಸರಸ್ವತಿಯ ಬಂಢಾರದ ಮುದ್ರೆಯನ್ನೊಡೆದಂತೆ ನಯಸೇನ ಜಾನಪದ ಸತ್ವವನ್ನು ಆಡುಭಾಷೆಯ ಸೊಗಡನ್ನು ಸೂರೆಗೈದಿದ್ದಾನೆಂದು ಹೇಳಬಹುದು.

ನಯಸೇನನು ಕಾವ್ಯ ಓದಿದೊಡನೆ ಅರ್ಥವಾಗಬೇಕಾದರೆ ಅದು ಸರಳ ಸಹಜ ಆಡುಭಾಷೆಯಾಗಿರಬೇಕೆಂಬ ಉದ್ದೇಶದಿಂದ ದೇಸಿವೆತ್ತ ಪೊಸನುಡಿಗೆ ಆದ್ಯತೆ ಕೊಟ್ಟಿದ್ದಾನೆ.[೧೧೮] ಅಂದಿನ ಕಾಲದಲ್ಲಿ ಪ್ರಚಲಿತವಿದ್ದ ಈ ನಾಡಿನ ಗಾದೆಮಾತುಗಳು, ನಾಣ್ಣುಡಿಗಳು, ಬೈಗುಳಗಳು, ದ್ವಿರುಕ್ತಿಗಳನ್ನು ಧಾರಾಳವಾಗಿ ಬಳಸಿದ್ದಾನೆ. 'ಪರದರೊಳ್ಮರುಳಿಲ್ಲ', 'ಸೂಳೆ ಸಾಧುವಲ್ಲ', 'ನಮ್ಮ ಸೆಟ್ಟಿಯ ಮಾತೊಳ್ನಿದವು ಬಳ್ಳಂಕಿರಿದು' ಇಂಥ ನೂರಾರು ಗಾದೆಮಾತುಗಳನ್ನು ಸಾಮಾನ್ಯ ಜನರ ಜೀವನದಿಂದ ಎತ್ತಿಕೊಟ್ಟಿದ್ದಾನೆ.[೧೧೯] 'ಕಳ್ಳನಿಗೆ ಬೆಳದಿಂಗಳ ಸೊಗಸದು', 'ಬಾಳಮೋಹಕ್ಕೆ ಶಿಶುವಂ ಪಿಡಿದರ್', ಮೊದಲಾದ ನಾಣ್ಣುಡಿಗಳಲ್ಲಿ ಕನ್ನಡ ನುಡಿಯ ದೇಸಿಯ ಒಗರನ್ನು ಕಾಣಬಹುದು.[೧೨೦] ನಾಯಿ, ನರಿ, ಹಂದಿ, ಕತ್ತೆ, ರಂಡೆ, ಜಾರೆ, ಸೊಳ್ಳೆ, ತಿವುಡು, ಪಚ್ಚೇತಿ ಇತ್ಯಾದಿ ಬೈಗುಳಗಳು ಅಜ್ಜಂ, ಪಜ್ಜಂ, ಸುಖಿಮುಂಗಿಖಿಮು ಮುಂತಾದ ದ್ವಿರುಕ್ತಿಗಳು ಸಹಜವಾಗಿ ಬಂದಿದೆ. ಮಾಲೋಪಮೆ ಅವನ ಕಾವ್ಯಭಾಷೆಯ ವೈಶಿಷ್ಟ್ಯವಾಗಿದೆ. 'ಸುಂಟಿ ತಿಂದ ಕೋಡಗದಂತೆ' ಎಂಬ ಒಂದು ಹೋಲಿಕೆಗೆ 'ಕುದುರೆಯೇರ್ದ ಕುರುಬನಂತೆ' ಇತ್ಯಾದಿ ಹಲವಾರು ಹೋಲಿಕೆಗಳನ್ನು ಸಾಲುಸಾಲಾಗಿ ನೀಡಿದ್ದಾನೆ.[೧೨೧] ಒಟ್ಟಿನಲ್ಲಿ ನಯಸೇನನ ಭಾಷಾಶೈಲಿ ಸರಳ ಸಹಜ ದೇಶಿಯತೆಯ ಸೊಬಗಿನಿಂದ ಕೂಡಿದೆ.

ಕನ್ನಡ ಮತ್ತು ಸಂಸ್ಕೃತಗಳ ಹಿತಮಿತ ಬೆರಕೆಯನ್ನು ನಯಸೇನ ಪುರಸ್ಕರಿಸಿದ್ದಾನೆ. ಕನ್ನಡದಲ್ಲಿ ಸಂಸ್ಕೃತದ ಹೇರಿಕೆಯನ್ನು ವಿರೋಧಿಸಿದ್ದಾನೆ. ಉದಾಹರಣೆಗೆ ಈ ಕೆಳಗಿನ ಪದ್ಯ ನೋಡಬಹುದು.

''ಸಕ್ಕದಮಂ ಪೇಳ್ವೊಡೆ ನೆರೆ
ಸಕ್ಕದಮಂ ಪೇಳ್ಗೆ ಸುದ್ದಗನ್ನಡದೊಳ್ತಂ
ದಿಕ್ಕುವುದೇ ಸಕ್ಕದಮಂ
ತಕ್ಕುದೇ ಬೆರಸಲ್ಕೆ ಘೃತಮುಮಂ ತೈಲಮುಮಂ''[೧೨೨]

''ಸಂಸ್ಕೃತದಲ್ಲಿ ಹೇಳುವುದಾದರೆ ಸಂಸ್ಕೃತದಲ್ಲಿಯೇ ಹೇಳು ಆದರೆ ಶುದ್ಧಗನ್ನಡದಲ್ಲಿ ಸಂಸ್ಕೃತ ತಂದಿಕ್ಕುವುದು ತುಪ್ಪದಲ್ಲಿ ಎಣ್ಣೆ ಬೆರೆಸಿದಂತಾಗುತ್ತದೆ'' ಎಂಬ ಮಾತು ಅವನ ಭಾಷಾಧೋರಣೆಯನ್ನು ಸ್ಪಷ್ಟಪಡಿಸುತ್ತದೆ. ಕನ್ನಡ ಭಾಷೆಯ ಸತ್ವ ಮತ್ತು ಚಲುವಿಕೆಯ ಅರಿವನ್ನು ಹೊಂದಿದ್ದ ನಯಸೇನನಿಗೆ ಕಾವ್ಯದ ಭಾಷೆಯು ಜನರಾಡುವ ಭಾಷೆಯಾಗಿರಬೇಕೆಂಬ ಪ್ರಜ್ಞೆಯಿತ್ತೆಂದು ತಿಳಿಯುತ್ತದೆ.

ಕಾವ್ಯಭಾಷೆಗಿರುವ ಪ್ರಾಮುಖ್ಯತೆಯನ್ನು ನಯಸೇನನು ಗದ್ಯಕ್ಕೂ ನೀಡಿದ್ದಾನೆ. ''ಕನ್ನಡ ಗದ್ಯದ ಇತಿಹಾಸದಲ್ಲಿ ನವಯುಗದ ಪ್ರಾದುರ್ಭಾವವನ್ನು ಮನಗಂಡು ಸುಪ್ರಭಾತವನ್ನು ಹಾಡಿದ ಜನತಾಕವಿ[೧೨೩] ನಯಸೇನನ ಜೀವನಾನುಭವದ ಗಾಢ ಹಿನ್ನೆಲೆಯಲ್ಲಿ ನುಗ್ಗಿಬಂದ ಹೋಲಿಕೆಗಳು, ಅಚ್ಚಕನ್ನಡ ಪದಗಳು, ಪದಸಮೂಹಗಳು ಚಿಕ್ಕ ಚಿಕ್ಕ ವಾಕ್ಯಬಂಧಗಳು ಅವನ ಶುದ್ಧಕನ್ನಡ ಗದ್ಯಶೈಲಿಯನ್ನು ಸೊಗಸನ್ನು ಅಧಿಕಗೊಳಿಸಿವೆ.

ಹೀಗೆ ನಯಸೇನನ ಕಾವ್ಯಭಾಷೆ ದೇಶಿಯವಾಗಿದ್ದು ಅಪೂರ್ವವಾಗಿದೆ. ಧರ್ಮಾಮೃತದ ಮೂಲಕ ಪ್ರಾದೇಶಿಕ ಭಾಷಾ ಮಹತ್ವವನ್ನು, ವೈಶಿಷ್ಟ್ಯವನ್ನು ಎತ್ತಿ ಹೇಳಿದುದು, ಕಾವ್ಯದ ಕಲಾತ್ಮಕತೆಯಲ್ಲಿ ಈ ಭಾಷೆಯ ಮಹತ್ವವನ್ನು ವಿವರಿಸಿರುವುದು ಅವನ ಹೆಗ್ಗಳಿಕೆಯಾಗಿದೆ. ಪ್ರಾದೇಶಿಕ ಭಾಷೆಯನ್ನು ಸಮರ್ಥವಾಗಿ ಬಳಸಿಕೊಂಡು ಕನ್ನಡದ ಸಮಗ್ರ ಭಾಷಾ ಚರಿತ್ರೆಯಲ್ಲಿ 'ಧರ್ಮಾಮೃತ'ದಂತಹ ಕಾವ್ಯದ ಮಾದರಿಯೊಂದನ್ನು ನೀಡಿರುವುದು ನಯಸೇನನ ವಿಶೇಷ ಕೊಡುಗೆ ಎನ್ನಬಹುದು.

ನಯಸೇನನು ಅನಂತರದ ಅನೇಕ ಕವಿಗಳ ಮೇಲೂ ತನ್ನ ಪ್ರಭಾವ ಬೀರಿದ್ದಾನೆ. ಜನ್ನನ ಮೇಲೆ ನಯಸೇನನ ಪ್ರಭಾವವಾಗಿರುವುದನ್ನು ನೋಡಬಹುದು.[೧೨೪] ಬಸವಣ್ಣನವರ ವಚನಗಳ ಮೇಲೂ ಈತನ ಪ್ರಭಾವವಾಗಿರುವಂತಿದೆ.[೧೨೫] ಇಲ್ಲಿ ಬರುವ ಒಂದೊಂದು ಕಥೆಗಳೂ ಮುಂದಿನ ಒಂದೊಂದು ಕಾವ್ಯಕ್ಕೆ ಪ್ರೇರಣೆ ನೀಡಿವೆ. ಧರ್ಮಾಮೃತದ ಘನ ಕೀರ್ತಿಯ ಕಥೆಯನ್ನಾಧರಿಸಿ ಕ್ರಿ.ಶ.೧೪೪೭ರಲ್ಲಿ ಪಾಯಣ್ಣಕವಿ ಸಾಂಗತ್ಯದಲ್ಲಿ 'ಅಹಿಂಸಾ ಚರಿತೆ' ರಚಿಸಿದ್ದಾನೆ.[೧೨೬] ಹತ್ತೊಂಭತ್ತನೆಯ ಶತಮಾನದ ಚಂದ್ರಸಾಗರವರ್ಣಿಯ 'ಭವ್ಯಾಮೃತವು' ಧರ್ಮಾಮೃತದ ಸಾರಸಂಗ್ರಹವಾಗಿದೆ.[೧೨೭]

ಒಟ್ಟಿನಲ್ಲಿ ಹೇಳಬೇಕೆಂದರೆ ನಯಸೇನನು ಆ ಕಾಲದ ಅಪರೂಪದ ಕವಿಯಾಗಿದ್ದು, ಜೈನಧರ್ಮದ ಏಳಿಗಾಗಿ ಶ್ರಮಿಸಿದನು. ಕನ್ನಡಕ್ಕೆ ಜಾನಪದ ಸತ್ವದ 'ಜೈನಕಥಾಕೋಶ'ವೊಂದನ್ನು ಚಂಪೂರೂಪದಲ್ಲಿ ರಚಿಸಿದ ಕೀರ್ತಿ ಈತನಿಗೆ ಸಲ್ಲುತ್ತದೆ. ಒಳ್ಳೆಯ ಕಥೆಗಾರನಾಗಿ, ಭಾಷಾಭಿಮಾನಿಯಾಗಿ, ಸಮಾಜ ವಿಜ್ಞಾನಿಯಾಗಿ ಧರ್ಮೋಪದೇಶಕನಾಗಿ, ಈ ನಾಡಿನ ಜೀವಂತ ಸಂಸ್ಕೃತಿಯೊಂದನ್ನು ಕಾವ್ಯರೂಪದಲ್ಲಿ ಹಿಡಿದಿಟ್ಟ ಉತ್ತಮ ಕವಿಯಾಗಿ ಕನ್ನಡ ಸಾಹಿತ್ಯ ಲೋಕದಲ್ಲಿ ಚಿರಸ್ಥಾಯಿಯಾದ ಸ್ಥಾನವೊಂದನ್ನು ದೊರಕಿಸಿಕೊಟ್ಟಿದ್ದಾನೆ.

ವಿಜ್ಞಾನೇಶ್ವರ-ಮಿತಾಕ್ಷರ :

ಕೇವಲ ಒಂದು ಕೃತಿಯಿಂದ ಒಬ್ಬ ಲೇಖಕ ಅಮರನಾಗುವ ಸೌಭಾಗ್ಯ ಬೆರಳೆಣಿಕೆಯ ಲೇಖಕರಿಗಷ್ಟೇ ದೊರೆಯುತ್ತದೇನೋ. 'ಅರ್ಥಶಾಸ್ತ್ರ'ದಿಂದಾಗಿ ಕೌಟಿಲ್ಯ, 'ಕವಿರಾಜಮಾರ್ಗ'ದಿಂದಾಗಿ ಶ್ರೀವಿಜಯ, 'ಜೈಮಿನಿಭಾರತ'ದಿಂದಾಗಿ ಲಕ್ಷ್ಮೀಶ, ಹೀಗೆ ಕೆಲವು ಮಹಾಮಹಿಮ ಲೇಖಕರನ್ನು ಅವರ ಏಕೈಕ ಅಮರಕೃತಿಗಳನ್ನು

ಹೆಸರಿಸಬಹುದು. ಇದರಲ್ಲಿ ವಿರಾಜಮಾನರಾಗಿ ಬೆಳಗುವವನೆಂದರೆ 'ಮಿತಾಕ್ಷರ' ಕೃತಿಯ ಕರ್ತೃ ವಿಜ್ಞಾನೇಶ್ವರ. ಅವನ ಮತ್ತೊಂದು ಕೃತಿ 'ಸಪಿಂಡ್ಯ ದೀಪಿಕಾ' ಇದೆಯೆಂದು ಹೇಳಲಾಗಿದೆ.[೧೨೮]

ಮಿತಾಕ್ಷರ ಕೃತಿಯಿಂದ ವಿಜ್ಞಾನೇಶ್ವರರು ಸುಮಾರು ಒಂಭತ್ತು ಶತಮಾನಗಳಿಂದ ಭರತಖಂಡವನ್ನು ಬೆಳಗುತ್ತಲೇ ಇದ್ದಾನೆ. ಹಿಂದೂ ಧರ್ಮಶಾಸ್ತ್ರದ ಬೆಳವಣಿಗೆಗೆ ಭದ್ರಬುನಾದಿಯನ್ನು ಹಾಕಿಕೊಟ್ಟ ಮಿತಾಕ್ಷರ ಭಾರತದ ಆಧುನಿಕ ನ್ಯಾಯಶಾಸ್ತ್ರ ಪದ್ಧತಿಗೂ ಹೆಚ್ಚು ಕಡಿಮೆ ಏಕೈಕ ಆಕರ ಗ್ರಂಥವಾಗಿದೆ.

ಮಿತಾಕ್ಷರ ಶೀರ್ಷಿಕೆಯೇ ಸೂಚಿಸುವಂತೆ ಅತಿ ಕಡಿಮೆ ಅಕ್ಷರಗಳಲ್ಲಿ ಕಾನೂನಿನ ಸೂಕ್ಷ್ಮತೆಯನ್ನು, ಸಂಕೀರ್ಣತೆಯನ್ನು, ಆಳ, ವಿಸ್ತಾರಗಳನ್ನು ಮತ್ತು ವೈವಿಧ್ಯತೆಗಳನ್ನು, ಸಂಶಯಾತೀತವಾಗಿ ಮನವರಿಕೆ ಮಾಡಿಕೊಡುವ ಒಂದು ಸರ್ವಕಾಲಿಕ ಶ್ರೇಷ್ಠ ಗ್ರಂಥ.

ಅಲ್ಪಾಕ್ಷರಂ ಅಸಂದಿಗ್ಧಂ ಸಾರವತ್ ವಿಶ್ವತೋಮುಖಂ

ಅಸ್ತೋಭಂ ಅನವದ್ಯಂಚ ಸೂತ್ರಂ ಸೂತ್ರವಿದೋಮಿದು:[೧೨೯]

ಶತಮಾನಗಳುದ್ದಕ್ಕೂ ಇತಿಹಾಸದ ಕಾಲಗರ್ಭದಲ್ಲಿ ವಿಜ್ಞಾನೇಶ್ವರ ಅಡಗಿ ಕುಳಿತಿದ್ದರೂ ಅವರ ಉದಾತ್ತ ನ್ಯಾಯಶಾಸ್ತ್ರದ ವಿಚಾರಗಳು ವಿಶ್ವದಾದ್ಯಂತ ಪಸರಿಸುತ್ತಲೇ ಇದ್ದವು. ಇಂಥಹ ವಿಜ್ಞಾನೇಶ್ವರನನ್ನು ಮೊಟ್ಟಮೊದಲ ಬಾರಿಗೆ ಆಧುನಿಕ ಜಗತ್ತಿಗೆ ಪರಿಚಯಿಸಿದ ಶ್ರೇಯಸ್ಸು ಖ್ಯಾತ ಇತಿಹಾಸ ಸಂಶೋಧಕರಾದ ಡಾ.ಪಿ.ಬಿ.ದೇಸಾಯಿಯವರಿಗೆ ಸಲ್ಲುತ್ತದೆ. ಮರತೂರಿನಲ್ಲಿ ದೊರೆತ ಶಾಸನದ ವಿವರಗಳನ್ನು ಮೊಟ್ಟಮೊದಲ ಬಾರಿಗೆ ತಮ್ಮ ನಿಯತಕಾಲಿಕೆ ''ಪ್ರಾಚೀನ ಕರ್ನಾಟಕ ಹೊಸಬೆಳಕು'' ದಿನಾಂಕ:೧-೨-೧೯೩೨ರ ಸಂಚಿಕೆಯಲ್ಲಿ ದೇಸಾಯಿಯವರು ಪ್ರಕಟಪಡಿಸಿದರು. ಈ ಶಾಸನದ ಕುರಿತು ಡಾ.ವಿ.ಎಸ್.ಕುಲಕರ್ಣಿ ಅವರು೧೯೮೧ರಲ್ಲಿ ಕರ್ನಾಟಕ ಇತಿಹಾಸ ಅಕಾಡೆಮಿಯ ಮುಖಪತ್ರ 'ಇತಿಹಾಸ ದರ್ಶನ'ದಲ್ಲಿ ವಿವರಗಳನ್ನು ಪ್ರಕಟಿಸಿದರು. ಪ್ರಖ್ಯಾತ ಶಾಸನಲಿಪಿಶಾಸ್ತ್ರಜ್ಞರೂ, ಸಂಶೋಧಕರೂ ಆದ ಸೀತಾರಾಮ್ ಜಾಗಿರದಾರ ಅವರು ಈ ಶಾಸನದ ಶಾಸ್ತ್ರೀಯ ಅಧ್ಯಯನ ಮಾಡಿ ಅದರ ಮಹತ್ವದ ಅಂಶಗಳನ್ನು ಹೊರಗೆಡಹಿದರು.[೧೩೦]

ವಿಜ್ಞಾನೇಶ್ವರ ಜನಿಸಿದ್ದು ಅಟ್ಟಳೆನಾಡಿನ ಮಾಸೆಯಮಡು ಗ್ರಾಮದಲ್ಲಿ ಶಾಸನದಲ್ಲಿ ವಿಜ್ಞಾನೇಶ್ವರನ ಊರಿನ ಕುರಿತು ಈ ರೀತಿ ಉಲ್ಲೇಖಿಸಲಾಗಿದೆ -

''ಎನೆ ನೆಗಳ್ದ ವರಾನ್ವಯ ವೆಸ್ತೆನೆ ಲಟ್ಟಳೆ ನಾಡೊಳೆಸವ

ಮಾಸೆಯಮಡು ಸದ್ವಿನುತ ಶಿವಾಲಯ ಚಯದಿಂದನು

ಪಮಿತವ ನಾಳಿಯಿಂದೆ ಸೊಗಯಿಸಿ ತೋರ್ಕ್ಕುಂ''

ಅಟ್ಟಳೆನಾಡು ಬೀದರ ಜಿಲ್ಲೆಯ ಈಗಿನ ಬಸವಕಲ್ಯಾಣ, ಭಾಲ್ಕಿ, ಬೀದರ ಮತ್ತು ಆಂಧ್ರಪ್ರದೇಶದ ಜಹೀರಾಬಾದ ತಾಲೂಕಿನ ಕೆಲವು ಹಳ್ಳಿಗಳನ್ನು ಒಳಗೊಂಡ ಒಟ್ಟು ಮುನ್ನೂರು ಗ್ರಾಮಗಳ ವಿಭಾಗವಾಗಿತ್ತು. ಮಾಸೆಯಮಡು ಭಾಲ್ಕಿ ತಾಲೂಕಿನಲ್ಲಿರುವ ಈಗಿನ ಮಾಸಿಮಡು ಆಗಿದೆ.[೧೩೧]

ಅಟ್ಟಳೆನಾಡಿನ ಮಾಸೆಯಮಡು ಗ್ರಾಮದ ಸೋಮರಾಜ ಮತ್ತು ಭಾಗ್ಯವನಿತೆ ಎಂಬ ದಂಪತಿಗಳಿಗೆ ಕೌಶಿಕಗೋತ್ರ ಲಲಾಮನೆನಿಸಿ ವಿಜ್ಞಾನೇಶ್ವರನು ಜನಿಸುತ್ತಾನೆ. ವಿಜ್ಞಾನೇಶ್ವರನ ನಿಜವಾದ ಹೆಸರು 'ಕಂಚ' ಎಂಬುದಾಗಿದ್ದು, ವಿಜ್ಞಾನೇಶ್ವರ ಎಂಬುದು ಆತನ ಬರಹನಾಮವಾಗಿರಬಹುದು ಇಲ್ಲವೇ ಬಿರುದುನಾಮವೂ ಆಗಿರಬಹುದು. ಕಂಚ ಅತ್ಯಂತ ಪ್ರತಿಭಾಸಂಪನ್ನ ವ್ಯಕ್ತಿಯಾಗಿದ್ದು, ವಿಶೇಷವಾದ ಜ್ಞಾನವುಳ್ಳವನಾಗ್ದಿರಿಂದ ಅವನಿಗೆ ಅನ್ವರ್ಥವಾಗಿಯೂ ವಿಜ್ಞಾನೇಶ್ವರ ಎಂಬ ಹೆಸರು ಬಂದಿರಲು ಸಾಧ್ಯ.

ವಿಜ್ಞಾನೇಶ್ವರನ ಹೆಂಡತಿ ಕೇತಿಕಬ್ಬೆ. ಅವರಿಗೆ ನಾಲ್ವರು ಪುತ್ರರು ಕಾಮದೇವ, ಸೋಮದೇವ, ಮಾರಸಿಂಗ ಮತ್ತು ಬೀಚಿರಾಜ. ಇವರಲ್ಲಿ ಕೊನೆಯವನಾದ ಬೀಚಿರಾಜನು ಹೆಚ್ಚು ಪ್ರಸಿದ್ಧಿಗೆ ಬಂದು ಪೆರ್ಗಡೆ ವೃತ್ತಿಯನ್ನು ಕೈಕೊಂಡು ಆಲಂದೆ-೧೦೦೦ದ ಉಪವಿಭಾಗವಾದ ಗೊಂಕನಾಡಿನಲ್ಲಿಯ ಮರತೂರು ಗ್ರಾಮದಲ್ಲಿ ಶಿವಾಲಯವನ್ನು ಕಟ್ಟಿಸುತ್ತಾನೆ ಎಂದು ಮರತೂರು ಶಾಸನ ತಿಳಿಸುತ್ತದೆ.[೧೩೨]

ವಿಜ್ಞಾನೇಶ್ವರನು ಮೊದಲನೆಯ ಸೋಮೇಶ್ವರ ಆತನ ಮಗ ಆರನೆಯ ವಿಕ್ರಮಾದಿತ್ಯನ ಆಳ್ವಿಕೆಯಲ್ಲಿ ಆಸ್ಥಾನ ಪಂಡಿತರೂ ರಾಜಗುರುಗಳೂ ಆಗಿದ್ದರು. ಅಪ್ರತಿಮ ಪ್ರತಿಭಾಶಾಲಿಯಾದ ವಿಜ್ಞಾನೇಶ್ವರರು ಮಹಾಜ್ಞಾನಿಗಳು, ವಿನಯಶೀಲರೂ ಮತ್ತು ದಾರ್ಶನಿಕರೂ ಆಗಿದ್ದನು. ಹೀಗಾಗಿ ಆರನೆಯ ವಿಕ್ರಮಾದಿತ್ಯನ ಮಗನಾದ ಪಂಡಿತ ಮೂರನೆಯ ಸೋಮೇಶ್ವರನು ಇಂತಹ ಮಹಾನ್ ವಿದ್ವಾಂಸರಿಂದ ಶಿಕ್ಷಣ ಪಡೆದುದರಿಂದಲೇ ತನ್ನ ಅಮೂಲ್ಯ ಕೃತಿ ಮಾನಸೋಲ್ಲಾಸವನ್ನು ರಚಿಸಲು ಸಾಧ್ಯವಾಯಿತೆಂದು ಹೇಳಬಹುದು.

ವಿಜ್ಞಾನೇಶ್ವರ ಎಲ್ಲ ಸ್ಮೃತಿಗಳನ್ನು ಅಧ್ಯಯನ ಮಾಡಿ ಅವುಗಳ ಸಾರವನ್ನು ಅರಿತವನಾಗಿದ್ದು, ಅವುಗಳೆಲ್ಲದರ ಪೈಕಿ ಹೃದಯಕ್ಕೆ, ಮನಸ್ಸಿಗೆ, ಬುದ್ಧಿಗೆ ಅತಿಯಾಗಿ ತಾಕಿದ್ದೆಂದರೆ, ಯಾಜ್ಞವಲ್ಕ್ಯ ಸ್ಮೃತಿ. ಇಂಥಹ ಅಮೋಘವಾದ ಧರ್ಮಶಾಸ್ತ್ರಕ್ಕೆ ವಿಜ್ಞಾನೇಶ್ವರ ಬರೆದ ಅಮೋಘ ವ್ಯಾಖ್ಯಾನವೇ ಮಿತಾಕ್ಷರ. ಧರ್ಮಸೂಕ್ಷ್ಮಗಳನ್ನು ಮತ್ತು ಧರ್ಮಸಮ್ಮತವಾದ ಮಾನವೀಯ ಮಿಡಿತಗಳಿಗೆ ಸ್ಪಂದಿಸುವ ನ್ಯಾಯವಿಧಾನ, ವ್ಯವಸ್ಥೆಯನ್ನು ಸಂಕ್ಷಿಪ್ತವಾಗಿ ಸಮಗ್ರವಾಗಿ ಮತ್ತು ಸುಂದರವಾಗಿ ಚಿತ್ರಿಸುವ ಮಿತಾಕ್ಷರ ಬಂಗಾಲ ಪ್ರಾಂತ್ಯವೊಂದನ್ನು ಹೊರತುಪಡಿಸಿ ಭಾರತದಾದ್ಯಂತ ಪ್ರಚಲಿತದಲ್ಲಿದ್ದು ಮಾನ್ಯತೆಯನ್ನು ಪಡೆದಿದೆ. ಬಂಗಾಲದಲ್ಲಿ ಮಾತ್ರ ಜಿಮೂತವಾಹನನ ದಾಯಭಾಗ ಚಲಾವಣೆಯಲ್ಲಿದ್ದು, ಅದು ಮುಖ್ಯವಾಗಿ ಆಸ್ತಿ ವಿಭಜನೆ ಮತ್ತು ವಾರಸುದಾರಿಕೆಗೆ ಸಂಬಂಧಿಸಿದ

ನ್ಯಾಯಶಾಸ್ತ್ರಗ್ರಂಥವಾಗಿದೆ. ಆದರೆ ಮಿತಾಕ್ಷರವು ಹೆಚ್ಚು ಕಡಿಮೆ ನ್ಯಾಯಶಾಸ್ತ್ರಕ್ಕೆ ಸಂಬಂಧಿಸಿದ ಅನೇಕ ವಿಷಯಗಳನ್ನು ಒಳಗೊಂಡಿರುವುದರಿಂದ ಅದೊಂದು ಸಮಗ್ರ ನ್ಯಾಯಶಾಸ್ತ್ರ ಗ್ರಂಥವೆಂದರೂ ತಪ್ಪಾಗಲಾರದು.[೧೩೩]

ಮಿತಾಕ್ಷರ ಯಾಜ್ಞವಲ್ಕ್ಯ ಸ್ಮೃತಿಯ ವಾಖ್ಯಾನವೆಂದು ಹೇಳಲಾಗಿದ್ದರೂ, ಎಲ್ಲ ಸ್ಮೃತಿಗಳನ್ನು ಸಂದರ್ಭಾನುಸಾರ ವಿವರವಾಗಿ ಚರ್ಚಿಸಿರುವುದರಿಂದ ಇದನ್ನು ಧರ್ಮಶಾಸ್ತ್ರ ವಾಖ್ಯಾನವೆಂತಲೂ ಪರಿಗಣಿಸಬಹುದಾಗಿದೆ. ಎಲ್ಲ ಪ್ರಮುಖ ಆಚಾರ, ವಿಚಾರ, ವ್ಯವಹಾರ, ಪ್ರಾಯಶ್ಚಿತ್ತದ ವಿಷಯಗಳನ್ನು ಎಲ್ಲ ಸ್ಮೃತಿಗಳಿಂದ ಆಯ್ದು ಕ್ರೋಢಿಕರಿಸಿ ಸನ್ನಿವೇಶ ಹಾಗೂ ಸಂದರ್ಭಕ್ಕೆ ತಕ್ಕಂತೆ ಚರ್ಚಿಸಿರುವುದು ಈ ಗ್ರಂಥದ ಮತ್ತೊಂದು ವೈಶಿಷ್ಟ್ಯ.

ಕೇವಲ ಯಾಜ್ಞವಲ್ಕ್ಯನ ಸ್ಮೃತಿಯನ್ನಲ್ಲದೆ ವಿಜ್ಞಾನೇಶ್ವರ ಇನ್ನಿತರ ಹಲವಾರು ಸ್ಮೃತಿ, ಧರ್ಮಸೂತ್ರ ಇತ್ಯಾದಿ ಗ್ರಂಥಗಳನ್ನು ದೀರ್ಘವಾಗಿ ಅಭ್ಯಸಿಸಿ, ಅನುಸರಿಸಿರುವುದು ಸ್ಪಷ್ಟವಾಗಿ ಅನುಭವಕ್ಕೆ ಬರುತ್ತದೆ. ಒಂದು ಅಂದಾಜಿನ ಪ್ರಕಾರ ಮಿತಾಕ್ಷರದಲ್ಲಿ ಸುಮಾರು ೯೦ ಪ್ರಾಚೀನ ಗ್ರಂಥಗಳ ಪ್ರಸ್ತಾಪ ಬರುತ್ತದೆ. ಅಂತೆಯೇ ಮಿತಾಕ್ಷರಕ್ಕೆ ಬಂದಿರುವಷ್ಟು ಸಮಗ್ರತೆ ಪರಿಪೂರ್ಣತೆಯು ಬೇರಾವ ಧರ್ಮಶಾಸ್ತ್ರ ನಿಬಂಧ ಗ್ರಂಥಕ್ಕೂ ಪ್ರಾಪ್ತವಾಗಿಲ್ಲ. ಒಂದು ನಿರ್ದಿಷ್ಟ ವಿಷಯದಲ್ಲಿ ಯಾವ ಸ್ಮೃತಿಕಾರನ, ಧರ್ಮಸೂತ್ರ ಕರ್ತೃವಿನ ಮತ್ತಿತರೆ ಗ್ರಂಥಕರ್ತರ ಪ್ರತಿಪಾದನೆಗಳು, ವಿವರಣೆಗಳು, ಪ್ರಸ್ತುತವಾಗಿವೆಯೋ, ಸಮಯೋಚಿತವಾಗಿವೆಯೋ ಅವುಗಳನ್ನು ಎತ್ತಿ ಹಿಡಿಯುವಲ್ಲಿ ವಿಜ್ಞಾನೇಶ್ವರ ಹಿಂದೇಟು ಹಾಕುವುದಿಲ್ಲ. ಹೀಗಾಗಿ ಮಿತಾಕ್ಷರದಲ್ಲಿ ಔದಾರ್ಯದ ಗುಣ ಅಂತರ್ಗತವಾಗಿಯೇ ಇದೆ.

ಮಿತಾಕ್ಷರ ಪದ್ಧತಿಯಲ್ಲಿ ಪಿತ್ರಾರ್ಜಿತ ಆಸ್ತಿಯಲ್ಲಿ ಮಗನಿಗೆ ಹುಟ್ಟಿನಿಂದಲೇ ವಾರಸುದಾರಿಕೆಯ ಹಕ್ಕು ಪ್ರಾಪ್ತವಾಗುತ್ತದೆ. ತಂದೆಯ ಜೀವಿತ ಅವಧಿಯಲ್ಲಿಯೇ ಮಗನು ಆಸ್ತಿಯಲ್ಲಿ ತನ್ನ ಪಾಲನ್ನು ಕೇಳಬಹುದು ಮತ್ತು ಆ ಪಾಲನ್ನು ಪಡೆಯಲು ತನ್ನ ಹಕ್ಕನ್ನು ಕಾನೂನು ಬದ್ಧವಾಗಿ ಚಲಾಯಿಸಬಹುದು. ಅಲ್ಲದೇ ಮಗನಿಗೆ ಪಿತ್ರಾರ್ಜಿತ ಆಸ್ತಿಯ ಮೇಲೆ ಜನ್ಮದಿಂದಲೇ ಅಧಿಕಾರವಿರುವುದರಿಂದ ಆಸ್ತಿಯ ಅನಧಿಕೃತ ಪರಭಾರೆಯನ್ನು ತಡೆಯಲು ಸಾಧ್ಯ. ಮತ್ತು ಅವಿಭಕ್ತ ಕುಟುಂಬದಲ್ಲಿರುವ ಸಹೋದರನಂತಹ ಹತ್ತಿರದ ಸಂಬಂಧಿ ತನ್ನ ಪಾಲಿನ ಆಸ್ತಿಯನ್ನು ಪರಭಾರೆ ಮಾಡುವಂತಹ ಅಧಿಕಾರವನ್ನು ಹೊಂದಿಲ್ಲ. ಆತನ ಮರಣಾನಂತರ ಆತನಿಗೆ ಗಂಡು ಸಂತಾನವಿರದಿದ್ದಲ್ಲಿ ಆತನ ಹಿತಾಸಕ್ತಿ ಆತನ ಸಹೋದರನಿಗೆ ಸಲ್ಲುತ್ತದೆ. ಹೀಗಾಗಿ ಆಸ್ತಿಯ ಉತ್ತರಾಧಿಕಾರದ ವಿಚಾರದಲ್ಲಿ ಹತ್ತಿರದ ರಕ್ತಸಂಬಂಧವೇ ಪ್ರಮುಖ.[೧೩೪]

ಸಪಿಂಡ ಸಂಬಂಧ :

ಮಿತಾಕ್ಷರವು ಪಿತ್ರಾರ್ಜಿತ ಆಸ್ತಿಯನ್ನು ಕೇವಲ ಮಕ್ಕಳಿಗೆ ಅದರಲ್ಲೂ ಗಂಡುಮಕ್ಕಳಿಗೆ ಹಾಗೂ ಅವರ ವಿಧವಾ ತಾಯಿಗೆ ಮಾತ್ರ ಸೀಮಿತಗೊಳಿಸಿ, ಕೌಟುಂಬಿಕ ಭದ್ರತೆಯನ್ನು ಕಲ್ಪಿಸಿಕೊಡುತ್ತದೆ. ಅಲ್ಲದೇ ಸಪಿಂಡಕ್ಕೆ ಸುಂದರ

ಹಾಗೂ ಸರಳ ಮತ್ತು ವೈಜ್ಞಾನಿಕ ವಾಖ್ಯೆಯನ್ನು ನೀಡಿದ ಶ್ರೇಯಸ್ಸು ವಿಜ್ಞಾನೇಶ್ವರನಿಗೆ ಸಲ್ಲುತ್ತದೆ. ಸಪಿಂಡ ಎಂದರೆ ಒಂದೇ ಪಿಂಡದಿಂದ ಬಂದದ್ದು ಎಂದರ್ಥ. ಇಬ್ಬರು ವ್ಯಕ್ತಿಗಳು ಒಂದೇ ದೇಹದ ಕಣಗಳಿಂದ ಬಂಧಿತರಾಗುವ ಸಂಬಂಧದಿಂದಾಗಿ ಸಪಿಂಡ ಸಂಬಂಧಿಗಳಾಗುತ್ತಾರೆ.[೧೩೫]

ಮಿತಾಕ್ಷರ ಮತ್ತು ಮಹಿಳೆ :

ಹೆಣ್ಣಿಗೆ ಆಸ್ತಿಯ ಹಕ್ಕನ್ನು ನಿರಾಕರಿಸಲಾಗಿದ್ದರೂ, ಸಮಾಜದ ಸ್ವಾಸ್ಥ್ಯಕ್ಕೆ ಅಗತ್ಯವಿರುವ ಎಲ್ಲ ನೈತಿಕ ಮೌಲ್ಯಗಳ ಅನುಷ್ಠಾನದ ಹೊಣೆ ಮಾತ್ರ ಅವಳ ಹೆಗಲಿಗೇ! ಪ್ರೀತಿ, ವಾತ್ಸಲ್ಯ, ದಯೆ, ಕರುಣೆ, ಅನುಕಂಪ, ಸೇವೆ, ತ್ಯಾಗ ಇತ್ಯಾದಿ ಎಲ್ಲ ಮೌಲಿಕ ಗುಣಗಳು ಅವಳಲ್ಲಿ ಮೇಳೈಸಿದ್ದರೂ, ಅವಳು ಪುರುಷನೊಂದಿಗೆ ಸ್ವಾತಂತ್ರ್ಯವನ್ನು ಹಂಚಿಕೊಳ್ಳುವ ಅವಕಾಶ ಮಾತ್ರ ಖಂಡಿತ ಇರಲಿಲ್ಲ. ಕೌಟುಂಬಿಕ ಹಿಂಸೆಯನ್ನು, ದೌರ್ಜನ್ಯವನ್ನು ಮೂಕಪ್ರಾಣಿಯಂತೆ ಸಹಿಸಿಕೊಂಡು ಹೋಗುವವಳೂ ಅವಳೇ. ಅವಳ ನಡವಳಿಕೆಯಲ್ಲಿ ಒಂದಿಷ್ಟು ಕೊಂಕಾದರೂ ಅವಳಿಗೆ ದೂಷಣೆ, ಅಪವಾದ ತಪ್ಪಿದ್ದಲ್ಲ. ಅವಿಭಕ್ತ ಕುಟುಂಬದ ಪದ್ಧತಿಯ ಸಂದರ್ಭದಲ್ಲಂತೂ, ಮಹಿಳೆಯ ಹೊಣೆಗಾರಿಕೆ ಪರಾಕಾಷ್ಠೆಗೆ ತಲುಪುತ್ತದೆ. ಎಲ್ಲರ ಯೋಗಕ್ಷೇಮದ ಹೊಣೆ ಅವಳ ಮೇಲೆಯೇ. ತವರಿನ ಕುಡಿಯಾಗಿ ಬೆಳೆದು ಹೆರವರ ಮನೆಯನ್ನು ಬೆಳಗಬೇಕಾದ ಅವಳು ಎರಡೂ ಮನೆಗಳಿಗೆ ಕೀರ್ತಿಯನ್ನು ತರಬೇಕೆಂಬ ಅಪೇಕ್ಷೆ ಸಮಾಜದ್ದು. ಇಂತಹ ಮಹಿಳೆಯರ ಆಸ್ತಿಯ ಹಕ್ಕಿನ, ಉತ್ತರಾಧಿಕಾರದ ಅಗತ್ಯವನ್ನು ಮನಗಾಣುವ ಧೈರ್ಯದ ಪರಂಪರೆಯನ್ನು ಸಮಾಜಕ್ಕೆ ಎತ್ತಿ ತೋರಿಸಿ, ಮಹಿಳೆಯರನ್ನು ಆಸ್ತಿಯ ಸಂಪತ್ತಿನ ಒಡೆತನಕ್ಕೆ ಯೋಗ್ಯರನ್ನಾಗಿ ಕಾಣುವ ನವಯುಗಕ್ಕೆ ವಿಜ್ಞಾನೇಶ್ವರನಂಥವರು ನಾಂದಿ ಹಾಡಿದರೆಂದರೆ ತಪ್ಪಾಗಲಾರದು.[೧೩೬]

ಮಗಳಿಗಿರುವ ಹಕ್ಕು :

ಮಿತಾಕ್ಷರದ ಪ್ರಕಾರ ತಂದೆಯ ಆಸ್ತಿಯ ಮೇಲಿನ ಮಗಳ ಹಕ್ಕು ಕೇವಲ ರಕ್ತ ಸಂಬಂಧದ ಆಧಾರದ ಮೇಲೆ ಪ್ರಾಪ್ತವಾಗುತ್ತದೆಯೇ ಹೊರತು ಬೇರೆ ಯಾವುದೇ ಧಾರ್ಮಿಕ ಅಥವಾ ಸಾಮಾಜಿಕ ಅರ್ಹತೆ ಅನರ್ಹತೆಗಳಿಂದಲ್ಲ.[೧೩೭]

ಉತ್ತರಾಧಿಕಾರ :

ಮಿತಾಕ್ಷರ ಮಲತಾಯಿಗೆ ಉತ್ತರಾಧಿಕಾರದ ಹಕ್ಕನ್ನು ಕೊಟ್ಟಿಲ್ಲವಾದರೂ ಜೀವನಾಂಶಕ್ಕೆ ಅವರಿಗೆ ಅಧಿಕಾರ ನೀಡಿದೆ. ಮೃತನ ಸ್ವತ್ತಿನ ಉತ್ತಾಧಿಕಾರದಲ್ಲಿ ಅಣ್ಣತಮ್ಮಂದಿರು ಮತ್ತು ಅವರ ಗಂಡುಮಕ್ಕಳಿಗಿಂತಲೂ ತಂದೆ-ತಾಯಿಗೆ ಮೊದಲ ಪ್ರಾಶಸ್ತ್ಯವೆಂದು ಮಿತ್ಾಕರ ಪ್ರತಿಪಾದಿಸುತ್ತದೆ. ಮತ್ತು ಓರ್ವ ಮಹಿಳೆ ತನ್ನ ಗಂಡ ಬದುಕಿದ್ದಾಗ ತೊಡುತ್ತದ್ದ ಎಲ್ಲ ಒಡವೆ ಆಭರಣಗಳು ಗಂಡನ ಮರಣದ ನಂತರ ಅವಳದೇ ಸ್ವತ್ತಾಗುತ್ತದೆ. ಅವುಗಳ ಮೇಲೆ ಗಂಡನ ಉತ್ತರಾಧಿಕಾರಿಗಳ ಯಾವ ಹಕ್ಕೂ ಇರುವುದಿಲ್ಲ.

ಒಬ್ಬ ವ್ಯಕ್ತಿಯ ಕಾನೂನಬದ್ಧ ವಾರಸುದಾರರು ಅಂದರೆ ಹೆಂಡತಿ, ಮಕ್ಕಳು ಇಲ್ಲದೆ ಅಕಾಲಿಕವಾಗಿ ತೀರಿಕೊಂಡರೆ ಅವನ ಆಸ್ತಿಯೆಲ್ಲವೂ ಅವನ ತಾಯಿ-ತಂದೆಗಳಿಗೆ ಹೋಗುತ್ತದೆ.[೧೩೮]

ಸ್ತ್ರೀಧನ:

ಸ್ತ್ರೀಧನದ ಕುರಿತಾಗಿ ವಿಜ್ಞಾನೇಶ್ವರ ಅತ್ಯಂತ ಉದಾರ ನಿಲುವನ್ನು ತಳೆದಿದ್ದಾನೆ. ಮಿತಾಕ್ಷರದ ಪ್ರಕಾರ ಶುಲ್ಕ ಮತ್ತು ಇತರ ಸ್ತ್ರೀಧನಗಳ ಉತ್ತರಾಧಿಕಾರದ ಕ್ರಮವು ಬೇರೆ ಬೇರೆಯಾಗಿದೆ. ಶುಲ್ಕವು ಮೊದಲು ಎಲ್ಲ ಔರಸ ಅಣ್ಣ-ತಮ್ಮಂದಿರಿಗೆ ಆಮೇಲೆ ತಾಯಿಗೆ ಹೋಗಬೇಕು. ಮತ್ತು ಸ್ತ್ರೀಧನವು ಯಾರ್‍ಯಾರಿಗೆ ಹೋಗಬೇಕೆಂಬುದನ್ನು ವಿಜ್ಞಾನೇಶ್ವರ ಸ್ಪಷ್ಟಪಡಿಸಿದ್ದು, ಅದು ಕ್ರಮಬದ್ಧ ರೀತಿಯಲ್ಲಿ ಹೀಗಿದೆ -

೧. ಅವಿವಾಹಿತ ಹೆಣ್ಣುಮಕ್ಕಳು

೨. ಬಡವರಾದ ವಿವಾಹಿತ ಹೆಣ್ಣುಮಕ್ಕಳು

೩. ಸುಸ್ಥಿತಿಯಲ್ಲಿರುವ ಹೆಣ್ಣುಮಕ್ಕಳು

೪. ಮಗಳ ಹೆಣ್ಣುಮಕ್ಕಳು

೫. ಮಗಳ ಗಂಡುಮಕ್ಕಳು

೬. ಗಂಡುಮಕ್ಕಳು

೭. ಗಂಡುಮಕ್ಕಳ ಗಂಡುಮಕ್ಕಳು

೮. ಗಂಡ

೯. ಸಾಮಿಪ್ಯದ ಆಧಾರದ ಮೇಲೆ ಗಂಡನ ಸಪಿಂಡರು

ಗಂಡನ ಸಪಿಂಡರು ದೊರೆಯದೇ ಇದ್ದಾಗ, ತಾಯಿಗೆ ಆಮೇಲೆ ತಂದೆಗೆ, ಆಮೇಲೆ ತಂದೆಯ ಸಪಿಂಡರಿಗೆ. ಇದು ಕ್ರಮ ಇವರಾರೂ ಇಲ್ಲದಾದಾಗ, ಅದು ರಾಜ್ಯಕ್ಕೆ ಸೇರಬೇಕು.[೧೩೯]

ಮಿತಾಕ್ಷರದ ಜನಪರ ಕಾಳಜಿಗಳು :

ಆಹಾರವಸ್ತುಗಳ ಕಲಬೆರಕೆ ಹಾವಳಿ ನಿಯಂತ್ರಣಕ್ಕೆ ಮಿತಾಕ್ಷರದಲ್ಲಿ ಸ್ಪಷ್ಟವಾದ ಕ್ರಮಸೂಚಿಸಲಾಗಿದೆ. ಔಷಧಿ, ತೈಲ, ಉಪ್ಪು, ಸಕ್ಕರೆ, ದವಸ, ಧಾನ್ಯ ಮತ್ತಿತರ ವಸ್ತುಗಳನ್ನು ಕೀಳು ದರ್ಜೆಯ ವಸ್ತುಗಳಿಂದ ಬೆರಕೆ ಮಾಡಿ ಮಾರಾಟ ಮಾಡುವವರನ್ನು ಸೂಕ್ತ ದಂಡದಿಂದ ಶಿಕ್ಷಿಸಲಾಗುತ್ತಿತ್ತು. ಮತ್ತು ವಸ್ತುಗಳನ್ನು ಅಸಲಿ ವಸ್ತುಗಳಂತೆ ಅಂದಗೊಳಿಸಿ ಮಾರಾಟಮಾಡಿ ಗ್ರಾಹಕರನ್ನು ಮೋಸಗೊಳಿಸುವ ವರ್ತಕರಿಗೆ ನೈಜ ವಸ್ತುವಿನ ೮ಪಟ್ಟು ದಂಡವನ್ನು ವ್ಯಾಪಾರಿ ತೆರಬೇಕಾಗುತ್ತಿತ್ತು. ಅಲ್ಲದೇ ವ್ಯಾಪಾರಸ್ಥರು ಸರಕಾರ ನಿಗದಿಗೊಳಿಸಿದ ಬೆಲೆಗಷ್ಟೇ ಸರಕುಗಳನ್ನು

ಮಾರಾಟಮಾಡತಕ್ಕದ್ದು. ತಮ್ಮ ಮನಸ್ಸಿಗೆ ಬಂದ ಬೆಲೆಯಲ್ಲಿ ಅಲ್ಲ. ವ್ಯಾಪಾರದಿಂದಾಗುವ ಲಾಭದ ಪ್ರಮಾಣವು ಸರಕಾರದ ಬೆಲೆಯ ನೀತಿಗೆ ಅನುಗುಣವಾಗಿಯೇ ಇರಬೇಕು.

ನೌಕರರ ಪರವಾದ ಅಥವಾ ಅವರಿಗೆ ಸಹಾನುಭೂತಿ ತೋರುವ ಉದಾರವಾದ ನಿಲುವು ಧರ್ಮಶಾಸ್ತ್ರಗಳಲ್ಲಿ ದಟ್ಟವಾಗಿಲ್ಲದಿದ್ದರೂ ವಿಜ್ಞಾನೇಶ್ವರ ಅತ್ಯಂತ ಜಾಣ್ಮೆಯಿಂದ ಮತ್ತು ತನ್ನಲ್ಲಿರುವ ಅಂತರ್ಗತವಾದ ದುಡಿಯುವ ವರ್ಗದ ಪರವಾದ ಕಾಳಜಿಯಿಂದಾಗಿ ಧರ್ಮಶಾಸ್ತ್ರಗಳ ಬಿಗಿಯಾದ ನಿಲುವುಗಳನ್ನು ಉದಾರವಾಗಿ ವಿವರಿಸುವ, ವಿಶ್ಲೇಷಿಸುವ ಮತ್ತು ಅವುಗಳನ್ನು ಮಾನವೀಯಗೊಳಿಸುವ ಎದೆಗಾರಿಕೆಯನ್ನು ಪ್ರದರ್ಶಿಸಿದ್ದಾನೆ. ಇದರಿಂದಾಗಿ ಮಿತಾಕ್ಷರದಲ್ಲಿ ಶ್ರಮಿಕ ವರ್ಗದ ಕಲ್ಯಾಣ ಯಥಾರ್ಥವಾಗಿ ಬಿಂಬಿತವಾಗಿದೆ. ಮತ್ತು ಕಾರ್ಮಿಕನು ಮಾಡಿದ ಕೆಲಸಕ್ಕೆ ಅನುಗುಣವಾಗಿ ವೇತನ ಪಾವತಿಸಬೇಕೆಂಬುದು ವಿಜ್ಞಾನೇಶ್ವರನ ನಿಲುವು. ಅಲ್ಲದೇ ಮನುಷ್ಯ ಗಿಡಮರಗಳ ಜೊತೆಗೆ ಪ್ರಾಣಿಗಳ ಮೇಲೆ ನಡೆಸಿದ ಹಿಂಸೆಗಳ ಬಗೆಗೆ ಕೂಡ ದಂಡ ನಿಯಮವಿದ್ದುದು ಮಿತಾಕ್ಷರದಲ್ಲಿ ಉಲ್ಲೇಖಿತವಾಗಿದೆ. ಮೂಕ ಪ್ರಾಣಿಗಳ ಮೇಲೆ ಮಾಡಲಾದ ಹಲ್ಲೆ, ಆಕ್ರಮಣ, ಹಿಂಸೆಗಳನ್ನು ಕೂಡ ದಂಡನಾರ್ಹ ಅಪರಾಧಗಳೆಂದೇ ಸಾರಲಾಗಿದೆ.[೧೪೦]

ನ್ಯಾಯಾಧೀಶರ ಅರ್ಹತೆ:

ನ್ಯಾಯಾಧೀಶರಾಗಿರುವವರು ಕೇವಲ ಧರ್ಮಶಾಸ್ತ್ರ ಪಂಡಿತರು, ಅಪಾರಜ್ಞಾನವುಳ್ಳವರು, ಸಾಮಾಜಿಕ ವ್ಯವಸ್ಥೆಯ ಅರಿವು ಇರುವವರಾಗಿದ್ದರಷ್ಟೇ ಸಾಲದು ಅವರು ಸದ್ಗುಣ ಸಂಪನ್ನರಾಗಿರಬೇಕೆಂದು ತಿಳಿಸುತ್ತದೆ.[೧೪೧]

ಹೀಗೆ ಮಿತಾಕ್ಷರವು ದಾರ್ಶನಿಕವೂ, ದೂರದೃಷ್ಟಿಯುಳ್ಳದ್ದೂ ಆಗಿದ್ದು, ಇಂತಹ ಸಾರ್ವಕಾಲಿಕ ಶ್ರೇಷ್ಠವಾದ, ಮನುಕುಲಕ್ಕೆ ಪ್ರಯೋಜನಕಾರಿಯಾದ ಇನ್ನೊಂದು ಕೃತಿ ಕಾಣಸಿಗುವುದು ತೀರಾ ದುರ್ಲಭ ಅಲ್ಲದೆ ಒಂದು ಸಮಗ್ರ ಹಾಗೂ ಸುವ್ಯವಸ್ಥಿತ ನ್ಯಾಯ ಪದ್ಧತಿಗೆ ಏನೆಲ್ಲ ಅವಶ್ಯಕವೋ ಅವೆಲ್ಲವೂ ಮಿತಾಕ್ಷರದಲ್ಲಿದೆ.

ಸೋಮೇಶ್ವರ ವಿರಚಿತ ಮಾನಸೋಲ್ಲಾಸ:

ಕರ್ನಾಟಕ ಇತಿಹಾಸದುದ್ದಕ್ಕೂ ಅನೇಕ ಅರಸರುಗಳು ಸಾಹಿತ್ಯಸೃಷ್ಟಿಗೆ ಆಶ್ರಯ ನೀಡಿದುದಲ್ಲದೇ ಸಾಹಿತ್ಯವನ್ನು ಸೃಷ್ಟಿಸುತ್ತಾ ಬಂದಿದ್ದಾರೆ.[೧೪೨] ಅಂಥಹ ದೊರೆಗಳಲ್ಲಿ ಮೂರನೆಯ ಸೋಮೇಶ್ವರನೂ ಒಬ್ಬನು. ಮೂರನೆಯ ಸೋಮೇಶ್ವರನು ತಂದೆಯ ೬೦ ವರ್ಷಗಳಷ್ಟು ಸುದೀರ್ಘ ಆಳ್ವಿಕೆಯ ಕಾರಣದಿಂದ ತನ್ನ ಬಿಡುವಿನ ವೇಳೆಯನ್ನು ಸಾಹಿತ್ಯ, ಶಾಸ್ತ್ರ ವ್ಯಾಸಾಂಗದಲ್ಲಿ, ವಿದ್ಯಾ ವಿನೋದದಲ್ಲಿ ಕಳೆದನೆಂದು ತೋರುತ್ತದೆ. ಇದರ ಫಲವಾಗಿ ಮಾನಸೋಲ್ಲಾಸ ನಾಮಪ್ರಸಿದ್ಧಿಯ ಅಭಿಲಾಷಿತಾರ್ಥ ಚಿಂತಾಮಣಿ ರಚಿತವಾಯಿತು. ಸೋಮೇಶ್ವರನು ತಾನು ಅದರ

ಕರ್ತೃವೆಂದು ಪ್ರಸ್ತುತ ಕೃತಿಯ ಮಧ್ಯೆ ಮಧ್ಯೆ ಹೇಳಿಕೊಂಡಿರುವನಲ್ಲದೇ ಐದು ವಿಂಶತಿಗಳ ಅಂತ್ಯದ ಪ್ರಶಸ್ತಿಯಲ್ಲಿ ನೇರವಾಗಿ ತನ್ನ ಹೆಸರನ್ನು ಹೇಳಿಕೊಂಡಿದುದರ ಕನ್ನಡ ಪಾಠ ಈ ರೀತಿಯಾಗಿದೆ.

೧. *ಶ್ರೀಮದ್ಭೂಲೋಕಮಲ್ಲ ಶ್ರೀಸೋಮೇಶ್ವರದೇವ ವಿರಚಿತ ಅಭಿಲಷಿತಾರ್ಥ ಚಿಂತಾಮಣಿಯೆನಿಸಿದ ಮಾನಸೋಲ್ಲಾಸದಲ್ಲಿ . . . .*

೨. *. . . . . ಶ್ರೀಮದ್ಭೂಲೋಕಮಲ್ಲ ಶ್ರೀಸೋಮೇಶ್ವರದೇವ ವಿರಚಿತ ಮಾನಸೋಲ್ಲಾಸವೆನಿಸಿದ ಅಭಿಲಷಿತಾರ್ಥ ಚಿಂತಾಮಣಿಯಲ್ಲಿ . . . .*

೩. *. . . . ಶ್ರೀಮದ್ಭೂಲೋಕಮಲ್ಲ ಶ್ರೀ ಸೋಮೇಶ್ವರ ವಿರಚಿತ ಮಾನಸೋಲ್ಲಾಸದ ರಾಜ್ಯೋಪಭೋಗ ಕಥನದಲ್ಲಿ*

೪. *. . . . . ಶ್ರೀಮದ್ಭೂಲೋಕಮಲ್ಲ ಶ್ರೀಸೋಮೇಶ್ವರದೇವ ವಿರಚಿತ ಅಭಿಲಷಿತಾರ್ಥ ಚಿಂತಾಮಣಿ ಎಂಬ ಮಾನಸೋಲ್ಲಾಸದಲ್ಲಿ . . . .*

೫. *. . . . . ಶ್ರೀಮದ್ಭೂಲೋಕಮಲ್ಲ ಶ್ರೀಸೋಮೇಶ್ವರ ವಿರಚಿತ ಅಭಿಲಷಿತಾರ್ಥ ಚಿಂತಾಮಣಿಯೆನಿಸಿದ ರಾಜ ಮಾನಸೋಲ್ಲಾಸದಲ್ಲಿ*[೧೪೩]

ಹೀಗೆ ಕೃತಿಯ ಕರ್ತೃ ಇಲ್ಲಿ ತನ್ನ ಹೆಸರನ್ನು ಸೋಮೇಶ್ವರದೇವನೆಂದೂ, ಕೆಲವೊಮ್ಮೆ ಸೋಮೇಶ್ವರನೆಂದೂ, ಉಳಿದೆಡೆಗಳಲ್ಲಿ ಸೋಮೇಶ್ವರ ಕ್ಷಿತಿಪ, ಸೋಮ ಭೂಪಾಲಕನೆಂದೂ ಹೇಳಿಕೊಂಡಿದ್ದಾನೆ. ಮತ್ತು ''ಶ್ರೀಮಹಾರಾಜಾಧಿರಾಜ ಸತ್ಯಾಶ್ರಯ ಕುಲತಿಲಕ ಚಾಲುಕ್ಯಾಭರಣ ಶ್ರೀಮದ್ಭೂಲೋಕಮಲ್ಲ'' ಎಂಬ ವಿಶೇಷಣವನ್ನು ಐದು ವಿಷಂತಿಗಳ ಅಂತ್ಯ ಪ್ರಶಸ್ತಿಯಲ್ಲಿ ಹೇಳಿಕೊಂಡಿದ್ದಾನೆ.

ಹೀಗೆ ಮಾನಸೋಲ್ಲಾಸದ ಕರ್ತೃ ಸೋಮೇಶ್ವರನಾಗಿದ್ದರೂ ಇಷ್ಟು ವೈವಿಧ್ಯಪೂರ್ಣ ವಿಷಯಗಳನ್ನು ಸಂಗ್ರಹಿಸಿ ಇಷ್ಟು ವ್ಯಾಪಕ ಕೃತಿಯನ್ನು ಒಬ್ಬನೇ ಬರೆದನೇ? ಅದರಲ್ಲಿಯೂ ತನ್ನ ಬಿಡುವಿಲ್ಲದ ಕಾರ್ಯಕಲಾಪಗಳಲ್ಲಿ ತೊಡಗಿಕೊಂಡ ಚಕ್ರವರ್ತಿ ಬರೆದನೇ? ಎಂಬ ಸಂದೇಹವನ್ನು ಕೆಲವರು ಎತ್ತಿದ್ದಾರೆ. ನೂರೆಂಟು ವಿಷಯಗಳ ಎಂಟು ಸಾವಿರ ಶ್ಲೋಕಗಳ ಮಾನಸೋಲ್ಲಾಸವನ್ನು ಒಬ್ಬನೇ ರಚಿಸುವುದು, ಅದೂ ರಾಜನಂಥಹ ಬಹುದೊಡ್ಡ ಜವಾಬ್ದಾರಿಗಳ ವ್ಯಕ್ತಿ ರಚಿಸುವುದು ಸಹಜವಾಗಿಯೇ ಸಂದೇಹ ಹುಟ್ಟಿಸುತ್ತದೆ. ಹೀಗಾಗಿ ಬಹುಶಃ ಈ ರಾಜನೂ ಸೇರಿದಂತೆ, ಆಸ್ಥಾನದ ಅನೇಕ ವಿದ್ವಾಂಸರು ಕೈಗೂಡಿಸಿ, ದುಡಿದುದರ ಫಲವಾಗಿ ಈ ಕೃತಿಯ ಸೃಷ್ಟಿಯಾಗಿರಬಹುದು.[೧೪೪]

ಕಾಲ :

ಮಾನಸೋಲ್ಲಾಸದ ದ್ವಿತೀಯ ವಿಂಶತಿಯ ಅಮಾತ್ಯಾಧ್ಯಾಯದ ಪಂಚಾಂಗ ನಿರ್ಣಯ ವಿಭಾಗದಲ್ಲಿ ಇದರ ರಚನೆಯ ಕಾಲದ ಸೂಚನೆ ಕಂಡುಬರುತ್ತದೆ. ಇಲ್ಲಿ ಗತಶಕ ವರ್ಷವನ್ನು ಕಂಡುಹಿಡಿಯುವ ರೀತಿಗೆ, ಈ ಗ್ರಂಥ

ನಿರ್ಮಾಣದ ಕಾಲವನ್ನು ಉದಾಹರಣೆಯಾಗಿ ಬಳಸಿಕೊಂಡಿದ್ದಾನೆ (೨-೨-೬೧ ರಿಂದ ೬೪) ಇದರ ಪ್ರಕಾರ ಶಾಲಿವಾಹನ ಶಕೆ ೧೦೫೧ ಸೌಮ್ಯ ಸಂವತ್ಸರ, ಚೈತ್ರಮಾಸ, ಶುಕ್ಲಪಕ್ಷ ಪ್ರತಿಪದೆಯ ಶುಕ್ರವಾರ ಈ ಕೃತಿಯ ರಚನೆ ಆರಂಭವಾಯಿತು. ಅಥವಾ ಈ ಶ್ಲೋಕ ಬರೆಯುವ ದಿನವಾಗಿದ್ದಿತೆಂದು ಹೇಳಬಹುದು. ಇದಕ್ಕೆ ಸಮಾನವಾದುದು ಕ್ರಿ.ಶ.೧೧೨೯ ಇದು ಈತ ಪಟ್ಟಕ್ಕೆ ಬಂದ ಎರಡನೆಯ ವರ್ಷವಾಗಿದೆ.[೧೪೫]

ವಿಷಯ ವಿನ್ಯಾಸ:

ಮಾನಸೋಲ್ಲಾಸ ಐದು ವಿಂಶತಿಯಾಗಿ ವಿಭಾಗಿಸಲ್ಪಟ್ಟಿದೆ. ಪ್ರತಿಯೊಂದು ವಿಂಶತಿಯಲ್ಲಿ ೨೦ ಅಧ್ಯಾಯಗಳಿವೆ. ಹೀಗೆ ಇದು ೫ ವಿಂಶತಿ ೧೦೦ ಅಧ್ಯಾಯಗಳಲ್ಲಿ ವಿನ್ಯಾಸಗೊಂಡಿದೆ. ಒಂದೊಂದು ಅಧ್ಯಾಯದಲ್ಲಿ ಬಹಳಷ್ಟು ಒಳ ವಿಭಾಗಗಳನ್ನು ಮಾಡಿಕೊಳ್ಳಲಾಗಿದೆ. ಉದಾ: ದ್ವಿತೀಯ ವಿಂಶತಿಯ ಅಮಾತ್ಯಾಧ್ಯಾಯದಲ್ಲಿ ಮಂತ್ರಿ ಲಕ್ಷಣ, ಪುರೋಹಿತ ಲಕ್ಷಣ, ಪಂಚಾಂಗ ನಿರ್ಣಯ, ಜ್ಯೋತಿರ್ವಿದ್ ಗಣಕ ಲಕ್ಷಣ, ಧರ್ಮಾಧಿಕಾರಿ ಲಕ್ಷಣ, ಕೋಶಾಧ್ಯಕ್ಷ, ಗಣಕ ಲಕ್ಷಣ, ಪ್ರತಿಹಾರ ಲಕ್ಷಣ, ಸಂಧಿವಿಗ್ರಹಿಕ ಲಕ್ಷಣ, ಲೇಖಕ ಲಕ್ಷಣ, ಸಾರಥಿ ಲಕ್ಷಣ, ಸೂದ ಲಕ್ಷಣ, ಅಂತಃಪುರ ರಕ್ಷಕರ ಮತ್ತು ಕುಮಾರ ಪರಿಪಾಲಕರ ಲಕ್ಷಣ ಈ ವಿವರಗಳಿವೆ.[೧೪೬]

ಎಲ್ಲಾ ಅಧ್ಯಾಯ ಸೇರಿ ಒಟ್ಟು ಸುಮಾರು ೮೦೦೦ ಶ್ಲೋಕಗಳು ಈ ಕೃತಿಯಲ್ಲಿವೆ. ಪ್ರಥಮ ವಿಂಶತಿಯಲ್ಲಿ ೩೦೮ ಶ್ಲೋಕ, ದ್ವಿತೀಯ ವಿಂಶತಿಯಲ್ಲಿ ೧೩೦೦ ಶ್ಲೋಕ, ತೃತೀಯ ವಿಂಶತಿಯಲ್ಲಿ ೧೮೨೦, ಚತುರ್ಥ ವಿಂಶತಿಯಲ್ಲಿ ೧೬೨೫+೧೪೯೪=೩೨೧೯ ಶ್ಲೋಕ, ಪಂಚಮ ವಿಂಶತಿಯಲ್ಲಿ ೧೩೬೫ ಶ್ಲೋಕಗಳಿರುವುದನ್ನು ನೋಡಿದರೆ ಪ್ರತಿಯೊಂದು ವಿಂಶತಿಯಲ್ಲಿ ಶ್ಲೋಕಸಂಖ್ಯಾ ಪ್ರಮಾಣದ ವ್ಯತ್ಯಾಸ ಅಧಿಕವಾಯಿತೆನಿಸುತ್ತದೆ. ಈ ಆರೋಪ ಪ್ರತಿಯೊಂದು ವಿಂಶತಿಯಲ್ಲಿಯ ಅಧ್ಯಾಯಗಳಲ್ಲಿರುವ ಶ್ಲೋಕಸಂಖ್ಯಾ ಪ್ರಮಾಣಕ್ಕೂ ಅನ್ವಯಿಸುತ್ತದೆ. ಒಂದು ಅಧ್ಯಾಯದಲ್ಲಿ ಅತಿ ಕಡಿಮೆ ಎಂದರೆ ೧ ಶ್ಲೋಕ (೧-ಕ್ರೋಧ ವರ್ಜನಾಧ್ಯಾಯ) ಅತಿ ಹೆಚ್ಚೆಂದರೆ ೯೨೬ ಶ್ಲೋಕ (೩-ಗೃಹೋಪಭೋಗ)ಗಳಿರುವುದನ್ನು ಗಮನಿಸಬಹುದು. ಈ ಅಂತರ ಕಡಿಮೆಯಾಗುವಂತೆ ನೋಡಿಕೊಂಡಿದ್ದರೆ ಈ ಕೃತಿಯ ಅವಯವಗಳಿಗೆ ಒಂದಿಷ್ಟು ಸುಸಂಬದ್ಧತೆ ಪ್ರಾಪ್ತವಾಗುತ್ತಿತ್ತು. ಇದಲ್ಲದೆ ಕೆಲವೊಮ್ಮೆ ಒಂದೇ ವಿಷಯ ಒಂದಕ್ಕಿಂತ ಹೆಚ್ಚು ಕಡೆಗೆ ಹಂಚಿಹೋಗಿದೆ. ಉದಾ: ಜೋತಿಷ್ಯ, ಔಷಧ ಇತ್ಯಾದಿ. ಕೆಲವಡೆ ವಿಷಯ ನಿರೂಪಣೆಯಲ್ಲಿ ಕ್ರಮಬದ್ಧತೆ ತಪ್ಪಿ ಹೋಗಿರುವುದರಿಂದ ಅಭ್ಯಾಸಿಗ ಆಗಾಗ ದಿಕ್ಕು ತಪ್ಪಿಸಿಕೊಂಡ ಅನುಭವವಾಗುತ್ತದೆ. ಇಂಥ ಕೊರತೆಗಳೇನಿದ್ದರೂ ಮಾನಸೋಲ್ಲಾಸ ಒಂದು ಬಹುಮುಖ ಕೃತಿಯಾಗಿ ಕಂಗೊಳಿಸುತ್ತದೆ.[೧೪೭]

ಪ್ರಥಮ ವಿಂಶತಿಯಲ್ಲಿ ೧. ಅಸತ್ಯ ವರ್ಜನಾಧ್ಯಾಯ ೨. ಪರದ್ರೋಹ ವರ್ಜನಾಧ್ಯಾಯ ೩. ಅಗಮ್ಯ ವರ್ಜನಾಧ್ಯಾಯ ೪. ಅಭಕ್ಷ್ಯ ವರ್ಜನಾಧ್ಯಾಯ ೫. ಅಸೂಯಾ ವರ್ಜನಾಧ್ಯಾಯ ೬. ಪತಿತಸಂಗ ವರ್ಜನಾಧ್ಯಾಯ

೭. ಕ್ರೋಧ ವರ್ಜನಾಧ್ಯಾಯ ೮. ಸ್ವಾತ್ಮಸ್ತುತಿ ವರ್ಜನಾಧ್ಯಾಯ ೯. ದಾನಾಧ್ಯಾಯ ೧೦. ಪ್ರಿಯ ವಚನಾಧ್ಯಾಯ ೧೧. ಇಷ್ಟಾಪೂರ್ತಾಧ್ಯಾಯ ೧೨. ಅಶೇಷ ದೇವತಾ ಭಕ್ತಾಧ್ಯಾಯ ೧೩. ಗೋವಿಪ್ರ ತರ್ಪಣಾಧ್ಯಾಯ ೧೪. ಪಿತೃ ತರ್ಪಣಾಧ್ಯಾಯ ೧೫. ಅತಿಥಿ ಪೂಜನಾಧ್ಯಾಯ ೧೬. ಗುರು ಶೂಶ್ರೂಷಣಾಧ್ಯಾಯ ೧೭. ತಪೋಧ್ಯಾಯ ೧೮. ತೀರ್ಥಸ್ನಾನಾಧ್ಯಾಯ ೧೯. ವೈದ್ಯಾದ್ಯಾಯ ೨೦. ಶರಣಾಗತ ರಕ್ಷಣಾಧ್ಯಾಯ ಎಂಬ ೨೦ ಅಧ್ಯಾಯಗಳಿವೆ.[೧೪೮]

ತೀರ್ಥಸ್ನಾನಾಧ್ಯಾಯದಲ್ಲಿ[೧೪೯] ಗಂಗೆ, ನರ್ಮದೆ ಮೊದಲಾದ ಭಾರತದ ಪ್ರಸಿದ್ಧ ನದಿಗಳನ್ನು ಹೇಳುತ್ತ, ಕರ್ನಾಟಕದ ಮಂಜರಾ, ಭೀಮಾ, ಕೃಷ್ಣಾ, ಮಲಪ್ರಭಾ ನದಿಗಳನ್ನು ಸೂಚಿಸಲಾಗಿದೆ. ಯೋಗಿನೀ ಪೀಠಗಳಲ್ಲಿ ಮೊದಲನೆಯದು ಜಲಾಂದರ, ಎರಡನೆಯದು ಕಾಮರೂಪಕ, ಮೂರನೆಯದು ಉಡ್ಡಿಯಾಣ, ನಾಲ್ಕನೆಯದು ಉಜ್ಜಯನಿ ಎಂದು ಹೇಳುತ್ತ ಕೊಲ್ಲಾಪುರವು ಅವರ ಮುಖ್ಯ ಕ್ಷೇತ್ರವೆಂದು ಸೂಚಿಸಿ ಕರಹಾಟ, ವಿರಾಟಪುರ, ಪೂರ್ಣಗಿರಿ, ಶ್ರೀಗಿರಿ, ಮುಕೋಟಕ, ಶಂಭುಶಿಖರ, ವಿಂಧ್ಯಾ, ಚಿತ್ರಕೂಟ, ಏಕಾಮ್ರಕ, ಮಹಾಚೀನ, ಪ್ರಯಾಗ, ಮಲಯ, ಕೋಲಾರಪುರ ಮೊದಲಾದ ಯೋಗಿನೀ ಕ್ಷೇತ್ರಗಳನ್ನು ಹೆಸರಿಸುತ್ತಿರುವುದು ಆ ಕಾಲದ ಪ್ರಸಿದ್ಧ ಕ್ಷೇತ್ರಗಳ ವಿವರಣೆಯೇ ಆಗಿದೆ.

ಪರದ್ರೋಹ ವರ್ಜನಾಧ್ಯಾಯದಲ್ಲಿ[೧೫೦] ಪರರನ್ನು ಪೀಡಿಸುವುದು, ಛೇಡಿಸುವುದು, ಹೊಡೆಯುವುದು ಹಾಗೂ ಅವರ ದುಡ್ಡನ್ನು ಸೆಳೆಯುವುದು, ಚಾಡಿ ಹೇಳುವುದು, ಪರರ ಬಗ್ಗೆ ಸುದ್ದಿ ಹಬ್ಬಿಸುವುದು, ಬಯ್ಯುವುದು, ಬೆದರಿಸುವುದು, ಅನ್ಯರ ಮನೆ-ಹೊಲ-ಸಂಪತ್ತುಗಳನ್ನು, ವಸ್ತ-ಧಾನ್ಯ-ಧನಾದಿಗಳನ್ನು ಅಪಹರಿಸುವ ಮೂಢಕಾರ್ಯಕ್ಕೆ ಪರದ್ರೋಹವೆನ್ನುತ್ತಾರೆ. ಆದ್ದರಿಂದ ಪರದ್ರೋಹವು ಅತ್ಯಂತ ಅಸಹನೀಯವಾಗಿರುತ್ತದೆ. ಇದು ಘೋರವಾದ ನರಕಕ್ಕೆ ಕಾರಣವಾಗುವುದರಿಂದ ಪರದ್ರೋಹವನ್ನು ಮಾಡಬಾರದು ಎಂದು ಹೇಳಿದೆ.

ಕ್ರೋಧವರ್ಜನಾಧ್ಯಾಯವು[೧೫೧] ಕ್ರೋಧವು ಬುದ್ಧಿಯನ್ನು, ಕುಲಗೌರವವನ್ನು, ಧನವನ್ನು ನಾಶಮಾಡುತ್ತದೆ. ಕೋಪದಿಂದ ಧರ್ಮನಾಶವುಂಟಾಗುತ್ತದೆ. ಆದ್ದರಿಂದ ಕೋಪವನ್ನು ತ್ಯಾಗಮಾಡಬೇಕೆಂದು ತಿಳಿಸುತ್ತದೆ.

ವೈದ್ಯಾಧ್ಯಾಯದಲ್ಲಿ[೧೫೨] ಜ್ವರ, ರಕ್ತಪಿತ್ತ, ಕಾಸ, ಶ್ವಾಸ, ರಾಜಯಕ್ಷ್ಮ, ಛರ್ದಿ, ಮದಾತ್ಯಯ, ಅರ್ಶಸ್, ಅತಿಸಾರ, ಗ್ರಹಣೀ, ಮೂತ್ರಕೃಚ್ಛ್ರ, ಪ್ರಮೇಹ, ವಿದ್ರಧಿ, ಗುಲ್ಮರೋಗ, ಉದರರೋಗ, ಪಾಂಡುರೋಗ, ಶೋಫ, ವಿಸರ್ಪ, ಕೃಷ್ಣರೋಗ, ಶ್ವಿತ್ರ, ವಾತರೋಗ ಅಥವಾ ಬೇರೆ ಯಾವ ರೋಗಗಳು ಉಂಟಾದಾಗಲೂ ವೈದ್ಯಶಾಸ್ತ್ರಕ್ಕೆ ಅನುಸಾರವಾಗಿ ಯೋಗ್ಯವಾದ ಚಿಕಿತ್ಸೆಯನ್ನು ಮಾಡಿಸಬೇಕು. ಮತ್ತು ಬೇರೆ ಬೇರೆ ರೋಗಗಳಲ್ಲಿ ಯಾವ ದೋಷವು ಅಧಿಕವಾಗಿದೆಯೋ ಅಯಾ ದೋಷಕ್ಕೆ ತಕ್ಕಂತೆ ಚಿಕಿತ್ಸೆಯನ್ನು ಮಾಡಿಸಬೇಕು ಎಂದಿದೆಯಲ್ಲದೆ. ತುರುಚನಗಿಡ, ಸೊಗದೇಬೇರು, ಮರದರಿಶಿನ, ಮೆಣಸು, ಶುಂಟಿ, ಎಲಚಿಗಿಡ, ಸೈಂಧವಲವಣ, ಆಲದಮೊಗ್ಗು, ಮುಂತಾದ ಔಷಧಿಗಳ ಔಷಧಿ ನಿಘಂಟಿನ ಬಗ್ಗೆಯೂ ತಿಳಿಸುತ್ತದೆಯಲ್ಲದೆ ರೋಗಿಗಳಿಗೆ ಆಹಾರ, ಪಾನೀಯ, ಆಸನ ಮತ್ತು

ಹಾಸಿಗೆ ಇವುಗಳನ್ನು ಒದಗಿಸಿ ಅವರನ್ನು ಚೆನ್ನಾಗಿ ನೋಡಿಕೊಳ್ಳಬೇಕು ಶಸ್ತ್ರಕರ್ಮದಲ್ಲಿ ಮತ್ತು ವೈದ್ಯಶಾಸ್ತ್ರಗಳಲ್ಲಿ ಪಂಡಿತರಾದ ಹಾಗೂ ಪ್ರಯೋಗಗಳಲ್ಲಿ ನಿಪುಣರಾದ, ಊಹಾಪೋಹಗಳಲ್ಲಿ ಒಳ್ಳೆಯ ವಿವೇಕವನ್ನು ಹೊಂದಿರುವ ಅಮೃತಹಸ್ತರಾಗಿರುವ, ಪ್ರಿಯವಾಗಿ ಮಾತನಾಡುವ ವೈದ್ಯರನ್ನು ನೇಮಿಸಬೇಕು. ಅವರಿಗೆ ವಿಚಿತ್ರವಾದ ಬಗೆಬಗೆಯ ಔಷಧಿಗಳನ್ನು ಒದಗಿಸಬೇಕು. ನಿರಾಲಸಿಗಳಾದ, ಧರ್ಮಜ್ಞರಾದ ಪರಿಚಾರಕರನ್ನು ಒದಗಿಸಬೇಕು ಎಂದು ಹೇಳಿದೆ.

ರಾಜ್ಯಸ್ಥಿರತೆಯ ಕಾರಣಗಳನ್ನೊಳಗೊಂಡ ಮತ್ತು ಸಂಪ್ರಾಪ್ತವಾದ ರಾಜ್ಯವನ್ನು ಸ್ಥಿರಗೊಳಿಸುವ ಕಾರಣಗಳನ್ನು ದ್ವಿತೀಯ ವಿಂಶತಿಯು ತಿಳಿಸುತ್ತದೆ. ಈ ವಿಂಶತಿಯಲ್ಲಿ ೧. ಸ್ವಾಮ್ಯಧ್ಯಾಯ ೨. ಅಮಾತ್ಯಾಧ್ಯಾಯ ೩. ರಾಷ್ಟ್ರಾಧ್ಯಾಯ ೪. ಕೋಶಾಧ್ಯಾಯ ೫. ದುರ್ಗಾಧ್ಯಾಯ ೬. ಬಲಾಧ್ಯಾಯ ೭. ಸುಹೃದಧ್ಯಾಯ ೮. ಪ್ರಭುಶಕ್ತ್ಯಧ್ಯಾಯ ೯. ಮಂತ್ರಶಕ್ತ್ಯಧ್ಯಾಯ ೧೦. ಉತ್ಸಾಹಶಕ್ತ್ಯಧ್ಯಾಯ ೧೧. ಸಂಧ್ಯಧ್ಯಾಯ ೧೨. ವಿಗ್ರಹಾಧ್ಯಾಯ ೧೩. ಯಾತ್ರಾಧ್ಯಾಯ ೧೪. ಆಸನಾಧ್ಯಾಯ ೧೫. ಆಶ್ರಯಾಧ್ಯಾಯ ೧೬. ದ್ವೈದೀಭಾವಾಧ್ಯಾಯ ೧೭. ಸಾಮಾಧ್ಯಾಯ ೧೮. ಭೇದಾಧ್ಯಾಯ ೧೯. ದಾನಾಧ್ಯಾಯ ೨೦. ದಂಡಾಧ್ಯಾಯ ಎಂಬ ೨೦ ಅಧ್ಯಾಯಗಳಿವೆ.[೧೫೩]

ಸ್ವಾಮ್ಯಧ್ಯಾಯದಲ್ಲಿ[೧೫೪] ರಾಜನಿಗೆ ಇರಬೇಕಾದ ಪ್ರಾಮಾಣಿಕತೆ, ತತ್ವದರ್ಶಿತ್ವ, ಉತ್ಸಾಹಶೀಲತೆ, ಮಂತ್ರಾಲೋಚನತ್ವ, ಮಂಗಳಕರ ಆಚಾರ-ವಿಚಾರಗಳು, ಮತ್ತು ಸತ್ಯ, ಶೌರ್ಯ, ಕ್ಷಮೆ, ದಾನ ಮತ್ತು ಗುಣಜ್ಞತೆಗಳನ್ನು ಹಾಗೂ ವೈಭವ, ಕೀರ್ತಿ, ಧರ್ಮ, ವಿಜಯ, ಸುಖ, ಯಶಸ್ಸು ಮುಂತಾದ ಗುಣಗಳನ್ನು ರಾಜನು ನಿರಂತರ ಹೊಂದಿರಬೇಕು ಎಂದು ತಿಳಿಸುತ್ತದೆಯಲ್ಲದೆ ರಾಜನಿಗಿರುವ ವ್ಯಾಧಿಗಳನ್ನು ಪರಿಹರಿಸುವ ರಸಾಯನದ ಕುರಿತಾಗಿಯೂ ಚರ್ಚಿಸಿದೆ.

ಅಮಾತ್ಯಾಧ್ಯಾಯದಲ್ಲಿ[೧೫೫] ಮಂತ್ರಿಲಕ್ಷಣ, ಪುರೋಹಿತಲಕ್ಷಣ, ಪಂಚಾಂಗ ನಿರ್ಣಯ, ಜ್ಯೋತಿರ್ವಿದ್ ಗಣಕಲಕ್ಷಣ, ಧರ್ಮಾಧಿಕಾರಿ ಲಕ್ಷಣ, ಕೋಶಾಧ್ಯಕ್ಷ ಗಣಕಲಕ್ಷಣ, ಪ್ರತಿಹಾರ ಲಕ್ಷಣ, ಸಂಧಿವಿಗ್ರಹಿಕ ಲಕ್ಷಣ, ಲೇಖಕ ಲಕ್ಷಣ, ಸೂದಲಕ್ಷಣ, ಅಂತಃಪುರ ಮತ್ತು ಕುಮಾರ ಪರಿಚಾರಕರ ಲಕ್ಷಣಗಳ ಬಗೆಗೆ ತಿಳಿಸುತ್ತದೆ.

ರಾಷ್ಟ್ರಾಧ್ಯಾಯದಲ್ಲಿ[೧೫೬] ರಾಷ್ಟ್ರಪಾಲಕನ ವಿವೇಕ, ಕರದಾತನ ವಿವೇಕ, ದೇಶರಕ್ಷಾ, ಜನರಕ್ಷಾ, ಗಜವನ ವಿಭಾಗ ಲಕ್ಷಣ, ಗಜಜಾತಿ ಬೇಧಲಕ್ಷಣ, ಗಜಶಿಕ್ಷಾ ನಿರೂಪಣ, ನಿಧಿ (ನಿರೂಪಣ)ಗಳ ಬಗೆಗೆ ವಿವರಿಸಲಾಗಿದೆ.

ಕೋಶಾಧ್ಯಾಯದಲ್ಲಿ[೧೫೭] ವಜ್ರದೋಷಗುಣ, ಮೌಕ್ತಿಕ ಪರೀಕ್ಷೆ, ತುಲಾಲಕ್ಷಣ, ಮೌಕ್ತಿಕ ತೋಲನ ಮೂಲ, ವಿನ್ಯಾಸ ತೋಲನ, ಪದ್ಮರಾಗ ಪರೀಕ್ಷೆ, ಇಂದ್ರನೀಲ ಪರೀಕ್ಷೆ, ಮರಕತ ಪರೀಕ್ಷೆ, ಸ್ಪಟಿಕ ಪರೀಕ್ಷೆ, ಪುಷ್ಪರಾಗ ಪರೀಕ್ಷೆ, ವೈಡೂರ್ಯ ಪರೀಕ್ಷೆ, ಗೋಮೇಧ ಪರೀಕ್ಷೆ, ವಿದ್ರುದು ಪರೀಕ್ಷೆ, ರತ್ನ ಪರೀಕ್ಷೆಗಳ ಬಗೆಗೆ ಮತ್ತು ಅವುಗಳ ಲಕ್ಷಣಗಳನ್ನು ವಿವರಿಸಲಾಗಿದೆ.

ದುರ್ಗಾಧ್ಯಾಯದಲ್ಲಿ[೧೫೮] ಜಲದುರ್ಗ, ಗಿರಿದುರ್ಗ, ಪಾಶಾಣ ನಿರ್ಮಿತದುರ್ಗ, ಇಟ್ಟಿಗೆಗಳಿಂದ ರಚಿಸಿದ ದುರ್ಗ, ಮಣ್ಣಿನಿಂದ ಕಟ್ಟಿದ ದುರ್ಗ, ವನದುರ್ಗ, ಮರುದುರ್ಗ, ಕಟ್ಟಿಗೆಯಿಂದ ನಿರ್ಮಿಸಿದ ದುರ್ಗ ಮತ್ತು ನರದುರ್ಗ ಎಂಬ ಒಂಭತ್ತು ದುರ್ಗಗಳ ಲಕ್ಷಣಗಳನ್ನು ಹೇಳಲಾಗಿದೆ.

ಬಲಾಧ್ಯಾಯದಲ್ಲಿ[೧೫೯] ಮೌಲ್ಯ, ಭೃತ್ಯ, ಶ್ರೈಣ, ಅಟವಿಕ, ಮೈತ್ರ ಹಾಗೂ ಅಮಿತ್ರವೆಂಬ ಆರು ವಿಧದ ಬಲಗಳ ವಿವರಣೆಯನ್ನು (ಪದಾತಿ ಲಕ್ಷಣ) ಅಶ್ವ ವೈದ್ಯಕದಲ್ಲಿ ಕುದುರೆಗಳ ಲಕ್ಷಣ ಹಾಗೂ ಉತ್ತಮ ಕುದುರೆಗಳು ಹೇಗಿರಬೇಕು? ಅವುಗಳಿಗೆ ನೀಡುವ ಆಹಾರದ ಬಗೆಗೆ ಮತ್ತು ಅವುಗಳಿಗೆ ಬರುವ ರೋಗಗಳಿಗೆ ನೀಡಬೇಕಾದ ಔಷಧಿಗಳನ್ನು ತಿಳಿಸುತ್ತದೆ. ಗಜಚಿಕಿತ್ಸಾ ಅಧ್ಯಾಯದಲ್ಲಿ ಗಜಗಳ ಲಕ್ಷಣ ಮತ್ತು ಅವುಗಳಿಗೆ ಬರುವ ರೋಗಗಳ ಬಗೆಗೆ ಮತ್ತು ಗಜೌಷಧಿ ನಿಘಂಟುವಿನಲ್ಲಿ ಅವುಗಳಿಗೆ ನೀಡಬೇಕಾದ ಔಷಧಿಗಳ ಕುರಿತು ವಿವರವಿದೆ.

ಯಾತ್ರಾಧ್ಯಾಯದಲ್ಲಿ[೧೬೦] ಮಾತ್ರಾಬೇಧ, ಸರ್ವದಿತ್ ನಕ್ಷತ್ರ, ವಾರಶೂಲ, ನಕ್ಷತ್ರದೋಷ ನಿವಾರಣೆ, ನಕ್ಷತ್ರ ದೋಷದ ಅಮಂಗಲ ಶಕುನ, ಮಂಗಲ ಶಕುನ, ಶ್ವಾನಶಕುನ, ನರಿ-ಹಲ್ಲಿ-ಕಾಗೆ ಶಕುನ, ಪೋತತೀ ಶಕುನ, ಪಿಂಗಳಾ ಶಕುನ, ವಾಕ್‌ಶ್ರುತಿ ಶಕುನಗಳ ವಿವರಣೆಯಿದೆ.

ಸಾಮಾಧ್ಯಾಯದಲ್ಲಿ[೧೬೧] ಸಾಮೋಪಾಯ, ಬೇಧೋಪಾಯ, ದಂಡೋಪಾಯಗಳ ಬಗ್ಗೆ ವಿವರವಿದೆ.

ದಂಡಾಧ್ಯಾಯದಲ್ಲಿ[೧೬೨] ದಂಡಯೋಗಿನೀ ಚಕ್ರ, ಸೈನ್ಯ ರಚನಾ ಲಕ್ಷಣ, ದಂಡಬೇಧ, ಕಾನೂನು ನೀತಿಗಳ ವಿವರಣೆಯನ್ನು ನೀಡಲಾಗಿದೆ.

ಸುಸ್ಥಿರಗೊಂಡ ರಾಜ್ಯದ 'ಉಪಭೋಗ'ಗಳನ್ನು ವಿವರಿಸುವ ತೃತಿಯ ವಿಂಶತಿಯಲ್ಲಿ ೧. ಗೃಹೋಪಭೋಗ ೨. ಸ್ನಾನಭೋಗ ೩. ಪಾದುಕಾಭೋಗ ೪. ತಾಂಬೂಲಭೋಗ ೫. ವಿಲೇಪನಭೋಗ ೬. ವಸ್ತ್ರೋಪಭೋಗ ೭. ಮಾಲ್ಯೋಪಭೋಗ ೮. ಭೂಷೋಪಭೋಗ ೯. ಆಸನೋಪಭೋಗ ೧೦. ಚಾಮರೋಪಭೊಗ ೧೧. ಆಸ್ಥಾನಭೋಗ ೧೨. ಪುತ್ರಭೋಗ ೧೩. ಅನ್ನಭೋಗ ೧೪. ಪಾನೀಯಭೋಗ ೧೫. ಪಾದಾಭ್ಯಾಂಗೋಪಭೋಗ ೧೬. ಯಾನೋಪಭೋಗ ೧೭. ಛತ್ರೋಪಭೋಗ ೧೮. ಶಯ್ಯಾಭೋಗ ೧೯. ಧೂಪಭೋಗ ೨೦. ಸ್ತ್ರೀಭೋಗ ಎಂಬ ೨೦ ಅಧ್ಯಾಯಗಳಿವೆ.[೧೬೩]

ಗೃಹೋಪಭೋಗದಲ್ಲಿ[೧೬೪] ಮಂದಿರ ಮುಹೂರ್ತ, ಕಾಷ್ಠಲಕ್ಷಣ, ಮಂದಿರ ಮುಖ ನಿರ್ಣಯ, ವಾಸ್ತುಪದ್ಧತಿಯ ಕ್ರಮದಿಂದ ಹದಿನಾರು ಬಗೆಯ ಗೃಹಗಳ ಲಕ್ಷಣಗಳನ್ನು ಮತ್ತು ಹೆಸರುಗಳಿಗೆ ತಕ್ಕ ಫಲಗಳನ್ನು ಹೇಳಲಾಗಿದೆ. ವಾಸ್ತುಪೂಜಾ ವಿಧಾನ, ಗೃಹಪ್ರವೇಶ, ರಾಜನಿವಾಸ ಗೃಹದ ವರ್ಣನೆ, ಚಿತ್ರಕಾರನ ಸ್ವರೂಪ, ಚಿತ್ರಭಿತ್ತಿ ಲೇಖನೀ ಲೇಖನ, ಶುದ್ಧವರ್ಣದ್ರವ್ಯ, ಮಿಶ್ರವರ್ಣ, ಚಿತ್ರವರ್ಣ, ಪಕ್ಷಸೂತ್ರ ಲಕ್ಷಣ, ತಾಲಲಕ್ಷಣ, ತಿರ್ಯಕ್‌ಮಾನ

ಲಕ್ಷಣ, ಸಾಮಾನ್ಯ ಚಿತ್ರ ಪ್ರಕ್ರಿಯೆ, ಕೇಶವ ಮೊದಲಾದ ಇಪ್ಪತ್ತನಾಲ್ಕು ಮೂರ್ತಿಬೇಧ ಇತ್ಯಾದಿ, ಬ್ರಹ್ಮ, ಮಹಾದೇವ ಮತ್ತು ಅವನ ವಿವಿಧಾಕಾರ ಹರಿಹರ, ಸ್ಕಂದ, ವಿನಾಯಕ, ಕಾತ್ಯಾಯಿನಿ(ಕಾಳಿ), ಇಂದ್ರಮೂರ್ತಿ, ಅಗ್ನಿಮೂರ್ತಿ, ಯಮ ಮೂರ್ತಿ, ರಾಕ್ಷಸೇಂದ್ರಮೂರ್ತಿ (ನಿರ್ಋತಿ), ವರುಣಮೂರ್ತಿ, ವಾಯುಮೂರ್ತಿ, ಕುಬೇರಮೂರ್ತಿ, ಈಶಾನಮೂರ್ತಿ, ಮಾತೃಕೆಗಳು, ಶ್ರೀದೇವಿ, ನಾಗಮೂರ್ತಿ, ದೈತ್ಯದಾನವ ಪಿಶಾಚ ಬೇತಾಳಮೂರ್ತಿ, ಕ್ಷೇತ್ರಪಾಲಮೂರ್ತಿ, ಕಾಮದೇವ, ಸೂರ್ಯಮೂರ್ತಿ, ಚಂದ್ರಮೂರ್ತಿ, ಭೌಮಮೂರ್ತಿ(ಕುಜ), ಬುಧಮೂರ್ತಿ, ಗುರು ಮತ್ತು ಶುಕ್ರಮೂರ್ತಿ, ಶನಿಮೂರ್ತಿ, ರಾಹುಮೂರ್ತಿ, ಕೇತುಮೂರ್ತಿ, ಕುದುರೆಯ ಲಕ್ಷಣ, ಆನೆಯ ಲಕ್ಷಣ, ಇತರ ಬಗೆಯ ಚಿತ್ರಗಳು ರಾಜಗೃಹ ವ್ಯವಸ್ಥೆಯ ಕುರಿತಾಗಿ ಚರ್ಚಿಸಲಾಗಿದೆ.

ಸ್ನಾನಭೋಗದಲ್ಲಿ[೧೬೫] ಅರಮನೆಯ ಹತ್ತಿರ ಈಶಾನ್ಯ ದಿಕ್ಕಿನಲ್ಲಿ ಸ್ನಾನಗೃಹವನ್ನು ನಿರ್ಮಿಸಬೇಕು. ಅದು ಬಂಗಾರದ ಕಂಬಗಳಿಂದ ಸುಂದರವಾಗಿರಬೇಕು. ಶುದ್ಧ ಸ್ಫಟಿಕ ನಿರ್ಮಿತ ವೇದಿಕೆಯಿಂದ ಕೂಡಿರಬೇಕು. ಗಾಜಿನ ನೆಲೆಗಟ್ಟಿನಿಂದ ಶೋಭಿಸುತ್ತಿರಬೇಕು ಎಂದು ಹೇಳಿದ್ದಾನೆ.

ತಾಂಬೂಲಭೋಗ ಪ್ರಕರಣದಲ್ಲಿ[೧೬೬] ರಾಜನಾದವನು ನೈಲವರ್ತಿಕಾಪುರ, ಈಶ್ವರಪುರ, ಕಂಡಿಕಾಪುರಗಳಲ್ಲಿ ಬೆಳೆಯುವ ಅಡಿಕೆಯನ್ನು ತಿನ್ನಬೇಕೆಂದು ಹೇಳಲಾಗಿದೆ.

ವಸ್ತ್ರೋಪಭೋಗ ಪ್ರಕರಣದಲ್ಲಿ[೧೬೭] ಪ್ರೋದ್ದಾಲಪುರ, ಚೀರಪಲ್ಲಿ, ನಾಗಪಟ್ಟಣ, ಚೋಲದೇಶ, ಅಲ್ಲಿಕಾರ್ಕುಲ, ಸಿಂಹಳ, ಅಣಿಲಾವಾಡ, ಮೂಲಸ್ಥಾನ, ತೋಂಡಿದೇಶ, ಪಚ್ಚಪಟ್ಟಣ, ಮಹಾಚೀನ, ಕಲಿಂಗ, ವಂಗಗಳಲ್ಲಿ ಸಿದ್ಧವಾದ ಬಟ್ಟೆಗಳು ರಾಜಯೋಗ್ಯವೆಂದು ಹೇಳಲಾಗಿದೆ.

ಮಾಲ್ಯೋಪಭೋಗದಲ್ಲಿ[೧೬೮] ಸಂಪಿಗೆ, ಮಲ್ಲಿಗೆ, ಕಮಲ ವಿವಿಧ ಬಣ್ಣಗಳಿಂದ ಕೂಡಿದ ಹೂಗಳು ಇರುವಂತಿ ಮತ್ತು ನೇವಾಲಿ (ನೇಪಾಳೀ) ಇವುಗಳ ಮಾಲೆಯನ್ನು ಅಭಿರುಚಿಗೆ ತಕ್ಕಂತೆ ಧರಿಸಬೇಕು ಎಂದು ಹೇಳಲಾಗಿದೆ.

ಭೂಷೋಪಭೋಗ ಪ್ರಕರಣದಲ್ಲಿ[೧೬೯] ಸ್ತ್ರೀ ಪುರುಷರು ಧರಿಸುವ ವಿವಿಧ ಆಭರಣಗಳ ವಿವರವನ್ನು ನೀಡಲಾಗಿದೆ. ನಾನಾರತ್ನ ವಿಚಿತ್ರವೂ ಮಧ್ಯದಲ್ಲಿ ದೊಡ್ಡರತ್ನ ಕೂಡಿಕೊಂಡುದುದೂ, ಸರಳವಾದ ರತ್ನಗಳಿಂದ ಮಾಡಿದುದೂ, ರಮ್ಯವಾದುದು ಆಗಿರುವ ಪದಕವನ್ನು 'ಬಂಧುರ'ವೆಂದು ತಿಳಿಯಲಾಗಿದೆ. ಸಿಂಹಮುಖದಾಕಾರವುಳ್ಳ, ನಾನಾರತ್ನಗಳಿಂದ ವಿಚಿತ್ರವಾದ ಮತ್ತು ಗೊಂಡೆಗಳಿಂದ ಕೂಡಿಕೊಂಡ ತೋಳಿನ ಅಲಂಕಾರಕ್ಕೆ 'ಕೇಯೂರ'ವೆನ್ನುತ್ತಾರೆ. ಬಂಗಾರದ ಮಣಿಗಳಿಂದ ಕೂಡಿದ ಮುತ್ತುಗಳ ಜಾಲಕ್ಕೆ 'ಅಂಗದ'ವೆನ್ನುತ್ತಾರೆ. 'ಮುಕ್ತಾತಾಡಕ' ಹೆಸರಿನದು ಕರ್ಣಾಭರಣವೆನಿಸುತ್ತದೆ. ಎರಡು ಬಗೆಗಳಲ್ಲಿ ಇರಿಸಿದ ಮುತ್ತುಗಳಿಂದ ಶೋಭಿಸುತ್ತಿರುವ ಮತ್ತು ಮಧ್ಯ ನೀಲಮಣಿ ಖಚಿತವಾಗಿರುವ ಆಭರಣಕ್ಕೆ 'ದ್ವಿರಾಜಿತ'ವೆಂದು ಕರೆಯಲಾಗುತ್ತದೆ.

ಬಂಗಾರದಿಂದ ರಚಿತವಾಗಿ ನಾನಾರತ್ನಗಳಿಂದ ಶೋಭಿಸುತ್ತಿರುವ 'ಪದ್ಮ'ವನ್ನು ಚೂಡಿಕೆ(ಜಡೆ)ಯ ತುದಿ ಭಾಗದ ಆಭರಣ (ಜಡೆಬಿಲ್ಲೆ) ವೆಂದು ಕರೆಯುತ್ತಾರೆ. ಬಂಗಾರದ ಹೂಗಳಿಂದ ಕೂಡಿ, ಮುತ್ತಿನ ಮಾಲೆಯಿಂದ ಸಂಯುತವಾಗಿ, ದೊಡ್ಡಮಾಣಿಕ್ಯ ಹಾಗೂ ನೀಲಮಣಿಗಳಿಂದ ರಚಿತವಾದರೆ 'ಚೂಡಿ' (ಜಡೆಯ) ಆಭರಣವೆನ್ನುತ್ತಾರೆ. ನಾಲ್ಕು ಅಂಗುಲ ವಿಸ್ತಾರವುಳ್ಳ ಜಘನವನ್ನು ವೇಷ್ಟನ ಮಾಡುವ ಸುವರ್ಣರತ್ನ ಖಚಿತವಾದ ದೀರ್ಘಸೂತ್ರಗಳಿಂದ ಕೂಡಿದ ಧ್ವನಿಗೈಯುವ ಬಂಗಾರದ ಗೆಜ್ಜೆಗಳಿಂದ ಕೂಡಿದ ಕಟಿಭೂಷಣಕ್ಕೆ 'ಕಾಂಚಿಧಾಮ' (ನಡುಪಟ್ಟಿ) ಎಂದು ಹೆಸರು. ಹಸ್ತಚೂಡಕವಜ್ರವನ್ನು ಜಂಘಾಕಾಂಡ ಪ್ರಮಾಣಕ್ಕೆ ಹೊಂದುವಂತೆ ನಾನಾರತ್ನಖಚಿತವಾಗಿಸಿದರೆ, 'ಪಾದಚೂಡಕ'ವೆಂದು ಕರೆಯುತ್ತಾರೆ.

ಆಸನೋಪಭೋಗದಲ್ಲಿ[೧೭೦] ಐದು, ಏಳು, ಇಲ್ಲವೇ ಒಂಭತ್ತು ಲೋಹದ ಕಾಲುಗಳಿಂದ ಕೂಡಿರುವ ಲೋಹದ ತಗಡಿನಿಂದ ಮಾಡಿದ ಹಾಗೂ ಮೇಲೆ ಲೋಹದ ಜಾಲಕ (ಜಾಳಿಗೆ) ಗಳಿಂದ ಕೂಡಿರುವ, ಅರಳೆಯಿಂದ ತುಂಬಿಕೊಂಡು ಹೊದಿಕೆ ವಸ್ತ್ರದಿಂದ ಆವೃತವಾಗಿರುವ ಚೆನ್ನಾಗಿ ಜೋಡಿಸಲ್ಪಟ್ಟ ಆಸನಕ್ಕೆ 'ಲೋಹಾಸನ'ವೆಂದು ಇಲ್ಲಿ ಸೂಚಿಸಲಾಗಿದೆ. ಅಲ್ಲದೆ ಮಂಗಲಾಸನ, ಪವಿತ್ರಾಸನ, ಮಜ್ಜನಾಸನ, ಗದ್ದಿಕಾ (ಗದ್ದುಗೆ), ಪಟ್ಟಗದ್ದಿಕಾ (ಪಟ್ಟಗದ್ದುಗೆ), ಭೂಶಯ್ಯಾಸನ, ಪೃಷ್ಠಧಾರಾಸನ ಎಂಬ ವಿವಿಧ ಬಗೆಯ ಆಸನಗಳನ್ನು ಹೆಸರಿಸಲಾಗಿದೆ.

ಪುತ್ರಭೋಗ ಪ್ರಕರಣದಲ್ಲಿ[೧೭೧] ಅನೇಕ ಅಮೂಲ್ಯ ವಿಷಯಗಳನ್ನು ತುಂಬಿಕೊಂಡಿದೆ. ಹೆಣ್ಣು ಗರ್ಭಧರಿಸಿದ ಮೂರನೆಯ ತಿಂಗಳು ಪುಂಸವನ ಕಾರ್ಯವನ್ನು ಆಚರಿಸಬೇಕು. ಆಗ ಎರಡು ಉದ್ದಿನ ಬೇಳೆಗಳನ್ನು ಒಳಗೊಂಡ ತುಪ್ಪದಲ್ಲಿ ತಯಾರಿಸಿದ ಜವೆಗೋಧಿಯ ಆಹಾರವನ್ನು ವೇದಮಂತ್ರ ಉಚ್ಚರಿಸುತ್ತಾ ಅರಸನು ಪತ್ನಿಗೆ ತಿನ್ನಿಸಬೇಕು. ಆರನೆಯ ಅಥವಾ ಎಂಟನೆಯ ಶುಕ್ರವಾರ ಅಷ್ಟಮಂಗಳವೆಂಬ ಸೀಮಂತವನ್ನಾಚರಿಸಬೇಕು. ಅತ್ತಿಮರದ ಹಣ್ಣುಗಳಿಂದ ಕೂಡಿದ ಕಂಠಾಭರಣವನ್ನು ತೊಡಿಸಬೇಕು. ಮುಳ್ಳುಹಂದಿಯ ಬಾಲದ ತುದಿಯಿಂದ ಅರಸನು ತನ್ನ ಪತ್ನಿಯ ತಲೆಯ ಮೇಲೆ ಸಿಮಂತೋನ್ನಯನವನ್ನು ಆಚರಿಸಬೇಕು. ಗಂಡು ಮಗುವಿಗೆ ಗೃಹ್ಯಸೂತ್ರದಲ್ಲಿ ಹೇಳಿದಂತೆ ಜಾತಕಕರ್ಮವನ್ನಾಚರಿಸಬೇಕು. ಸುವರ್ಣಮುದ್ರಿಕೆಗೆ ಲೇಪಿಸಿದ ಜೇನುತುಪ್ಪವನ್ನು ಮಗುವಿಗೆ ತಿನ್ನಿಸಬೇಕು. ಮದುವೆಯ ಸಂದರ್ಭದಲ್ಲಿ ಒಂದರ ಪಕ್ಕದಲ್ಲಿ ಒಂದರಂತೆ ಅಕ್ಕಿಕಾಳುಗಳ ಎರಡು ಗುಂಪುಗಳನ್ನು ವೇದಿಕೆಯ ಮೇಲೆ ಯೋಜಿಸಬೇಕು. ಅವುಗಳ ಮಧ್ಯದಲ್ಲಿ ಬಿಳಿ ರೇಷ್ಮೆ ಬಟ್ಟೆಯ ಅಂತಃಪಟವನ್ನು ಸಾವಧಾನವಾಗಿ ಇಳಿಬಿಡಬೇಕು. ಒಂದು ಅಕ್ಕಿ ರಾಶಿಯ ಮೇಲೆ ಪುತ್ರನನ್ನು ಪೂರ್ವಕ್ಕೆ ಮುಖಮಾಡಿ ಕುಳ್ಳಿರಿಸಬೇಕು. ಅದೇ ರೀತಿ ಇನ್ನೊಂದು ಅಕ್ಕಿಯ ರಾಶಿಯ ಮೇಲೆ ಕನ್ಯೆಯನ್ನು ಪಶ್ಚಿಮಾಭಿಮುಖವಾಗಿ ಕುಳ್ಳರಿಸಬೇಕು. ವರ ಮತ್ತು ಕನ್ಯೆಯ ಸುತ್ತ ೫ ಎಳೆಯ ಸೂತ್ರವನ್ನು ಕಡ್ಡಾಯವಾಗಿ ಹರಿದು ಕಾಲಕೆಳಗೆ ಬೀಳಿಸಬೇಕು. ದಾರಕ್ಕೆ ಕುಂಕುಮವನ್ನು ಲೇಪಿಸಿದರೆ ಕಂಕಣವೆನ್ನುತ್ತಾರೆ. ಈ ರೀತಿ ಕನ್ಯೆಗೆ ಕಂಕಣವನ್ನು ಕಟ್ಟಬೇಕು. ಪುತ್ರಭೋಗ ಅಧ್ಯಾಯದಲ್ಲಿ ಹೇಳಿರುವ ಈ ಎಲ್ಲಾ ಅಂಶಗಳು ರಾಜವರ್ಗದವರ ಆಚರಣೆಗಳನ್ನು ತಿಳಿಸುತ್ತವೆ.

ಅನ್ನಭೋಗ ಪ್ರಕರಣದಲ್ಲಿ[೧೨] ರಕ್ತಶಾಲಿ, ಮಹಾಶಾಲಿ, ಗಂಧಶಾಲಿ, ಕಲಿಂಗಕ, ಮುಂಡಶಾಲಿ, ಸ್ಥೂಲಶಾಲಿ, ಸೂಕ್ಷ್ಮಶಾಲಿ ಮತ್ತು ಸಕ್ಷಷ್ಠಿಕಶಾಲಿ ಅಕ್ಕಿಗಳ ಅನ್ನವನ್ನು ಭೋಗಿಸಬೇಕು. ದೊಡ್ಡ ಜಾತಿಯ ಹೆಸರು, ಬಿಳಿ ಅವರೆ, ಕಡಲೆ, ಕಪ್ಪು ಉದ್ದು, ಉದ್ದು, ಕಾಡುಕಡಲೆ ಮತ್ತು ಅಲಸಂದೆ - ಏಳು ಧಾನ್ಯಗಳನ್ನು ಸೂಪ(ಸಾರು) ತಯಾರಿಸಲು ಉಪಯೋಗಿಸಬೇಕು. ಸೋಹಲ (ಪೂರಿ), ಕಾಸಾಲ (ಪಾಯಸ ಪುರಿ?), ಉದ್ದಿನ, ಅಲಸಂದೆಯ ಮತ್ತು ಬಟಾಣಿಯ ದೋಸೆ, ಕಟಕರ್ಣ (ಗಾರಿಗೆ ಅಥವಾ ಕರಿಗಡಬು), ಇಡರಿಕಾ (ಇಡ್ಲಿ), ವಟಿಕಾ (ವಡೆ), ಕ್ಷೀರದ್ರಕಾರ (ಖೀರ), ವರ್ಷೋಲಕ, ಚಕ್ಕುಲಿ, ಕವಚಂದಿ, ಪುಯಲ, ಭಡಿತ್ರಕ, ಕೃಷ್ಣಪಾಕ, ಭೂಷಿಕ, ಕೋಶಲೀ, ಪೂರಭಟ್ಟಾರಕ, ಪಂಚವರ್ಣೀ, ಅಂತ್ರಶುಂಠಕ, ಮಂಡಲೀಯ, ವರ್ಣಶುಂಠಕ, ಉಪಖಂಡಕ, ನಂದ್ಯಾವರ್ತ, ಘೃತಕರ್ಕಟ, ಸಿಖರಣೀ (ಸೀಕರಣಿ), ಧೂಪಕಾಂಜಿಕಗಳನ್ನು ತಯಾರಿಸುವ ವಿಧಾನಗಳನ್ನು ತಿಳಿಸಿದ್ದಾನೆ.

ಪಾನೀಯಭೋಗ ಪ್ರಕರಣದಲ್ಲಿ[೧೩] ದಿವ್ಯ, ಅಂತರಿಕ್ಷ, ನಾದೇಯ, ನೈರ್ಝರ, ಸಾರಸ, ಭೌಮ, ಚಾಂಡ, ತಾಡಾಗ ಮತ್ತು ಔದ್ಭಿಧ ಎಂದು ಒಂಭತ್ತು ಜಲಬೇಧಗಳನ್ನು ಉಲ್ಲೇಖಿಸಲಾಗಿದೆ. ಶರತ್ಕಾಲದಲ್ಲಿ ದಿವ್ಯಜಲವನ್ನು, ಹೇಮಂತಕಾಲದಲ್ಲಿ ನದೀಜಲವನ್ನು, ಶಿಶಿರ ಕಾಲದಲ್ಲಿ ತಾಡಾಗಜಲವನ್ನು, ವಸಂತಕಾಲದಲ್ಲಿ ಸರೋಜಜಲವನ್ನು, ಬೇಸಗೆಯಲ್ಲಿ ನಿರ್ಝರಜಲವನ್ನು ಮತ್ತು ಮಳೆಗಾಲದಲ್ಲಿ ಭೌಮಜಲವನ್ನು ಕುಡಿಯಬೇಕು. ಹಂಸೋದಕ ಮತ್ತು ಪಥ್ಯಕಾರಕವಾದ ನಾರಿಕೇಲ (ಎಳೆನೀರು) ಜಲವನ್ನು ರುಚಿಗೆ ತಕ್ಕಹಾಗೆ ಕುಡಿಯಬೇಕು.

ಚತುರ್ಥ ವಿಂಶತಿಯಲ್ಲಿ ಪ್ರಮೋದಜನಕ 'ರಾಜವಿನೋದ'ಗಳಾದ ೧. ಶಸ್ತ್ರವಿನೋದ ೨. ಶಾಸ್ತ್ರವಿನೋದ ೩. ಗಜವಾಹ್ಯಾಲೀ ವಿನೋದ ೪. ತುರಗವಾಹ್ಯಾಲೀ ವಿನೋದ ೫. ಅಂಕವಿನೋದ ೬. ಮಲ್ಲವಿನೋದ ೭. ಕುಕ್ಕುಟವಿನೋದ ೮. ಲಾವಕವಿನೋದ ೯. ಮೇಷವಿನೋದ ೧೦. ಮಹಿಷವಿನೋದ ೧೧. ಪಾರಾವತವಿನೋದ ೧೨. ಸಾರಮೇಯ ವಿನೋದ ೧೩. ಶ್ಯೇನವಿನೋದ ೧೪. ಮತ್ಸ್ಯವಿನೋದ ೧೫. ಮೃಗಯಾವಿನೋದ ೧೬. ಗೀತವಿನೋದ ೧೭. ವಾದ್ಯವಿನೋದ ೧೮. ನೃತ್ಯವಿನೋದ ೧೯. ಕಥಾವಿನೋದ ೨೦. ಚಮತ್ಕಾರವಿನೋದಗಳಿವೆ.[೧೪]

ಗಜವಾಹ್ಯಾಲೀ ವಿನೋದ ಅಧ್ಯಾಯದಲ್ಲಿ[೧೫] ಮೃಗ, ಮಂದ, ಭದ್ರ ಎಂಬ ಮೂರು ಪ್ರಕಾರಗಳ ಗಣಗಳು ಒಂದೇ ಆನೆಯಲ್ಲಿ ಕಂಡುಬಂದರೆ ಅಂಥ ಆನೆಯನ್ನು 'ಸಂಕೀರ್ಣ'ವೆನ್ನುತ್ತಾರೆ. ಮಿಶ್ರಜಾತಿಯ ಆನೆಗಳಲ್ಲಿ ಭದ್ರಮಂದ, ಭದ್ರಮೃಗ, ಮಂದಭದ್ರ, ಮಂದಮೃಗ, ಮೃಗಭದ್ರ, ಮೃಗಮಂದ ಎಂಬ ಆರು ಅವಾಂತರ ಪ್ರಕಾರಗಳಿವೆ. ಭದ್ರಮಂದ್ರಮೃಗ, ಭದ್ರಮೃಗಮಂದ್ರ, ಮಂದ್ರಭದ್ರಮೃಗ, ಮಂದಮೃಗಭದ್ರ, ಮೃಗಭದ್ರಮಂದ್ರ, ಮೃಗಮಂದ್ರಭದ್ರ ಎಂಬ ಸಂಕೀರ್ಣ ಜಾತಿಯ ಆನೆಯ ಪ್ರಕಾರಗಳನ್ನು ತಿಳಿಸಿದ್ದಾನೆ.

ಮೇಧಾವಿಯೂ, ಸ್ನಿಗ್ಧವಾದ ಬಣ್ಣವುಳ್ಳದ್ದೂ, ದೀಪ್ತವಾದ ಜಠರಾಗ್ನಿಯುಳ್ಳದ್ದೂ, ಮಿತಾಹಾರವನ್ನು ಸ್ವೀಕರಿಸುವುದೂ, ಅನ್ವರ್ಥವೇದಿಯೂ, ದೀರ್ಘಕಾಲ ಬದುಕುವುದೂ, ಕಾಮಪ್ರವೃತ್ತಿಯುಳ್ಳದ್ದೂ ಆದ ಆನೆಯು

'ಸಾತ್ವಿಕ'. ವೇಗದಿಂದ ಓಡುವ, ಹೆಚ್ಚು ತಿನ್ನುವ, ಶೌರ್ಯವನ್ನು ಮೆರೆಯುವ, ಪ್ರಜ್ಞಾಶಾಲಿಯೂ ಚಂಚಲ ಬುದ್ಧಿಯನ್ನುಳ್ಳದ್ದೂ, ಆದ ದುಷ್ಟವೂ, ಉತ್ತಾನವೇದಿ ಎನಿಸಿದ್ದೂ ಆಗಿರುವ ಆನೆ 'ರಾಜಸ'.

ಬಹಳ ಕ್ಲೇಶದಿಂದ ಕೆಲಸವನ್ನು ಮಾಡುವ, ಹಿಡಿದ ಕೆಲಸವನ್ನು ಮರೆತುಬಿಡುವ, ಯಾವಾಗಲೂ ನಿದ್ರೆ ಮಾಡುವ, ಸ್ವಭಾವದ ಪ್ರತ್ಯರ್ಥವೇದಿ ಎನಿಸಿದ ಆನೆ 'ತಾಮಸ' ಎಂದಿದೆಯಲ್ಲದೆ ಆನೆಯಿಂದ ಅಟ್ಟಿಸಿಕೊಂಡು ಓಡುವ ಸ್ಪರ್ಧೆಯ ವಿವರವಿದೆ. ಹೀಗೆ ಓಡುವವವನ್ನು ಪರಿಕಾರ ಎಂದು ಹೇಳಲಾಗಿದೆ.

ಕುಕ್ಕುಟ ವಿನೋದದಲ್ಲಿ[೭೬] ಗೆದ್ದವರು ಸೋತವರ ಹೆಗಲನ್ನೇರಿ ಕುಳಿತು ಪರಿಹಾಸ್ಯದ ಮಾತುಗಳನ್ನಾಡಬೇಕು. ಸೋತವರನ್ನು ನಾಚಿಕೆಗೇಡು ಮಾಡಬೇಕು. ಪರಿಹಾಸ್ಯದ ಅರ್ಥ ತುಂಬಿರುವ ಮರ್ಮಬೇಧಕವಾದ ಬೈಗುಳಗಳಿಂದ ಕೂಡಿದ ತ್ರಿಪದಿ ಪದ್ಯಗಳನ್ನು ರಾಗಸಹಿತವಾಗಿ ಸೋತವರನ್ನು ಉದ್ದೇಶಿಸಿ ಹಾಡಬೇಕು. ಸೋತವರ ಧ್ವಜದ ಸ್ತಂಭವನ್ನು ಜೋರಾಗಿ ಕಿತ್ತುಕೊಂಡು, ಗೆಲುವನ್ನು ಗಳಿಸಿದ ಹುಂಜವನ್ನು ಹೆಣ್ಣಾನೆಯ ಮೇಲೆ ಕುಳ್ಳಿರಿಸಿ ಪಟ್ಟಣದ ಬೀದಿಗಳಲ್ಲಿ ಮೆರವಣಿಗೆ ಮಾಡಿಸಬೇಕು. ಸೋತವನ ಹಣೆ, ತೋಳು, ಎದೆಗಳ ಮೇಲೆ ಗೆದ್ದವನು ಕುಂಕುಮದಿಂದ ಹುಂಜದ ಗುರುತುಗಳನ್ನು ಮಾಡಬೇಕು ಎಂದು ಹೇಳಿರುವ ವಿವರಗಳು ತುಂಬಾ ಕುತೂಹಲಕಾರಿಯಾಗಿವೆ.

ಲಾವಕ ವಿನೋದಾಧ್ಯಾಯದಲ್ಲಿ[೭೭] ಲಾವಕ್ಕಿಗಳ ಕಾಳಗದ ವಿವರ ಬರುತ್ತದೆ. ಲಾವಕ್ಕಿಗಳ ಕಾಳಗದಲ್ಲಿ ಮೊದಲು 'ಅಗ್ರಯೋಧಿ' ಎನಿಸಿದ ಲಾವಕ್ಕಿಯ ಕಾಳಗ ನಡೆಸಬೇಕು. ಆಮೇಲೆ ಅಂತರ್ಜ್ಯೇಷ್ಠಿತನ್ನು ಅನಂತರದಲ್ಲಿ ಜ್ಯೇಷ್ಠಿಯನ್ನೂ ಕಾಳಗಕ್ಕೆ ಕಳಿಸಬೇಕು. ಯಾವನು ತನ್ನ ಲಾವಕವು ಬಲಿಷ್ಠವೆಂಬ ಗರ್ವದಿಮದ ಅವಸ್ತರವನ್ನು (ಪಂಜರದ ಕೆಳಗಿನ ಕೋಷ್ಠವನ್ನು) ಎತ್ತುವನೋ, ಅವನ ಪಕ್ಷಿಯು ಒಂಭತ್ತು ನಾಡಿಗಳ ಅವಧಿಯವರೆಗೆ ಕಾಳಗ ಮಾಡಿದರೆ ಅಥವಾ ಒಂಭತ್ತು ನಾಡಿಗಳ ಅವಧಿಯೊಳಗೆ ಪ್ರತಿಸ್ಪರ್ಧಿಯನ್ನು ಸೋಲಿಸಿಬಿಟ್ಟರೆ, ಅಂಥವನಿಗೆ ವಿಶೇಷವಾದ ಜಯ. ಅವಸ್ತರವು ಅವನಿಗೇ ಅಚಲವಾಗಿ ಸೇರುವುದು. ಒಂಭತ್ತು ನಾಡಿಗಳ ಕಾಲವನ್ನು ಲಾವಕ್ಕಿಯು ಸರಿಯಾಗಿ ಪೂರೈಸಿದರೆ, ಅದರ ಅವಸ್ತರವನ್ನು ಮೇಲೆತ್ತಿದ ಒಡೆಯನಿಗೇ ವಿಜಯವು. ಯಾವನು ಅವಸ್ತರವನ್ನು ಎತ್ತಿ (ಕಾಳಗಕ್ಕೆ ತನ್ನ ಲಾವಕ್ಕಿಯನ್ನು ಕಳಿಸುವನೋ) ಅವನ ಹಕ್ಕಿಯು ಒಂಭತ್ತು ನಾಡಿಗಳ ಅವಧಿಯೊಳಗೆ ಪಲಾಯನ ಮಾಡಿದರೆ, ಬೇರೆಯವರು (ಪ್ರತಿಸ್ಪರ್ಧಿ ಹಕ್ಕಿಯ ಒಡೆಯನು) ಜಯವನ್ನು ಪಡೆಯುತ್ತಾನೆಂದು ತಿಳಿಸುತ್ತದೆ. ಲಾವಕ್ಕಿಗಳಲ್ಲಿರುವ ಕಚ್ಚೀಲ, ಖಾರಡೀಕ, ಗೋರಂಜ, ವಿಗರ, ಪಾಂಸುಲ, ಬೇರಸ ಎಂಬ ಆರು ಜಾತಿಗಳಿವೆಯೆಂದು ಹೇಳುತ್ತಾನೆ.

ಮೃಗಯಾ ವಿನೋದದಲ್ಲಿ[೭೮] ಪಾನೀಯಜಾ, ಚಾರಜಾ, ಕ್ಷೇತ್ರಜಾ, ಮಾರ್ಗಜಾ, ಊಕ್ಷರಜಾ, ದೀಪಮೃಗಜಾ, ವಿಟಪಾಶ್ರಯಾ ವಧ್ರಜಾ, ಕಾಂಡಪಟಜಾ, ಮಂಚಜಾ, ಭೂಮಿಗೇಹಜಾ, ಬಲೀವರ್ದ, ತಿರೋಧಾನಾ, ಮಹಿಷಾರೋಹಣೋದ್ಭವಾ, ಅಶ್ವಜಾ, ಚಿತ್ರಜಾ, ಶಾರೀರೀ, ಸ್ತಂಭನೀ, ವಾಯುಜಾ, ದಮನೋತ್ಪನ್ನಾ, ಗೌರಿಜಾ,

ಕೋಪಸಂಭಬಾ, ಕಾಮಜಾ, ಧ್ವನಿಜಾ, ಮದವಿಕಾರಜಾ, ನೀಹಾರಜಾ, ಪಾಶಜಾತಾ, ಜಾಲಜಾ, ಯಂತ್ರಸಂಭವಾ, ವ್ಯಾಘ್ರಮೋಕ್ಷಣ, ಸಂಭೂತಾ, ಕವಲದಾನಜಾ ಎಂಬ ಇಪ್ಪತ್ತೊಂದು ರೀತಿಯ ಬೇಟೆ ರಾಜನಿಗೆ ಸಮ್ಮತ ಎಂದು ಹೇಳಿದ್ದಾನೆ.

ಗೀತವಿನೋದಾಧ್ಯಾಯದಲ್ಲಿ[೧೭೯] ದೇಶಿ ವಿಷಯಗಳಿಗೆ ಸಂಬಂಧಿಸಿದಂತೆ ಅನೇಕ ಮಹತ್ವದ ಅಂಶಗಳನ್ನೊಳಗೊಂಡಿದೆ. ಇಲ್ಲಿ ದ್ರಾವಿಡ ಛಂದಸ್ಸಿನ ಅಂಶಗಣ ವಿಚಾರವನ್ನು ಹೇಳಿ, ಕನ್ನಡದ ತ್ರಿಪದಿ ಲಕ್ಷಣವನ್ನು ಪ್ರಸ್ತಾಪಿಸಲಾಗಿದೆ. ತ್ರಿಪದಿಯ ಮೊದಲೆರಡು ಪಾದಗಳನ್ನು ಮೂರನೆಯದರಲ್ಲೂ ಕೊಂಚ ಭಾಗವನ್ನು ಹಾಡಿದ ಬಳಿಕ ಮತ್ತೊಮ್ಮೆ ಈ ಮೂರನೆಯ ಪಾದವನ್ನು ಹಾಡಿ ನಾಲ್ಕನೆಯದನ್ನು ಹಾಡುವುದ ಎಂದು ಹೇಳಿದ ಮಾತು ಮನನೀಯವಾಗಿದೆ. ಇಲ್ಲಿಯೇ ಹೇಳಲಾದ ಚತುಷ್ಪದಿ, ಷಟ್ಪದಿ, ವಿಚಿತ್ರಾತ್ರಿಪದಿ, ಕಂದಲಕ್ಷಣಗಳು ಇವುಗಳಿಗೆ ಉದಾಹರಣೆಯಾಗಿ ಕೊಟ್ಟ ಕನ್ನಡ ಪದ್ಯಗಳು ಕನ್ನಡ ಛಂದಸ್ಸಿನ ದೃಷ್ಟಿಯಿಂದ ತುಂಬ ಮಹತ್ವವೆನಿಸಿವೆ. ತ್ರಿಪದಿ, ಷಟ್ಪದಿ, ಧವಲಗಳು ಸೂಡ ಕ್ರಮದಲ್ಲಿ ಹಾಡಲ್ಪಡುವ ಲೌಕಿಕ ಪ್ರಬಂಧಗಳಾಗಿವೆ. ಕಥೆಗಳಲ್ಲಿ ಷಟ್ಪದಿಯನ್ನು ಬಳಸಬೇಕು. ಮಹಾರಾಷ್ಟ್ರದಲ್ಲಿ ಕುಟ್ಟುವಾಗ ಹಾಡುವುದು ಓದಿ, ಕನ್ನಡ ಭಾಷೆಯಲ್ಲಿ ಷಟ್ಪದಿಯನ್ನು ಬಳಸಿ ಚಿತ್ರಕಥರು ಕಥಾಲಾಪ ಮಾಡುತ್ತಾರೆ ಎಂದು ನೀಡುವ ವಿವರಗಳು ಅಪೂರ್ವವೆನಿಸಿವೆ.

ವಾದ್ಯವಿನೋದಲ್ಲಿ[೧೮೦] ವಿವಿಧ ಬಗೆಯ ವಾದ್ಯಗಳಾದ ವೀಣೆ, ಮೃದಂಗ, ಕುಡುವಾ, ಕೊಳಲು ಮುಂತಾದ ವಾದ್ಯಗಳ ಲಕ್ಷಣಗಳನ್ನು ತಿಳಿಸುತ್ತಾ, ಅವುಗಳನ್ನು ನುಡಿಸುವ ಬಗೆಯನ್ನು ಸಹ ವಿವರಿಸಿದ್ದಾನೆ. ನೃತ್ಯ ವಿನೋದಾಧ್ಯಾಯದಲ್ಲಿ ನಟರನ್ನು ನಟ, ನರ್ತಕ, ನರ್ತಕಿ, ವೈತಾಲಿಕ, ಚಾರಣ ಮತ್ತು ಕೋಲ್ಗಟಿಕ ಎಂದು ಆರು ಪ್ರಕಾರಗಳಿಂದ ಗುರುತಿಸಲಾಗಿದೆ.

ಕಥಾವಿನೋದಾಧ್ಯಾಯದಲ್ಲಿ[೧೮೧] ಧರ್ಮಾರ್ಥೋಚಿತವಾದ ಕೆಲಸಗಳನ್ನೆಲ್ಲ ಮಾಡಿ ಪಥ್ಯವೂ, ಪ್ರಿಯವೂ ಆದ ಭೋಜನವನ್ನು ಮುಗಿಸಿ ವಿಶ್ರಾಂತಿಸಿದ ಬಳಿಕ ಚತುರರೂ, ದಕ್ಷರೂ, ಲೋಕವ್ಯವಹಾರ ವಿಶಾರದರೂ, ೬೪ ಕಲೆಗಳನ್ನರಿತವರೂ, ಚತುರ್ಭಾಷಾ ವಿಶಾರದರೂ (ಸಂಸ್ಕೃತ, ಪ್ರಾಕೃತ, ಅಪಭ್ರಂಶ, ದೇಶ್ಯಭಾಷೆ) ಮನೋಲಹರಿಯನ್ನರಿತವರೂ, ಧರ್ಮದಲ್ಲಿ ಸಲಹೆ ಕೊಡಬಲ್ಲವರೂ, ನಾನಾ ರಸಗಳ ಕಥೆಗಳನ್ನು ಬಲ್ಲವರೂ, ಬಹುಸಂಪ್ರದಾಯಗಳನ್ನು ಬಲ್ಲವರೂ, ಬಹುಸಂಪ್ರದಾಯಗಳನ್ನು ಬಲ್ಲವರೂ, ರಾಗ-ದ್ವೇಷ ರಹಿತರೂ, ಆಸ್ತಿಕರೂ, ಧರ್ಮಕಾರ್ಯಾಸಕ್ತರೂ, ವಾಗ್ಮಿಗಳೂ, ಪ್ರೌಢಿಮೆಯುಳ್ಳವರೂ, ತರುಣರೂ, ಜ್ಞಾನವೃದ್ಧರೂ, ದೇಶಕಾಲಗಳನ್ನರಿತವರೂ, ದುಃಖವೆಂಬ ಮರಕ್ಕೆ ಕೊಡಲಿಯಂತಿರುವರೂ, ಜಿಹಾಸೆಯೆಂಬ ಉರುವಲಿಗೆ ಬೆಂಕಿಯಂತಿರುವವರೂ (ವೈರಾಗ್ಯ), ಶೃಂಗಾರ ಸಮುದ್ರಕ್ಕೆ ಚಂದ್ರನಂತಿರುವವರೂ, ಅನುರಾಗವೆಂಬ ಕಮಲಕ್ಕೆ ಸೂರ್ಯನಂತಿರುವವರೂ ಆದ ಜನರು ಹೇಳುವ ಕಥೆಗಳನ್ನು ರಾಜನು ಕೇಳಬೇಕು ಎಂದು ಹೇಳಿದ್ದಾನೆ.

ರಾಜನಿಗೆ ಸುಖವನ್ನುಂಟು ಮಾಡುವ ಕ್ರೀಡೆಗಳನ್ನು ಪಂಚಮ ವಿಂಶತಿಯು ತಿಳಿಸುತ್ತದೆ. ೧. ಭೊಧರಕ್ರೀಡೆ, ೨. ವನಕ್ರೀಡೆ, ೩. ಅಂದೋಲನಕ್ರೀಡೆ, ೪. ಸೇಚನಕ್ರೀಡೆ, ೫. ಜಲಕ್ರೀಡೆ, ೬.ಶಾದ್ವಲಕ್ರೀಡೆ, ೭. ವಾಲುಕಾಕ್ರೀಡೆ, ೮. ಜೊತ್ಸಾಕ್ರೀಡೆ, ೯.ಸಸ್ಯಕ್ರೀಡೆ, ೧೦. ಮದಿರಾಪಾನಕ್ರೀಡೆ, ೧೧. ಪ್ರಹೇಳಿಕಾಕ್ರೀಡೆ, ೧೨. ಚತುರಂಗಕ್ರೀಡೆ, ೧೩. ಪಾಶಕಕ್ರೀಡೆ, ೧೪. ವರಾಟಿಕಾಕ್ರೀಡೆ, ೧೫. ಫಣಿದಾಕ್ರೀಡೆ, ೧೬. ಫಂಜಿಕಾಕ್ರೀಡೆ, ೧೭. ತಿಮಿರಕ್ರೀಡೆ, ೧೮. ವೀರಕ್ರೀಡೆ, ೧೯. ಪ್ರೇಮಕ್ರೀಡೆ, ೨೦.ಸುರತಕ್ರೀಡೆ.[೧೮೨]

ಭೂಧರಕ್ರೀಡೆ (ಪರ್ವತಕ್ರೀಡೆ)ಯಲ್ಲಿ[೧೮೩] ಸುತ್ತಮುತ್ತಲೂ ವಿಚಿತ್ರವಾದ ಮರಗಳಿಂದ ಕೂಡಿರುವ ಕಾಡೊಂದನ್ನು ನಿರ್ಮಿಸಬೇಕು. ಆ ಕಾಡಿನ ಮಧ್ಯೆ ಆಟವಾಡಲು ರಮಣೀಯವಾದ ಮನಸ್ಸನ್ನು ಆಕರ್ಷಿಸುವ ಪರ್ವತವೊಂದನ್ನು ರಚಿಸಬೇಕು. ಆ ಪರ್ವತವು ಎತ್ತರವಾದ ಶಿಖರಗಳಿಂದ ಕೂಡಿ ಅನೇಕ ರೀತಿಯ ಮರಗಳಿಂದ ತುಂಬಿ ವಿಶಾಲವಾದ ಬಂಡೆಗಳಿಂದ ಕೂಡಿರಬೇಕು. ಅಲ್ಲಿ ವಿವಿಧ ರೀತಿಯ ಹೂ-ಹಣ್ಣುಗಳನ್ನು ಬಿಡುವ ಮರಗಿಡಗಳನ್ನು ಬೆಳೆಸಬೇಕು. ಸುಂದರವಾದ ಕೊಳವನ್ನು ನಿರ್ಮಿಸಿ ರಾಜನು ಸುಂದರ ತರುಣಿಯರನ್ನು ಕರೆದುಕೊಂಡು ಅಲ್ಲಿ ಆಟವಾಡಬೇಕೆಂದು ತಿಳಿಸುತ್ತಾನೆ.

ಅಂದೋಲನಕ್ರೀಡೆಯಲ್ಲಿ[೧೮೪] ರಾಜನು ಎರಡು ಬಲಿಷ್ಟವಾದ ಕಂಬಗಳ ಆಧಾರದಲ್ಲಿ ಅಂದೋಲನವನ್ನು ರಚಿಸಬೇಕು. ನಂತರ ಪೂರ್ಣಿಮೆಯ ದಿವಸ ರಾಜನು ಸಿಂಗರಿಸಿಕೊಂಡು ಸುಂದರವಾದ ಸ್ತ್ರೀಯರೊಂದಿಗೆ ಗೀತವಾದ್ಯ ವಿನೋದದೊಂದಿಗೆ ಆಟವಾಡಬೇಕೆಂದು ಈ ಕ್ರೀಡೆಯನ್ನು ವಿವರಿಸುತ್ತಾನೆ.

ಜಲಕ್ರೀಡೆಯಲ್ಲಿ[೧೮೫] ರಾಜನು ನಿರ್ಮಿಸಿದ ಭಾವಿಯಲ್ಲಿ ಅಥವಾ ನದಿಯಲ್ಲಿ ಅಥವಾ ಪುಷ್ಕರಣಿಯಲ್ಲಿ ಕುತ್ತಿಗೆ ಮುಳುಗುವಷ್ಟು ನಿರ್ಮಲ ಜಲದಲ್ಲಿ ಕೆಲವು ಕಾಮಿನಿಯರನ್ನು ಆಲಂಗಿಸಿಕೊಂಡು, ಮತ್ತೆ ಕೆಲವು ಸ್ತ್ರೀಯರನ್ನು ಹೆಗಲಮೇಲೆ ಹೊತ್ತುಕೊಂಡು, ಕೆಲವರನ್ನು ವಸ್ತ್ರ ಎಳೆಯುವ ಮೂಲಕ, ಕೆಲವರನ್ನು ಕೈಹಿಡಿಯುವ ಮೂಲಕ, ಇನ್ನು ಕೆಲವರನ್ನು ಪ್ರೇಮಪೂರ್ವಕವಾಗಿ ನೋಡುವ ಮೂಲಕ, ಮತ್ತೆ ಕೆಲವರನ್ನು ಗೌರವ ಭಾವದಿಂದ ನೋಡುವ ಮೂಲಕ ನೀರಿಗಿಳಿಯಬೇಕು. ಅಲ್ಲಿಗೆ ಬಂದ ತನ್ನ ಸ್ತ್ರೀಯರನ್ನೆಲ್ಲ ಜಲಕ್ರೀಡೆಯಲ್ಲಿ ನಿಪುಣರಾದ ಜನರ ಸಹಾಯದಿಂದ ಅತ್ಯಂತ ತಣ್ಣಗಿರುವ ನೀರಿನಲ್ಲಿ ಇಳಿಸಬೇಕು ಎಂದು ಶೃಂಗಾರದಿಂದ ಕೂಡಿದ ಜಲಕ್ರೀಡೆಯನ್ನು ವಿವರಿಸಿದ್ದಾನೆ.

ಮದಿರಾಪಾನಕ್ರೀಡಾಧ್ಯಾಯದಲ್ಲಿ[೧೮೬] ಮಾಸ್ತಾರ, ಲವ, ಪಾಂಡುರ, ಕೃಷ್ಣಾಸುರ, ದ್ರಾಕ್ಷಾಸವ, ಮಧುಕಾಸವ, ಸೀಧು, ತಾಲಾದಿ ಮಧ್ಯಗಳ ಪ್ರಕಾರಗಳನ್ನು ಹೇಳುತ್ತ, ಕುಡಿಯುವ ಮೊದಲು ಎಡಗೈಯ ಅನಾಮಿಕ ಬೆರಳಿನಿಂದ ಮಧ್ಯದ ಹನಿಗಳನ್ನು ತಲೆಯ ಮೇಲೆ ಎರಚಬೇಕು ಎಂಬ ಆಚರಣೆಯನ್ನು ಹೇಳಿದ್ದಾನೆ.

ರಾಜನು ಧರ್ಮ, ಕಾಮ, ಅರ್ಥಗಳ ಕೆಲಸಗಳನ್ನೆಲ್ಲಾ ಮುಗಿಸಿ ತನಗೆ ಇಷ್ಟವಾದ ರುಚಿಕರವೂ ಆದ ಆಹಾರವನ್ನು ಸೇವಿಸಿ ತೃಪ್ತನೂ, ಉಲ್ಲಾಸ ತುಂಬಿದ ಮನಸ್ಸುಳ್ಳವನೂ ಆಗಿ ಬುದ್ಧಿಯ ಪ್ರೌಢಿಮೆ ಮತ್ತು ಆನಂದಗಳಿಗೋಸ್ಕರ ಹಾಗೂ ನಿದ್ದೆ ಸೋಮಾರಿತನಗಳನ್ನು ನಿವಾರಿಸಿಕೊಳ್ಳಲು, ಬುದ್ಧಿ ವಿಕಾಸಕಾರಿಣಿಯಾದ ಪ್ರಹೇಳಿಕಾ ಕ್ರೀಡೆಯನ್ನು[೫೭] ನಡೆಸಬೇಕು. ಚತುರರೂ, ಪ್ರಜ್ಞರೂ, ಸಾಹಿತ್ಯದಲ್ಲಿ ವಿಚಕ್ಷಣರೂ, ಒಗಟುಗಳ ಅರ್ಥವನ್ನು ತಿಳಿದವರೂ, ವಾಗ್ಮಿಗಳೂ, ಅನೇಕ ಶಾಸ್ತ್ರಗಳನ್ನು ತಿಳಿದವರೂ ಆದ ಜಾಣರನ್ನು ಪ್ರಹೇಳಿಕೆಗಳ ಅರ್ಥವನ್ನು ನಿರ್ಣಯಿಸುವುದಕ್ಕೆ ನಿಯಮಿಸಬೇಕು. ಒಬ್ಬನು ಒಗಟನ್ನು ಹೇಳಿ ಅದರ ಅರ್ಥವನ್ನು ಕೇಳುತ್ತಾನೆ. ಇನ್ನೊಬ್ಬನು ಅದನ್ನು ಹೇಳುತ್ತಾನೆ. ಅದು ತಿಳಿಯದಿದ್ದರೆ ಸೋಲು ಹೀಗೆ ಜನರಿಗೆ ಚಮತ್ಕಾರವನ್ನುಂಟುಮಾಡುವ ಪ್ರಹೇಳಿಕೆಗಳು ನಾನಾ ವಿಧವಾಗಿರುತ್ತವೆ. ಪ್ರಹೇಳಿಕೆಗಳಲ್ಲಿ ಕೆಲವು ಸ್ವರೂಪ ಪ್ರಶ್ನಿಕೆಗಳು ಮತ್ತೆ ಕೆಲವು ಕಾರಣ ಪ್ರಶ್ನಿಕೆಗಳು, ವ್ಯಸ, ಸಮಸ್ತೋತ್ತರ, ಅನೇಕಾರ್ಥಪದೋತ್ತರ, ಪ್ರಕ್ಷಪ್ತಾಕ್ಷರಸಾರ್ಥ, ಪ್ರಕ್ಷಿಪ್ತಾಪದಸಾರ್ಥ, ಉಕ್ತೋತ್ತರ ಪ್ರೋಕ್ತಪದೋತ್ತರ, ಚುತ್ಯಾಕ್ಷರ, ಚ್ಯುತಮಾತ್ರ, ಚ್ಯುತಬಿಂದುಕ, ವ್ಯತ್ಯಸ್ತವರ್ಣಕ, ಗೂಢಾರ್ಥಕ ಎಂಬ ಪ್ರಹೇಳಿಕೆಗಳೂ ಇವೆ.

ವೀರಕ್ರೀಡೆಯನ್ನು[೫೮] ವೀರಪುರುಷರೇ ಆಡಬೇಕೆಂದು ಸೋಮಭೂಪಾಲಕನು ಹೇಳಿದ್ದಾನೆ. ಅಲ್ಲದೇ ಖಡ್ಗಸಿದ್ಧಿ, ಬಾಣಸಿದ್ಧಿ, ಗಧಾಸಿದ್ಧಿ, ಯುಷ್ಟಿಸಿದ್ಧಿ, ಮುಷ್ಟಿಸಿದ್ದಿ, ಪಟಸಿದ್ದಿ, ಖಟಿಸಿದ್ದಿ, ಅಂಜನಸಿದ್ದಿ, ಪಾದುಕಾಸಿದ್ದಿ, ರತ್ನಸಿದ್ದಿ, ವೇತಾಲಸಿದ್ದಿ, ಅಂಗುಲಿಕಾಸಿದ್ದಿ, ರಸಸಿದ್ದಿ, ನಿಧಿಸಿದ್ದಿ, ಮಾಟಿಕಾಸಿದ್ದಿ, ಅಕ್ಷಸಿದ್ದಿ, ವಾಕ್‌ಸಿದ್ದಿ ಎಂಬ ಹದಿನೆಂಟು ಸಿದ್ದಿಗಳನ್ನು ಕ್ರಮಾನುಸಾರವಾಗಿ ಅದರ ಲಕ್ಷಣಗಳನ್ನು ವಿವರಿಸಿದ್ದಾನೆ.

ಗ್ರಂಥದ ಕೊನೆಯಲ್ಲಿ ಈ ಶಾಸ್ತ್ರವನ್ನು ಕೇಳಿದವನಿಗೆ ಧರ್ಮದಲ್ಲಿ ಆಸಕ್ತಿಯೂ, ಅರ್ಥಶಾಸ್ತ್ರದಲ್ಲಿ ಕುಶಲತೆಯೂ ರಾಜನೀತಿಯಲ್ಲಿ ವಿಚಕ್ಷಣತೆಯೂ ಉಂಟಾಗುವುದೆಂದು ಸೇವೆಮಾಡುವುದರಲ್ಲಿ ದಕ್ಷತೆಯೂ, ಸಾಹಿತ್ಯದಲ್ಲಿ ನಿಪುಣತೆಯೂ, ತರ್ಕಗಳಲ್ಲಿ ಪಟುತ್ವವೂ, ಛಂದಸ್ಸು ಮತ್ತು ಅಲಂಕಾರಗಳ ಜ್ಞಾನವೂ, ಶಾಸ್ತ್ರವಿದ್ಯೆಯಲ್ಲಿ ಜಾಣ್ಮೆಯೂ, ಆನೆ-ಕುದುರೆಗಳ ಸವಾರಿಯಲ್ಲಿ ಚಾತುರ್ಯವೂ, ಮಲ್ಲವಿದ್ಯೆಯಲ್ಲಿ ವಿಶೇಷ ಜ್ಞಾನವೂ, ಯುದ್ಧದಲ್ಲಿ ತಿಳಿವೂ, ಸಂಗೀತ ವಿದ್ಯೆಯಲ್ಲಿ ನೈಪುಣ್ಯವೂ ಉಂಟಾಗುತ್ತದೆ. ಇದರಲ್ಲಿ ಸಂಶಯವಿಲ್ಲ. ಮಾನಸೋಲ್ಲಾಸ ಎಂಬ ಈ ಶಾಸ್ತ್ರವು ಕಾಮಧೇನು, ಎಲ್ಲ ವಿಷಯಗಳನ್ನು ತಿಳಿಸಿಕೊಡುವಲ್ಲಿ ಇದಕ್ಕೆ ಸಮನಾದ ಇನ್ನೊಂದು ಶಾಸ್ತ್ರಗ್ರಂಥ ಇಲ್ಲ. ಇದನ್ನು ಓದುವುದರಿಂದ ಬ್ರಾಹ್ಮಣನು ಜ್ಞಾನವನ್ನೂ, ಕ್ಷತ್ರಿಯನು ರಾಜ್ಯವನ್ನೂ, ವೈಶ್ಯನು ಐಶ್ವರ್ಯವನ್ನೂ, ಶೂದ್ರನು ಉತ್ತಮ ವೃತ್ತಿಯನ್ನು ಪಡೆಯುವರು ಎಂದು ಹೇಳಿದ್ದಾನೆ.[೫೯]

ವಿಕ್ರಮಾಂಕಾಭ್ಯುದಯಂ

ಸೋಮೇಶ್ವರನ ಮತ್ತೊಂದು ಕೃತಿಯಾದ 'ವಿಕ್ರಮಾಂಕಾಭ್ಯುದಯಂ'ದಲ್ಲಿ ಕರ್ನಾಟಕದ ಭೂಮಿಯು ವಿಶಾಲವಾದ ಜನಪದ ಮಾರ್ಗಗಳನ್ನು ಒಳಗೊಂಡಿದ್ದು, ನಾನಾರೀತಿಯ ಜನರು ನಗರ ಗ್ರಾಮಗಳಲ್ಲಿ ವಾಸಿಸುತ್ತಿದ್ದರು. ಅಲ್ಲದೇ ಗೋದಾವರಿ, ಭೀಮರತಿ, ಕೃಷ್ಣವೇಣಿ, ಮಲಪ್ರಭಾ, ತುಂಗಭದ್ರಾ ಮುಂತಾದ ಪುಣ್ಯತಮ ನದಿಗಳಿಂದ ಕೂಡಿದ ಈ ಭೂಮಿಯು ವಿಂದ್ಯ, ಸಹ್ಯಾದ್ರಿ, ಹೇಮಕೂಟ, ಮಲಯ, ಶ್ರೀಶೈಲ, ಕಿಷ್ಕಿಂದ, ಋಷ್ಯಮುಖ ಮೊದಲಾದ ಪರ್ವತಗಳ ಅಧಿಷ್ಠಿತ ತಾಣವಾಗಿತ್ತು. ಇಲ್ಲಿನ ವನಗಳು ಸೌಂದರ್ಯದಿಂದ ಕೂಡಿದ್ದು, ಸೂರ್ಯನ ಕಿರಣಗಳು ಭೂಮಿಯನ್ನು ಸ್ಪರ್ಶಿಸಲಾರದಷ್ಟು ದಟ್ಟವಾಗಿದ್ದವು. ಇಲ್ಲಿನ ಜಲಪಾತದ ನೀರು ಅಮೃತಕ್ಕೆ ಸಮಾನವಾಗಿತ್ತು.

(ಇಲ್ಲಿಯ) ಕರ್ನಾಟಕದ ಜನರು ಸಕಲ ವೇದ, ಸ್ಮೃತಿ, ಪುರಾಣ, ಇತಿಹಾಸ ವಿಷಯಗಳನ್ನು ಅಧ್ಯಯನ ಮಾಡಿದ್ದಲ್ಲದೆ ನಿತ್ಯ ನೈಮಿತ್ತಿಕ ಕಾರ್ಯಗಳನ್ನು ಮಾಡುತ್ತಿದ್ದರು. ದೇವತೆಗಳಿಗೆ ಹವಿಸ್ಸನ್ನು ಅರ್ಪಿಸುವುದಕ್ಕಾಗಿ ಯಾಗಗಳನ್ನು ಮಾಡುತ್ತಿದ್ದರು. ಶರಣಾಗತಿಯನ್ನು ಬಯಸಿ ಬಂದವರನ್ನು ರಕ್ಷಿಸುವಂತಹ ಕ್ಷತ್ರಿಯರಿದ್ದರು. ವೈಶ್ಯರು ವ್ಯಾಪಾರವನ್ನು ಮಾಡುತ್ತಿದ್ದರು. ಇವರು ವ್ಯಾಪಾರ ಮಾಡುವಾಗ ಸುಳ್ಳನ್ನು ಹೇಳದೆ ಸತ್ಯದಿಂದ ವ್ಯಾಪಾರ ಮಾಡುತ್ತಿದ್ದರು. ಇದರಿಂದ ಅಲ್ಲಿಯ ವೈಶ್ಯರು ಧನಿಕರಾಗಿದ್ದರು. ಈ ಮೂರು ವರ್ಣದ ಸೇವೆಗಳನ್ನು ಮಾಡುತ್ತಿದ್ದವರು ಕೂಲಿಗಳಾಗಿದ್ದರು. ಎಲ್ಲ ಜನರು ಪುಣ್ಯತಮವಾದ ಕರ್ಮಗಳನ್ನು ಮಾಡುತ್ತಿದ್ದರು. ಸೂಕ್ಷ್ಮಮತಿಗಳಾಗಿದ್ದರು, ಪರೋಪಕಾರಿಗಳಾಗಿದ್ದರೆಂದು ವರ್ಣಿಸಿದ್ದಾನೆ.

ಕಲ್ಯಾಣ ರಾಜಧಾನಿಯು ದೇವತೆಗಳು ವಾಸಿಸುವ ವಿಲಾಸದಂತೆ ಇತ್ತು. ಕುತೂಹಲವನ್ನು ಕೆರಳಿಸುವಂತಹ ಭವನಗಳು ಈ ಕಲ್ಯಾಣ ರಾಜಧಾನಿಯು ಅಮರಾವತಿಯನ್ನು ಮೀರಿಸುವಷ್ಟು ಸೊಬಗನ್ನು ಹೊಂದಿತ್ತು. ಭವನಗಳೆಲ್ಲವೂ ರತ್ನ ಮಾಣಿಕ್ಯಗಳಿಂದ ನಿರ್ಮಿಸಲಾಗಿದ್ದವು. ಕೋಟೆಯ ಸುತ್ತಲೂ ಇರುವ ಜಲದಿಂದ ಆವೃತವಾದ ಕಂದಕಗಳು ಸಮುದ್ರದಷ್ಟು ಆಳವನ್ನು ಹೊಂದಿದ್ದವು. ಕೋಟೆಯ ಗೋಡೆಗಳು ಹಿಮಾಲಯ ಪರ್ವತದಷ್ಟು ಎತ್ತರವಾಗಿದ್ದವೆಂದು ಹೇಳಿದ್ದಾನೆ.

ಕೈಲಾಸ ಪರ್ವತದಷ್ಟು ಸ್ವಚ್ಛದಿಂದ ಕೂಡಿದ್ದ ಇಲ್ಲಿಯ ದೇವಾಲಯಗಳು ಪುಣ್ಯತಮ ಸ್ವರ್ಗಕ್ಕೆ ಸಮವಾಗಿದ್ದು, ತೇಜಸ್ಸಿನಿಂದ ಕೂಡಿದ್ದವು. ಇಂತಹ ದೇವಾಲಯಗಳಲ್ಲಿ ಯಾವಾಗಲೂ ನೃತ್ಯ ಗೀತಾದಿಗಳು ನಡೆಯುತ್ತಿದ್ದವು. ಕರ್ನಾಟಕ, ಆಂಧ್ರ, ಗೂರ್ಜರ, ಮಹಾರಾಷ್ಟ್ರ, ದ್ರಾವಿಡ ಪ್ರದೇಶದಿಂದ ಬಂದಿರುವ ನರ್ತಕಿಯರು ದೇವಕಲೋಕದಿಂದ ಇಳಿದು ಬಂದ ಅಪ್ಸರಾ ಸ್ತ್ರೀಯರೇ ನರ್ತಿಸಲು ಬಂದಿದ್ದಾರೆನ್ನುವಷ್ಟು ಅವರು

ಸುಂದರವಾಗಿದ್ದರು. ಇಲ್ಲಿಯ ವೇಶ್ಯಾಸ್ತ್ರೀಯರು ಸಕಲ ಕಾಮಿನಿ ಜನರ ಹೃದಯವನ್ನು ಅಪಹರಿಸುವಷ್ಟು ಸೌಂದರ್ಯವನ್ನು ಹೊಂದಿದವರಾಗಿದ್ದು, ಸುಮಧುರ ವಸಂತಕಾಲದ ಕೋಗಿಲೆಯ ಕಂಠವನ್ನು ಹೊಂದಿದ್ದರು. ರಂಭೆ, ಊರ್ವಶಿ, ಮೇನಕೆಯರು ಇವರ ಮುಂದೆ ನಾಚಿಹೋಗುವಷ್ಟು ಈ ಸ್ತ್ರೀಯರು ಸುಂದರವಾಗಿದ್ದರು ಎಂದು ತಿಳಿಸುತ್ತಾನೆ.

ಅಹವಮಲ್ಲ ಸೋಮೇಶ್ವರನ ಗುಣಗಳನ್ನು ವರ್ಣಿಸಿದ ಮೇಲೆ ಅತನ ಪೂರ್ವ ವಂಶಾವಳಿಯನ್ನು ಇಲ್ಲಿ ಕೊಡಲಾಗಿದೆ. ಅಹವಮಲ್ಲನ ವಂಶದಲ್ಲಿ ಬುದ್ಧ, ಪುರೂವರ, ಕ್ಷೇಮಕರರಂಥ ಅರಸರು ಆಗಿ ಹೋಗಿದ್ದಾರೆ. ಇವರ ನಂತರ ೫೯ ಜನರು ಅಯೋಧ್ಯೆಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳಿದರು. ಈ ವಂಶದಲ್ಲಿ ಶ್ರೇಷ್ಠವ್ಯಕ್ತಿ ಸತ್ಯಾಶ್ರಯ. ಈತನು 'ಚಾಳುಕ್ಯ'ವೆಂಬ ಬೆಟ್ಟದ ಮೇಲೆ ನಿಂತು ಶಿವನಿಂದ ವರವನ್ನು ಪಡೆದುಕೊಳ್ಳುತ್ತಾನೆ. ಆದ್ದರಿಂದ ಈ ವಂಶದವರಿಗೆ 'ಚಾಳುಕ್ಯ'ರೆಂದು ಹೆಸರು. ಈ ಸತ್ಯಾಶ್ರಯನ ರಾಜಚಿಹ್ನೆ ಮತ್ತು ಪ್ರಶಸ್ತಿಗಳನ್ನೇ ಮುಂದೆ ಬಂದ ಅರಸರುಗಳು ಇಟ್ಟುಕೊಂಡಿದ್ದಾರೆ. ಇಷ್ಟು ಹೇಳಿದ ಮೇಲೆ ದೀರ್ಘವಾದ ವಂಶಾವಳಿಯನ್ನು ಈ ಕೃತಿಯು ಕೊಡುತ್ತದೆ. ಅದನ್ನು ಕ್ರೋಢಿಕರಿಸಿ ಹೀಗೆ ಹೇಳಬಹುದು.

ಜಯಸಿಂಹ→ ರಣರಾಗ→ ಪುಲಕೇಶಿ→ ಕೀರ್ತಿವರ್ಮನ್→ ಮಂಗಳಾರ್ಣವ→ ಸತ್ಯಾಶ್ರಯ(ಹರ್ಷನನ್ನು ಯುದ್ಧದಲ್ಲಿ ಗೆದ್ದವ)→ ಆದಿತ್ಯವರ್ಮನ್→ ವಿಕ್ರಮಾದಿತ್ಯ→ ಯುದ್ಧಮಲ್ಲ→ ವಿಜಯಾದಿತ್ಯ→ ವಿಕ್ರಮಾದಿತ್ಯ→ ಕೀರ್ತಿವರ್ಮ→ ಭೀಮಪರಾಕ್ರಮ→ ಕೀರ್ತಿವರ್ಮ→ ತೈಲಪಮೂರ್ತಿ→ ವಿಕ್ರಮಾದಿತ್ಯ→ ಭೀಮದೇವ→ ಅಯ್ಯಣ→ ವಿಕ್ರಮಾದಿತ್ಯ(+ ಚೇದಿಮಂಡಲದ ಪಾರಿಯಾತ್ರದೇಶದ ಲಕ್ಷ್ಮಣನ ಮಗಳಾದ ಬೊಂಥಾದೇವಿ) ಇವನ ಮಗ ತೈಲಪ. ಈತನಿಗೆ ಸತ್ಯಾಶ್ರಯ, ದಶವರ್ಮ, ಪುಲಕೇಶಿ ಎಂಬ ಮಕ್ಕಳು ಜನಿಸಿದರು. ಸತ್ಯಾಶ್ರಯನ ನಂತರ ಇವನ ತಮ್ಮ ದಶವರ್ಮನ ಐದು ಮಕ್ಕಳಲ್ಲಿ ವಿಕ್ರಮಾದಿತ್ಯನು ಪಟ್ಟಕ್ಕೆ ಬಂದನು. ನಂತರ ಇವನ ಸಹೋದರ ಅಯ್ಯಣ ನಂತರ ಜಯಸಿಂಹ ರಾಜನಾದನು. ತದನಂತರ ಇವನ ಮಗ ಅಹವಮಲ್ಲ ಸಿಂಹಾಸನವನ್ನೇರಿದನು. ಇವನಿಗೆ ಕಲ್ಪವೃಕ್ಷಕ್ಕೆ ಕಲ್ಪಲತೆಯಂತೆ ಮೇರುಪರ್ವತಕ್ಕೆ ರತ್ನದ ಒಡ್ಯಾಣದಂತೆ, ಚಂದ್ರಮೌಳಿಗೆ ಗೌರಿಯಂತೆ, ಗೌರವ ಸ್ನೇಹ ಪಾತ್ರಳಾದ ವಾಚಲದೇವಿ ಎಂಬ ಪಟ್ಟಮಹಿಷಿಯಿದ್ದಳು. ಅಹವಮಲ್ಲನು ವಿಸ್ತಾರವಾದ ಸಾಮ್ರಾಜ್ಯವನ್ನು ಹೊಂದಿದ್ದರೂ ನೆಮ್ಮದಿ ಇರಲಿಲ್ಲ. ಇದಕ್ಕೆ ಕಾರಣ ಅಹವಮಲ್ಲನ ಕನಸಿನಲ್ಲಿ ಅವನ ಪೂರ್ವಜರು ಬಂದು ''ನೀನು ದೇವರಿಗೆ ಋಷಿಗಳಿಗೆ ದಾನದತ್ತಿ ನೀಡಿ ವೇದಗಳನ್ನೋದಿ ಯಜ್ಞಗಳನ್ನು ಮಾಡಿ ದೇವಋಣವನ್ನು ತೀರಿಸಿದ್ದೀಯ ಆದರೆ ನಮ್ಮ ಋಣವನ್ನು ನೀನಿನ್ನೂ ತೀರಿಸಿಲ್ಲ, ತೀರಿಸಲೂ ಆಗುವುದಿಲ್ಲ, ಏಕೆಂದರೆ ನಿನಗೆ ಪುತ್ರರಿಲ್ಲ'' ಎಂದು ಹೇಳುತ್ತಾರೆ.

ಮಹಾದೇವಿಯೂ ಕೂಡ ಮಗುವಿಲ್ಲದೆ ಶೋಭಿಸಲು ಸಾಧ್ಯವಿಲ್ಲವೆಂದು ದುಃಖಿಸುತ್ತಿರುವಾಗ ಅಹವಮಲ್ಲನು ದಾನ ತಪಸ್ಸುಗಳನ್ನು ಮಾಡಿದರೆ ಅಸಾಧ್ಯವಾದದ್ದು ಯಾವುದಿದೆ ವಿಪ್ರರನ್ನು ಸಂತೋಷಗೊಳಿಸಿದರೆ ಅಲಭ್ಯವಾದುದು

ಯಾವುದಿದೆ ಪರಮೇಶ್ವರನನ್ನು ಆರಾಧಿಸಿದರೆ ದುರ್ಲಭವು ಯಾವುದಿದೆ. ಆದ್ದರಿಂದ ನೀನು ದುಃಖಿತಳಾಗಬೇಡ ಎಂದು ಸಮಾಧಾನಪಡಿಸುತ್ತಾನೆ.

ನಂತರ ಚತುಶಾಸ್ತ್ರ ಪಂಡಿತರನ್ನು ಕರೆಯಿಸಿ ತನಗೆ ಪುತ್ರಪ್ರಾಪ್ತಿಯಾಗಲು ಪುರಾಣಧರ್ಮಗಳಲ್ಲಿ ಹೇಳಿದ ವಿಷಯಗಳನ್ನು ತಿಳಿದುಕೊಂಡು ಷೋಡಶ ಮಹಾದಾನಗಳನ್ನು ಮಾಡಲು ತೃಪ್ತಿಗೊಂಡ ಶಿವನು ಕನಸಿನಲ್ಲಿ ಸನ್ಯಾಸಿ ವೇಷದಿಂದ ಬಂದು ''ರಾಜನೇ ನಿನ್ನ ಈ ಆರಾಧನೆ ಸಾಕು ಬೇಗನೇ ನಿನಗೊಬ್ಬ ಪುತ್ರನು ಜನಿಸುತ್ತಾನೆ, ಆದರೆ ನನ್ನನ್ನು ಹೆಮ್ಮೆ ಮತ್ತು ಆಡಂಬರದಿಂದ ಪೂಜಿಸಿದುದರಿಂದ ನಿನಗೆ ಜನಿಸುವ ಪುತ್ರನು ಸಂಪೂರ್ಣವಾಗಿ 'ರಜಸ್' ಮತ್ತು 'ತಮಸ್' ಗುಣಗಳಿಂದ ಕೂಡಿರುತ್ತಾನೆ'' ಎಂದು ಹೇಳುತ್ತಾನೆ. ಈ ಮಾತನ್ನು ಕೇಳಿದ ಅಹವಮಲ್ಲದೇವನು ನಾನು ಮಾಡಿದ ಕಾರ್ಯವು ವ್ಯರ್ಥವಾಯಿತು ಎಂದು ದುಃಖಿತನಾಗಿ ಶ್ರೀಪರ್ವತಕ್ಕೆ ಹೋಗಿ ತುಂಗಭದ್ರೆಯಲ್ಲಿ ಮಿಂದು ಬ್ರಹ್ಮೇಶ್ವರನನ್ನು ಪೂಜಿಸಿ ಮಲ್ಲಿಕಾರ್ಜುನನ ದರ್ಶನವನ್ನು ಪಡೆದು ಕಠಿಣ ತಪಸ್ಸನ್ನಾಚರಿಸುತ್ತಾನೆ. ಇದರಿಂದ ಸಂಪ್ರೀತನಾದ ಶಿವನು ''ನಿನ್ನ ಮನೆಯಲ್ಲಿ ಹುಟ್ಟಲು ನಾನು ನಾರಾಯಣನನ್ನು ಕೇಳಿಕೊಂಡಿದ್ದೇನೆ'' ಎಂದು ತಿಳಿಸುತ್ತಾನೆ. ಇಂಥ ಪವಿತ್ರ ವರವನ್ನು ಪಡೆದರೂ ಸಂತುಷ್ಟನಾಗದೇ ಮತ್ತೊಬ್ಬ ಮಗನ ಸಲುವಾಗಿ ಪ್ರಾರ್ಥಿಸುತ್ತಾನೆ. ಇದರಿಂದ ಕುಪಿತನಾದ ಶಿವನು ''ಓ ರಾಜ ಅತಿಯಾಸೆ ಗತಿಗೇಡು ಶ್ರೇಷ್ಟವಾದ ವರವನ್ನು ಪಡೆದುಕೊಂಡಿದ್ದರೂ ನಿನಗೆ ತೃಪ್ತಿಯಿಲ್ಲ, ಆದುದರಿಂದ ನಿನಗೆ ಮೂರನೆಯವನಾಗಿ ಒಬ್ಬ ದುಷ್ಟ ಮಗನು ಜನಿಸುತ್ತಾನೆ, ನೀನು ಮರಳಿ ಹೋಗು'' ಎಂದು ತಿಳಿಸುತ್ತಾನೆ. ನಂತರ ಅಹವಮಲ್ಲನು ಶ್ರೀಪರ್ವತ ಶಿಖರವನ್ನು ಇಳಿದು ತನ್ನ ಗಜ, ಕುದುರೆ, ಪದಾತಿದಳದೊಂದಿಗೆ ಮರಳಿ ಪಟ್ಟಣಕ್ಕೆ ಬಂದನು. ಆಗ ಎಲ್ಲಾ ಸ್ತ್ರೀಯರು ನೃತ್ಯ ವಿನೋದಗಳ ಮೂಲಕ ಕಲ್ಯಾಣಪುರಿಯಲ್ಲಿ ಇವನನ್ನು ಸ್ವಾಗತಿಸಿದರು.

ಕೆಲವು ದಿನಗಳು ಕಳೆಯಲು ರಾಣಿಯು ಗರ್ಭಧರಿಸಿದಳು. ಇದರಿಂದ ಅವಳು ಹಲವು ಪದಾರ್ಥಗಳನ್ನು ತಿನ್ನುವ ಬಯಕೆ ವ್ಯಕ್ತಪಡಿಸಿದಳು. ಪಾರಿವಾಳ, ಶುಕ ಪಕ್ಷಿಗಳನ್ನು ಪ್ರೀತಿಸಲಿಲ್ಲ ಉತ್ತಮವಾದ ಅರಮನೆಯನ್ನು ಬಿಟ್ಟು ಕತ್ತಲಿನ ಕೋಣೆಯಲ್ಲಿ ವಾಸಿಸುವ ಇಚ್ಛೆಯನ್ನು ಹೊಂದಿದಳು. ಕ್ರೂರಮೃಗವು ತನ್ನ ಹರಿತವಾದ ಹಲ್ಲಿನಿಂದ ಕಚ್ಚಿದ ಕೋಳಿ ಹಂದಿ ಇವುಗಳನ್ನು ನೋಡುತ್ತಿದ್ದಳು. ತನ್ನ ಸಖಿಯರಿಗೆ ಕಣ್ಣುಮುಚ್ಚಿ ಕೆಲವು ಪ್ರದೇಶಗಳಿಗೆ ಹೋಗಲು ತಿಳಿಸಿ, ಅವರು ಬಿದ್ದನಂತರ ಅವಳು ಸಂತೋಷ ಹೊಂದುತ್ತಿದ್ದಳು.

ದುಷ್ಟಗ್ರಹಗಳು ಉಗ್ರವಾಗಿರುವ ಸಮಯದಲ್ಲಿ ಶುಭಗ್ರಹಗಳು ನೀಚಸ್ಥಾನವನ್ನು ಹೊಂದಿದಾಗ ದೇವಿಯು ಸೋಮದೇವನಿಗೆ ಜನ್ಮವನ್ನು ನೀಡಿದಳು.

ಸೊಮದೇವನು ಬಾಲ್ಯದಲ್ಲಿಯೇ ಸಾಧುಗಳನ್ನು ಪೀಡಿಸಲು ಪ್ರಾರಂಭಿಸಿದನು, ದುಷ್ಟಹುಡುಗರ ಸಹವಾಸವನ್ನು ಬೆಳೆಸಿದನು. ಬ್ರಾಹ್ಮಣರನ್ನು ಭಕ್ತಿಯಿಂದ ನಮಸ್ಕರಿಸಲಿಲ್ಲ. ಸಾಧುಪಕ್ಷಿಗಳನ್ನು ಕೊಲ್ಲಹತ್ತಿದನು.

ಸತ್ಪುರುಷರ ಚಿತ್ರಗಳನ್ನು ಕಂಡರೆ ಅಣಕಿಸುತ್ತಿದ್ದನು ಇಂತಹ ಮಗನಿಂದ ಆಹವಮಲ್ಲನು ಚಿಂತಾಕ್ರಾಂತನಾಗಿ ಇನ್ನೊಬ್ಬ ಮಗನು ಎಂದು ಹುಟ್ಟುವನು? ಎಂದು ಕಾಲಕಳೆಯಹತ್ತಿದನು. ಇದಾದ ಕೆಲ ದಿನಗಳ ನಂತರ ಶುಭನಕ್ಷತ್ರ ಶುಭಗ್ರಹಗಳು ಉಚ್ಛಸ್ಥಾನದಲ್ಲಿರುವಾಗ ಸೂರ್ಯೋದಯದ ಸಮಯದಲ್ಲಿ ಕೌಶಲ್ಯಗೆ ರಾಮಚಂದ್ರ ಹುಟ್ಟಿದಂತೆ ಚಾಲುಕ್ಯ ಗೋತ್ರವನ್ನು ಪಾವನಗೊಳಿಸುವಂತಹ ಪುತ್ರನು ಜನಿಸಿದನು. ಮಗು ಹುಟ್ಟಿದ ಸಂತೋಷದಿಂದ ದುಂದುಭಿನಾದವು ಮೊಳಗಿತು. ಸ್ತ್ರೀಯರು ಆನಂದದಿಂದ ತೇಲಾಡಿದರು, ಕೆಲವರು ಮಾಲೆಯಿಂದ ಹೊಡೆಯುತ್ತಿದ್ದರೆ ಕೆಲವರು ಆಲಂಗಿಸುತ್ತಿದ್ದರು. ಹೀಗೆ ಆಹವಮಲ್ಲನನ್ನು ಭೇಡಿಸುತ್ತಾ ಅಂತಃಪುರವನ್ನು ಪ್ರವೇಶಿಸದರು ನಂತರ ಜೋತಿಷಿಗಳು ''ನವಗ್ರಹಗಳು ಒಳ್ಳೆಯ ಸ್ಥಾನದಲ್ಲಿವೆ, ಸಪ್ತಸಾಗರಗಳಿಂದ ಆವೃತವಾದ ಈ ಭೂಮಿಯನ್ನು ಪಾಲನೆ ಮಾಡುತ್ತಾನೆ. ಅಷ್ಟದಿಕ್ಪಾಲಕರನ್ನು ತನ್ನ ವಶಮಾಡಿಕೊಳ್ಳುತ್ತಾನೆ. ಕೃತಯುಗದ ಜೀವನವನ್ನು ಪುನರುಜ್ಜೀವನಗೊಳಿಸುತ್ತಾನೆ. ಆದ್ದರಿಂದ ಈತ ಹುಟ್ಟಿದ ಘಳಿಗೆ ಉತ್ತಮವಾಗಿದೆ'' ಎಂದು ನುಡಿಯುತ್ತಾರೆ.

ಅನಂತರ ಜಾತಕ ಕರ್ಮಸಂಸ್ಕಾರ ಮಾಡಿ ಧನಾದಿಗಳನ್ನು ದಾನ ಮಾಡುತ್ತಾರೆ. ಹದಿಮೂರನೆಯ ದಿನ ನಾಮಸಂಸ್ಕಾರ ಕಾರ್ಯಕ್ರಮ ನಡೆಯುತ್ತದೆ. ಹೀಗೆ ವಿವಿಧ ಸಂಸ್ಕಾರಗಳನ್ನು ಆಚರಿಸುತ್ತ ಆರು ತಿಂಗಳ ನಂತರ ಒಂದು ಶುಭಮಹೂರ್ತದಲ್ಲಿ ಬ್ರಾಹ್ಮಣರೊಂದಿಗೆ ವೇದಾದಿಗಳನ್ನು ಪಠಿಸುವುದರಿಮದ ಮೂಲಕ ''ಅನ್ನಪ್ರಾಶನ'' ಸಂಸ್ಕಾರವನ್ನು ಮಾಡಿದ ಎಲ್ಲಾ ಜನರ ಮನೋಧರ್ಮವನ್ನು ಈಡೇರಿಸುತ್ತೇನೆ ಎಂಬಂತೆ ಅಸ್ಪಷ್ಟವಾದ (ಜೋಮು) ಮಾತುಗಳನ್ನು ಆಡಲು ಪ್ರಾರಂಭಿಸಿದ.

ಹನ್ನೊಂದನೆಯ ವಯಸ್ಸಿನಲ್ಲಿ ವಶಿಷ್ಠಗೋತ್ರ ಸಂಭೂತರಾದ ''ರುದ್ರಾಮಿಶ್ರಾ'' ಎಂಬ ಪುರೋಹಿತರಿಂದ ಕುಲದೇವತಾ ನಮಸ್ಕಾರದ ಮೂಲಕ ಉಪನಯನವನ್ನು ಮಾಡಿಸಿದನು. ಆಮೇಲೆ ಧನುರ್ವಿದ್ಯೆ, ಮಲ್ಲವಿದ್ಯೆ, ಖಡ್ಗವಿದ್ಯೆ ಮೊದಲಾವುಗಳನ್ನು ಕಲಿಯುವುದಕ್ಕಾಗಿ ಗುರುಗಳ ಬಳಿ ವಿಕ್ರಮಾದಿತ್ಯನನ್ನು ಕಳುಹಿಸಲಾಯಿತು. ಎಲ್ಲಾ ನದಿಗಳು ಸಮುದ್ರವನ್ನು ಸೇರುವಂತೆ ಎಲ್ಲಾ ಐಶ್ವರ್ಯವೂ ರಾಜಬೊಕ್ಕಸ ಸೇರುವಂತೆ ಎಲ್ಲಾ ಅಪ್ಸರೆಯರೂ ಇಂದ್ರನನ್ನು ಸೇರುವಂತೆ ಎಲ್ಲಾ ವಿದ್ಯೆಗಳು ಅವನನ್ನು ಕೂಡಿಕೊಂಡವು.

ವಿಕ್ರಮಾದಿತ್ಯನಿಗೆ ಹದಿನಾರು ವರ್ಷಗಳು ತುಂಬಿದಾಗ ಯುವರಾಜ ಅಭಿಷೇಕವನ್ನು ಮಾಡಿಸಿ, ಶತ್ರುಗಳನ್ನು ಸಂಹರಿಸಲು, ಲಕ್ಷ್ಮಿಯನ್ನು ಬೆಳೆಸಲು, ಪರರಾಜ್ಯಗಳನ್ನು ವಶಪಡಿಸಿಕೊಳ್ಳಲು, ಜಗದ ದಾರಿದ್ರ್ಯವನ್ನು ಹೋಗಲಾಡಿಸಲು, ತನ್ನ ಮಗನ ಶೌರ್ಯ, ಸಾಹಸವನ್ನು ತಿಳಿದುಕೊಳ್ಳಲು ಮಂತ್ರಿಗಳ ಜೊತೆಗೆ ಸಮಾಲೋಚನೆ ಮಾಡಿ ದಿಗ್ವಿಜಯಕ್ಕೆ ಕಳುಹಿಸಬೇಕೆಂದು ಆಹವಮಲ್ಲನು ನಿಶ್ಚಯಿಸಿದನೆಂದು ತಿಳಿಸುತ್ತಾನೆ.

ಹೀಗೆ 'ವಿಕ್ರಮಾಂಕಾಭ್ಯುದಯಂ'ದಲ್ಲಿ ಚಾಲುಕ್ಯರ ಪೂರ್ವವಂಶಾವಳಿ ಮತ್ತು ಮೂರನೆಯ ಸೋಮೇಶ್ವರನ ತಂದೆಯಾದ ವಿಕ್ರಮಾದಿತ್ಯನ ಜನನ ಬಾಲ್ಯದ ವಿವರವು ಬಹಳ ಸುಂದರವಾಗಿ ಮೂಡಿಬಂದಿದೆ.

ಬಿಲ್ಹಣನ ವಿಕ್ರಮಾಂಕದೇವ ಚರಿತಂ :

ಹನ್ನೊಂದನೆಯ ಶತಮಾನದಲ್ಲಿದ್ದ ಕವಿ ಬಿಲ್ಹಣ ಅವನೊಬ್ಬ ಸರಸಕವಿಯೆಂದು ಪ್ರಸಿದ್ಧನಾಗಿದ್ದಾನೆ. ಕಾಶ್ಮೀರದಲ್ಲಿ ಹುಟ್ಟಿದ ಈತ ನಂತರ ದೇಶಾಟನೆ ಮಾಡುತ್ತ ಮಧುರೆ, ಪ್ರಯಾಗ, ಕನೌಜ, ಸೋಮನಾಥ, ರಾಮೇಶ್ವರ, ಕಾಶಿ ಮೊದಲಾದ ಪ್ರದೇಶಗಳಲ್ಲಿ ಸುತ್ತಾಡಿ ಕೊನೆಗೆ ಕರ್ನಾಟಕಕ್ಕೆ ಬಂದು ಕಲ್ಯಾಣದಲ್ಲಿ ಚಾಲುಕ್ಯ ವಂಶದ ದೊರೆಯಾಗಿದ್ದ ಆರನೆಯ ವಿಕ್ರಮಾದಿತ್ಯನ ಆಸ್ಥಾನದಲ್ಲಿ (ಕ್ರಿ.ಶ. ೧೦೭೬-೧೧೨೭)ನೆಲೆಸಿದ್ದನು. ಆರನೆಯ ವಿಕ್ರಮಾದಿತ್ಯನು ಇವನ ಪಾಂಡಿತ್ಯ ಮೆಚ್ಚಿ 'ವಿದ್ಯಾಪತಿ' ಎಂಬ ಬಿರುದನ್ನು ನೀಡಿದನು.

ಬಿಲ್ಹಣನ ಪ್ರಸಿದ್ಧವಾದ ಕೃತಿ 'ವಿಕ್ರಮಾಂಕದೇವ ಚರಿತಂ'ದಲ್ಲಿ ಚಾಳುಕ್ಯವಂಶದ ಆರಂಭದ ಬಗೆಗೆ ಇರುವ ಪೌರಾಣಿಕ ಅಂಶಗಳನ್ನು ಹೇಳಿದ್ದಾನೆ. ಅದಕ್ಕೆ ತೈಲಪನ ವಿಚಾರಗಳೊಂದಿಗೆ ಚಾರಿತ್ರಿಕತೆ ಲಭಿಸುತ್ತದೆ. 'ಕರ್ಣಸುಂದರಿ' ಎಂಬುದು ಅವನ ಇನ್ನೊಂದು ಕೃತಿ. ಇದೊಂದು ಅರೆ ಐತಾಸಿಕ ನಾಟಕ. ಮತ್ತೊಂದು ಕೃತಿ 'ಚೌರಪಂಚಾಶಿಕಾ'ವನ್ನು ಬಿಲ್ಹಣನೇ ರಚಿಸಿದನೆಂದು ಹೇಳಲಾಗುತ್ತದೆ.

'ವಿಕ್ರಮಾಂಕದೇವ ಚರಿತಂ' ಹದಿನೆಂಟು ಅಧ್ಯಾಯಗಳ ಕೃತಿ. ಅದರಲ್ಲಿ ಪ್ರಧಾನವಾಗಿ ವರ್ಣಿತವಾಗಿರುವ ವಸ್ತುಗಳೆಂದರೆ ವಿವಾಹ ಹಾಗೂ ಯುದ್ಧ. ಇದನ್ನು ಬಿಲ್ಹಣನು ಅತ್ಯಂತ ಕಾವ್ಯಮಯವಾಗಿ ವರ್ಣಿಸಿದ್ದಾರೆ. ಪ್ರಾರಂಭದಲ್ಲಿ ವಿಷ್ಣು, ಶಿವ, ಬೃಹಸ್ಪತಿಯನ್ನು ನೆನೆಯುತ್ತ ಕಥಾರಂಭವನ್ನು ಮಾಡುತ್ತಾನೆ. ಭೂಲೋಕದಲ್ಲಿ ಆಗುತ್ತಿರುವ ಅನ್ಯಾಯವನ್ನು ಬ್ರಹ್ಮದೇವನಲ್ಲಿ ವಿನಂತಿಸಿಕೊಂಡಾಗ ಬ್ರಹ್ಮದೇವನ ಆದೇಶದಂತೆ ಒಬ್ಬ ವೀರಪುರುಷನು ಜನಿಸಿದನು. ಚಾಲುಕ್ಯ ವಂಶದ ಪ್ರಥಮ ಪುರುಷನೂ, ಸ್ವಾಭಿಮಾನಿಯೂ ಆದ ಆತನು ವಿಪಕ್ಷವೀರರ ಅದ್ಭುತ ಕೀರ್ತಿಯನ್ನು ಅಪಹರಿಸಿ 'ಹಾರೀತ'ನೆನಿಸಿದನು. ಶತ್ರುಗಳ ಮಾನವನ್ನು ವ್ಯಯಮಾಡಿ 'ಮಾನವ್ಯ' ಎಂಬ ಅನ್ವರ್ಥವಾದ ಹೆಸರನ್ನು ಗಳಿಸಿದನು. ಮತ್ತೆ ಅದೇ ಚಾಲುಕ್ಯ ವಂಶದಲ್ಲಿ ವಿಶೇಷ ಪ್ರತಾಪಶಾಲಿಯೆನಿಸಿದ ತೈಲಪನೆಂಬುವನು ಜನಿಸಿದನು. ಅವನು ರಣರಂಗದಲ್ಲಿ ಶತ್ರುಗಳನ್ನು ಸಂಹರಿಸಿ ಅವರ ವೀರರೂಪವನ್ನು ಕ್ಷಣಮಾತ್ರದಲ್ಲಿ ಬತ್ತಿಸಿ ರಕ್ತದ ಕೆಸರು ಮಾತ್ರ ಉಳಿಯುವಂತೆ ಮಾಡಿದನು. ಹೀಗೆ ಆತನು ಚಾಲುಕ್ಯವಂಶದಲ್ಲಿ ವಿಶಿಷ್ಟನೆನಿಸಿ ಮೆರೆದನು.

ತೈಲಪನ ತರುವಾಯ ಸತ್ಯಾಶ್ರಯನೆಂಬುವನು ಪಟ್ಟಕ್ಕೆ ಬಂದನು. ಚಾಲುಕ್ಯ ವಂಶದ ನಿರ್ಮಲ ಮುಕ್ತಾಫಲದ ಶೋಭೆಯಂತೆ ಅವನು ಬೆಳಗುತ್ತಿದ್ದನು. ಆತನು ಹುಬ್ಬುಗಂಟಿಕ್ಕಿದನೆಂದರೆ ಶತ್ರುಗಳ ಕಪಾಲಗಳು ಪುಡಿಪುಡಿಯಾಗಿ

ಚೆಲ್ಲಿ ಹೋಗುತ್ತಿದ್ದವು. ಅವನ ಖಡ್ಗದಂತೆ ಭ್ರುಕುಟಿಯ ಆಟೋಪ ಮೆರೆಯುತ್ತಿತ್ತು. ಖಡ್ಗವಂತೂ ಹರಿತವಾಗಿ ಶತ್ರುಗಳ ಕಪಾಲಗಳನ್ನು ನುಚ್ಚುನೂರು ಮಾಡಿಬಿಡುತ್ತಿತ್ತು. ರಾತ್ರಿಕಾಲದಲ್ಲಿ ಏನನ್ನಾದರೂ ಹುಡುಕಬೇಕಿದ್ದರೆ ದೀಪದ ಅಥವಾ ಬೆಳಕಿನ ಸಹಕಾರ ಬೇಕಾಗುವುದು ಸಹಜ ತಾನೆ ! ಯುದ್ಧಭೂಮಿಯಲ್ಲಿ ರಾತ್ರಿ ಕಾಲದಲ್ಲಿ ಶತ್ರುರಾಜನನ್ನು ಗುರುತಿಸಲು ಬೆಳಕಿಗೆ ಆತನಿಗೇನು ಕಷ್ಟವಾಗುತ್ತಿರಲಿಲ್ಲ ! ಶತ್ರುರಾಜನು ಧರಿಸಿದ ಕಿರೀಟಗಳಲ್ಲಿರುವ ರತ್ನಗಳ ಪ್ರಕಾಶದಿಂದ ಅವರನ್ನು ಅವನ ಬಾಣಗಳು ಗುರುತು ಹಚ್ಚುತ್ತಿದ್ದವು. ಈ ರೀತಿ ಅವರನ್ನು ಬಾಣ ಪ್ರಯೋಗದಿಂದ ಅವನು ಸಂಹರಿಸುತ್ತಿದ್ದನು.

ಅನಂತರ ಶ್ರೀ ಜಯಸಿಂಹದೇವನು ಚಾಲುಕ್ಯ ಸಿಂಹಾಸನವನ್ನು ಅಲಂಕರಿಸಿದನು. ಗಜಯುದ್ಧದಲ್ಲಿ ಆತನನ್ನು ಮೀರಿಸುವವರಿಲ್ಲ. ಆನೆಗಳ ಯುದ್ಧದಲ್ಲಿ ಲಭಿಸಿದ ಮುತ್ತುಗಳು ಆತನ ಕೀರ್ತಿಯಂತೆ ಬೆಳಗಿದವು. ಅಥವಾ ಆತನ ಕೀರ್ತಿ ಮುತ್ತಿನಂತೆ ಬೆಳಗಿತು. ಅವನ ಕೀರ್ತಿಸ್ವರ್ಗವನ್ನು ಏರಿಬಿಟ್ಟಿತು. ಅವನ ಪ್ರತಾಪವು ಕೂಡ ಅಷ್ಟೇ ಪ್ರಖರವಾಗಿತ್ತು.

ಜಯಸಿಂಹದೇವನ ತರುವಾಯ ಅಹವಮಲ್ಲ ದೇವನೆಂಬುವನು ಪಟ್ಟವನ್ನೇರಿದನು. ಮೂರು ಲೋಕಗಳಲ್ಲಿಯೂ ಅತ್ಯಧಿಕ ಬಲಶಾಲಿಯಾಗಿ ಮೆರೆಯುತ್ತಿದ್ದುದರಿಂದ ಅವನನ್ನು ತ್ರೈಲೋಕ್ಯಮಲ್ಲ ಎಂಬ ಅನ್ವರ್ಥನಾಮದಿಂದ ಕರೆಯುತ್ತಿದ್ದರು. ರಾಜಲಕ್ಷ್ಮೀಯು ಆತನ ಸೇವಕಿಯಾಗಿದ್ದಳು. ಪ್ರವಾಹಶೀಲವಾದ ನೀರಿನಿಂದ ಜನಿಸುವ ಜಲಮಾನುಷಿಯು ನೀರನ್ನು ಎಂದೆಂದೂ ಬಿಟ್ಟಿರುವುದಿಲ್ಲ ತಾನೇ ! ಅಂತೆಯೇ ಲಕ್ಷ್ಮಿಯು ಅವನ ಮಂಡರಾಗ್ರಹವನ್ನು ಬಿಟ್ಟಿರುತ್ತಿರಲಿಲ್ಲ. ಮೂರು ಲೋಕಗಳಲ್ಲಿಯೂ ಅಹವಮಲ್ಲದೇವನು ವೀರನಾಗಿ ಮೆರೆಯುತ್ತಿದ್ದನು ಹಾಗೂ ಲಕ್ಷ್ಮೀಯು ಸದಾ ಅವನಲ್ಲಿ ನೆಲೆಗೊಂಡಿದ್ದಳು ಎಂದು ಮೊದಲ ಅಧ್ಯಾಯದಲ್ಲಿ ತಿಳಿಸಿದ್ದಾನೆ.

ಎರಡನೆಯ ಅಧ್ಯಾಯದಲ್ಲಿ ಕಲ್ಯಾಣನಗರಿಯ ಬಗೆಗೆ ವರ್ಣಿಸುತ್ತ ಕಲ್ಯಾಣನಗರಿಯು ಸಾಲುಸಾಲಾದ ಎತ್ತರದ ಸೌಧಗಳಲ್ಲಿ ಬೆಳಗುತ್ತಿದ್ದ ದೀಪಗಳಿಂದ ಹೊರಡುತ್ತಿದ್ದ ಹೊಗೆಯಿಂದ ಆಗಸವು ಕಾಡಿಗೆಯಂತೆ ಕಾಣಿಸುತ್ತಿತ್ತು. ಅಲ್ಲಿರುವ ರಮಣೀಯರ ಮುಖಗಳಿಂದ ಹೊರಡುವ ಗಾಳಿ ಚಂದನ ಲೇಪದಿಂದ ಪಾಂಡುರವರ್ಣ ಹೊಂದಿರುವ ಅವರ ಕುಚಗಳಿಂದಲೇ ತಡೆಯಲ್ಪಡುತ್ತಿದ್ದವು. ಅಂಥ ಮುಖಾನಿಲಗಳು ಪರಿಮಳ ಮತ್ತು ಶೈತ್ಯದಿಂದ ಅವರ ಪತಿಯರಿಗೆ ವಿರಹವ್ಯಥೆಯನ್ನುಂಟು ಮಾಡಬಲ್ಲವುಗಳಾಗಿದ್ದವು. ಸ್ಫಟಿಕಮಣಿಮಯ ಶಿಲಾನಿರ್ಮಿತವಾದ ಬೃಹತ್ ಸಾಲು, ಉನ್ನತ ಶ್ವೇತಗುಂಬಜಗಳಿಂದ ಶೋಭಾಯಮಾನವಾಗಿ ಸುಗಂಧಭರಿತ ದಂತ ಮಜ್ಜನದಿಂದ ದಂತಪಂಕ್ತಿಯನ್ನು ಶುಚಿಗೊಳಿಸಿ ಆಕಾಶರೂಪವಾದ ಕನ್ನಡಿಯಲ್ಲಿ ನೋಡುತ್ತಿರುವಂತೆ ಕಲ್ಯಾಣ ನಗರಿಯು ಕಾಣುತ್ತಿತ್ತು.

ಪುತ್ರಶೋಕದಲ್ಲಿ ಅಹಮಲ್ಲದೇವನು ರಾಣಿಯ ಒಪ್ಪಿಗೆಯನ್ನು ಪಡೆದು ಸಮಸ್ತ ರಾಜ್ಯಭಾರತದ ಚಿಂತೆಯನ್ನು ಮಂತ್ರಿಗಳ ಮೇಲೆ ಹೊರಿಸಿ ಪುತ್ರಪ್ರಾಪ್ತಿ ರೂಪವಾದ ಸಿದ್ಧಿಗಾಗಿ ವಿಶೇಷವಾದ ಅನುಷ್ಠಾನದಲ್ಲಿ ತತ್ವರನಾದನು. ಇವನ ಭಕ್ತಿಗೆ ಮೆಚ್ಚಿ ಶಿವನು ನಿನಗೆ ಮೂವರು ಪುತ್ರರು ಜನಿಸುತ್ತಾರೆ. ಅವರಲ್ಲಿ ಮಧ್ಯಮ ಪುತ್ರನು ವಿಶೇಷ ಕೀರ್ತಿ, ಪ್ರತಿಷ್ಠೆಯನ್ನು ಪಡೆಯಬಲ್ಲನೆಂದು ತಿಳಿಸುತ್ತಾನೆ.

ಪುತ್ರೋತ್ಸವದಲ್ಲಿ ಅಹಮಲ್ಲದೇವನಿಗೆ ಪತ್ನಿಯಲ್ಲಿ ಮನೋಹರನಾದ ಮಗನು ಶುಭ ಮುಹೂರ್ತದಲ್ಲಿ ಜನಿಸಿದನು. ಆತನಿಗೆ ''ಸೋಮ'' ಎಂಬ ನಾಮಕರಣ ಮಾಡಿನು. ನಂತರ ರಾಜನು ಅನನ್ಯಸಾಮಾನ್ಯನಾದ ಪುತ್ರನನ್ನು ಪಡೆಯುವುದಾಗಿ ಕೇಳಿದ ಆಕಾಶವಾಣಿಯನ್ನು ಸ್ಮರಿಸುತ್ತ ಪುತ್ರೋತ್ಪತ್ತಿವಾರ್ತೆಗಾಗಿ ಇದಿರುನೋಡತೊಡಗಿದನು ಎಂದು ವಿಕ್ರಮಾದಿತ್ಯನ ಜನನವನ್ನು ಬಹುಸುಂದರವಾಗಿ ಈ ಅಧ್ಯಾಯದಲ್ಲಿ ವರ್ಣಿಸಿದ್ದಾನೆ.

ಮೂರನೆಯ ಅಧ್ಯಾಯದಲ್ಲಿ ವಿಕ್ರಮಾದಿತ್ಯನ ಬಾಲಲೀಲೆಗಳ ಬಗೆಗೆ ಹೇಳುತ್ತ ನಂತರ ಅವನು ಸಮಸ್ತ ವಿದ್ಯೆಗಳಲ್ಲಿಯೂ ಹೆಚ್ಚಿನ ಪ್ರತಿಷ್ಠೆಯನ್ನು ಹೊಂದಿದನು. ಅರ್ಜುನನಿಗಿಂತಲೂ ಮಿಗಿಲಾಗಿ ಬಾಣ ಸಂಧಾನದಲ್ಲಿ ಆತನು ಕುಶಲನಾಗಿದ್ದನು. ಇವನು ಸಕಲ ವಿದ್ಯಾಪಾರಂಗತನಾದುದನ್ನು ನೋಡಿ ಅಹಮಲ್ಲನು ಇವನಿಗೆ ಯುವರಾಜ ಪಟ್ಟಕಟ್ಟಬೇಕೆಂದು ನಿಶ್ಚಯಿಸಿ ಆತನನ್ನು ಕೇಳಿದಾಗ ಉದಾರ ಶೀಲನಾದ ವಿಕ್ರಮಾಂಕನು ನಾನಾ ಬಗೆಯ ಮಾತುಗಳಿಂದ ತಂದೆಗೆ ಕೌತುಕವನ್ನುಂಟು ಮಾಡಿ ಜೇಷ್ಠನಾದ ಸೋಮದೇವನನ್ನು ಯುವರಾಜ ಪಟ್ಟಕ್ಕೆ ಏರುವಂತೆ ಮಾಡಿ ಚೋಳರಾಜನ ಮೇಲೆ ಯುದ್ಧಕ್ಕೆ ಹೋದನೆಂದು ಬಿಲ್ಹಣನು ತಿಳಿಸಿದ್ದಾನೆ.

ನಾಲ್ಕನೆಯ ಅಧ್ಯಾಯದಲ್ಲಿ ವಿಕ್ರಮಾದಿತ್ಯನ ಗಜಬಲ ಮತ್ತು ಅಶ್ವಬಲದ ಬಗ್ಗೆ ಹೇಳುತ್ತ ಅವನು ಪಾಂಡ್ಯರಾಜನನ್ನು, ಚೋಳ ರಾಜನನ್ನು ಸಿಂಹಳವನ್ನು ಆಕ್ರಮಿಸಿ ದ್ವಿಗ್ವಿಜಯವನ್ನು ಸಾಧಿಸಿದನೆಂದು ನಂತರ ಅಹವಮಲ್ಲನು ತುಂಗಭದ್ರಾನದಿಯಲ್ಲಿ ಪ್ರಾಣತ್ಯಾಗ ಮಾಡಿದನೆಂದು ನಂತರ ಸೋಮದೇವನು ಸಿಂಹಾಸವನ್ನೇರಿ ಪಾಪಕಾರ್ಯಗಳಲ್ಲಿ ತೊಡಗಿದುದನ್ನು ಬಹು ಸುಂದರವಾಗಿ ಈ ಅಧ್ಯಾಯದಲ್ಲಿ ವರ್ಣಿಸಲಾಗಿದೆ.

ಐದನೆಯ ಅಧ್ಯಾಯದಲ್ಲಿ ದುರ್ಮತಿಯಾದ ಅಣ್ಣ ಸೋಮದೇವನು ರಾಜ್ಯಕಂಟಕ ನಿವಾರಣೆಗಾಗಿ ದಾಯಾದಿಯಾದ ತಮ್ಮ ಜಯಸಿಂಹನನ್ನು ಸಂಕಟಕ್ಕೊಳಪಡಿಸಬಹುದು ಎಂಬ ಸಂದೇಹದಿಂದ ವಿಕ್ರಮನು ಆತನನ್ನು ತನ್ನೊಡನೆ ಕರೆದುಕೊಂಡನೆಂದು ನಂತರ ಚೋಳರಾಜನ ದೂತನು ಬಂದು ವಿಕ್ರಮಾದಿತ್ಯನಿಗೆ ಚೋಳರಾಜನು ತನ್ನ ಮಗಳನ್ನು ಕೊಡುವ ಇಂಗಿತವನ್ನು ವ್ಯಕ್ತಪಡಿಸಿದಾಗ ವಿಕ್ರಮಾದಿತ್ಯನು ಒಪ್ಪಿ ಚೋಳಕುಮಾರಿಯನ್ನು ವರಿಸಿದನೆಂದು ಈ ಅಧ್ಯಾಯದಲ್ಲಿ ಹೇಳಲಾಗಿದೆ.

ಆರನೆಯ ಅಧ್ಯಾಯದಲ್ಲಿ ವಿಕ್ರಮಾದಿತ್ಯನು ಚೋಳರಾಜ ಕುಮಾರಿಯನ್ನು ವರಿಸಿ ಆನಂದದಿಂದ ಇರುವಾಗ ಚೋಳರಾಜ್ಯದಲ್ಲಿ ಉಂಟಾದ ಆಂತರಿಕ ಕಲಹದ ದುರುಪಯೋಗವನ್ನು ಪಡೆದುಕೊಂಡು ಸೋಮದೇವನು ವಿಕ್ರಮಾದಿತ್ಯನ ಮೇಲೆಯೇ ಸಂಚನ್ನು ಹೂಡುತ್ತಾನೆ. ನಂತರ ವಿಕ್ರಮಾದಿತ್ಯನು ಸೋಮದೇವನ ಸಂಚನ್ನು ವಿಫಲಗೊಳಿಸಿ ಆತನನ್ನು ಯುದ್ಧದಲ್ಲಿ ಸೋಲಿಸುವುದುರೊಂದಿಗೆ ಈ ಅಧ್ಯಾಯವು ಕೊನೆಗೊಳ್ಳುತ್ತದೆ.

ಏಳನೆಯ ಅಧ್ಯಾಯದಲ್ಲಿ ವಸಂತ ವೈಭವದ ವರ್ಣನೆ ನೀಡಲಾಗಿದೆ. ಎಂಟನೆಯ ಅಧ್ಯಾಯವು ಚಂದ್ರಲೇಖೆ ಅಥವಾ ಚಂದಲಾದೇವಿಯ ವರ್ಣನೆಯನ್ನು ತಿಳಿಸುತ್ತವೆ. ಒಂಬತ್ತನೆಯ ಅಧ್ಯಾಯದಲ್ಲಿ ಚಂದ್ರಲೇಖೆಯ ಸೌಂದರ್ಯವನು ತಿಳಿದ ವಿಕ್ರಮಾದಿತ್ಯ ವಿರಹ ತಾಪದಿಂದ ಮೌನವನ್ನು ವಹಿಸಿದನು. ಹೆಚ್ಚಾಗಿ ಏಕಾಂತವನ್ನೇ ಬಯಸುತ್ತಿದ್ದನು. ಚಂದಲಾ ದೇವಿಯು ಸಹ ವಿರಹವೇದನೆಗೊಳಗಾಗಿ ಬಳಲುತ್ತಿರುತ್ತಾಳೆ. ಇವಳ ತಂದೆಗೆ ಶಿವನು ಸ್ವಪ್ನದಲ್ಲಿ ಒಂದು 'ಸ್ವಯಂವರವನ್ನು ಏರ್ಪಡಿಸು'' ಎಂಬುದಾಗಿ ಅಜ್ಞಾನಿಪಿಸುತ್ತಾನೆ. ಅದರಂತೆ ಸ್ವಯಂವರವನ್ನು ಏರ್ಪಡಿಸಿದಾಗ ಎಲ್ಲ ರಾಜರನ್ನು ತಿರಸ್ಕರಿಸಿ ಚಂದ್ರಲೇಖೆಯು ವಿಕ್ರಮಾದಿತ್ಯನ್ನು ವರಿಸುತ್ತಾಳೆ. ಎಂಬುದರೊಂದಿಗೆ ಈ ಅಧ್ಯಾಯವು ಕೊನೆಗೊಳ್ಳುತ್ತದೆ.

ಹತ್ತು ಹನ್ನೊಂದು ಹನ್ನೆರಡು, ಹದಿಮೂರನೆಯ ಅಧ್ಯಾಯಗಳಲ್ಲಿ ವಿಕ್ರಮಾದಿತ್ಯ ಮತ್ತು ಚಂದ್ರಲೇಖೆಯರ ಮಧುಚಂದ್ರ ಮತ್ತು ಅವರು ಕಳೆದ ಬೇಸಿಗೆ, ಚಳಿಗಾಲ, ಮಳಿಗಾಲದ ವರ್ಣನೆಯನ್ನು ಬಹಳ ಸುಂದರವಾಗಿ ವಿವರಿಸಿದ್ದಾನೆ.

ಹದಿನಾಲ್ಕನೆಯ ಅಧ್ಯಾಯದಲ್ಲಿ ವಿಕ್ರಮಾದಿತ್ಯನ ತಮ್ಮನಾದ ಜಯಸಿಂಹನು ವಿಕ್ರಮಾದಿತ್ಯನ ಅಭ್ಯುದಯವನ್ನು ಸಹಿಸದೆ ಆತನ ವಿರುದ್ಧ ಪಿತೂರಿ ಮಾಡುತ್ತಿರುತ್ತಿರುವುದನ್ನು ಗುಪ್ತಚಾರನು ತಿಳಿಸಿದಾಗ ವಿಕ್ರಮಾದಿತ್ಯನು ತಮ್ಮನ ಅನುಚಿತ ವರ್ತನೆಯಿಂದ ಚಿಂತೆಗೊಳಗಾಗಿ ಜಯಸಿಂಹನು ಆಕ್ರಮ ಮಾಡದಂತೆ ತಡೆಯುವ ಯತ್ನ ನಡೆಸಿದರೂ ಪ್ರಯೋಜನವಾಗಲಿಲ್ಲ. ಹೀಗಾಗಿ ಕೃಷ್ಣಾನದಿಯ ತೀರದಲ್ಲಿ ಜಯಸಿಂಹನನ್ನು ಸಂಧಿಸಿದನೆಂದು ಉಲ್ಲೇಖಿಸಿದ್ದಾನೆ. ಹದಿನೈದನೆಯ ಅಧ್ಯಾಯದಲ್ಲಿ ಇವರಿಬ್ಬರಲ್ಲಿ ನಡೆದ ಸಮರದ ವಿವರಣೆ ಇದೆ.

ಹದಿನಾರನೆಯ ಅಧ್ಯಾಯವು ವಿಕ್ರಮಾದಿತ್ಯನು ವಿಜಯ ಸಾಧಿಸಿ ಬಂದಾಗ ಆತನಿಗೆ ದೊರೆತ ಸ್ವಾಗತವನ್ನು ಆತನ ಬೇಟೆಗಾರಿಗೆಯ ಕೌಶಲ್ಯವನ್ನು ವಿವರಿಸುತ್ತದೆ. ಹೀಗೆ ಬಿಲ್ಹಣನ ವಿಕ್ರಮಾಂಕದೇವ ಚರಿತಂದಲ್ಲಿಯೂ ಸಹ ಚಾಲುಕ್ಯರ ವಂಶಾವಳಿ ಹಾಗೂ ಮೂರನೆಯ ಸೋಮೇಶ್ವರನ ತಂದೆ ಆರನೆಯ ವಿಕ್ರಮಾದಿತ್ಯ ಮತ್ತು ಚಂದಲೆಯರ ವಿವಾಹದ ವರ್ಣನೆ ಅವರ ಮಧುಚಂದ್ರದ ಕುರಿತು ಸವಿಸ್ತಾರವಾಗಿ ಮೂಡಿಬಂದಿದೆ.

ಅಡಿಟಿಪ್ಪಣಿಗಳು :

೧. ವಿದ್ಯಾವಿಹೀನಃ ಪಶುಭಿಃ ಸಮಾನಃ

೨. ಮಾತೇವ ರಕ್ಷತಿ ಪಿತೇವ ಹಿತೇ ನಿಯುಂಕ್ತೇ ಕಾಂತೇವ ಚಾಪಿ ರಮಯತ್ಯಪನೀಯ ಖೇದಂ। ಲಕ್ಷ್ಮೀ ತನೋತಿ ವಿತನೋತಿ ಚ ದಿಕ್ಷು ಕೀರ್ತಿಂ ಕಿಂಕಿಂ ನಸಾಧಯತಿ ಕಲ್ಪಲತೇವ ವಿದ್ಯಾ॥

೩. ವಿದ್ಯಾದದಾತಿ ವಿನಯಂ ವಿನಯದ್ಯಾತಿ ಪಾತ್ರತಾಂ ಪಾತ್ರತ್ವದ್ದನ ಮಾಪ್ನೋತಿ ಧನಾದ್ದರ್ಮಃ ತತಃ ಸುಖಂ॥

೪. ಚಿದಾನಂದಮೂರ್ತಿ,ಎಂ., *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ*, ಪು.೨೦೫.

೫. ತಿಪ್ಪೇರುದ್ರಸ್ವಾಮಿ,ಎಚ್., *ಕರ್ನಾಟಕ ಸಂಸ್ಕೃತಿ ಸಮೀಕ್ಷೆ*, ಪು.೨೧೬, ೨೧೮-೧೯.

೬. ಗೋಪಾಲರಾವ್.ಎಚ್.ಎಸ್., *ಶಾಸನಗಳ ಹಿನ್ನೆಲೆಯಲ್ಲಿ ಕಲ್ಯಾಣ ಚಾಲುಕ್ಯ ದೇವಾಲಯಗಳು : ಒಂದು ಸಾಂಸ್ಕೃತಿಕ ಅಧ್ಯಯನ*, ಪು.೧೫೫.

೭. ಉಪಾಧ್ಯ,ಜೆ.ಎನ್. (ಸಂ.), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೬*, ಕರಾಡಖೇಡ, ಕ್ರಿ.ಶ.೧೧೩೩, ಅಗಷ್ಟ,೨.

೮. ಎ.ಕ., ಸಂಪುಟ-೧೦, ಅರಸೀಕೆರೆ, ಕಣಕಟ್ಟೆ, ನಂ.೭೩, ಕ್ರಿ.ಶ.೧೧೨೯.

೯. ಅದೇ, ಸಂಪುಟ-೩೭, ದಿ.೪, ಪು.೧೮೯, ಕ್ರಿ.ಶ.೧೧೩೨.

೧೦. ಎ.ಕ., ಸಂಪುಟ-V, ಅರಸೀಕೆರೆ, ನಂ.೧೨೪, ಕ್ರಿ.ಶ.೧೧೩೮.

೧೧. ಗಣೇಶ,ಕೆ.ಆರ್.(ಸಂ.), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೫*, ನಂ.೪೧೧, ಸನಿಗರಂ, ಕ್ರಿ.ಶ.೧೧೨೮.

೧೨. ಎಸ್.ಆಯ್.ಆಯ್., ಸಂಪುಟ-XX, ನಂ.೧೦೧, ಕಾಮಧೇನು, ಕ್ರಿ.ಶ.೧೧೨೯, ಮಾರ್ಚ, ೨೩.

೧೩. ಕೆ.ಆಯ್., ಸಂ.೧, ನಂ.೨೦, ತಿಳವಳ್ಳಿ, ಕ್ರಿ.ಶ.೧೧೩೧, ಅಕ್ಟೋಬರ್, ೪.

೧೪. ಎ.ಕ., ಸಂಪುಟ-V, ಅರಸೀಕೆರೆ, ನಂ.೧೨೪, ಕ್ರಿ.ಶ.೧೧೩೮.

೧೫. ಮಹೀಶವಾಡಿ, ಬಿ. ಬಿ., (ಸಂ.), *ಧರ್ಮಾಮೃತ*, ೭-೮೦.

೧೬. ಶಿರೂರ,ಬಿ.ವ್ಹಿ., *ಶ್ರವಣಬೆಳ್ಗೊಳ ರಾಜಕೀಯ, ಸಾಂಸ್ಕೃತಿಕ ಮಹತ್ವ*, ಪು.೨೫೯.

೧೭. ಮಹೀಶವಾಡಿ, ಬಿ.ಬಿ., (ಸಂ.), *ಧರ್ಮಾಮೃತ*, ಬ್ರಹ್ಮಚರ್ಯ ವ್ರತದ ಕತೆ, ನಾಲ್ಕನೆಯ ಆಶ್ವಾಸ.

೧೮. ಅದೇ, ಬ್ರಹ್ಮಚರ್ಯ ವ್ರತದ ಕತೆ, ನಾಲ್ಕನೆಯ ಆಶ್ವಾಸ.

೧೯. ಅದೇ, ೨-೧೨೭, ೨-೧೧೬, ೭-೧೩೧, ೩-೧೪೮, ೨-೧೨೭, ೩-೫೧ ಮತ್ತು ೪-೨೪೪.

೨೦. ಅದೇ, ೭-೧೨೪, ೮-೧೦೭.

೨೧. ದೇಸಾಯಿ,ಎಚ್.ಆರ್., *ಕಲ್ಯಾಣ ಚಾಲುಕ್ಯರ ಕಾಲದ ಶಿಕ್ಷಣ ವ್ಯವಸ್ಥೆ*, ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ೨೦೦೨.

೨೨. ರತ್ನಕೋಶ, ಕನ್ನಡ ಸಾಹಿತ್ಯ ಪರಿಷತ್ತು.

೨೩. India, Vol.2, No.2, 2nd Sept, 1965, p.99, Burude Jyotsha The Ghatika.

೨೪. ಪಾಠಕ್,ಕೆ.ಬಿ., ಇ.ಆ್ಯಂ. ಸಂ.೧೪, ಪು.೨೪.

೨೫. Rice,B.L., *Mysore and Coorg from Inscriptions*, p.77. "The exact bignification of this term (Ghatikasthana) is not known, but here it seems to indicate the chief place of assembly of Brahmins".

೨೬. Venkateshwar,S.V., *Indian Culture Through the Ages-I*, p.243-44.

೨೭. ಪಿ. ಎನ್.ಕೆ. ಮತ್ತು ಕೆ. ನಂ.೬, ರಾಯಬಾಗ, ಕ್ರಿ.ಶ.೧೧೨೭.

೨೮. ಉಪಾಧ್ಯ,ಜೆ.ಎನ್. (ಸಂ.), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೬*, ಕರಾಡಖೇಡ, ಕ್ರಿ.ಶ.೧೧೩೦, ಡಿಸೆಂಬರ್,೨೬.

೨೯. ಎಸ್.ಆಯ್.ಆಯ್., ಸಂಪುಟ-XX, ನಂ.೯೯, ಲಕ್ಷ್ಮೇಶ್ವರ, ಕ್ರಿ.ಶ.೧೧೨೮, ಜುಲೈ, ೪.

೩೦. Venkateshwar,S.V., *Indian Culture Through the Ages-I*, p.24-34.

೩೧. Sarkar,D.C., *Indian Epigraphical Glossary*, p.155.

೩೨. ಕನ್ನಡ ನಿಘಂಟು, ಕ.ಸಾ.ಪ., ಪು.೨೬೭೯-೮೧.

೩೩. ಎಸ್.ಆಯ್.ಆಯ್., ಸಂಪುಟ-XX, ನಂ.೯೯, ಲಕ್ಷ್ಮೇಶ್ವರ, ಕ್ರಿ.ಶ.೧೧೨೮, ಜುಲೈ, ೪.

೩೪. ಗೋಪಾಲರಾವ್.ಎಚ್.ಎಸ್., *ಶಾಸನಗಳ ಹಿನ್ನೆಲೆಯಲ್ಲಿ ಕಲ್ಯಾಣ ಚಾಲುಕ್ಯ ದೇವಾಲಯಗಳು : ಒಂದು ಸಾಂಸ್ಕೃತಿಕ ಅಧ್ಯಯನ*, ಪು.೧೬೫.

೩೫. ಕೆ.ಆಯ್., ಸಂಪುಟ-V, ನಂ.೨೫, ಕ್ರಿ.ಶ.೧೧೩೯.

೩೬. ನರಸಿಂಹಾಚಾರ್ಯ,ಡಿ.ಎಲ್., ಶಬ್ದವಿಹಾರ, ಪು.೫೧-೬೧.

೩೭. ಚಿದಾನಂದಮೂರ್ತಿ,ಎಂ., *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ*, ಪು.೨೦೭.

೩೮. Gupta,K.M., *The Land System in South India*, p.61.

೩೯. ಎ.ಇ., ಸಂ.೩೭, ಪು.೧೮೯.

೪೦. ಪಂಚಮುಖಿ,ಆರ್.ಎಸ್., ಕೆ.ಆಯ್., ಸಂ.೧, ಪೀಠಿಕೆ, ಪು.೨೦.

೪೧. ಎ.ಆರ್.ಐ.ಇ., ೧೯೫೭-೫೮, ಪು.೨೩೫, ಕ್ರಿ.ಶ.೧೧೩೦.

೪೨. Altekar,A.S., *The Rashtrakutas and Their Times*, p.404.

೪೩. ಚಿದಾನಂದಮೂರ್ತಿ,ಎಂ., *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ*, ಪು.೨೧೬.

೪೪. ಉಪಾಧ್ಯ,ಜೆ.ಎನ್. (ಸಂ.), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೬*, ಏರಿಗೆ, ಕ್ರಿ.ಶ.೧೧೩೫, ಜುಲೈ,೨೩.

೪೫. ಗೋಗಿ ಹನುಮಾಕ್ಷಿ, (ಸಂ.), *ಕಲಬುರ್ಗಿ ಜಿಲ್ಲೆಯ ಶಾಸನಗಳು*, ನಂ.೨೩, ನಿಂಬರಗಿ, ಕ್ರಿ.ಶ.೧೧೩೪.

೪೬. ಎಸ್.ಆಯ್.ಆಯ್., ಸಂಪುಟ-XVIII, ನಂ.೧೩೬, ಹಾವೇರಿ, ಕ್ರಿ.ಶ.೧೧೩೪, ಡಿಸೆಂಬರ್, ೨೨.

೪೭. ನಾಗೇಗೌಡ,ಎಚ್.ಎಲ್., (ಸಂ.), ಪ್ರವಾಸಿ ಕಂಡ ಇಂಡಿಯಾ, ಸಂ.೨, ಪು.೩೫೯.

೪೮. ಚಿದಾನಂದಮೂರ್ತಿ,ಎಂ., *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ*, ಪು.೨೨೯.

೪೯. ವಿದ್ಯೆಯನ್ನು ಕಲಿಯುವ ಶಿಷ್ಯನ ಅಂತರಂಗದ ಕೋರಿಕೆಗೆ ಗುರುವಿನ ಒಪ್ಪಿಗೆಯೇ ಉಪನಯನದ ವಿಧಿಯಾಗಿದ್ದಿತು.

೫೦. ಕಲ್ಯಾಣ ಚಾಲುಕ್ಯ ಸತ್ಯಾಶ್ರಯದೇವನು ತನ್ನ ವಿಕ್ರಮಾಂಕನ ಉಪನಯನದ ಸಮಯದಲ್ಲಿ ತನ್ನ ಕುಲಗುರು ವಿಷ್ಣುಭಟ್ಟನಿಗೆ ಮುತ್ತಗೆ ಗ್ರಾಮವನ್ನು ದಕ್ಷಿಣೆಯಾಗಿ ಕೊಡುತ್ತಾನೆ. ಉಲ್ಲೇಖ: ಡಾ.ಕೊಪ್ಪಾ,ಎಸ್.ಕೆ., ತರ್ದವಾಡಿನಾಡು: ಒಂದು ಅಧ್ಯಯನ, ಪು.೧೮೧.

೫೧. ಚಿದಾನಂದಮೂರ್ತಿ,ಎಂ., *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ*, ಪು.೨೩೨.

೫೨. ಅದೇ, ಪು. ೩೦.

೫೩. ಚಿದಾನಂದಮೂರ್ತಿ,ಎಂ., *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ*, ಪು.೨೨೯-೩೦.

೫೪. ಕೊಪ್ಪಾ,ಎಸ್.ಕೆ., *ತರ್ದವಾಡಿನಾಡು: ಒಂದು ಅಧ್ಯಯನ*, ಪು.೧೮೧.

೫೫. ಉಪಾಧ್ಯ,ಜೆ.ಎನ್. (ಸಂ.), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೬*, ನಾರಂಗವಾಡಿ, ಕ್ರಿ.ಶ.೧೧೨೯, ಅಕ್ಟೋಬರ್,೨೯.

೫೬. ಎಸ್.ಆಯ್.ಆಯ್., ಸಂಪುಟ-XVIII, ನಂ.೧೩೩, ಅಸುಂಡಿ, ಕ್ರಿ.ಶ.೧೧೨೭, ಡಿಸೆಂಬರ್, ೨೫.

೫೭. ಅದೇ, ನಂ.೧೩೮, ಗದಗ, ಕ್ರಿ.ಶ.೧೧೩೬, ಮೇ, ೨೪.

೫೮. ಅದೇ, ನಂ.೧೩೬, ಕ್ರಿ.ಶ.೧೧೩೪, ಡಿಸೆಂಬರ್, ೨೨.

೫೯. ಚಿದಾನಂದಮೂರ್ತಿ,ಎಂ., *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ*, ಪು.೨೪೦.

೬೦. Altekar,A.S., *Position of Women in Ancient India,* p.17.

೬೧. ಗಣೇಶ,ಕೆ.ಆರ್.(ಸಂ.), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೫*, ನಂ.೫೭೯, ಕೋಲನುಪಾಕ, ಕ್ರಿ.ಶ.೧೧೨೫, ಮಾರ್ಚ, ೨೩.

೬೨. ಗೋಗಿ ಹನುಮಾಕ್ಷಿ, (ಸಂ.), *ಕಲಬುರ್ಗಿ ಜಿಲ್ಲೆಯ ಶಾಸನಗಳು*, ನಂ.೨೩, ನಿಂಬರಗಿ, ಕ್ರಿ.ಶ.೧೧೩೪.

೬೩. ಎ.ಪಿ.ಜೆ.ಎ.ಎಸ್., ಸಂ.೩, Kannada Inscription of Andhra Pradesh-1, ೧೦೮೨, ಡಿಸೆಂಬರ್, ೨೫, ಆಳಂದ.

೬೪. ಬಿ.ಕೆ.ಆಯ್., ಸಂ.೧(೨), ೧೪೨, ಕ್ರಿ.ಶ.೧೦೯೬.

೬೫. Desai, P. B., *Jainism in South India and Some Jaina Epigraphs,* No.2, Hunasi Hadagali, 1098, Jan, 5.

೬೬. ಎಸ್.ಆಯ್.ಆಯ್., ಸಂಪುಟ-IX(1), ನಂ.೧೬೧, ಚಿನ್ನತುಂಬಳ, ಕ್ರಿ.ಶ.೧೦೯೨, ಎಪ್ರಿಲ್, ೨೪.

೬೭. ಎಸ್.ಆಯ್.ಆಯ್., ಸಂಪುಟ-XVIII (1), ನಂ.೯೭, ಬಂಕಾಪುರ, ಕ್ರಿ.ಶ.೧೦೯೦, ಫೆಬ್ರುವರಿ, ೭.

೬೮. ಎ.ಕ., ಸಂಪುಟ-ಸಂಪುಟ-II, ನಂ.೧೩೨, ಕ್ರಿ.ಶ.೧೧೨೩; ನಂ.೧೪೩, ಕ್ರಿ.ಶ.೧೧೩೧.

೬೯. ಕಲಬುರ್ಗಿ,ಎಂ.ಎಂ., (ಸಂ.), *ಧಾರವಾಡ ತಾಲೂಕಿನ ಶಾಸನಗಳು,* ನಂ.೬೭, ಸಿದ್ದಾಪುರ, ಕ್ರಿ.ಶ.೧೧೩೫, ಮಾರ್ಚ, ೧೧.

೭೦. ಗಣೇಶ,ಕೆ.ಆರ್.(ಸಂ.), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೫,* ನಂ.೪೧೯, ಗುಡೂರು, ಕ್ರಿ.ಶ.೧೧೨೪, ಡಿಸೆಂಬರ್, ೨೪.

೭೧. ಗೋಪಾಲರಾವ್.ಎಚ್.ಎಸ್., *ಶಾಸನಗಳ ಹಿನ್ನೆಲೆಯಲ್ಲಿ ಕಲ್ಯಾಣ ಚಾಲುಕ್ಯ ದೇವಾಲಯಗಳು : ಒಂದು ಸಾಂಸ್ಕೃತಿಕ ಅಧ್ಯಯನ,* ಪು.೧೬೮.

೭೨. ಎಸ್.ಆಯ್.ಆಯ್., ಸಂಪುಟ-XV, ನಂ.೧೨, ಇಂಗಳೇಶ್ವರ, ಕ್ರಿ.ಶ.೧೧೨೮, ನವೆಂಬರ್, ೮.

೭೩. ಗಣೇಶ,ಕೆ.ಆರ್.(ಸಂ.), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೫,* ನಂ.[illegible], ಸನಿಗರಂ, ಕ್ರಿ.ಶ.೧೧೨೮.

೭೪. ದೇವರಕೊಂಡಾರೆಡ್ಡಿ(ಸಂ.), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೩,* ನಂ.೫೩, ಕುಕನೂರು, ಕ್ರಿ.ಶ.೧೧೨೯, ಡಿಸೆಂಬರ್, ೨೫.

೭೫. ಅದೇ, *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೧,* ನಂ.೬೪, ಸಿಂಧವಾಳ, ಕ್ರಿ.ಶ.೧೧೩೦, ಅಕ್ಟೋಬರ್, ೪.

೭೬. ಎಸ್.ಆಯ್.ಆಯ್., *ಸಂಪುಟ*-XX, ನಂ.೧೦೧, ಕಾಮಧೇನು, ಕ್ರಿ.ಶ.೧೧೨೯, ಮಾರ್ಚ, ೨೩.

೭೭. ಕೆ.ಆಯ್., *ಸಂಪುಟ*-I, ನಂ.೧೯, ತಿಳವಳ್ಳಿ, ಕ್ರಿ.ಶ.೧೧೩೦, ಸಪ್ಟೆಂಬರ್, ೧೪.

೭೮. ಉಪಾಧ್ಯ,ಜೆ.ಎನ್. (ಸಂ.), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೫,* ನಂ.೭೪, ಕರಾಡಖೇಡ, ಕ್ರಿ.ಶ.೧೧೩೩, ಅಗಸ್ಟ, ೭.

೭೯. ದೇವರಕೊಂಡಾರೆಡ್ಡಿ(ಸಂ.), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೭,* ನಂ.೬೭, ಕಲ್ಲೂರು, ಕ್ರಿ.ಶ.೧೧೩೪, ನವ್ಹಂಬರ್, ೨೮.

೮೦. ಗಣೇಶ,ಕೆ.ಆರ್.(ಸಂ.), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೫,* ನಂ.೩೬೨, ಕೋಲಿಮಿಗುಂಡ್ಲ, ಕ್ರಿ.ಶ.೧೧೩೪, ಡಿಸೆಂಬರ್, ೨೩.

೮೧. ಗೋಗಿ ಹನುಮಾಕ್ಷಿ, (ಸಂ.), *ಕಲಬುರ್ಗಿ ಜಿಲ್ಲೆಯ ಶಾಸನಗಳು,* ನಂ.೨೩, ನಿಂಬರಗಿ, ಕ್ರಿ.ಶ.೧೧೩೪.

೮೨. ಕಲಬುರ್ಗಿ,ಎಂ.ಎಂ., (ಸಂ.), *ಧಾರವಾಡ ತಾಲೂಕಿನ ಶಾಸನಗಳು,* ನಂ.೬೭, ಸಿದ್ದಾಪುರ, ಕ್ರಿ.ಶ.೧೧೩೫, ಜನೇವರಿ, ೧೬.

೮೩. ಗೋಗಿ ಹನುಮಾಕ್ಷಿ, (ಸಂ.), *ಸುರಪುರ ತಾಲೂಕಿನ ಶಾಸನಗಳು,* ನಂ.೬೭, ಮುದನೂರು, ಕ್ರಿ.ಶ.೧೧೨೯, ಡಿಸೆಂಬರ್, ೨೪.

೮೪. ಎ.ಕ., ಸಂಪುಟ-VIII, ನಂ.೮೮, ಪೊಮೆಗಾಮೆ, ಕ್ರಿ.ಶ.೧೧೩೯, ಡಿಸೆಂಬರ್, ೨೫.

೮೫. ಕೆ.ಆಯ್., ಸಂಪುಟ-V, ನಂ.೯೩, ಗೌಳಿಹಳ್ಳಿ, ಕ್ರಿ.ಶ.೧೧೮೩, ಫೆಭ್ರುವರಿ, ೭.

೮೬. ಭೋಜರಾಜ ಪಾಟೀಲ, *ನಾಗರಖಂಡ-೭೦,* ಪುಟ.೨೦೫.

೮೭. ಎಸ್.ಆಯ್.ಆಯ್., ಸಂಪುಟ-XI, ನಂ.೨೦೦, ಕುರ್ತಕೋಟಿ, ಕ್ರಿ.ಶ.೧೧೨೬.

೮೮. ಭೋಜರಾಜ ಪಾಟೀಲ, *ನಾಗರಖಂಡ-೭೦,* ಪುಟ.೨೦೬.

೮೯. ಹಿರೇಮಠ,ಆರ್.ಸಿ.(ಸಂ.), *ಕನ್ನಡ ಶಾಸನ ಸಂಪದ,* ಪುಟ.೯೯.

೯೦. ಎಸ್.ಆಯ್.ಆಯ್., ಸಂಪುಟ-XVIII, ನಂ.೧೩೩, ಅಸುಂಡಿ, ಕ್ರಿ.ಶ.೧೧೨೭.

೯೧. ಮಲ್ಲಾಪೂರ,ಬಿ.ವ್ಹಿ., *ನಯಸೇನ ಮತ್ತು ಅವನ ಕೃತಿಗಳು,* ಪು.೪೪-೪೯.

೯೨. ಮಹೀಶಿವಾಡಿ, ಬಿ.ಬಿ., (ಸಂ.), *ಧರ್ಮಾಮೃತ,* ಆಶ್ವಾಸ-೧೪, ಪದ್ಯ.೧೬೪-೬೫.

೯೩. ಮಲ್ಲಾಪೂರ,ಬಿ.ವ್ಹಿ., *ನಯಸೇನ ಮತ್ತು ಅವನ ಕೃತಿಗಳು,* ಪು.೬೫.

೯೪. ಮಹೀಶಿವಾಡಿ, ಬಿ.ಬಿ., (ಸಂ.), *ಧರ್ಮಾಮೃತ,* ಆಶ್ವಾಸ-೧, ಪದ್ಯ.೨೧೯.

೯೫. ಅದೇ, ಪದ್ಯ.೨೫.

೯೬. ಮಲ್ಲಾಪೂರ,ಬಿ.ವ್ಹಿ., *ನಯಸೇನ ಮತ್ತು ಅವನ ಕೃತಿಗಳು,* ಪು.೬೪.

೯೭. ಮಹೀಶಿವಾಡಿ, ಬಿ.ಬಿ., (ಸಂ.), *ಧರ್ಮಾಮೃತ,* ಆಶ್ವಾಸ-೧೪, ಪದ್ಯ.೧೬೮.

೯೮. ಅದೇ, ಪದ್ಯ.೧೫೦.

೯೯. ಅದೇ, ಪದ್ಯ.೧೫೧.

೧೦೦. ಅದೇ, ಪದ್ಯ.೧೬೭.

೧೦೧. ಚಿದಾನಂದಮೂರ್ತಿ,ಎಂ., *ಸಂಶೋಧನ ತರಂಗ,* ಪು.೯೯.

೧೦೨. ಮಹೀಶಿವಾಡಿ, ಬಿ.ಬಿ., (ಸಂ.), *ಧರ್ಮಾಮೃತ,* ಆಶ್ವಾಸ-೧, ಪದ್ಯ.೪೦.

೧೦೩. ಅದೇ, ಆಶ್ವಾಸ-೧, ಪದ್ಯ.೩೮.

೧೦೪. ಅದೇ, ಆಶ್ವಾಸ-೩, ಪದ್ಯ.೧೩೯.

೧೦೫. ಅದೇ, ಆಶ್ವಾಸ-೭, ಪದ್ಯ.೧೭೫-೨೧೯.

೧೦೬. ಅದೇ, ಆಶ್ವಾಸ-೭, ಪದ್ಯ.೩೭-೪೧.

೧೦೭. ಅದೇ, ಆಶ್ವಾಸ-೭, ಪದ್ಯ.೩೬.

೧೦೮. ಅದೇ, ಆಶ್ವಾಸ-೯, ಪದ್ಯ.೮೩, ೧೦೧.

೧೦೯. ಅದೇ, ಆಶ್ವಾಸ-೪, ಪದ್ಯ.೨೦೪.

೧೧೦. ಅದೇ, ಆಶ್ವಾಸ-೪, ಪದ್ಯ.೧೦, ೧೨೨; ಆಶ್ವಾಸ-೬, ಪದ್ಯ.೧೦೬.

೧೧೧. ಅದೇ, ಆಶ್ವಾಸ-೭, ಪದ್ಯ.೧೮೧.

೧೧೨. ಮಲ್ಲಾಪೂರ,ಬಿ.ವ್ಹಿ., *ನಯಸೇನ ಮತ್ತು ಆವನ ಕೃತಿಗಳು*, ಪು.೩೫೧-೫೨.

೧೧೩. ಮಹೀಶಿವಾಡಿ, ಬಿ.ಬಿ., (ಸಂ.), *ಧರ್ಮಾಮೃತ*, ಆಶ್ವಾಸ-೧೨, ಪದ್ಯ.೫೫; ಆಶ್ವಾಸ-೨, ಪದ್ಯ-೩೩.

೧೧೪. ಹಾಜವಗೋಳ ಧನವಂತ, *ಮುಳಗುಂದ ನಾಡು: ಒಂದು ಅಧ್ಯಯನ*, ಪು.೧೮೫.

೧೧೫. ಚಿದಾನಂದಮೂರ್ತಿ,ಎಂ., *ಸಂಶೋಧನ ತರಂಗ*, ಪು.೯೨.

೧೧೬. ಮಹೀಶಿವಾಡಿ, ಬಿ.ಬಿ., (ಸಂ.), *ಧರ್ಮಾಮೃತ*, ಆಶ್ವಾಸ-೧೦, ಪದ್ಯ.೬೭.

೧೧೭. ಅದೇ, ಆಶ್ವಾಸ-೧, ಪದ್ಯ.೧೦೬.

೧೧೮. ಅದೇ, ಆಶ್ವಾಸ-೧, ಪದ್ಯ.೪೦.

೧೧೯. ಅದೇ, ಆಶ್ವಾಸ-೧-೧೭೮, ೬-೧೨೮, ೧೩೩..

೧೨೦. ಅದೇ, ಆಶ್ವಾಸ-೨-೧೨೪, ೧-೧೪೪.

೧೨೧. ಅದೇ, ಆಶ್ವಾಸ-೧-೧೪೪.

೧೨೨. ಅದೇ, ಆಶ್ವಾಸ-೧, ಪದ್ಯ.೪೨.

೧೨೩. ದೇ.ಜೆ.ಗೌ., *ಗದ್ಯಶೈಲಿ*, ಪು.೨೦೫.

೧೨೪. ಮಲ್ಲಾಪೂರ,ಬಿ.ವ್ಹಿ., *ನಯಸೇನ ಮತ್ತು ಆವನ ಕೃತಿಗಳು*, ಪು.೪೩೧.

೧೨೫. ಮಹೀಶಿವಾಡಿ, ಬಿ.ಬಿ., (ಸಂ.), ಧರ್ಮಾಮೃತ, ಆಶ್ವಾಸ-೫-೧೮೩, ೧೪-೮೪, ೧೫೬.

೧೨೬. ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ, ಸಂ.೬೬, ಸಂ.೧, ಪು.೩೫.

೧೨೭. ಮಲ್ಲಾಪೂರ,ಬಿ.ವ್ಹಿ., *ನಯಸೇನ ಮತ್ತು ಆವನ ಕೃತಿಗಳು*, ಪು.೪೩೨.

೧೨೮. ಶ್ರೀನಿವಾಸ ಸಿರನೂರಕರ್, *ವಿಜ್ಞಾನೇಶ್ವರ-ಮಿತಾಕ್ಷರ*, ಪು.೨೪.

೧೨೯. ಅದೇ, ಪು.೨೪.

೧೩೦. ಅದೇ, ಪು.೯.

೧೩೧. ಅದೇ, ಪು.೧೧.

೧೩೨. ಅದೇ, ಪು.೧೧.

೧೩೩. ಅದೇ, ಪು.೩೩.

೧೩೪. ಅದೇ, ಪು.೪೦-೪೧.

೧೩೫. ಅದೇ, ಪು.೪೧-೪೩.

೧೩೬. ಅದೇ, ಪು.೪೭-೪೯.

೧೩೭. ಅದೇ, ಪು.೫೫-೫೬.

೧೩೮. ಅದೇ, ಪು.೫೧-೫೫.

೧೩೯. ಅದೇ, ಪು.೬೦.

೧೪೦. ಅದೇ, ಪು.೬೫-೭೬.

೧೪೧. ಅದೇ, ಪು.೭೬-೭೯.

೧೪೨. ಉದಾ: ಬಾದಾಮಿ ಚಾಲುಕ್ಯರಲ್ಲಿ ವಿಜಯಾಂಬಿಕಾ, ಗಂಗರಲ್ಲಿ ಭೂವಿಕ್ರಮ, ದುರ್ವಿನೀತ, ಸೈಗೊಟ್ಟ ಶಿವಮಾರ, ರಾಷ್ಟ್ರಕೂಟರಲ್ಲಿ ನೃಪತುಂಗರುಗಳು ಸುಪ್ರಸಿದ್ಧ ಸಾಹಿತ್ಯ ವ್ಯಸನಿಗಳು.

೧೪೩. ಕಲಬುರ್ಗಿ,ಎಂ.ಎಂ., (ಸಂ.), ಮಾನಸೋಲ್ಲಾಸ., ಪರಿವಿಡಿ, ಪು.XII.

೧೪೪. ಅದೇ, ಪ್ರಸ್ತಾವನೆ-.XII-XIII.

೧೪೫. ಅದೇ, ಪ್ರಸ್ತಾವನೆ-XV.

೧೪೬. ಅದೇ, ಪ್ರಸ್ತಾವನೆ-XV.

೧೪೭. ಅದೇ, ಪ್ರಸ್ತಾವನೆ-XV-XVI.

೧೪೮. ಅದೇ, ಪ್ರಸ್ತಾವನೆ-೧.

೧೪೯. ಅದೇ, ಶ್ಲೋಕ.೧೨೬-೧೩೪, ಪು.೧೩-೧೪.

೧೫೦. ಅದೇ, ಶ್ಲೋಕ.೩೮-೪೧, ಪು.೪-೫.

೧೫೧. ಅದೇ, ಶ್ಲೋಕ.೫೭, ಪು.೬.

೧೫೨. ಅದೇ, ಶ್ಲೋಕ.೧೩೫-೩೦೦, ಪು.೧೪-೩೭.

೧೫೩. ಅದೇ, ಪು.ii.

೧೫೪. ಅದೇ, ಶ್ಲೋಕ.೧-೫೧, ಪು.೪೧-೪೫.

೧೫೫. ಅದೇ, ಶ್ಲೋಕ.೫೨-೧೫೦, ಪು.೪೫-೫೬.

೧೫೬. ಅದೇ, ಶ್ಲೋಕ.೧೫೧-೩೭೬, ಪು.೫೬-೭೬.

೧೫೭. ಅದೇ, ಶ್ಲೋಕ.೩೭೭-೫೪೦, ಪು.೭೬-೯೨.

೧೫೮. ಅದೇ, ಶ್ಲೋಕ.೫೪೧-೫೫೫, ಪು.೯೨.

೧೫೯. ಅದೇ, ಶ್ಲೋಕ.೫೫೬-೫೮೪, ಪು.೯೨-೯೩.

೧೬೦. ಅದೇ, ಶ್ಲೋಕ.೭೪೩-೯೨೭, ಪು.೧೧೩-೧೩೩.

೧೬೧. ಅದೇ, ಶ್ಲೋಕ.೯೭೦-೯೮೫, ಪು.೧೩೭-೧೩೯.

೧೬೨. ಅದೇ, ಶ್ಲೋಕ.೧೦೭೧-೧೩೦೦, ಪು.೧೪೩-೧೬೯.

೧೬೩. ಅದೇ, ಪರಿವಿಡಿ-iii-iv.

೧೬೪. ಅದೇ, ಶ್ಲೋಕ.೧-೯೨೬, ಪು.೧೭೩-೨೯೪.

೧೬೫. ಅದೇ, ಶ್ಲೋಕ.೯೨೭-೯೫೩, ಪು.೨೯೫-೨೯೭.

೧೬೬. ಅದೇ, ಶ್ಲೋಕ.೯೫೯-೯೭೯, ಪು.೨೯೮-೨೯೯.

೧೬೭. ಅದೇ, ಶ್ಲೋಕ.೧೦೦೯-೧೦೪೧ಅ, ಪು.೩೦೨-೩೦೫.

೧೬೮. ಅದೇ, ಶ್ಲೋಕ.೧೦೪೧ಅ-೧೦೪೭, ಪು.೩೦೬.

೧೬೯. ಅದೇ, ಶ್ಲೋಕ.೧೦೪೮-೧೧೩೨ಅ, ಪು.೩೦೬-೩೧೫.

೧೭೦. ಅದೇ, ಶ್ಲೋಕ.೧೧೩೩ಅ-೧೧೫೦, ಪು.೩೧೫-೩೧೬.

೧೭೧. ಅದೇ, ಶ್ಲೋಕ.೧೨೪೫-೧೩೪೧, ಪು.೩೨೬-೩೩೬.

೧೭೨. ಅದೇ, ಶ್ಲೋಕ.೧೩೪೨-೧೬೦೧ಅ, ಪು.೩೩೬-೩೬೦.

೧೭೩. ಅದೇ, ಶ್ಲೋಕ.೧೬೦೧ಅ-೧೬೨೯, ಪು.೩೬೦-೩೬೩.

೧೭೪. ಅದೇ, ಪರಿವಿಡಿ-v.

೧೭೫. ಅದೇ, ಶ್ಲೋಕ.೪೦೫-೬೬೧ಅ, ಪು.೪೩೧-೪೫೮.

೧೭೬. ಅದೇ, ಶ್ಲೋಕ.೯೯೭-೧೧೭೦ಅ, ಪು.೪೯೪-೫೧೦.

೧೭೭. ಅದೇ, ಶ್ಲೋಕ.೧೧೭೦ಅ-೧೨೩೮, ಪು.೫೧೦-೫೧೬.

೧೭೮. ಅದೇ, ಶ್ಲೋಕ.೧೪೩೩ಅ-೧೭೨೫, ಪು.೫೩೫-೫೬೧.

೧೭೯. ಅದೇ, ಶ್ಲೋಕ.೧-೫೬೭, ಪು.೫೬೧-೬೧೮.

೧೮೦. ಅದೇ, ಶ್ಲೋಕ.೫೬೮-೯೪೯ಅ, ಪು.೬೧೮-೬೫೩.

೧೮೧. ಅದೇ, ಶ್ಲೋಕ.೧೪೦೬ಆ-೧೪೩೩ಅ, ಪು.೬೯೫-೬೯೮.

೧೮೨. ಅದೇ, ಪರಿವಿಡಿ-vi.

೧೮೩. ಅದೇ, ಶ್ಲೋಕ.೧-೧೨೬, ಪು.೭೦೭-೭೨೨.

೧೮೪. ಅದೇ, ಶ್ಲೋಕ.೧೬೭ಆ-೧೯೪, ಪು.೭೨೭-೭೩೦.

೧೮೫. ಅದೇ, ಶ್ಲೋಕ.೨೩೪ಆ-೨೮೦ಅ, ಪು.೭೩೫-೭೪೧.

೧೮೬. ಅದೇ, ಶ್ಲೋಕ.೪೨೬ಆ-೫೭೪, ಪು.೭೬೦-೭೭೨.

೧೮೭. ಅದೇ, ಶ್ಲೋಕ.೫೭೫-೫೫೯, ಪು.೭೭೨-೭೭೬.

೧೮೮. ಅದೇ, ಶ್ಲೋಕ.೯೧೪ಆ-೯೭೩, ಪು.೮೧೧-೮೧೭.

೧೮೯. ಅದೇ, ಶ್ಲೋಕ.೧೩೭೦-೧೩೭೫ ಅ, ಪು.೮೫೪.

ಅಧ್ಯಾಯ-ಎಂಟು Chapter-8

ಧಾರ್ಮಿಕ ಪರಿಸ್ಥಿತಿ

ದೇವರು ಮತ್ತು ಅದರ ಜೊತೆಗೆ ಸೇರಿ ಬಂದ ಧರ್ಮಕ್ಕೆ ಒಂದು ಮತದ ಮಿತಿ ದೊರೆತಿರುವುದನ್ನು ಧಾರ್ಮಿಕ ಇತಿಹಾಸದ ಅಧ್ಯಯನದ ಸಂದರ್ಭದಲ್ಲಿ ತಿಳಿಯುತ್ತೇವೆ. ಧರ್ಮವು ಮತದ ಮಿತಿಯನ್ನು ದಾಟಿ ಬೆಳೆದಾಗ 'ತತ್ವ'ವಾಗಿ ವಿಸ್ತರಿಸಿಕೊಳ್ಳತ್ತದೆ. ತತ್ವವಾಗುವ ಮೊದಲು ಧರ್ಮಕ್ಕೆ ಮತದ ಮಿತಿ ಇರುತ್ತದೆ, ಒಂದುಗೂಡಿಸುತ್ತದೆ, ಕುಲ ಮತ್ತು ಜಾತಿಗಳನ್ನು ಮತ ಧರ್ಮ ಮೀರಿ ನಿಲ್ಲುತ್ತದೆ. ಮತಧರ್ಮಗಳಲ್ಲೂ ಹಲವು ಒಳಪಂಗಡಗಳನ್ನು ಗುರುತಿಸಬಹುದು ಇದು ಸಿದ್ಧಾಂತದ ಅನುಷ್ಠಾನವನ್ನು ಅವಲಂಬಿಸಿರುತ್ತದೆ.

ತಮ್ಮ ನಂಬಿಕೆ ಮತ್ತು ಧರ್ಮಗಳನ್ನು ಬಲಪಡಿಸಿಕೊಳ್ಳಲು ಜನತೆ ಶ್ರಮಿಸುತ್ತದೆ. ಬಲವರ್ಧನೆಗೆ ಹತ್ತೆಂಟು ಕಾರ್ಯಕ್ರಮಗಳನ್ನು ರೂಪಿಸಿಕೊಂಡು ಜನಪ್ರಿಯವಾಗಲು ಪ್ರಯತ್ನಿಸುತ್ತದೆ. ತನ್ನನ್ನು ಟೀಕಿಸಿದ ನಿಂದಿಸಿದ ಜನರ ವಿರುದ್ಧ ಹೋರಾಡುತ್ತದೆ ದೇವಾಲಯಗಳು ದೇವರ ಹೆಸರಿನಲ್ಲಿ ನಿರ್ಮಾಣವಾದರೂ ಆದೇವರ ಹೆಸರಿನಲ್ಲಿ ಒಂದು ಧರ್ಮ ಬೆಳೆದುದರಿಂದ ದೇವಾಲಯಗಳು ಧರ್ಮವನ್ನೂ ಧರ್ಮವು ದೇವಾಲಯಗಳನ್ನೂ ರಕ್ಷಿಸಲು ಮತ್ತು ಪೋಷಿಸಲು ಬದ್ಧವಾಗಿದ್ದವು.

ಕರ್ನಾಟಕದಲ್ಲಿ ಬಹಳ ಪ್ರಾಚೀನಕಾಲದಿಂದಲೇ ಚತುಸ್ಸಮಯಗಳಾದ ಬೌದ್ಧ, ಜೈನ, ವೈಷ್ಣವ, ಶೈವ ಧರ್ಮಗಳು ಕಾಣಿಸಿಕೊಂಡಿವೆ. ತೀರ ಪ್ರಾಚೀನ ಕಾಲದಲ್ಲಿಯೇ ಕರ್ನಾಟಕವು ವೈದಿಕ ಸಂಸ್ಕೃತಿಯ ಪ್ರಭಾವಕ್ಕೆ ಒಳಗಾಗಿದ್ದಿತು. ವೈದಿಕ ಸಂಸ್ಕೃತಿಯ ಚಾತುರ್ವರ್ಣ ಪದ್ದತಿಯು ಕ್ರಮೇಣ ಜಾತಿಗಳಾಗಿ ಪರಿಣಮಿಸಿ ಶೋಷಣೆ ಹೆಚ್ಚಿತು ಆಗ ಬೌದ್ಧ, ಜೈನ ಧರ್ಮಗಳು ಜನ್ಮತಾಳಿ ತಮ್ಮ ಪ್ರಭಾವವನ್ನು ಬೆಳೆಸಿಕೊಂಡವು. ಆದರೂ ಸಹ ಈ ಎಲ್ಲ ಧರ್ಮಗಳ ಅನುಷ್ಠಾನದ ವಿಧಿ ವಿಧಾನಗಳಲ್ಲಿ ವ್ಯತ್ಯಾಸಗಳನ್ನು ಕಾಣುತ್ತೇವೆ ಅವುಗಳೇ ಶೈವಕ್ಕೆ ಸಂಬಂಧಿಸಿದ ಲಾಕುಳ, ಕಾಳಾಮುಖ, ಪಾಶುಪತ, ಕಾಪಾಲಿಕ ಇತ್ಯಾದಿ ಜೈನಧರ್ಮಕ್ಕೆ ಸಂಬಂಧಿಸಿದ ದಿಗಂಬರ, ಶ್ವೇತಾಂಬರ, ಯಾಪನೀಯ, ವೈಷ್ಣವಧರ್ಮಕ್ಕೆ ಸಂಬಂಧಿಸಿದ ಶ್ರೀವೈಷ್ಣವ, ಭಾಗವತ ಮತ್ತು ಬೌದ್ಧಧರ್ಮಕ್ಕೆ ಸಂಬಂಧಿಸಿದ ಹೀನಾಯನ, ಮಹಾಯಾನ, ವಜ್ರಾಯಾನ ಜೈನಧರ್ಮಕ್ಕೆ ಸಂಬಂಧಿಸಿದಂತೆ ದಿಗಂಬರ, ಶ್ವೇತಾಂಬರ ಇತ್ಯಾದಿ ಪಂಗಡಗಳು.

ಜೈನ ಧರ್ಮ :

ಭಾರತದಲ್ಲಿ ಕಂಡುಬರುವ ಪ್ರಮುಖ ಧರ್ಮಗಳಲ್ಲಿ ಜೈನಧರ್ಮವೂ ಸಹ ಒಂದು. ಕ್ರಿ.ಶ.ಪೂ.ಮೂರನೆಯ ಶತಮಾನದ ಸುಮಾರಿಗೆ ದಕ್ಷಿಣ ಭಾರತದಲ್ಲಿ ಕಾಣಿಸಿಕೊಂಡರೂ ಪ್ರಧಾನವಾಗಿ ಇದು ಕರ್ನಾಟಕದಲ್ಲಿ ಹೆಚ್ಚು

ಪ್ರಚಾರವನ್ನು ಪಡೆಯಿತು. ಹೀಗಾಗಿ ''ದಕ್ಷಿಣ ಭಾರತದ ಜೈನ ಧರ್ಮದ ಇತಿಹಾಸವೆಂದರೆ ಕರ್ನಾಟಕದ ಜೈನಧರ್ಮದ ಇತಿಹಾಸ'' ವೆಂಬಂತೆ ಇಲ್ಲಿ ಶ್ರೀಮಂತವಾಗಿ ಬೆಳೆಯಿತು. ಮಹಾವೀರನ ಮರಣಾನಂತರ ಜೈನಧರ್ಮವು ಶ್ವೇತಾಂಬರ ಮತ್ತು ದಿಗಂಬರವೆಂಬ ಪಂಗಡಗಳಾಗಿ ವಿಭಜನೆ ಹೊಂದಿ, ದಕ್ಷಿಣ ಭಾರತದಲ್ಲಿ ದಿಂಗಬರ ಪಂಗಡವು ಹೆಚ್ಚು ಪ್ರಾಮುಖ್ಯತೆಯನ್ನು ಪಡೆಯಿತು. ನಂತರ ಕ್ರಮೇಣವಾಗಿ ದಕ್ಷಿಣ ಭಾರತದ ಪ್ರಮುಖ ರಾಜಮನೆತನಗಳಾದ ಕದಂಬರು ಗಂಗರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು, ಹೊಯ್ಸಳರು ಇದನ್ನು ಪೋಷಿಸಿಕೊಂಡು ಬಂದರು.

ಕ್ರಿ.ಶ. ೧೦ನೇ ಶತಮಾನದವರೆಗೂ ದಕ್ಷಿಣ ಭಾರತದಲ್ಲಿ ಪ್ರಾಮುಖ್ಯತೆಯನ್ನು ಪಡೆದ ಈ ಧರ್ಮವು ೧೦ನೆಯ ಶತಮಾನದ ನಂತರ ಆಂತರಿಕ ದೌರ್ಬಲ್ಯ ಮತ್ತು ಬಾಹ್ಯ ಆಘಾತಗಳಿಂದಾಗಿ ಕುಸಿಯುತ್ತ ನಡೆದರೂ ಕಲ್ಯಾಣದ ಚಾಲುಕ್ಯರ ಸಾಮಂತರಾದ ಸವದತ್ತಿಯ ರಟ್ಟರು, ಹೊಯ್ಸಳರು, ಕೊಲ್ಹಾಪುರದ ನಿಂಬ ಸಾಮಂತರ ಆಶ್ರಯದಲ್ಲಿ ಕೆಲಕಾಲಬಾಳಿ ಹೊಯ್ಸಳರ ಪತನಾ ನಂತರ ಕ್ರಮೇಣವಾಗಿ ಅವನತಿಯನ್ನು ಹೊಂದತ್ತಾ ನಡೆಯಿತು.

ಮೂರನೆಯ ಸೋಮೇಶ್ವರನ ಕಾಲದ ಶಾಸನಗಳನ್ನು ಅವಲೋಕಿಸಿದಾಗ ಲಕ್ಷ್ಮೇಶ್ವರ,[೧] ಅರೆ,[೨] ಸೇಡಂ,[೩] ಗೌಳಿಹಳ್ಳಿ,[೪] ಮುಂತಾದ ಪ್ರದೇಶಗಳಲ್ಲಿ ಮತ್ತು ಹೆಚ್ಚಾಗಿ ಇವನ ಸಾಮಂತರಾದ ಹೊಯ್ಸಳರ ನಾಡಿನಲ್ಲಿ ಹೆಚ್ಚಾಗಿ ಪ್ರಚಾರದಲ್ಲಿರುವುದು ಕಂಡುಬಂದರೂ ಅದರ ಒಟ್ಟಾರೆ ಬಲ ಕುಸಿಯುತ್ತಿರುವುದು ಸ್ಪಷ್ಟವಾಗಿ ಕಂಡು ಬರುತ್ತದೆ.

ಬಸದಿಗಳು:

ಜೈನ ಸನ್ಯಾಸಿಗಳು ಮಳೆಗಾಲದ ನಾಲ್ಕು ತಿಂಗಳ ಹೊರತು ಉಳಿದ ಕಾಲದಲ್ಲೆಲ್ಲಾ ವಿಹರಿಸುತ್ತಿರಬೇಕೆಂಬ ನಿಯಮವಿದ್ದರೂ ಕ್ರಮೇಣ ಈ ನಿಯಮ ಸಡಿಲಗೊಂಡು ಮುನಿಗಳು ಬಸದಿಗಳಲ್ಲಿ ವಾಸಿಸಲಾರಂಭಿಸಿದರು. ಜೈನ ದೇವಾಲಯಗಳನ್ನು ಬಸದಿ (ಸಂ.ವಸತಿ)ಗಳೆಂದು ಕರೆಯುವುದಕ್ಕೆ ಬಹುಶಃ ಇದೇ ಕಾರಣ ಇರಬಹುದು.[೫] ಈ ದೇವಸ್ಥಾನಗಳನ್ನು ಬಸದಿ[೬] ಚೈತ್ಯಾಲಯ[೭] ಮುಂತಾದ ಹೆಸರುಗಳಿಂದ ಶಾಸನಗಳಲ್ಲಿ ಕರೆಯಲಾಗಿದೆ. ಈ ಬಸದಿಗಳು ಜಿನಮುನಿಗಳ ವಾಸಗೃಹಗಳೂ, ದೇವಗೃಹಗಳೂ ಆಗಿದ್ದವು ಇವುಗಳನ್ನು ಜಿನಭಕ್ತಿಯಿಂದ ಮಾಡಿಸುತ್ತಿದ್ದರು. ಜಿನಭಕ್ತ ಗಂಗರಾಜನ ಮಗ ಬೊಪ್ಪದೇವ ''ಕನ್ನೆ ಬಸದಿ'' ಯನ್ನು ಮಾಡಿಸಿದ ವಿಷಯವು ಶಾಸನವೊಂದರಲ್ಲಿದೆ[೮] ಈ ಬಸದಿಗಳಿಗೆ ತೀರ್ಥಂಕರರ ಹೆಸರುಗಳ ಜೊತೆಗೆ ಕಟ್ಟಿಸಿದವರು ಹೆಸರುಗಳನ್ನೂ ಇಡುತ್ತಿದ್ದರು. ಶ್ರವಣ ಬೆಳಗೊಳದ ಬಸದಿಗೆ ಬೊಪ್ಪಣ ಚೈತ್ಯಾಲಯವೆಂಬ ಮತ್ತೊಂದು ಹೆಸರಿತ್ತು.[೯] ಈ ವಿಷಯದಲ್ಲಿ ಸ್ತ್ರೀಯರು ಕೂಡ ಹಿಂದೆ ಬಿದ್ದಿರಲಿಲ್ಲವೆಂದು ಹೇಳಬಹುದು ವಿಷ್ಣುವರ್ಧನನ ಪತ್ನಿಯಾದ ಶಾಂತಲೆಯು ಮುನಿಜನ ವಿನೇಯಜನ ವಿನೀತೆ, ಸಮ್ಯುಕ್ತ್ವಚೂಡಾಮಣಿ, ಚತುಸ್ಸಮಯ ಸಮುದ್ಧರಣಕಾರಣೆ, ಜಿನಸಮಯಸಮುದಿತ ಪ್ರಕಾರೆ, ಜಿನಧರ್ಮ ನಿರ್ಮಳೆ, ಜಿನಧರ್ಮಕಥಾ ಕಥನ

ಪ್ರಮೋದೆ, ಜಿನಗಂಧೋದಕ ಪವಿತ್ರೀಕೃತೋತ್ತಮಾಂಗೆ ಮೊದಲಾದ ಬಿರುದುಗಳು ಈಕೆಯ ಜೈನಧರ್ಮ ನಿಷ್ಠೆಗೆ ಸಾಕ್ಷಿಯೆನಿಸಿವೆ.[೨೦] ಇವಳು ಬೆಳ್ಗೊಳ ತೀರ್ಥದಲ್ಲಿ 'ಸವತಿಗಂಧವಾರಣ' ಬಸದಿ ನಿರ್ಮಿಸಿ ಅಲ್ಲಿಯ ದೇವತಾಪೂಜೆ ರಿಶಿಗಳ ಆಹಾರದಾನಕ್ಕೋಸುಗ ಕಲ್ಕಣಿನಾಡ ಮೊಟ್ಟೆನವಿಲೆಗ್ರಾಮವನ್ನು ತನ್ನ ಗುರುಗಳಾದ ಪ್ರಭಾಚಂದ್ರ ಸಿದ್ಧಾಂತ ದೇವರಿಗೆ ಬಿಟ್ಟು ಕೊಟ್ಟಿರುವಳು. ಅಲ್ಲದೆ 'ಎಳಸನಕಟ್ಟೆವ ಕೆರೆಯಾಗಿ ಕಟ್ಟಿಸಿ ಸವತಿಗಂಧಹಸ್ತಿ ಬಸದಿಗೆ ಸರುಗಿಗೆ ದೇವಿಯರು ಜಿನಾಲಯಕ್ಕೆ ಬಿಟ್ಟರು' ಎಂಬ ಉಲ್ಲೇಖವಿದೆ.[೨೧]

ಬಸದಿಗಳ ಪೂಜೆ, ಪುನಸ್ಕಾರಗಳ ಜೊತೆಗೆ ಅವುಗಳ ಜೀರ್ಣೋದ್ಧಾರಕ್ಕಾಗಿಯೂ ಹಣ ಬೇಕಾಗುತ್ತಿತ್ತು ಹೀಗಾಗಿ ಬಸದಿಗಳ ಜೀರ್ಣೋದ್ಧಾರಕ್ಕಾಗಿಯೂ ಸಹ ಅನೇಕರು ದಾನ ನೀಡಿದುದನ್ನು ಶಾಸನಗಳಲ್ಲಿ ಕಾಣಬಹುದು. 'ಮಣಕೇರಿಯ ಬಮ್ಮಿಸೆಟ್ಟಿಯೆತ್ತಿಸಿದ ಶ್ರೀ ಗಂಗಪುರದ ಚೈತ್ಯಾಲಯದ ಪಾರಿಸ್ವನಾಥ ದೇವರಂಗ ಭೋಗಕ್ಕಂ, ಖಂಡಸ್ಪುಟಿತ ಜೀರ್ಣೋದ್ಧಾರಕ್ಕಂ''[೨೨] ''ಶ್ರೀ ರೂಪನಾರಾಯಣ ಬಸದಿಯಾಚಾರ್ಯ್ಯರಪ್ಪ ಶ್ರೀ ಶ್ರುತಕೀರ್ತ್ತಿ ತ್ರೈವಿದ್ಯದೇವರ ಕಾಲಂ ಕರ್ಚ್ಚಿ ಧಾರಾಪೂರ್ವ್ವಕವಾಗಿ ಕೊಟ್ಟಾಯಮೆಂತ್ತೆಂದೊಡೆ''[೨೩] '' ಶ್ರೀ ಮತ್ಸೇಡಿಂಬದ ತೆಂಕಣ ಬಸದಿಯ ಆದಿಭಟ್ಟಾರಕದೇವಂಗೆ ಸಂತತಂ ಮಾಳ್ಪಷ್ಟ ವಿಧಾರ್ಚನೆಗಂ, ಜೀವದಯಾಷ್ಟಮಿ, ನಂದೀಶ್ವರದಷ್ಟಮಿ. ಸಂಕ್ರಮಣ ವಿಧಾರ್ಚನೆಗಂ, ಜೀವದಯಾಷ್ಟಮಿ, ನಂದೀಶ್ವರದಷ್ಟಮಿ ಸಂಕ್ರಮಣ ಗ್ರಹಣಾದಿ ಪರ್ವ್ವದಿನದ ಮಹಾಪೂಜೆಗಳ್ಗೆ ಖಂಡಸ್ಪುಡಿತ ಜೀರ್ಣೋದ್ಧಾರಕ್ಕಾಂ[೨೪] ಕಿರುಸಂಪಗಾಡಿಯಲು ಗಂಗಿಸೆಟ್ಟಿಯರ ಮಾಡಿಸಿದ ಬಸದಿಗೆ[೨೫] ಮುಂತಾದ ಉಲ್ಲೇಖಗಳಂ ಆಕಾಲದ ಜನರ ಜಿನಭಕ್ತಿ, ನಿಷ್ಠೆ, ಶ್ರದ್ಧೆಯನ್ನು ತಿಳಿಸುತ್ತವೆಯಲ್ಲದೆ, ಅಂದಿನ ಜೈನ ಸಮಾಜವನ್ನು ಅರಿಯಲು ಸಹಕಾರಿಯಾಗಿವೆ.

ಪತಿ ವಿಷ್ಣುವರ್ಧನನ್ನು ಬೇಡಿಕೊಂಡು ತಾನು ನಿರ್ಮಿಸಿದ ಸವತಿಗಂಧವಾರಣ ಬಸದಿಗೆ ಶಾಂತದೇವಿ ಗಂಗಸಮುದ್ರದ ಕೆಳಗಿನ ನಡುಬಯಲಿನಲ್ಲಿ ೫೦ಕೊಳಗ ಗದ್ದೆ, ತೋಟವನ್ನು 'ನಾಲ್ವತ್ತುಗದ್ಯಾಣ ಹೊನ್ನನಿಕ್ಕೆ ಕಟ್ಟಿಸಿ ಚರುಗಿಂಗೆ ವಿಳಸನಕಟ್ಟಮುಮಂ' ಗುರು ಪ್ರಭಾಚಂದ್ರರಿಗೆ ಬಿಟ್ಟುಕೊಟ್ಟಿದ್ದಳು.[೨೬] ಕೊಪ್ಪಳ ಶಾಸನವೊಂದರಲ್ಲಿ 'ಶಾಂತಲದೇವಿಯರ ಬಸದಿ' ಯೆಂಬ ಹೆಸರಿನ ಬಸದಿ[೨೭]ಯೊಂದಿದ್ದು ಇದನ್ನು ಶಾಂತಲೆ ಕಟ್ಟಿಸಿದಳೋ ಅವಳ ಹೆಸರಿನಲ್ಲಿ ಬೇರೊಬ್ಬರು ಕಟ್ಟಿಸಿದರೋ ಸ್ಪಷ್ಟವಿಲ್ಲ.

ಸಮಾಧಿ-ಮರಣ :

ಜೀವನವನ್ನು ಇನ್ನು ಮುಂದುವರಿಸಲಾಗದು ಎನ್ನುವ ಪ್ರಸಂಗಗಳಲ್ಲಿ ಅಮರಣ ಪರ್ಯಂತ ಉಪವಾಸವಿದ್ದು ಸ್ವಯಂ ಮರಣ ಹೊಂದುವ ಸಂಪ್ರದಾಯ ಜೈನರಲ್ಲಿ ಪ್ರಾಚೀನಕಾಲದಿಂದಲೇ ಬೆಳೆದುಬಂದಿದೆ. ಈ ಸಂದರ್ಭದಲ್ಲಿ ಮಾಡುವ ವ್ರತವನ್ನು ಸಲ್ಲೇಖನ ವ್ರತವೆಂದು, ಅಪ್ಪಿದ ಮರಣವನ್ನು ಸಮಾಧಿಮರಣವೆಂದು, ಇಂಥವರ ಸ್ಮರಣೆಗಾಗಿ ನಿಲ್ಲಿಸಿದ ಶಿಲೆ ನಿಷಧಿ ಎಂದು ಕರೆಯಲಾಗುತ್ತದೆ. ಜೈನರು ತಗೆದುಕೊಳ್ಳುವ ಇಂಥ ಮರಣವನ್ನು ಸಮಾಧಿ, ಸಲ್ಲೇಖನ,

ಸನ್ಯಸತನ, ಪಂಡಿತ ಇಂಗಿಣಿ, ಪಾವುಗ್ಗಮಣ, ಪಂಚಪದ, ಆರಾಧನಾ ಎಂಬ ಪಾರಿಭಾಷಿಕ ಪದಗಳಿಂದ ಶಾಸನಗಳಲ್ಲಿ ಗುರುತಿಸಲಾಗಿದೆ.[೭೮] ಈ ಎಲ್ಲ ಮರಣದ ವಿಧಿವಿಧಾನಗಳು ಮೇಲ್ನೋಟಕ್ಕೆ ಒಂದೇಯಾಗಿ ಕಂಡರೂ ಅವು ತಮ್ಮದೇ ಆದ ಪ್ರತ್ಯೇಕ ಅರ್ಥವ್ಯಾಪ್ತಿಯನ್ನು ಪಡೆದಿವೆ.[೭೯] ರತ್ನ ಕಂಡಕ ಶ್ರಾವಕಾಚಾರ, ಶಾಸ್ತ್ರಸಾರ ಸಮುಚ್ಚಯ, ಭಗವತಿ ಆರಾಧನಾ ಮೊದಲಾದ ಜೈನ ಗ್ರಂಥಗಳು ಈ ಮರಣದ ಪ್ರಕಾರ ಅದರ ವಿಧಿ ವಿಧಾನ ಇತ್ಯಾದಿಗಳನ್ನು ವಿವರಿಸುತ್ತದೆ.

ಮೂರನೆಯ ಸೋಮೇಶ್ವರನ ಕಾಲದ ಕೆಲವು ಶಾಸನಗಳು ಸಮಾಧಿ ಮರಣ ಹೊಂದಿದ ಮತ್ತು ಅಂಥವರಿಗಾಗಿ ನಿರ್ಮಿಸಿದ ನಿಶಿಧಿ ಸ್ಮಾರಕಗಳನ್ನು ಉಲ್ಲೇಖಿಸಿವೆ. ಆದರೆ ಈ ಮರಣದ ವಿಧಿ-ವಿಧಾನಗಳನ್ನು ಅವು ಸ್ಪಷ್ಟಪಡಿಸಿಲ್ಲ. ಸಲ್ಲೇಖನವ್ರತವನ್ನು ಅಂಗೀಕರಿಸಿದವನು ಅನ್ನ ಪಾನಾದಿಗಳನ್ನು ತ್ಯಜಿಸಿ ಎಲ್ಲ ರೀತಿಯ ಸ್ನೇಹ ವೈರಸಂಗಗಳನ್ನು ತ್ಯಜಿಸಿ ತನ್ನ ಕರ್ಮಗಳನ್ನು ಕುರಿತು ಯೋಚಿಸಿ ಪಶ್ಚಾತ್ತಾಪ ಪಡುತ್ತ ಪಂಚಪರಮೇಷ್ಠಿಗಳನ್ನು ಧ್ಯಾನಿಸುತ್ತ ತನಗೆ ಉತ್ತಮಗತಿ ದೊರೆಯಲೆಂದು ಹಾರೈಸುತ್ತ ಪ್ರಾಣತ್ಯಾಗ ಮಾಡಬೇಕಿತ್ತು.[೮೦] ಶಾಂತಲೆಯು 'ಜಿನನಾಥಂ ತನಗೆಂದುಮಿಷ್ಟದೆಯ್ವಂ' ಎಂದು ಮನದಂದು ಶಕವರ್ಷ ೧೦೫೩ರಲ್ಲಿ ಶಿವಗಂಗೆಯ ತೀರ್ಥದಲ್ಲಿ 'ಮುಡಿಪಿ' ಸ್ವರ್ಗಸ್ಥಳಾದಳು. ಇಲ್ಲಿ 'ಮುಡಿಪಿ' ಎಂಬುದು ಸಮಾಧಿಮರಣಕ್ಕೆ ಹೆಚ್ಚು ಅನ್ವಯವಾಗುವದರಿಂದ ಶಾಂತಲೆ ಸಲ್ಲೇಖನ ವ್ರತದಿಂದ ಮಡಿದಿರುವ ಸಾಧ್ಯತೆಯಿದೆ.[೮೧] ಶಾಂತಲೆ ಶಿವಗಂಗೆ ತೀರ್ಥದಲ್ಲಿ ಮುಡಿಪಿದ ಸುದ್ದಿ ತಿಳಿದ ಅವಳತಾಯಿ ಮಾಚಿಕಬ್ಬೆ ಮಗಳನ್ನಗಲಿ ಬದುಕಲಿಚ್ಛಿಸದೆ ಬೆಳುಗೊಳಕ್ಕೆ ಬಂದು ದುರ್ಧರಸನ್ಯಸನ ಮಾರ್ಗವನ್ನು ಅಂಗೀಕರಿಸುತ್ತಾಳೆ. ಮರಣ ಪ್ರಕಾರಗಳಲ್ಲಿ ಒಂದಾದ ಪಂಡಿತಮರಣ ವಿಧಾನದಿಂದ ಒಂದು ತಿಂಗಳು ಉಪವಾಸವಿದ್ದು ಅರೆತಗೆದ ಕಣ್ಣು, ಪಂಚಪರಮೇಷ್ಠಿ ನಾಮಪಠಣ, ಜಿನೇಂದ್ರಸ್ತುತಿಯಲ್ಲಿ ಮಗ್ನವಾದ ಮನ, ಬಂಧು ಬಾಂಧವರ ಒತ್ತಾಯಕ್ಕೆ ತಲೆಬಾಗದ ದೃಢನಿಷ್ಠೆಗಳ ಮೂಲಕ ಗುರುಗಳ ಮಾರ್ಗದರ್ಶನದಲ್ಲಿ ಸಮಾಧಿಮರಣವನ್ನು ಅಪ್ಪುತ್ತಾಳೆ.

ಪೆಂಡಿರ್ಸ್ಸನ್ಯಾಸನಂಗೋಡವರೊಳಗಿನಿತಂ ಬಲ್ಲರಾರೆಂಬಿನಂ ಕೈ ಕೊಂಡಾಗಳು ಘೋರ ವೀರಭ್ರತಪರಿಣತೆಯಂ ಮೆಚ್ಚಿ ಸಂತೋಷದಿಂದ ಪಾಂಡಿತ್ವಂ ಚಿತ್ತದೊಳು ತಳ್ತಿರೆ ಜಿನಚರಣಾಂಭೋಜಂ ಭಾವಿಸುತ್ತಂ ಕೊಂಡಾಡಲು ಧಾತ್ರಿ ತನ್ನಂ ಸುರಗತಿವಡೆದಳು ಲೀಲೆಯಿಂ ಮಾಚಿಕಬ್ಬೇ॥

ಎಂದು ಅವಳ ಸನ್ಯಾಸನದ ಘೋರವೀರವ್ರತವನ್ನು ಶ್ರವಣಬೆಳಗೊಳದ ಶಾಸನ ಕೊಂಡಾಡುತ್ತದೆ.[೮೨]

ಸಂಘ-ಗಣ-ಗಚ್ಛ :

ಜೈನ ಧರ್ಮದಲ್ಲಿ ಸಂಘ (ಮೂಲ ಸಂಘ, ದ್ರಾವಿಡ ಸಂಘ, ನಂದಿಸಂಘ, ಯಾಪನೀಯ ಸಂಘ) ಗಣ (ದೇಶಿಕ ಗಣ, ಸೇವಗಣ, ಕಾಣೂರ ಗಣ) ಗಚ್ಛ (ಪುಸ್ತಕಗಚ್ಛ, ಮೇಷಪಾಷಾಣಗಚ್ಛ, ಸ್ವರ್ಣ ಪಾಷಾಣಗಚ್ಛ) ಅನ್ವಯ (ಕುಂದ ಕುಂದಾನ್ವಯ ಮೈಳಾಪಾನ್ವಯ, ಚಂದ್ರಿಕಾವಾಟ ಅನ್ವಯ) ಬಳಿ (ಇಂಗಳೇಶ್ವರ ಬಳಿ, ಪನಸೋಗೆ ಬಳಿ) ಗಣ

(ಕಂಡೂರುಗಣ, ಕಾರೇಯ ಗಣ) ಗಚ್ಛ (ಪೊಗರಿ ಗಚ್ಛ) ಮೊದಲಾದ ಪಾರಿಭಾಷಿಕ ಶಬ್ದಗಳಿಗೆ ಸೂತ್ರಪ್ರಾಯವಾದ ವಿವರಣೆಗಳುಂಟು. ಮೂವರು ಮುನಿಗಳ ಗುಂಪಿಗೆ ಗಣವೆಂದೂ ಏಳುಜನ ಮುನಿಗಳ ಸಂಚಾರಿ ತಂಡಕ್ಕೆ ಗಚ್ಛವೆಂದೂ ಮುನಿಸಮುದಾಯದ ಒಕ್ಕೂಟಕ್ಕೆ ಸಂಘವೆಂದೂ ಹೇಳಿದೆ.[೨೩]

ಗಚ್ಛವು ಮುನಿಯೊಬ್ಬನ ಮೇಲಾಳಿಕೆಯಲ್ಲಿ ಪರ್ಯಟನ ಕೈಗೊಳ್ಳುತ್ತಿದ್ದ ಮುನಿಗಳ ಸಮೊಹವಾಗಿತ್ತು ಹೀಗಾಗಿ ಗಣ ಗಚ್ಛಗಳಿಗೆ ಕೊಟ್ಟಿರುವ ವಿವರಣೆಯು ಒಂದು ಸ್ಥೂಲ ವ್ಯಾಖ್ಯಾನವೇ ಹೊರತು ಸಾರ್ವತ್ರಿಕವಲ್ಲ. ಗಣ-ಗಚ್ಛ ಎಂಬ ಮಾತುಗಳನ್ನು ಸಮಾನಾರ್ಥಕವಾಗಿಯೂ ಗ್ರಹಿಸಿರುವುದುಂಟು. ಪ್ರಾಕೃತ ಮೂಲಾಚಾರಕ್ಕೆ ವಸುನಂದಿಯು ಸಂಸ್ಕೃತದಲ್ಲಿ ಬರೆದಿರುವ ಟೀಕಾದಲ್ಲಿ ಈ ವಿವರಣೆಗಳಿವೆ. ಗಣಭೇದವೆಂಬ ಗ್ರಂಥದ ಕನ್ನಡ ಹಸ್ತಪ್ರತಿಯಲ್ಲಿ ನಾಲ್ಕು ಗಣಗಳನ್ನು ಹೆಸರಿಸಿ ಆ ಗಣಗಳು ಯಾವ ಸಂಘಕ್ಕೆ ಸೇರಿವೆಯೆಂಬುದನ್ನು ನಮೂದಿಸಿದೆ. ಸೇನ ಗಣವು ಮೂಲಸಂಘಕ್ಕೂ ಬಲವತ್ಕಾರಗಣವು ನಂದಿ ಸಂಘಕ್ಕೂ, ದೇಶೀಗಣವು ಸಿಂಹಸಂಘಕ್ಕೂ, ಕಾಲೋಗ್ರಗಣವು ಯಾಪನೀಯ ಸಂಘಕ್ಕೂ ಸೇರಿದ ಗಣಗಳೆನ್ನಾಲಾಗಿದೆ. ಕಾಲೋಗ್ರ ಗಣವೆಂಬುದು 'ಕಾಣೂರು', 'ಕಂಡೂರುಸ', 'ಕ್ರಾಣೂರು', ಎಂಬುದರ ಸಂಸ್ಕೃತ ಶಿಷ್ಟರೂಪ. ಯಾಪನೀಯ ಸಂಘದ ಸವಣರ, ಕಂತಿಯರ ಹೆಸರುಗಳಂತೆ ಈ ಗಣಗಚ್ಛ ಅನ್ವಯಗಳ ಹೆಸರುಗಳು ಶ್ವೇತಾಂಬರಕ್ಕಿಂತ ದಿಗಂಬರಕ್ಕೆ ಹೊಂದಿಕೆಯಾಗಿವೆಯಲ್ಲದೆ ಸಮಾನವಾಗಿಯೂ ಇವೆ ವಾಸ್ತವವಾಗಿ ಅವು ದಿಗಂಬರ ಮೂಲವೇ ಆಗಿವೆ.[೨೪]

ಚಾಳುಕ್ಯರ ಕಾಲದ ವೇಳೆಗಾಗಲೇ ಯಾಪನೀಯ ಸಂಘದೊಳಗೆ ಗಣ-ಗಚ್ಛ ವಿಭಜನೆ ಪ್ರಾರಂಭವಾಗಿತ್ತು. ಆದರೆ ಚಾಳುಕ್ಯರ ಆಳ್ವಿಕೆಯಲ್ಲಿ ಯಾಪನೀಯ ಸಂಘ ಸುವರ್ಣಯುಗದ ವ್ಯಾಪ್ತಿ ವೈಭವಗಳನ್ನು ಪಡೆಯಿತೆಂಬ ಪ್ರೊ ಕಮಲಾಹಂಪನಾ ಅವರ ಹೇಳಿಕೆಯನ್ನು ಅಂದಿನ ಕಾಲದ ಶಾಸನಗಳು ಪುಷ್ಟೀಕರಿಸುತ್ತವೆ. ಚಾಳುಕ್ಯರ ಕಾಲದ ಶಾಸನಗಳಲ್ಲಿ ಯಾಪನೀಯ ಸಂಘಕ್ಕೆ ಸೇರಿದ ನಾನಾ ಗಣ, ಗಚ್ಛ, ಅನ್ವಯ, ಅಮ್ನಾಯ ವಂಶಗಳನ್ನು ಕುರಿತು ವಿಪುಲವಾದ ಮಾಹಿತಿ ಇದೆ ಅಲ್ಲದೆ ಸೂರಸ್ತಗಣದ ಪ್ರಸ್ತಾಪವೂ ಹೆಚ್ಚಿನ ಪ್ರಮಾಣದಲ್ಲಿ ಕಂಡುಬರುತ್ತದೆ ಸೂರಸ್ತ (ಸ್ಥ) ಗಣವೂ ಕಾಣೂರು ಗಣವೂ ಒಂದೇ ಪರಂಪರೆಯ ಕವಲುಗಳು ಅಂದರೆ ಸಮಾನ ಮೂಲದವು.[೨೫]

ಚಾಳುಕ್ಯರ ಆಳ್ವಿಕೆಯ ಅವಧಿಯಲ್ಲಿ ಕ್ರಿ.ಶ೯೭೩-೭೪ರಿಂದ೧೧೮೪ರ ವೆರೆಗಿನ ಇನ್ನೂರು ವರ್ಷಗಳಲ್ಲಿ ಅತ್ಯಂತ ಪ್ರಬಲ ಜೈನ ಸಂಘವಾಗಿದ್ದುದು ಯಾಪನೀಯ. ಇದರೊಳಗೆ ಸೇರಿದ ಗಣಗಳ ಹೆಸರುಗಳು ಶಾಸನಗಳಲ್ಲಿ ಈ ರೀತಿಯಾಗಿ ಸಿಗುತ್ತವೆ. ೧) ಕಂಡೂರುಗಣ ೨)ಕಾಣೂರುಗಣ ೩)ಕಾಣೂರ್ಗಣ ೪)ಕ್ರೂಣೂರ್ಗಣ ೫)ಕ್ರಾಣೂರು ಗಣ ೬)ಕ್ರೋಣೂರ್ಗಣ- ಇವೆಲ್ಲವೊ ಒಂದೇ ಮೂಲದಿಂದ ಬಂದ ರೂಪಗಳು. ಇವು ಸ್ಥಳನಾಮ ಮೂಲದ ಹೆಸರುಗಳು ೭) ಕಾರೇಯ ಗಣ ಎಂಬ ಹೆಸರು ವೃಕ್ಷ ಮೂಲ ನಿಪ್ಪನ್ನವಾದುದು. ಕಾರೆ ಎಂಬುದು ಒಂದು ಬಗೆಯ ಹಣ್ಣು ಬಿಡುವ ಮುಳ್ಳುಗಿಡ, ಬೋರೆಯ ಹಣ್ಣಿನ ಗಿಡ, ಇದು ಅಚ್ಚ ಕನ್ನಡ ಶಬ್ದ ೮) ಕುಮುದಿಗಣ ೯)ಕೋಟೆ ಮಡುವಗಣ ೧೦)

ಪರಲೂರ ಗಣ೧೧) ಬಲತ್ಕಾರಣ/ ಬಳತ್ಕಾರಗಣ/ ಬಲವತ್ಕಾರಗಣ ನಂದಿ ಸಂಘಕ್ಕೆ ಸೇರಿದ ಬೇರೆ ಬೇರೆ ಶಬ್ದ ರೂಪಗಳು ಶಾಸನಗಳಲ್ಲಿ ಬಳಕೆಯಾಗಿವೆಯಾದರೂ ಅವೆಲ್ಲವೂ ಒಂದೇ ಬುಡಕ್ಕೆ ಸೇರಿದ್ದೆಂದು ತಿಳಿದು ಬರುತ್ತದೆ. ೧೨) ವಂದಿಯೂರ್ಗಣ, ೧೩) ವವಿಯೂರುಗಣ, ೧೪) ವಳಗಾರಗಣ, ೧೫) ಸೂರಸ್ಥ(ಸ್ತ)ಗಣ, ೧೬) ಪುನ್ನಾಗವೃಕ್ಷ ಮೂಲಗಣ, ೧೭) ಚಿತ್ರಕೂಟಾನ್ವಯ ಚಂದ್ರಿಕಾವಾಟಾನ್ವಯ, ೧೮) ಕೌಟರು ಗಚ್ಛ, ೧೯) ಚಿತ್ರಕೂಟಗಚ್ಛ, ೨೦) ತಗರಿಗಲ್ ಗಚ್ಛ, ೨೧) ತಿಂತ್ರಿಣಿ ಗಚ್ಛ, ೨೨) ಮೇಷ ಪಾಷಾಣಗಚ್ಛ, ೨೩) ಸ್ವರ್ಣಪಾಷಾಣಗಚ್ಛ.

ಹೀಗೆ ಎಂಟನೆಯ ಶತಮಾನದಿಂದ ತೊಡಗಿ ಹದಿನಾಲ್ಕನೆಯ ಶತಮಾನದವರೆಗೆ ಹಲವಾರು ಗಣ, ಗಚ್ಛ ಅನ್ವಯಗಳ ಹೆಸರುಗಳು ಕರ್ನಾಟಕ, ಆಂಧ್ರ, ತಮಿಳುನಾಡು ಮತ್ತು ಮಹಾರಾಷ್ಟ್ರಗಳಲ್ಲಿ ದೊರೆತ ಶಾಸನಗಳಲ್ಲಿ ಉಲ್ಲೆಖಗೊಂಡಿವೆ.[೨೬]

ಸಂಘ, ಗಣ, ಗಚ್ಛಗಳು ಇಂತಿವೆ:

ಸಂಘಗಳು: ಮೂಲಸಂಘ[೨೭] ಮೂಳಸಂಘ[೨೮]

ಗಣಗಳು: ಕಾಣೂರ್ಗಣ[೨೯] ದೇಶಿಗಣ[೩೦]

ಗಚ್ಛಗಳು: ಮೇಘಪಾಷಾಣಗಚ್ಛ[೩೧] ಪುಸ್ತಕಗಚ್ಛ[೩೨]

ಪ್ರಾಯಶಃ ಈಗ ಇವು ಇಲ್ಲವಾದರೂ ಆಕಾಲದಲ್ಲಿನ ಕೆಲವು ಆಚಾರ್ಯರ ಉಲ್ಲೇಖಗಳು ತಾವು ಸೇರಿರುವ ಸಂಘ, ಗಣ, ಗಚ್ಛಗಳನ್ನು ಹೇಳಕೊಂಡಿರುವುದುಂಟು ''ಕಾಣೂರ್ಗಣ ಮೇಘಪಾಷಾಣಗಚ್ಛದ ಮೇಘಚಂದ್ರ ಸಿದ್ಧಾಂತ ದೇವರು''[೩೩] ''ಮೂಲಸಂಘ ದೇಶಿಗಣ ಪುಸ್ತಕ ಗಚ್ಛದ ಕೊಲ್ಲಾಪುರದ ರೂಪನಾರಾಯಣ ಬಸದಿಯಾಚಾರ್ಯ ಶೃತಿಕೀರ್ತಿದೇವ''[೩೪] ''ಕಾಣೂರ್ಗಣದ ಮೇಘಪಾಷಾಣ ಗಚ್ಛದ ಮೇಘಚಂದ್ರಮಲಧಾರಿ''[೩೫] ಯನ್ನು ಕಾಣಬಹುದು.

ಹಬ್ಬಗಳು :

ಸಂಸ್ಕೃತಿ ಪರಂಪರೆಯ ಅವಿಭಾಜ್ಯ ಅಂಗಗಳಾದ ಹಬ್ಬಗಳು ಅನೇಕ ವರ್ಷಗಳಿಂದ ಆಚರಣೆಯಲ್ಲಿದ್ದು ಇಂದಿಗೂ ಜನಮನದಲ್ಲಿ ನೆಲೆ ನಿಂತಿವೆ. ಆದರೆ ಎಲ್ಲ ಹಬ್ಬಗಳ ಉದ್ದೇಶ ಮಾತ್ರ ಎಷ್ಟೋ ವೇಳೆ ತಿಳಿಯದೇ ಹೋಗುವ ಸಂಭವವಿದೆ. ಅದರಂತೆ ಈ ವಿಷಯದ ವಿವರಣೆ ಕೊಡುವ ಕೃತಿಗಳೂ ತೀರ ಕಡಿಮೆ. ಪ್ರಾಚೀನ ಶಾಸ್ತ್ರ ಗ್ರಂಥ, ಕಾವ್ಯ ಪುರಾಣ. ಅಖ್ಯಾಯಿಕೆ. ದಂತಕಥೆಗಳ ರೂಪದಲ್ಲಿ ಹರಡಿ ಹಂಚಿಹೋದ ಈ ವಿಷಯವನ್ನು ಸಮಗ್ರವಾಗಿ ಸಂಗ್ರಹಿಸುವುದು ಇಂದು ತೀರಾ ಅವಶ್ಯವಾಗಿವೆ.

ಸಾಮಾನ್ಯವಾಗಿ ಜೈನ ಹಬ್ಬಗಳು ಉಳಿದ ಹಬ್ಬಗಳಿಗಿಂತ ತುಂಬ ಭಿನ್ನವಾಗಿವೆ. ಲೋಕರಂಜನೆ, ಮನೋರಂಜನೆ, ಊಟ-ಉಡಿಗೆ, ಸಂತೋಷ ಮೊದಲಾದವೇ ಪ್ರಧಾನವಾಗಿದ್ದ ಬೇರೆ ಹಬ್ಬಗಳಿಗಿಂತ ಇಲ್ಲಿ ಭಿನ್ನತೆ

ತಲೆದೋರದಿರಲಾರದು ಇಲ್ಲಿ ಕ್ಷಣಿಕ ಮನೋರಂಜನೆ ಹಾಗೂ ಸಂತೋಷಕ್ಕೆ ಬೆಲೆಯಿರದೆ, ಶಾಶ್ವತವಾದ ಸುಖವನ್ನು ಹೊಂದಲು ಅವಶ್ಯಕವಾಗಿ ಬೇಕಾದ ತಳಪಾಯವನ್ನು ಹಾಕುವುದರಲ್ಲಿ ದೃಷ್ಟಿ ಕೇಂದ್ರೀಕೃತವಾಗಿದೆ. ಆದುದರಿಂದ ಜೈನ ಹಬ್ಬಗಳು ವ್ರತ, ನಿಯಮ, ತ್ಯಾಗ, ದಾನ ಹಾಗೂ ಆತ್ಮ ಜ್ಞಾನದ ಸಾಧನೆಯಲ್ಲಿ ತೊಡಗುವುದನ್ನು ಪ್ರತಿಪಾದಿಸುತ್ತವೆ.

ಜೈನ ದರ್ಶನದ ಪ್ರಕಾರ ''ಪಂಚಪರ್ವ''ಗಳನ್ನು ಮನ್ನಿಸುತ್ತಾರೆ, ಶುಕ್ಲಪಕ್ಷ ಮತ್ತು ಕೃಷ್ಣ ಪಕ್ಷಗಳ ಬಿದಿಗೆ, ಪಂಚಮಿ, ಅಷ್ಟಮಿ, ಏಕಾದಶಿ ಮತ್ತು ಚತುರ್ದಶಿ, ಇವುಗಳನ್ನೇ ಪಂಚಪರ್ವಗಳೆಂದು ಕರೆಯುತ್ತಾರೆ ಆದರೆ ಇಂದು ಅಷ್ಟಮಿ ಮತ್ತು ಚತುರ್ದಶಿಗಳನ್ನು ಮಾತ್ರ ಜೈನರು ಆಚರಿಸುವುದನ್ನು ನಾವು ಕಾಣಬಹುದಾಗಿದೆ.

ಅದರಂತೆ ಈ ಪರ್ವಗಳಲ್ಲಿ ನಿತ್ಯ ಮತ್ತು ನೈಮಿತ್ಯಕವೆಂದು ಎರಡು ಭೇಧಗಳನ್ನು ಹೇಳಿದ್ದಾರೆ. ''ಪಂಚಪರ್ವ''ಗಳು ನಿತ್ಯ ಪರ್ವಗಳಾಗಿವೆ. ಇವು ವರ್ಷದ ಪ್ರತಿತಿಂಗಳು ಮೇಲಿಂದ ಮೇಲೆ ಬರುವದರಿಂದ ನಿತ್ಯವೂ ಶ್ರಾವಕನು ಆಚರಿಸತಕ್ಕ ಪರ್ವಗಳಾದುದರಿಂದ ಅದನ್ನು ನಿತ್ಯಪರ್ವಗಳೆಂದು ಕರೆಯಲಾಗಿದೆ. ಅದರಂತೆ ಜೈನ ದರ್ಶನದಲ್ಲಿ ಇನ್ನೂ ಅನೇಕ ಹಬ್ಬಗಳಿವೆ. ಅವನ್ನು ಬೇರೆ ಬೇರೆ ಸಂದರ್ಭದಲ್ಲಿ ಆಚರಿಸುವ ರೂಢಿಯಿರುವುದರಿಂದ ಅವುಗಳನ್ನು 'ನೈಮಿತ್ತಿಕ ಪರ್ವ'ವೆಂದು ಕರೆಯುತ್ತಾರೆ ಈ ರೀತಿ ನೈಮಿತ್ತಿಕ ಪರ್ವಗಳೆಂದು ಆಚರಿಸಲ್ಪಡುವ ಹಬ್ಬಗಳಲ್ಲಿ ಯುಗಾದಿ, ಮಹಾವೀರ ಜಯಂತಿ, ಅಕ್ಷಯತೃತೀಯಾ, ಶೃತಪಂಚಮಿ ದಶಲಕ್ಷಣ, ಪರ್ವ ವಿಜಯದಶಮಿ, ದೀಪಾವಳಿ, ಶಿವರಾತ್ರಿ ಮೊದಲಾದವು ವಿಶೇಷವಾದವು, ಚಾರಿತ್ರ್ಯವನ್ನು ರೂಪಿಸುವ ಈ ಹಬ್ಬಗಳು ಆತ್ಮೋನ್ನತಿಗೆ ತುಂಬಾ ಸಹಾಯಕಾರಿಯಾಗಿವೆ.[೨೬] ಜೈನ ಶಾಸನಗಳಲ್ಲಿ ಎರಡು ಹಬ್ಬಗಳ ಅಥವಾ ವೃತಗಳ ಪ್ರಸಕ್ತಿ ವಿಶೇಷವಾಗಿ ಬರುತ್ತದೆ. ಅವುಗಳೆಂದರೆ ''ಜೀವದಯಾಷ್ಟಮಿ'' ಮತ್ತು ''ನಂದೀಶ್ವರ ದಷ್ಟಮಿ''ಪರ್ವ.[೨೭]

ಜೀವದಯಾಷ್ಟಮಿ :

ಅಶ್ವಿಜ ಶುದ್ದ ಪ್ರತಿಪದೆಯಿಂದ ದಶಮಿಯವರೆಗಿನ ೧೦ದಿನಗಳವರೆಗೆ ಜೈನರು ಆಚರಿಸುವ ವಿಶಿಷ್ಟವಾದ ಹಬ್ಬವಾಗಿದೆ ನಿರಪರಾಧಿ ಪ್ರಾಣಿಗಳಿಗೆ ಸಂರಕ್ಷಣೆ ದೊರೆಯುವಂತೆ, ಹಿಂಸೆ ಎಳ್ಳಷ್ಟು ಸಂಭವಿಸದಂತೆ, 'ಜೀವದಯಾಷ್ಟಮಿ'ಯ ಆಚರಣೆಯನ್ನು ರೂಢಿಯಲ್ಲಿ ತಂದು ಅಹಿಂಸಾ ತತ್ವದ ಪ್ರತಿಪಾದನೆಯನ್ನು ಸಕಾಲದಲ್ಲಿ ಮಾಡಿ, ಎಚ್ಚರವನ್ನೀಯುವಲ್ಲಿ ಜೈನ ಆಚಾರ್ಯರು ವಿಶೇಷ ಕಾಣಿಕೆ ಸಲ್ಲಿಸಿದ್ದಾರೆ. ಹಿಂಸೆಯ ಪ್ರಬಲ್ಯ ಹೆಚ್ಚಾಗಬಹುದಾದ ಅಷ್ಟಮಿಯ ದಿನವನ್ನೇ 'ಜೀವದಯಾಷ್ಟಮಿ'ಯಾಗಿ ಪರಿವರ್ತಿಸಿ ಅದನ್ನು ಅರ್ಥಪೂರ್ಣವಾಗಿ ಆಚರಿಸುವಲ್ಲಿ ತುಂಬ ವೈಶಿಷ್ಟ್ಯವಿದೆ.

ಸಂಕಲ್ಪ ಹಿಂಸೆಯ ಫಲವಾಗಿ ಅನೇಕ ಭಾವಗಳಲ್ಲಿ ಪ್ರಾಯಶ್ಚಿತ್ತ ಪಟ್ಟ ಯಶೋಧರನ ಕಥೆ ಕವಿ ಜನ್ನನ ಕಾವ್ಯದ ವಸ್ತುವಾಗಿದೆ ಯಶೋಧರ ಚರಿತೆಯ ಆರಂಭದಲ್ಲಿಯೇ ಜನ್ನ ಕವಿ ಹೀಗೆ ಹೇಳಿದ್ದಾನೆ.

ಶ್ರವಕ ಜನದುಪವಾಸಂ

ಜೀವದಯಾಷ್ಟಮಿಯೊಳಾಗೆ ಪಾರಾಣೆ ಕಿವಿಗ

ಳ್ಳೀವಸ್ತು ಕಥನದಿಂದುದ್

ಭಾವಿಸೆ ಕವಿಭಾಳಲೋಚನಂ ವಿರಚಿಸಿದಂ ೧-೨

ಅಹಿಂಸೆಯೇ ಪರಮರ್ಧವೆಂದು ಸಾರುವ ಜೈನ ತತ್ವವನ್ನು ಜೀವದಯಾಷ್ಟಮಿ ನೋಂಪಿಯ ಕಥೆಯಲ್ಲಿಯೂ ಸುಂದರವಾಗಿ ನಿರೂಪಿಸಲಾಗಿದೆ.

ಜೀವದಯೆಯೊಂದೆ ಧರ್ಮಂ

ಜೀವದಯಾಷ್ಟಮಿಯಮಾಡುದದಜೆಂ ಭವ್ಯರ್

ಜೀವ ದಯದಲ್ಲಿ ನೆಗಟ್ಟೀ

ಜೀವದಯಾಷ್ಟಮಿಯ ನೋಂತು ಸುಖಮಂ ಪಡೆವರ್

ಎಂದು 'ಜೀವದಯಾಷ್ಟಮಿಯ ನೋಂಪಿಯ' ಉಪಯೋಗವನ್ನು ತಿಳಿಸಲಾಗಿದೆ ಹೀಗೆ ಅಹಿಂಸೆಯನ್ನು ಪ್ರತಿಪಾದಿಸುವಲ್ಲಿ ಜೈನಧರ್ಮವು ವಿಶೇಷತೆಯನ್ನು ಪಡೆದಿದೆ.

ನಂದೀಶ್ವರ ದಷ್ಟಮಿ :

ಈ ಪರ್ವಕ್ಕೆ 'ತಿರುನಂದೀಶ್ವರ' ಎಂಬ ಹೆಸರೂ ಉಂಟು. ನಂದೀಶ್ವರ ನೋಂಪಿಯ ಸಮಯದಲ್ಲಿ ದಾನಮಾಡುವುದು ಶ್ರೇಷ್ಠವೆಂದು ಶಾಸನವೊಂದು ತಿಳಿಸುತ್ತದೆ.[೩೮] ನಂದೀಶ್ವರದ ನೋಂಪಿಯ ಮಹಿಮೆಯನ್ನು ವರ್ಣಿಸುವ ಚಂಪೂ ಗ್ರಂಥವೊಂದು ಕನ್ನಡದಲ್ಲಿದೆ.[೩೯] ರತ್ನತ್ರಯಗಳ ಆರಾಧನೆಯಿಂದ ಸಿದ್ಧ ಪದವಿಯನ್ನು ಪಡೆದುದರ ಸಂಕೇತವೇ ನಂದೀಶ್ವರದ ಪ್ರತಿಮೆ. ನಂದೀಶ್ವರದ ಪೂರ್ಣ ಪ್ರತಿಮೆ ಹೀಗಿರಬೇಕು. ಪ್ರತಿಮೆಯ ಪ್ರತಿಮುಖದ ಮೇಲೂ ತೀರ್ಥಂಕರರ ೧೦೧೪ ಪ್ರತಿಮೆಗಳಿದ್ದು ತುದಿಯಲ್ಲಿ ಸಿದ್ಧನ ಚಿತ್ರವಿರಬೇಕು. ಇದನ್ನು ಈಗಲೂ ಲಕ್ಷ್ಮೇಶ್ವರದ ಶಂಖಬಸ್ತಿಯಲ್ಲಿ ಕಾಣಬಹುದಾಗಿದೆ. ಈ ನೋಂಪಿಗಳ ಜೊತೆಯಲ್ಲಿ ಸಿದ್ಧ ಚಕ್ರದ ನೋಂಪಿ ಮತ್ತು ಶ್ರುತ ಪಂಚಮಿ ಎಂಬ ಎರಡು ನೋಂಪಿಗಳಿದ್ದಂತೆ ಶಾಸನಗಳಿಂದ ತಿಳಿದುಬರುತ್ತದೆ. ಸಿದ್ಧ ಚಕ್ರದ ನೋಂಪಿಯನ್ನು ಸಿದ್ಧರ ಗೌರವಾರ್ಥವಾಗಿ ಆಚರಿಸಿದರೆ, ಶ್ರುತಪಂಚಮಿಯ ನೋಂಪಿಯ ಆಚರಣೆಯು ಜೈನ ಗ್ರಂಥಗಳ ಅಧ್ಯಯನಕ್ಕೆ ಸಂಬಂಧಪಟ್ಟುದು.[೪೦]

ಆಚಾರ್ಯರು :

ಮೂರನೆಯ ಸೋಮೇಶ್ವರನ ಶಾಸನಗಳು ಕೆಲವು ಜೈನ ಆಚಾರ್ಯರ, ಪಂಡಿತರ ಬಗ್ಗೆ ತಿಳಿಸಿದರೂ ಸಹ ಅವರ ಸ್ಪಷ್ಟವಾದ ಮಾಹಿತಿಯನ್ನು ನೀಡುವುದಿಲ್ಲ. ಕೇವಲ ಆಚಾರ್ಯರಿಗೆ ನೀಡಿದಂತಹ ದಾನಗಳನ್ನು ಮಾತ್ರ ಉಲ್ಲೇಖಿಸಿವೆ. ಅಂತಹ ಕೆಲವು ಜೈನ ಆರ್ಚಾರ ವಿವರಗಳನ್ನು ಈ ಕೆಳಗೆ ನೀಡಲಾಗಿದೆ.

ಕರಿಕಂಠ ಜೀಯ :

ಸಿಂದವೊಳದ ಕರಿಕಂಠ ಜೀಯನು ತಪೋಧನನಾಗಿದ್ದು, ಇವರ ಆಹಾರ ಮತ್ತು ಆಶನಾಚ್ಛಾದನಕ್ಕೆ ದಂಡನಾಯಕ ಅನಂತಪಾಲಯ್ಯನು ಭೂಮಿಯನ್ನು ದಾನವಾಗಿ ನೀಡಿದನು.[೪೧]

ಕೀರ್ತಿಪಂಡಿತರು :

ಕೀರ್ತಿಪಂಡಿತರು ಮಹಾಸ್ಥಾನಗೊಗ್ಗಿಯ ಬಸದಿಯ ಆಚಾರ್ಯರಾಗಿ ಸೇವೆಸಲ್ಲಿಸುತ್ತಿದ್ದರು.[೪೨]

ಆಚಾರ್ಯ ಶೃತಿಕೀರ್ತಿದೇವರು :

ಇವರು ಕೊಲ್ಲಾಪುರದ ರೂಪನಾರಾಯಣ ಬಸದಿಯ ಆಚಾರ್ಯರಾಗಿದ್ದರು. ಇವರ ಸಮ್ಮುಖದಲ್ಲಿ ಕವಡೆಗೊಳ್ಳದ ಬಳಿಯ ಸಂತೆಯ ಮುದ್ಗೊಟೆಯಲ್ಲಿ ಕಟ್ಟಿಸಿದ ಪಾರ್ಶ್ವನಾಥ ಬಸದಿಗೆ ಅನೇಕ ವ್ಯಾಪಾರಿಗಳು ಸೇರಿ ದಾನ ನೀಡಿದರು.

ವೈಷ್ಣವ ಧರ್ಮ :

ಕ್ರಿ.ಶ.ಪೂರ್ವದಲ್ಲಿಯೇ ದಕ್ಷಿಣ ಭಾರತಕ್ಕೆ ಪ್ರವೇಶಿಸಿದ ವೈಷ್ಣವ ಧರ್ಮ[೪೩] ಕ್ರಿ.ಶ.ನಾಲ್ಕನೆಯ ಶತಮಾನದ ವೇಳೆಗಾಗಲೇ ಕರ್ನಾಟಕದಲ್ಲಿ ಜನಪ್ರಿಯವಾಗಿದ್ದಿತು ನಂತರ ಅದನ್ನು ಇಲ್ಲಿ ಆಳಿದಂತಹ ಅರಸರೆಲ್ಲರೂ ಪೋಷಿಸಿಕೊಂಡು ಬಂದರು ಅದಕ್ಕೆ ಕಲ್ಯಾಣದ ಚಾಲುಕ್ಯರೂ ಸಹ ಹೊರತಾಗಿರಲಿಲ್ಲ. ಕಲ್ಯಾಣದ ಚಾಲುಕ್ಯರ ಕಾಲದಲ್ಲಿ ಇವರ ಸಾಮ್ರಾಜ್ಯದಾದ್ಯಂತ ನಿರ್ಮಿತಗೊಂಡ ಅನೇಕ ವೈಷ್ಣವ ದೇವಾಲಯಗಳು ವೈಷ್ಣವ ಧರ್ಮದ ಜನಪ್ರಿಯತೆಯನ್ನು ಕುರಿತು ಹೇಳುತ್ತದೆ.

ಮೂರನೆಯ ಸೋಮೇಶ್ವರನ ಕಾಲದಲ್ಲಿಯೂ ಸಹ ವೈಷ್ಣವ ಧರ್ಮ ಪ್ರಮುಖ್ಯತೆಯನ್ನು ಪಡೆದುಕೊಂಡಿತ್ತು ಇವನಕಾಲದಲ್ಲಿ ನಾಗೆಯನಾಯಕ ಎಂಬುವವನು ಪಲಯಾರಿಕೆಯ ಮಾಧವ ದೇವರು ಪ್ರತಿಷ್ಠೆ ಮಾಡಿದ ಕೇಶವದೇವರ ನಂದಾದೀವಿಗೆಗೆ ನೈವೇದ್ಯಕ್ಕೆ ೧೨ ಮತ್ತರು ಭೂಮಿಯನ್ನು ದತ್ತಿಯಾಗಿ ನೀಡಿದನು.[೪೪] ವಂಕಣ ಚೋಳ ಮಹಾರಾಜ ಕೊಲ್ಮ ಗುಡಿಯ ಪ್ರಭು ಮುಪ್ಪರಟಿ ಎಂಬುವವನು ಮಾಡಿಸಿದ ಕೇಶವ ದೇವರಿಗೆ ಸೇವೆಗಾಗಿ ೨ ಮತ್ತರು ಭೂಮಿ ಒಂದು

ಹೂದೋಟ, ಒಂದು ಗಾಣವನ್ನು ಪೂಜಾರಿ ವ್ಯಾಸಣ ಭಟ್ಟರಿಗೆ ದತ್ತಿಕೊಟ್ಟನೆಂದು ಇದರಲ್ಲಿ ದಾಖಲಿಸಿದೆ.[45] ಮಹಾಮಂಡಳೇಶ್ವರ ಎರೆಯವಲರಸ ಶ್ರೀಮದ್‌ಗ್ರಹಾರ ನಕರೇಶ್ವರದಲ್ಲಿ ವೆಣ್ಣಮಯ್ಯನಾಯಕ ಕಟ್ಟಿಸಿದ ಶ್ರೀಕೇಶವ ದೇವಾಲಯಕ್ಕೆ ದಾನ ನೀಡಿದನು.[46] ಅಲ್ಲದೇ ಇನ್ನೂ ಅನೇಕರು ದೇವಾಲಯದ ಪೂಜೆ ಪುನಸ್ಕಾರಕ್ಕೆ ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆ ದಾನನೀಡಿರುವುದನ್ನು ಕಾಣುತ್ತೇವೆ.

ಬ್ರಾಹ್ಮಣರು ತಾವು ಶ್ರೇಷ್ಠಕುಲದವರು, ತಮ್ಮ ವಂಶದ ಮೂಲ ಬಹಳ ಪ್ರಾಚೀನವಾದುದು ಎಂದು ಹೇಳಿಕೊಳ್ಳಲು ವಿಶಿಷ್ಟ ಕುಲಗೋತ್ರಗಳನ್ನು ಹೊಂದಿರುವ ವಿಷಯ ಈ ಪ್ರಬಂಧದ ''ಸಮಾಜ ವ್ಯವಸ್ಥೆ'' ಅಧ್ಯಾಯದಲ್ಲಿ ಬಂದಿದೆ. ಪ್ರಾಚೀನ ಸಮಾಜ ವ್ಯವಸ್ಥೆಯಲ್ಲಿ ವರ್ಣಾಶ್ರಮಧರ್ಮವನ್ನು ಚಾಚೂತಪ್ಪದೆ ಅನುಸರಿಸಿಕೊಂಡು ಬಂದ ಇವರು ರಾಜಕೀಯ ವ್ಯವಸ್ಥೆಯಲ್ಲೂ ಪ್ರಮುಖಸ್ಥಾನ ವಹಿಸಿದ್ದರು ಅಂದಿನ ಅನೇಕ ಜನ ದಂಡನಾಯಕರು ಮತ್ತು ವಿವಿಧ ಅಧಿಕಾರಿ ವರ್ಗದವರು ವಿಪ್ರಕುಳ ತಿಳಕರಾಗಿರುವುದು ಈ ಪ್ರಬಂಧದ 'ರಾಜಕೀಯ ವ್ಯವಸ್ಥೆ' ಅಧ್ಯಾಯದಲ್ಲಿಯ ವಿವಿಧ ಅಧಿಕಾರಿಗಳ ಹೆಸರುಗಳಿಂದ ಮನಗಾಣಬಹುದು. ಅವರಿಗಿರುವ ಬುದ್ಧಿಶಕ್ತಿ ಮತ್ತು ಶಾಸ್ತ್ರ ಪರಿಜ್ಞಾನ ಅಂದಿನ ಸಮಾಜದ ವಿಶೇಷ ಮನ್ನಣೆಗೆ ಅವರು ಪಾತ್ರರಾಗಿರುವಂತೆ ಮಾಡಿದವು.

ವೈಷ್ಣವ ಧರ್ಮದ ಬ್ರಾಹ್ಮಣರು ಅಗ್ರಹಾರದ ಮಹಾಜನರೆನಿಸಿ ಅಲ್ಲಿನ ಆಡಳಿತ ನೋಡಿಕೊಳ್ಳುವುದರೊಂದಿಗೆ ಯಜನ, ಯಾಜನ, ಅಧ್ಯಯನ, ಅಧ್ಯಾಪನ ಎಂಬ ಷಟ್ಕರ್ಮಗಳಲ್ಲಿ ನಿರತರಾಗಿರುತ್ತಿದ್ದರು. ಯಜ್ಞಯಾಗಗಳನ್ನು ಮಾಡುತ್ತ ಈ ಧರ್ಮದ ಆಚರಣೆಯನ್ನು ಮುಂದುವರೆಸಿದ್ದರು.

ಮೂರನೆಯ ಸೋಮೇಶ್ವರನ ಕಾಲದಲ್ಲಿ ಈತನ ಮಹಾಮಂಡಳೇಶ್ವರನಾದ ಹೊಯ್ಸಳ ವಿಷ್ಣುವರ್ಧನನ ಸಾಮ್ರಾಜ್ಯದಲ್ಲಿ ರಾಮಾನುಜರ ಶ್ರೀವೈಷ್ಣವ (ವಿಶಿಷ್ಟಾದ್ವೈತ) ಧರ್ಮದ ಚಟುವಟಿಕೆ ಹೆಚ್ಚಿದ್ದರೂ ಜೈನ ಮತ್ತು ಶೈವಧರ್ಮಗಳೂ ಕೂಡ ಅಲ್ಲಿ ಪ್ರಾಮುಖ್ಯತೆಯನ್ನು ಪಡೆದುಕೊಂಡಿದ್ದವು. ಈತನ ಕಾಲದಲ್ಲಿ ರಾಯಭಾಗ[47] ತಡಿಕೊಂಡ[48] ತಿಳವಳ್ಳಿ[49] ಮುಕ್ಕುಂದಿ,[50] ಏರಿಗೆ,[51] ಕೊಲಿಮಿಗುಂಡ್ಲ,[52] ನಿಂಬರಗಿ,[53] ಉರುವಕೊಂಡ,[54] ಹುಣಸಗಿ,[55] ಗದಗ,[56] ಕುರ್ತಕೋಟಿ,[57] ಏರಿಗೆ[58]ಗಳು ಈ ನಾಡಿನ ಪ್ರಮುಖ ವೈಷ್ಣವ ಕೇಂದ್ರಗಳಾಗಿದ್ದವು. ಇವುಗಳಲ್ಲಿ ಕೆಲವು ಆಕಾಲದ ಪ್ರಮುಖ ಅಗ್ರಹಾರಗಳಾಗಿದ್ದವು. ಹೀಗೆ ಸೋಮೇಶ್ವರನ ನಾಡಿನಲ್ಲಿರುವ ಹದಿನೆಂಟು ಅಗ್ರಹಾರಗಳು ಮತ್ತು ಬಹಳಷ್ಟು ಅಗ್ರಹಾರ ಪಟ್ಟಣ ಊರುಗಳಲ್ಲಿರುವ ಬ್ರಹ್ಮಪುರಿಗಳು ಅವರ ಆಧಿಕ್ಯವನ್ನು ಸೂಚಿಸುತ್ತವೆ.

ಮೂರನೆಯ ಸೋಮೇಶ್ವರನ ಮಾನಸೋಲ್ಲಾಸದಲ್ಲಿಯೂ ಸಹ ವೈಷ್ಣವ ಧರ್ಮದ ಆರಾಧ್ಯದೇವರಾದ ವಿಷ್ಣುವಿನ ಅವತಾರಗಳ ಮತ್ತು ಇವನ ಇಪ್ಪತ್ತನಾಲ್ಕು ಮೂರ್ತಿಬೇಧಗಳನ್ನು ತಿಳಿಸಲಾಗಿದೆ.

ಕೇಶವ	ಪದ್ಮ	ಶಂಖ	ಚಕ್ರ
ನಾರಾಯಣ	ಶಂಖ	ಪದ್ಮ	ಗದೆ
ಮಾಧವ	ಗದೆ	ಚಕ್ರ	ಶಂಖ
ಗೋವಿಂದ	ಚಕ್ರ	ಗದೆ	ಪದ್ಮ
ವಿಷ್ಣು	ಗದೆ	ಪದ್ಮ	ಶಂಖ
ಪ್ರದ್ಯುಮ್ನ	ಚಕ್ರ	ಶಂಖ	ಗದೆ
ಮಧುಸೂಧನ	ಚಕ್ರ	ಶಂಖ	ಪದ್ಮ
ಅನಿರುದ್ಧ	ಚಕ್ರ	ಗದೆ	ಶಂಖ
ತ್ರಿವಿಕ್ರಮ	ಪದ್ಮ	ಗದೆ	ಚಕ್ರ
ಪುರುಷೋತ್ತಮ	ಚಕ್ರ	ಪದ್ಮ	ಶಂಖ
ವಾಸುದೇವ	ಶಂಖ	ಚಕ್ರ	ಗದೆ
ಅಧೋಕ್ಷಜನ	ಪದ್ಮ	ಗದೆ	ಶಂಖ
ಶ್ರೀಧರ	ಪದ್ಮ	ಚಕ್ರ	ಗದೆ
ನರಸಿಂಹ	ಚಕ್ರ	ಪದ್ಮ	ಗದೆ
ಹೃಷಿಕೇಶ	ಗದೆ	ಚಕ್ರ	ಪದ್ಮ
ಅಚ್ಯುತ	ಗದೆ	ಪದ್ಮ	ಚಕ್ರ
ಪದ್ಮನಾಭ	ಶಂಖ	ಪದ್ಮ	ಚಕ್ರ
ಜನಾರ್ಧನ	ಪದ್ಮ	ಶಂಖ	ಚಕ್ರ
ದಾಮೋದರ	ಪದ್ಮ	ಶಂಖ	ಗದೆ
ಉಪೇಂದ್ರ	ಶಂಖ	ಚಕ್ರ	ಗದೆ
ಸಂಕರ್ಷಣ	ಗದೆ	ಶಂಖ	ಪದ್ಮ
ಹರಿಯ	ಶಂಖ	ಚಕ್ರ	ಪದ್ಮ
ವಾಸುದೇವ	ಗದೆ	ಶಂಖ	ಚಕ್ರ
ಕೃಷ್ಣ	ಶಂಖ	ಗದೆ	ಪದ್ಮ

ಈ ಎಲ್ಲ ಮೂರ್ತಿಗಳು ಚತುರ್ಬಾಹುಗಳಿಂದ ಕೂಡಿರುವವು ಎಂಟು ಬಾಹುಗಳುಳ್ಳ ಹರಿಯ ವಿಗ್ರಹದಲ್ಲಿ ಬಲಹಸ್ತಗಳಲ್ಲಿ ನಂಜಕ (ನಂದಕವೆಂಬುದು ಹರಿಯ ಖಡ್ಗದ ಹೆಸರು) ಗದಾ ಬಾಣ, ಪದ್ಮಗಳು ಇರಬೇಕು ಎಡಹಸ್ತಗಳಲ್ಲಿ ಶಂಖ, ಧನುಸ್ಸು, ಚಕ್ರ, ಹಾಗೂ ಖೇಟಕ (ಗುರಾಣಿ) ಇರಬೇಕು ಎಂದು ತಿಳಿಸುತ್ತಾನೆ. ಅಲ್ಲದೆ ವಿಷ್ಣುವಿನ ವಿವಿಧ ಅವತಾರಗಳ ಮೂರ್ತಿಗಳೂ ಸಹ ಯಾವ ಯಾವ ರೀತಿಯಾಗಿರಬೇಕೆಂದು ತಿಳಿಸುತ್ತಾನೆ. ಇದರಿಂದಲೂ ಸಹ ಆಕಾಲದಲ್ಲಿನ ವೈಷ್ಣವ ಧರ್ಮದಬಗ್ಗೆ ಇರುವ ಜನರ ಭಾವನೆಯನ್ನು ಮತ್ತು ಆಧರ್ಮದ ಬಗ್ಗೆ ಅವರಿಗಿರುವ ಆಸಕ್ತಿಯನ್ನು ಅಥವಾ ಅಭಿರುಚಿಯನ್ನು ಭಕ್ತಿ ಭಾವವನ್ನು ತಿಳಿಯಬಹುದು.

ಸ್ಥಾನಾಚಾರ್ಯರು/ಪಂಡಿತರು :

ಮೂರನೆಯ ಸೋಮೇಶ್ವರನ ಕಾಲದಲ್ಲಿನ ಆಚಾರ್ಯರಾದ ವಾಮದೇವ ಪಂಡಿತರು,[೫೯] ತಪೋಧನರಾದ ಮಾಧವರಾಸಿ,[೬೦] ಚಟ್ಟೋಪಾಧ್ಯಾಯ ವಾಸದೇವಯ್ಯ,[೬೧] ನಾರಾಯಣ ಭಟ್ಟ[೬೨]ರು ವೈಷ್ಣವ ಧರ್ಮದ ಘನತೆಯನ್ನು ಹೆಚ್ಚಿಸಿದರು.

ಶೈವ ಧರ್ಮ :

ಶೈವ ಧರ್ಮವು ಬಹುಪುರಾತನ ಮತವಾಗಿದ್ದು ದಕ್ಷಿಣ ಭಾರತದಲ್ಲಿ ಅದು ಇತಿಹಾಸ ಪೂರ್ವ ಕಾಲದಿಂದ ಪ್ರಚಾರದಲ್ಲಿತ್ತೆಂದು ಸಂಪ್ರದಾಯ ಪರಂಪರೆಗಳಿಂದ ತಿಳಿದುಬರುತ್ತದೆ.[೬೩] ಇದರಲ್ಲಿ ಅನೇಕ ಪ್ರಭೇದಗಳಿರುವುದನ್ನು ಪ್ರಾಚೀನ ದರ್ಶನ-ಶಾಸ್ತ್ರಕಾರರು ಗುರುತಿಸಿದ್ದಾರೆ.[೬೪] ಕರ್ನಾಟಕದ ಶೈವ ಇತಿಹಾಸದಲ್ಲಿ ಕಾಪಾಲಿಕರ ಸಂಖ್ಯೆ ಇಲ್ಲವೆನ್ನುವಷ್ಟು ಕಡಿಮೆ, ಪಾಶುಪತ ಕಾಳಾಮುಖರು ಪ್ರಮುಖವಾದ ಹಾಗೂ ಅತ್ಯಂತ ಪ್ರಭಾವೀ ಪಾತ್ರವಹಿಸಿರುವದು ಸ್ಪಷ್ಟವಾಗುತ್ತದೆ. ಆದರೆ ಪಾಶುಪತ-ಕಾಳಾಮುಖರು ಎಲ್ಲಿಯವರು? ಅವರು ಕರ್ನಾಟಕದ ಮೂಲನಿವಾಸಿಗಳೇ? ಕರ್ನಾಟಕಕ್ಕೆ ಯಾವಾಗ ಬಂದರು? ಇಂತಹ ಹಲವಾರು ಪ್ರಶ್ನೆಗಳಿಗೆ ಈಗಾಗಲೇ ಕೆಲವು ವಿದ್ವಾಂಸರು ಉತ್ತರಿಸುವ ಪ್ರಯತ್ನ ಮಾಡಿದ್ದಾರೆ.

ಕರ್ನಾಟಕಕ್ಕೆ ಕಾಶ್ಮೀರದಿಂದ ಕಾಳಾಮುಖರು ಬಂದವರು ಇವರು ದಂಡಧಾರಿಗಳು ಅಥವಾ ಲಗುಡಧಾರಣರು ಎಂದು ಶ್ರೀಭಾಷ್ಯದಲ್ಲಿ ಹೇಳಿದೆ. ಇದು ಅವರ ವೈಶಿಷ್ಟ್ಯವಾಗಿದೆ ಎಂಬ ಡಾ.ಎಂ.ಎಚ್.ಕೃಷ್ಣ ಅವರ ಅಭಿಪ್ರಾಯವನ್ನು ಶ್ರೀ ಕಪಟರಾಳ ಕೃಷ್ಣರಾಯರು ವಿಶ್ಲೇಷಿಸುತ್ತಾ ''ಎಲ್ಲ ಕಾಳಾಮುಖರು ಕಾಶ್ಮೀರದಿಂದ ಕರ್ನಾಟಕಕ್ಕೆ ಬಂದವರೆಂದು ಊಹಿಸುವುದೂ ಸರಿಯಲ್ಲ ಯಾಕೆಂದರೆ ಕಾಳಾಮುಖರು ಬೇರೆ ಬೇರೆ ಸಂತಾನದವರೆಂದು ಅನೇಕ ಗುರು ಪರಂಪರೆಯವರ ಪೀಳಿಗೆಗಳನ್ನು ಹೇಳಲಾಗಿದೆ'' ಎಂದು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.[೬೫]

ಕಾಳಾಮುಖರು ಕಾಶ್ಮೀರದಿಂದ ಬಂದು ನೆಲೆ ನಿಂತವರು ಎಂದು ಡೇವಿಡ್.ಎನ್.ಲೊರೆನ್‌ಜಿನ್ ಅವರು ಅಭಿಪ್ರಾಯ ಪಡುತ್ತಾರೆ.[೧೬] ಆದರೆ ಈ ವಲಸೆಗೆ ಕಾರಣಗಳೇನು? ಎಂಬುದು ಸ್ಪಷ್ಟವಾಗಿಲ್ಲ ಎಂದು ಹೇಳಿದರೂ ಕೈತಪ್ಪಿದ ರಾಜಾಶ್ರಯ, ಧರ್ಮಪ್ರಚಾರ ಅವರ ರಾಜಕೀಯ ಪರಿಸ್ಥಿತಿ, ಕ್ಷಾಮ ಈ ಯಾವುದೇ ಒಂದು ಅಥವಾ ಹಲವು ಕಾರಣಗಳಿಂದ ಲಾಕುಳ ಶೈವ/ಕಾಳಾಮುಖರು ಉತ್ತರದಿಂದ ದಕ್ಷಿಣಕ್ಕೆ ವಲಸೆ ಬಂದಿರಬೇಕು ಮುಸಲ್ಮಾನರ ದಾಳಿಯೂ ಕಾಳಾಮುಖರು ಕಾಶ್ಮೀರದಿಂದ ದಕ್ಷಿಣದ ಕಡೆಗೆ ಬರಲು ಕಾರಣವಾಗಿರಬಹುದು.

ಬಹಳ ಹಿಂದಿನ ಕಾಲಕ್ಕೆ ಕಾಶ್ಮೀರದಿಂದ ದಕ್ಷಿಣಭಾರತಕ್ಕೆ ವಲಸೆಬಂದ ಕಾಳಾಮುಖರು ದಕ್ಷಿಣದಲ್ಲಿಯೂ (ದಕ್ಷಿಣದಲ್ಲಿ) ನೆಲೆಗೊಂಡರು. ಅದರಲ್ಲೂ (ವಿಶೇಷವಾಗಿ) ಪ್ರಮುಖವಾಗಿ ಈಗಿನ ಆಂಧ್ರ, ತಮಿಳನಾಡು, ಕರ್ನಾಟಕಗಳು ಅವರ ಪ್ರಮುಖ ನೆಲೆಗಳಾದವು. ಶ್ರೀಪರ್ವತ (ಶ್ರೀಶೈಲ) ಬಳ್ಳಿಗಾವೆ ಮತ್ತಿತರ ಸ್ಥಳಗಳು ಕಾಳಾಮುಖ ಕೇಂದ್ರಗಳಾಗಿದ್ದವು.

ಪಾಶು ಪತ ಶಾಖೆಯ ಸ್ಥಾಪಕನಾದ ಲಕು ಲೀಶನು ವಾಯುಪುರಾಣ, ಶಿವಪುರಾಣ, ಲಿಂಗಪುರಾಣ, ಸೂತಸಂಹಿತೆಗಳಲ್ಲಿ ಉಕ್ತನಾಗಿದ್ದು ಅವನು ರುದ್ರನ ಒಂದು ಅವತಾರವಾಗಿ ಗುಜರಾತಿನ ಕಾರ್ಯಾರೋಹಣದಲ್ಲಿ ಹುಟ್ಟಿದವನೆಂದು ತಿಳಿದುಬರುತ್ತದೆ[೧೭] ಮಹಾಭಾರತದ ಶಾಂತಿ ಪರ್ವದಲ್ಲಿ ಪಾಶುಪತ ಸಿದ್ಧಾಂತವನ್ನು ಪ್ರತಿಪಾದಿಸಿದವನು ಶ್ರೀಕಂಠನೆಂದು ಹೇಳಲಾಗಿದೆ ಅಭಿನವ ಗುಪ್ತನ ತಂತ್ರಾಲೋಕವು ಶ್ರೀಕಂಠನ ಜೊತೆಯಲ್ಲಿಯೇ ಲಕುಲೀಶನನ್ನು ಹೆಸರಿಸಿ ಇವರಿಬ್ಬರೂ ಶಿವಶಾಸನದ ಪ್ರತಿಪಾದನೆಗೆ ಅಧಿಕಾರಿಗಳೆಂದೂ ಅಭಿಪ್ರಾಯಪಟ್ಟಿದೆ.[೧೮] ಚಾಲುಕ್ಯರ ಮಹಾಕೂಟದ ಮುಕುಟೇಶ್ವೇರ ದೇವಾಲಯದ ಹೊರಭಾಗದ ಶಿಲೆಗಳಲ್ಲಿ ಲಕುಲೀಶ ಚಿತ್ರಗಳು ಬಾದಾಮಿಯಲ್ಲಿ ಲಕುಲೀಶನಿಗಾಗಿಯೇ ಕಟ್ಟಿಸಿರುವ ದೇವಾಲಯದ ಗರ್ಭಗುಡಿಯಲ್ಲಿರುವ ಜೀರ್ಣವಾದ ಲಕುಲೀಶನ ವಿಗ್ರಹ ಇವು ಕರ್ನಾಟಕದಲ್ಲಿ ಈ ಮತವು ಕ್ರಿ.ಶ.೯ನೇ ಶತಮಾನದಷ್ಟು ಪ್ರಾಚೀನದಲ್ಲಿತ್ತೆಂಬುದಕ್ಕೆ ನಿದರ್ಶನಗಳಾಗಿವೆ.[೧೯]

ಪಾಶುಪತ, ಕಾಳಾಮುಖ, ಕಾಪಾಲಿಕರಲ್ಲಿ ಪಾಶುಪತಕಾಳಾಮುಖರು ತಮ್ಮ ಸಾತ್ವಿಕ ಆಚರಣೆಗಳಿಂದ ಒಂದೇ ಗುಂಪಿಗೆ ಸೇರುತ್ತಾರೆ. ಮುಖದ ಮೇಲೆ ಕಪ್ಪುಗೆರೆಗಳನ್ನು (ಭಸ್ಮವನ್ನು)[೨೦] ಹಚ್ಚಿಕೊಳ್ಳುವ ಮೂಲಕ ಕಾಳಾಮುಖ (ಅಸಿತವಕ್ರ)ರೆನ್ನಿಸಿಕೊಂಡಿರಬಹುದಾದ ಇವರಿಗೂ, ದಿನಾಲೂ ಮೂರು ವೇಳೆ ಭಸ್ಮಸ್ನಾನ ಮಾಡಬೇಕೆನ್ನುವ ಪಾಶುಪತರಿಗೂ ಯಾವುದೇ ವ್ಯತ್ಯಾಸವಿದ್ದಂತಿಲ್ಲ.[೨೧] ಕನ್ನಡ ಶಾಸನಗಳು ಎಲ್ಲಯೂ ಇವರಿಬ್ಬರೂ ಬೇರೆ ಬೇರೆ ಎಂದು ಸ್ಪಷ್ಟವಾಗಿ ಹೇಳಿಲ್ಲ.[೨೨] ಇಬ್ಬರ ಹೆಸರುಗಳೂ ಶಕ್ತಿ ಪಂಡಿತ, ದೇವ, ಎಂದು ಕೊನೆಯಾಗುತ್ತವೆ. ಇಬ್ಬರನ್ನೂ ಗೊರವರೆಂದೂ, 'ನೈಷ್ಠಿಕ ತಪೋಧನ'ರೆಂದೂ ಕರೆಯುತ್ತಾರೆ.[೨೩]

ಕಾರ್ಯ, ಕಾರಣ, ಯೋಗ, ವಿಧಿ, ದುಃಖಾಂತ ಈ ಪಂಚಪದಾರ್ಥಗಳನ್ನು ಅಂಗೀಕರಿಸುವ ಲಕುಲೀಶ ಪಾಶುಪತ ಧರ್ಮದ ತತ್ವಗಳನ್ನು ಹತ್ತನೆಯ ಶತಮಾನದ ಭಾವಸರ್ವಜ್ಞ ತನ್ನ ಗಣಕಾರಿಕಾ ವ್ಯಾಖ್ಯಾನದಲ್ಲಿ ಮತ್ತು ಸಾಯಣ

ಯಾಧವ ತನ್ನ ಸರ್ವದರ್ಶನ ಸಂಗ್ರಹದಲ್ಲಿ ಸಂಗ್ರಹಿಸಿದ್ದಾರೆ.[೭೪] 'ಪಶುಪತಿ' ಎಂಬುದು ಶಿವನ ಅನೇಕ ಹೆಸರುಗಳಲ್ಲಿ ಒಂದು ಇಲ್ಲಿ ಒಬ್ಬೊಬ್ಬ ಜೀವಿಯೂ ಪಶು, ಅವನನ್ನು ಕಟ್ಟಿಹಾಕಿರುವುದು ಪಾಶ, ಜೀವಿಗಳ ಒಡೆಯ ಪಶುಪತಿ, ಪಾಶ (ಬಂಧನ)ವನ್ನು ಕತ್ತರಿಸಲು ಪಶುಪತಿ ಅಥವಾ ಮಹೇಶ್ವರನಿಗೆ ಶರಣು ಹೋಗಬೇಕು ಅಂದರೆ ಪಾಶುಪತ ವ್ರತವನ್ನು ಅಂಗೀಕರಿಸಿ ಆಚರಿಸಬೇಕೆಂಬುದೇ ಅದರ ಒಟ್ಟಾರೆ ತಿರುಳಾಗಿವೆ.[೭೫]

ಹನ್ನೊಂದನೆಯ ಶತಮಾನ ಕಲ್ಯಾಣಚಾಲುಕ್ಯರು ವೈಭವದಿಂದ ರಾಜ್ಯಭಾರ ಮಾಡುತ್ತಿದ್ದ ಕಾಲ. ಈ ಅವಧಿಯಲ್ಲಿ ಜೈನಧರ್ಮ ತನ್ನ ಗತ ವೈಭವದ ಕನಸಿನಿಂದ ಎಚ್ಚೆತ್ತು ತಾಂತ್ರಿಕ ಆಚರಣೆಗಳ ಮೂಲಕ ಜನಪ್ರಿಯತೆ ಗಳಿಸುವ ಹವಣಿಕೆಯಿತ್ತು. ಕರ್ನಾಟಕದ ದಕ್ಷಿಣ ಹಾಗೂ ಪೂರ್ವಭಾಗಗಳಲ್ಲಿ ಪ್ರಗಲ್ಬ ಸ್ಥಿತಿಯಲ್ಲಿದ್ದ ವೈಷ್ಣವಧರ್ಮ ಉತ್ತರ ಭಾಗದ ಶೈವರೊಂದಿಗೆ ಹೊಂದಾಣಿಕೆ ಮತ್ತು ಅನುಸಂಧಾನ ನಡೆಸಿತ್ತು.[೭೬] ಆದರೆ ಇದೇ ಅವಧಿಯಲ್ಲಿ ಸಾಮಾನ್ಯರೊಂದಿಗಿನ ನಿಕಟ ಸಂಬಂಧ ಮತ್ತು ರಾಜಕೀಯ ಪೋಷಣೆಯ ದೃಷ್ಟಿಯಿಂದ ಹೆಚ್ಚಿನ ಗೌರವ ಪಡೆದ ಕಾಳಾಮುಖ ಪಾಶುಪತರು ತಮ್ಮ ಸ್ಥಾನ ಭದ್ರ ಪಡಿಸಿಕೊಂಡಿದ್ದರು ಇಂತಹ ಸಮಯದಲ್ಲಿಯೇ ಆಳ್ವಿಕೆ ನಡೆಸುತ್ತಿದ್ದ ಮೂರನೆಯ ಸೋಮೇಶ್ವರನ ಕಾಲದಲ್ಲಿಯೂ ಆಸ್ಥಾನ ಸಡಿಲುಗೊಳ್ಳಲಿಲ್ಲವೆಂಬುದು ಆಕಾಲದ ಶಾಸನಗಳ ಅಧ್ಯಯನದಿಂದ ಸ್ಪಷ್ಟವಾಗುತ್ತದೆ.

ಶೈವಧರ್ಮದ ಏಳಿಗೆಗೆ ನಿಜವಾಗಿ ಶ್ರಮಿಸಿದವರೆಂದರೆ ಕಲ್ಯಾಣದ ಚಾಲುಕ್ಯರು. ಇದು ಕಲ್ಯಾಣ ಚಾಲುಕ್ಯರ 'ರಾಜಧರ್ಮ'ವೂ ಆಗಿದ್ದಿತು ಮೂಲತಃ ಶೈವಮತಾವಲಂಬಿಗಳಾದ ಕಲ್ಯಾಣದ ಚಾಲುಕ್ಯರು ಈ ಧರ್ಮಕ್ಕೆ ರಾಜಾಶ್ರಯ ಒದಗಿಸಿ ಪೋಷಿಸಿದರು. ಇವರ ಕಾಲದಲ್ಲಿ ಅಧೀನ ಅಧಿಕಾರಿಗಳು ಸಾಮಂತು, ಸಾಮಾನ್ಯರು, ಶೈವಧರ್ಮದ ದೇವಾಲಯಗಳನ್ನು ನಿರ್ಮಿಸಿ ಅವುಗಳ ಪೂಜೆ, ಪುನಸ್ಕಾರ, ದೇವರ ಅಂಗಭೋಗ, ರಂಗಭೋಗ, ಖಂಡಸ್ಫುಟಿತ ಜೀರ್ಣೋದ್ಧಾರ, ತಪೋಧನರ ಆಹಾರ ಮೊದಲಾದವುಗಳಿಗೆ ದತ್ತಿ-ದಾನನೀಡಿದ್ದಾರೆ. ಮತ್ತು ಅದಕ್ಕೆ ಕಾಳಾಮುಖ ಗುರುಗಳು ಕಾರಣರು ಎಂದರೆ ಉತ್ಪ್ರೇಕ್ಷೆಯಾಗಲಾರದು ಅಲ್ಲದೇ ಬಹುತೇಕ ಶಿವದೇವಾಲಯಗಳು ಜನತೆಯ ಸಾಂಸ್ಕೃತಿಕ ಬೆಳವಣಿಗೆಗೆ ಶ್ರಮಿಸಿರುವುದನ್ನು ಶಾಸನಗಳು ಸ್ಪಷ್ಟಪಡಿಸುತ್ತವೆ ಇಂತಹ ಸುಮಾರು ೬೦ ಕ್ಕೂ ಹೆಚ್ಚಿನ ಶಾಸನಗಳನ್ನು ಮೂರನೆಯ ಸೋಮೇಶ್ವರನ ಕಾಲದಲ್ಲಿಯೂ ಕಾಣಬಹುದು.

ಮೂರನೆಯ ಸೋಮೇಶ್ವರನ ಮಾನಸೋಲ್ಲಾಸದಲ್ಲಿಯೂ ಸಹ ಶೈವಧರ್ಮದ ಪ್ರಮುಖ ಆರಾಧ್ಯ ದೇವರಾದ ಶಿವನನ್ನು ನೀಲಕಂಠ, ಭೈರವ, ಮಹೇಶ್ವರ, ಅರ್ಧನಾರೀಶ್ವರ, ಉಮಾಮಹೇಶ್ವರ, ಶಂಕರ, ಹರಿಹರ ಮುಂತಾದ ಹೆಸರುಗಳಿಂದ ಕರೆದಿದ್ದು ಈ ಮೂರ್ತಿ ಲಕ್ಷಣಗಳನ್ನು ಅದರಲ್ಲಿ ವಿವರವಾಗಿ ತಿಳಿಸಲಾಗಿದೆ.[೭೭]

ಆಚಾರ್ಯರು/ಪಂಡಿತರು :

ಜ್ಞಾನೇಶ್ವರ ಪಂಡಿತರು :

ಮಹಾಮಂಡಳೇಶ್ವರ ಎರೆಯಮರಸನು ಜ್ಞಾನೇಶ್ವರ ಪಂಡಿತರ ಸನ್ನಿಧಾನದಲ್ಲಿ ಸ್ವಯಂಭು ಸೋಮನಾಥ ದೇವರಿಗೆ ಗುಕ್ಕಾವೆ, ಹಿಪ್ಪಳಗಾವೆ, ಬೋರಿಗಾವೆಯನ್ನು ಸರ್ವನಮಸ್ಯವಾಗಿ ದಾನ ನೀಡಿದನು.[೭೮]

ಮಲ್ಲಿ ಪಂಡಿತರು :

ಸೌದೊರೆ ಗಂಗೊಂಡ ಗರುಡಸೆಟ್ಟಿಯ ಆಳ್ವಿಕೆಯಲ್ಲಿ ಗೋನಯ ನಾಯಕ ಎಂಬುವವನು ಮಾಚಿಕವ್ವನ ಬೆಟ್ಟದ ಕಲಿದೇವರ ಪ್ರತಿಷ್ಠೆ ಮಾಡಿ ಹನುಕನಹಾಳ ಮಲ್ಲಿ ಪಂಡಿತರಿಗೆ ಭೂಮಿ ದತ್ತಿ ನೀಡಿದನು.[೭೯]

ಅಗಸ್ತಿ ರಾವುಳ ಪಂಡಿತ :

ಪಾಶುಪತಾಚಾರ್ಯ ಅಗಸ್ತಿ ರಾವುಳ ಪಂಡಿತರಿಗೆ ಯುವರಾಜಕುಮಾರ ಅಹಮಲ್ಲದೇವರು ದತ್ತಿ ನೀಡಿದುದನ್ನು ಪೆದ್ದ ಚಪ್ಪಲಿಶಾಸನ[೮೦] ತಿಳಿಸುತ್ತದೆ.

ನಾಗರಾಸಿ ಪಂಡಿತ :

ಹೊಸವೊಳಲದ ಶ್ರೀ ಮೂಲಸ್ಥಾನದೇವರಿಗೆ ಮೂಲಿಗ ಹಳ್ಳಗಾವುಂಡನು ದೇವರಾಸಿಪಂಡಿತರ ಮಗ ನಾಗರಾಸಿಪಂಡಿತರ ಕಾಲನ್ನು ತೊಳೆದು ದಾನ ನೀಡಿದನು.[೮೧]

ಅಮ್ರಿತರಾಸಿ ಪಂಡಿತರು :

ಶ್ರೀ ಮದ್ದಕ್ಷಿಣ ವಾರಣಾಶಿ ವಿಳಾರಾಮೆಯ ತೀರ್ಥದ ರಾಮೇಶ್ವರದೇವರ ನಿವೇದ್ಯಕ್ಕೆ ನಂದಾದೀವಿಗೆಗೆ ಮಹಾಮಂಡಳ್ವೇಶ್ವರ ಎಳಮೇಲ ಸೋವಿದೇವರಸರು. ಹೆಗ್ಗಡೆ ವಾವಣಯ್ಯಸೇರಿ ಅಮ್ರಿತರಾಸಿ ಪಂಡಿತರಿಗೆ ಭೂಮಿ, ನಿವೇಶನಗಳನ್ನು ದಾನವಾಗಿ ನೀಡಿದರು.[೮೨]

ಚಂದ್ರಭೂಷಣ ಪಂಡಿತರು :

ಚಂದ್ರಭೂಷಣ ಪಂಡಿತರು ಶ್ರೀ ಮದನೇಶ್ವರದೇವರ ಆಚಾರ್ಯರಾಗಿದ್ದರು. ಇವರು ಯಮ, ನಿಯಮ, ಸ್ವಾಧ್ಯಾಯ, ಮೌನಾನುಷ್ಠಾನ, ಜಪ, ತಪ, ಸಮಾಧಿ, ಶೀಲ ಗುಣಸಂಪನ್ನರಾಗಿದ್ದರು. ಇವರಿಗೆ ಬಸವಂಗೌಡ, ಬೆಳೆಯರ ಸಂಕಣ, ಅಂಡುರ ಕಾಳಿಯಣ ಬೆಳಗಲಿಗೇತಣ ಸಿಂಗಜ್ಜ, ಮುತ್ತಜ್ಜ, ಮೋರಿಯ, ಬೊಪ್ಪಣ, ಮಾಳಿಸೆಟ್ಟಿ ಸೇನಬೋವ ನಾಣೆಯಣ್ಣ, ಬೈಸಜ್ಜ ಮತ್ತು ಬಮ್ಮಗಾವುಂಡ ಮೊದಲಾದವರು ಸೇರಿ ಗದ್ದೆ, ತೋಟ, ನಿವೇಶನಗಳನ್ನು ಚಂದ್ರಭೂಷಣ ಪಂಡಿತರ ಪಾದ ತೊಳೆದು ದಾನನೀಡಿದರು.[೮೩]

ಸ್ಥಾನಾಚಾರ್ಯ ಶ್ರೀ ಮಜ್ಞಾನ ಸೋಮೇಶ್ವರ ಪಂಡಿತರು ದಕ್ಷಿಣ ಸೋಮನಾಥ ದೇವರ ಸ್ಥಾನಾಚಾರ್ಯರಾಗಿದ್ದರೆಂದು ಲಕ್ಷ್ಮೇಶ್ವರ ಶಾಸನ ದಾಖಲಿಸಿದೆ.[೮೪]

ಬ್ರಹ್ಮರಾಸಿ ಪಂಡಿತರು :

ಬ್ರಹ್ಮರಾಸಿ ಪಂಡಿತರು ಹಗರಟ್ಟಿಗೆಯ ಶ್ರೀ ಸ್ವಯಂಭು ಉಗ್ರಭೀಮೇಶ್ವರ ದೇವರ ಮುದಿನೀರ ಕುಮಾರೇಶ್ವರ ದೇವರ ಈ ಮಹಾಸ್ಥಾನಗಳ ಆಚಾರ್ಯರೂ ಸಿದ್ಧರೇವಣದೇವನ ಶಿಷ್ಯರೂ ಆಗಿದ್ದರು. ಮಹಾಮಂಡಳ್ವೇಶ್ವರ ಮಲ್ಲಿರೇವರಸರು ಕಕ್ಕೇರಿಯ ಬಮ್ಮೆಯನಾಯಕ ಮಾದೇಯನಾಯಕ ಮುಂತಾದವರು ಸೇರಿ ರೇವೇಶ್ವರ ದೇವರ ಅಂಗಭೋಗ ದೀಪಾರತಿ ನೈವೇದ್ಯಗಳಿಗಾಗಿ ಬ್ರಹ್ಮರಾಶಿ ಪಂಡಿತರ ಕಾಲ್ತೊಳೆದು ೨೬ ಮತ್ತರು ಭೂಮಿಯನ್ನು, ಗಾಣವನ್ನು, ಹಲವು ಸುಂಕಗಳನ್ನು ದಾನ ನೀಡಿದರು.[೮೫]

ಗಂಗರಾಸಿ ದೇವ:

ಭೂಲೋಕಮಲ್ಲನು ಜಯಂತಿಪುರದಲ್ಲಿದ್ದಾಗ ಅಲಂದೆಸಾಸಿರದ ಕಂಪಣ ಬಾಗೇವಾಡಿ-೩೦ರ ಬಳಿಯ ಬಾಡ(ಹಳ್ಳಿ)ವಾದ ಹಿಂಚಗೇರಿಯ ಮೇಲಾಳ್ಕೆಯನ್ನು ಕಡ್ಲೇವಾಡದ ಶ್ರೀ ಸೋಮನಾಥದೇವರ ಅಂಗ-ರಂಗ ಭೋಗಕ್ಕೆ ಧೂಪ-ನಿವೇದ್ಯಕ್ಕಾಗಿ ಗಂಗರಾಸಿದೇವನಿಗೆ ಧಾರಾಪೂರ್ವಕವಾಗಿ ಕೊಟ್ಟರೆಂದು ಕಡ್ಲೇವಾಡ ಶಾಸನವು[೮೬] ಉಲ್ಲೇಖಿಸಿದೆ

ಲೋಕಾಭರಣ ಪಂಡಿತ :

ಲೋಕಾಭರಣ ಪಂಡಿತರಿಗೆ ಸಬ್ಬಿ ಸಹಸ್ರದ ಸೌದೊರೆ ರೆಪೋಲ ಕುರುವರಾಜು ಎಂಬುವವನು ಒಂದು ರಾಟಣ, ಗಾಣ ಮತ್ತು ಭೂಮಿಯನ್ನು ದತ್ತಿಯಾಗಿ ಕೊಟ್ಟನೆಂದು ಸನಿಗರಂ ಶಾಸನದಲ್ಲಿ[೮೭] ಹೇಳಿದೆ.

ತೇಜೋರಾಸಿ ಪಂಡಿತರು:

ತೇಜೋರಾಸಿ ಪಂಡಿತರು ಶ್ರೀ ಕಲಿದೇವಸ್ವಾಮಿ ದೇವಾಲಯದ ಸ್ಥಾನಾಚಾರ್ಯರಾಗಿದ್ದರು. ಇವರನ್ನು ''ದೇವರಾಸಿ ಪಣ್ಡಿತರ ಪುತ್ರಂ ತೇಜೋರಾಸಿಪಂಡಿತರ'' ಎಂದು ಕಾಮಧೇನು ಶಾಸನ[೮೮] ತಿಳಿಸುತ್ತದೆ. ಇವರಿಗೆ ನೀಡಿದ ದಾನಗಳನ್ನೂ ಸಹ ಉಲ್ಲೇಖಿಸಿದೆ.

ಆಚಾರ್ಯಶ್ರೀ ಗುರುದೇವರು :

ಭೋಗೇಶ್ವರ ದೇವಾಲಯದ ಆಚಾರ್ಯರಾದ ಶ್ರೀ ಗುರುದೇವರು ಯಮ, ನಿಯಮ, ಸ್ವಾಧ್ಯಾಯ, ಧ್ಯಾನ, ಧಾರಣ, ಮೌನಾನುಷ್ಠಾನ,ಜಪ, ಸಮಾಧಿಶೀಳ ಸಂಪನ್ನರಾಗಿದ್ದರು ಮತ್ತು ಇವರ ಸಮ್ಮುಖದಲ್ಲಿ ಬೋಚರಸನು ಮಹಾಮಂಡಳೇಶ್ವರ ಮಂಗರಸನ ಆಜ್ಞೆಯಂತೆ ಭೋಗೇಶ್ವರ ದೇವಾಲಯಕ್ಕೆ ದಾನ ನೀಡಿದನು.[೮೯]

ಜ್ಞಾನೇಶ್ವರ ಪಂಡಿತರು :

ಜ್ಞಾನೇಶ್ವರ ಪಂಡಿತರು ಕರಡಿಕಲ್ಲ ಶ್ರೀ ಸ್ವಯಂಭು ಸೋಮೇಶ್ವರ ದೇವರ ಮಹಾಘಟಿಕಾಸ್ಥಾನದ ಆಚಾರ್ಯರಾಗಿದ್ದರು. ಪೆರ್ಗಡೆ ಹೆಮ್ಮಾಡಿ ಯರಸನು ಜ್ಞಾನೇಶ್ವರ ಪಂಡಿತರ ಕಾಲನ್ನು ತೊಳೆದು ಅವರವಾಡಿ ೨೦೦ ಬಳಿಯ ಆಲೂರ, ಗವುಡಗಾವೆ, ಕಾವಳಿಗಾವೆ, ದಯಸವಳಿಗೆ (ಗು)ಕ್ಕಾವೆ, ಬೋರಿಗಾವೆ ನೇರಲಿಗೆ, ಹಿಪ್ಪಳಗಾವೆ, ಸಕ್ಕರಗೆ-೬೦ ಬಳಿಯ ಭಾಯಿಗಾವೆಯ ಆದಾಯದ ಸುಂಕವನ್ನು ಜ್ಞಾನೇಶ್ವರ ಪಂಡಿತರ ಕಾಲನ್ನು ತೊಳೆದು ದಾನ ನೀಡಿದನೆಂದು ಕರಾಡಖೇಡ್[೦] ಶಾಸನ ತಿಳಿಸುತ್ತದೆ.

ದೇವರಾಸಿ ಪಂಡಿತ :

ದೋಣಿಯ ಬೀಡಿನ ದೇವರಾಸಿ ಪಂಡಿತರಿಗೆ ಹಟ್ಟಣದ ಬೀರಗವುಡನು ದತ್ತಿ ನೀಡಿದುದನ್ನು ಬೇಲೂರು ಶಾಸನವು[೧] ಉಲ್ಲೇಖಿಸಿದೆಯಲ್ಲದೆ ದೇವರಾಸಿ ಪಂಡಿತರು ಯಮ, ನಿಯಮ, ಸ್ವಾಧ್ಯಾಯ ಧ್ಯಾನ, ಮೌನಾನುಷ್ಠಾನ, ಜಪ, ಸಮಾಧಿ ಶೀಲಗುಣ ಸಂಪನ್ನರು, ಪೂಜಾ ತತ್ಪರರೂ ಆಗಿದ್ದರು. ಇವರ ಮಗನಾದ ತೇಜೋರಾಸಿ ಪಂಡಿತನೂ ಕೂಡ ವಿದ್ವಾಂಸನಾಗಿದ್ದು ಕಲಿದೇವಸ್ವಾಮಿ ದೇವಾಲಯದ ಸ್ಥಾನಾಚಾರ್ಯನಾಗಿದ್ದನು.[೨]

ಆಚಾರ್ಯ ಚಂದ್ರಮೌಳಿ ಪಂಡಿತರು :

ಸಿಂಧವಂಶದ ಬಾಚಿಭೂಪ ರಾಜಧಾನಿ ತುಂಬಳದ ಶ್ರೀ ಸ್ವಯಂಭು ಕರೆಕಂಠೇಶ್ವರ ದೇವರ ಸೇವೆಗೆ. ಚಂದ್ರಮೌಳಿ ಪಂಡಿತರಿಗೆ ಸರ್ವನಮಸ್ಯವಾಗಿ ದಾನ ಬಿಟ್ಟಿದುದನ್ನು ಕರಕಾಂತಪುರ ಶಾಸನ ತಿಳಿಸುತ್ತದೆ.

ಕ್ರಿಯಾಸಕ್ತಿ ಪಂಡಿತರು :

ಪೂವಿಗಾಮೆ ಶಾಸನದಲ್ಲಿ ಉಲ್ಲೇಖಗೊಂಡಿರುವ ಕ್ರಿಯಾಶಕ್ತಿ ಪಂಡಿತನ ಪಾದತೊಳೆದು ಕಲಿದೇವನಂಗಭೋಗಕ್ಕೆ ನಿವೆದ್ಯಕ್ಕೆ ತಪೋಧನರ ಆಹಾರ ದಾನಕ್ಕೆ ಅನೇಕದತ್ತಿಗಳನ್ನು ನೀಡಿದುದುನ್ನು ಈ ಶಾಸನ ತಿಳಿಸುತ್ತವೆ.[೩]

ಶಿವಶಕ್ತಿದೇವರು :

ಶ್ರೀಮದನಾದಿ ಅಗ್ರಹಾರ ತಾಣಗುಂದೂರು ರಾಜಗುರುವಾದ ಶಿವಶಕ್ತಿದೇವರು ಯಮ, ನಿಯಮ, ಸ್ವಅಧ್ಯಾಯ, ಧ್ಯಾನ, ಧಾರಣ, ಮೌನಾನುಷ್ಟಾಣ, ಜಪ, ತಪ, ಸಮಾಧಿ, ಶೀಲ ಗುಣಸಂಪನ್ನರಾಗಿದ್ದರು.[೪]

ಹೀಗೆ ಮೂರನೆಯ ಸೋಮೇಶ್ವರನ ಕಾಲದ ಶಾಸನಗಳಲ್ಲಿ ಕಂಡುಬರುವ ಧಾರ್ಮಿಕ ಅಂಶಗಳನ್ನು ಅವಲೋಕಿಸಿದಾಗ ಶೈವ, ವೈಷ್ಣವ, ಜೈನ ಧರ್ಮಗಳು ಪ್ರಚಾರದಲ್ಲಿದ್ದವೆಂದು ಮತ್ತು ಆಚಾರ್ಯರು, ಪಂಡಿತರು ಒಳ್ಳೆಯ ವಿದ್ವಾಂಸರಾಗಿದ್ದರೆಂದು ತಿಳಿದುಬರುತ್ತದೆ.

ಅಡಿಟಿಪ್ಪಣಿಗಳು :

೧. ಎಸ್. ಆಯ್. ಆಯ್. *ಸಂಪುಟ*- XX, ನಂ.೧೦೨, ಲಕ್ಷ್ಮೇಶ್ವರ, ಕ್ರಿ.ಶ.೧೧೩೨, ಮೇ ೩೧.

೨. ಉಪಾಧ್ಯ.ಜಿ.ಎನ್. (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ* -೬, ನಂ. ೨೬. ಆರೆ, ಕ್ರಿ.ಶ ೧೧೩೫, ಅಕ್ಟೋಬರ್ ೨೯.

೩. ಗೋಗಿ, ಹನುಮಾಕ್ಷಿ., (ಸಂ), *ಕಲ್ಬುರ್ಗಿ ಜಿಲ್ಲೆಯ ಶಾಸನಗಳು*, ನಂ.೧೭ ,ಸೇಡಂ, ಕ್ರಿ.ಶ ೧೧೩೭.

೪. ಕೆ.ಆಯ್. *ಸಂಪುಟ*- V, ನಂ. ೯೩, ಗೌಳಿಹಳ್ಳಿ, ಕ್ರಿ.ಶ.೧೧೮೩, ಫೆಬ್ರುವರಿ ೭.

೫. ಚಿದಾನಂದ ಮೂರ್ತಿ. ಎಂ., *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ.*

೬. ಎಂ.ಎ.ಆರ್. (೧೯೩೨), ಪು. ೧೭೧, ಕ್ರಿ.ಶ.೧೧೩೦.

೭. ಎ.ಕ.ಸಂಪುಟ- II, ೧೨೦, C ಕ್ರಿ.ಶ. ೧೧೩೮.

೮. ಎಂ.ಎ.ಆರ್.(೧೯೩೯), ಪು.೧೯೩, ಕ್ರಿ.ಶ.೧೧೩೦.

೯. ಎ.ಕ.ಸಂಪುಟ- II, ೧೨೦, C ಕ್ರಿ.ಶ. ೧೧೩೮.

೧೦. ಎ.ಕ. *ಸಂಪುಟ*-II, ಶ್ರವಣಬೆಳಗೊಳ, ೧೬೨ ,ಕ್ರಿ.ಶ.೧೧೨೩.

೧೧. ಅದೇ.

೧೨. ಗಣೇಶ.ಕೆ.ಆರ್., (ಸಂ.) *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೫*, ನಂ.೫೦೮, ಜೆಡಜರ್ಲ್ಗ, ಕ್ರಿ.ಶ.೧೧೨೫, ಫೆಬ್ರುವರಿ ೧೯.

೧೩. ಉಪಾಧ್ಯ, ಜಿ.ಎನ್.,(ಸಂ.), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ* -೬, ನಂ. ೨೬, ಆರೆ, ಕ್ರಿ.ಶ.೧೧೩೫, ಅಕ್ಟೋಬರ್ ೨೯.

೧೪. ಗೋಗಿ, ಹನುಮಾಕ್ಷಿ., (ಸಂ), *ಕಲ್ಬುರ್ಗಿ ಜಿಲ್ಲೆಯ ಶಾಸನಗಳು.*,ನಂ. ೧೭, ಸೇಡಂ, ಕ್ರಿ.ಶ.೧೧೩೭.

೧೫. ಕೆ.ಆಯ್. *ಸಂಪುಟ*-V, ನಂ. ೯೩, ಗೌಳಿಹಳ್ಳಿ, ಕ್ರಿ.ಶ.೧೧೮೩, ಫೆಬ್ರುವರಿ ೭.

೧೬. ಎ.ಕ. ೧೧, ಶ್ರವಣಬೆಳಗೊಳ ೧೭೬, ಕ್ರಿ.ಶ.೧೧೩೧.

೧೭. S. Setter, *Inviting Death,* P. 95.

೧೮. ವಿವರಗಳಿಗೆ ನೋಡಿ, S. Setter *Inviting Death,* P. 100-120.

೧೯. ಕಲಬುರ್ಗಿ, ಎಂ.ಎಂ., *ಸಮಾಧಿ-ಬಲಿದಾನ-ವೀರಮರಣ ಸ್ಮಾರಕಗಳು,* ಪು. ೬.

೨೦. ಚಿದಾನಂದ ಮೂರ್ತಿ, ಎಂ., *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ.*, ಪು. ೯೩.

೨೧. ಎ.ಕ. *ಸಂಪುಟ*- II, ಶ್ರವಣಬೆಳಗೊಳ ೧೭೬, (೧೪೩), ಕ್ರಿ.ಶ.೧೧೩೧.

೨೨. ಅದೇ.

೨೩. ಹಂಪ ನಾಗರಾಜಯ್ಯ., *ಯಾಪನೀಯ ಸಂಘ*, ಪು.೩೧.

೨೪. ಅದೇ, ಪು.೩೧.

೨೫. ಅದೇ, ಪು. ೩೨.

೨೬. ಅದೇ, ಪು.೩೩-೪೩.

೨೭. ಉಪಾಧ್ಯ, ಜಿ.ಎನ್. (ಸಂ.) *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ* -೬, ನಂ.೨೬, ಅರೆ, ಕ್ರಿ.ಶ. ೧೧೩೫, ಅಕ್ಟೋಬರ್ ೨೯.

೨೮. ಕೆ.ಆಯ್. *ಸಂಪುಟ*- V, ನಂ.೯೩, ಗೌಳಿಹಳ್ಳಿ, ಕ್ರಿ.ಶ. ೧೧೮೩, ಫೆಬ್ರುವರಿ ೭.

೨೯. ಗಣೇಶ.ಕೆ.ಆರ್., (ಸಂ.) *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೫*, ನಂ.೫೦೮, ಜೆಡಜರ್ಲ್ಗ, ಕ್ರಿ.ಶ.೧೧೨೫, ಫೆಬ್ರುವರಿ೧೯., ಗಣೇಶ ಕೆ. ಆರ್ (ಸಂ)., *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೫*, ನಂ. ೫೬೯ ಕೋಲನುಪಾಕ, ಕ್ರಿ.ಶ ೧೧೨೫, ಮಾರ್ಚ್೨೩.

೩೦. ಉಪಾಧ್ಯ, ಜಿ.ಎನ್. (ಸಂ.) *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ* -೬, ನಂ.೨೬, ಅರೆ, ಕ್ರಿ.ಶ. ೧೧೩೫, ಅಕ್ಟೋಬರ್ ೨೯.

೩೧. ಗಣೇಶ ಕೆ. ಆರ್ (ಸಂ)., *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೫*, ನಂ. ೫೬೯ ಕೋಲನುಪಾಕ, ಕ್ರಿ.ಶ ೧೧೨೫ ,ಮಾರ್ಚ್೨೩.

೩೨. ಉಪಾಧ್ಯ, ಜಿ.ಎನ್. (ಸಂ.) *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ* -೬, ನಂ.೨೬, ಅರೆ, ಕ್ರಿ.ಶ. ೧೧೩೫, ಅಕ್ಟೋಬರ್ ೨೯.

೩೩. ಗಣೇಶ.ಕೆ.ಆರ್., (ಸಂ.) *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೫*, ನಂ.೫೦೮, ಜೆಡಜರ್ಲ್ಗ, ಕ್ರಿ.ಶ.೧೧೨೫, ಫೆಬ್ರುವರಿ೧೯.

೩೪. ಉಪಾಧ್ಯ, ಜಿ.ಎನ್. (ಸಂ.) *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ* -೬, ನಂ.೨೬, ಅರೆ, ಕ್ರಿ.ಶ. ೧೧೩೫, ಅಕ್ಟೋಬರ್ ೨೯.

೩೫. ಗಣೇಶ ಕೆ. ಆರ್ (ಸಂ)., *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೫*, ನಂ. ೫೬೯ ಕೋಲನುಪಾಕ, ಕ್ರಿ.ಶ ೧೧೨೫ ,ಮಾರ್ಚ್೨೩.

೩೬. ಪಾಟೀಲ ಎಸ್.ಪಿ., ಜೈನ ಹಬ್ಬಗಳು, ಪು. ೧೧-೧೨.

೩೭. ಗೋಗಿ, ಹನುಮಾಕ್ಷಿ., (ಸಂ), *ಕಲ್ಬುರ್ಗಿ ಜಿಲ್ಲೆಯ ಶಾಸನಗಳು*, ನಂ. ೧೭, ಸೇಡಂ, ಕ್ರಿ.ಶ. ೧೧೩೭.

೩೮. ಎ.ಕ. *ಸಂಪುಟ*- VI, ಕ್ರಿ.ಶ. ೧೦೬೩.

೩೯. ರಾಘವಾಚಾರ್, ಕ.ವೆಂ., *(ಸಂ.) ಯಶೋಧರ ಚರಿತೆ.*, ಪೀಠಿಕೆ, ಪು. ೬೭.

೪೦. ಚಿದಾನಂದಮೂರ್ತಿ ಎಂ., *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ.*, ಪು. ೧೦೦-೧೦೧.

೪೧. ದೇವರಕೊಂಡಾರೆಡ್ಡಿ., (ಸಂ.) *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೧*, ನಂ. ೬೪, ಸಿಂಧವಾಳ, ಕ್ರಿ.ಶ. ೧೧೩೦, ಅಕ್ಟೋಬರ್

೪೨. ಎಸ್.ಆಯ್.ಆಯ್. *ಸಂಪುಟ*- XX, ನಂ. ೧೦೨, ಲಕ್ಷ್ಮೇಶ್ವರ, ಕ್ರಿ.ಶ. ೧೧೩೨, ಮೇ ೩೧.

೪೩. ಚಿದಾನಂದಮೂರ್ತಿ, ಎಂ., *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ.*, ಪು. ೧೬೬.

೪೪. ಗಣೇಶ.ಕೆ.ಆರ್.(ಸಂ)., *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೫*, ನಂ. ೫೨೨, ತಡಿಕೊಂಡ, ಕ್ರಿ.ಶ. ೧೧೨೮.

೪೫. ಗಣೇಶ.ಕೆ.ಆರ್(ಸಂ) *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೫*, ನಂ. ೩೬೨, ಕೊಲಿಮಿಗುಂಡ್ಲ, ಕ್ರಿ.ಶ. ೧೧೩೪, ಡಿಸೆಂಬರ್ ೨೫.

೪೬. ಉಪಾಧ್ಯ, ಜಿ.ಎನ್., (ಸಂ.) *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೬*, ನಂ. ೬೩, ಕ್ರಿ.ಶ. ೧೧೩೮, ಸೆಪ್ಟಂಬರ್ ೧.

೪೭. INK & K. ನಂ. ೬ ರಾಯಭಾಗ, ಕ್ರಿ.ಶ ೧೧೨೭.

೪೮. ಗಣೇಶ ಕೆ. ಆರ್ (ಸಂ)., *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೫*, ನಂ. ೫೨೨, ತಡಿಕೊಂಡ, ಕ್ರಿ.ಶ ೧೧೨೮.

೪೯. ಕೆ.ಆಯ್. *ಸಂಪುಟ*-I, ನಂ.೧೯, ತಿಳವಳ್ಳಿ, ಕ್ರಿ.ಶ. ೧೧೩೦, ಸೆಪ್ಟಂಬರ್ ೧೪.

೫೦. ದೇವರಕೊಂಡಾರೆಡ್ಡಿ., (ಸಂ.), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೭*, ನಂ. ೬, ಮುಕ್ಕುಂದಿ, ಕ್ರಿ.ಶ. ೧೧೩೪, ಜುಲೈ ೨೩.

೫೧. ಉಪಾಧ್ಯ, ಜಿ.ಎನ್. (ಸಂ.) *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೬*, ನಂ.೬೨, ಐರಿಗೆ, ಕ್ರಿ.ಶ. ೧೧೩೫, ಜುಲೈ ೨೩.

೫೨. ಗಣೇಶ.ಕೆ.ಆರ್(ಸಂ) *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೫*, ನಂ. ೩೬೨, ಕೊಲಿಮಿಗುಂಡ್ಲ, ಕ್ರಿ.ಶ. ೧೧೩೪, ಡಿಸೆಂಬರ್ ೨೫.

೫೩. ಗೋಗಿ ಹನುಮಾಕ್ಷಿ., (ಸಂ), *ಕಲ್ಬುರ್ಗಿ ಜಿಲ್ಲೆಯ ಶಾಸನಗಳು*, ನಂ. ೩, ನಿಂಬರಗಿ, ಕ್ರಿ.ಶ. ೧೧೩೪.

೫೪. ಗಣೇಶ.ಕೆ.ಆರ್.(ಸಂ) *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೫*, ನಂ. ೧೧೪, ಉರುವಕೊಂಡ, ಕ್ರಿ.ಶ. ೧೧೩೫, ಮೇ ೨೭.

೫೫. ಗೋಗಿ ಹನುಮಾಕ್ಷಿ., (ಸಂ), *ಸುರಪುರ ತಾಲೂಕಿನ ಶಾಸನಗಳು*, ನಂ.೧೫, ಹುಣಸಗಿ, ಕ್ರಿ.ಶ. ೧೧೩೬, ಫೆಬ್ರುವರಿ ೫.

೫೬. ಎಸ್.ಆಯ್.ಆಯ್.*ಸಂಪುಟ*- XVIII, ನಂ. ೧೩೮, ಗದಗ, ಕ್ರಿ.ಶ. ೧೧೩೬.

೫೭. ಎಸ್.ಆಯ್.ಆಯ್.*ಸಂಪುಟ*- XV, ನಂ. ೧೭, ಕುರ್ತಕೋಟಿ, ಕ್ರಿ.ಶ. ೧೧೩೮, ಏಪ್ರಿಲ್ ೨೬.

೫೮. ಉಪಾಧ್ಯ, ಜಿ.ಎನ್. (ಸಂ.) *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೬*, ನಂ.೬೩, ಏರಿಗೆ, ಕ್ರಿ.ಶ. ೧೧೩೮, ಸೆಪ್ಟಂಬರ್ ೧.

೫೯. ಗಣೇಶ.ಕೆ.ಆರ್.,(ಸಂ.) *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೫*, ನಂ. ೨೭೬, ಕರಕಾಂತಪುರ, ಕ್ರಿ.ಶ. ೧೧೩೨, ಮಾರ್ಚ್ ೨೩.

೬೦. ಗಣೇಶ.ಕೆ.ಆರ್(ಸಂ.) *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೫*, ನಂ. ೩೩೧, ರಾಮದುರ್ಗ, ಕ್ರಿ.ಶ. ೧೧೩೪, ಜುಲೈ ೨೩.

೬೧. ಕೆ.ಆಯ್.*ಸಂಪುಟ*- I, ನಂ.೧೯, ತಿಳವಳ್ಳಿ, ಕ್ರಿ.ಶ. ೧೧೩೦, ಸೆಪ್ಟಂಬರ್ ೧೪.

೬೨. ಗೋಗಿ ಹನುಮಾಕ್ಷಿ., (ಸಂ), *ಕಲ್ಬುರ್ಗಿ ಜಿಲ್ಲೆಯ ಶಾಸನಗಳು*, ನಂ. ೩, ನಿಂಬರಗಿ, ಕ್ರಿ.ಶ. ೧೧೩೪.

೬೩. ನಂದಿಮಠ, ಎಸ್.ಸಿ., 'ಮತಸಮಾಜ ಸಂಸ್ಕೃತಿ', ಕರ್ನಾಟಕದ ಪರಂಪರೆ, ಸಂ. ೧, ಪು. ೧೮೦.

೬೪. ಷಡ್ದರ್ಶನ ಸಮುಚ್ಚಯದ ಹರಿಭದ್ರನ ಪ್ರಕಾರ ಶೈವಪಾಶುಪತ, ಮಹಾವ್ರತಧರ, ಕಾಳಾಮುಖ: ಯಮುನಾಚಾರ್ಯರ ಆಗಮ ಪ್ರಾಮಾಣ್ಯದಲ್ಲಿ ಶೈವ, ಪಾಶುಪತ, ಕಾಪಾಲಿಕ ಕಾಳಾಮುಖ; ವಾಚಸ್ಪತಿಯ ಭಾಮ್ಯತಿಯಲ್ಲಿ ಶೈವಪಾಶುಪತ, ಕಾರುಣಿಕ, ಸಿದ್ಧಾಂತಿ, ಕಾಪಾಲಿಕ, ರಾಮಾನುಜ ಕಾಪಾಲ, ಕಾಳಾಮುಖ, ಪಾಶುಪತ, ಶೈವ; ಸೂತಸಂಹಿತೆಯಲ್ಲಿ ಕಾಪಾಲಿಕ, ಲಾಕುಳಿ ಪಾಶುಪತಿ, ಸೋಮ, ಭೈರವ ; ಚೆನ್ನಬಸವಣ್ಣ ಷಡ್ದರ್ಶನ ಶೈವ ಕರ್ಮಿಗಳನ್ನು ಹೇಳುತ್ತ (ಚ.ಬ.ವ.ಪು.೧೯, ೨೫, ೨೨) ಯೋಗಿ, ಜೋಗಿ, ಶ್ರವಣ, ಸನ್ಯಾಸಿ, ಕಾಳಾಮುಖಿ, ಪಾಶುಪತಿ; ಬ್ರಹ್ಮಶಿವನ ಸಮಯ ಪರೀಕ್ಷೆಯಲ್ಲಿ (೧೪-೫೦) ಕಾಳಾಮುಖ ಕಾಪಾಲ, ಪಾಶುಪತ ಶೈವ- ಎಂದು ಹೇಳಿರುವುದನ್ನು ಗಮನಿಸಬೇಕು. ವಿವರಗಳಿಗೆ ನೋಡಿ ಚಿದಾನಂದ ಮೂರ್ತಿ, ಎಂ., *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ.*, ಪು-೧೨೫, ಕಪಟರಾಳ ಕೃಷ್ಣರಾಯರು., *ಲಾಕುಳ ಶೈವರ ಇತಿಹಾಸ*, ಪು.೯೩-೯೭.

೬೫. ಕಪಟರಾಳ ಕೃಷ್ಣರಾಯ., *ಕರ್ನಾಟಕ ಲಾಕುಳ ಶೈವರ ಇತಿಹಾಸ*, ಪು.೧೧೫-೧೧೬.

೬೬. ಡೆವಿಡ್. ಎನ್. ಲೊರೆನ್‌ಜೆನ್, *ದಿ ಕಾಪಾಲಿಕಾಸ್ ಆ್ಯಂಡ್ ಕಾಲಾಮುಖಾಸ್.*, ಪು. ೧೦೮.

೬೭. ನಂದೀಮಠ, ಎಸ್.ಸಿ., *'ಮತ ಸಮಾಜ ಸಂಸ್ಕೃತಿ'*, ಕರ್ನಾಟಕ ಪರಂಪರೆ, ಸಂ.೧, ಪು. ೧೮೨.

೬೮. ತಿಪ್ಪೇರುದ್ರಸ್ವಾಮಿ, ಎಚ್., *ವಚನಗಳಲ್ಲಿ ವೀರಶೈವ ಧರ್ಮ*, ಪು. ೭೯.

೬೯. ಚಿದಾನಂದ ಮೂರ್ತಿ, ಎಂ., *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ.*, ಪು. ೧೪೧.

೭೦. ಶೈವರಲ್ಲಿ ಭಸ್ಮಕ್ಕೆ ವಿಶೇಷ ಪ್ರಾಧಾನ್ಯತೆಯಿದ್ದುದರಿಂದ (ಇದೇ ಮುಂದೆ ವಿಭೂತಿಯಾಗಿ ಪರಿಷ್ಕೃತಗೊಂಡಿದೆ). ಕಾಳಾಮುಖರು ಮುಖದ ಮೇಲೆ ಭಸ್ಮವನ್ನು ಹಚ್ಚಿಕೊಳ್ಳುತ್ತಿರಬೇಕು. ಈ ಭಸ್ಮ ಕಪ್ಪು (ಅಸಿತ) ಆಗಿರುವುದರಿಂದ ಇತಹಾಸಕಾರರು ಅದನ್ನು ಕಪ್ಪುಗೆರೆ ಎಂದು ಅರ್ಥೈಸಿದ್ದಾರೆ.

೭೧. ''ತದುಕ್ತಂ ಭಗವತಾ ನಕುಲೇಶೇನ ಭಸ್ಮನಾತ್ರಿಕ್ಷವಣಂ ಸ್ನಾಯೀತ ಭಸ್ಮಿನಿ ಶಯಿತೇಕ'' ಸಾಯಣ, ಮಾಧವ, ಸರ್ವದರ್ಶನ ಸಂಗ್ರಹ, ಪು. ೧೬೬, ಉಲ್ಲೇಖ : ಚಿದಾನಂದ ಮೂರ್ತಿ, ಎಂ., ಕ.ಶಾ.ಸಾಂ.ಅ., ಪು. ೧೪೮.

೭೨. ಚಿದಾನಂದ ಮೂರ್ತಿ, ಎಂ., *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ.*, ಪು. ೧೨೫.

೭೩. ಇದೇ ಅಧ್ಯಾಯದಲ್ಲಿ ಸ್ಥಾನಾಚಾರ್ಯರ ಹೆಸರುಗಳನ್ನು ನೀಡಿದ್ದು ಅಲ್ಲಿ ಅದನ್ನು ಗಮನಿಸಬೇಕು.

೭೪. ನಂದೀಮಠ, ಎಸ್.ಸಿ, *'ಕರ್ನಾಟಕದ ಧರ್ಮಗಳು''*, ಕನ್ನಡ ನಾಡಿನ ಚರಿತ್ರೆ ಭಾಗ-೨, ಪು. ೩೦-೩೧.

೭೫. ಚಿದಾನಂದ ಮೂರ್ತಿ, ಎಂ., *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ.*, ಪು. ೧೨೯.

೭೬. ಆಕಾಲದ ಅಗ್ರಹಾರ ಮತ್ತು ಮಠಗಳು ಹೇಗೆ ಒಂದನ್ನೊಂದು ಆಧರಿಸಿ ಬೆಳೆದಿದ್ದವೆಂಬುದನ್ನು ಡಾ. ಹಿರೇಮಲ್ಲೂರ ಈಶ್ವರನ್ ಸ್ಪಷ್ಟಪಡಿಸಿದ್ದಾರೆ. ನೋಡಿ : 'ಲಿಂಗಾಯತ ಧರ್ಮ ಸಂಸ್ಕೃತಿ ಮತ್ತು ಸಮಾಜ', ಪು. ೩೫ ರಿಂದ ೫೨.

೭೭. ಕಲಬುರ್ಗಿ ಎಂ.ಎಂ., (ಸಂ), *ಮಾನಸೋಲ್ಲಾಸ*, ಪು. ೨೭೦-೨೭೩.

೭೮. ಉಪಾಧ್ಯ ಜಿ.ಎನ್.,(ಸಂ.), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೬*, ನಂ. ೭೪, ಕರಾಡಖೇಡ, ಕ್ರಿ.ಶ೧೧೩೩, ಆಗಸ್ಟ ೩.

೭೯. ಗಣೇಶ ಕೆ.ಆರ್., (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೫*, ನಂ. ೩೩೯, ರಾಮದುರ್ಗ, ಕ್ರಿ.ಶ. ೧೧೩೪ ಏಪ್ರಿಲ್ ೧೯.

೮೦. ಅದೇ, ನಂ. ೩೭೩, ಪೆದ್ದಚಪ್ಪಲಿ, ಕ್ರಿ.ಶ. ೧೧೩೫, ಜನೆವರಿ ೧೬.

೮೧. ಕಲಬುರ್ಗಿ ಎಂ.ಎಂ., (ಸಂ), *ಧಾರವಾಡ ತಾಲೂಕಿನ ಶಾಸನಗಳು*, ನಂ. ೬೭, ಸಿದ್ದಾಪೂರ, ಕ್ರಿ.ಶ. ೧೧೩೫, ಜನೆವರಿ೧೬.

೮೨. ಗೋಗಿ, ಹನುಮಾಕ್ಷಿ., (ಸಂ), *ಕಲ್ಬುರ್ಗಿ ಜಿಲ್ಲೆಯ ಶಾಸನಗಳು*, ನಂ. ೪೮, ಮಲ್ಲಾಬಾದ, ಕ್ರಿ.ಶ ೧೧೩೬.

೮೩. ಎಸ್.ಆಯ್.ಆಯ್. *ಸಂಪುಟ-* XVIII, ನಂ. ೧೩೯, ಬಂಕಾಪುರ, ಕ್ರಿ.ಶ. ೧೧೩೭, ನವ್ಹೆಂಬರ್ ೨೭.

೮೪. ಎಸ್.ಆಯ್.ಆಯ್. *ಸಂಪುಟ-*XX, ನಂ. ೧೦೭, ಲಕ್ಷ್ಮೇಶ್ವರ, ಕ್ರಿ.ಶ ೧೧೩೮, ನವ್ಹೆಂಬರ್ ೧೮.

೮೫. ಗೋಗಿ, ಹನುಮಾಕ್ಷಿ., (ಸಂ), *ಸುರಪುರ ತಾಲೂಕಿನ ಶಾಸನಗಳು*, ನಂ. ೬೭, ಮುದನೂರು, ಕ್ರಿ.ಶ. ೧೧೨೯, ಡಿಸೆಂಬರ್ ೨೪.

೮೬. ಎಸ್.ಆಯ್.ಆಯ್., ನಂ. ೯೮, ಕಡ್ಲೇವಾಡ, ಕ್ರಿ.ಶ. ೧೧೨೮, ಡಿಸೆಂಬರ್ ೨೫.

೮೭. ಗಣೇಶ ಕೆ. ಆರ್ (ಸಂ)., *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೫*, ನಂ. ೪೧೧, ಸನಿಗರಂ, ಕ್ರಿ.ಶ ೧೧೨೮.

೮೮. ಎಸ್.ಆಯ್.ಆಯ್. *ಸಂಪುಟ-* XX, ನಂ. ೧೦೧, ಕಾಮಧೇನು, ಕ್ರಿ.ಶ. ೧೧೨೯, ಮಾರ್ಚ್ ೨೩.

೮೯. ಉಪಾಧ್ಯ. ಜಿ.ಎನ್.,(ಸಂ.), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೬*, ನಂ.೧೫, ನಾರಂಗವಾಡಿ, ಕ್ರಿ.ಶ. ೧೧೨೯, ಅಕ್ಟೋಬರ್ ೨೯.

೯೦. ಉಪಾಧ್ಯ ಜಿ.ಎನ್.,(ಸಂ.), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೬*, ನಂ. ೭೪, ಕರಾಡಖೇಡ, ಕ್ರಿ.ಶ. ೧೧೩೦, ಡಿಸೆಂಬರ್ ೨೬.

೯೧. ಎಸ್.ಆಯ್.ಆಯ್. *ಸಂಪುಟ*- IX,P(1), ನಂ. ೨೨೫, ಬೇಲೂರು, ಕ್ರಿ.ಶ. ೧೧೩೧, ಜನವರಿ ೨೫.

೯೨. ಎಸ್.ಆಯ್.ಆಯ್. *ಸಂಪುಟ*-XX, ನಂ. ೧೦೧, ಕಾಮಧೇನು, ಕ್ರಿ.ಶ. ೧೧೨೯, ಮಾರ್ಚ್ ೨೩.

೯೩. ಎ.ಕ. *ಸಂಪುಟ*-VIII - 88, ಪೊಮೆಗಾಮೆ, ಕ್ರಿ.ಶ. ೧೧೩೯.

೯೪. ಎಂ.ಎ.ಆರ್., ೧೯೨೭, ನಂ. ೧೬೦, ಬಸವನಂದಿಹಳ್ಳಿ, ಕ್ರಿ.ಶ. ೧೧೪೨.

ಅಧ್ಯಾಯ-ಒಂಭತ್ತು
ದೇವಾಲಯಗಳು

Chapter-9

ದೇವಾಲಯಗಳು ನಮ್ಮ ಪ್ರಾಚೀನ ಸಂಸ್ಕೃತಿಯನ್ನು ಬಿಂಬಿಸುವಲ್ಲಿ ಮಹತ್ವದ ಪಾತ್ರ ವಹಿಸಿವೆ. ಮೂಲತಃ ದೇವಾಲಯ ಎಂಬುದು ಒಂದು ಕಟ್ಟಡ ಸಾಮೂಹಿಕ ಪೂಜೆ, ಪ್ರಾರ್ಥನೆಗಳನ್ನು ಸಲ್ಲಿಸಲು ಅನುಕೂಲವಿರುವ ಒಂದು ತಾಣ. ಯಾವ ಮತ , ಧರ್ಮದಲ್ಲಾದರೂ ದೇವಾಲಯಕ್ಕೆ ಒಂದು ವಿಶಿಷ್ಟ ಸ್ಥಾನವಿದೆ.

ಮಾನವನಿಗೆ ಸುತ್ತಲಿರುವ ಪ್ರಕೃತಿಯು ತನ್ನ ಬದುಕಿನಲ್ಲಿ ಮಹತ್ತರ ಪಾತ್ರ ವಹಿಸಿರುವುದನ್ನು ಗುರುತಿಸಿದಾಗ ಅದರ ಬಗ್ಗೆ ಗೌರವ, ಭಯ-ಭಕ್ತಿಗಳು ಮೂಡಿದವು. ಈ ದೃಷ್ಟಿಯಿಂದ ಪ್ರಕೃತಿಯ ಎಲ್ಲ ವಸ್ತುಗಳೂ ಅವನಿಗೆ ಪೂಜಾರ್ಹವಾದವು. ಈ ಕಾರಣದಿಂದಲೇ ಗಿಡ, ಮರ, ನದಿ-ಇತ್ಯಾದಿಗಳು ಅವನಿಗೆ ಪೂಜನೀಯವಾದುವಲ್ಲದೆ, ಪೂಜಾಸ್ಥಾನಗಳೂ ಆದವು. ಇನ್ನೂ ಮುಂದುವರಿದು ಈ ಎಲ್ಲ ಸೃಷ್ಟಿಯ ಹಿನ್ನೆಲೆಯಾಗಿ ನಿಂತು ತನ್ನನ್ನು ನಡೆಸುತ್ತಿರುವ ಯಾವುದೋ ಒಂದು ಅನಂತ ಶಕ್ತಿ ಎಂಬ ಅರಿವು ಉಂಟಾದಾಗ, ಆ ಶಕ್ತಿಗೆ ಒಂದು ರೂಪಕೊಡಲು ಯತ್ನಿಸಿದ. ಹೀಗೆ ನೀಡಿದ ಆ ಒಂದು ರೂಪಕ್ಕೆ ಅಥವಾ ಸಂಕೇತಕ್ಕೆ ರಕ್ಷಣಾರ್ಥವಾಗಿ ಪ್ರತ್ಯೇಕ ಆಲಯವನ್ನು ಕಟ್ಟಲು ಆರಂಭಿಸಿದ ಇದು ದೇವಾಲಯ ರಚನೆಗೆ ನಾಂದಿಯಾಯಿತು.

ಈ ದೇವಾಲಯಗಳು ಶಾಶ್ವತವಾಗಿ ಉಳಿಯಬೇಕೆಂಬ ಹಂಬಲಕ್ಕೆ ಸ್ಥಳಪುರಾಣಗಳು ಮತ್ತು ವಿಶೇಷವಾದ ಕೆಲವು ಆಚರಣೆಗಳು ಪೋಷಕವಾಗಿವೆ. ವೈದಿಕ ಮತದ ಹಿನ್ನೆಲೆಯಲ್ಲಿ ಕೆಲವು ದೇವಾಲಯಗಳು ಜಾನಪದದ ಹಿನ್ನೆಲೆಯಲ್ಲಿ ಹಲವು ದೇವಾಲಯಗಳು, ಪುರಾಣದ ಹಿನ್ನೆಲೆಯಲ್ಲಿ ಮತ್ತಷ್ಟು ದೇವಾಲಯಗಳೂ ಪ್ರಾಮುಖ್ಯತೆ ಪಡೆದಿವೆ. ಆದ್ದರಿಂದಲೇ ದೇವಾಲಯಗಳು ಬೆಳೆಯಲು ಮತ್ತು ಉಳಿಯಲು ಸತತವಾಗಿ ಶ್ರಮಿಸಿವೆ.

ದೇವಾಲಯಗಳ ನಿರ್ಮಾಣದ ಹಿನ್ನೆಲೆಯಲ್ಲಿ ಧರ್ಮವೂ ಇರುವುದು ಸ್ವಾಭಾವಿಕ. ಶೈವ, ವೈಷ್ಣವ ಮತ್ತು ಜೈನ ಧರ್ಮಗಳ ಪ್ರಭಾವದಿಂದ ಶೈವ, ವೈಷ್ಣವ ದೇವಾಲಯಗಳು ಮತ್ತು ಬಸದಿಗಳು ನಿರ್ಮಾಣಗೊಂಡಿವೆ. ಅಲ್ಲದೆ ಇವುಗಳಿಗೆ ಈ ಭಾಗದಲ್ಲಿ ಆಳ್ವಿಕೆ ನಡೆಸಿದ ಅರಸರು ಮತ್ತು ಅವರ ಕುಟುಂಬ ವರ್ಗ, ಅಧಿಕಾರಿಗಳು, ಧರ್ಮಗುರುಗಳು ಮಾತ್ರವೇ ಅಲ್ಲದೆ ಸಾಮಾನ್ಯ ಜನತೆಯೂ ಕೂಡ ಆಸಕ್ತಿ ವಹಿಸಿರವುದನ್ನು ಹಲವು ಶಾಸನಗಳಿಂದ ತಿಳಿಯಬಹುದು.

ಕರ್ನಾಟಕದಲ್ಲಿ ಶಾತವಾಹನರ ಕಾಲದಿಂದಲೂ ದೇವಾಲಯಗಳ ಇತಿಹಾಸವನ್ನು ಗುರುತಿಸಬಹುದಾಗಿದೆ. ಆದರೆ ಬದಾಮಿ ಚಲುಕ್ಯರ ಕಾಲದಿಂದ ದೇವಾಲಯಗಳ ನಿರ್ಮಾಣ ನಿರ್ದಿಷ್ಟ ಸ್ವರೂಪ ತಾಳಿದ್ದು ಕಂಡುಬರುತ್ತದೆ. ಕಲ್ಯಾಣದ ಚಾಲುಕ್ಯರ ಕಾಲಕ್ಕೆ ದೇವಾಲಯಗಳು ಜನತೆಯ ಬದುಕಿನಲ್ಲಿ ಮಹತ್ವದ ಪಾತ್ರ ವಹಿಸಿವೆ. ದೇವಾಲಯಗಳ ನಿರ್ಮಾಣ,

ನಿರ್ವಹಣೆ ಮತ್ತು ರಕ್ಷಣೆಯು ಜನರಿಗೆ ಮುಖ್ಯವಾಗಿತ್ತು. ಶ್ರದ್ಧೆ ಮತ್ತು ನಿಷ್ಠೆಗಳಿಂದ ಆ ಕಾರ್ಯ ಮೂರನೆಯ ಸೋಮೇಶ್ವರನ ಕಾಲದಲ್ಲಿಯೂ ಮುಂಧುವರೆಯಿತು.

ದೇವಾಲಯಗಳು :

ಕದಂಬರ ಕಾಲದಿಂದಲೂ ದೇವಾಲಯಗಳ ನಿರ್ಮಾಣ ಜೀರ್ಣೋದ್ಧಾರ ಮತ್ತು ನಿರ್ವಹಣೆಗೆ ದೊರೆತ ದಾನ, ದತ್ತಿಗಳ ವಿವರಗಳುಳ್ಳ ಅನೇಕ ಶಾಸನಗಳು ದೊರೆತಿವೆ. ಬಾದಾಮಿ ಚಲುಕ್ಯರ ಕಾಲಕ್ಕೆ ದೇವಾಲಯಗಳ ನಿರ್ಮಾಣದಲ್ಲಿ ವಿಶೇಷವಾದ ಪ್ರಗತಿಯಾಗಿದೆ. ಈ ಪರಂಪರೆ ರಾಷ್ಟ್ರಕೂಟರ ಕಾಲದಲ್ಲಿಯೂ ಮುಂದುವರೆಯಿತು. ದೇವಾಲಯಗಳ ರೂಪು-ರೇಷೆ ಇತ್ಯಾದಿ ಶೈಲಿಗಳಲ್ಲಿ ಅನೇಕ ಪ್ರಯೋಗಗಳು ನಡೆದವು. ಇದಕ್ಕೆ ಕಲ್ಯಾಣದ ಚಾಲುಕ್ಯರೂ ಹೊರತಾಗಿರಲಿಲ್ಲ. ಇವರ ಕಾಲದಲ್ಲಿಯೂ ಸಹ ಅನೇಕ ದೇವಾಲಯಗಳು ನಿರ್ಮಾಣಗೊಂಡವು. ಇದು ಮೂರನೆಯ ಸೋಮೇಶ್ವರನ ಕಾಲದಲ್ಲಿಯೂ ಮುಂದುವರೆಯಿತು.

ದೇವಾಲಯಗಳು ಹಂತ ಹಂತವಾಗಿ ವಿಕಾಸಗೊಂಡು ಕಲ್ಯಾಣದ ಚಾಲುಕ್ಯರ ಆಳ್ವಿಕೆಯ ಆರಂಭದ ಕಾಲಕ್ಕಾಗಲೇ ಸ್ಪಷ್ಟವಾದ ಸ್ವರೂಪ ಪಡೆದಿದ್ದವು. ನಾಡಿನ ಧಾರ್ಮಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರವಾಗಿ ದೇವಾಲಯಗಳ ಸ್ಥಾನವು ಮಹತ್ವ ಪಡೆದಿತ್ತು. ದೇವಾಲಯಗಳ ನಿರ್ಮಾಣ ಜೀರ್ಣೋದ್ಧಾರ ನಿರ್ವಹಣೆಗೆ ದೊರೆತಿರುವ ದಾನ, ದತ್ತಿಗಳ ವಿವರಗಳನ್ನು ತಿಳಿಸುವ ಲಭ್ಯ ಶಾಸನಗಳ ನೆರವಿನಿಂದಲೇ ಹೇಳುವುದಾದರೆ ದೇವಾಲಯಗಳ ನಿರ್ಮಾಣವು ಆ ಕಾಲದ ಜನರಿಗೆ ಒಂದು ಪವಿತ್ರವಾದ ಹಾಗೂ ಮಹತ್ವದ ಕರ್ತವ್ಯವಾಗಿತ್ತು.

ಜೀವನದಲ್ಲಿ ಒಂದಾದರೂ ಗುಡಿಯನ್ನು ಕಟ್ಟಿಸಬೇಕು ಇಲ್ಲವೆ ಕಟ್ಟಿಸಿದ ಗುಡಿಗಳಿಗೆ ದಾನವನ್ನಾದರೂ ಕೊಡಬೇಕು ಎಂಬುದು ಆಗಿನವರ ಧಾರ್ಮಿಕ ಭಾವನೆಯಾಗಿತ್ತು. "ಸಂಪತ್ತು ಶಾಶ್ವತವಾದುದಲ್ಲ ಧರ್ಮವೇ ನಿಜವಾದ ಸಂಪತ್ತು." "ಬಡಲೊಡವೆ ಹೆಂಡಿರೆಂಬವರಿಗೆ ಮಾತ್ರ, ಪುರುಷರಿಗೆ ಪುಣ್ಯ ರೂಪವೇ ಒಡವೆ, ಸಿರಿನಿಟ್ಟೆಯಲ್ತು ಧರ್ಮವೇ ಪರಮಧನಂ"[೨] ಆದುದರಿಂದ ಲಾಭಲೋಭದಿಂದ ತಾನುಣ್ಣದೆ ಪೆರರ್ಗಿಕ್ಕದೆ ಮಡುಗಿ ನೃಪರಿಗೆ ತೆತ್ತು ಬರಿದಾಗ ಬೆಳ್ಳೊಗದಿಂದರುವುದಕ್ಕಿಂತ[೩] ದೇವಾಲಯ ನಿರ್ಮಾಣದಂತಹ ಧರ್ಮಕಾರ್ಯ ಮಾಡುವುದು ಲೇಸೆನಿಸಿತ್ತು.

ಕಲ್ಯಾಣದ ಚಾಲುಕ್ಯರ ಕಾಲದಲ್ಲಿ ದೇವಾಲಯಗಳ ನಿರ್ಮಾಣಕ್ಕೆ ನಾಲ್ಕು ಕಾರಣಗಳು ಪ್ರೇರಣೆ ನೀಡಿವೆ. ಅವುಗಳೆಂದರೆ

೧. ಧರ್ಮ,

೨. ಪರೋಕ್ಷ ವಿನಯ,

೩. ಗಳಿಸಿದ ಸಂಪತ್ತಿನ ವಿನಿಯೋಗ ಮತ್ತು

೪. ವಿಶೇಷ ಸಂದರ್ಭಗಳು[೪]

ಹೀಗಾಗಿ ದೇವಾಲಯಗಳ ನಿರ್ಮಾಣದಲ್ಲಿ ಆಳಿದ ಅರಸರು ಅವರ ಕುಟುಂಬವರ್ಗ, ಅಧಿಕಾರಿಗಳು ಧರ್ಮಗುರುಗಳು ಮಾತ್ರವಲ್ಲದೆ ಸಾಮಾನ್ಯ ಜನತೆಯೂ ಆಸಕ್ತಿವಹಿಸಿರುವುದನ್ನು ಹಲವು ಶಾಸನಗಳಿಂದ ತಿಳಿಯಬಹುದು.

ಯಾವ ವ್ಯಕ್ತಿ ದೇವರು ಮತ್ತು ದೇವಾಲಯಗಳನ್ನು ಪ್ರತಿಷ್ಠಾಪಿಸುತ್ತಾನೋ ಅವನ ಹೆಸರಿನಿಂದ ಆ ದೇವಾಲಯವನ್ನು ಮತ್ತು ದೇವರನ್ನು ಕರೆಯಲಾಗುತ್ತಿತ್ತು. ಇದಕ್ಕೆ ಕಾರಣ ದೇವಾಲಯವನ್ನು ಕಟ್ಟಿಸಿದವನ ಹೆಸರು ದೇವರಿಗೆ ಒಂದು ಕಟ್ಟಿಸಿದವನು ದೇವರೇ ಆಗಿ ಬಿಡುತ್ತಾನೆ ಎಂಬ ನಂಬಿಕೆ ಇತ್ತು.[೫] ಎಂದು ಶಾಸನ ಈ ನಂಬಿಕೆಯನ್ನು ತಿಳಿಸಿದೆ. ನೀಲಕಂಠನಾಯರು ನಿರ್ಮಿಸಿದ ನೀಲಕಂಠೇಶ್ವರ[೬] ಬೀವಿಸೆಟ್ಟಿ ಕಟ್ಟಿಸಿದ ಭೀಮೇಶ್ವರ[೭] ಚಂಡಿಮರಸ ಮಾಡಿಸಿದ ಚಂಡೇಶ್ವರ[೮] ವೈಜನಾಥಯ್ಯ ನಿರ್ಮಿಸಿದ ವೃಜೇಶ್ವರ ದೇವಾಲಯ[೯] ಈ ಮೊದಲಾದ ಉಲ್ಲೇಖಗಳು ಈತನ ಕಾಲದ ಶಾಸನಗಳಲ್ಲಿವೆ.

ದೇವಾಲಯಗಳ ಆಡಳಿತ :

ದೇವಾಲಯಗಳನ್ನು ನಿರ್ಮಿಸಿದ ವ್ಯಕ್ತಿಗಳು ಅದರ ಚಟುವಟಿಕೆಗಳು ಸುಗಮವಾಗಿ ನಡೆದುಕೊಂಡು ಹೋಗಲು ಹೇರಳವಾಗಿ ದಾನವನ್ನು ಬಿಡುತ್ತಿದ್ದರು ಧಾರ್ಮಿಕ ಹಾಗೂ ಸಾಮಾಜಿಕ ಚಟುವಟಿಕೆಗಳನ್ನು ಸ್ವತಂತ್ರವಾಗಿ ನಡೆಸಿಕೊಂಡು ಹೋಗಲು ದೇವಾಲಯಗಳನ್ನು ನೈಷ್ಠಿಕ ಸ್ಥಾನಗಳನ್ನಾಗಿ ಮಾಡಲಾಗುತ್ತಿತ್ತು. ನೈಷ್ಠಿಕ ಬ್ರಹ್ಮ ಚಾರಿಗಳಾದ ಈ ಸ್ಥಾನಾಚಾರ್ಯರು, ಸ್ಥಾನಪತಿ ಗುರುಗಳು ದೇವಾಲಯಗಳ ಆಡಳಿತವನ್ನು ನೋಡಿಕೊಳ್ಳುತ್ತಿದ್ದರು.

ನೈಷ್ಠಿಕ ಸ್ಥಾನಗಳಲ್ಲಿ ನೆಷ್ಠಿಕ ಬ್ರಹ್ಮಚಾರಿಗಳಿಗೆ ಮಾತ್ರ ಅವಕಾಶವಿತ್ತು. ಈ ಬ್ರಹ್ಮಚಾರಿಗಳು ಯಮ, ನಿಯಮ, ಧ್ಯಾನ ಧರಣ, ಜಪ,ಸಮಾಧಿಶೀಲ ಸಂಪನ್ನರು, ವ್ರತ, ಜಪ ಹೋಮಾದಿ ಅನುಷ್ಠಾನರು ಆಗಿರುತ್ತಿದ್ದರು. ತಮ್ಮ ವಿದ್ವತ್ತು, ತಪಸ್ಸು ಮತ್ತು ನೈಷ್ಠಿಕ ಬ್ರಹ್ಮಚರ್ಯ್ಯದಿಂದಾಗಿ ಸಮಾಜದಲ್ಲಿ ಗೌರವವನ್ನು ಪಡೆದ ಈ ಸ್ಥಾನಾಚಾರ್ಯರು ಪೂಜ್ಯಸ್ಥಾನದಲ್ಲಿದ್ದರು. ಸ್ಥಾನಾಚಾರ್ಯರ ಅನುಮತಿಯಿಲ್ಲದೆ ದೇವಾಲಯದ ಯಾವ ಚಟುವಟಿಕೆಗಳೂ ನಡೆಯುವಂತಿರಲಿಲ್ಲ. ದೇವಾಲಯಗಳಿಗೆ ದಾನಬಿಡುವುದಾಗಲಿ, ಇತರೆ ಯಾವುದೇ ಧರ್ಮಕಾರ್ಯ ಕೈಕೊಳ್ಳುವುದಾಗಲಿ ಅದು ಸ್ಥಾನಾಚಾರ್ಯರ ಪಾದಪೂಜೆಯಿಂದ ಪ್ರಾರಂಭವಾಗಬೇಕಿತ್ತು. ಅದನ್ನೇ ಶಾಸನಗಳು 'ಕಾಲಂ ಕಚ್ಚಿ' ಎಂದು ಕರೆದಿವೆ.

ಪೂಜೆ :

ದೇವಾಲಯಗಳಲ್ಲಿ ಗರ್ಭಗೃಹ ಪ್ರಧಾನವಾದುದು. ಅದು ದೇವರ ಸ್ಥಾನ. ಅಲ್ಲಿ ದೇವರ ಮೂರ್ತಿಯು ಪ್ರತಿಷ್ಠೆಯಾಗಿರುತ್ತದೆ. ದೇವರ ಮೂರ್ತಿಯು ಕೇವಲ ಒಂದು ವಿಗ್ರಹವಲ್ಲ, ಬಿಂಬವಲ್ಲ, ಕಲಾಕೃತಿಯಲ್ಲ, ಶಿಲ್ಪವಲ್ಲ, ದೇವರ ಮೂರ್ತಸ್ವರೂಪ ಎಂಬ ನಂಬಿಕೆ ಆಸ್ತಿಕರ ಹೃದಯಗಳಲ್ಲಿ ಗಾಢವಾಗಿರುತ್ತದೆ.

ಮನುಷ್ಯನು ನಂಬಿದ ವಿಶ್ವಾಸವಿಟ್ಟ ದೇವರಿಗೆ ಜೀವವಿದೆ. ಅವನು ಅಗೋಚರ, ಸರ್ವಾಂತರ್ಯಾಮಿ, ಸರ್ವಶಕ್ತ. ಎಲ್ಲಾ ಕಾಲಗಳಲ್ಲೂ ಎಲ್ಲೆಲ್ಲೂ ಇರುವನು. ಅವನಿಗೊಂದು ರೂಪವಿದೆ. ಆ ರೂಪವನ್ನೇ ಶಿಲೆಯಲ್ಲೋ, ಲೋಹದಲ್ಲೋ ಬಿಂಬವಾಗಿಸಿ ಜೀವಂತ ವ್ಯಕ್ತಿಯಂತೆ ಆದರಿಸುವ, ಪೂಜಿಸುವ ಕ್ರಿಯೆ ಇಂದಿಗೂ ನಡೆದುಬಂದಿದೆ.

ನಿತ್ಯ ಪೂಜೆ :

ದೇವರಿಗೆ ಪ್ರತಿನಿತ್ಯ ನಡೆಯುವ ಪೂಜೆಗಳು ಅಥವಾ ಮಾಸದ ನಿರ್ದಿಷ್ಟ ತಿಥಿಗಳಂದು ನಡೆಯುವ ಪೂಜೆಗಳು ನೈಮಿತ್ತಿಕಗಳು, ಇವುಗಳನ್ನೇ ಪಕ್ಷಪೂಜೆ ಮತ್ತು ಮಾಸಪೂಜೆ ಎಂದು ಕರೆಯಲಾಗಿದೆ. ವರ್ಷದ ವಿಶೇಷ ಹಬ್ಬ, ಸಂಕ್ರಮಣ, ಯುಗಾದಿ ಇತ್ಯಾದಿ ದಿನಗಳಲ್ಲಿ ನಡೆಯುವ ಪೂಜೆಯನ್ನು ವಿಶೇಷ ಪೂಜೆ ಎನ್ನುತ್ತೇವೆ. ಇವುಗಳಲ್ಲಿ ಪರ್ವ, ಉತ್ಸವ ಇತ್ಯಾದಿಗಳು ಸಹ ಸೇರುತ್ತವೆ.

ನಿತ್ಯ ನಿವೇದ್ಯಕ್ಕೆ ಶ್ರಿಖಂಡ ನನ್ದಾದೀವಿಗೆಗೆ[೧೦] ನಿತ್ಯ ನಿವೇದ್ಯಕ್ಕಂ, ನಂದಾದೀವೆಗಗಂ ಪಾತ್ರಪಾವುಳಕ್ಕಂ[೧೧]ಪೂಜೆ ಪುನಸ್ಕಾರ ಧೂಪ ದೀಪ ನಿವೇದ್ಯಕ್ಕಂ[೧೨] ಪೂಜೆ ಪುನಸ್ಕಾರ ನನ್ದಾದೀವಿಗೆ ನಿವೇದ್ಯಕ್ಕಂ[೧೩] ಪೂಜೆ ಪುನಸ್ಕಾರ ಧೂಪ ದೀಪ ನಿವೇದ್ಯಕ್ಕಂ[೧೪] ನಂದಾದೀವೆಗೆಗಂ ದೂಪಕ್ಕಂ[೧೫] ದೇವತಾಪೂಜೆಗವಂಗ ಭೋಗಕ್ಕಂ ನಿವೇದ್ಯಕ್ಕಂ[೧೬] ದೇವರ ನನ್ದಾದೀವಿಗೆ ಯೆಣ್ಣೆಗಂ ದೇವರ ನಿವೇದ್ಯಕ್ಕಂ ದೇವರ ಪರಿಯಶಕ್ಕ ಪಕ್ವಾನ್ನದುರ್ದುಗಂ ದೆಸರುಂಗಂ ತುಪ್ಪಕ್ಕಂ[೧೭] ನೈವೇದ್ಯ, ಪೂಜೆ ಪುನಸ್ಕಾರ ದೀಪಂ ಸಹಿತಂ[೧೮] ಇತ್ಯಾದಿ ಉಲ್ಲೇಖಗಳು ದೇವಾಲಯ ಮತ್ತು ಬಸದಿಗಳಲ್ಲಿ ಕಂಡುಬರತ್ತವೆ. ಇವು ನಿತ್ಯ ಪೂಜೆ, ನಿವೇದ್ಯ, ನಂದಾದೀವಿಗೆಗಳು ಪೂಜಾವಿಧಿಯಲ್ಲಿ ಪಡೆದಿದ್ದ ಪ್ರಾಮುಖ್ಯತೆಯನ್ನು ದೃಢಪಡಿಸುತ್ತವೆ.

ಪೂಜಾವಿಧಿಯಲ್ಲಿ ಕಂಡುಬರುವ ಮತ್ತೊಂದು ಪ್ರಮುಖ ಅಂಶವೆಂದರೆ ಪಂಚಮಹಾಶಬ್ದ[೧೯] ಪಂಚ ಮಹಾವಾದ್ಯಗಳೆ ಭಜನದಿಂದ ಉಂಟಾದ ಶಬ್ದವೇ ಪಂಚಮಹಾಶಬ್ದ. ಪಂಚವಾದ್ಯಗಳೆಂದರೆ ಕೊಂಬು, ತಮಟೆ (ಹಲಗೆ) ಶಂಖ (ದವಳ) ಭೇರಿ (ಭಾಜಾ) ಮತ್ತು ಜಯಗಂಟೆ (ಜಾಗಟೆ) ಇವುಗಳನ್ನು ಪ್ರತಿಕಾಲದ ಪೂಜೆಯ ನೀರಾಜನ ಅಂದರೆ ಮಹಾಮಂಗಳಾರತಿ ಸಮಯದಲ್ಲಿ ಬಾರಿಸುವುದು ಒಂದು ಪದ್ಧತಿ. ಇದು ಭಕ್ತಾದಿಗಳೆಲ್ಲರೂ ದೇವರಿಗೆ ಮಹಾಮಂಗಳಾರತಿ ಆಗುತ್ತಿದೆ ಎಂಬುದನ್ನು ಸೂಚಿಸುವ ಕ್ರಮ ಎಂದು ತಿಳಿಯಬಹುದೇ ಅಷ್ಟೇ ಹೊರತು, ಪಂಚಮಹಾಶಬ್ದವು ದೇವರ ಪೂಜಾ ವಿಧಿಯ ಒಂದು ಅಂಗವಾಗಿ ಇರುವುದಿಲ್ಲ.[೨೦] ದೇವಾಲಯದಲ್ಲಿ ಸದಾ ಉರಿಯುವ ದೀಪವೇ ನಂದಾದೀಪ ಅಥವಾ ನಂದಾದೀವಿಗೆ.

ಅಂಗಭೋಗ ಸೇವೆ :

ಅಂಗಭೋಗ ಧೂಪಾರತಿ ನಿವೇದ್ಯಕ್ಕಂ[೨೦] ಅಂಗಭೋಗ ನಿವೇದ್ಯಕ್ಕೆ[೨೧] ದೇವತಾಪೂಜೆಗವಂಗಭೋಗಕ್ಕಂ ನಿವೇದ್ಯಕ್ಕಂ[೨೨] ಇತ್ಯಾದಿ ಉಲ್ಲೇಖಗಳಿಂದ ಅಂಗಭೋಗವು ಬೆಳಗಿನ ಪೂಜೆಗೆ ಮಾತ್ರ ಸಂಬಂಧಿಸಿದ್ದು ಮಹಾಮಂಗಳಾರತಿಯೊಂದಿಗೆ ಮುಗಿಯುತ್ತದೆ. ಉಳಿದ ಸಮಯದ ಪೂಜೆಗಳಲ್ಲಿ ಸ್ನಾನ ಇತ್ಯಾದಿ ಭೋಗಗಳನ್ನು ಹೊರತುಪಡಿಸಿ ಧೂಪ, ದೀಪ ನೈವೇದ್ಯ ಸಮರ್ಪಣೆ ಮಾತ್ರ ಇರುತ್ತದೆ ಎನ್ನುವುದು ವ್ಯಕ್ತವಾಗಿದೆ. ನಂದಾದೀವಿಗೆಯು ದೇವಾಲಯದ ಗರ್ಭಗೃಹದಲ್ಲಿ ಸದಾ ಬೆಳಕಿರುವಂತೆ ಹಚ್ಚುವ ದೀಪವಾಗಿದೆ. ಬೆಳಗಿನ ಪೂಜೆಯ ಸಂದರ್ಭದಲ್ಲಿ, ಅಂಗಭೋಗದ ನಂತರ ರಾತ್ರಿಯ ಪೂಜೆಯ ಕೊನೆಯ ಸಮಯದವರೆಗೆ ರಂಗ ಭೋಗ ನಡೆಯುತ್ತಿರಬಹುದು. ಈ ಮಧ್ಯೆ ಮಧ್ಯಾಹ್ನ ಮತ್ತು ಸಂಜೆ ದೇವರಿಗೆ ಧೂಪ, ದೀಪ, ನಿವೇದ್ಯ, ಸ್ತುತಿ ಇತ್ಯಾದಿಗಳು ನಡೆಯುತ್ತವೆ.[೨೩]

ನಿತ್ಯ ನಿವೇದ್ಯಕ್ಕೆ ಶ್ರೀಖಂಡ[೨೪] ಎಂಬ ಉಲ್ಲೇಖದಿಂದ ಇದು ನಿವೇದ್ಯಕ್ಕೆ ಸಂಬಂಧಿಸಿದ ಆಹಾರವೆಂದು ತಿಳಿಯಬಹುದಾಗಿದೆ. ಇಂದಿಗೂ ಶ್ರೀಖಂಡವು ಉತ್ತರ ಕರ್ನಾಟಕದಲ್ಲಿ ಪ್ರಸಿದ್ಧವಾದ ಮೊಸರು, ಸಕ್ಕರೆಗಳಿಂದ ಮಾಡಿದ ಖಾದ್ಯವಾಗಿದೆ. ಅಲ್ಲದೇ ಒಂದು ಶಾಸನವು 'ಭೋಗೇಶ್ವರ ದೇವರ ಅಷ್ಟವಿಧಾರ್ಚನೆಗೆ''[೨೫] ಎಂದು ಉಲ್ಲೇಖಿಸಿದೆ. ಆದರೆ ಅಷ್ಟವಿಧಾರ್ಚನೆಗಳು ಯಾವವು ಎಂದು ಯಾವ ಶಾಸನವೂ ಸ್ಪಷ್ಟಪಡಿಸಿಲ್ಲ. ಅಲ್ಲದೆ ಜೈನ ಬಸದಿಗಳಲ್ಲೂ ಅಷ್ಟವಿಧಾರ್ಚನೆ ಇತ್ತು.[೨೬] ಜಲ, ಗಂಧ, ಪುಷ್ಪ, ಅಕ್ಷತೆ, ಧೂಪ, ದೀಪ, ನೈವೇದ್ಯ ಮತ್ತು ತಾಂಬೂಲಗಳ ಸೇವೆಯೇ ಅಷ್ಟವಿಧಾರ್ಚನೆ ಎಂದು ಬಾಳಂಬೀಡಿನ ಒಂದು ಶಾಸನದಿಂದ ತಿಳಿಯಬಹುದಾಗಿದೆ.[೨೭]

ರಂಗಭೋಗ ಸೇವೆ :

ದೇವಾಲಯಗಳ ಪೂಜಾವಿಧಿಯಲ್ಲಿ ಬಹಳವಾಗಿ ಗಮನ ಸೆಳೆಯುವುದು ರಂಗಭೋಗ. ರಂಗಭೋಗವು ರಂಗದ ಮೇಲೆ ಪ್ರದರ್ಶಿಸಲ್ಪಡುತ್ತಿದ್ದ ಸೇವೆ ಎಂಬುದನ್ನು ಬಹುತೇಕ ಎಲ್ಲ ವಿದ್ವಾಂಸರೂ ಒಪ್ಪುತ್ತಾರೆ. ಜೈನ ಬಸದಿಗಳಲ್ಲೂ ರಂಗಭೋಗಕ್ಕೆ ಅವಕಾಶವಿತ್ತು . ರಂಗದ ಮೇಲೆ ನಡೆಯುವ ಪೂಜೆಯೇ ರಂಗಪೂಜೆ. ಅದು ರಂಗಭೋಗದ ಆರಂಭಕ್ಕೆ ಮೊದಲು ರಂಗಕ್ಕೆ ಸಂದ ಪೂಜೆಯೂ ಆಗಿರಬಹುದು ಅಥವಾ ಅದೇ ರಂಗಭೋಗವೂ ಆಗಿರಬಹುದು. ರಂಗಭೋಗವು ರಂಗದ ಮೇಲೆ ಪ್ರದರ್ಶನದ ಮೂಲಕ ನಡೆಯುವ ಪೂಜೆಯಾದ್ದರಿಂದ ಅದರಲ್ಲಿ ನೃತ್ಯ, ಗೀತ, ವಾದ್ಯಗಳು ಪ್ರಮುಖವಾಗುತ್ತವೆ. ರಂಗಭೋಗದಲ್ಲಿ ನೃತ್ಯರೂಪಕಗಳಿಗೂ ಅವಕಾಶವಿದ್ದಿರಬಹುದು. ಅಂತಹ ರಂಗ ಪ್ರದರ್ಶನದಲ್ಲಿ ಪಾತ್ರಗಳು, ವಾದ್ಯದವರು ಅವಶ್ಯಕ ರಂಗಭೋಗವನ್ನು ಸಲ್ಲಿಸುವವರೂ, ವಿದ್ಯಾವಂತರೂ ಆಗಿರುತ್ತಿದ್ದರು.[೨೮]

ಪೂಜೆ ಪುನಸ್ಕಾರಕ್ಕಂ ದೇವರಂಗಭೋಗ ನಿವೇದ್ಯಕ್ಕಂ[೩೦] ದೇವರ ಅಂಗಭೋಗ, ರಂಗಭೋಗ, ವಿದ್ಯಾದಾನ ಖಂಡಸ್ಫುಟಿತ ಜೀರ್ಣೋದ್ಧಾರಂ[೩೧] ರಂಗಭೋಗದ ವಿದ್ಯಾವನ್ತರಿಗೆ[೩೨] ಇತ್ಯಾದಿ ಉಲ್ಲೇಖಗಳು ರಂಗಭೋಗ, ಆದರಲ್ಲಿ ಪಾಲ್ಗೊಳ್ಳುತ್ತಿದ್ದ ವಿದ್ಯಾವಂತರು, ಅದಕ್ಕೆ ನೀಡಿದ ದಾನಗಳು ಮುಂತಾದ ವಿಷಯಗಳನ್ನು ಸ್ಪಷ್ಟಪಡಿಸಿವೆ.

ಚೈತ್ರ ಪವಿತ್ರ :

ದೇವರ ಅಂಗಭೋಗ, ರಂಗಭೋಗ, ಜೀರ್ಣೋದ್ಧಾರಗಳಷ್ಟೇ ಪ್ರಾಮುಖ್ಯತೆಯು ಚೈತ್ರ ಮತ್ತು ಪವಿತ್ರಗಳಿಗೆ ದೊರೆಕಿದೆ. ಅನೇಕ ಶಾಸನಗಳು ಚೈತ್ರ ಪವಿತ್ರಗಳಿಗೆ ದೊರೆತಿರುವ ದಾನವನ್ನು ಉಲ್ಲೇಖಿಸಿವೆ. ದೇವತಾ ಪೂಜೆಗವಂಗಭೋಗಕ್ಕಂ, ನಿವೇದ್ಯಕ್ಕಂ ಪುರಾಣಖಂಡಿಕ ಚೈತ್ರಪವಿತ್ರವಿನಿತಕ್ಕಂ[೩೩] ನಿವೇದ್ಯಕ್ಕಂ ಚೈತ್ರಪವಿತ್ರಕ್ಕಂ ತಪೋಧನರ ಗ್ರಾಸಕ್ಕಂ[೩೪] ನಿವೇದ್ಯಕ್ಕೆ, ಅಂಗಭೋಗಕ್ಕೆ, ಚೈತ್ರಪವಿತ್ರಕ್ಕೆ, ಪೂಜಾರಿಗೆ, ಹಾಡುವವರು, ಹರೆಕಾರರು, ದೇವರ ಹೂದೋಟ ಮಾಡುವ ಮಾಲೆಗಾರರು[೩೫] ದೇವರಂಗಭೋಗ ನೈವೇದ್ಯಕ್ಕೆ ಪಾತ್ರಪವುಳಕ್ಕಚೈತ್ರಪವಿತ್ರಕ್ಕಂ[೩೬] ನಂದಾದೀವಿಗೆಗಂ ಚೈತ್ರಪವಿತ್ರಕ್ಕಂ[೩೭] ಮುಂತಾದ ಶಾಸನೋಲ್ಲೆಖಗಳು ಚೈತ್ರಪವಿತ್ರಗಳನ್ನು ದೇವರ ಮತ್ತು ದೇವಾಲಯದ ಇತರ ಸೇವೆ ಮತ್ತು ವ್ಯವಸ್ಥೆಗಳ ಜೊತೆಗೆ ಸೇರಿಸಿವೆ. ಚೈತ್ರಪವಿತ್ರಗಳು ದೇವರಿಗೆ ಸಲ್ಲುವ ವಿಶೇಷ ಸೇವೆಗಳಾದರೂ, ಅದರಲ್ಲಿ ಇಡಿಯಾಗಿ ದೇವಾಲಯವನ್ನೇ ತೊಡಗಿಸುವ ಪ್ರಯತ್ನ ಇತ್ತೆಂದು ತಿಳಿಯಬಹುದು. ಚೈತ್ರ ಪವಿತ್ರಗಳ ಸಂದರ್ಭದಲ್ಲೇ ದೇವಾಲಯದ ಖಂಡಸ್ಫುಟಿತ ಜೀರ್ಣೋದ್ಧಾರ, ಮಾಟಕೂಟ, ನವಕರ್ಮ ಇತ್ಯಾದಿಗಳೆಲ್ಲವೂ ನಡೆಯುತ್ತಿದ್ದವೆಂದು ಭಾವಿಸಬಹುದಾಗಿದೆ. ನಾರಂಗವಾಡಿ[೩೮] ಶಾಸನವು ದೇವಾಲಯದ ಖಂಡಸ್ಫುಟಿತ ಜೀರ್ಣೋದ್ಧಾರ, ಮಾಟಕೂಟ, ನವಕರ್ಮಕ್ಕೆ ಬಿಟ್ಟದಾನಗಳನ್ನು ತಿಳಿಸುತ್ತವೆ.

ಇತರ ಪರ್ವಗಳು :

ದೇವಾಲಯಗಳಲ್ಲಿ ಹಲವಾರು ನೈಮಿತ್ತಿಕಗಳು ಮತ್ತು ವಿಶೇಷ ಉತ್ಸವಗಳು, ಪರ್ವ, ಹಬ್ಬ, ಉತ್ಸವ ಇತ್ಯಾದಿ ಹೆಸರುಗಳಲ್ಲಿ ನಡೆಯುತ್ತಿದ್ದವು. ಬಾದುಬ್ಬೆಯಪರ್ವ, ದೀಪಾವಳಿಪರ್ವ, ಸಂಕ್ರಾತಿಪರ್ವ, ನೂಲಪರ್ವ, ಗುರುಪರ್ವ, ಬಹುತೇಕ ಈ ಐದೂ ಪರ್ವಗಳನ್ನು ಒಟ್ಟಿಗೆ ಪಂಚಪರ್ವಗಳು ಎಂದೇ ಭಾವಿಸಿರುವಂತಿದೆ. ಪರ್ವಗಳು ಮತ್ತು ಉತ್ಸವಗಳಿಗಿರುವ ಬಹಳ ಮುಖ್ಯವಾದ ವ್ಯತ್ಯಾಸವೆಂದರೆ, ಪರ್ವಗಳು ಮನೆ ಮತ್ತು ದೇವಾಲಯ ಎರಡರಲ್ಲೂ ಆಚರಿಸಲ್ಪಡುತ್ತವೆ. ಅಂತಹ ಹಬ್ಬಗಳನ್ನು ಮನೆಯಲ್ಲಿ ಕುಟುಂಬದ ಮಟ್ಟಿಗೆ ಮತ್ತು ದೇವಾಲಯಗಳಲ್ಲಿ ಸಾಮೂಹಿಕವಾಗಿ ಪರ್ವಗಳನ್ನು ಆಚರಿಸಲಾಗುತ್ತಿತ್ತು. ಆದರೆ ಉತ್ಸವಗಳು ದೇವಾಲಯಗಳ ವ್ಯಾಪ್ತಿಯಲ್ಲೇ ಉಳಿಯುತ್ತವೆ. ದೇವರನ್ನು ರಥದಲ್ಲಿರಿಸಿ ಅಥವಾ ವಾಹನಸಹಿತ ಹೊತ್ತು ಮಾಡಿಸುವ ಮೆರವಣಿಗೆಯೇ ಉತ್ಸವ. ಚೈತ್ರ ಮತ್ತು ಪವಿತ್ರ ಮುಂತಾದ ಪರ್ವಗಳು ಸಾಮೂಹಿಕ ಸ್ವರೂಪದವು. ದೇವಾಲಯಗಳಲ್ಲಿ ಆಚರಣೆಯಲ್ಲಿದ್ದ ಪರ್ವ ಮತ್ತು ಉತ್ಸವಗಳ ನಿರಂತರ ನಿರ್ವಹಣೆಗೆ ವ್ಯವಸ್ಥೆ ಮಾಡಲಾಗುತ್ತಿತ್ತು.[೩೯]

ದೇವಾಲಯಗಳಲ್ಲಿ ಆಚರಿಸುವ ಪರ್ವಗಳಲ್ಲಿ ಶಾಸನಗಳು ಹೆಚ್ಚಾಗಿ ಉಲ್ಲೇಖಿಸಿರುವುವೆಂದರೆ ಸಂಕ್ರಾತಿಯಪರ್ವ[೪೦] ಯುಗಾದಿಪರ್ವ[೪೧] ದೀಪಾವಳಿ ಪರ್ವ[೪೨] ಚೈತ್ರ ಮತ್ತು ಪವಿತ್ರದ ಪರ್ವಗಳು.[೪೩] ಇವು ಉತ್ಸವಗಳಿಂದ ಭಿನ್ನವಾದವು ಪರ್ವಗಳ ಸಮಯದಲ್ಲಿ ಉತ್ಸವಗಳು ಕಡ್ಡಾಯವೇನಲ್ಲ. ಗ್ರಹಣಗಳಂದು ಅದರಲ್ಲೂ ವಿಶೇಷವಾಗಿ ಸೂರ್ಯಗ್ರಹಣದಂದು ದೇವಾಲಯಗಳಲ್ಲಿ ವಿಶೇಷ ಪೂಜೆಗಳನ್ನು ನಡೆಸಲಾಗುತ್ತಿತ್ತು ದೇವಾಲಯಕ್ಕೆ ದಾನ ನೀಡಲೂ ಅಂತಹ ಸಮಯಗಳನ್ನು ಪ್ರಶಸ್ತವೆಂದು ತಿಳಿಯಲಾಗಿತ್ತು. ಇಂಗಳೇಶ್ವರದ ಒಂದು ಶಾಸನವು[೪೪] ಸೂರ್ಯಗ್ರಹಣ ಪರ್ವವನ್ನು ಉಲ್ಲೇಖಿಸಿದೆ.

ಪೂಜಾರಿ ಮತ್ತು ಅರ್ಚಕ :

ದೇವಸ್ಥಾನದಲ್ಲಿ ದೇವರ ಪೂಜೆ ಮಾಡುವ ಸಲುವಾಗಿ ಊರಿನ ಮಹಾಜನರು ಮತ್ತು ಒಡೆಯರ ಅಭಿಮತದಂತೆ ನಿಯಮಿತವಾದ ವ್ಯಕ್ತಿಯೇ ಪೂಜಾರಿ. ಪೂಜಾರಿಯ ಅಧಿಕಾರವು ಸಾಮಾನ್ಯವಾಗಿ ವಂಶಪಾರಂಪರ್ಯವಾಗಿಯೇ ಮುಂದುವರಿಯುತ್ತಿತ್ತು. ಪೂಜಾರಿಯು ಸ್ಥಾನಪತಿಗಿಂತ ಭಿನ್ನವಾಗಿದ್ದು ಇವನು ತಪೋಧನನಾಗಿರಬೇಕೆಂದಾಗಲೀ, ನೈಷ್ಠಿಕನಾಗಿರಬೇಕೆಂದಾಗಲೀ ನಿರೀಕ್ಷಿಸುವಂತಿರಲಿಲ್ಲ. ಆಗಮೋಕ್ತ ಕ್ರಮದಲ್ಲಿ ಪ್ರತಿನಿತ್ಯ ದೇವರ ವಿಗ್ರಹಕ್ಕೆ ಪೂಜೆ ಸಲ್ಲಿಸುವುದಷ್ಟೇ ಪೂಜಾರಿಯ ಕರ್ತವ್ಯ. ಬೇರಾವ ವಿಷಯಕ್ಕೂ ಅವನು ಜವಾಬ್ದಾರನಾಗಬೇಕಾಗಿರಲಿಲ್ಲ. ಅವನ ಸೇವೆಗಾಗಿ ಭೂಮಿ ಅಥವಾ ಹಣದ ರೂಪದಲ್ಲಿ ಸಂಭಾವನೆಯನ್ನು ನೀಡಲಾಗುತ್ತಿತ್ತು. ಪೂಜೆಯನ್ನು ಮಾಡುವವನು ಪೂಜಾರಿ, ಅರ್ಚನೆ ಮಾಡುವವನು ಅರ್ಚಕ. ಪೂಜೆ ಮತ್ತು ಅರ್ಚನೆಗಳು ತಾತ್ವಿಕವಾಗಿ ಬೇರೆಬೇರೆಯಾದರೂ ತಾತ್ವಿಕವಾಗಿ ಬೇರೆಯಲ್ಲ. ಆದ್ದರಿಂದ ಪೂಜಾರಿ ಮತ್ತು ಅರ್ಚಕ ಇಬ್ಬರೂ ಬೇರೆ ಬೇರೆಯಲ್ಲ. ಆದರೆ ಪೂಜಾರಿಯೂ ಸ್ಥಾನಿಕನಲ್ಲ ಮತ್ತು ಸ್ಥಾನಿಕನು ಪೂಜಾರಿಯಲ್ಲ. ಸ್ಥಾನಿಕನ ಸ್ಥಾನ ತೆರವಾದಾಗ ಪೂಜಾರಿಯು ತಾತ್ಕಾಲಿಕವಾಗಿ ಆಸ್ಥಾನದ ಕಾರ್ಯಗಳನ್ನು ನಿರ್ವಹಿಸುತ್ತಿದ್ದನು.[೪೫]

ಮೂರನೆಯ ಸೋಮೇಶ್ವರನ ಶಾಸನಗಳಲ್ಲಿ ಪೂಜಾರಿ ವ್ಯಾಸಣಭಟ್ಟ[೪೬] ಪೂಜಾರಿ ಚಂದ್ರಭೂಷಣರ[೪೭] ಉಲ್ಲೇಖ ಕಂಡುಬರುತ್ತದೆ. ಪೂಜಾರಿಗಳ ಜೀವಿತಕ್ಕೆ, ಪೂಜಿಸುವ ಬ್ರಾಹ್ಮಣರ ಗ್ರಾಸಕ್ಕೆ, ಆಶನಾಚ್ಛಾದನಕ್ಕೆ ದಾನ ನೀಡಿರುವುದನ್ನು ಸಿಂಧವಾಳ,[೪೮] ಮುಕ್ಕುಂದಿ,[೪೯] ಏರಿಗೆ,[೫೦] ಮಾದಿನೂರು,[೫೧] ಸಿರಿವಾಳ,[೫೨] ಮತ್ತು ಮದನಬಾವಿ[೫೩] ಮುಂತಾದ ಶಾಸನಗಳು ತಿಳಿಸುತ್ತವೆ.

ಪಾತ್ರದವರು - ಪಾವುಳ :

ಮೂರನೆಯ ಸೋಮೇಶ್ವರನ ಕಾಲದ ಕರಕಾಂತಪುರ[೫೪] ಬಿಜಾಪುರ[೫೫] ಮತ್ತು ಔರಾದ್[೫೬] ಶಾಸನಗಳಲ್ಲಿ ''ಪಾತ್ರಪಾವುಳ''ಎಂಬ ಉಲ್ಲೇಖ ಕಂಡುಬರುತ್ತದೆ. ''ಪಾತ್ರ''ದವರೂ ಸಹ ದೇವಾಲಯದ ಸೇವಾವರ್ಗದಲ್ಲಿ

ಮುಖ್ಯವಾಗುತ್ತಾರೆ. ಪಾತ್ರದವರಲ್ಲೇ ಹಲವಾರು ಸೂಳೆಯರಾದ ಕಾರಣ ಪಾತ್ರ ಮತ್ತು ಸೂಳೆ ಎಂಬ ಎರಡೂ ಶಬ್ದಗಳು ಸಮಾನಾರ್ಥವಾಗಿ ಬಳಕೆಯಾಗಿವೆ. ''ಪಾತ್ರ'' ಎಂದು ಕರೆಯಲ್ಪಟ್ಟ ಸ್ತ್ರೀಯು ಸಂಗೀತ, ನೃತ್ಯಗಳಲ್ಲಿ ಪರಿಣತಳಾಗಿದ್ದು, ಸುಂದರಳಾಗಿದ್ದಳೆಂದು ಊಹಿಸಬಹುದಾಗಿದೆ. ಈಕೆಯು ದೇವರ ಎದುರಿಗೆ ನೃತ್ಯಸೇವೆ ಮಾಡುತ್ತಿದ್ದಳು. ನೃತ್ಯ ಸೇವೆಯ ವಿನಹ ಮತ್ತಾವ ಕೆಲಸಕ್ಕೂ ಇವಳು ಜವಾಬ್ದಾರಳಾಗಿರಲಿಲ್ಲ. ಪಾತ್ರದವಳು ಹಾಡಬೇಕೆಂದು ಅಪೇಕ್ಷಿಸುವಂತಿರಲಿಲ್ಲ. ಹಾಡಲೆಂದೇ ಹಲವರು ಇರುತ್ತಿದ್ದರು. ಸುಂದರರಾದ ಸೂಳೆಯರು ಸಹ ನೃತ್ಯಶಿಕ್ಷಣ ಪಡೆದು 'ಪಾತ್ರ' ವರ್ಗಕ್ಕೆ ಸೇರಬಹುದಾಗಿತ್ತು. ಇದರಿಂದ ನೃತ್ಯ ಅಥವಾ ನೃತ್ಯ ರೂಪಕಗಳ ಮೂಲಕ ದೇವರಿಗೆ ರಂಗಭೋಗ ಸೇವೆಸಲ್ಲಿಸುತ್ತಿದ್ದ ಸುಂದರ ವ್ಯಕ್ತಿಯನ್ನು 'ಪಾತ್ರ' ಎಂದು ಒಪ್ಪಬೇಕಾಗುತ್ತದೆ. ಈವರೆಗೆ ಪಾತ್ರದವರ ವಿಷಯವಾಗಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿರುವ ಹಲವು ವಿದ್ವಾಂಸರ ಪ್ರಕಾರ ಪಾತ್ರ, ಸೂಳೆ, ದೇವದಾಸಿ ಇವೆಲ್ಲವೂ ಅಲ್ಪಸ್ವಲ್ಪ ವ್ಯತ್ಯಾಸಗಳ ಪಾರಿಭಾಷಿಕ ಶಬ್ದಗಳು.

'ಪಾದಮೂಲ ಪರಿವಾರ', 'ಪಾವುಳ ಪರಿವಾರ', 'ಪಾವುಳ' ಇವುಗಳಲ್ಲಿ ವಿಶೇಷವಾದ ಅರ್ಥವ್ಯತ್ಯಾಸವೇನೂ ಕಾಣುವುದಿಲ್ಲ. ಪಾದಮೂಲವೇ ಕ್ರಮೇಣ 'ಪಾವುಳ'ವಾಗಿ ಬದಲಾವಣೆ ಹೊಂದಿರುವುಂತಿದೆ. ಗರ್ಭಗೃಹದ ಆಚೆ ದೇವಾಲಯದ ಶುಚಿತ್ವ, ಅಲಂಕರಣ, ಅವಶ್ಯಕ ವಸ್ತುಗಳ ಸಂಗ್ರಹಣೆ ಇತ್ಯಾದಿ ದೈಹಿಕ ಶ್ರಮದ ಸೇವೆಯಲ್ಲಿ ತೊಡಗಿದ್ದವರನ್ನು 'ಪಾದಮೂಲ ಪರಿವಾರ' ಅಥವಾ 'ಪಾವುಳ' ಎಂದು ಭಾವಿಸಬಹುದಾಗಿದೆ. ಪಾದಮೂಲ ಪರಿವಾರದವರ ವೃತ್ತಿಯು ವಂಶಪಾರಂಪರ್ಯವಾಗಿ ಮುಂದುವರಿಯುತ್ತಿತ್ತೆಂದು ಊಹಿಸಬಹುದಾದರೂ, ಅವರ ಕರ್ತವ್ಯಗಳೇನು? ಎಂದು ಖಚಿತವಾಗಿ ತಿಳಿಯಲು ಶಾಸನಗಳು ಸಹಕಾರಿಯಾಗುವುದಿಲ್ಲ. ಶಾಸನಗಳಿಂದ ನಮಗೆ ತಿಳಿದಿರುವಂತೆ ಪಾದ ಮೂಲ ಅಥವಾ ಪಾವುಳ ಪರಿವಾರದವರಿಗೆ ದೇವಸ್ಥಾನಗಳಲ್ಲಿ ವಿಶೇಷ ಮನ್ನಣೆಯಿತ್ತು ಮತ್ತು ಅವರನ್ನು ತೃಪ್ತಿಯಿಂದಿರಿಸಲು ಎಲ್ಲಾ ಅನುಕೂಲಗಳನ್ನು ಕಲ್ಪಿಸಲಾಗುತ್ತಿತ್ತು.

ದೇವಾಲಯದ ಇತರ ಸೇವಾವರ್ಗ:

ಪೂಜಾರಿ, ಪಾವುಳ, ಪಾತ್ರ ಇವರಷ್ಟೇ ಅಲ್ಲದೆ ದೇವಾಲಯದಲ್ಲಿ ಕಂಡು ಬರುವ ಇನ್ನೂ ಅನೇಕ ಸೇವಾವರ್ಗದವರು ಮೂರನೆಯ ಸೋಮೇಶ್ವರನ ಕಾಲದ ಶಾಸನಗಳಲ್ಲಿ ಕಂಡುಬರುತ್ತಾರೆ. ಅವರಲ್ಲಿ ಪ್ರಮುಖರಾದವರು ಮಾಲೆಗಾರ,[೫೭] ಬಾರಿಕ,[೫೮] ಹಾಡುವವರು,[೫೯] ಹರೆಕಾರರು,[೬೦] ಬಾಣಸಿಗ,[೬೧] ಹೂದೋಟ (ಸಾಕುವಾಳು) ಕಾಯುವವ,[೬೨] ಹಲೆಚಾರಕ[೬೩] ಇತ್ಯಾದಿ ಆಯಾ ಹೆಸರುಗಳೇ ವೃತ್ತಿಯನ್ನು ಸೂಚಿಸುವದರಿಂದ ವಿವರಣೆಯು ಅವಶ್ಯಕವಾಗುವುದಿಲ್ಲ. ಈ ಸೇವಾವರ್ಗ ದೇವಾಲಯಕ್ಕೆ ಮಾತ್ರ ಸೇರಿದ್ದು ಮಠಕ್ಕೂ ಇವರಿಗೂ ಯಾವ ಸಂಬಂಧವೂ ಇರಲಿಲ್ಲ. ಮಠ, ಸತ್ರ, ಶಾಲೆಗಳಲ್ಲಿ ಅಲ್ಲಿನ ವ್ಯವಸ್ಥೆಗೆ ತಕ್ಕಂತೆ ಪ್ರತ್ಯೇಕ ಸೇವಾವರ್ಗದವರು ಇರುತ್ತಿದ್ದರು.[೬೪]


ದೇವಾಲಯದ ಜೀರ್ಣೋದ್ಧಾರ:

ದೇವಾಲಯದ ಪೂಜೆ, ಪುನಸ್ಕಾರ, ವಿದ್ಯಾಪ್ರಸಾರ, ಸತ್ರ ಇತ್ಯಾದಿ ಖರ್ಚುಗಳ ಜೊತೆಗೆ ದೇವಾಲಯವನ್ನು ಸುಸ್ಥಿತಿಯಲ್ಲಿ ಕಾಪಾಡಿಕೊಂಡು ಬರಲು ಅದರ ಜೀರ್ಣೋದ್ಧಾರಕ್ಕಾಗಿಯೂ ಹಣ ಬೇಕಾಗುತ್ತಿತ್ತು. ಹೀಗಾಗಿ ದಾನ ನೀಡುವವರು ಇಂತಿಂಥ ಕೆಲಸಕ್ಕೆ ಇಷ್ಟಿಷ್ಟೆಂದು ವಿವರವಾಗಿ ನಿಗದಿಪಡಿಸಿ ದಾನವನ್ನು ನೀಡುತ್ತಿದ್ದರು. ಅದರಲ್ಲಿ ದೇವಾಲಯದ ಜೀರ್ಣೋದ್ಧಾರವೂ ಒಂದಾಗಿತ್ತು ಎಂದು ಹೇಳಬಹುದು. ಏರಿಗೆಯ ಕೇಶವ ದೇವಾಲಯದ ಮಾಟ , ಕೂಟ, ಸುಣ್ಣ, ಸೊಗತೆಗೆ ಕ್ರಿ.ಶ. ೧೧೩೫ರ[೬೫] ಮತ್ತು ಕ್ರಿ.ಶ೧೧೩೮ರ[೬೬] ಏರಿಗೆಯ ಶಾಸನಗಳಲ್ಲಿ ದಾನನೀಡಿರುವುದನ್ನು ತಿಳಿಸುತ್ತವೆ. ಅಲ್ಲದೆ ನವಿಲೆ,[೬೭] ನಾರಂಗವಾಡಿ,[೬೮] ಕಲ್ಲೂರು,[೬೯] ತಿಳವಳ್ಳಿ,[೭೦] ಸಿಂಧವಾಳ,[೭೧] ಹಿರೇರಾಯಕುಂದಿ,[೭೨] ಕರಾಡಖೇಡ,[೭೩] ಪೆದ್ದತುಂಬಳಂ,[೭೪] ರಾಮದುರ್ಗ,[೭೫] ಮುಕ್ಕುಂದಿ,[೭೬] ನಾಡ,[೭೭] ಸಿರಿವಾಳ,[೭೮] ಮತ್ತು ಸೇಡಂ[೭೯] ಶಾಸನಗಳು ದೇವಾಲಯದ ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆ ದಾನ ನೀಡಿರುವದನ್ನು ತಿಳಿಸುತ್ತವೆ.

ಪ್ರಮುಖ ದೇವಾಲಯಗಳು :

ಕಲಿದೇವಸ್ವಾಮಿ ದೇವಾಲಯ, ಕಾಮಧೇನು :

ಧಾರವಾಡ ಜಿಲ್ಲೆಯ ಕಲಘಟಗಿ ತಾಲೂಕಿನ ಕಾಮಧೇನು ಗ್ರಾಮವು ಹುಬ್ಬಳ್ಳಿಯಿಂದ ಸುಮಾರು ೩೦ ಕಿ.ಮೀ ಅಂತರದಲ್ಲಿದೆ. ಕಲಿದೇವಸ್ವಾಮಿ ದೇವಾಲಯವೆಂದು ಕರೆಯಲ್ಪಡುವ ಈ ಶಾಸನೋಕ್ತ ದೇವಾಲಯವು ಗ್ರಾಮದ ಹೊರಗೆ ಹೊಲದಲ್ಲಿ ಕಂಡುಬರುತ್ತಿದ್ದು ಸ್ಥಳೀಯರು ಕಲ್ಮೇಶ್ವರ ಎಂಬ ಹೆಸರಿನಿಂದ ಕರೆಯುತ್ತಾರೆ.



ಕಲಿದೇವಸ್ವಾಮಿ ದೇವಾಲಯದ ತಲವಿನ್ಯಾಸ, ಕಾಮಧೇನು

ಗರ್ಭಗೃಹ :

ಈ ದೇವಾಲಯವು ಚೌಕಾಕಾರದ ಗರ್ಭಗೃಹ ಹೊಂದಿದ್ದು ಮಧ್ಯದಲ್ಲಿ ಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ಛತ್ತಿನಲ್ಲಿ ಅಷ್ಟಕೋನದ ನಡುವೆ ಪುಷ್ಪದ ಅಲಂಕರಣೆಯನ್ನು ಕಾಣುತ್ತೇವೆ. ದ್ವಾರವು ಪಂಚಶಾಖೆಗಳನ್ನು ಹೊಂದಿದ್ದು ನಿರಾಲಂಕಾರವಾಗಿದೆ. ಲಲಾಟ ಬಿಂಬದಲ್ಲಿ ಯಾವುದೇ ಶಿಲ್ಪ ಕಂಡುಬರುವುದಿಲ್ಲ.

ಅಂತರಾಳ :

ಗರ್ಭಗೃಹಕ್ಕೆ ಹೊಂದಿಕೊಂಡಂತೆ ಚೌಕಾಕಾರದ ಅಂತರಾಳವಿದೆ. ಛತ್ತಿನಲ್ಲಿ ಅಷ್ಟಕೋನದ ನಡುವೆ ಪದ್ಮದ ಅಲಂಕರಣೆ ಇದೆ. ದ್ವಾರವು ನಿರಾಲಂಕಾರವಾಗಿದ್ದು ಲಲಾಟಬಿಂಬದಲ್ಲಿ ಯಾವುದೇ ಶಿಲ್ಪ ಕಂಡುಬರುವುದಿಲ್ಲ.

ನವರಂಗ :

ಅಂತರಾಳಕ್ಕೆ ಹೊಂದಿಕೊಂಡಂತೆ ಆಯತಾಕಾರದ ನವರಂಗವಿದೆ. ಛತ್ತಿನಲ್ಲಿ ಯಾವುದೇ ಅಲಂಕರಣೆ ಕಂಡುಬರುವುದಿಲ್ಲ. ಇಲ್ಲಿ ನಾಲ್ಕು ಕೋಷ್ಟಗಳಿದ್ದು ಅಲ್ಲಿ ಸಪ್ತಮಾತೃಕೆ, ಗಣೇಶ, ಮಹಿಷಾಸುರಮರ್ಧಿನಿ, ವಿಷ್ಣುವಿನ ಶಿಲ್ಪಗಳಿವೆ. ದ್ವಾರವು ತ್ರಿಶಾಖಾ ರೀತಿಯದಾಗಿದ್ದು ನಿರಾಲಂಕಾರವಾಗಿವೆ. ದ್ವಾರಗಳ ಇಕ್ಕೆಲಗಳಲ್ಲಿ ಅರ್ಧಕಂಬಗಳ ನಡುವೆ ಮೂರು ಅಲಂಕಾರಿಕ ಜಾಲಂದ್ರಗಳಿವೆ. ದ್ವಾರದ ಮೇಲ್ಭಾಗದಲ್ಲಿ ಮಕರ ತೋರಣದ ಅಲಂಕರಣೆ ಇದೆ. ತೋರಣದಲ್ಲಿ ಬ್ರಹ್ಮ, ಶಿವ, ವಿಷ್ಣುವಿನ ಶಿಲ್ಪಗಳಿವೆ. ಬದಿಯಲ್ಲಿ ಗಣೇಶ ಮತ್ತು ನವಿಲಿನ ಮೇಲೆ ಕುಳಿತ ಕಾರ್ತಿಕೇಯರಿದ್ದಾರೆ. ಇಕ್ಕೆಲಗಳಲ್ಲಿರುವ ಮಕರಗಳ ಮೇಲೆ ಮನುಷ್ಯರು ಕುಳಿತಿದ್ದಾರೆ. ಬಾಲದ ಅಲಂಕರಣೆ ಮನಮೋಹಕವಾಗಿದೆ. ಎಡಭಾಗದ ಜಾಲಂದ್ರಗಳ ನಡುವಿನ ಅರೆಗಂಬದಲ್ಲಿ ಶಾಸನವನ್ನು ಕಾಣುತ್ತೇವೆ. ದ್ವಾರದ ಇಕ್ಕೆಲಗಳಲ್ಲಿ ತೋರಣಗಳ ಕೆಳಗೆ ತ್ರಿಭಂಗಿಯಲ್ಲಿ ನಿಂತಿರುವ ದ್ವಾರಪಾಲಕರ ಚಿತ್ರಗಳಿವೆ.

ಸಭಾಮಂಟಪ :

ನವರಂಗಕ್ಕೆ ಹೊಂದಿಕೊಂಡಂತೆ ಸಭಾಮಂಟಪವಿದೆ. ಮಧ್ಯದಲ್ಲಿ ನಾಟ್ಯವೇದಿಕೆ ಇದೆ. ಅಲ್ಲಿ ನಂದಿಯ ಶಿಲ್ಪವಿದೆ. ಮಧ್ಯದಲ್ಲಿ ನಾಲ್ಕು ಸ್ತಂಬಗಳಿದ್ದು ಸುತ್ತಲೂ ಕಕ್ಷಾಸನವಿದೆ. ಕಕ್ಷಾಸನದ ಮೇಲೆ ಚಿಕ್ಕ ಚಿಕ್ಕ ಕಂಬಗಳನ್ನು ಕಾಣುತ್ತೇವೆ. ಕಕ್ಷಾಸನದ ಹಿಂಭಾಗದಲ್ಲಿ ಅರ್ಧಕಂಬಗಳ ಮೇಲೆ ರೇಖಾನಾಗರ ಶೈಲಿಯ ಶಿಖರದ ಅಲಂಕರಣೆ ಇದ್ದು ಮಧ್ಯದಲ್ಲಿ ವ್ಯಾಳಗಳನ್ನು ಕೆತ್ತಲಾಗಿದೆ. ಛತ್ತಿನ ಆರು ಅಂಕಣದಲ್ಲಿ ಪುಷ್ಪದ ಅಲಂಕರಣೆ ಇದೆ. ಉಳಿದ ಅಂಕಣಗಳ ಛತ್ತನ್ನು ನವೀಕರಿಸಲಾಗಿದೆ.

ಕಂಬಗಳು :

ದೇವಾಲಯದ ಕಂಬಗಳು ಚೌಕ, ಪೀಠ, ಘನಭಾಗ, ವೃತ್ತಾಕಾರದ ಪಟ್ಟಿಗಳು, ಚೌಕ ಘನಭಾಗ, ವೃತ್ತಾಕಾರದ ಚಪ್ಪಟೆಯಾದ ಭಾಗ, ಅದರ ಮೇಲೆ ಚೌಕ ಫಲಕ, ಮೇಲೆ ಸುರಳಿಯಾಕಾರದ ಬೋಧುಗೆಯನ್ನು ಕಾಣುತ್ತೇವೆ. ವೃತ್ತಾಕಾರದ ಪಟ್ಟಿಕೆಗಳಲ್ಲಿ ವಜ್ರಾಕಾರದ ಮುತ್ತಿನ ಹಾರದ ಅಲಂಕರಣೆಯನ್ನು ಕಾಣುತ್ತೇವೆ.

ಭಿತ್ತಿ :

ದೇವಾಲಯದ ಹೊರಭಿತ್ತಿಯು ಹಿಂಬಣಿ ಮುಂಬಣಿಗಳಿಂದ ಕೂಡಿದೆ. ಗರ್ಭಗೃಹದ ಭಿತ್ತಿಯಲ್ಲಿ ಮೂರು ದೇವಕೋಷ್ಠಗಳಿವೆ. ಪ್ರಸ್ತುತ ಅವುಗಳಲ್ಲಿ ಯಾವುದೇ ಶಿಲ್ಪ ಕಂಡುಬರುವುದಿಲ್ಲ. ಕೋಷ್ಠಗಳ ಮೇಲೆ ಮತ್ತೆ ಎರಡು ಚಿಕ್ಕ ಕಂಬಗಳ ಮೇಲೆ ದ್ರಾವಿಡ ಮಾದರಿಯ ಶಿಖರದ ಪ್ರತಿಕೃತಿಗಳಿವೆ. ನಿಯಮಿತ ಅಂತರದಲ್ಲಿ ಎದ್ದು ಕಾಣುವ ಕಚ್ಚುಗಳುಳ್ಳ ಅರ್ಧಕಂಬ, ಇಂತಹ ಅರ್ಧಕಂಬಗಳ ನಡುವೆ ಅನೇಕ ಚಿಕ್ಕ ಚಿಕ್ಕ ಅರ್ಧಕಂಬಗಳ ಮೇಲೆ ದ್ರಾವಿಡ ಮಾದರಿಯ ಶಿಖರದ ಪ್ರತಿಕೃತಿ ಮತ್ತು ಎರಡು ಅರ್ಧಕಂಬಗಳ ಮೇಲೆ ದ್ರಾವಿಡ ಮಾದರಿಯ ಶಿಖರದ ಪ್ರತಿಕೃತಿಗಳನ್ನು (ಪಂಜರ) ಕೆತ್ತಲಾಗಿದೆ.

ಅಧಿಷ್ಠಾನ :

ಗರ್ಭಗೃಹದ ಅಧಿಷ್ಠಾನವು ಉಪಾನ, ಜಗತಿ, ಕಂಠ, ಶಿಲುಬೆಯಾಕಾರದ ಅಲಂಕರಣೆ ಮತ್ತು ಕಪೋತ ಭಾಗಗಳಿಂದ ಕೂಡಿದೆ. ಮುಖಮಂಟಪದ ಅಧಿಷ್ಠಾನವು ಉಪಾನ ಜಗತಿ, ಗಳ ಮತ್ತು ಕಪೋತ ಭಾಗಗಳನ್ನು ಹೊಂದಿದ್ದು, ಗಳಭಾಗದಲ್ಲಿ ವಜ್ರಾಕಾರದ ಅಲಂಕರಣೆಯಿದೆ.

ಶಿಖರ :

ದೇವಾಲಯದ ಶಿಖರ ಭಾಗವು ಸಂಪೂರ್ಣ ಬಿದ್ದು ಹೋಗಿದ್ದು, ಪ್ರಸ್ತುತ ಗ್ರಾಮಸ್ಥರು ಹೊಸದಾದ ಶಿಖರವನ್ನು ನಿರ್ಮಿಸಿದ್ದಾರೆ.

ಮೂಲಸ್ಥಾನ ದೇವಾಲಯ, ಸಿದ್ದಾಪುರ :

ಧಾರವಾಡದಿಂದ ಸುಮಾರು ೩೦ ಕಿ.ಮೀ ಅಂತರದಲ್ಲಿರುವ ಸಿದ್ದಾಪುರದಲ್ಲಿ ಮೂಲಸ್ಥಾನ ದೇವಾಲಯವು ಕಂಡುಬರುತ್ತದೆ. ಶಾಸನದಲ್ಲಿ ಉಲ್ಲೇಖಿಸಿರುವಂತೆ ಈ ದೇವಾಲಯದ ಪ್ರಾಚೀನ ಹೆಸರು ಮೂಲಸ್ಥಾನ ದೇವರು. ಸ್ಥಳೀಯರು ಕಲ್ಮೇಶ್ವರ ಎಂಬ ಹೆಸರಿನಿಂದ ಕರೆಯುತ್ತಾರೆ.

ಗರ್ಭಗೃಹ :

ಈ ದೇವಾಲಯವು ಚೌಕಾಕಾರದ ಗರ್ಭಗೃಹ ಹೊಂದಿದ್ದು ಮಧ್ಯದಲ್ಲಿ ಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ಛತ್ತಿನಲ್ಲಿ ಅಷ್ಟಕೋನದ ನಡುವೆ ಪುಷ್ಪದ ಅಲಂಕರಣೆ ಇದೆ. ದ್ವಾರವು ಪಂಚಶಾಖೆಗಳಿಂದ ಕೂಡಿದ್ದು, ನಿರಾಲಂಕಾರವಾಗಿದೆ. ಲಲಾಟಬಿಂಬದಲ್ಲಿ ಯಾವುದೇ ಶಿಲ್ಪ ಕಂಡುಬರುವುದಿಲ್ಲ. ಉದುಂಬರಕ್ಕೆ ಹೊಂದಿಕೊಂಡಂತೆ ಚಂದ್ರಶಿಲೆಯ ಅಲಂಕರಣೆ ಇದೆ.

ಅಂತರಾಳ :

ಗರ್ಭಗೃಹಕ್ಕೆ ಹೊಂದಿಕೊಂಡಂತೆ ತೆರೆದ ಅಂತರಾಳವಿದ್ದು ಅಲ್ಲಿ ಒಂದು ಸ್ವತಂತ್ರ ಕಂಬವನ್ನು ಕಾಣುತ್ತೇವೆ ಮತ್ತೊಂದು ಕಂಬವು ಪ್ರಸ್ತುತ ಕಂಡುಬರುವುದಿಲ್ಲ.

ಮುಖಮಂಟಪ :

ವಿಶಾಲವಾದ ಮುಖಮಂಟಪವನ್ನು ಹೊಂದಿದ್ದು, ಮೇಲ್ಭಾಗವು ಸಂಪೂರ್ಣ ಬಿದ್ದುಹೋಗಿದೆ. ಇದರ ಮುಂಭಾಗದಲ್ಲಿ ಒಂದು ತೃಟಿತ ಶಾಸನವಿದೆ.

ಈ ದೇವಾಲಯದ ಅಧಿಷ್ಠಾನವು ಮಣ್ಣಿನಲ್ಲಿ ಹೂತುಹೋಗಿದ್ದು, ಗೋಡೆಗಳು ಸಮಪಾತಳಿಯಲ್ಲಿವೆ. ಶಿಖರದ ಭಾಗವು ಸಂಪೂರ್ಣ ಬಿದ್ದುಹೋಗಿದೆ.

ಕಲಿದೇವ ಸ್ವಾಮಿ ದೇವಾಲಯ, ಅಸುಂಡಿ

ಹಾವೇರಿ ಜಿಲ್ಲೆಯ ರಾಣೆಬೆನ್ನೂರು ತಾಲೂಕಿನಿಂದ ಸುಮಾರು ೮ ಕಿ.ಮೀ. ಅಂತರದಲ್ಲಿರುವ ಅಸುಂಡಿಯಲ್ಲಿ ಕಲಿದೇವ ಸ್ವಾಮಿ ದೇವಾಲಯ ಕಂಡುಬರುತ್ತದೆ. ಈ ದೇವಾಲಯದ ಪ್ರಾಚೀನ ಹೆಸರು ಕಲಿದೇವಸ್ವಾಮಿ. ಸ್ಥಳೀಯರು ಕಲ್ಲಪ್ಪ ಎಂಬ ಹೆಸರಿನಿಂದ ಕರೆಯುತ್ತಾರೆ. ದೇವಾಲಯದ ಹೊರಗಿರುವ ಶಾಸನಗಳು ಕಲಿದೇವ ಸ್ವಾಮಿ ದೇವಾಲಯಕ್ಕೆ ನೀಡಿದ ಭೂದಾನ ಮತ್ತು ಸುಂಕದಾನಗಳ ವಿವರಗಳನ್ನು ಉಲ್ಲೇಖಿಸುತ್ತದೆ.

ಇಲ್ಲಿ ಎರಡು ಸಮಾನಂತರ ದೇವಾಲಯಗಳಿದ್ದು, ಅವುಗಳ ಮೇಲೆ ಭಾರಿ ಪ್ರಮಾಣದಲ್ಲಿ ಮಣ್ಣು ಬಿದ್ದಿರುವುದರಿಂದ ದೇವಾಲಯದ ಅಧಿಷ್ಠಾನ, ಹೊರಭಿತ್ತಿ ಮತ್ತು ಶಿಖರಗಳ ಭಾಗವು ಕಂಡುಬರುವುದಿಲ್ಲ. ಬಹುಶಃ ಮುಸ್ಲಿಂರ ದಾಳಿಯ ಅಂಜಿಕೆಯಿಂದಾಗಿ ಈ ದೇವಾಲಯದ ರಕ್ಷಣೆಗೋಸ್ಕರ ಮಲೆ ಮಣ್ಣನ್ನು ಮುಚ್ಚಿರಬಹುದುದೆಂದು ಊಹಿಸಬಹುದು.

ದಕ್ಷಿಣ ಭಾಗದ ದೇವಾಲಯವು ಗರ್ಭಗೃಹ, ಅಂತರಾಳ ಮತ್ತು ನವರಂಗಗಳನ್ನು ಹೊಂದಿದೆ. ಗರ್ಭಗೃಹ ಚಿಕ್ಕದಾಗಿದ್ದು ಮಧ್ಯದಲ್ಲಿ ಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ಭಿತ್ತಿನಲ್ಲಿ ಯಾವುದೇ ಅಲಂಕರಣೆ ಇಲ್ಲ. ದ್ವಾರಗಳು ನಿರಾಲಂಕಾರವಾಗಿದ್ದು ಪಂಚಶಾಖೆಗಳಿಂದ ಕೂಡಿವೆ.

ಅಂತರಾಳ :

ಗರ್ಭಗೃಹಕ್ಕೆ ಹೊಂದಿಕೊಂಡಂತೆ ತೆರೆದ ಅಂತರಾಳವಿದೆ.


ನವರಂಗ:

ನವರಂಗದಲ್ಲಿ ನಾಲ್ಕು ಕಂಭಗಳಿದ್ದು ಮಧ್ಯದಲ್ಲಿ ನಂದಿಯ ಶಿಲ್ಪ ಕಂಡುಬರುತ್ತದೆ. ಇಲ್ಲಿ ಎರಡು ಕೋಷ್ಠಗಳಿದ್ದು, ಇವುಗಳು ಕ್ರಮವಾಗಿ ಸಪ್ತಮಾತೃಕೆ ಮತ್ತು ಭೈರವ ಶಿಲ್ಪಗಳಿವೆ. ನವರಂಗದ ದ್ವಾರವು ಪಂಚಶಾಖೆಗಳಿಂದ ಕೂಡಿದ್ದು ಕೆಳಭಾಗದಲ್ಲಿ ದ್ವಾರಪಾಲಕರ ಶಿಲ್ಪಗಳಿವೆ. ಲಲಾಟಬಿಂಬದಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ.

ಉತ್ತರ ಭಾಗದ ದೇವಾಲಯವು ಗರ್ಭಗೃಹ ಅಂತರಾಳವನ್ನು ಹೊಂದಿದೆ ಗರ್ಭಗೃಹದಲ್ಲಿ ಲಿಂಗುವಿದ್ದು ಭಿತ್ತಿನಲ್ಲಿ ಯಾವುದೇ ಅಲಂಕರಣೆ ಕಂಡು ಬರುವುದಿಲ್ಲ. ಇದರ ದ್ವಾರಕ್ಕೆ ಹೊಂದಿಕೊಂಡಂತೆ ಚಂದ್ರ ಶಿಲೆಯ ಅಲಂಕರಣೆ ಇದೆ. ಗರ್ಭಗೃಹಕ್ಕೆ ಹೊಂದಿಕೊಂಡಂತೆ ಅಂತರಾಳವಿದ್ದು ಅಂತರಾಳದಲ್ಲಿ ನಂದಿಯ ಶಿಲ್ಪವಿದೆ.

ಶಂಕರಲಿಂಗ ದೇವಾಲಯ, ನರಗುಂದ

ಧಾರವಾಡ ಜಿಲ್ಲೆಯ ನರಗುಂದ ತಾಲೂಕಿನ ಊರ ಮಧ್ಯ ಶಂಕರ ದೇವಾಲಯ ಕಂಡುಬರುತ್ತದೆ. ಈ ದೇವಾಲಯದ ನವರಂಗದಲ್ಲಿ ಕ್ರಿ.ಶ. ೧೧೩೯ ರ ಮೂರನೆಯ ಸೋಮೇಶ್ವರನ ಮತ್ತು ಕ್ರಿ.ಶ. ೧೨ನೇ ಶತಮಾನದ ತ್ರೈಲೋಕ್ಯ ಮಲ್ಲದೇವನ ಶಾಸನ ಕಂಡುಬರುತ್ತದೆ.



ಶಂಕರಲಿಂಗ ದೇವಾಲಯದ ತಲವಿನ್ಯಾಸ, ನರಗುಂದ

ಗರ್ಭಗೃಹ:

ಈ ದೇವಾಲಯದ ಗರ್ಭಗೃಹವು ಚೌಕಾಕಾರವಾಗಿದ್ದು ಮಧ್ಯದಲ್ಲಿ ಲಿಂಗವಿದೆ. ಛತ್ತಿನಲ್ಲಿ ಅಷ್ಟಕೋನದ ನಡುವೆ ಪದ್ಮದ ಅಲಂಕರಣೆ ಇದೆ. ದ್ವಾರವು ನಿರಾಲಂಕಾರವಾಗಿದ್ದು ಲಲಾಟಬಿಂಬದ ಯಾವುದೇ ಶಿಲ್ಪ ಕಂಡುಬರುವುದಿಲ್ಲ.

ನವರಂಗ:

ನವರಂಗ ಚೌಕಾಕಾರವಾಗಿದ್ದು ಮಧ್ಯದಲ್ಲಿ ನಾಲ್ಕು ಕಂಬಗಳಿವೆ. ಕಂಬಗಳು ಪೀಠ, ಚೌಕ ಘನಭಾಗ, ಸಾದಾ ಬೋದುಗೆಯನ್ನು ಹೊಂದಿವೆ. ಛತ್ತಿನಲ್ಲಿ ಅಷ್ಟಕೋನದ ನಡುವೆ ಪದ್ಮದ ಅಲಂಕರಣೆಯಿದೆ. ಎಡಭಾಗದ ಗೋಡೆಯಲ್ಲಿ ಮತ್ತು ಕಂಬದ ಮೇಲೆ ಶಾಸನಗಳಿವೆ. ನವರಂಗದ ದಕ್ಷಿಣದಿಕ್ಕಿಗೆ ಒಂದು ಚಿಕ್ಕ ಗರ್ಭಗೃಹವಿದ್ದು ಅಲ್ಲಿ ಪಾರ್ವತಿಯ ಶಿಲ್ಪವನ್ನು ಇರಿಸಲಾಗಿದೆ. ಉತ್ತರ ದಿಕ್ಕಿನ ದ್ವಾರವು ಕಿರಿದಾಗಿದ್ದು ದ್ವಾರದ ಮೇಲ್ಭಾಗದಲ್ಲಿ ಎರಡು ಆನೆಗಳ ನಡುವೆ ವ್ಯಕ್ತಿಯೊಬ್ಬ ಕೈಮುಗಿದು ಕುಳಿತಿರುವ ಶಿಲ್ಪವಿದೆ. ದ್ವಾರದ ಮುಂಭಾಗದಲ್ಲಿ ಚಂದ್ರಶಿಲೆಯ ಅಲಂಕರಣೆಯಿದೆ.

ಮುಖಮಂಟಪ:

ಮುಖಮಂಟಪವು ವಿಶಾಲವಾಗಿದ್ದು ಕಟ್ಟಿಗೆಯಿಂದ ಇತ್ತೀಚೆಗೆ ನಿರ್ಮಿಸಲಾಗಿದೆ.

ಈ ದೇವಾಲಯದ ಅಧಿಷ್ಠಾನವು ನೆಲದಲ್ಲಿ ಹೂತುಹೋಗಿದ್ದು, ಗೋಡೆಗಳು ಸಮಪಾತಳಿಯಲ್ಲಿದ್ದು ಶಿಖರವನ್ನು ಇತ್ತೀಚೆಗೆ ಹೊಸದಾಗಿ ನಿರ್ಮಿಸಲಾಗಿದೆ.

ಸೋಮನಾಥದೇವಾಲಯ, ಲಕ್ಷ್ಮೇಶ್ವರ :


ಜಿಲ್ಲಾ ಕೇಂದ್ರವಾಗಿರುವ ಗದಗನಿಂದ ೪೪ ಕಿ.ಮೀ. ದೂರದಲ್ಲಿರುವ ಲಕ್ಷ್ಮೇಶ್ವರದ ಮಧ್ಯದಲ್ಲಿ ಪ್ರಾಚೀನ ಸೋಮನಾಥ ದೇವಾಲಯವಿದೆ.

ಗರ್ಭಗೃಹ:

ಈ ದೇವಾಲಯದ ಗರ್ಭಗೃಹವು ಚೌಕಾಕಾರವಾಗಿದ್ದು ಛತ್ತಿನಲ್ಲಿ ಅಷ್ಟಕೋನದ ನಡುವೆ ಪದ್ಮದ ಅಲಂಕರಣೆ ಇದೆ. ಮಧ್ಯದಲ್ಲಿ ನಿಂತ ನಂದಿಯ ಶಿಲ್ಪವಿದ್ದು ಮೇಲೆ ಶಿವ ಹಾಗೂ ಪಾರ್ವತಿ ಕುಳಿತಿರುವ ಶಿಲ್ಪವನ್ನು ಕಾಣುತ್ತೇವೆ. ಗೋಡೆ ಹಾಗೂ ದ್ವಾರಗಳು ಟೈಲ್ಸ್‌ನಿಂದ ಮುಚ್ಚಿದ್ದು ಲಲಾಟಬಿಂಬದಲ್ಲಿ ಮಾತ್ರ ಗಜಲಕ್ಷ್ಮಿಯ ಶಿಲ್ಪವಿದೆ.

ಅಂತರಾಳ:

ಗರ್ಭಗೃಹಕ್ಕೆ ಹೊಂದಿಕೊಂಡಂತೆ ಚೌಕಾಕಾರದ ಅಂತರಾಳವಿದ್ದು, ಛತ್ತಿನಲ್ಲಿ ಪುಷ್ಪದ ಅಲಂಕರಣೆಯನ್ನು ಕಾಣುತ್ತೇವೆ ದ್ವಾರಶಾಖೆ ಮತ್ತು ಅರ್ಧಕಂಭಗಳ ಮಧ್ಯದಲ್ಲಿ ಅಲಂಕಾರಿಕ ಜಾಲಂದ್ರಗಳ ಕೆತ್ತನೆಯಿದೆ ಲಲಾಟಬಿಂಬದಲ್ಲಿ ಯಾವುದೇ ಶಿಲ್ಪ ಕಂಡುಬರುವುದಿಲ್ಲ.



ಸೋಮನಾಥ ದೇವಾಲಯದ ತಲವಿನ್ಯಾಸ, ಲಕ್ಷ್ಮೇಶ್ವರ

ನವರಂಗ:

ನವರಂಗವು ಚೌಕಾಕಾರವಾಗಿದ್ದು ಅದನ್ನು ಮೂರುಕಡೆಗಳಿಂದಲೂ ಪ್ರವೇಶಿಸಬಹುದು. ಮಧ್ಯದಲ್ಲಿ ನಾಲ್ಕು ಸ್ಥಂಭಗಳಿದ್ದು, ಮಧ್ಯದ ಭಾಗವು ಸ್ವಲ್ಪ ಎತ್ತರವಾಗಿದೆ. ಛತ್ತಿನಲ್ಲಿ ಅಷ್ಟಕೋನದ ನಡುವೆ ಸುಂದರವಾದ ಪದ್ಮದ ಅಲಂಕರಣೆ ಇದೆ. ನವರಂಗವು ಉತ್ತರ ಹಾಗೂ ದಕ್ಷಿಣ ದಿಕ್ಕಿನಲ್ಲಿ ಮುಖಮಂಟಪವನ್ನು ಹೊಂದಿದ್ದು ಉತ್ತರ ದಿಕ್ಕಿನ ದ್ವಾರವು ಸಪ್ತ ಶಖೆಗಳಿಂದ ಕೂಡಿದ್ದು, ಪೇದ್ಯ ಭಾಗದಲ್ಲಿ ರತಿ-ಮನ್ಮಥರ ಶಿಲ್ಪಗಳಿವೆ. ಲಲಾಟಬಿಂಬದಲ್ಲಿ ಯಾವುದೇ ಶಿಲ್ಪ ಕಂಡುಬರುವುದಿಲ್ಲ. ದಕ್ಷಿಣ ಭಾಗದ ದ್ವಾರವು ಪಂಚ ಶಾಖೆಗಳಿಂದ ಕೂಡಿದ್ದು, ಲತಾಸುರುಳಿ ಮತ್ತು ವಿವಿಧ ವಾದ್ಯಗಳನ್ನು ನುಡಿಸುತ್ತಿರುವ ಮುಂತಾದ ಅಲಂಕರಣೆಯನ್ನು ಕಾಣುತ್ತೇವೆ. ದ್ವಾರದ ಮೇಲ್ಭಾಗದ ಪಟ್ಟಿಕೆಯಲ್ಲಿ ಗಜಲಕ್ಷ್ಮೀಯ ಶಿಲ್ಪವಿದೆ. ದಕ್ಷಿಣ ಭಾಗದ ಕಕ್ಷಾಸನದ ಹಿಂಭಾಗವು ಅಲಂಕರಣೆಯಿಂದ ಕೂಡಿದ್ದು ರೇಖಾನಗರ ಶೈಲಿಯ ಶಿಖರದ ಪ್ರತಿಕೃತಿಗಳನ್ನು ಮತ್ತು ಮೇಲ್ಭಾಗದಲ್ಲಿ ಎರಡು ಅರ್ಧಕಂಭಗಳ ನಡುವೆ ವಾದ್ಯ ನುಡಿಸುತ್ತಿರುವ ಮತ್ತು ನರ್ತಿಸುತ್ತಿರುವ ಶಿಲ್ಪಗಳನ್ನು ಕೆತ್ತಲಾಗಿದೆ. ಉತ್ತರದ ದಿಕ್ಕಿನಲ್ಲಿರುವ ಕಕ್ಷಾಸನದ ಹಿಂಭಾಗ ಬಿದ್ದು ಹೋಗಿದ್ದು ಕಕ್ಷಾಸನದ ಮೇಲೆ ನಾಲ್ಕು ಅಲಂಕಾರಿಕ ಕಂಬಗಳನ್ನು ಕಾಣುತ್ತೇವೆ.

ಸಭಾ ಮಂಟಪ:

ನವರಂಗದ ಪೂರ್ವದಿಕ್ಕಿನ ಮುಖಮಂಟಪಕ್ಕೆ ಹೊಂದಿಕೊಂಡಂತೆ ವಿಶಾಲವಾದ ಗೂಢಮಂಟಪವಿದೆ. ಇದರ ಛತ್ತು ಸಂಪೂರ್ಣವಾಗಿ ಪುಷ್ಪದ ಅಲಂಕರಣೆಯಿಂದ ಕೂಡಿದ್ದು ಮಧ್ಯದ ಅಂಕಣದಲ್ಲಿರುವ ಛತ್ತಿನಲ್ಲಿ ಮಾತ್ರ ಆಳವಾದ ಪುಷ್ಪದ ಅಲಂಕರಣೆಯನ್ನು ಕಾಣುತ್ತೇವೆ. ಇಲ್ಲಿ ಮೂರು ರೀತಿಯ ಕಂಬಗಳಿವೆ. ಈ ಸಭಾಮಂಟಪವನ್ನು ನಾಲ್ಕು ದಿಕ್ಕುಗಳಿಂದಲೂ ಪ್ರವೇಶಿಸಬಹುದು ಪೂರ್ವದ ದ್ವಾರವು ಮೂರು ಪಟ್ಟಿಕೆಗಳನ್ನು ಒಳಗೊಂಡಿದ್ದು ಇಕ್ಕೆಲಗಳಲ್ಲಿ ಸುಂದರವಾದ ಜಾಲಂದ್ರದ ಅಲಂಕರಣೆ ಇದೆ. ದಕ್ಷಿಣದ ದ್ವಾರವು ಪಂಚಶಾಖೆಗಳಿಂದ ಕೂಡಿದೆ. ಲಲಾಟಬಿಂಬದಲ್ಲಿ ಯಾವುದೇ ಶಿಲ್ಪ ಕಂಡು ಬರುವುದಿಲ್ಲ. ಉತ್ತರದ ದ್ವಾರವು ತ್ರಿಶಾಖಾ ರೀತಿಯದಾಗಿದ್ದು, ಲತಾಸುರುಳಿಯ ಅಲಂಕಾರದಿಂದ ಕೂಡಿದೆ. ಲಲಾಟಬಿಂಬದಲ್ಲಿ ಯಾವುದೇ ಶಿಲ್ಪ ಕಂಡುಬರುವುದಿಲ್ಲ. ಅಲ್ಲದೆ ಸಭಾಮಂಟಪದ ಸುತ್ತಲಿನ ಗೋಡೆಯು ಲತಾಸುರುಳಿಯ ಅಲಂಕರಣೆಯಿಂದ ಕೂಡಿದ್ದು ಲಲಾಟಬಿಂಬದಲ್ಲಿ ಯಾವುದೇ ಶಿಲ್ಪ ಕಂಡು ಬರುವುದಿಲ್ಲ.

ಅಧಿಷ್ಠಾನ:

ಗರ್ಭಗೃಹದ ಅಧಿಷ್ಠಾನವು ಉಪಾನ, ಜಗತಿ, ಗಳ, ಕಪೋತವನ್ನು ಹೊಂದಿದ್ದರೆ, ಸಭಾ ಮಂಟಪದ ಅಧಿಷ್ಠಾನವು ಉಪಾನ, ಜಗತಿ,ಗಳ, ಪಟ್ಟಿ, ಗಳ, ಕಪೋತಭಾಗ ಹೊಂದಿದ್ದು, ಕೆಳಗಿನ ಗಳಭಾಗದಲ್ಲಿ ವಜ್ರಾಕಾರದ ಅಲಂಕರಣೆ, ಮೇಲಿನ ಗಳ ಭಾಗದಲ್ಲಿ ಅರ್ಧಕಂಭಗಳ ಅಲಂಕರಣೆ ಇದೆ.

ಭಿತ್ತಿ :


ದೇವಾಲಯದ ಗರ್ಭಗೃಹದ ಹೊರಭಿತ್ತಿಯು ಹಿಂಬಣಿ ಮತ್ತು ಮುಂಬಣಿಗಳಿಂದ ಕೂಡಿದ್ದು ಮೂರು ಆಳವಾದ ಕೋಷ್ಠಗಳನ್ನು ಹೊಂದಿದೆ. ಕೋಷ್ಠದ ಪ್ರವೇದ ದ್ವಾರದಲ್ಲಿ ಎದ್ದು ಕಾಣುವ ಅರ್ಧಕಂಭಗಳ ಪ್ರವೇಶ ದ್ವಾರದ ಎರಡೂಬದಿಗೆ ಸುಂದರವಾಗಿ ಕೆತ್ತಿದ ಹೂವಿನ ಮೊಗ್ಗೆ ಮತ್ತು ಲತಾಸುರುಳಿಗಳಿವೆ. ಕೋಷ್ಠದ ಮೇಲಿರುವ ಕಪೋತವು ವಿಶಾಲವಾಗಿದ್ದು ಬಹಳಷ್ಟು ಮುಂದೆ ಚಾಚಿದೆ. ಇದರ ಮೇಲ್ಭಾಗದಲ್ಲಿ ಕಳಶಯುಕ್ತ ಶಿಖರವಿದೆ. ಆದರೆ ಇದರ ಒಳಗೆ ಪ್ರಸ್ತುತ ಯಾವುದೇ ಶಿಲ್ಪ ಕಂಡುಬರುವುದಿಲ್ಲ. ಅಲ್ಲದೆ ಸುತ್ತಲೂ ಶಿಖರಗಳ ಅಲಂಕರಣೆ ಇದ್ದು, ಕೆಲವೊಂದು ಶಿಖರಗಳ ಕೆಳಭಾಗದಲ್ಲಿ ಮೂರ್ತಿಶಿಲ್ಪದ ಕೆತ್ತನೆಯನ್ನು ಕಾಣುತ್ತೇವೆ. ಮತ್ತು ಅನೇಕ ಮೂರ್ತಿ ಶಿಲ್ಪಗಳು ಪ್ರಸ್ತುತ ಕಂಡು ಬರುವುದಿಲ್ಲ. ಸಭಾ ಮಂಟಪದ ಗೋಡೆಗಳು ಸಮ ಪಾತಳಿಯಲ್ಲಿದ್ದು ಯಾವುದೇ ಅಲಂಕರಣೆ ಕಂಡುಬರುವುದಿಲ್ಲ. ದೇವಾಲಯದ ಸುತ್ತಲೂ ಪ್ರಾಕಾರದಲ್ಲಿ ವಿವಿಧ ದೇವತೆಗಳ ಗುಡಿಗಳನ್ನು ನಿರ್ಮಿಸಲಾಗಿದೆ.

ನಗರೇಶ್ವರ ದೇವಾಲಯ, ಬಂಕಾಪುರ :

ನಗರೇಶ್ವರ ದೇವಾಲಯವು ಶಿಗ್ಗಾಂವಿ ತಾಲೂಕಿನ ಬಂಕಾಪುರದ ಕೋಟೆಯ ಆವರಣದಲ್ಲಿದೆ. ಇದು ಹಾನಗಲ್ಲಿನ ತಾರಕೇಶ್ವರ ದೇವಾಲಯವನ್ನು ಹೋಲುತ್ತದೆ. ಬಂಕಾಪುರವು ಹಿಂದೆ ಪಾನುಂಗಲ್ಲಿನಾಡಿನ ಮುಖ್ಯ ಪಟ್ಟಣವಾಗಿತ್ತು.

ಪೂರ್ವಾಭಿಮುಖವಾಗಿರುವ ನಗರೇಶ್ವರ ದೇವಾಲಯವನ್ನು ಕುರಿತು ಇಲ್ಲಿರುವ ಕ್ರಿ.ಶ.೧೦೯೩ರ ಶಾಸನ[೮೦]ವೊಂದು ಉಲ್ಲೇಖಿಸುತ್ತದೆ. ನಗರೇಶ್ವರ ದೇವಾಲಯವು ನಖರ ಎಂದರೆ ವ್ಯಾಪಾರಸ್ಥರಿಂದ ನಿರ್ಮಾಣವಾಯಿತೆಂದು ಹೇಳಿದ್ದಾರೆ[೮೧] ಹಾನಗಲ್ಲ ಕದಂಬರ ನಾಣ್ಯದ ಮೇಲಿರುವ ನಖರ ಎಂಬ ಪದವನ್ನು ಗಮನಿಸಿದ ಎ.ವ್ಹಿ.ನರಸಿಂಹಮೂರ್ತಿಯವರು ನಖರ ಶಬ್ದವು ಬಂಕಾಪುರದ ನಗರೇಶ್ವರ ದೇವಾಲಯವನ್ನು ಪ್ರತಿಪಾದಿಸಬಹುದೆಂದು ಅಭಿಪ್ರಾಯ ಪಟ್ಟಿದ್ದಾರೆ.[೮೨]

ಈ ದೇವಾಲಯದ ಗರ್ಭಗೃಹದಲ್ಲಿ ಪ್ರಸ್ತುತ ಯಾವುದೇ ಮೂರ್ತಿಶಿಲ್ಪ ಕಂಡುಬರುವುದಿಲ್ಲವಾದರೂ ಮೊದಲು ಇದು ರಂಗನಾಥ ದೇವಾಲಯವಾಗಿದ್ದು ನಂತರ ಜೈನ ಬಸದಿಯಾಗಿದ್ದು ಮತ್ತು ಮುಸ್ಲಿಂರ ಆಳ್ವಿಕೆಯಲ್ಲಿ ಕೆಲಕಾಲ ಮಸೀದಿಯೂ ಆಗಿತ್ತೆಂದು ಹೇಳಿದ್ದಾರೆ.[೮೩] ಹೀಗೆ ಕಾಲಚಕ್ರ ಬದಲಾಗುತ್ತ ದತ್ತಿ ಹಲವು ತಿರುವುಗಳನ್ನು ಹೊಂದಿದಂತೆ ನಗರೇಶ್ವರ ದೇವಾಲಯವು ಕಾಲಕಾಲಕ್ಕೆ ಅನೇಕ ಭಿನ್ನವಾದ ರೀತಿಯಲ್ಲಿ ಬದಲಾವಣೆ ಹೊಂದುತ್ತ ಸಾಗಿತೆಂದು ಹೇಳಬಹುದು.



ನಗರೇಶ್ವರ ದೇವಾಲಯದ ತಲವಿನ್ಯಾಸ, ಬಂಕಾಪುರ

ಗರ್ಭಗೃಹ:

ಈ ದೇವಾಲಯವು ವಿಶಾಲವಾದ ಚೌಕಾಕಾರದ ಗರ್ಭಗೃಹ ಹೊಂದಿದ್ದು ಮೇಲೆ ಅಷ್ಟಕೋನಾಕಾರದ ಕೆತ್ತನೆಯ ನಡುವೆ ಪದ್ಮದ ಅಲಂಕರಣೆ ಇದೆ. ಮಧ್ಯದಲ್ಲಿ ಯಾವುದೇ ಮೂರ್ತಿ ಶಿಲ್ಪ ಕಂಡು ಬರುವುದಿಲ್ಲ ದ್ವಾರವು ಪಂಚಶಾಖೆಗಳಿಂದ ಕೂಡಿದ್ದು ನಿರಾಲಂಕಾರವಾಗಿದೆ. ಲಲಾಟಬಿಂಬದಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ. ಉದುಂಬರಕ್ಕೆ ಹೊಂದಿಕೊಂಡಂತೆ ಚಂದ್ರಶಿಲೆಯ ಅಲಂಕರಣೆ ಇದೆ.

ಅಂತರಾಳ:

ಗರ್ಭಗೃಹಕ್ಕೆ ಹೊಂದಿಕೊಂಡಂತೆ ಅಂತರಾಳವಿದ್ದು ಛತ್ತಿನಲ್ಲಿ ಅಷ್ಟಕೋನದ ನಡುವೆ ಪದ್ಮದ ಅಲಂಕರಣೆ ಇದೆ. ದ್ವಾರವು ವಜ್ರಾಕಾರದ ಅಲಂಕರಣೆ, ಲತಾಸುರಳಿ ಮತ್ತು ವಜ್ರಾಕಾರದ ಅಲಂಕರಣೆಯಿಂದ ಕೂಡಿದೆ. ದ್ವಾರಶಾಖೆ ಮತ್ತು ಅರ್ಧಕಂಬಗಳ ನಡುವೆ ಸುಂದರವಾದ ಅಲಂಕಾರಯುಕ್ತ ಜಾಲಂದ್ರಗಳನ್ನು ಕಾಣುತ್ತೇವೆ. ಎಡ ಭಾಗದ ಅರ್ಧಕಂಭದ ಮೇಲೆ ಶಾಸನವಿದೆ. ದ್ವಾರದ ಮೇಲ್ಭಾಗದಲ್ಲಿ ಮಕರತೋರಣವಿದ್ದು, ಅಲ್ಲಿರುವ ಮೂರ್ತಿಗಳನ್ನು ಸ್ಪಷ್ಟವಾಗಿ ಗುರುತಿಸಲು ಸಾಧ್ಯವಾಗುವುದಿಲ್ಲ.

ನವರಂಗ:

ನವರಂಗವು ನಾಲ್ಕು ಕಂಬಗಳನ್ನು ಹೊಂದಿದ್ದು ಮಧ್ಯದ ಭಾಗವು ಸ್ವಲ್ಪ ಎತ್ತರವಾಗಿದೆ. ಛತ್ತಿನ ಎಲ್ಲ ಅಂಕಣದಲ್ಲೂ ಪದ್ಮದ ಅಲಂಕರಣೆ ಇದೆ. ಅಲ್ಲದೆ ಎಡ ಮತ್ತು ಬಲಬದಿಗಳಲ್ಲಿ ಚಿಕ್ಕಗುಡಿಗಳಂತಿರುವ ಎರಡು ಕೋಷ್ಠಗೂಡುಗಳನ್ನು ಕಾಣುತ್ತೇವೆ. ಇವುಗಳ ದ್ವಾರದಲ್ಲಿ ಯಾವುದೇ ಅಲಂಕರಣೆ ಕಂಡುಬರುವುದಿಲ್ಲ ಮೇಲೆ ಶಿಖರವನ್ನು ಹೊಂದಿದ್ದು ಗೂಡುಗಳಲ್ಲಿ ಪ್ರಸ್ತುತ ಯಾವುದೇ ಮೂರ್ತಿಶಿಲ್ಪ ಕಂಡುಬರುವುದಿಲ್ಲ. ನವರಂಗಕ್ಕೆ ಉತ್ತರ, ದಕ್ಷಿಣ ಮತ್ತು ಪೂರ್ವದಿಕ್ಕುಗಳಿಂದ ಪ್ರವೇಶವಿತ್ತು. ಆದರೆ ಪ್ರಸ್ತುತ ಉತ್ತರ ಭಾಗ ಜೀರ್ಣೋದ್ಧಾರ ಗೊಂಡಿರುವುದರಿಂದ ದ್ವಾರವಾಗಲೀ ಪ್ರವೇಶ (ಮುಖ) ಮಂಟಪವಾಗಲಿ ಕಂಡುಬರುವುದಿಲ್ಲ. ದಕ್ಷಿಣ ಮತ್ತು ಪೂರ್ವದ್ವಾರಗಳಲ್ಲಿ ಪ್ರವೇಶ (ಮುಖ) ಮಂಟಪಗಳಿವೆ ಎರಡೂ ದ್ವಾರಗಳು ಸೂಕ್ಷ್ಮ ಕೆತ್ತನೆಯ ಅಲಂಕಾರದಿಂದ ಕೂಡಿವೆ. ದಕ್ಷಿಣ ಮುಖ ಮಂಟಪದ ಕಕ್ಷಾಸನದಹಿಂಭಾಗದಲ್ಲಿ ಎರಡು ಅರ್ಧಗಂಬಗಳ ಮಧ್ಯಭಾಗದಲ್ಲಿ ವಿವಿಧ ಮೂರ್ತಿಶಿಲ್ಪಗಳು ಮತ್ತು ಅರ್ಧಕಂಬಗಳ ಮೇಲ್ಭಾಗದಲ್ಲಿ ರೇಖಾನಗರ ಶಿಖರದ ಪ್ರತಿಕೃತಿ ಮತ್ತು ಅವುಗಳ ಮಧ್ಯದಲ್ಲಿ ವಜ್ರಾಕಾರದ ಅಲಂಕರಣೆಯನ್ನು ಕಾಣುತ್ತೇವೆ.

ತೆರೆದ ಸಭಾಮಂಟಪ:

ನವರಂಗದ ಮುಂದೆ ತೆರೆದ ಸಭಾಮಂಟಪವಿದೆ. ಇದರ ಛತ್ತಿನ ಪ್ರತಿಯೊಂದು ಅಂಕಣವೂ ಅಲಂಕಾರಿಕ ಪುಷ್ಪದಿಂದ ಕೂಡಿದೆ. ಮಧ್ಯದ ಅಂಕಣದ ಛತ್ತಿನ ಅಲಂಕಾರವು ಬಹು ಸುಂದರವಾಗಿದ್ದು ಲೋಲಕವು ಇಳಿಬಿದ್ದಿದೆ. ಈ ಮಂಟಪವು ಸುತ್ತಲೂ ಕಕ್ಷಾಸನ ಹೊಂದಿದ್ದು ಕಕ್ಷಾಸನದ ಮೇಲೆ ಚಿಕ್ಕ ಚಿಕ್ಕ ಕಂಬಗಳನ್ನು ಕಾಣುತ್ತೇವೆ ಹಿಂಭಾಗದಲ್ಲಿ ಅರ್ಧಗಂಬಗಳ ಮೇಲೆ ರೇಖಾನಾಗರ ಶೈಲಿಯ ಶಿಖರದ ಅಲಂಕರಣೆ ಇದ್ದು ಅದರ ಮೇಲ್ಭಾಗದಲ್ಲಿ ಎರಡು ಅರ್ಧಗಂಬಗಳ ನಡುವೆ ಚಿಕ್ಕ ಚಿಕ್ಕ ಮೂರ್ತಿ ಶಿಲ್ಪಗಳನ್ನು ಕಂಡರಿಸಲಾಗಿದೆ. ಇಳಿಜಾರಾದ ಮಾಳಿಗೆಯನ್ನು ಹೊಂದಿದೆ.

ಭಿತ್ತಿ :

ಗರ್ಭಗೃಹದ ಹೊರ ಭಿತ್ತಿಯಲ್ಲಿ ಮೂರು ದೇವಕೋಷ್ಠಗಳಿದ್ದು ಸದ್ಯ ಬರಿದಾಗಿವೆ. ಅಲ್ಲದೆ ಎರಡು ಚಿಕ್ಕ ಅರ್ಧಕಂಭಗಳ ಮೇಲೆ ಶಿಖರದ ಅಲಂಕರಣೆ ಮತ್ತು ನಿಯಮಿತ ಅಂತರದಲ್ಲಿ ಕಿರುಗಾತ್ರದ ಅರ್ಧಗಂಬಗಳ ಅಲಂಕರಣೆಯಿದೆ.

ಅಧಿಷ್ಠಾನ:

ಗರ್ಭಗೃಹದ ಅಧಿಷ್ಠಾನವು ಉಪಾನ ಜಗತಿ ಕಂಠ ಶಿಲುಬೆಯಾಕಾರದ ಅಲಂಕರಣೆ ಕಪೋತಭಾಗವನ್ನು ಹೊಂದಿದ್ದರೆ ತೆರೆದ ಸಭಾ ಮಂಟಪದ ಅಧಿಷ್ಠಾನವು ಉಪಾನ, ಜಗತಿ, ಗಳ, ಕಪೋತಗಳ ಭಾಗದಲ್ಲಿವಜ್ರಾಕಾರದ ಅಲಂಕರಣೆಯಿದೆ.

ಶಿಖರ:

ಗರ್ಭಗೃಹದ ಮೇಲಿರುವ ಶಿಖರವು ಪ್ರಸ್ತುತ ಸಂಪೂರ್ಣ ನಾಶವಾಗಿದೆ.

ಗಣೇಶ ದೇವಾಲಯ, ಕುಕನೂರು :

ಮಹಾಮಾಯೆ ದೇವಾಲಯದ ದಕ್ಷಿಣಕ್ಕೆ ಸು.೯೦ಕಿ.ಮೀ ಅಂತರದಲ್ಲಿ ಪೂರ್ವಾಭಿಮುಖವಾಗಿ ದೇವಾಲಯವಿದೆ. ಇದು ಎರಡು ಗರ್ಭಗೃಹ, ಒಂದು ಅಂತರಾಳ ತೆರೆದ ಸಭಾಮಂಟಪವನ್ನು ಹೊಂದಿದೆ.

ಗರ್ಭಗೃಹ:

ಈ ದೇವಾಲಯವು ಚೌಕಾಕಾರದ ಗರ್ಭಗೃಹ ಹೊಂದಿದ್ದು ಪೂರ್ವಾಭಿಮುಖವಾಗಿದೆ ಮಧ್ಯದಲ್ಲಿ ಪ್ರಸ್ತುತ ಮಲ್ಲಿಕಾರ್ಜುನನ (ಕಂಚಿನ ಲೋಹದಿಂದ ನಿರ್ಮಿತವಾದ) ಮೂರ್ತಿ ಇದೆ. ಆದರೆ ಮೂಲತಃ ಇಲ್ಲಿ ಗಣೇಶ ಮೂರ್ತಿ

ಸ್ಥಾಪಿತವಾಗಿತ್ತೆಂದು ಹೇಳಬಹುದು. ಭಿತ್ತಿನಲ್ಲಿ ಪದ್ಮದ ಅಲಂಕರಣೆ ಇದ್ದು ದ್ವಾರವು ನಿರಾಲಂಕಾರವಾಗಿ ಲಲಾಟಬಿಂಬದಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ.

ದಕ್ಷಿಣಾಭಿಮುಖವಾಗಿರುವ ಮತ್ತೊಂದು ಗರ್ಭಗೃಹವು ತೀರಾ ಚಿಕ್ಕ ಗರ್ಭಗೃಹ ಆದರೂ ಮಧ್ಯದಲ್ಲಿ ಮಲ್ಲಿಕಾರ್ಜುನನ ಮೂರ್ತಿಶಿಲ್ಪವಿದೆ ಭಿತ್ತಿನಲ್ಲಿ ಪದ್ಮದ ಅಲಂಕರಣೆಯಿದ್ದು ದ್ವಾರವು ನಿರಾಲಂಕಾರವಾಗಿದೆ.

ಅಂತರಾಳ:

ಪೂರ್ವಾಭಿಮುಖವಾಗಿರುವ ಗರ್ಭಗೃಹಕ್ಕೆ ಹೊಂದಿಕೊಂಡಂತೆ ಆಯತಾಕಾರದ ಗರ್ಭಗೃಹವಿದ್ದು ದ್ವಾರವು ನಿರಾಲಂಕಾರವಾಗಿದೆ.


ನವರಂಗ :

ಮೂಲಗರ್ಭಗೃಹದ ಅಂತರಾಳಕ್ಕೆ ಮತ್ತು ಉತ್ತರದ ಗರ್ಭಗೃಹಕ್ಕ ಅಂಟಿಕೊಂಡಂತೆ ನವರಂಗವಿದೆ. ಮಧ್ಯದ ಭಾಗವು ಎತ್ತರವಾಗಿದ್ದು ಮಧ್ಯದಲ್ಲಿ ನಾಲ್ಕು ಸ್ತಂಬಗಳಿವೆ ಅಂತರಳಾದ ಇಕ್ಕೆಲಗಳ ಎರಡೂ ಕೋಷ್ಠಗಳಿದ್ದು ಭಿತ್ತಿನಲ್ಲಿ ಪದ್ಮದ ಅಲಂಕರಣೆ ಇದೆ. ಅಲ್ಲದೆ ನವರಂಗದ ಪೂರ್ವಗೋಡೆಯ ಹೊರಭಾಗದಲ್ಲಿ ಕ್ರಿ.ಶ.೧೧೨೯ರ ಭೂಲೋಕಮಲ್ಲನ ಶಾಸನವಿದೆ.

ಅಧಿಷ್ಠಾನ ಮತ್ತು ಭಿತ್ತಿಯ ಸ್ವಲ್ಪ ಭಾಗ ಮಣ್ಣಿನಿಂದ ಹೂತುಹೋಗಿದೆ. ಗರ್ಭಗೃಹದ ಹೊರಭಾಗದಲ್ಲಿರುವ ಭಿತ್ತಿ ನಯವಾಗಿದೆ. ಗರ್ಭಗೃಹದ ಮೇಲೆ ಪ್ರಸ್ತುತ ಕಂಡುಬರುವ ಶಿಖರ ಮೂಲಶಿಖರವಾಗಿರದೆ ಇತ್ತೀಚಿಗೆ ನಿರ್ಮಿತಗೊಂಡಿದೆ.

ಸಿದ್ದೇಶ್ವರ ದೇವಾಲಯ, ಹಾವೇರಿ :

ಕರ್ನಾಟಕದ ಪ್ರಮುಖ ಜಿಲ್ಲೆಯಾಗಿರುವ ಹಾವೇರಿಯಲ್ಲಿ ಸಿದ್ದೇಶ್ವರ ದೇವಾಲಯವಿದೆ. ಹಾವೇರಿ ಗುತ್ತಲ ರಸ್ತೆಯ ಬಳಿ ತಗ್ಗಾದ ಸ್ಥಳದಲ್ಲಿರುವ ಸಿದ್ದೇಶ್ವರ ದೇವಾಲಯವು ಸ್ವಯಂಭು ಸಿದ್ದೇಶ್ವರ, 'ಸಿದ್ದನಾಥ' ಪುರಧ ಸಿದ್ದೇಶ್ವರ ಎಂಬ ನಾನಾ ಹೆಸರುಗಳಿಂದ ಉಲ್ಲೇಖಿತವಾಗಿದೆ. ಸ್ಥಳೀಯವಾಗಿ ದೊರೆತಂತ ೩೫ ಶಾಸನಗಳಲ್ಲಿ ೧೮ಶಾಸನಗಳು ಸಿದ್ದೇಶ್ವರ ದೇವಾಲಯಕ್ಕೆ ಬಿಟ್ಟ ದತ್ತಿಯ ವಿವರಗಳನ್ನು ಉಲ್ಲೇಖಿಸುತ್ತವೆ. ಕ್ರಿ.ಶ.೧೦೯೭ರ ಒಂದು ಸ್ಥಳೀಯ ಶಾಸನದಲ್ಲಿ ಉಲ್ಲೇಖತವಾಗಿರುವಂತೆ ಹಾವೇರಿಯ ನಾಲ್ಕು ನೂರು ಮಹಾಜನರಿಗೆ ದಾನ-ದತ್ತಿಯನ್ನು ಕೊಡಲಾಯಿತು ಎಂಬ ವಿವರಣೆ ಸಿಕ್ಕುತ್ತದೆ. ಆದರೆ ದೇವಾಲಯದ ಬಗ್ಗೆ ಯಾವುದೇ ಮಾಹಿತಿ ದೊರೆಯುವುದಿಲ್ಲ. ಹೀಗಾಗಿ ಹನ್ನೊಂದನೆಯ ಶತಮಾನದ ನಂತರವೇ ಈ ದೇವಾಲಯ ನಿರ್ಮಾಣವಾಗಿರಬಹುದೆಂದು ತಿಳಿಯಬಹುದು.



ಸಿದ್ಧೇಶ್ವರ ದೇವಾಲಯದ ತಲವಿನ್ಯಾಸ, ಹಾವೇರಿ

ಗರ್ಭಗೃಹ:

ಸಿದ್ಧೇಶ್ವರ ದೇವಾಲಯವು ಚೌಕಾಕಾರದ ಗರ್ಭಗೃಹ ಹೊಂದಿದ್ದು ಮಧ್ಯದಲ್ಲಿ ಲಿಂಗವಿದೆ. ಛತ್ತಿನಲ್ಲಿ ಅಷ್ಟಕೋನದ ಕೆತ್ತನೆಯ ನಡುವೆ ಪದ್ಮದ ಅಲಂಕರಣೆ ಇದೆ. ಗೋಡೆಯಲ್ಲಿ ಕಚ್ಚುಗಳುಳ್ಳ ಅರ್ಧಗಂಬಗಳ ಅಲಂಕರಣೆ ಇದೆ.

ಅಂತರಾಳ:

ಗರ್ಭಗೃಹಕ್ಕೆ ಹೊಂದಿಕೊಂಡಂತೆ ಚೌಕಾಕಾರದ ಅಂತರಾಳವಿದ್ದು ಮಧ್ಯದಲ್ಲಿ ನಂದಿಯ ಶಿಲ್ಪವಿದೆ. ಮೂರ್ತಿಶಿಲ್ಪವನ್ನು ಕಾಣುತ್ತೇವೆ. ದ್ವಾರವು ತ್ರಿಶಾಖೆಗಳಿಂದ ಕೂಡಿದ್ದು, ಇಕ್ಕೆಲಗಳಲ್ಲಿ ಸೂಕ್ಷ್ಮ ಕೆತ್ತನೆಯಿಂದ ಕೂಡಿದ ಜಾಲಂದ್ರಗಳಿವೆ. ದ್ವಾರದ ಮೇಲ್ಭಾಗದಲ್ಲಿ ಮಕರ ತೋರಣವಿದೆ. ಎರಡು ಅಲಂಕೃತ ಮಕರಗಳಿಂದ ಕೂಡಿದ ಈ ತೋರಣದಲ್ಲಿ ಬ್ರಹ್ಮ, ಶಿವ, ವಿಷ್ಣುವಿನ ಮೂರ್ತಿಗಳನ್ನು ಕೆತ್ತಿರುತ್ತಾರೆ. ಬದಿಯಲ್ಲಿ ಗಣೇಶ ಮತ್ತು ನವಿಲಿನ ಮೇಲೆ ಕುಳಿತ ಕಾರ್ತಿಕೇಯರಿದ್ದಾರೆ. ಅಕ್ಕ ಪಕ್ಕದಲ್ಲಿರುವ ಮಕರಗಳ ಮೇಲೆ ವ್ಯಕ್ತಿಗಳು ಕುಳಿತಿದ್ದು ಅವುಗಳ ಬಾಲದ ಕೆತ್ತನೆಯು ಸೌಂದರ್ಯ ಮತ್ತು ವಿನ್ಯಾಸಕ್ಕೆ ನಿದರ್ಶನವಾಗಿದೆ.

ನವರಂಗ:

ಅಂತರಾಳಕ್ಕೆ ಹೊಂದಿಕೊಂಡಂತೆ ತೆರೆದ ನವರಂಗವಿದ್ದು ಮಧ್ಯದಲ್ಲಿರುವ ನಾಲ್ಕು ಸ್ತಂಭಗಳ ಕೆಳಭಾಗದ ಚೌಕಾಕಾರದ ಪಟ್ಟಿಕೆಗಳಲ್ಲಿ ಶಾಸನವಿದೆ. ಈ ದೇವಾಲಯದ ಪ್ರತಿಯೊಂದು ಭುವನೇಶ್ವರಿಯಲ್ಲಿ ವಿವಿಧ ಬಗೆಯ

ಅಲಂಕಾರಿಕ ಕಮಲಗಳಿವೆ. ಮಧ್ಯದ ಭುವನೇಶ್ವರಿಯನ್ನು ಒಂಬತ್ತು ಚೌಕಗಳಾಗಿ ವಿಂಗಡಿಸಿ ಮಧ್ಯದ ಚೌಕದಲ್ಲಿ ಶಿವನನ್ನು ಉಳಿದವುಗಳಲ್ಲಿ ಮಾತೃಕೆಯರನ್ನು ಕೊರೆದಿದ್ದಾರೆ. ಬ್ರಾಹ್ಮಿ, ವೈಷ್ಣವಿ, ಮಹೇಶ್ವರ, ಕೌಮಾರಿ, ಇಂದ್ರಾಣಿ, ವಾರಾಹಿ, ನರಸಿಂಹ, ಮತ್ತು ಚಾಮುಂಡಾ ಇವರೇ ಆ ಅಷ್ಟಮಾತೃಕೆಯರು. ಇಂತಹ ಮಾತೃಕೆಯರನ್ನೊಳಗೊಂಡ ಭುವನೇಶ್ವರ ಮತ್ತೆಲ್ಲಿಯೂ ಕಂಡುಬರುವದಿಲ್ಲ ಹೀಗಾಗಿ ಈ ಭುವನೇಶ್ವರಿ ಮಹತ್ವದ್ದಾಗಿದೆ.

ಮುಖಮಂಟಪ:

ಈ ದೇವಾಲಯ ದಕ್ಷಿಣೋತ್ತರವಾಗಿ ಪಶ್ಚಿಮಾಭಿಮುಖವಾಗಿರುವ ಈ ದೇವಾಲಯವು ಮೂರು ತೆರೆದ ಮುಖಮಂಟಪಗಳಿವೆ. ಪ್ರತಿಮುಖಮಂಟಪದ ಮೇಲ್ಛಾವಣಿ ಸುಂದರವಾದ ಭುವನೇಶ್ವರಿಗಳಿಂದ ಕೂಡಿದೆ. ಪ್ರತಿಯೊಂದು ಮುಖಮಂಟಪವು ಎರಡೆರಡು ಬಹುಮುಖವುಳ್ಳ ಕಂಭಗಳನ್ನು ಹೊಂದಿದೆ. ಪಶ್ಚಿಮದ ಮುಖಮಂಟಪದ ತೊರೆಯ ಒಂದು ಭಾಗದಲ್ಲಿ ಶಾಸನವಿದೆ.

ಅಧಿಷ್ಠಾನ :

ಈ ದೇವಾಲಯದ ಗರ್ಭಗೃಹದ ಸುತ್ತಲಿನ ಅಧಿಷ್ಠಾನವು ಉಪಾನ, ಜಗತಿ, ಕಂಠ, ಕುಮುದಪಟ್ಟಿಕೆ, ಕಪೋತವನ್ನು ಹೊಂದಿದ್ದು ಪಟ್ಟಿಕೆಯಲ್ಲಿ ಆನೆ, ಕೀರ್ತಿಮುಖ ಎರಡು ಕಾಲುಗಳನ್ನು ಮೇಲೆತ್ತಿ ನಿಂತ ಸಿಂಹ, ಈ ಸಿಂಹಗಳ ಕೆಳಗೆ ಬೇಟೆಯಾಡುತ್ತಿರುವಂತಹ ಮನುಷ್ಯ ಶಿಲ್ಪಗಳಿವೆ ಹಾಗೂ ಆನೆಯನ್ನು ಕೊಲ್ಲುತ್ತಿರುವ ಸಿಂಹ, ಮಕರ, ನವಿಲು, ಪುಷ್ಪ, ಮೃದಂಗವನ್ನು ಬಾರಿಸುತ್ತಿರುವ ಮಹಿಳೆ ಯಕ್ಷ, ಯಕ್ಷಿಯರ ಮೂರ್ತಿಗಳನ್ನು ಮೇಲೆ ಕೀರ್ತಿಮುಖಗಳಿಂದ ಅಲಂಕರಿಸಿದ್ದಾರೆ. ಮುಖಮಂಟಪದಲ್ಲಿರುವ ಅಧಿಷ್ಠಾನವು ಉಪಾನ, ಜಗತಿ, ಗಳ, ಕಪೋತ ಭಾಗಗಳನ್ನು ಹೊಂದಿದ್ದು ಮೇಲ್ಭಾಗದಲ್ಲಿ ವಜ್ರಾಕೃತಿಯ ಅಲಂಕರಣೆ ಇದೆ.

ಭಿತ್ತಿ :

ಸಿದ್ದೇಶ್ವರ ದೇವಾಲಯದ ಭಿತ್ತಿಯು ಹಿಂಬಣಿ ಮುಂಬಣಿಯಿಂದ ಕೂಡಿದ್ದು ಚಿಕ್ಕ ಗುಡಿಗಳಂತಿರುವ ಮೂರು ಕೋಷ್ಠಗೂಡುಗಳನ್ನು ನಿರ್ಮಿಸಲಾಗಿದೆ. ಪ್ರಸ್ತುತ ಅಲ್ಲಿ ಯಾವುದೇ ಮೂರ್ತಿಶಿಲ್ಪ ಕಂಡುಬರುವುದಿಲ್ಲ. ಇದರ ಮೇಲೆ ದ್ರಾವಿಡ ಮಾದರಿಯ ಶಿಖರದ ಪ್ರತಿಕೃತಿಗಳಿವೆ. ಅಲ್ಲದೆ ಅನೇಕ ಕಚ್ಚುಗಳುಳ್ಳ ಅರ್ಧಕಂಬ, ಶಿಖರಗಳಿಂದ ಅಲಂಕೃತ ಪಂಜರ ಶಿಖರ ಯುಕ್ತ ಅರ್ಧಕಂಭಗಳ ಮೇಲ್ಭಾಗದಲ್ಲಿ ವಾದ್ಯಗಳೊಂದಿಗಿರುವ ಸ್ತ್ರೀ, ಕೊಳಲನ್ನು ನುಡಿಸುತ್ತಿರುವ ಕೃಷ್ಣ, ನಾಟ್ಯಮಗ್ನರಾಗಿರುವ ಸ್ತ್ರೀಯರು, ಕುಳಿತ ಭಂಗಿಯಲ್ಲಿರುವ ಲಕ್ಷ್ಮಿ, ವಿಷ್ಣುವಿನ ವಾಮನ ಅವತಾರದಲ್ಲಿರುವ ಮೂರ್ತಿ, ಕಾಳಿಕಾದೇವಿ, ಗಣೇಶ, ಭಿಕ್ಷಾಟನಾ ಶಿಲ್ಪ, ವರಾಹ ಇವುಗಳ ಮೇಲೆ ಅಂದವಾದ ತೋರಣ ಮಧ್ಯದಲ್ಲಿ ಕೀರ್ತಿ ಮುಖದ ಅಲಂಕರಣೆ ಇದೆ.

ಕಂಬ:

ಮೊದಲನೆಯ ವಿಧದ ಕಂಬಗಳು ಅಷ್ಟಮುಖ ಮತ್ತು ಹದಿನಾರು ಭಾಗಗಳುಳ್ಳದಾಗಿದೆ. ಎರಡನೆಯ ಪ್ರಕಾರದ ಕಂಬಗಳು ಕೆಳಭಾಗ ಚೌಕಪೀಠ, ಘನಭಾಗ, ಕಾಂಡಭಾಗವು ತೆಲೆಕೆಳಗಾದ ಘಂಟಾಕಾರ. ಇದರ ಮೇಲ್ಭಾಗದಲ್ಲಿ ದುಂಡಾದ ಮುಚ್ಚಳಗಳು ಮೇಲೆ ಚೌಕಾಕಾರದ ಶಿಲಾಫಲಕ ನಂತರ ಸುರಳಿಯಾಕಾರದ ಬೋದುಗೆಯನ್ನು ಕಾಣುತ್ತೇವೆ.

ಶಿಖರ:

ಗರ್ಭಗೃಹವು ಸುಂದರವಾದ ದ್ರಾವಿಡ ಶೈಲಿಯ ಶಿಖರ ಹೊಂದಿದ್ದು ಸುಖನಾಸಿ ಅಥವಾ ಸುಖನಾಸ ಹೊಂದಿದೆ.

ಕಲ್ಮೇಶ್ವರ ದೇವಾಲಯ, ಇಂಗಳೇಶ್ವರ :

ಕಲ್ಮೇಶ್ವರ ಎಂಬ ಹೆಸರಿನಿಂದ ಕರೆಯಲ್ಪಡುವ ಈ ದೇವಾಲಯವು ಇಂಗಳೇಶ್ವರ ಗ್ರಾಮದ ಹನುಮಾನ ದೇವಾಲಯದ ಪೂರ್ವಕ್ಕೆ ಇದೆ. ಕ್ರಿ.ಶ.೧೧೨೮ರ ನಾರಾಯಣ ದೇವಾಲಯದ ಶಾಸನವು ಮಹಾಮಂಡಳೇಶ್ವರ ಕಲಚೂರಿ ಪೆರ್ಮಾಡಿಯು ನೀಲಕಂಠ ನಾಯಕನು ಕಟ್ಟಿಸಿದ ನೀಲಕಂಠ ದೇವಾಲಯಕ್ಕೆ ದಾನ ನೀಡಿದನೆಂದು ಉಲ್ಲೇಖಿಸಿರುವುದರಿಂದ ಬಹುಶಃ ಕಲ್ಮೇಶ್ವರ ದೇವಾಲಯವೇ ನೀಲಕಂಠ ದೇವಾಲಯವಾಗಿರಬಹುದು.

ಗರ್ಭಗೃಹ:

ಈ ದೇವಾಲಯವು ಚೌಕಾಕಾರದ ಗರ್ಭಗೃಹ ಹೊಂದಿದ್ದು, ಸರಳ ದ್ವಾರ ಶಾಖೆಗಳಿಂದ ಅಲಂಕೃತವಾಗಿದೆ. ಲಲಾಟಬಿಂಬದಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ. ಮೇಲ್ಭಾಗದಲ್ಲಿ ನಾಗರ ಶಿಖರಗಳ ಅಲಂಕರಣೆ ಇದ್ದು ದ್ವಾರದ ಪಟ್ಟಿಕೆಯ ಕೆಳಭಾಗದಲ್ಲಿ ಶೈವ ದ್ವಾರಪಾಲಕರ ಶಿಲ್ಪಗಳಿವೆ.

ಅಂತರಾಳ:

ಗರ್ಭಗೃಹಕ್ಕೆ ಹೊಂದಿಕೊಂಡಂತೆ ಅಂತರಾಳವಿದ್ದು ಎರಡು ಸ್ವತಂತ್ರ ಸ್ತಂಭಗಳಿವೆ.


ನವರಂಗ:

ಅಂತರಾಳಕ್ಕೆ ಹೊಂದಿಕೊಂಡಂತೆ ನವರಂಗವಿದ್ದು ಮಧ್ಯದಲ್ಲಿ ನಾಲ್ಕು ಸ್ತಂಭಗಳಿವೆ. ಸ್ತಂಭಗಳು ಪೀಠ, ಚೌಕು ಘನಭಾಗ, ಘಂಟಾಕಾರದ ಭಾಗ, ವೃತ್ತಾಕಾರದ ಭಾಗ ಶಿಲಾಫಲಕ, ತರಂಗ ಬೋದುಗೆಯನ್ನು ಹೊಂದಿದೆ. (ಇದು ರಾಷ್ಟ್ರಕೂಟರ ದೇವಾಲಯಗಳಲ್ಲಿ ಕಂಡುಬರುತ್ತದೆ.) ನವರಂಗದಲ್ಲಿ ಎರಡು ಕೋಷ್ಟಗಳಿದ್ದು ಅಲಂಕಾರಿಕ ದ್ವಾರವನ್ನು ಹೊಂದಿದೆ. ನವರಂಗದ ಗೋಡೆಯು ಬಿದ್ದು ಹೋಗಿದ್ದು ಜೀರ್ಣೋದ್ಧಾರಗೊಂಡಿದೆ.

ಗರ್ಭಗೃಹದ ಹೊರಭಿತ್ತಿಯು ಹಿಂಬಣಿ ಮತ್ತು ಮುಂಬಣಿಗಳಿಂದ ಗೂಡಿದ್ದು ಶಿಖರಯುಕ್ತ ಪಂಜರ, ಕೋಷ್ಟಗೂಡುಗಳನ್ನು ಹೊಂದಿದ್ದು ಗರ್ಭಗೃಹದ ಶಿಖರವು ಮೆಟ್ಟಿಲು ಮಾದರಿಯಲ್ಲಿದ್ದು ನಂತರ ನಿರ್ಮಾಣಗೊಂಡುದುದಾಗಿದೆ.

ಭೀಮೇಶ್ವರ ದೇವಾಲಯ, ಮಣ್ಣೂರು :

ಇಂಡಿ ತಾಲೂಕಿನ ಚಿಕ್ಕ ಗ್ರಾಮವಾದ ಮಣ್ಣೂರು ಇಂಡಿಯ ಉತ್ತರಕ್ಕೆ ಸು.೨೫ ಕಿ.ಮೀ. ದೂರದಲ್ಲಿ ಭೀಮಾ ನದಿಯ ಬಲದಂಡೆಯ ಮೇಲ್ಭಾಗದಲ್ಲಿದೆ. ಶಾಸನದಲ್ಲಿ ಮಣಿಯೂರು ಎಂದು ಕರೆಯಿಸಿಕೊಳ್ಳುವ ಇಂದಿನ ಮಣ್ಣೂರು ಗ್ರಾಮದಲ್ಲಿ ಶಾಸನೋಕ್ತ ಭಿಮೇಶ್ವರ ದೇವಾಲಯವಿದ್ದು ಸ್ಥಳೀಕರು ಸಂಗಮೇಶ್ವರ ಕೂಡಲಸಂಗಮೇಶ್ವರನೆಂದು ಕರೆಯುತ್ತಾರೆ. ಕ್ರಿ.ಶ.೧೧೩೪ರಲ್ಲಿ ಈ ಕುರಿತು ಶಾಸನ ತಿಳಿಸುವುದರಿಂದ ಈ ಶಾಸನಕ್ಕಿಂತ ಮುಂಚೆ ದೇವಾಲಯ ನಿರ್ಮಾಣವಾಗಿರುವುದು ತಿಳಿದು ಬರುತ್ತದೆ. ಈ ಸಂಗಮೇಶ್ವರ ದೇವಾಲಯವನ್ನು ಪೂರ್ವಾಭಿಮುಖವಾಗಿ ನಿರ್ಮಿಸಲಾಗಿದೆ.



ಸಂಗಮೇಶ್ವರ ದೇವಾಲಯದ ತಲವಿನ್ಯಾಸ, ಮಣ್ಣೂರು

ಗರ್ಭಗೃಹ:

ತ್ರಿಕೂಟಾಚಲವಾಗಿರುವ ಈ ದೇವಾಲಯವು ಮೂರು ಗರ್ಭಗೃಹವನ್ನು ಹೊಂದಿದೆ ಪೂರ್ವಾಭಿಮುಖವಾಗಿರುವ ಗರ್ಭಗೃಹದಲ್ಲಿ ಲಿಂಗುವಿದ್ದು ಉತ್ತರ ಮತ್ತು ದಕ್ಷಿಣದ ಗರ್ಭಗೃಹದಲ್ಲಿ ಯಾವುದೇ ಮೂರ್ತಿಶಿಲ್ಪಗಳು ಕಂಡುಬರುವುದಿಲ್ಲ ಛತ್ತು ದ್ವಾರದ ಪಟ್ಟಿಕೆಗಳು ನಿರಾಲಂಕಾರವಾಗಿವೆ. ಲಲಾಟಬಿಂಬದಲ್ಲಿ ಯಾವುದೇ ಮೂರ್ತಿಶಿಲ್ಪ ಕಂಡುಬರುವುದಿಲ್ಲ.

ಅಂತರಾಳ:

ಪೂರ್ವಾಭಿಮುಖವಾಗಿರುವ ಗರ್ಭಗೃಹಕ್ಕೆ ಹೊಂದಿಕೊಂಡಂತೆ ಅಂತರಾಳವಿದ್ದು ಯಾವುದೇ ಅಲಂಕರಣೆ ಕಂಡು ಬರುವುದಿಲ್ಲ.

ನವರಂಗ:

ಪೂರ್ವಾಭಿಮುಖವಾಗಿರುವ ಗರ್ಭಗೃಹದ ಅಂತರಾಳ ಮತ್ತು ಉತ್ತರ ಮತ್ತು ದಕ್ಷಿಣಾಭಿಮುಖವಾಗಿರುವ ಗರ್ಭಗೃಹಕ್ಕೆ ಹೊಂದಿಕೊಂಡಂತೆ ನವರಂಗ ವಿದ್ದು ನವರಂಗದ ಸ್ತಂಭದ ಮೇಲ್ಭಾಗ ಬಿದ್ದು ಹೋಗಿರುವುದರಿಂದ ನಂತರದಲ್ಲಿ ಅದನ್ನು ನಿರ್ಮಿಸಲಾಗಿದೆ.

ದೇವಾಲಯದ ಅಧಿಷ್ಠಾನವು ಸಂಪೂರ್ಣವಾಗಿ ನೆಲದಲ್ಲಿ ಹೂತುಹೋಗಿದ್ದು. ಗೋಡೆ ಸಮಪಾತಳಿಯಲ್ಲಿದ್ದು ಸಂಪೂರ್ಣ ಜೀರ್ಣೋದ್ದಾರಗೊಂಡಿದೆ. ಗರ್ಭಗೃಹದ ಮೇಲ್ಭಾಗದಲ್ಲಿರುವ ಶಿಖರದ ಭಾಗವು ನಂತರದಲ್ಲಿ ನಿರ್ಮಾಣವಾದುದಾಗಿದೆ.

ನರಸಿಂಹ ದೇವಾಲಯ, ಕುರ್ತಕೋಟಿ :

ಗದಗ ಜಿಲ್ಲೆಯಿಂದ ಸು. ೧೫ ಕಿ.ಮೀ. ದೂರದಲ್ಲಿರುವ ಕುರ್ತಕೋಟಿ ಗ್ರಾಮದಲ್ಲಿ ಊರ ಹೊರಗಿರುವ ಕೆರೆಯ ಹತ್ತಿರ ನರಸಿಂಹ ದೇವಾಲಯ ಕಂಡುಬರುತ್ತದೆ. ಈ ದೇವಾಲಯದ ಹೊರಭಾಗದಲ್ಲಿ ಕ್ರಿ.ಶ. ೧೧೩೮ಕ್ಕೆ ಸೇರಿದ ಶಾಸನವೊಂದನ್ನು ಕಾಣುತ್ತೇವೆ.

ಗರ್ಭಗೃಹ:

ಈ ದೇವಾಲಯವು ಚೌಕಾಕಾರದ ಗರ್ಭಗೃಹವನ್ನು ಹೊಂದಿದ್ದು ಮಧ್ಯದಲ್ಲಿ ಪೀಠದ ಮೇಲೆ ನರಸಿಂಹನ ಮೂರ್ತಿ ಇದೆ. ಛತ್ತಿನಲ್ಲಿ ಯಾವುದೇ ಅಲಂಕರಣೆ ಕಂಡುಬರುವುದಿಲ್ಲ. ದ್ವಾರವು ನಿರಾಲಂಕಾರವಾಗಿದ್ದು ಲಲಾಟ ಬಿಂಬದಲ್ಲಿ ಯಾವುದೇ ಶಿಲ್ಪಕಂಡುಬರುವುದಿಲ್ಲ.

ನವರಂಗ:

ನವರಂಗವು ಗರ್ಭಗೃಹಕ್ಕೆ ಹೊಂದಿಕೊಂಡಿದ್ದು ಮೇಲ್ಛಾವಣಿ ಹಾಳಾಗಿ ಹೋಗಿದೆ. ಅದನ್ನು ಕಟ್ಟಿಗೆಯಿಂದ ನಿರ್ಮಿಸಲಾಗಿದೆ. ಎಡಭಾಗದ ಗೋಡೆಯು ಸಂಪೂರ್ಣವಾಗಿ ಬಿದ್ದು ಹೋಗಿದೆ. ದೇವಾಲಯದ ಹೊರಭಾಗದಲ್ಲಿ ಮೂರು ಶಿಲಾಶಾಸನಗಳಿವೆ.


ಕಂಬ:

ನವರಂಗ ದಲ್ಲಿರುವ ಕಂಬಗಳು ಪೀಠ, ಚೌಕ, ಘನ ಭಾಗ ೧೬-೮-೧೬ ಮುಖಗಳುಳ್ಳ ಭಾಗ, ಕಟ್ಟುಗಳುಳ್ಳ ಘಂಟಾಕಾರದ ಭಾಗ ಮೇಲೆ ಚೌಕು ಘನಭಾಗ ಅದರಮೇಲ್ಭಾಗವನ್ನು ಮರದಿಂದ ಕೆತ್ತಲಾಗಿದೆ. ಕಂಬದ ಪೀಠ ಭಾಗದಲ್ಲಿ ಆನೆ, ಸಿಂಹ, ಮನುಷ್ಯರ ಶಿಲ್ಪಗಳನ್ನು ಕೆತ್ತಲಾಗಿದೆ.

ನರಸಿಂಹ ದೇವಾಲಯದ ಅಧಿಷ್ಠಾನ ಭಾಗವು ಸಂಪೂರ್ಣ ಮಣ್ಣಿನಿಂದ ಮುಚ್ಚಿಹೋಗಿದ್ದು ಹೊರ ಭಾಗವು ಮಣ್ಣಿನಿಂದ ಮುಚ್ಚಿ ಹೋಗಿದೆ. ಶಿಖರದ ಭಾಗವು ಸಂಪೂರ್ಣವಾಗಿ ಬಿದ್ದು ಹೋಗಿದೆ.

ತೆಗ್ಗಿನ ದೇವಾಲಯ, ಮಲಘಾಣ :

ನೆಲದಲ್ಲಿ ಹುದುಗಿ ಹೋಗಿರುವುದಿಂದ ಈ ದೇವಾಲಯಕ್ಕೆ ಸ್ಥಳೀಕರು ತೆಗ್ಗಿನ ದೇವಾಲಯವೆಂದು ಕರೆಯುತ್ತಾರೆ. ಆದರೆ ದೇವಾಲಯದ ಒಳಗೋಡೆಯಲ್ಲಿರುವ ಕ್ರಿ.ಶ.೧೧೩೩ರ ಶಾಸನವು ಸ್ವಯಂಭು ದೇವಾಲಯವೆಂದು ಕರೆಯುತ್ತದೆಯಲ್ಲದೆ, ಕುಮಾರ ಸೋಮೇಶ್ವರನು ಸ್ವಯಂಭು ದೇವರಿಗೆ ತನ್ನ ತಂದೆಗೆ ಒಳ್ಳೆಯದಾಗಲೆಂದು ಪ್ರತಿವರ್ಷ ಮೂರುಗದ್ಯಾಣ ಹೊನ್ನುಗಳನ್ನು ದಾನ ಮಾಡಿದನೆಂದು ಉಲ್ಲೇಖಿಸಿದೆ.



ತೆಗ್ಗಿನ ದೇವಾಲಯದ ತಲವಿನ್ಯಾಸ, ಮಲಘಾಣ

ಗರ್ಭಗೃಹ:

ಈ ದೇವಾಲಯದ ಗರ್ಭಗೃಹಕ್ಕೆ ಹೊಂದಿಕೊಂಡಂತೆ ಅಂತರಾಳವಿದ್ದು ದ್ವಾರಗಳು ನಿರಾಲಂಕಾರವಾಗಿವೆ. ಲಲಾಟಬಿಂಬದಲ್ಲಿ ಯಾವದೇ ಶಿಲ್ಪಕಂಡುಬರುವುದಿಲ್ಲ.

ನವರಂಗ:

ಅಂತರಾಳಕ್ಕೆ ಹೊಂದಿಕೊಂಡಂತಿರುವ ನವರಂಗವು ನಾಲ್ಕು ಸ್ತಂಬಗಳನ್ನು ಹೊಂದಿದ್ದು ಮೇಲಿನ ಛತ್ತು ಅಲಂಕಾರಿಕ ಕಮಲದಿಂದ ಕೂಡಿದೆ. ಒಂದು ಛತ್ತಿನಲ್ಲಿ ಇಂದ್ರದಂಪತಿಗಳು ಐರಾವತದ ಮೇಲೆ ಕುಳಿತಿರುವ ಶಿಲ್ಪವನ್ನು ಕೆತ್ತಲಾಗಿದೆ. ನವರಂಗದ ಒಳಗೋಡೆಯಲ್ಲಿ ಎರಡು ಕೋಷ್ಠಗಳಿದ್ದು ಅವುಗಳಲ್ಲಿ ಕ್ರಮವಾಗಿ ಗಣೇಶ ಮತ್ತು ನಾಗಶಿಲ್ಪಗಳನ್ನು ಇಡಲಾಗಿದೆ.

ದೇವಾಲಯದ ಹೊರಭಿತ್ತಿ ಮತ್ತು ಅಧಿಷ್ಠಾನ ನೆಲದಲ್ಲಿ ಹೂತುಹೋಗಿವೆ.

ಮೂರ್ತಿ ಶಿಲ್ಪಗಳು:

ಮೂರನೆಯ ಸೋಮೇಶ್ವರನ ಕಾಲದ ದೇವಾಲಯಗಳಲ್ಲಿ ಅಪಾರ ಸಂಖ್ಯೆಯಲ್ಲಿ ಮೂರ್ತಿಶಿಲ್ಪಗಳು ಕಂಡುಬರುತ್ತವೆ. ಇವು ಜನರ ಭಕ್ತಿ ಭಾವಗಳಿಗನುಗುಣವಾಗಿ ಅವರ ಪ್ರೋತ್ಸಾಹ, ಪ್ರೇರಣೆಗಳಿಂದ ನಿರ್ಮಾಣಗೊಂಡಿವೆ. ಇವು ದೇವಾಲಯದ ಒಳಗೂ ಹಾಗೂ ಹೊರಗೂ ಪ್ರತಿಷ್ಠಾಪನೆಗೊಂಡಿವೆ. ಇನ್ನು ಕೆಲವು ಮೂರ್ತಿ ಶಿಲ್ಪಗಳನ್ನು ಕೋಷ್ಠದಲ್ಲಿ ದೇವಾಲಯದ ಗೋಡೆಗಳಲ್ಲಿ ಅಲಂಕಾರಕ್ಕಾಗಿ ಕೆತ್ತಿರುವುದನ್ನು ಗುರುತಿಸಿಬಹುದು ಈ ತೆರನಾದ ಮೂರ್ತಿ ಶಿಲ್ಪಗಳು ಆಗಿನ ಕಾಲದ ಸಾಮಾಜಿಕ ಜೀವನದ ಮತ್ತು ಉಡುಗೆ ತೊಡುಗೆಗಳ ಆಭರಣಗಳ, ಅಲಂಕಾರಗಳನ್ನು ಪ್ರತಿಬಿಂಬಿಸುತ್ತವೆ.

ಈ ಕಾಲದ ಶಿಲ್ಪಗಳಲ್ಲಿ ಹೆಚ್ಚು ನಯವಾದ ಕಲಾಕುಸುರಿನ ಕೆಲಸ ಕಂಡು ಬರುತ್ತದೆ. ಅವು ಅನೇಕ ಆಭರಣಗಳಿಂದ ಅಲಂಕೃತವಾಗಿದ್ದು ಅವುಗಳಲ್ಲಿ ಕಂಡುಬರುವ ಆಭರಣಗಳೆಂದರೆ ಕಿರೀಟ, ಕರ್ಣಕುಂಡಲ, ಕಂಕಣ, ಕೆಯೂರ, ನೂಪುರ, ರತ್ನಹಾರ, ಕಠಿಸರ, ಯಜ್ಞೋಪವೀತ, ಉದರಬಂಧ, ಕಾಲ್ಗಡಗ, ಭುಜಾಲಂಕಾರ, ಮುಂತಾದವು. ಇಂತಹ ಶಿಲ್ಪಗಳು ಅತೀ ಚಿಕ್ಕವೂ ಅಲ್ಲದ ಅತೀ ದೊಡ್ಡವೂ ಅಲ್ಲದ ಮಧ್ಯಮ ಪ್ರಮಾಣದಲ್ಲಿ ಕಂಡುಬರುತ್ತದೆ. ಈ ಮೂರ್ತಿ ಶಿಲ್ಪಗಳನ್ನು ಈ ಕೆಳಗಿನಂತೆ ವಿಂಗಡಿಸಲಾಗಿದೆ.

೧. ಶೈವ ಶಿಲ್ಪಗಳು

೨. ವೈಷ್ಣವ ಶಿಲ್ಪಗಳು

೩. ಜೈನ ಶಿಲ್ಪಗಳು

೪. ಇತರೆ (ಧಾರ್ಮಿಕೇತರ) ಶಿಲ್ಪಗಳು

ಪ್ರಸ್ತುತ ಅಧ್ಯಯನ ಕ್ಷೇತ್ರದಲ್ಲಿ ಶೈವ ಶಿಲ್ಪಗಳು ಹೆಚ್ಚು ಕಂಡುಬರುತ್ತಿದ್ದು ವೈಷ್ಣವ, ಜೈನ ಶಿಲ್ಪಗಳು ಶೈವ ಶಿಲ್ಪಗಳಿಗಿಂತ ಸ್ವಲ್ಪ ಕಡಿಮೆ ಪ್ರಮಾಣದಲ್ಲಿ ಕಂಡುಬರುತ್ತವೆ.

ಶೈವ ಶಿಲ್ಪಗಳು :

ಶಿವನ ಲೀಲಾ ಮೂರ್ತಿಗಳು ಹದಿನೈದು, ಇಪ್ಪತ್ತೈದು ಎಂದು ಹೇಳಲಾಗುತ್ತದೆ. ಇವುಗಳನ್ನು ಎರಡು ಬಗೆಯಲ್ಲಿ ವಿಂಗಡಿಸಲಾಗುತ್ತದೆ. ಅನುಗ್ರಹ ಮೂರ್ತಿಗಳು, ಸಂಹಾರ ಮೂರ್ತಿಗಳು ಶಿವಪುರಾಣದ ಪ್ರಕಾರ ಭೈರವನು ಶಿವನ ಸಂಹಾರ ಮೂರ್ತಿಗಳಲ್ಲಿ ಒಬ್ಬ ಭೈರವನಲ್ಲೇ ಹಲವಾರು ರೂಪಗಳಿರುವುದನ್ನು ಪುರಾಣಗಳು ಇತರ ಕೃತಿಗಳು ತಿಳಿಸುತ್ತವೆ.[೮೪]

ಮೂರ್ತಿ ಶಿಲ್ಪ	-	ಭೈರವ
ಭಂಗಿ	-	ತ್ರಿಭಂಗಿ
ಸ್ಥಳ	-	ರಾಣೆಬೆನ್ನೂರು ತಾಲೂಕಿನ ಅಸುಂಡಿ ಗ್ರಾಮದ ಕಲಿದೇವಸ್ವಾಮಿ ದೇವಾಲಯದ ಕೋಷ್ಠದಲ್ಲಿ
ಕಾಲ	-	ಕ್ರಿ.ಶ.೧೧ನೇ ಶತಮಾನ

ಈ ಭೈರವನ ಶಿಲ್ಪವು ತ್ರಿಭಂಗಿಯಲ್ಲಿದ್ದು ನಾಲ್ಕು ಕೈಗಳಿವೆ. ಮೇಲಿನ ಬಲಗೈಯಲ್ಲಿ ಡಮರು ಮೇಲಿನ ಎಡಗೈಯಲ್ಲಿ ಮುಸಲ, ಕೆಳಗಿನ ಬಲಗೈಯಲ್ಲಿ ಖಡ್ಗ ಕೆಳಗಿನ ಎಡಗೈಯಲ್ಲಿ ಕಾಪಾಲಿಕ ಮತ್ತು ರುಂಡವಿದೆ. ಕಿವಿಯಲ್ಲಿ ಕಿವಿಯೋಲೆ, ಕೊರಳಲ್ಲಿ ಕಂಠಹಾರ, ಮಣಿಸರ ಮತ್ತು ಯಜ್ಞೋಪವೀತಗಳಿಂದ ಅಲಂಕೃತಗೊಂಡಿದೆ. ಸೊಂಟದಲ್ಲಿ ಕಟಿಬಂಧ, ಕೈಯಲ್ಲಿ ಕೈಗಡಗ, ಕಾಲಲ್ಲಿ ಕಾಲ್ಗಡಗ ಮತ್ತು ಪಾದರಕ್ಷೆಗಳಿವೆ. ಶಿಲ್ಪದ ಕೆಳಭಾಗದ ಎಡಬದಿಯಲ್ಲಿ ನಾಯಿಯು ಭೈರವನ ಕೈಯಲ್ಲಿರುವ ರುಂಡವನ್ನು ಕಚ್ಚಲು ಜಿಗಿಯುತ್ತಿರುವಂತಿದೆ. ಪ್ರಭಾವಳಿಯ ಸುತ್ತಲೂ ತೋರಣದಲ್ಲಿ ಅಸ್ತಿಪಂಜರಗಳುಳ್ಳ ಪ್ರೇತಗಳನ್ನು ತೋರಿಸಲಾಗಿದೆ. ಶಿಲ್ಪದ ತಲೆಯ ಹಿಂಭಾಗದಲ್ಲಿ ಪ್ರಭಾವಳಿ ಇದ್ದು ಮೇಲೆ ಕೊಡೆಯ ಆಕಾರದ ಅಲಂಕರಣೆ ಇದೆ.

ವೈಷ್ಣವ ಮೂರ್ತಿಶಿಲ್ಪಗಳು :

ಮೂರ್ತಿ ಶಿಲ್ಪ	-	ವಿಷ್ಣು
ಭಂಗಿ	-	ಸಮಭಂಗಿ

ಸ್ಥಳ - ಕಲಘಟಗಿ ತಾಲೂಕಿನ ಕಾಮಧೇನು ಗ್ರಾಮದ ಕಲಿದೇವಸ್ವಾಮಿ ದೇವಾಲಯದ ಎಡಬದಿಯ ಕೋಷ್ಠದಲ್ಲಿ

ಕಾಲ - ಕ್ರಿ.ಶ.೧೧ನೇ ಶತಮಾನ

ವಿಷ್ಣುವಿನ ಈ ಶಿಲ್ಪವು ಸಮಭಂಗಿಯಲ್ಲಿದ್ದು, ನಾಲ್ಕು ಕೈಗಳಿವೆ. ಮೇಲಿನ ಎಡಗೈ ಮತ್ತು ಬಲಗೈಯಲ್ಲಿರುವ ಆಯುಧಗಳು ಒಡೆದು ಹೋಗಿವೆ. ಬಲಭಾಗದಲ್ಲಿ ಗರುಡನು ಕುಳಿತಿದ್ದು ಕೈಗಳು ಅಂಜಲಿ ಮುದ್ರೆಯಲ್ಲಿವೆ ಮತ್ತು ಇಕ್ಕೆಲಗಳಲ್ಲಿ ತ್ರಿಭಂಗಿಯಲ್ಲಿರುವ ಅಲಂಕೃತ ಸ್ತ್ರೀಯರ ಚಿಕಣಿ ಶಿಲ್ಪಗಳಿವೆ. ಸುತ್ತಲಿನ ತೋರಣದ ಅರ್ಧಭಾಗವು ಒಡೆದು ಹೋಗಿದೆ. ಶಿಲ್ಪದ ತಲೆಯ ಮೇಲೆ ಕುಸುರಿನ ಕೆಲಸದಿಂದ ಮಾಡಿದ ಕಿರೀಟ, ಕಿವಿಯಲ್ಲಿ ಕರ್ಣಕುಂಡಲ, ಕೊರಳಲ್ಲಿ ಕಂಠಹಾರ, ಯಜ್ಞೋಪವೀತ, ತೋಳ್ಬಂಧಿ, ಕಾಲಲ್ಲಿ ಕಾಲ್ಗಡಗವನ್ನು ಧರಿಸಿದ್ದಾನೆ..

ಮೂರ್ತಿ ಶಿಲ್ಪ - ಮಹಿಷ ಮರ್ದಿನಿ

ಭಂಗಿ - ತ್ರಿಭಂಗಿ

ಸ್ಥಳ - ಕಲಘಟಗಿ ತಾಲೂಕಿನ ಕಾಮಧೇನು ಗ್ರಾಮದ ಕಲಿದೇವಸ್ವಾಮಿ ದೇವಾಲಯದ ಎಡಬದಿಯ ಕೋಷ್ಠದಲ್ಲಿ

ಕಾಲ - ಕ್ರಿ.ಶ.೧೧ನೇ ಶತಮಾನ

ತ್ರಿಭಂಗಿಯಲ್ಲಿರುವ ಮಹಿಷಮರ್ಧಿನಿಯ ಶಿಲ್ಪವು ಕಿರೀಟಾಧಾರಿಣಿಯಾಗಿದ್ದು ಕೊರಳಲ್ಲಿ ಹಾರ, ಕೈಗಳಲ್ಲಿ ಮತ್ತು ಕಾಲುಗಳಲ್ಲಿ ಕಾಲ್ಗಡಗ ಧರಿಸಿದ್ದಾಳೆ. ಎಂಟು ಕೈಗಳನ್ನು ಹೊಂದಿದ್ದು ಬಲಗೈಯಲ್ಲಿ ಮೇಲಿನಿಂದ ಕ್ರಮವಾಗಿ ತ್ರಿಶೂಲ, ಚಕ್ರ, ರುಂಡ, ನಾಲ್ಕನೆಯ ಕೈ ಒಡೆದಿದೆ. ಎಡಗೈಯಲ್ಲಿ ಮೇಲಿನಿಂದ ಕ್ರಮವಾಗಿ ಗುರಾಣಿ, ಶಂಖ, ಪದ್ಮ, ಮಹಿಷನ ರುಂಡವನ್ನು ಹತ್ತಿಕ್ಕಿ ಹಿಡಿದ್ದಾಳೆ. ಕೆಳಭಾಗದಲ್ಲಿ ಬಲಗಡೆ ಸಿಂಹವು ಕೋಣದ ಮೇಲೆ ದಾಳಿ ಮಾಡುತ್ತಿರುವಂತೆ ಮತ್ತು ಮುಗ್ಗರಿಸಿದೆ. ಮೇಲೆ ಮಹಿಷನು ಕೋಣದಿಂದ ಎದ್ದು ಬರುವಂತೆ ಅಲಂಕಾರಿಕವಾಗಿ ಚಿತ್ರಿಸಲಾಗಿದೆ. ಮಧ್ಯದಲ್ಲಿ ಕೀರ್ತಿಮುಖದ ಅಲಂಕರಣೆ ಇದೆ.

ಮೂರ್ತಿ ಶಿಲ್ಪ - ನರಸಿಂಹ

ಭಂಗಿ - ಕುಳಿತ ಭಂಗಿ

ಸ್ಥಳ - ಗದಗ ಜಿಲ್ಲೆಯ ಕುರ್ತಕೋಟಿ ಗ್ರಾಮದ ನರಸಿಂಹ ದೇವಾಲಯದ ಗರ್ಭಗೃಹದಲ್ಲಿ

ಕಾಲ - ಕ್ರಿ.ಶ.೧೧ನೇ ಶತಮಾನ

ತುದಿಗಾಲಿನ ಮೇಲೆ ಕುಳಿತಂತಿರುವ ನರಸಿಂಹನ ಮೂರ್ತಿಯು ಬಹಳ ಉಗ್ರವಾಗಿದೆ. ಇದು ತಲೆಯ ಮೇಲೆ ಕಿರೀಟವನ್ನು ಧರಿಸಿದ್ದು, ತೋಳ್ಬಂಧಿ, ಕೈಗಳಲ್ಲಿ ಕೈಗಡಗ, ಕಾಲುಗಳಲ್ಲಿ ಕಾಲ್ಗಡವನ್ನು ಹೊಂದಿದ್ದು, ತೊಡೆಯ ಮೇಲೆ

ಹಿರಣ್ಯಕಷ್ಯಪುವನ್ನು ಮಲಗಿಸಿಕೊಂಡು ಎರಡು ಕೈಗಳಿಂದಲೂ ಆತನ ಉದರವನ್ನು ಸೀಳಿದ್ದಾನೆ. ಕರುಳುಗಳು ಹೊರಗೆ ಬಂದ ದೃಶ್ಯ ಮನಮೋಹಕವಾಗಿದೆ. ಈ ಶಿಲ್ಪವು ಆರು ಕೈಗಳನ್ನು ಹೊಂದಿದ್ದು, ಬಲಗೈಯಲ್ಲಿ ಮೇಲಿಂದ ಕ್ರಮವಾಗಿ ಚಕ್ರ, ಕತ್ತಿ, ಎಡಗೈಯಲ್ಲಿ ಶಂಖ ಮತ್ತೊಂದು ಕೈ ಒಡೆದಿದೆ. ಕೆಳಗಿನ ಎಡ ಮತ್ತು ಬಲಗೈಯಿಂದ ಉದರವನ್ನು ಸೀಳುತ್ತಿದ್ದಾನೆ. ಈ ಶಿಲ್ಪವು ಸುತ್ತಲೂ ತೋರಣವನ್ನು ಹೊಂದಿದ್ದು ತೋರಣದ ಮೇಲ್ಭಾಗವು ಒಡೆದು ಹೋಗಿದೆ.

ಗಜಲಕ್ಷ್ಮಿ :

ಗಜಲಕ್ಷ್ಮೀ ಅನುಗ್ರಹ ದೇವತೆ. ಈಕೆಯನ್ನು ಮಂಗಲ ಸೂಚಕವಾಗಿ ಮೂರ್ತಿಶಿಲ್ಪದಲ್ಲಿ ತೋರಿಸಲಾಗುತ್ತದೆ. ಮೂರನೆಯ ಸೋಮೇಶ್ವರನ ಕಾಲದ ಬಹುತೇಕ ದೇವಾಲಯಗಳಲ್ಲಿನ ಗರ್ಭಗೃಹ, ಅಂತರಾಳ, ನವರಂಗದ ದ್ವಾರಗಳ ಲಲಾಟಬಿಂಬದಲ್ಲಿ ಈಕೆಯನ್ನು ಚಿತ್ರಿಸಲಾಗಿದೆ. ಉದಾಹರಣೆಗಾಗಿ ಲಕ್ಷ್ಮೇಶ್ವರದ ಸೋಮನಾಥ, ಕುಕನೂರಿನ ಗಣೇಶ, ಇಂಗಳೇಶ್ವರದ ಕಲ್ಮೇಶ್ವರ ದೇವಾಲಯದಲ್ಲಿ ಕಾಣಬಹುದು.

ಸಪ್ತಮಾತೃಕೆಯರು :

''ಸುಪ್ರಭೇದಾಗಮ''ದ ಪ್ರಕಾರ ಏಳು ಮಾತೃಕೆಯರನ್ನು ಬ್ರಹ್ಮನು ನಿರ್ರಿತನನ್ನು ಕೊಲ್ಲಲು ಸೃಷ್ಟಿಸಿದ.[೨೫] ಇವರು ಬ್ರಹ್ಮ, ಶಿವ, ವಿಷ್ಣು, ವರಾಹ, ಯಮ, ಕಾರ್ತಿಕೇಯ ಹಾಗೂ ಇಂದ್ರ ದೇವತೆಗಳ ಹೆಂಡಂದಿರು. ಈ ಏಳು ಮಾತೃಕೆಯರ ಜೊತೆ ಚಾಮುಂಡಿಯನ್ನು ಸೇರಿಸಿ ಅಷ್ಟಮಾತೃಕೆಯರೆಂದು ಕರೆಯಲಾಗುತ್ತದೆ. ಇವರನ್ನು ಮಾತೃ ದೇವತೆಯರೆಂದೂ ಕರೆಯಲಾಗುತ್ತದೆ. ಪ್ರಧಾನ ದೇವತೆಗಳ ಶಿಲ್ಪ ಲಕ್ಷಣಗಳನ್ನು ಸಪ್ತಮಾತೃಕೆಯರಲ್ಲಿಯೂ ತೋರಿಸುವುದರಿಂದ ಅವರನ್ನು ವೈಯಕ್ತಿಕವಾಗಿ ಗುರುತಿಸುವುದು ಸಾಧ್ಯವಾಗುತ್ತದೆ. ಇಂತಹ ಮೂರ್ತಿಶಿಲ್ಪಗಳು ಅಸುಂಡಿಯ ಕಲಿದೇವ ಸ್ವಾಮಿಯ ನವರಂಗದಲ್ಲಿದೆ. ಕಾಮಧೇನುವಿನ ಎಡಭಾಗದ ಕೋಷ್ಠದಲ್ಲಿಯೂ ಸಹ ಇಂತಹ ಮೂರ್ತಿಶಿಲ್ಪಗಳು ಕಂಡುಬರುತ್ತವೆ.

ಅಡಿ ಟಿಪ್ಪಣಿಗಳು :

೧. ತಿಪ್ಪೇರುದ್ರಸ್ವಾಮಿ, ಎಚ್., *ಕರ್ನಾಟಕದ ಸಂಸ್ಕೃತಿ ಸಮೀಕ್ಷೆ*, ಪು. ೨೬೯.

೨. ಎಸ್.ಆಯ್.ಆಯ್.,ಸಂಪುಟ- XV, ನಂ. ೪೫, ಹಂದರಗಲ್, ಕ.ಚಾ.ಎರಡನೆಯ ಜಗದೇಕಮಲ್ಲ.

೩. ಎಸ್.ಆಯ್.ಆಯ್.,ಸಂಪುಟ- XVIII, ನಂ.೧೧೦, ನಿಡೋಣಿ, ಕ್ರಿ.ಶ. ೧೧೧೫.

೪. ಗೋಪಾಲರಾವ್, ಎಚ್.ಎಸ್., *ಕಲ್ಯಾಣದ ಚಾಲುಕ್ಯರ ದೇವಾಲಯಗಳು ಒಂದು ಸಾಂಸ್ಕೃತಿಕ ಅಧ್ಯಯನ*, ಪು. ೧೩೫.

೫. ಚಿದಾನಂದ ಮೂರ್ತಿ, ಎಂ., *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ*, ಪು.೧೭೭.

೬. ಎಸ್.ಆಯ್.ಆಯ್., ಸಂಪುಟ-XV, ನಂ.೧೨, ಇಂಗಳೇಶ್ವರ, ಕ್ರಿ.ಶ.೧೧೨೮, ನವ್ಹೆಂಬರ್, ೮.

೭. ಗಣೇಶ, ಕೆ. ಆರ್(ಸಂ)., *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೫*, ನಂ.೩೩೧, ರಾಮದುರ್ಗ, ಕ್ರಿ.ಶ. ೧೧೩೪, ಜುಲೈ, ೨೩.

೮. ಎಸ್. ಆಯ್.ಆಯ್., ಸಂಪುಟ-XVIII, ನಂ.೧೦೬, ನಾಡ, ಕ್ರಿ.ಶ.೧೧೩೪, ಆಕ್ಟೋಬರ್, ೨೫.

೯. ಉಪಾಧ್ಯ,ಜಿ.ಎನ್(ಸಂ)., *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೬*, ನಂ.೧೩೭, ಔರಾದ್, ಕ್ರಿ.ಶ.೧೧೩೫, ಮಾರ್ಚ್, ೧೧.

೧೦. ದೇವರ ಕೊಂಡಾರೆಡ್ಡಿ(ಸಂ)., *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೩*, ನಂ.೩೮, ಕುಕನೂರು, ಕ್ರಿ.ಶ.೧೧೩೨, ಮಾರ್ಚ್, ೩.

೧೧. ಗಣೇಶ,ಕೆ.ಆರ್(ಸಂ)., *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೫*, ನಂ.೨೭೬, ಕರಕಾಂತಪುರ, ಕ್ರಿ.ಶ.೧೧೩೨, ಮಾರ್ಚ್, ೨೩.

೧೨. ಉಪಾಧ್ಯ,ಜಿ.ಎನ್(ಸಂ)., *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೬*, ಏರಿಗೆ, ನಂ.೬೩, ಕ್ರಿ.ಶ. ೧೧೩೮, ಸೆಪ್ಟಂಬರ್, ೧.

೧೩. ಗಣೇಶ,ಕೆ.ಆರ್(ಸಂ)., *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೫*, ನಂ.೩೩೧, ರಾಮದುರ್ಗ, ಕ್ರಿ.ಶ. ೧೧೩೪, ಜುಲೈ, ೨೩.

೧೪. ಉಪಾಧ್ಯ,ಜಿ.ಎನ್(ಸಂ)., *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೬*, ನಂ.೬೨, ಏರಿಗೆ, ಕ್ರಿ.ಶ.೧೧೩೫, ಜುಲೈ, ೨೩.

೧೫. ಗಣೇಶ,ಕೆ.ಎರ್(ಸಂ)., *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೫*, ನಂ.೫೦೩, ಗಂಗಾಪುರಂ, ಕ್ರಿ.ಶ. ೧೧೩೪, ಜೂನ್, ೮.

೧೬. ಎಸ್.ಆಯ್.ಆಯ್., ಸಂಪುಟ-XV, ನಂ.೧೨, ಇಂಗಳೇಶ್ವರ, ಕ್ರಿ.ಶ. ೧೧೨೮, ನವ್ಹೆಂಬರ್, ೮.

೧೭. ಎಸ್.ಆಯ್.ಆಯ್., ಸಂಪುಟ-XX, ನಂ.೧೦೧, ಕಾಮಧೇನು, ಕ್ರಿ.ಶ.೧೧೨೯, ಮಾರ್ಚ್, ೨೩.

೧೮. ಗಣೇಶ,ಕೆ.ಆರ್. (ಸಂ)., *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೫*, ನಂ.೩೭೩, ಪೆದ್ದಚೆಪ್ಪಲಿ, ಕ್ರಿ.ಶ.೧೧೩೫, ಜನೇವರಿ, ೧೬.

೧೯. ಉಪಾಧ್ಯ, ಜಿ.ಎನ್(ಸಂ)., *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ* -೬, ನಂ.೧೫, ನಾರಂಗವಾಡಿ, ಕ್ರಿ.ಶ. ೧೧೨೯, ಅಕ್ಟೋಬರ್, ೨೯.

೨೦. ಗೋಪಾಲರಾವ್, ಎಚ್.ಎಸ್., *ಕಲ್ಯಾಣದ ಚಾಲುಕ್ಯರ ದೇವಾಲಯಗಳು ಒಂದು ಸಾಂಸ್ಕೃತಿಕ ಅಧ್ಯಯನ*, ಪು.೧೩೩.

೨೧. ಗೋಗಿ, ಹನುಮಾಕ್ಷಿ., (ಸಂ.)., *ಸುರಪುರ ತಾಲೂಕಿನ ಶಾಸನಗಳು*, ನಂ.೨೨, ಕಕ್ಕೇರಿ, ಕ್ರಿ.ಶ.೧೧೨೭, ಮಾರ್ಚ್, ೨೧.

೨೨. ದೇವರ ಕೊಂಡಾರೆಡ್ಡಿ., *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ* -೭, ನಂ.೭, ನವಿಲೆ, ಕ್ರಿ.ಶ.೧೧೨೮, ಮಾರ್ಚ್, ೩.

೨೩. ಎಸ್.ಆಯ್.ಆಯ್., ಸಂಪುಟ - XV, ನಂ.೧೨, ಇಂಗಳೇಶ್ವರ, ಕ್ರಿ.ಶ. ೧೧೨೮, ನವ್ಹೆಂಬರ್, ೮.

೨೪. ಗೋಪಾಲರಾವ್, ಎಚ್.ಎಸ್., *ಕಲ್ಯಾಣದ ಚಾಲುಕ್ಯರ ದೇವಾಲಯಗಳು ಒಂದು ಸಾಂಸ್ಕೃತಿಕ ಅಧ್ಯಯನ*, ಪು. ೧೩೪.

೨೫. ದೇವರಕೊಂಡಾರೆಡ್ಡಿ (ಸಂ)., *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ* -೩, ನಂ.೩೮, ಕುಕನೂರು, ಕ್ರಿ.ಶ. ೧೧೩೨, ಮಾರ್ಚ್, ೩.

೨೬. ಉಪಾಧ್ಯ, ಜಿ.ಎನ್ (ಸಂ)., *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ* -೬, ನಂ.೧೫, ನಾರಂಗವಾಡಿ, ಕ್ರಿ.ಶ. ೧೧೨೯, ಅಕ್ಟೋಬರ್, ೨೯.

೨೭. ಗೋಪಾಲ್‌ರಾವ್, ಎಚ್.ಎಸ್., *ಕಲ್ಯಾಣದ ಚಾಲುಕ್ಯರ ದೇವಾಲಯಗಳು ಒಂದು ಸಾಂಸ್ಕೃತಿಕ ಅಧ್ಯಯನ*, ಪು.೧೩೫.

೨೮. ಅದೇ, ಪು.೪೪.

೨೯. ಅದೇ, ಪು.೧೩೫.

೩೦. ಗೋಗಿ, ಹನುಮಾಕ್ಷಿ, (ಸಂ.)., *ಸುರಪುರ ತಾಲೂಕಿನ ಶಾಸನಗಳು*,, ನಂ. ೬೭, ಮುದನೂರು, ಕ್ರಿ.ಶ. ೧೧೨೯, ಡಿಸೆಂಬರ್, ೨೪.

೩೧. ಉಪಾಧ್ಯ, ಜಿ.ಎನ್(ಸಂ)., *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ* -೬, ನಂ.೭೪, ಕರಾಡಖೇಡ, ಕ್ರಿ.ಶ. ೧೧೩೩, ಆಗಸ್ಟ್, ೨.

೩೨. ಎ.ಕ., ಸಂಪುಟ-V, ಬೇಲೂರ, ನಂ.೧೨೪, ಕ್ರಿ.ಶ .೧೧೩೩.

೩೩. ಎಸ್.ಆಯ್.ಆಯ್., ಸಂಪುಟ- XV, ನಂ.೧೨, ಇಂಗಳೇಶ್ವರ, ಕ್ರಿ.ಶ. ೧೧೨೮, ನವ್ಹೆಂಬರ್, ೮.

೩೪. ಕೆ.ಆಯ್., Vol. I, ನಂ. ೨೦, ತಿಳವಳ್ಳಿ, ಕ್ರಿ. ಶ. ೧೧೩೧, ಅಕ್ಟೋಬರ್, ೪.

೩೫. ದೇವರಕೊಂಡಾರೆಡ್ಡಿ (ಸಂ)., *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ* -೩, ನಂ. ೩೮, ಕುಕನೂರು, ಕ್ರಿ.ಶ. ೧೧೩೨, ಮಾರ್ಚ್, ೩.

೩೬. ಉಪಾಧ್ಯ, ಜಿ.ಎನ್(ಸಂ)., *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ* -೬, ನಂ.೧೩೭, ಔರಾದ, ಕ್ರಿ.ಶ. ೧೧೩೫, ಮಾರ್ಚ್, ೧೧.

೩೭. ಎಸ್.ಆಯ್.ಆಯ್., ಸಂಪುಟ- XV, ನಂ. ೧೬, ಮದನಬಾವಿ, ಕ್ರಿ.ಶ. ೧೧೩೮, ಜನೇವರಿ, ೨೭.

೩೮. ಉಪಾಧ್ಯ, ಜಿ.ಎನ್ (ಸಂ)., *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೬*, ನಂ.೧೫, ನಾರಂಗವಾಡಿ, ಕ್ರಿ.ಶ.೧೧೨೯, ಅಕ್ಟೋಬರ, ೨೯.

೩೯. ಗೋಪಾಲರಾವ್, ಎಚ್.ಎಸ್., *ಕಲ್ಯಾಣದ ಚಾಲುಕ್ಯರ ದೇವಾಲಯಗಳು ಒಂದು ಸಾಂಸ್ಕೃತಿಕ ಅಧ್ಯಯನ*, ಪು.೧೪೦.

೪೦. ಗೋಗಿ, ಹನುಮಾಕ್ಷಿ., (ಸಂ.)., *ಸುರಪುರ ತಾಲೂಕಿನ ಶಾಸನಗಳು*, ನಂ.೬೭, ಮುದನೂರು, ಕ್ರಿ.ಶ.೧೧೨೯, ಡಿಸೆಂಬರ್, ೨೪.

೪೧. ಗೋಗಿ, ಹನುಮಾಕ್ಷಿ., (ಸಂ.)., *ಸುರಪುರ ತಾಲೂಕಿನ ಶಾಸನಗಳು*, ನಂ. ೬೭, ಏವೂರು, ಕ್ರಿ.ಶ. ೧೧೩೯, ಸೆಪ್ಟಂಬರ್, ೨೪.

೪೨. ಗಣೇಶ, ಕೆ.ಆರ್(ಸಂ)., *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೫*, ನಂ. ೪೧೧, ಸನಿಗರಂ, ಕ್ರಿ.ಶ. ೧೧೨೮.

೪೩. ಎಸ್.ಆಯ್.ಆಯ್., ಸಂಪುಟ- XX, ನಂ. ೧೦೧, ಕಾಮಧೇನು, ಕ್ರಿ.ಶ. ೧೧೨೯, ಮಾರ್ಚ್, ೨೩.

೪೪. ಎಸ್.ಆಯ್.ಆಯ್., ಸಂಪುಟ- XV, ನಂ. ೧೨, ಇಂಗಳೇಶ್ವರ, ಕ್ರಿ.ಶ. ೧೧೨೦, ನವ್ಹೆಂಬರ್, ೮.

೪೫. ಗೋಪಾಲರಾವ್, ಎಚ್.ಎಸ್., *ಕಲ್ಯಾಣದ ಚಾಲುಕ್ಯರ ದೇವಾಲಯಗಳು ಒಂದು ಸಾಂಸ್ಕೃತಿಕ ಅಧ್ಯಯನ*, ಪು.೯೪.

೪೬. ಗಣೇಶ, ಕೆ.ಆರ್(ಸಂ)., *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೫*, ನಂ. ೩೬೨, ಕೋಲಿಮಿಗುಂಡ್ಲ, ಕ್ರಿ.ಶ. ೧೧೩೪, ಡಿಸೆಂಬರ್, ೨೫.

೪೭. ದೇವರಕೊಂಡಾರೆಡ್ಡಿ (ಸಂ)., *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೧*, ನಂ.೬೪, ಸಿಂಧವಾಳ, ಕ್ರಿ.ಶ.೧೧೩೦, ಅಕ್ಟೋಬರ್, ೪.

೪೮. ದೇವರಕೊಂಡಾರೆಡ್ಡಿ(ಸಂ)., *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೧*, ನಂ.೬೪, ಸಿಂಧವಾಳ, ಕ್ರಿ.ಶ.೧೧೩೦, ಅಕ್ಟೋಬರ್, ೪.

೪೯. ದೇವರಕೊಂಡಾರೆಡ್ಡಿ(ಸಂ)., *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೭*, ನಂ.೬, ಮುಕ್ಕುಂದಿ, ಕ್ರಿ.ಶ.೧೧೩೪, ಜುಲೈ, ೨೩.

೫೦. ಉಪಾಧ್ಯ, ಜಿ.ಎನ್(ಸಂ)., *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೬*, ನಂ.೬೨, ಏರಿಗೆ, ಕ್ರಿ.ಶ.೧೧೩೫, ಜುಲೈ, ೨೩.

೫೧. ದೇವರಕೊಂಡಾರೆಡ್ಡಿ(ಸಂ)., *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೨*, ನಂ.೨೬, ಮಾದಿನೂರು, ಕ್ರಿ.ಶ.೧೧೩೬, ಡಿಸೆಂಬರ್, ೧೦.

೫೨. ಗೋಗಿ, ಹನುಮಾಕ್ಷಿ., (ಸಂ.)., *ಕಲಬುರ್ಗಿ ಜಿಲ್ಲೆಯ ಶಾಸನಗಳು*, ನಂ.೩೨, ಸಿರಿವಾಳ, ಕ್ರಿ.ಶ.೧೧೩೭.

೫೩. ಎಸ್.ಆಯ್.ಆಯ್., ಸಂಪುಟ- XV, ನಂ.೧೬, ಮದನಬಾವಿ, ಕ್ರಿ.ಶ.೧೧೩೮, ಜನೇವರಿ, ೨೭.

೫೪. ಗಣೇಶ,ಕೆ.ಆರ್., *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೫*, ನಂ.೨೭೬, ಕರಕಾಂತಪುರ, ಕ್ರಿ.ಶ.೧೧೩೨, ಮಾರ್ಚ್, ೨೩.

೫೫. ಎಸ್.ಆಯ್.ಆಯ್., ಸಂಪುಟ- XX, ನಂ.೧೦೦, ಬಿಜಾಪುರ, ಕ್ರಿ.ಶ. ೧೧೨೯, ಜನೇವರಿ, ೧೭.

೫೬. ಉಪಾಧ್ಯ,ಜಿ.ಎನ್(ಸಂ)., *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೬*, ನಂ. ೧೩೭, ಔರಾದ, ಕ್ರಿ.ಶ. ೧೧೩೫, ಮಾರ್ಚ್, ೧೧.

೫೭. ಗೋಗಿ, ಹನುಮಾಕ್ಷಿ., (ಸಂ.)., *ಕಲಬುರ್ಗಿ ಜಿಲ್ಲೆಯ ಶಾಸನಗಳು*, ನಂ. ೩೨, ಸಿರಿವಾಳ, ಕ್ರಿ.ಶ ೧೧೩೭, ದೇವರಕೊಂಡಾರೆಡ್ಡಿ, *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೨*, ನಂ. ೩೬, ಕುಕನೂರು, ಕ್ರಿ.ಶ. ೧೧೩೨, ಮಾರ್ಚ್ ೩.

೫೮. ಎಸ್.ಆಯ್.ಅಯ್., ಸಂಪುಟ- XVIII ನಂ. ೧೩೮ ಗದಗ ಕ್ರಿ.ಶ ೧೧೩೬, ಮೇ, ೪.

೫೯. ದೇವರಕೊಂಡಾರೆಡ್ಡಿ., *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೨*, ನಂ.೩೮, ಕುಕನೂರು, ಕ್ರಿ.ಶ. ೧೧೩೨, ಮಾರ್ಚ್, ೩.

೬೦. ಅದೇ.

೬೧. ಎಸ್.ಆಯ್.ಆಯ್.,ಸಂಪುಟ- XX, ನಂ. ೯೯, ಲಕ್ಷ್ಮೇಶ್ವರ, ಕ್ರಿ.ಶ. ೧೧೨೮, ಜುಲೈ, ೪.

೬೨. ಎಸ್.ಆಯ್ ಆಯ್.,ಸಂಪುಟ- XX, ನಂ. ೧೦೧, ಕಾಮಧೇನು, ಕ್ರಿ.ಶ ೧೧೨೯, ಮಾರ್ಚ್, ೨೩.

೬೩. ರಿತ್ತಿ ಶ್ರೀನಿವಾಸ, *ಪ್ರಾಚೀನ ಕರ್ನಾಟಕದ ಆಡಳಿತ ಪಾರಿಭಾಷಾಕೋಶ*, ಪು. ೧೫೯.

೬೪. ಗೋಪಾಲ್‌ರಾವ್, ಎಚ್.ಎಸ್., *ಕಲ್ಯಾಣದ ಚಾಲುಕ್ಯರ ದೇವಾಲಯಗಳು ಒಂದು ಸಾಂಸ್ಕೃತಿಕ ಅಧ್ಯಯನ*, ಪು. ೧೦೦.

೬೫. ಉಪಾಧ್ಯ,ಜಿ.ಎನ್(ಸಂ)., *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೬*, ನಂ. ೬೨, ಏರಿಗೆ, ಕ್ರಿ.ಶ. ೧೧೩೫, ಜುಲೈ, ೨೩.

೬೬. ಉಪಾಧ್ಯ, ಜಿ.ಎನ್(ಸಂ)., *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೬*, ನಂ. ೩, ಏರಿಗೆ, ಕ್ರಿ.ಶ. ೧೧೩೮, ಸೆಂಪ್ಟಂಬರ್, ೧.

೬೭. ದೇವರಕೊಂಡಾರೆಡ್ಡಿ (ಸಂ)., *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೭*, ನಂ.೭, ನವಿಲೆ, ಕ್ರಿ.ಶ. ೧೧೨೮, ಮಾರ್ಚ್, ೩.

೬೮. ಉಪಾಧ್ಯ, ಜಿ.ಎನ್(ಸಂ)., ಕ*ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೬*, ನಂ.೧೫, ನಾರಂಗವಾಡಿ, ಕ್ರಿ.ಶ. ೧೧೨೯, ಅಕ್ಟೋಬರ್ ೨೯.

೬೯. ದೇವರಕೊಂಡಾರೆಡ್ಡಿ (ಸಂ)., *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೨*,ಕಲ್ಲೂರ ಕ್ರಿ.ಶ ೧೧೨೯, ಡಿಸೆಂಬರ್ ೨೭.

೭೦. ಕೆ.ಆಯ್ ನಂ. ೧೯ ತಿಳವಳ್ಳಿ ಕ್ರಿ.ಶ ೧೧೩೦, ಸೆಂಪ್ಟಂಬರ್ ೧೪.

೭೧. ದೇವರಕೊಂಡಾರೆಡ್ಡಿ (ಸಂ)., *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೧*, ನಂ. ೬೪ ಸಿಂಧವಾಳ ಕ್ರಿ.ಶ ೧೧೩೦, ಅಕ್ಟೋಬರ್ ೪.

೭೨. ದೇವರಕೊಂಡಾರೆಡ್ಡಿ (ಸಂ)., *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೭*, ನಂ. ೨೭ ಹಿರೇರಾಯಕುಂಪಿ, ಕ್ರಿ.ಶ ೧೧೩೦, ಡಿಸೆಂಬರ್ ೨೫.

೭೩. ಉಪಾಧ್ಯ ಜಿ.ಆರ್ (ಸಂ)., *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೬*, ನಂ. ೭೪ ಕರಾಡಖೇಡ ಕ್ರಿ.ಶ ೧೧೩೩, ಡಿಸೆಂಬರ್ ೨೩.

೭೪. ಗಣೇಶ ಕೆ.ಆರ್ (ಸಂ)., *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೫*, ನಂ. ೩೦೧ ಪೆದ್ದತುಂಬಳಂ ಕ್ರಿ.ಶ ೧೧೩೩, ಡಿಸೆಂಬರ್ ೨೩.

೭೫. ಗಣೇಶ ಕೆ.ಆರ್ (ಸಂ)., *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೫*, ನಂ. ೩೩೧ ರಾಮದುರ್ಗ ಕ್ರಿ.ಶ ೧೧೩೪, ಜುಲೈ ೨೩.

೭೬. ದೇವರಕೊಂಡಾರೆಡ್ಡಿ (ಸಂ)., *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೭*, ನಂ. ೬ ಮುಕ್ಕುಂದಿ ಕ್ರಿ.ಶ ೧೧೩೪, ಜುಲೈ ೨೩.

೭೭. ಎಸ್.ಆಯ್.ಆಯ್ ., ನಂ. ೧೦೬, ನಾಡ ಕ್ರಿ.ಶ ೧೧೩೪, ಅಕ್ಟೋಬರ್, ೨೮.

೭೮. ಗೋಗಿ, ಹನುಮಾಕ್ಷಿ., (ಸಂ.)., *ಕಲಬುರ್ಗಿ ಜಿಲ್ಲೆಯ ಶಾಸನಗಳು*, ನಂ.೩೨, ಸಿರಿವಾಳ, ಕ್ರಿ.ಶ. ೧೧೩೭.

೭೯. ಗೋಗಿ, ಹನುಮಾಕ್ಷಿ., (ಸಂ.)., *ಕಲಬುರ್ಗಿ ಜಿಲ್ಲೆಯ ಶಾಸನಗಳು*, ನಂ. ೧೭, ಸೇಡಂ, ಕ್ರಿ.ಶ. ೧೧೩೭.

೮೦. ಎಸ್.ಆಯ್.ಆಯ್.ಸಂಪುಟ- XVIII., ನಂ.೯೯, ಬಂಕಾಪುರ, ಕ್ರಿ.ಶ.೧೧೯೩.

೮೧. ಎಲಿಗಾರ ಚನ್ನಕ್ಕ, *ಬಂಕಾಪುರ ಶೋಧನ*, ಧಾರವಾಡ, ಪು. ೧೦೧.

೮೨. Narasimhamurthy A.V., *The Coins of Karnataka*, p. 130.

೮೩. ಎಲಿಗಾರ ಚನ್ನಕ್ಕ, *ಬಂಕಾಪುರ ಶೋಧನ*, ಧಾರವಾಡ, ಪು. ೧೦೧.

೮೪. ಗೋಪಿನಾಥರಾವ್ ಟಿ.ಎ, ಎಲಿಮೆಂಟ್ಸ್ ಆಫ್ ಹಿಂದೂ ಆಯಕೆನೋಗ್ರಾಫಿ ಸಂಪುಟ ಭಾಗ-೨ ಭಾಗ-೧ ಪು.೨೩

೮೫. ಅದೇ.

ಅಧ್ಯಾಯ - ಹತ್ತು Chapter - 10
ಉಪಸಂಹಾರ Conclusion

ಪ್ರಾಚೀನ ಮತ್ತು ಮಧ್ಯಕಾಲೀನ ಕರ್ನಾಟಕದ ಅತ್ಯಂತ ಪ್ರಸಿದ್ಧ ಹಾಗೂ ಪ್ರಭಾವಶಾಲಿ ಅರಸುಮನೆತನಗಳಲ್ಲಿ ಕಲ್ಯಾಣ ಚಾಲುಕ್ಯ ಮನೆತನವೂ ಒಂದು. ಈ ವಂಶದ ಅನೇಕ ಅರಸರುಗಳು ಕರ್ನಾಟಕದಲ್ಲಿ ಆಳ್ವಿಕೆ ನಡೆಸಿ ತಮ್ಮ ಸಾಮರ್ಥ್ಯವನ್ನು ಮೆರೆದಿದ್ದಾರೆ. ಅವರಲ್ಲಿ ಮೂರನೆಯ ಸೋಮೇಶ್ವರನೂ ಒಬ್ಬನು. ಇವನು ಅಂದಿನ ಪ್ರಬಲ ವಿರೋಧಿ ಶಕ್ತಿಗಳ ದಾಳಿಯನ್ನು ಸಮರ್ಥವಾಗಿ ಎದುರಿಸಿ ನಾಡಿನ ಸಂಸ್ಕೃತಿಗೆ, ಸಾಹಿತ್ಯ ಕ್ಷೇತ್ರಕ್ಕೆ ಸಲ್ಲಿಸಿದ ಕಾಣಿಕೆ ಅಪೂರ್ವವಾದುದು. ಮೂರನೆಯ ಸೋಮೇಶ್ವರನನ್ನು ಕುರಿತು ಸ್ವತಂತ್ರವಾಗಿ ಇದುವರೆಗೂ ಯಾರೂ ಸಂಶೋಧನೆಯನ್ನು ಕೈಕೊಂಡಿರಲಿಲ್ಲ. ಅದರಲ್ಲೂ ಅಪ್ರಧಾನ ಅರಸನೆಂಬ ಉಪೇಕ್ಷೆಗೆ ಗುರಿಯಾದ ಈತನ ಚರಿತ್ರೆ ಇತಿಹಾಸದಲ್ಲಿ ಸ್ಥಾನ ಪಡೆದದ್ದು ತೀರ ಕ್ವಚಿತ್ತಾಗಿ. ಹೀಗಾಗಿ ಇಲ್ಲಿ ಇವನನ್ನೇ ಪ್ರಧಾನವಾಗಿ ಸಂಶೋಧನೆಗೆ ಆರಿಸಿಕೊಂಡು ಉಪಲಬ್ಧವಾದ ಎಲ್ಲ ಸಾಧನ ಸಾಮಗ್ರಿಗಳನ್ನು ಬಳಸಿಕೊಂಡು, ಸಾಧ್ಯವಾದಷ್ಟು ಸಮಗ್ರವಾಗಿ ಅವನ ಜೀವನ ಚರಿತ್ರೆಯನ್ನು ನೀಡಲಾಗಿದೆ. ಅದರೊಂದಿಗೆ ಅವನ ಆಳ್ವಿಕೆಯ ಕಾಲದ ಆಡಳಿತ ವಿಭಾಗಗಳು, ಸಾಮಂತರು, ಆರ್ಥಿಕ ಪರಿಸ್ಥಿತಿ, ಸಾಮಾಜಿಕ ಪದ್ಧತಿ, ಶಿಕ್ಷಣ ಮತ್ತು ಸಾಹಿತ್ಯ, ಧಾರ್ಮಿಕ ಪರಿಸ್ಥಿತಿ, ದೇವಾಲಯ ಮುಂತಾದ ವಿಷಯಗಳನ್ನು ಇಲ್ಲಿ ಪರಿಶೀಲಿಸಲಾಗಿದೆ.

ಸೋಮೇಶ್ವರನ ಪ್ರಾರಂಭಿಕ ಜೀವನದ ಬಗ್ಗೆ ಅನೇಕ ಎಡರು ತೊಡರುಗಳಿವೆ. ಅದರಲ್ಲೂ ಈತನ ಜನನವನ್ನು ಸ್ಪಷ್ಟವಾಗಿ ತಿಳಿಸುವ ಯಾವುದೇ ಶಾಸನವಾಗಲೀ, ಸಾಹಿತ್ಯಕೃತಿಯಾಗಲೀ ಲಭ್ಯವಾಗದಿರುವುದು ಒಂದು ವಿಷಾದಕರ ಸಂಗತಿ. ಹೀಗಾಗಿ ಬಿ.ಆರ್.ಗೋಪಾಲ ರವರ ಬಾಲ್ಕಿ ಶಾಸನವನ್ನು ಆಧಾರವಾಗಿಟ್ಟುಕೊಂಡು ಈತನು ಕ್ರಿ.ಶ. ೧೦೭೯ ಅಥವಾ ಕ್ರಿ.ಶ. ೧೦೭೪ ರಲ್ಲಿ ಜನಿಸಿರಬಹುದೆಂದು ಊಹಿಸಲಾಗಿದೆ. ಅಲ್ಲದೇ ಕ್ರಿ.ಶ. ೧೦೮೩ ರ ಸವಡಿ ಶಾಸನ ದೊರೆತ ನಂತರ ಸುಮಾರು ೨೦ ವರ್ಷಗಳ ಬಳಿಕ ಕ್ರಿ.ಶ. ೧೧೦೬ ರ ವೇಮುಲವಾಡ ಶಾಸನ ದೊರೆಯುವುದು. ಹೀಗಾಗಿ ಈ ೨೦ ವರ್ಷಗಳಲ್ಲಿ ಸೋಮೇಶ್ವರನ ಆಡಳಿತದ ಬಗೆಗಾಗಲೀ ಆತನ ಇತರ ಸಾಧನೆಗಳ ಬಗೆಗಾಗಲೀ ತಿಳಿದು ಬರುವುದಿಲ್ಲ. ಆದ್ದರಿಂದ ಈ ನಿಟ್ಟಿನಲ್ಲಿ ಕಾಲಗರ್ಭದಲ್ಲಿ ಹುದುಗಿರುವ ಹೊಸ ಶಾಸನಗಳು ದೊರೆತರೆ ಮಾತ್ರ ಅವನ ಪ್ರಾರಂಭಿಕ ಜೀವನದ ಸ್ಪಷ್ಟವಾದ ಚಿತ್ರಣವನ್ನು ನೀಡಲು ಸಾಧ್ಯವಾಗಬಹುದು. ಅಲ್ಲಿಯವರೆಗೆ ಕಾಯಬೇಕಾಗುತ್ತದೆ.

ಮೂರನೆಯ ಸೋಮೇಶ್ವರನ ಬಾಲ್ಯ, ಯುವರಾಜನಾಗಿ ರಾಜನಾಗಿ ಮಾಡಿದ ದಂಡಯಾತ್ರೆಗಳ ಬಗೆಗಿನ ತೊಡಕುಗಳನ್ನು ಸಾಧ್ಯವಾದಷ್ಟು ಇಲ್ಲಿ ಶಾಸನಾಧಾರಗಳ ನೆರವಿನಿಂದ ಬಿಡಿಸಲಾಗಿದೆ. ಆದರೂ ಅವುಗಳ ಬಗೆಗಿನ ಹೆಚ್ಚಿನ ಅಧ್ಯಯನವನ್ನು ಕಡೆಗಣಿಸಲಾಗದು. ವಿಶೇಷವಾಗಿ ಇವನ ವಿಜಯಯಾತ್ರೆಗಳು, ಅವುಗಳ ಕಾಲ, ಯುದ್ಧದ ಸ್ಥಳ,

ಪರಿಣಾಮ ಇವುಗಳ ಕುರಿತು ಶಾಸನಗಳಲ್ಲಿ ಸಾಕಷ್ಟು ಗೊಂದಲಗಳನ್ನು ಕಾಣುತ್ತೇವೆ. ಮುಂದಿನ ವಿದ್ವಾಂಸರು, ಸಂಶೋಧಕರು ಈ ದಿಸೆಯಲ್ಲಿ ಒಂದು ಅಂತಿಮ ರೂಪವನ್ನು ಈ ಅಂಶಗಳಿಗೆ ಸಂಬಂಧಿಸಿದಂತೆ ಒದಗಿಸಿಕೊಡುವುದು ತೀರ ಅವಶ್ಯಕವಿದೆ ಮತ್ತು ಈತನ ರಾಣಿಯರ ವಿಷಯವಾಗಿಯೂ ನಮಗೆ ಹೆಚ್ಚಿನ ಶಾಸನಾಧಾರಗಳು ದೊರೆಯದಿರುವುದು ಒಂದು ವಿಶಾದಕರ ಸಂಗತಿ. ಅಲ್ಲದೆ ಈತನ ಮಕ್ಕಳಾದ ಇಮ್ಮಡಿ ಜಗದೇಕಮಲ್ಲ ಮತ್ತು ಮೂರನೆಯ ತೈಲಪ ಯಾವ ರಾಣಿಯರ ಉದರದಲ್ಲಿ ಜನಿಸಿದರು ಎಂಬ ವಿಷಯವಾಗಿಯೂ ಸ್ಪಷ್ಟವಾದ ಉಲ್ಲೇಖಗಳು ದೊರೆಯುವುದಿಲ್ಲ. ಹೀಗಾಗಿ ಈ ನಿಟ್ಟಿನಲ್ಲಿ ನಮಗೆ ಕಾಲಗರ್ಭದಲ್ಲಿ ಅಡಗಿಹೋದ ಶಾಸನಗಳ ಅವಶ್ಯಕತೆಯಿದೆಂದು ಅನಿಸುತ್ತದೆ.

ಈ ಅಧ್ಯಯನದ ಅವಧಿಯಲ್ಲಿ ಹಲವಾರು ಎಡರು ತೊಡರುಗಳು ಅನುಭವಕ್ಕೆ ಬಂದಿವೆ. ಶಾಸನಗಳಲ್ಲಿ ಉಲ್ಲೇಖಗೊಂಡ ಬಹುತೇಕ ಹಳ್ಳಿಗಳು ಇಂದು ಕಂಡುಬರುವುದಿಲ್ಲ. ಇನ್ನು ಕೆಲವು ಹಳ್ಳಿಗಳ ಹೆಸರುಗಳು ಬದಲಾವಣೆಗೊಂಡಿವೆ. ಹೀಗಾಗಿ ಈತನ ಕಾಲದ ಕೆಲವು ಆಡಳಿತ ವಿಭಾಗಗಳು ಯಾವವು? ಯಾವ ವಿಭಾಗಕ್ಕೆ ಸೇರಿದವು? ಎಂಬುದು ಸ್ಪಷ್ಟವಾಗಿ ತಿಳಿದು ಬರುವುದಿಲ್ಲ. ಹೀಗಾಗಿ ಈ ಬದಲಾವಣೆಗೆ ಪರಿಹಾರ ಹುಡುಕಲು ಸ್ಥಳನಾಮಗಳ ಭಾಷಿಕ ಅಧ್ಯಯನ ಸಹಾಯಕವಾಗುತ್ತದೆ. ಸ್ಥಳನಾಮಗಳು ಇತಿಹಾಸ ರಚನೆಯಲ್ಲಿ ಪ್ರಮುಖವಾದ ಪಾತ್ರ ವಹಿಸಿರುವುದರಿಂದ ಐತಿಹಾಸಿಕ ಹಿನ್ನೆಲೆಯಲ್ಲಿ ಅದು ಒಂದು ಸ್ವತಂತ್ರ ಅಧ್ಯಯನವಾಗಿ ನಿಲ್ಲಬಹುದು. ಮತ್ತು ಈತನ ಆಳ್ವಿಕೆಗೆ ಸಂಬಂಧಿಸಿದಂತೆ ಬೀದರ್, ಬೆಳಗಾವಿ ಮತ್ತು ರಾಜ್ಯದ ಹೊರರಾಜ್ಯ ಬಹಳಷ್ಟು ಭಾಗಗಳಲ್ಲಿ ಇನ್ನು ವ್ಯವಸ್ಥಿತವಾದ ಶಾಸನಗಳ ಪರಿವೀಕ್ಷಣಾ ಕಾರ್ಯ ನಡೆದಿಲ್ಲ. ಈ ಕಾರ್ಯ ನಡೆದರೆ ಈತನ ಇತಿಹಾಸಕ್ಕೆ ಇನ್ನೂ ಹಲವಾರು ಹೊಸ ಅಂಶಗಳು ಸೇರಬಲ್ಲವು.

ಈತನ ಆಡಳಿತಕ್ಕೆ ಸಂಬಂಧಿಸಿದಂತೆ ಹಲವಾರು ವಿಷಯಗಳು ಬೆಳಕು ಕಂಡಿದ್ದರೂ ಇವನ ಕಾಲದಲ್ಲಿ ವಿವಿಧ ಅಧಿಕಾರಿಗಳು ಹೊಂದಿದ್ದ ಅಧಿಕಾರದ ಸ್ವರೂಪ, ವ್ಯಾಪ್ತಿ, ಚಿಕ್ಕ ಹಾಗೂ ದೊಡ್ಡ ಆಡಳಿತ ವಿಭಾಗಗಳ ನಡುವಿನ ಸಂಬಂಧ, ಒಬ್ಬನೇ ವ್ಯಕ್ತಿ ಹಲವಾರು ಖಾತೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಬಗೆಗಿನ ವಿವರಣೆಗಳು ಆಡಳಿತದಲ್ಲಿ ಅವರಿಗಿರುವ ಸ್ವಾತಂತ್ರ್ಯ ಇತ್ಯಾದಿ ವಿಷಯಗಳನ್ನು ಕುರಿತು ಚರ್ಚಿಸಲಾಗಿದ್ದರೂ ಅಲ್ಲಲ್ಲಿ ಕೆಲವೊಂದು ತೊಡಕುಗಳು ಆಧಾರದ ಕೊರತೆಯಿಂದಲೋ, ಪೂರಕ ದಾಖಲೆಗಳ ಅಭಾವದಿಂದಲೋ ಕ್ವಚಿತ್ತಾಗಿ ಉಳಿದುಕೊಂಡಿರುವುದು ಅವು ವಿಸ್ತೃತ ಅಧ್ಯಯನದಿಂದ ಸ್ಪಷ್ಟಗೊಳ್ಳಬೇಕಾಗಿದೆ.

ಆರ್ಥಿಕ ವಿಷಯಗಳಿಗೆ ಸಂಬಂಧಿಸಿದಂತೆ ಇವನ ಕಾಲದ ಶಾಸನಗಳಲ್ಲಿ ಸಾಕಷ್ಟು ವಿವರಗಳು ದೊರೆಯುತ್ತವೆ. ಭೂಮಿ, ಭೂಮಿಯ ಒಡೆತನ, ಕೃಷಿಪದ್ಧತಿ, ವ್ಯಾಪಾರ, ವಾಣಿಜ್ಯ, ಕೈಗಾರಿಕೆಗಳು, ವೃತ್ತಿ ಸಂಘಗಳಿಂದಾಗಿ ಈತನ ಕಾಲ

ಅತ್ಯಂತ ಸುಭಿಕ್ಷವಾಗಿದ್ದಿತು. ವಿವಿಧ ವೃತ್ತಿ ಪ್ರಕಾರದವರು ಇವನ ಸಾಮ್ರಾಜ್ಯದುದ್ದಕ್ಕೂ ವ್ಯಾಪಿಸಿರುವುದನ್ನು ವಾಣಿಜ್ಯ ವ್ಯವಹಾರಗಳ ವಿಭಾಗದಲ್ಲಿ ಪರಿಚಯಿಸಲಾಗಿದೆ. ನೈಸರ್ಗಿಕ ಸಂಪನ್ಮೂಲಗಳಿಂದ ಸಂಪದ್ಭರಿತವಾದ ಈತನ ಕಾಲದಲ್ಲಿ ವ್ಯಾಪಕವಾದ ತೆರಿಗೆ ಪದ್ಧತಿಗಳು ಜಾರಿಯಲ್ಲಿರುವುದು ಸ್ಪಷ್ಟವಾಗುತ್ತದೆ. ತೆರಿಗೆಗಳಾದ ವಡ್ಡರಾವುಳ, ಕುಳ ಮುಂತಾದವುಗಳ ಅರ್ಥ ಸ್ಪಷ್ಟಗೊಳ್ಳಬೇಕಾಗಿದೆ. ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾದ ಈತನ ಕಾಲದ ನಾಣ್ಯ, ತೂಕ, ಅಳತೆಗಳನ್ನು ಇಲ್ಲಿನ ಅಧ್ಯಯನದಲ್ಲಿ ವಿವರಿಸಲಾಗಿದ್ದಾಗ್ಯೂ ಕೆಲವು ಅಳತೆ ನಾಣ್ಯಗಳ ಪೂರ್ಣ ವಿವರಗಳು ಬೆಳಕಿಗೆ ಬರಬೇಕಾಗಿದೆ.

ಸಾಮಾಜಿಕವಾಗಿ, ಧಾರ್ಮಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಈತನ ಕಾಲ ಅಭಿವೃದ್ಧಿ ಹೊಂದಿತ್ತು. ಈತನ ಕಾಲದ ಅಭಿವೃದ್ಧಿಯಲ್ಲಿ ಶ್ರಮಿಕ ವರ್ಗದ ಪಾತ್ರ ಮುಖ್ಯವಾಗಿದ್ದು ಅವರನ್ನು ಗುರುತಿಸಲಾಗಿದೆ. ಸಮಾಜ ವ್ಯವಸ್ಥೆಯಲ್ಲಿ ಸ್ತ್ರೀ ಪುರುಷರು ತಮ್ಮ ಜೀವಿತದ ನೆಲೆ ಕಂಡುಕೊಳ್ಳುವ ವಿವಿಧ ಹಂತಗಳನ್ನು ವಿವರಿಸಲಾಗಿದೆ. ಸಮಾಜದ ಕೆಟ್ಟ ಸಂಪ್ರದಾಯಗಳಾದ ವೇಶ್ಯಾವಾಟಿಕೆ, ಜಾತಿಪದ್ಧತಿ, ಹಬ್ಬ ಹರಿದಿನಗಳನ್ನು ಸಾರ್ವಜನಿಕ ಚಟುವಟಿಕೆ, ನಂಬುಗೆ ವಿಧೇಯತೆ, ಸ್ತ್ರೀ ಆಡಳಿತಗಾರರು, ಸಾಮಾನ್ಯ ವರ್ಗದ ಸ್ತ್ರೀಯರು, ಇವರು ಆಚರಿಸುತ್ತಿದ್ದ ಧರ್ಮ, ನೀಡಿದ ದಾನ ಮತ್ತು ಆಗಿನ ಕಾಲದ ಜನರ ಉಡುಗೆ, ತೊಡುಗೆ, ಮನರಂಜನೆ, ಆಹಾರ ಪಾನೀಯಗಳು ಮುಂತಾದ ವಿಷಯಗಳನ್ನು ಸಂಗ್ರಹಿಸಿ ವಿವೇಚಿಸಲಾಗಿದೆ.


ವಿದ್ಯಾಭ್ಯಾಸ ಕೇಂದ್ರಗಳಾದ ಮಠ, ಅಗ್ರಹಾರ, ಬ್ರಹ್ಮಪುರಿ, ಘಟಿಕಾಸ್ಥಾನಗಳಿಗೆ ಪ್ರಧಾನ ಸ್ಥಾನವನ್ನು ನಮ್ಮ ಇತಿಹಾಸಕಾರರು ನೀಡಿದ್ದಾರೆ. ಹೀಗಾಗಿ ಮೂರನೆಯ ಸೋಮೇಶ್ವರನ ಕಾಲದಲ್ಲಿನ ೫ ಮಠ, ೧೮ ಅಗ್ರಹಾರ, ೨ ಬ್ರಹ್ಮಪುರಿ, ೨ ಘಟಿಕಾಸ್ಥಾನಗಳನ್ನು ಹೊಂದಿದ್ದು, ಈ ವಿದ್ಯಾಭ್ಯಾಸ ಕೇಂದ್ರಗಳಲ್ಲಿ ನಡೆಯುತ್ತಿದ್ದ ಶಿಕ್ಷಣಕ್ರಮ, ವಿದ್ಯಾಭ್ಯಾಸ ಪದ್ಧತಿ, ಅಧ್ಯಯನ ವಿಷಯಗಳು, ವಿದ್ಯಾಭ್ಯಾಸ ಕೇಂದ್ರಗಳಿಗೆ ನೀಡುತ್ತಿದ್ದ ದಾನಗಳು ಮತ್ತು ಉಪಾಧ್ಯಾಯರುಗಳ ಮೇಲೆ ಬೆಳಕು ಚೆಲ್ಲಲಾಗಿದೆ. ಸಾಹಿತ್ಯಕ್ಕೆ ಸಂಬಂಧಿಸಿ ಹೇಳಬೇಕೆಂದರೆ ಹಲವಾರು ಶಾಸನ ಕವಿಗಳ ಉಲ್ಲೇಖಗಳು ಶಾಸನದಲ್ಲಿದ್ದು ಅವುಗಳನ್ನು ಸಂಗ್ರಹಿಸಿ ವಿವೇಚಿಸಲಾಗಿದೆ. ಅವನ ಕಾಲದ ಗದ್ಯ ಸಾಹಿತ್ಯದಲ್ಲಿ ಅವನೇ ಒಬ್ಬ ಶ್ರೇಷ್ಠ ಪಂಡಿತನಾಗಿದ್ದು 'ಮಾನಸೋಲ್ಲಾಸ' ಮತ್ತು 'ವಿಕ್ರಮಾಂಕಾಭ್ಯುದಯ' ಎಂಬ ಕೃತಿಗಳನ್ನು ರಚಿಸಿದ್ದಾನೆ. ಇವುಗಳಲ್ಲದೆ ಅವನ ಕಾಲದ ಕವಿಗಳಾದ ವಿಜ್ಞಾನೇಶ್ವರ, ಬಿಲ್ಹಣ, ನಯಸೇನ ಇವರ ಕುರಿತು ವಿವೇಚಿಸಲಾಗಿದೆ.

ಭಾರತೀಯರ ಬದುಕನ್ನು ರೂಪಿಸಿದ ಪ್ರಬಲ ಶಕ್ತಿಗಳಲ್ಲಿ ಧರ್ಮವೂ ಒಂದು. ಮೂರನೆಯ ಸೋಮೇಶ್ವರನ ಕಾಲದಲ್ಲಿ ಆಚರಣೆಯಲ್ಲಿದ್ದ ಶೈವ, ವೈಷ್ಣವ, ಜೈನ ಧರ್ಮಗಳನ್ನು ಕುರಿತು ಮತ್ತು ಜನರು ಆ ಧರ್ಮಗಳಿಗೆ ನೀಡಿದ ಆದ್ಯತೆ, ಆ ಧರ್ಮಗಳಲ್ಲಿನ ಆಚಾರ-ವಿಚಾರಗಳ ಕುರಿತು ವಿವೇಚಿಸಲಾಗಿದೆಯಾದರೂ ಈ ಧರ್ಮಗಳಲ್ಲಿನ

ಒಳಪಂಗಡಗಳ ಕುರಿತು ಶಾಸನಗಳು ಅಷ್ಟಾಗಿ ಬೆಳಕನ್ನು ಬೀರುವುದಿಲ್ಲ. ಹೀಗಾಗಿ ದೊರೆತ ಆಧಾರಗಳ ಹಿನ್ನೆಲೆಯಲ್ಲಿ ಧಾರ್ಮಿಕ ವ್ಯವಸ್ಥೆಯನ್ನು ವಿವೇಚಿಸಲಾಗಿದೆ.

ಮೂರನೆಯ ಸೋಮೇಶ್ವರನ ಕಾಲದ ದೇವಾಲಯಗಳು ಹಾಗೂ ಶಿಲ್ಪಕಲೆಯ ಪರಿವೀಕ್ಷಣೆ ಸಂಪೂರ್ಣ ನಿರ್ಲಕ್ಷಿತ ವಿಷಯ. ಈತನ ಆಡಳಿತ ವ್ಯಾಪ್ತಿಯಲ್ಲಿನ ಹಳ್ಳಿ ಹಳ್ಳಿಗಳಲ್ಲಿ ಸುಂದರ ವಾಸ್ತುಶೈಲಿಯನ್ನು ಹೊಂದಿದ ದೇವಾಲಯಗಳು ಸಂಪೂರ್ಣ ಹಾಳಾಗಿ ಹೋಗುವ ಸ್ಥಿತಿಯಲ್ಲಿವೆ. ಪೂಜೆ, ಜೀರ್ಣೋದ್ಧಾರಗಳಿಂದ ವಂಚಿತವಾದ ಅವು ಗತವೈಭವದ ಮೂಕ ಸಾಕ್ಷಿಯಾಗಿ ನಿಂತಿವೆ. ಹಳ್ಳಿಗರ ಬಾಯಲ್ಲಿ 'ದೇಗುಲ' ಎಂದು ಕರೆಯಿಸಿಕೊಳ್ಳುವ ಈ ದೇವಾಲಯಗಳ ಹಿಂದಿನ ಹೆಸರು ತಿಳಿಯುವುದಿಲ್ಲ. ಸಧ್ಯಕ್ಕಂತೂ ಆ ದೇವಾಲಯಗಳ ಪರಿವೀಕ್ಷಣೆಗೆ, ಅಧ್ಯಯನಕ್ಕೆ ಈತನ ಆಡಳಿತ ಪ್ರದೇಶ ಒಳಗಾಗಬೇಕಾದುದು ತೀರ ಅವಶ್ಯವಾಗಿದೆ. ನಾಡಿನ ಪ್ರತಿಕೃತಿಗಳಾದ ಸ್ಮಾರಕಗಳು, ವಾಸ್ತುಶಿಲ್ಪ ಮತ್ತು ಕಲೆ, ಸಾಹಿತ್ಯ ಮತ್ತು ಶಾಸನಗಳು ಮರೆಮಾಚಿದ ಹಲವಾರು ವಿಷಯಗಳನ್ನು ತಿಳಿಸಿಕೊಡುವುದರಿಂದ ಅವುಗಳನ್ನು ಸಂರಕ್ಷಿಸಲು ಜಾತಿ, ಬೇಧ, ಅಂತಸ್ತುಗಳನ್ನು ಮರೆತು ಮುಂದಾಗಬೇಕಾಗಿದೆ. ಇವು ನಮ್ಮ ಸಂಸ್ಕೃತಿಯ ಅಮೋಘ ಜ್ಞಾನನಿಧಿ. ಈ ನಿಧಿಯನ್ನು ನಾವು ಸಂರಕ್ಷಿಸಬೇಕು. ಹಾಗೂ ಅಭಿವೃದ್ಧಿಗೊಳಿಸಬೇಕು. ಸದ್ಯ ದೊರೆತಿರುವ ಶಾಸನಗಳಿಂದ ಶೈವ೫೧, ವೈಷ್ಣವ೧೨ ಹಾಗೂ ಜೈನ೫ ದೇವಾಲಯಗಳನ್ನು ಪಟ್ಟಿಮಾಡಿ ಕೊಡಲಾಗಿದೆ ಅದರೊಂದಿಗೆ ಶೈವ ಪಂಡಿತರು, ಜೈನಮುನಿ ಪರಂಪರೆಯ ಕುರಿತು ವಿವೇಚಿಸಲಾಗಿದೆ.


ಒಟ್ಟಿನಲ್ಲಿ ಒಬ್ಬ ದೊರೆಯ ಅಧ್ಯಯನಕ್ಕೆ ಬೇಕಾದ ಸಂಗತಿಗಳನ್ನು ಇಲ್ಲಿ ಒಂದು ವ್ಯವಸ್ಥೆಗೆ ಒಳಪಡಿಸಿ ವಿವೇಚಿಸಲಾಗಿದೆಯಾದರೂ, ಶಾಸನಗಳ ತ್ರುಟಿತತೆ, ಸರಿಯಾಗಿ ಅರ್ಥೈಸಲಾಗದ ಪದಗಳು, ಆಧಾರದ ಕೊರತೆಯನ್ನು ಎದ್ದು ಕಾಣುತ್ತೇವೆ. ಆದರೂ ಪೂರಕ ಆಧಾರಗಳಾದ ಶಾಸನಗಳು ಮತ್ತು ಸಮಕಾಲೀನ ಸಾಹಿತ್ಯಗಳ ಸಹಾಯದಿಂದ ಇತಿಹಾಸದಲ್ಲಿ ಅಷ್ಟಾಗಿ ಸ್ಥಾನವನ್ನು ಪಡೆಯದ ನಿರ್ಲಕ್ಷಿತ ಮೂರನೆಯ ಸೋಮೇಶ್ವರನ ಸ್ಪಷ್ಟವಾದ ಪರಿಚಯವನ್ನು ನೀಡುವಲ್ಲಿ ಯಶಸ್ವಿಯಾಗಿದ್ದೇವೆ ಎಂದು ಮಾತ್ರ ಹೇಳಬಯಸುತ್ತೇನೆ.


Appendix
ಅನುಬಂಧಗಳು

Photography





ಕಲಿದೇವಸ್ವಾಮಿ ದೇವಾಲಯದ ಮುಂಭಾಗ, ಕಾಮಧೇನು



ಕಲಿದೇವಸ್ವಾಮಿ ದೇವಾಲಯದ ಹಿಂಭಾಗದ ಹೊರಭಿತ್ತಿ, ಕಾಮಧೇನು







ಕಲಿದೇವಸ್ವಾಮಿ ದೇವಾಲಯದ ಸಭಾಮಂಟಪದಲ್ಲಿರುವ ಸ್ತಂಭ ಮತ್ತು ಜಾಲಂದ್ರ, ಕಾಮಧೇನು





ಕಲಿದೇವಸ್ವಾಮಿ ದೇವಾಲಯದ ಕೋಷ್ಠಗಳಲ್ಲಿರುವ
ಮಹಿಷಾಸುರಮರ್ಧಿನಿ ಮತ್ತು ನಾರಾಯಣ ಶಿಲ್ಪ, ಕಾಮಧೇನು



ಕಲಿದೇವಸ್ವಾಮಿ ದೇವಾಲಯದ ಸಭಾಮಂಟಪದಲ್ಲಿರುವ ಸ್ತಂಭ, ಸಿದ್ದಾಪುರ



ಕಲಿದೇವಸ್ವಾಮಿ ದೇವಾಲಯದ ಹೊರನೋಟ, ಅಸುಂಡಿ



ಕಲಿದೇವಸ್ವಾಮಿ ದೇವಾಲಯದ
ಕೋಷ್ಠದಲ್ಲಿರುವ ಭೈರವ ಶಿಲ್ಪ, ಅಸುಂಡಿ




ಸೋಮನಾಥ ದೇವಾಲಯದ
ಮುಖಮಂಟಪದಲ್ಲಿರುವ ಸ್ತಂಭ,ಲಕ್ಷ್ಮೇಶ್ವರ




ಸೋಮನಾಥ ದೇವಾಲಯದ
ಕಕ್ಷಾಸನದಲ್ಲಿರುವ ಕಂಬ, ಲಕ್ಷ್ಮೇಶ್ವರ



ಸಿದ್ಧೇಶ್ವರ ದೇವಾಲಯದ
ಸಭಾಮಂಟಪದಲ್ಲಿರುವ ಸ್ತಂಭ, ಹಾವೇರಿ



ನಗರೇಶ್ವರ ದೇವಾಲಯದ
ಸಭಾಮಂಟಪದಲ್ಲಿರುವ ಸ್ತಂಭ,ಬಂಕಾಪುರ




ನಗರೇಶ್ವರ ದೇವಾಲಯದ
ಸಭಾಮಂಟಪದ ಪ್ರವೇಶದ್ವಾರ, ಬಂಕಾಪುರ



ಸೋಮನಾಥ ದೇವಾಲಯ, ಲಕ್ಷ್ಮೇಶ್ವರ




ನಗರೇಶ್ವರ ದೇವಾಲಯದ ಗರ್ಭಗೃಹದ ಭಿತ್ತಿ, ಬಂಕಾಪುರ




ನಗರೇಶ್ವರ ದೇವಾಲಯದ ಸಭಾಮಂಟಪದ ಜಾಲಂದ್ರ, ಬಂಕಾಪುರ




ನಗರೇಶ್ವರ ದೇವಾಲಯದ
ಉತ್ತರ ದಿಕ್ಕಿನ ದ್ವಾರಬಾಗಿಲು, ಬಂಕಾಪುರ




ನಗರೇಶ್ವರ ದೇವಾಲಯದ ಕಕ್ಷಾಸನ, ಬಂಕಾಪುರ




ನಗರೇಶ್ವರ ದೇವಾಲಯದ
ನವರಂಗದಲ್ಲಿರುವ ಕೋಷ್ಠ, ಬಂಕಾಪುರ



ಸಿದ್ಧೇಶ್ವರ ದೇವಾಲಯದ ಹೊರಭಿತ್ತಿ



ಸಿದ್ಧೇಶ್ವರ ದೇವಾಲಯದ
ಸಭಾಮಂಟಪದ ಸ್ತಂಭ ಹಾವೇರಿ



ಸಿದ್ಧೇಶ್ವರ ದೇವಾಲಯದ
ಹೊರಬಿತ್ತಿಯಲ್ಲಿರುವ ಕೋಷ್ಠ, ಹಾವೇರಿ




ಸಿದ್ಧೇಶ್ವರ ದೇವಾಲಯ, ಹಾವೇರಿ




ಸಿದ್ಧೇಶ್ವರ ದೇವಾಲಯದ ಶಿಖರಭಾಗ, ಹಾವೇರಿ



ಸಿದ್ಧೇಶ್ವರ ದೇವಾಲಯದ ಅಧಿಷ್ಠಾನ, ಹಾವೇರಿ



ಸಿದ್ಧೇಶ್ವರ ದೇವಾಲಯದ ಹೊರಭಿತ್ತಿ, ಹಾವೇರಿ



ಸಿದ್ಧೇಶ್ವರ ದೇವಾಲಯದ ಸಭಾಮಂಟಪದಲ್ಲಿರುವ ಮಕರತೋರಣ, ಹಾವೇರಿ



ನಗರೇಶ್ವರ ದೇವಾಲಯದ
ಕಕ್ಷಾಸನದ ಹಿಂಭಾಗದಲ್ಲಿಯ ಶಿಲ್ಪ, ಬಂಕಾಪುರ



ಶಿಥಿಲಗೊಂಡ ನರಸಿಂಹ ದೇವಾಲಯ, ಕುರ್ತಕೋಟಿ



ನರಸಿಂಹ ದೇವಾಲಯದ ಸ್ತಂಭದ ಪೀಠಭಾಗದ
ನರ್ತಿಸುತ್ತಿರುವ ಸ್ತ್ರೀಯರ ಶಿಲ್ಪ, ಕುರ್ತಕೋಟಿ



ನರಸಿಂಹ ದೇವಾಲಯದ
ಗರ್ಭಗೃಹದಲ್ಲಿರುವ ನರಸಿಂಹ,ಕುರ್ತಕೋಟಿ

ಸಂಕ್ಷೇಪಗಳು Abbrevaitions

- ❄ ಎ.ಆರ್.ಆಯ್.ಇ. - ಎನ್ಯುವಲ್ ರಿಪೋರ್ಟ್ಸ್ ಆನ್ ಇಂಡಿಯನ್ ಎಪಿಗ್ರಫಿ
- ❄ ಎ.ಆರ್.ಎಸ್.ಆಯ್.ಇ. - ಎನ್ಯುವಲ್ ರಿಪೋರ್ಟ್ಸ್ ಆನ್ ಸೌತ್ ಇಂಡಿಯನ್ ಎಪಿಗ್ರಫಿ
- ❄ ಎ. ಇ. - ಎಪಿಗ್ರಫಿ ಇಂಡಿಕಾ
- ❄ ಎ.ಕ. - ಎಪಿಗ್ರಫಿ ಕರ್ನಾಟಿಕಾ
- ❄ ಎಸ್.ಆಯ್.ಆಯ್ - ಸೌತ್ ಇಂಡಿಯನ್ ಇನ್ಸ್ಕ್ರಿಪ್ಷನ್ಸ್
- ❄ ಇ.ಆಯ್. - ಇಂಡಿಯನ್ ಎಂಟಿಕ್ವೆರಿ
- ❄ ಜೆ.ಬಿ.ಬಿ.ಆರ್.ಎಸ್. - ಜರ್ನಲ್ ಆಫ್ ಬಾಂಬೆ ಬ್ರ್ಯಾಂಚ್ ಆಫ್ ರಾಯಲ್ ಏಶಿಯಾಟಿಕ್ ಸೊಸೈಟಿ
- ❄ ಕೆ.ಆಯ್. - ಕರ್ನಾಟಕ ಇನ್‌ಸ್ಕ್ರಿಪ್ಷನ್ಸ್
- ❄ ಆಯ್.ಎಫ್.ಎನ್.ಡಿ. - ಇನ್ಸ್‌ಕ್ರಿಪ್ಷನ್ಸ್ ಫ್ರಾಮ್ ನಾಂದೇಡ ಡಿಸ್ಟ್ರಿಕ್ಟ್
- ❄ ಆಯ್.ಎಸ್.ಎನ್.ಡಿ. - ಇನ್ಸ್‌ಕ್ರಿಪ್ಷನ್ಸ್ ಫ್ರಾಮ್ ಸೋಲಾಪುರ ಡಿಸ್ಟ್ರಿಕ್ಟ್
- ❄ ಹೈ.ಆ.ಸಿ. - ಹೈದ್ರಾಬಾದ್ ಆರ್ಕಿಯೋಲಾಜಿಕಲ್ ಸಿರೀಸ್
- ❄ ಎ.ಪಿ.ಜಿ.ಎ.ಎಸ್. - ಆಂಧ್ರಪ್ರದೇಶ ಗೌವರ್ನಮೆಂಟ್ ಆರ್ಕಿಯೋಲಾಜಿಕಲ್ ಸಿರೀಸ್
- ❄ ಎಮ್.ಎ.ಆರ್. - ಮೈಸೂರ ಆರ್ಕಿಯೋಲಾಜಿಕಲ್ ರಿಪೋರ್ಟ್
- ❄ ಡಿ.ಕೆ.ಡಿ. - ಡೈನಾಸ್ಟೀಸ್ ಆಫ್ ಕೆನರೀಸ್ ಡಿಸ್ಟ್ರಿಕ್ಟ್
- ❄ ಯು.ಭಾ.ಸಂ. - ಯುಗಯಾತ್ರಿ ಭಾರತೀಯ ಸಂಸ್ಕೃತಿ
- ❄ ಆಯ್.ಎಚ್.ಸಿ. - ಇಂಡಿಯನ್ ಹಿಸ್ಟೋರಿಕಲ್ ಕ್ವಾರ್ಟರ್ಲಿ
- ❄ ಎಚ್ ಆ್ಯಂಡ್ ಸಿ - ಹಿಸ್ಟೋರಿಕಲ್ ಆ್ಯಂಡ್ ಕಲ್ಚರಲ್ ಸ್ಟಡೀಸ್ ಆಫ್ ದಿ ರಿಲೀಜನ್ ಎರೌಂಡ್ ಬಸವಕಲ್ಯಾಣ: ಬೇಸ್ಡ್ ಆನ್ ಇನ್ಸ್‌ಕ್ರಿಪ್ಷನ್ಸ್.

ಮೂರನೆಯ ಸೋಮೇಶ್ವರನ ಕಾಲದ ಶಾಸನಗಳ ಪಟ್ಟಿ

ಕ್ರ.ಸಂ.	ಗ್ರಾಮ	ತಾಲೂಕು	ಜಿಲ್ಲೆ	ರಾಜ್ಯ	ಶಾಸನವಿರುವ ಸ್ಥಳ	ಕಾಲ	ವಿವರ	ಆಕರ
೧	೨	೩	೪	೫	೬	೭	೮	೯
೧.	ವೇಮುಲವಾಡ	ಸಿರಿಸಿಲ್ಲ	ಕರೀಂನಗರ	ಆಂಧ್ರಪ್ರದೇಶ	ವೇಮುಲವಾಡದ ಭೀಮೇಶ್ವರ ದೇವಾಲಯದ ಮುಂಭಾಗದ ದಲ್ಲಿರುವ ಕಂಬದ ಮೇಲೆ	ಕ್ರಿ.ಶ. ೧೧೦೬	ತ್ರಿಭುವನ ಮಲ್ಲನ ಆಳ್ವಿಕೆಯಲ್ಲಿ ಕುಮಾರ ಸೋಮೇಶ್ವರ ದೇವನು ಅರಿಕೇಶ್ವರ ದೇವರ ಸೇವೆಗೆ ಹಾಗೂ ದೇವರ ಪೂಜೆ ಮಾಡುವ ಪೂಜಾರಿಗೆ ಸಬ್ಬಿ-೧೦೦೦ದ ವೇಣಿಸಾಲೆ-೭೦ರಲ್ಲಿದ್ದ ವೆಱದವೆಂಡದಿ ಎಂಬ ಗ್ರಾಮವನ್ನು ಒಂದು ಹೂವಿನ ತೋಟವನ್ನು ಬಲ್ಲವರಸರ ಭಿನ್ನಹದಂತೆ ದತ್ತಿಯಾಗಿ ನೀಡಿದುದನ್ನು ದಾಖಲಿಸಿದೆ.	ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೫. ನಂ. ೨೯೬
೨.	ಕೋಲನುಪಾಕ	ಭುವನಗಿರಿ	ನಲ್ಗೊಂಡ	ಆಂಧ್ರಪ್ರದೇಶ	ಸೋಮೇಶ್ವರ ದೇವಾಲಯದ ತಳಪಾಯದಲ್ಲಿದೆ	ಕ್ರಿ.ಶ. ೧೧೦೯	ಇದರಲ್ಲಿ ಚಾಲುಕ್ಯರ ವಂಶಾವಳಿಯನ್ನು ಹೇಳಿ ಬಹುಶಃ ರಾಜಕುಮಾರ ಸೋಮೇಶ್ವರನನ್ನು ಗಂಗ ಪೆರ್ಮಾಡಿ ಎಂಬ ಹೆಸರಿನಿಂದ ಕರೆದಿದೆ. ಗುಡಪರ್ವತ, ಶರ್ಕರ ಪರ್ವತ, ಲವಣ ಪರ್ವತ ಮತ್ತು ಗೋಸಹಸ್ರ ಮೊದಲಾದ ಮಹಾದಾನಗಳನ್ನು ತಿಳಿಸಿದೆ. ಅಂತಃಪುರ ವೆರ್ಗಡೆ, ಮಹಾಪ್ರಧಾನ ಕನ್ನಡ ಸಂಧಿವಿಗ್ರಹಿ ದಂಡನಾಯಕನೊಬ್ಬನ (ಹೆಸರು ಹಾಳಾಗಿದೆ) ಉಲ್ಲೇಖವಿದೆ. ಶಾಸನದ ಕೊನೆಯಲ್ಲಿ ಅಪ್ಪೇಶ್ವರ ದೇವರ ಉಲ್ಲೇಖವಿದೆ.	ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೫. ನಂ. ೫೭೦
೩.	ಕೋಲನುಪಾಕ	ಭುವನಗಿರಿ	ನಲ್ಗೊಂಡ	ಆಂಧ್ರಪ್ರದೇಶ	ಕೋಲನುಪಾಕ ಮ್ಯೂಜಿಯಂದಲ್ಲಿರುವ ಕಂಬದ ಮೇಲೆ	ಕ್ರಿ.ಶ. ೧೧೦೯-೧೦	ಚಾಲುಕ್ಯ ದೊರೆ ತ್ರಿಭುವನಮಲ್ಲನ ಆಳ್ವಿಕೆಯಲ್ಲಿ ಅವನ ಆದೇಶದಂತೆ ಮಹಾಪ್ರಧಾನ ಅಂತಃಪುರವೆರ್ಗ್ಗಡೆ ಕಾಳಿಮಯ್ಯ ಮತ್ತು ಅವನ ಕಿರಿಯ ಸಹೋದರ ಕೊಳ್ಳಿಪಾಕೆ-೭೦೦೦ದ ದಂಡ ನಾಯಕ	ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೫. ನಂ. ೫೬೫

೧	೨	೩	೪	೫	೬	೭	೮	೯
							ಲೆಕ್ಕಪಯ್ಯನ ಬೇಡಿಕೆಯಂತೆ ಸೋಮನಾಥ ಭಟ್ಟ ಎಂಬು ವವನ ಅಗ್ರಹಾರ ವಾಗಿದ್ದ ಕಲ್ವಿಚೇಡು- ೪೦ರ ತಾಂಡಿ ಪಾಮುಲಂಕ ಎಂಬ ಗ್ರಾಮದ ತಳವೃತ್ತಿಯ ೧/೩ ಭಾಗದ ರಾಜಸುಂಕವನ್ನು ಮತ್ತು ರಾಜಕುಮಾರ ಸೋಮೇಶ್ವರನು ಕೊಳ್ಳಿಪಾಕೆ ನಾಡೂ ಸೇರಿದಂತೆ ಅನೇಕ ಪ್ರಾಂತ್ಯಗಳನ್ನು ಆಳುತ್ತಿದ್ದನೆಂದು ಹೇಳಿದೆ. ಶಾಸನದಲ್ಲಿರುವ ಹೆಚ್ಚಿನ ಭಾಗದಲ್ಲಿ ಮಾಯಿಕಬ್ಬೆ ಎಂಬು ವವಳ ಶ್ರೇಯಸ್ಸಿಗೋಸ್ಕರ ಬಲ್ಲಿಸೆಟ್ಟಿಯ ಮಗ ಕೊಳ್ಳಿಪಾಕೆಯ ಮಲ್ಲಿಸೆಟ್ಟಿಯು ಸೋಮ ನಾಥ ದೇವರ ನಂದಾದೀವಿಗೆಗೆ ಎಂಟು ಗದ್ಯಾಣ ಗಳನ್ನು ದತ್ತಿಯಾಗಿ ನೀಡಿದುದನ್ನು ತಿಳಿಸಿದೆ.	
೪. ಕೋಲನುಪಾಕ	ಭುವನಗಿರಿ	ನಲ್ಗೊಂಡ	ಆಂಧ್ರಪ್ರದೇಶ	ಕೋಲನುಪಾಕ ಮ್ಯೂಜಿಯಂದಲ್ಲಿರುವ ಕಂಬದ ಮೇಲೆ	ಕ್ರಿ.ಶ. ೧೧೧೦	ತ್ರಿಭುವನಮಲ್ಲನ ಆಳ್ವಿಕೆಯಲ್ಲಿ ಅವನ ಮಗನಾದ ಮಹಾಮಂಡಳೇಶ್ವರ ಸೋಮೇಶ್ವರನು (ಪಶ್ಚಿಮ ಗಂಗ ದೊರೆಗಳ ಬಿರುದನ್ನು ಪಡೆದಿದ್ದಾನೆ) ದೇವತಾರ್ಚನೆಯ ನಂತರದ ಮಹಾದಾನಗಳನ್ನು ಮಾಡುತ್ತ ಆದಿತ್ಯಭಟ್ಟ ಸೋಮಯಾಜಿ ಗಳಿಗೆ ಗೊಂಡೂರಿನ ೧೨ ಮತ್ತರು ನೀರು ನೆಲವನ್ನು ದತ್ತಿಯಾಗಿ ನೀಡಿದನು. ಇವನ ಆಜ್ಞೆಯಂತೆ ಮಹಾಪ್ರಧಾನಿ ಸಂಧಿವಿಗ್ರಹಿ ದಂಡನಾಯಕ ಕಾಳಿಮರಸನು ಆದಿತ್ಯ ಭಟ್ಟನಿಗೆ ಕೊಳ್ಳಪಾಕೆ-೭೦೦೦ದ ಇಟ್ಟ ಕಾಲದ ಹಿರಿಯ ಕಾಲುವೆಯ ಬಳಿಯ ೧೨ ಮತ್ತರು ನೀರು ನೆಲವನ್ನು ಪರಮೇಶ್ವರ ದತ್ತಿಯಾಗಿ ಕೊಟ್ಟದ್ದನ್ನು ದಾಖಲಿಸಿದೆ.	ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೫. ನಂ. ೫೬೧

೧	೨	೩	೪	೫	೬	೭	೮	೯
೫.	ಕೋಲನುಪಾಕ	ಭುವನಗಿರಿ	ನಲ್ಗೊಂಡ	ಆಂಧ್ರಪ್ರದೇಶ	ಕೋಲನುಪಾಕ ಮ್ಯೂಜಿಯಂದಲ್ಲಿರುವ ಕಂಬದ ಮೇಲೆ	ಕ್ರಿ.ಶ. ೧೧೧೧	ತ್ರಿಭುವನಮಲ್ಲ ದೇವನ ಆಳ್ವಿಕೆಯಲ್ಲಿ ಪಶ್ಚಿಮ ಗಂಗರ ಬಿರುದುಗಳನ್ನು ಧರಿಸಿ ಕೊಳ್ಳಿಪಾಕೆ-೭೦೦೦ವನ್ನು ಮಹಾ ಮಂಡಳೇಶ್ವರ ಕುಮಾರ ಸೋಮೇಶ್ವರನು ಆಳುತ್ತಿದ್ದನೆಂದು ಹೇಳಿದೆ. ಅಂತಃಪುರ ವರ್ಗಡೆ ಸಂಧಿವಿಗ್ರಹಿ ದಂಡನಾಯಕ ಕಾಳಿಮಯ್ಯನು ೧) ಕೊಳ್ಳಿಪಾಕೆ ನಾಡಿನ ದಂಡ ನಾಯಕ ತನ್ನ ತಮ್ಮ ಲೆಕ್ಕಪಯ್ಯ ಮಾಡಿಸಿದ ಮಲ್ಲಿಕಾರ್ಜುನ ದೇವರಿಗೆ ೨) ತನ್ನ ಅಳಿಯ ಪ್ರತಿಕಂಟ ಬಮ್ಮದೇವನಾಯಕನು ಮಾಡಿಸಿದ ಬ್ರಹ್ಮೇಶ್ವರ ದೇವರಿಗೆ ೩) ಸ್ವಯಂಪಾಕಿ ಮಲ್ಲಭಟ್ಟೋಪಾಧ್ಯಾಯನಿಗೆ ಪ್ರತಿಯೊಬ್ಬರಿಗೂ ೩ ಮತ್ತರು ಭೂಮಿಯನ್ನು ದತ್ತಿಯಾಗಿ ಕೊಟ್ಟನೆಂದು ತಿಳಿಸಿದೆ. ಇಂದಿನ ವೀರನಾರಾಯಣ ದೇವಾಲಯದೊಂದಿಗೆ ದತ್ತಿಯ ಭಾಗದಲ್ಲಿ ಬಂದಿರುವ ಜಗದ್ದೇವ ನಾರಾಯಣ ದೇವರನ್ನು ಗುರುತಿಸಬಹುದು.	ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೫. ನಂ. ೫೬೨
೬.	ಬರಡೂರ	ಸಿಗ್ಗಾವ	ಹಾವೇರಿ	ಕರ್ನಾಟಕ	ಕಲ್ಮೇಶ್ವರ ದೇವಾಲಯ ಹೊರಗೆ	ಕ್ರಿ.ಶ. ೧೧೧೨	ತ್ರೈಟಿತ ಕಿಮುಳಿಯ ಬಲ್ಲೇಶ್ವರ ದೇವರಿಗೆ ನೀಡಿದ ದಾನ.	ಧಾ.ಜಿ.ಶಾ.ಸೂ ಪು.೨೯
೭.	ಹಂದರಕಿ	ಚಿತ್ತಾಪುರ	ಗುಲ್ಬರ್ಗ	ಕರ್ನಾಟಕ	--	ಕ್ರಿ.ಶ. ೧೧೧೮	ಈ ಶಾಸನವು ಆರನೆಯ ವಿಕ್ರಮಾದಿತ್ಯ ಮತ್ತು ಮೂರನೆಯ ಸೋಮೇಶ್ವರನ ಬಗ್ಗೆ ಉಲ್ಲೇಖಿಸಿದ್ದು, ಮಹಾಮಂಡಳೇಶ್ವರ ಬಿಜ್ಜರಸನು ಲೋಕೇಶ್ವರ ದೇವರ ಆರಾಧಕನಾಗಿದ್ದನೆಂದು ತಿಳಿಸುತ್ತದೆ. ಈ ದೇವರ	ಕಲ್ಬುರ್ಗಿ ಜಿಲ್ಲೆಯ ಶಾಸನಗಳು ನಂ. ೩೯

೧	೨	೩	೪	೫	೬	೭	೮	೯
							ಆರಾಧನೆಗೋಸ್ಕರ ಬಿಜ್ಜಳನು ಲೋಕೇಶ್ವರ ದೇವರ ಮಂಟಪವನ್ನು ಕಟ್ಟಿಸಿದನು. ಇವನ ರಾಣಿಯಾದ ಬಾಚಲ ದೇವಿಯೂ ಸಹ ಭೂದಾನ ನೀಡಿದುದನ್ನು ಉಲ್ಲೇಖಿಸುತ್ತದೆ.	
೮.	ಗೂಡೂರು	ಜನಗಾಂ	ವಾರಂಗಲ್	ಆಂಧ್ರಪ್ರದೇಶ	ಗೂಡೂರು ಗ್ರಾಮದಲ್ಲಿ ನಿಲ್ಲಿಸಿರುವ ಕಂಬದ ಮೇಲೆ	ಕ್ರಿ.ಶ. ೧೧೨೪	ತ್ರಿಭುವನಮಲ್ಲ ದೇವನ ಮಗ ಕೊಳ್ಳಿಪಾಕೆ-೭೦೦೦ದ ಅಧಿಕಾರಿ ಕುಮಾರ ಸೋಮೇಶ್ವರನ ಆಳ್ವಿಕೆಯನ್ನು ತಿಳಿಸಿದೆ ಹಾಗೂ ಅವನ ಮಹಾಪ್ರಧಾನ ಮನೆವೆರ್ಗಡೆ ಕೊಳ್ಳಿಪಾಕೆಯ ದಂಡನಾಯಕ ಸ್ವಾಮಿದಂಡನಾಥ, ಸಾವಿದೇವ ಎಂದು ಕರೆಸಿಕೊಳ್ಳುವ ಸಾವಿಪಯ್ಯನ ಸಾಧನೆಯನ್ನು ವಿವರಿಸಿದೆ. ಈತನ ಬಿನ್ನಹದಂತೆ ಕುಮಾರ ಸೋಮೇಶ್ವರನು ಗುಡುಮೂರಿನ ಮಲ್ಲೇಶ್ವರ ದೇವರ ಸೇವೆಗೆ ವೇಲ್ಪುಗೊಂಡ-೨೪ರ ಬಳಿಯ ಬಮ್ಮರಿಗೆ ಎಂಬ ಗ್ರಾಮವನ್ನು ದತ್ತಿಯಾಗಿ ನೀಡಿದನು ಎಂದು ತಿಳಿಸುತ್ತದೆ. ಶಾಸನದ ಮೂರನೆಯ ಮುಖದಲ್ಲಿ ವಿರಿಯಾಲವಂಶದ ಸೂರನ ಮೊಮ್ಮಗ ಹಾಗೂ ಬೇತ ಮತ್ತು ಬೆಜ್ಜಮಾಂಬಿಕೆಯರ ಮಗನಾದ ಮಲ್ಲನು ಗುಮುಡೂರಿನಲ್ಲಿ ಮಲ್ಲೇಶ್ವರ ದೇವಾಲಯವನ್ನು ಒಂದು ಕೆರೆ, ಒಂದು ಬಾವಿಯನ್ನು ಕಟ್ಟಿಸಿದ ವಿಷಯವಿದೆ. ಶಾಸನದ ಕೊನೆಯಲ್ಲಿ ಇದನ್ನು ರಚಿಸಿದವನು ಅಥವಾ ಕಲ್ಲಿನ ಮೇಲೆ ಬರೆದವನು ಸೂತ್ರಧಾರಿ ಕೊಮ್ಮೋಜ ಎಂದಿದೆ.	ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೫. ನಂ. ೪೧೯

೧	೨	೩	೪	೫	೬	೭	೮	೯
೯.	ಜಡಚೆರ್ಲ	ಮೆಹಬೂಬ್ ನಗರ	ಮೆಹಬೂಬ್ ನಗರ	ಆಂಧ್ರಪ್ರದೇಶ	ಜಡಚೆರ್ಲ ಪಂಚಾಯತಿ ಕಛೇರಿಯ ಆವರಣದಲ್ಲಿ	ಕ್ರಿ.ಶ. ೧೧೨೫	ಚಾಲುಕ್ಯ ದೊರೆ ಭೂಲೋಕಮಲ್ಲನ ಆಳ್ವಿಕೆಯನ್ನು ತಿಳಿಸುತ್ತದೆ. ಆದರೆ ಇತಿಹಾಸದ ಪ್ರಕಾರ ಆಗ ತ್ರಿಭುವನಮಲ್ಲನ ಆಳ್ವಿಕೆ ನಡೆಯುತ್ತಿತ್ತು. ಯುವರಾಜ ತೈಲಪನು ಕಂದೂರು ನಾಡಿನಿಂದ ಯುವರಾಜ ತೈಲಪನು ಆಳ್ವಿಕೆ ನಡೆಸುತ್ತಿದ್ದಾಗ ವೀರಬಣಂಜು ಸಂಘದ ಬಮ್ಮಿಸೆಟ್ಟಿಯು ಗಂಗಾಪುರದಲ್ಲಿ ಪಾರ್ಶ್ವನಾಥ ದೇವರ ಚೈತ್ಯಾಲಯವನ್ನು ಮಾಡಿಸಿದನೆಂದು ತಿಳಿಸಿದೆ. ಕಾಣೂರ್ಗಣ ಮೇಷ ಪಾಷಾಣ ಗಚ್ಛದ ಮೇಘಚಂದ್ರ ಸಿದ್ಧಾಂತ ದೇವರ ಕಾಲನ್ನು ಈ ಸಂದರ್ಭದಲ್ಲಿ ತೊಳೆಯಲಾಯಿತು. ಆ ಚೈತ್ಯಾಲಯದ ದೇವರ ಸೇವೆಗಾಗಿ ಅಯ್ಯಾವೊಳೆ ಐನೂರ್ವರು ಮೂವತ್ತಾರು ಬೀಡುಗಳು ಮುಮ್ಮುರಿದಂಡ ಸಮಸ್ತ ಉಭಯ ನಾನಾ ದೇಶಿಯರು, ಸೆಟ್ಟಿಯರು ಅನೇಕ ದತ್ತಿಯನ್ನು ನೀಡಿದರೆಂದು ಇದರಲ್ಲಿ ತಿಳಿಸಿದೆ.	ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೫. ನಂ. ೫೬೯
೯.	ಕೋಲನುಪಾಕ	ಭುವನಗಿರಿ	ನಲ್ಗೊಂಡ	ಆಂಧ್ರಪ್ರದೇಶ	ಕೋಲನುಪಾಕ ಗ್ರಾಮದ ಸೋಮೇಶ್ವರ ದೇವಾಲಯದ ಹಿಂಭಾಗದಲ್ಲಿರುವ ಕೆರೆಯಲ್ಲಿರುವ ಊಬ ದಿಬ್ಬದ ಮೇಲಿರುವ ಕಂಬದ ಮೇಲೆ	ಕ್ರಿ.ಶ. ೧೧೨೫	ಇದು ಒಂದು ಸ್ತಂಭ ಶಾಸನವಾಗಿದ್ದು ಈ ಸ್ತಂಭವನ್ನು ಅಂಬಳತಿಳಕ ಸ್ಥಾನದಲ್ಲಿರುವ ಸ್ವಾಮಿದೇವ ಕೀರ್ತಿಸ್ತಂಭ ಎಂದು ಕುಮಾರ ಸೋಮೇಶ್ವರನ ಜಯಸ್ತಂಭ ಎಂದೂ ಕರೆದಿದೆ. ಕುಮಾರ ಸೋಮೇಶ್ವರನು ತನ್ನ ರಾಜಧಾನಿ ಕೊಳ್ಳಿಪಾಕೆಯ ಅಂಬರತಿಳಕದ ಅಂಬಿಕಾದೇವಿಯ ಸೇವೆಗೆ ಪಾನುಪುರ ಎಂಬ ಗ್ರಾಮವನ್ನು ದಂಡನಾಯಕ ಸಾಯಿಮಯ್ಯನ ಬಿನ್ನಹದಮೇರೆಗೆ ದತ್ತಿಯಾಗಿ ನೀಡಿದನು. ಈ ದತ್ತಿಯನ್ನು ಅಂಬಿಕೆಯ 'ಜೈನ ಶಾಸನಪತಿ'ಯಾದ ಪೆರ್ಗಡೆ ಕೇಶಿರಾಜನು ನೋಡಿಕೊಳ್ಳುತ್ತಾನೆಂದೂ, ಈ ಮಾನಸ್ತಂಭವನ್ನು ಅಂಬಿಕಾ ದೇವಾಲಯ ಅವನು ಮಾಡಿಸಿದನೆಂದೂ ಇದು ತಿಳಿಸಿದೆ. ಈ	ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೫. ನಂ. ೫೬೯

೧	೨	೩	೪	೫	೬	೭	೮	೯
							ಸ್ತಂಭದ ಮೂರು ಮುಖದಲ್ಲಿ ಕುಮಾರ ಸೋಮೇಶ್ವರನ ಪ್ರಶಸ್ತಿ, ಮೂರನೆಯ ಮುಖದಲ್ಲಿ ಸ್ವಾಮಿದೇವ ದಂಡಾಧಿಪರ ಹೊಗಳಿಕೆ ನಾಲ್ಕನೇ ಮುಖದಲ್ಲಿ ಕಾಣೂರ್ಗಣದ ಮೇಷಪಾಷಾಣ ಗಚ್ಛದ ಮೇಘಚಂದ್ರ ಮಲಧಾರಿ ವ್ರತೀಂದ್ರರ ಶಿಷ್ಯ ನಂದಿಸೂರಿ, ಪದ್ಮಪ್ರಭ ಶ್ರೀಮುನಿ ಮಾಧವ ಸಿದ್ಧಾಂತ ದೇವ ಮೊದಲಾದವರ ಉಲ್ಲೇಖವಿದೆ.	
೧೦.	ಪಟಾನ್‌ಚೆರು	ಸಂಗಾರೆಡ್ಡಿ	ಮೆದಕ್	ಆಂಧ್ರಪ್ರದೇಶ	ಕೆ.ಬಿ.ಮ್ಯೂಸಿಯಂನಲ್ಲಿರುವ ಶಾಸನ	ಕ್ರಿ.ಶ. ೧೧೨೭	ಮೂರನೆಯ ಸೋಮೇಶ್ವರನ ವಿಜಯ ಯಾತ್ರೆಗೆ ಜೋಯಿಸಿಗನಾದ ನನ್ನೆಯ ಭಟ್ಟನು ಲಗ್ನವನ್ನು ಇಟ್ಟುಕೊಟ್ಟ ಕಾರಣದಿಂದ ಪಟ್ಟಬಂಧೋತ್ಸವ ಸಮಯದಲ್ಲಿ ಅದನ್ನು ನೆನದು ದೊರೆಯು ಮಹಾಮಂಡಳೇಶ್ವರ ಮಲ್ಲಿಯಣ್ಣ ಹಾಗೂ ಮಹಾಪ್ರಧಾನ ವಚ್ಚಪಯ್ಯರ ಭಿನ್ನಹದಂತೆ ಪೊಟ್ಟಳಕೆರೆಯ ಚಿನ್ತಾಮಣಿ ಪುರದ ಕೊಳಗದಾಯವನ್ನು ದತ್ತಿಯಾಗಿ ನೀಡಿದುದನ್ನು ದಾಖಲಿಸಿದೆ. ಪಂಚಮಠ ಸ್ಥಾನದವರು ನಗರದ ೪೦ ಒಕ್ಕಲುಗಳು, ನಾಲ್ಕು ಊರಿನ ಸೆಟ್ಟಿಕಾರರೂ ಸಮಯಗಳೂ ಈ ದತ್ತಿಯನ್ನು ಪ್ರತಿಪಾಲಿಸ ಬೇಕೆಂದು ಇಲ್ಲಿ ವಿಧಿಸಿದೆ. ಸರಸಕವೀಂದ್ರ ನಾಥ ಭಾಸ್ಕರ ಎನ್ನುವವನು. ಈ ಶಾಸನದ ಕವಿ, ಭಾಸ್ಕರಯ್ಯ ಎಂಬುವವನು ಈ ಶಾಸನ ವನ್ನು ಕಲ್ಲಿನ ಮೇಲೆ ತಿದ್ದಿ ಬರೆದಿದ್ದಾನೆ.	ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೫. ನಂ. ೬೦೪

೧	೨	೩	೪	೫	೬	೭	೮	೯
೧೧.	ರಾಗಿಮುಸಲವಾಡ	ಹರಪನಹಳ್ಳಿ	ಬಳ್ಳಾರಿ	ಕರ್ನಾಟಕ	ಈಶ್ವರ ದೇವಾಲಯದ ಬಳಿ ಇರುವ ಶಾಸನ	ಕ್ರಿ.ಶ. ೧೧೨೭	ಭೂಲೋಕಮಲ್ಲನ ಮಹಾಸಾಮಂತಾಧಿಪತಿ ಮಹಾಪ್ರಧಾನ ಕನ್ನಡ ಸಂಧಿವಿಗ್ರಹಿ ಸೇನಾಧಿಪತಿ ಭೋಗಭಟ್ಟಯ್ಯನು ಸಾವಾಸಿಗಳ ನಾಯಕನಾಗಿ ಎರಡು ಆರುನೂರು ಮತ್ತು ಬನವಾಸಿ-೧೨೦೦೦ ನಾಡಿನ ಏಳುವರೆ ಲಕ್ಷ ವಡ್ಡರಾವುಳದ ಸುಂಕವನ್ನು ಪಡೆದು ಆಳುತ್ತಿರುತ್ತಾನೆ. ಸಹವಾಸಿ ಬ್ರಾಹ್ಮಣರ ಗುಂಪಿನ ದಂಡನಾಯಕ ಯಿನ್ದರಾಣಿ ಭಟ್ಟಯ್ಯ ಮತ್ತು ಅವನ ಪೆರ್ಗ್ಗಡೆ ವುಜ್ಜಭಟ್ಟ ಇವರು ರತ್ನಭೂಷಣ ವಿನಾಯಕನನ್ನು ಪ್ರತಿಷ್ಠಾಪಿಸಿ ಸಭಾಮಂಟಪವನ್ನು ಮತ್ತು ಒಂದು ಭಾವಿಯನ್ನು ಕಟ್ಟಿಸಿ ದೇವರ ಸೇವೆಗೆ ನಾಲ್ಕು ಪಣಗಳನ್ನು ನೀಡುತ್ತಾರೆ. ನೊಳಂಬವಾಡಿ-೩೨೦೦೦ದ ದಂಡ ನಾಯಕ ಚೋಳಾಂಡರನು ಪಾಂಡ್ಯನಾಡಿನ ತೆರಿಗೆಯಲ್ಲಿ ಎರಡು ಪಣವನ್ನು ಈ ದೇವರ ಸೇವೆಗೆ ದಾನ ನೀಡುತ್ತಾನೆ. ಹೆಗ್ಗಡೆ ಜೋಗದೇವಯ್ಯ, ಸೆಟ್ಟಿ ಮತ್ತು ಸೆಟ್ಟಿ ಗುತ್ತರು ಹಾಗೂ ಮಸಣಯ ನಾಯಕ, ಮಾರನಾಯಕ ಕಾಳಯನಾಯಕರೂ ದಾನ ನೀಡಿದರು.	ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೧. ನಂ. ೩೪
೧೨.	ಅಸುಂಡಿ	ರಾಣೆಬೆನ್ನೂರು	ಧಾರವಾಡ	ಕರ್ನಾಟಕ	ಕಲ್ಲೇಶ್ವರ ದೇವಾಲಯದ ಮುಂಭಾಗದಲ್ಲಿರುವ ಗೋಡೆಯ ಮೇಲೆ	ಕ್ರಿ.ಶ. ೧೧೨೭	ಕದಂಬ ವಂಶದ ತೈಲಪ ಮಹಾ ಮಂಡಳೇಶ್ವರನಾಗಿ ಭೂಲೋಕಮಲ್ಲನ ಆಳ್ವಿಕೆಯಲ್ಲಿ ಬನವಾಸಿ-೧೨೦೦೦ ಹಾನಗಲ್ಲ-೫೦೦ನ್ನ ತ್ರಿಭೋಗಾಭ್ಯಂತರ ಸಿದ್ಧಿಯಿಂದ ಆಳುತ್ತಿದ್ದನು ಹೇಳಿದೆ. ಪೆರ್ಗ್ಗಡೆ ಮಾಚಿಯಣ್ಣನು ತೈಲಪನಿಂದ ಬನವಾಸಿಯ ನಾಡಧಿ	ಎಸ್.ಆಯ್.ಆಯ್. xviii ನಂ. ೧೩೩

೧	೨	೩	೪	೫	೬	೭	೮	೯
							ಕಾರವನ್ನು ಪಡೆದನೆಂದು ಚಿಕ್ಕಾಂಬ ಕುಲದ ಮಹಾಸಾಮಂತ ಬಮ್ಮರಸನು ಸತ್ತಳಿಗೆ ಬರ್ಮಗಾವುಂಡನು ಹಸುಣ್ಡಿಯಲ್ಲಿ ಕಲಿದೇವ ಸ್ವಾಮಿಯನ್ನು ಪ್ರತಿಷ್ಠಾಪಿಸಿ ಬ್ರಹ್ಮಸಿಂಗಿ ಪಂಡಿತರಿಗೆ ಹಲವು ದಾನಗಳನ್ನು ನೀಡದರೆಂದು ತಿಳಿಸುತ್ತದೆ. ಈ ಶಾಸನ ವನ್ನು ಬರೆದವನು ಸುಬ್ಬ ಖಂಡರಿಸಿದವನು ಮಾದೋಜನೆಂದು ಹೇಳಿದೆ.	
೧೩.	ಕಡ್ಲೇವಾಡ	ಸಿಂದಗಿ	ಬಿಜಾಪುರ	ಕರ್ನಾಟಕ	ಸ್ವಾಮಿಲಿಂಗ ದೇವಾಲಯದ ಕಲ್ಲಿನ ಮೇಲೆ ಮೇಲೆ	ಕ್ರಿ.ಶ. ೧೧೨೭	ಭೂಲೋಕಮಲ್ಲನು ಜಯಂತಿಪುರ ನೆಲವೀಡಿನಿಂದ ಆಳ್ವಿಕೆ ನಡೆಸುತ್ತಿದ್ದಾಗ ಕಡಲೆವಾಡದ ಸ್ವಯಂಭೂ ಸೋಮನಾಥ ದೇವರಿಗೆ ಶೋಡಶ ಮಹಾದಾನಗಳನ್ನು ಮಾಡಿ ಅಲಂದೆ-೧೦೦೦ದ ಕಂಪಣ ಬಾಗೆವಾಡಿ-೩೦ರ ಬಳಿಯ ಹಿಂಚಗೇರಿಯ ಮೇಲಾಳ್ಕೆಯನ್ನು ದೇವರ ಧೂಪ, ದೀಪ ನೈವೇದ್ಯಕ್ಕೆ ಗಂಗರಾಸಿ ದೇವರ ಕಾಲನ್ನು ತೊಳೆದು ದಾನ ನೀಡಿದುದನ್ನು ತಿಳಿಸುತ್ತದೆ.	ಎಸ್.ಆಯ್.ಆಯ್ xx ನಂ. ೯೮
೧೪.	ಕಕ್ಕೇರಿ	ಸುರಪುರ	ಗುಲ್ಬರ್ಗ	ಕರ್ನಾಟಕ		ಕ್ರಿ.ಶ. ೧೧೨೭	ಮಹಾಮಂಡಳೇಶ್ವರ ಮಲ್ಲಿರೇವರಸ, ಕಕ್ಕೇರಿಯ ಬಮ್ಮೆಯ ನಾಯಕ, ಮಾದೆಯ ನಾಯಕ ಇತ್ಯಾದಿಯರು ಸೇರಿ ರೇವೇಶ್ವರ ದೇವರ ಅಂಗಭೋಗ, ದೀಪಾರತಿ ನೈವೇದ್ಯಗಳಿಗಾಗಿ ಬ್ರಹ್ಮರಾಸಿ ಪಂಡಿತರ ಕಾಲ್ತೊಳೆದು ೨೬ ಮತ್ತರು ಭೂಮಿಯನ್ನು ಗಾಣವನ್ನು ಹಲವು ಸುಂಕದಾನಗಳನ್ನು ನೀಡಿದುದನ್ನು ತಿಳಿಸುತ್ತದೆ. ಬ್ರಹ್ಮರಾಸಿ ಪಂಡಿತರು 'ಹಗರಿಟ್ಟಿಗೆಯ ಶ್ರೀ ಸ್ವಯಂಭು ಉಗ್ರ ಭೀಮೇ	ಸುರಪುರ ತಾಲೂಕಿನ ಶಾಸನಗಳು ನಂ. ೩೩

೧	೨	೩	೪	೫	೬	೭	೮	೯
							ಶ್ವರ ದೇವರ ಮುದಿನೀರ ಕುಮಾರೇಶ್ವರ ದೇವರ ಕಕ್ಕೇಶ್ವರ ದೇವರ ಈ ಮಹಾಸ್ಥಾನಗಳ ಆಚಾರ್ಯರೂ ಸಿದ್ದ ರೇವಣ ದೇವನ ಶಿಷ್ಯರೂ ಆಗಿದ್ದರೆಂಬ ಉಲ್ಲೇಖ ವಿದೆ.	
೧೫.	ರಾಯಭಾಗ	ರಾಯಭಾಗ	ಬೆಳಗಾಂ	ಕರ್ನಾಟಕ	ಈಗ ಇರ್ವಿನ್ ಅಗ್ರಿಕಲ್ಚರಲ್ ಮ್ಯೂಂಜಿಯಂ ಕೊಲ್ಲಾಪುರ	ಕ್ರಿ.ಶ. ೧೧೨೭	ಹೂವಿನ ಬಾಗೆವಾಡಿಯು ಮಹಾಘಟಿಕಾಸ್ಥಾನ ಅಗ್ರಹಾರವಾಗಿತ್ತೆಂದು ಉಲ್ಲೇಖಿಸುತ್ತದೆ ಮತ್ತು ಭೂಲೋಕಮಲ್ಲನು ಕೇಶವೇಶ್ವರ ದೇವರಿಗೆ ನೀಡಿದ ಭೂದಾನದ ಬಗ್ಗೆ ಉಲ್ಲೇಖಿಸುತ್ತದೆ.	INKKS No. 6
೧೬.	ನವಿಲೆ	ಲಿಂಗಸೂರು	ರಾಯಚೂರು	ಕರ್ನಾಟಕ	ನವಿಲೆಯ ಜಡೆ ಶಂಕರ ದೇವಾಲಯದ ಮುಂಭಾಗದಲ್ಲಿರುವ ಕಲ್ಲಿನ ಮೇಲೆ	ಕ್ರಿ.ಶ. ೧೧೨೮	ನವಿಲೆ ಗ್ರಾಮದ ಜಡೆಯ ಶಂಕರದೇವರ ಅಂಗಭೋಗ, ರಂಗಭೋಗ, ನೈವೇದ್ಯ ಮತ್ತು ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆ ಭೂಲೋಕಮಲ್ಲನು ಕರಡಿಕಲ್ಲ ನಾಡಿನ ಬಳಿಯ ಒಂದು ಗ್ರಾಮವನ್ನು ದಾನ ನೀಡಿದನು. ಅಲ್ಲಲ್ಲಿ ಶಾಸನವು ಅಳಿಸಿರುವುದರಿಂದ ಪೂರ್ಣವಿವರಗಳು ತಿಳಿಯುವುದಿಲ್ಲ.	ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ. ೭ ನಂ. ೭
೧೭.	ಕುರಹಟ್ಟಿ	ರೋಣ	ಧಾರವಾಡ	ಕರ್ನಾಟಕ	--	ಕ್ರಿ.ಶ. ೧೧೨೮	ಈ ಶಾಸನವು ಬಹಳ ತೃಟಿತಗೊಂಡಿದ್ದು ಭೂದಾನ ನೀಡಿದುದನ್ನು ಉಲ್ಲೇಖಿಸುತ್ತದೆ.	ಎಸ್.ಆಯ್.ಆಯ್ xv ನಂ. ೮೪
೧೮.	ಮುದೇನೂರು	ರಾಣೆಬೆನ್ನೂರು	ಧಾರವಾಡ	ಕರ್ನಾಟಕ		ಕ್ರಿ.ಶ. ೧೧೨೮	ವಡ್ಡಾರಾವುಳದ ದಂಡನಾಯಕ ಮಹಾದೇವರಸ ಮಹಾಮಂಡಳೇಶ್ವರ ತೈಲಪದೇವನ ಹೆಜ್ಜುಂಕದ ಪೆರ್ಗ್ಗಡೆ ಕೇತುಮಲ್ಲಿಸೆಟ್ಟಿ ಮತ್ತು ಹೆಗ್ಗಡೆ ದುಗ್ಗರಸರು ಮುದುಗುನ್ನೂರ ಪಟವರ್ಧನ ಗೋಬಿನ್ನಘಯಿ ಸಾಸರಿಗೆ ದಾನ ನೀಡಿದುದನ್ನು ತಿಳಿಸುತ್ತದೆ.	ಎಸ್.ಆಯ್.ಆಯ್ xv ನಂ. ೧೩೪

೧	೨	೩	೪	೫	೬	೭	೮	೯
೧೯.	ತ್ರಿಪುರಾಂತಕ	ಮಾರಕಾಪುರ	ಕರ್ನೂಲು	ಆಂಧ್ರಪ್ರದೇಶ		ಕ್ರಿ.ಶ. ೧೧೨೮	ಎಡವಬೀರಣಂಗೆ ಹೊಸವೂರ ಕೆರೆಯೊಳಗೆ ಚಿಕ್ಕದೇವಿ ಮಯ್ಯ ನವನವರು ಬಿಟ್ಟ ದಾನವನ್ನು ತಿಳಿಸುತ್ತದೆ. ಶಾಸನದ ಬಹುಭಾಗವು ಅಳಿಸಿರುವುದರಿಂದ ಪೂರ್ಣ ವಿವರಗಳು ತಿಳಿದುಬರುವುದಿಲ್ಲ.	ಎಸ್.ಆಯ್.ಆಯ್ IX-i ನಂ. ೨೧೪
೨೦.	ಇಂಗಳೇಶ್ವರ	ಬಾಗೇವಾಡಿ	ಬಿಜಾಪುರ	ಕರ್ನಾಟಕ	ನಾರಾಯಣ ದೇವಾಲಯದ ಪ್ರವೇಶದ್ವಾರದ ಎಡಗಡೆ ಇರುವ ಗೋಡೆಯ ಮೇಲೆ	ಕ್ರಿ.ಶ. ೧೧೨೮	ಕಲಚೂರಿ ವಂಶದ ಮಹಾಮಂಡಳೇಶ್ವರ ಹೆಮ್ಮಾಡಿಯರಸನು ತರ್ದವಾಡಿ-೧೦೦೦ ವನ್ನಾಳುತ್ತಿದ್ದಾಗ ಶ್ರೀಕರಣದ ನೀಲಕಂಠ ನಾಯಕರು ಕಟ್ಟಿಸಿದ ನೀಲಕಂಠ ದೇವಾಲಯಕ್ಕೆ ಭೂಮಿ ಹಾಗೂ ಗಾಣವನ್ನು ದಾನವಾಗಿ ಬಿಡುತ್ತಾನೆ ಮತ್ತು ಇಂಗಳೇಶ್ವರವು ಅಗ್ರಹಾರವಾಗಿತ್ತೆಂಬ ವಿಷಯವೂ ಸಹ ತಿಳಿದುಬರುತ್ತದೆ.	ಎಸ್.ಆಯ್.ಆಯ್ XV ನಂ. ೧೨
೨೧.	ನಾಗವಂದ	ಹಿರೇಕೆರೂರು	ಹಾವೇರಿ	ಕರ್ನಾಟಕ	ಸಿದ್ಧೇಶ್ವರ ದೇವಾಲಯದಲ್ಲಿರುವ ನಾಗವಂದ ಗೋಡೆಯ ಮೇಲೆ	ಕ್ರಿ.ಶ. ೧೧೨೮	ಸಿಂದವಂಶದ ಮಾಚರಸನು ಎಡವಟ್ಟೆ-೭೦, ಅರಕೆರೆ-೧೨ ಮತ್ತು ೫೬ನ್ನು ಆಳುತ್ತಿದ್ದಾಗ ಅವನ ಕೈಕೆಳಗಿನ ಅಧಿಕಾರಿಗಳಾದ ಮುದ್ದಕನ ಚಟ್ಟ ಮತ್ತು ಭೂವ ನಾಗಾರ್ಜುನ ಬ್ರಹ್ಮೇಶ್ವರ ದೇವರಿಗೆ ಹಲವು ಸುಂಕಗಳನ್ನು ದಾನವಾಗಿ ನೀಡಿದರು.	ಕೆ.ಆಯ್ VI ನಂ. ೨೫
೨೨.	ನಾಗವಂದ	ಹಿರೇಕೆರೂರು	ಧಾರವಾಡ (ಹಾವೇರಿ)	ಕರ್ನಾಟಕ	ಸಿದ್ಧೇಶ್ವರ ದೇವಾಲಯದಲ್ಲಿರುವ ನಾಗವಂದ ಗೋಡೆಯ ಮೇಲೆ	ಕ್ರಿ.ಶ. ೧೧೨೮	ಸಿಂಧವಂಶದ ಮಾಚರಸನು ಎಡವಟ್ಟೆ-೭೦, ಅರಕೆರೆ-೧೨ ಮತ್ತು ೫೬ನ್ನು ಆಳುತ್ತಿದ್ದಾಗ ಅವನ ಕೈಕೆಳಗಿನ ಅಧಿಕಾರಿಗಳಾದ ಮುದ್ದಕನ ಚಟ್ಟ ಮತ್ತು ಭೂವ ನಾಗಾರ್ಜುನ ಬ್ರಹ್ಮೇಶ್ವರ ದೇವರಿಗೆ ಹಲವು ಸುಂಕಗಳನ್ನು ದಾನವಾಗಿ ನೀಡಿದರು.	ಕೆ.ಆಯ್ VI ನಂ. ೨೫

೧	೨	೩	೪	೫	೬	೭	೮	೯
೨೩.	ಸನಿಗರಂ	ಕರೀಂನಗರ	ಕರೀಂನಗರ	ಆಂಧ್ರಪ್ರದೇಶ		ಕ್ರಿ.ಶ. ೧೧೨೮	ಮಹಾಮಂಡಳೇಶ್ವರ ಕಾಕತೀಯ ಪೋಲ-II ನ ಪಾದಪದ್ಮೋಪಜೀವಿ ಸಬ್ಬಿಸಹಸ್ರದ ಸೌದೊರೆ ರಪೋಲ ಕುರವರಾಜು ಎಂಬುವವನು ಖಣ್ಡಿಸನಗರದ ಕೊಮ್ಮೇಶ್ವರ ದೇವರ ಸೇವೆಗೆ ತಪೋಧನರ ಆಹಾರ ದಾನಕ್ಕೆ ಲೋಕಾಭರಣ ಪಂಡಿತ ದೇವರಿಗೆ ಒಂದುರಾಟಣ, ಗಾಣ ಮತ್ತು ಭೂಮಿಯನ್ನು ದತ್ತಿಯಾಗಿ ಕೊಟ್ಟನೆಂದು ಇದರಲ್ಲಿ ಹೇಳಿದೆ.	ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೫. ನಂ. ೪೧೧
೨೪.	ತಡಿಕೊಂಡ	ನಿಶ್ಚಿತವಿಲ್ಲ	ಮೆಹಬೂಬ ನಗರ	ಆಂಧ್ರಪ್ರದೇಶ		ಕ್ರಿ.ಶ. ೧೧೨೮	ಇದರಲ್ಲಿ ದೊರೆಯ ಹೆಸರಾಗಲೀ ಮಹಾಮಂಡಳೇಶ್ವರ ಹೆಸರಾಗಲೀ ಇಲ್ಲ. ಅವರ ಬಿರುದುಗಳನ್ನು ಮಾತ್ರ ಕೊಟ್ಟಿದೆ. ನಾಗೆಯನಾಯಕ ಎಂಬುವವನು ಪಲ್ಲಯಾರಿಕೆಯ ಮಾಧವ ದೇವರನ್ನು ಪ್ರತಿಷ್ಠೆ ಮಾಡಿದ ಕೇಶವ ದೇವರ ನಂದಾದೀವಿಗೆಗೆ ನೈವೇದ್ಯಕ್ಕೆ ೧೨ ಮತ್ತರು ಭೂಮಿಯನ್ನು ದತ್ತಿಯಾಗಿ ನೀಡಿದನೆಂದು ಇದರಲ್ಲಿ ದಾಖಲಿಸಿದೆ.	ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೫. ನಂ. ೫೨೨
೨೫.	ಭುವನಗಿರಿ	ಭುವನಗಿರಿ	ನಲ್ಗೊಂಡ	ಆಂಧ್ರಪ್ರದೇಶ	ಭುವನಗಿರಿ ಗ್ರಾಮದ ಪೀನುಗುಲ ದಿಬ್ಬದ ಸಮೀಪದಲ್ಲಿ ಕೋಟೆಯ ಪ್ರವೇಶ ದ್ವಾರದಲ್ಲಿ	ಕ್ರಿ.ಶ. ೧೧೨೮	ಇದರಲ್ಲಿ ಚಾಲುಕ್ಯ ವಿಕ್ರಮ ವರ್ಷ ೪೮ ಶೋಭಕೃತ್ ಸಂವತ್ಸರ ವೈಶಾಖ ಶುದ್ಧ ಎಂದು ತೇದಿ ಇದೆ. ಅದು ಕ್ರಿ.ಶ. ೧೧೨೮ಕ್ಕೆ ಸರಿಹೊಂದುತ್ತದೆ. ಉಳಿದ ವಿವರಗಳು ಲಭ್ಯವಿಲ್ಲ. ಆದರೆ ಈ ಶಾಸನ ಬಹಳ ತೃಟಿತವಾಗಿದೆ.	ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೫. ನಂ. ೫೮೮

೧	೨	೩	೪	೫	೬	೭	೮	೯
೨೬.	ಲಾತೂರು	ಲಾತೂರ	ಲಾತೂರ	ಮಹಾರಾಷ್ಟ್ರ	--	ಕ್ರಿ.ಶ. ೧೧೨೮	ಇದು ಐದನೂರು ಮಹಾಜನರ ಆಳ್ವಿಕೆಗೊಳಪಟ್ಟ ಲಟ್ಟಲೂರನ್ನು ಉಲ್ಲೇಖಿಸುತ್ತದೆ. ಪಾಪವಿನಾಶನ ದೇವಾಲಯಕ್ಕೆ ದಾನ ನೀಡಿದುದನ್ನು ತಿಳಿಸುತ್ತದೆ.	ಎ.ಆರ್.ಐ.ಇ. ೧೯೫೫-೫೬ ನಂ. ೨೨೮
೨೮.	ಖಜೂರಿ	ಆಳಂದ	ಗುಲ್ಬುರ್ಗ	ಕರ್ನಾಟಕ		ಕ್ರಿ.ಶ. ೧೧೨೮	ಭೂಲೋಕಮಲ್ಲದೇವನ ನಾಮಮಾತ್ರದ ಉಲ್ಲೇಖ ಕಂಡುಬರುತ್ತದೆ.	ಕ.ಜಿ.ಶಾ. ನಂ.೪
೨೭.	ಬಿಜಾಪುರ	ಬಿಜಾಪುರ	ಬಿಜಾಪುರ	ಕರ್ನಾಟಕ	ನಂ. ೪೯ ಆರ್ಕಿಯಾಲಜಿ ಮ್ಯೂಜಿಯಂ, ವಿಜಾಪುರ	ಕ್ರಿ.ಶ. ೧೧೨೯	ಈ ಶಾಸನವು ಮಹಾಮಂಡಳೇಶ್ವರ ತರುಕಾಡ ಪೆರ್ಮಾಡಿದೇವನು ತರ್ದವಾಡಿ ಸಾವಿರವನ್ನಾಳುತ್ತಿದ್ದಾಗ ದಂಡನಾಯಕ ವಯಿಜನಾಥಯ್ಯ, ಸಿಂದಗೆ-೧೨, ಕುಂಮಸೆ-೩೦ರ ಮನೆಯ ಸೋವರಸರು ಅಂಕುಲಗೆ-೫೦ರ ಮಂನೆಯ ಕಾಳಮರಸರು ನಾಡಪ್ರಭು ಗಾವುಂಡರು ಸೇರಿ ಸಿಂಧಗಿಯ ಮೂಲಸ್ಥಾನ ದೇವರಿಗೆ ಬಿಟ್ಟ ದಾನಗಳನ್ನು ತಿಳಿಸುತ್ತದೆ.	ಎಸ್. ಆಯ್.ಆಯ್.XX ನಂ. ೧೦೦
೨೮.	ಕಾಮಧೇನು	ಕಲಘಟಗಿ	ಧಾರವಾಡ	ಕರ್ನಾಟಕ	ಕಲ್ಲೇಶ್ವರ ದೇವಾಲಯದ ಮುಂಭಾಗದಲ್ಲಿರುವ ಕಲ್ಲಿನ ಮೇಲೆ	ಕ್ರಿ.ಶ. ೧೧೨೯	ಈ ಶಾಸನವು ಮಹಾಮಂಡಳೇಶ್ವರ ಜಯಕೇಶಿ ದೇವನು ಕೊಂಕಣ-೯೦೦, ಪಲಸಿಗೆ-೧೨೦೦೦ವನ್ನಾಳುತ್ತಿದ್ದನೆಂದು ಮತ್ತು ಜಯಕೇಶಿಯನ್ನು ಬನವಾಸಿಪುರ ವರಾಧೀಶ್ವರ, ಕಾದಂಬ ಚೂಡಾಮಣಿ ಎಂದು ಕರೆದಿದೆ.	ಎಸ್. ಆಯ್.ಆಯ್.XX ನಂ. ೧೦೧
೨೯.	ತಿಳವಳ್ಳಿ	ಹಾನಗಲ್ಲ	ಧಾರವಾಡ	ಕರ್ನಾಟಕ	ಕಲ್ಯಾಣ ಮಂಟಪದಲ್ಲಿರುವ ಕಲ್ಲಿನ ಮೇಲೆ	ಕ್ರಿ.ಶ. ೧೧೨೯	ಮಹಾಮಂಡಳೇಶ್ವರ ತೈಲಪದೇವನು ಹಾನುಂಗಲನೆಲವೀಡಿನಲ್ಲಿ ಉಭಯಸಾಮ್ಯದಿಂದ ಬನವಾಸಿದೇಶವನ್ನಾಳುತ್ತಿದ್ದಾಗ ಅವನ ಮಹಾಪ್ರಧಾನ ದಂಡನಾಯಕ	ಕೆ.ಆಯ್.I ನಂ. ೨೩

೧	೨	೩	೪	೫	೬	೭	೮	೯
							ತೀಕಿಮಯ್ಯ ತಿಳಿವಳಿಯನ್ನಾಳುತ್ತಿದ್ದಾಗ ದೇವದಾಸಭಟ್ಟ ಮತ್ತು ಅವನ ಹಿರಿಯ ಸಹೋದರ ಕೇಶವದೇವರು ಅಭಿನವಶಂಕರ ದೇವರಿಗೆ ಸತ್ರಕ್ಕೆ ಮತ್ತು ಪೂಜೆಗೆಂದು ಭೂದಾನ ನೀಡಿದುದನ್ನು ಉಲ್ಲೇಖಿಸುತ್ತದೆ.	
೩೦.	ನಾರಂಗವಾಡಿ	ನಾರಂಗವಾಡಿ	ಉಸ್ಮಾನಬಾದ್	ಮಹಾರಾಷ್ಟ್ರ		ಕ್ರಿ.ಶ. ೧೧೨೯	ಸೋಮೇಶ್ವರನ ಅಧಿಕಾರಿ ಮೊರಂಬ-೪೦ರ ಅಧಿಕಾರಿ ಬೋಚರಸ ಮಹಾಮಂಡಳೇಶ್ವರ ಮಂಗರಸನ ಆಜ್ಞೆಯಂತೆ ಭೋಗೇಶ್ವರ ದೇವಾಲಯಕ್ಕೆ ಆಚಾರ್ಯ ಶ್ರೀಗುರು ದೇವರ ಸಮ್ಮುಖದಲ್ಲಿ ದತ್ತಿ ನೀಡಿದ ವಿವರವಿದೆ. ಅಲಂದೆ-೧೦೦೦ದ ಸುಂಕವೆರ್ಗಡೆ ಗೊಣ್ಣೆಯ ನಾಯಕ ಸಹ ದಾನ ನೀಡಿದ ವಿವರವಿದೆ.	ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೬. ನಂ. ೧೫
೩೧.	ಕುಕನೂರು	ಕೊಪ್ಪಳ	ಯಲಬುರ್ಗ	ಕರ್ನಾಟಕ		ಕ್ರಿ.ಶ. ೧೧೨೯	ಈ ಶಾಸನದ ಮೊದಲಿನ ೭೫ ಸಾಲುಗಳು ಸವೆದುಹೋಗಿದ್ದು, ಉಳಿದ ಭಾಗದಲ್ಲಿ ದೇಮೆಯಷಣಂಗಿಯು ಗಣೇಶ್ವರ ದೇವಾಲಯದಲ್ಲಿ ರುದ್ರಾದಿತ್ಯ ಪೈಸಾಸನು ಮಾಡಿಸಿದ ಸತ್ರದ ಮನೆಯಲ್ಲಿ ಪ್ರತಿದಿನವೂ೬ ಜನ ಬ್ರಾಹ್ಮಣರು ಊಟ ಮಾಡುವಂತೆ ಭೂದಾನ ನೀಡುತ್ತಾನೆ. ಇದರೊಂದಿಗೆ ಮತ್ತೆ-೧೨ ಜನರು ಊಟ ಮಾಡಲು ರುದ್ರಾದಿತ್ಯ ಪೈಸಾಸರು ಮತ್ತೆ ಭೂದಾನ ನೀಡುತ್ತಾರೆ.	ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೨. ನಂ. ೫೩

೧	೨	೩	೪	೫	೬	೭	೮	೯
೩೨.	ಮುದನೂರು	ಸುರಪುರ	ಗುಲ್ಬರ್ಗಾ	ಕರ್ನಾಟಕ	ರಾಮನಾಥ ದೇವಾಲಯದ ಒಳಗಿನ ಗೋಡೆಯ ಕಲ್ಲಿನಮೇಲೆ	ಕ್ರಿ.ಶ. ೧೧೨೯	ಮಹಾಮಂಡಳೇಶ್ವರ ಮಲ್ಲಿರೇವರಸರು ಅಗ್ರಹಾರ ಮುದಿನೀರ ಊರೊಡೆಯ ಹಾಗೂ ಐದುನೂರು ಮಹಾಜನರು ಉತ್ತರಾಯಣ ಸಂಕ್ರಾಂತಿ ನಿಮಿತ್ತವಾಗಿ ಮಾರ್ಕಂಡೇಶ್ವರನ ದೇವರ ಪೂಜೆ ಅಂಗ ಭೋಗ, ನೈವೇದ್ಯಗಳಿಗಾಗಿ ಭೂಮಿಯನ್ನು ಗಾಣವನ್ನು ದತ್ತಿಯಾಗಿ ಕೊಟ್ಟಿದ್ದಾರೆ. ನಕರರು, ಸೊಲ್ಲಿಗ ಸಮಯಗಳು ನೀಡಿದ ದಾನವನ್ನು ಮತ್ತು ಮಹಾಸಾಮಂತ ಹಂಡೆಯನಾಯಕ, ಹೆಗ್ಗಡೆ ಬಮ್ಮೆಯ ನಾಯಕರು ಬಿಲ್ಕೊಡೆ, ಸೆಟ್ಟಿದರೆ, ವಡ್ಡ ರಾವುಳ, ಎತ್ತಿನೊಕ್ಕ ಸಾರಿಗೆಯ ಬೀರವಣ, ಸೇಸೆ ಇತ್ಯಾದಿಗಳನ್ನು ದತ್ತಿಯಾಗಿ ನೀಡಿದ ಉಲ್ಲೇಖವಿದೆ.	ಸುರಪುರ ತಾಲೂಕಿನ ಶಾಸನಗಳು ನಂ. ೬೭
೩೩.	ಕಲ್ಲೂರು	ಯಲಬುರ್ಗ	ಕೊಪ್ಪಳ	ಕರ್ನಾಟಕ	ಗಣಪತಿ ವಿಗ್ರಹದ ಹಿಂಭಾಗದಲ್ಲಿರುವ ಶಾಸನ	ಕ್ರಿ.ಶ. ೧೧೨೯	ಈ ಶಾಸನವು ತ್ರುಟಿತಗೊಂಡಿದ್ದು, ಭೂಲೋಕಮಲ್ಲನನ್ನು ಸರ್ವಜ್ಞ ಚಕ್ರವರ್ತಿಯೆಂದು ಕರೆದಿದೆ. ಚಾವಣ್ಣನು ಕಲ್ಲೂರ ದೇವಾಲಯವೊಂದಕ್ಕೆ ಖಂಡ ಸ್ಫುಟಿತ ಜೀರ್ಣೋದ್ಧಾರ ದೇವತಾ ಪೂಜೆ ಅತಿಥಿಯರ ಆಹಾರದಾನಕ್ಕೆಂದು ಭೂಮಿಯನ್ನು ಕ್ರಯಗೊಂಡು ಹನ್ನೆರಡು ಮತ್ತರು ಭೂಮಿಯನ್ನು ಮಲ್ಲಯಣ್ಣನ ಕೈಯಲ್ಲಿ ದಾನವಾಗಿ ನೀಡುತ್ತಾನೆ. ಶಾಸನದ ಕೊನೆಯಲ್ಲಿ ಯಾರ ಬರಿಗೆಯ ಕುಳಾಗ್ರಿ ಆಚಾರ್ಯ ಮಲ್ಲಯ್ಯಭಟ್ಟನ ಉಲ್ಲೇಖವಿದೆ.	ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೨. ನಂ. ೩೪

೧	೨	೩	೪	೫	೬	೭	೮	೯
೧೨೦.	ಗುರಝಾಲ	ಪಲಂದ	ಅನಂತಪುರ	ಆಂಧ್ರ ಪ್ರದೇಶ	ಗುರಿಗಲ್ಲಿನಲ್ಲಿರುವ ವೀರಭದ್ರೇ-ಶ್ವರ ದೇವಾಲಯದಲ್ಲಿನ ನಾಗ-ಕಂಬದ ಮೇಲಿದೆ	ಕ್ರಿ.ಶ. ೧೧೨೯	ಇದು ಮಾಧವಿ ಪಟ್ಟಣದ ಬಗ್ಗೆ ಉಲ್ಲೇಖಿಸುತ್ತಿದ್ದು ಜೊತೆಗೆ ಹೈಹಯ ವಂಶದ ಮುಖ್ಯಸ್ಥನು ಒಂದು ಹಿಂದೂ ತ್ರಿದೇವತೆಗಳ ದೇವಾಲಯಕ್ಕೆ ಭೂಮಿ ದಾನ ಮಾಡಿದ ಬಗ್ಗೆ ತಿಳಿಸುತ್ತದೆ.	ಎಸ್.ಆಯ್.ಆಯ್. X, ನಂ.???
೧೫೯.	ಚಿಕ್ಕೇರೂರು	ಹಿರೇಕೆರೂರು	ಹಾವೇರಿ	ಕರ್ನಾಟಕ	ಪಂಚಾಯತಿ ಎದುರು	ಕ್ರಿ.ಶ. ೧೧೨೯	ಚಿನ್ನಿ ಸೆಪ್ಪೆಯಿಂದ ಚೆನ್ನೇಶ್ವರ ದೇವಾಲಯ ನಿರ್ಮಾಣ ಹಾಗೂ ಭೂದಾನ	ಧಾ.ಜಿ.ಶಾ.ಸೂ ಪು.೭೪
೧೩೫.	ಹಿರೆಹಾಳ	ರೋಣ	ಗದಗ	ಕರ್ನಾಟಕ	ರಾಮೇಶ್ವರ ದೇವಾಲಯದ ಎದುರು	ಕ್ರಿ.ಶ. ೧೧೩೦	ಮಹಾಜನರಿಂದ ಪಿರಿಯಮಠದ ಆಚಾರ್ಯ ಸೋಮೇಶ್ವರ ಪಂಡಿತರಿಗೆ ಭೂದಾನ	ಎಸ್.ಆಯ್.ಆಯ್. ನಂ.೧೩
೧೩೬.	ಅಸ್ತಕಟ್ಟಿ	ಕಲಘಟಗಿ	ಧಾರವಾಡ	ಕರ್ನಾಟಕ		ಕ್ರಿ.ಶ. ೧೧೨೯	ಅತಿತ್ಯಟಿತ ಕೊಪ್ಪದ ಕೇತಿಸೆಟ್ಟಿಯಿಂದ ದೇವರಿಗೆ ಭೂದಾನ	ಧಾ.ಜಿ.ಶಾ.ಸೂ ಪು.೨೪
೩೪.	ಅಂತರವಳ್ಳಿ	ರಾಣೆಬೆನ್ನೂರು	ಧಾರವಾಡ	ಕರ್ನಾಟಕ	ಬಸವೇಶ್ವರ ದೇವಾಲಯದ ಬಳಿಇರುವ ವಿರಗಲ್ಲಿನ ಮೇಲೆ	ಕ್ರಿ.ಶ. ೧೧೩೦	ಚಲುವೆಯ ನಾಯಕನ ಮಗನಾದ ಬಮ್ಮಣನು ಮಾಕನೂರ ಮೇಲೆ ದಾಳಿ ನಡೆದಾಗ ಹೋರಾಟದಲ್ಲಿ ವೀರಮಣವನ್ನಪ್ಪಿದನೆಂದು ತಿಳಿಸುತ್ತದೆ.	ಎಸ್. ಆಯ್.ಆಯ್. ನಂ. ೧೬೮
೩೫.	ತಿಳವಳ್ಳಿ	ಹಾನಗಲ್ಲ	ಧಾರವಾಡ	ಕರ್ನಾಟಕ		--	ಜನಾರ್ದನ ದೇವಾಲಯದ ಜೀರ್ಣೋದ್ಧಾರ, ಅಲಂಕಾರ ಮತ್ತು ಪೂಜೆಗಾಗಿ ಕಾಳಿವೋರಘನ ಮಗ ಗೋವಿಂದ ಮಯ್ಯನು ೪೫ ಗದ್ಯಾಣ ದಾನ ನೀಡಿದುದನ್ನು ತಿಳಿಸುತ್ತದೆ. ಅಲ್ಲದೆ ತಿಳವಳ್ಳಿಯು ೧೦೦೦ ಮಹಾಜನರಿಂದ ಕೂಡಿದ ಅಗ್ರಹಾರವಾಗಿತ್ತು, ಲೊಟ್ಟಿದೇವನು ಇದೇ ದೇವಾಲಯಕ್ಕೆ ೪೫ ಕಮ್ಮ ಭೂದಾನ ನೀಡಿದುದನ್ನು ಉಲ್ಲೇಖಿಸುತ್ತದೆ.	ಕೆ. ಆಯ್. ೧ ನಂ.೧೯

೧	೨	೩	೪	೫	೬	೭	೮	೯
೩೬.	ಕರಾಡಖೇಡ	ದೇಗೂರು	ನಾಂದೇಡ	ಮಹಾರಾಷ್ಟ್ರ		ಕ್ರಿ.ಶ. ೧೧೩೦	ಇದೊಂದು ತುಂಡು ಶಾಸನವಾಗಿದ್ದು ಮಹಾಮಂಡಳೇಶ್ವರ ಎರೆಯಮರಸನು ಜ್ಞಾನೇಶ್ವರ ಪಂಡಿತರ ಸಮ್ಮುಖದಲ್ಲಿ ಸ್ವಯಂಭು ಸೋಮನಾಥ ದೇವರಿಗೆ ಗುಕ್ಕಾವೆ, ಹಿಪ್ಪಳಗಾವೆ, ಬೋರಿಗಾವೆಯನ್ನು ಸರ್ವನಮಸ್ಯವಾಗಿ ದಾನನೀಡಿದ ವಿವರ ವಿದೆ.	ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೬. ನಂ. ೬೩
೩೭.	ಸಿಂದವಾಳ	ಬಳ್ಳಾರಿ	ಬಳ್ಳಾರಿ	ಕರ್ನಾಟಕ		ಕ್ರಿ.ಶ. ೧೧೩೦	ಸಿಂದವಾಡಿ-೧೦೦೦ದ ಸಿಂದವೊಳಲು ಕೇಸಿಯಣ, ಕೇತಗಾವುಂಡ, ಮಾಚಗಾವುಂಡ ಹಾಗೂ ಚೋಕಿಸೆಟ್ಟಿಯರು ಕಟ್ಟಿಸಿದ ಸೋಮೇಶ್ವರ ದೇವರಿಗೆ ದಂಡನಾಯಕ ಅನಂತಪಾಲಯ್ಯನು ಭೂಮಿಯನ್ನು ದಾನವಾಗಿ ನೀಡಿದನು. ಅಲ್ಲದೆ ತಪೋಧನ ಕರಿಕಂಠಜೀಯನ ಆಹಾರ ಆಶ್ವಾದನಕ್ಕೆ ಹಾಗೂ ಪೂಜಾರಿ ಚಂದ್ರಭೂಷಣರಿಗೂ ಭೂಮಿಯನ್ನು ದಾನವಾಗಿ ಕೊಡಲಾಯಿತು. ಅನಂತಪಾಲಯ್ಯನ ಆದೇಶದಂತೆ ಪೆರ್ಗ್ಗಡೆ ಜಾಕಣಯ್ಯನು ಒಂದು ಮನೆ, ಹೂದೋಟವನ್ನು ದಾನವಾಗಿ ನೀಡಿದನು.	ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೧. ನಂ. ೬೪
೩೮.	ಹಿರೇರಾಯಕುಂಪಿ	ದೇವದುರ್ಗ	ರಾಯಚೂರು	ಮಹಾರಾಷ್ಟ್ರ	ಈಶ್ವರ ದೇವಾಲಯದ ಎದುರು ಬಿದ್ದಿರುವ ಕಂಬದಲ್ಲಿ	ಕ್ರಿ.ಶ. ೧೧೩೦	ಶಾಸನದ ಬಹುಭಾಗವು ಒಡೆದುಹೋಗಿದ್ದು ಅಹಿಹಯ ವಂಶದವನಾದ ಮಾಲಪರೆ ಘೋಷಣ, ಅತ್ಯುಗ್ರನರಶಿರೋದರ್ಪಣ ಧ್ವಜವಿರಾಜಮಾನ ಅಣ್ಣಲದೇವನ ಸೇವಕನಾದ ಪೆರ್ಮಾಡಿ ದೇವನು ಅಯ್ಯಣವಾಡಿ ನಾಡನ್ನು ಆಳುತ್ತಿದ್ದಾಗ ಮುದ್ಗನೂರಿನ ಬಳಿಯ ರಾಯಕುಂಪಿಯಲ್ಲಿ ಜಯ	ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೭ ನಂ. ೨೭

೧	೨	೩	೪	೫	೬	೭	೮	೯
							ರಾಮ ಎಂಬುವವನು ಮಾಡಿಸಿದ ದೇವಾಲಯದ ಅಂಗಭೋಗ ಖಂಡಸ್ಪುಟಿತ ಜೀರ್ಣೋದ್ಧಾರಕ್ಕೆ ದಾನ ನೀಡಿದುದನ್ನು ತಿಳಿಸುತ್ತದೆ.	
೪೦.	ಕರಾಡಖೇಡ	ದೆಗ್ಲೂರು	ನಾಂದೇಡ	ಮಹಾರಾಷ್ಟ್ರ	--	ಕ್ರಿ.ಶ. ೧೧೩೦	ಮಹಾಮಂಡಳೇಶ್ವರ ಎರೆಯಮರಸ ಎರಡಿರ್ಛಾಸಿರ ಬಾಡದಲ್ಲಿ ಆಳುತ್ತಿದ್ದಾಗ ಪೆರ್ಗ್ಗಡೆ ಹೆಮ್ಮಾಡಿಯರಸ ಕರಡಿಕಲ್ಲ ಸ್ವಯಂಭು ಸೋಮೇಶ್ವರದೇವ ಮಹಾಘಟಿಕಾ ಸ್ಥಾನದ ಆಚಾರ್ಯರಾದ ಶ್ರೀ ಜ್ಞಾನೇಶ್ವರ ಪಂಡಿತರ ಕಾಲನ್ನು ತೊಳೆದು ಹಲವು ಗ್ರಾಮಗಳ ಮೇಲಿನ ಆದಾಯದ ಸುಂಕವನ್ನು ನೀಡಿದ ಉಲ್ಲೇಖವಿದೆ. ಅಲ್ಲದೆ ಕರಡಿಕಲ್ಲಿನಲ್ಲಿ ಮಹಾಘಟಿಕಾಸ್ಥಾನವಿದ್ದು ಅದು ಶಿಕ್ಷಣ ಕೇಂದ್ರವಾಗಿ ಹೆಸರುವಾಸಿಯಾಗಿತ್ತೆಂಬ ಅಂಶಸಹ ತಿಳಿದು ಉಲ್ಲೇಖಿಸುತ್ತದೆ.	ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೬. ನಂ. ೨೭
೧೨೬.	ಯರಗೇರಾ	ರಾಯಚೂರು	ರಾಯಚೂರು	ಕರ್ನಾಟಕ	ಹನುಮಂತಪ್ಪ ವಾಲಿಕಾರ ಅವರ ಮನೆ ಹಿಂಭಾಗದಲ್ಲಿರುವ ಶಿಲಾಫಲಕದ ಮೇಲೆ	ಕ್ರಿ.ಶ. ೧೧೩೦	ಬಸದಿಯಲ್ಲಿರುವ ಮೂರ್ತಿಯ ಅಥವಾ ದೇವತೆಯ ಅಂಗ ರಂಗ ಭೋಗಕ್ಕಾಗಿ ಮಾರಯ್ಯನಾಯಕನು ೪೫೦ಕಮ್ಮ ಭೂಮಿ ೩ ಮನೆನಿವೇಶನ ಹೂದೋಟ ಮುಂತಾದವುಗಳನ್ನು ದಾನ ಮಾಡಿದ ಬಗ್ಗೆ ಮತ್ತು ಮದ್ಗ-೩೦೦ ವಿಭಾಗಕ್ಕೆ ಹೋಗುವ ದಾರಿಯಲ್ಲಿನ ಎರೆಮೆರಿಯಲ್ಲಿನ ದೇವಾಲಯದ ಖಂಡಸ್ಫುಟಿತ ಜೀರ್ಣೋದ್ಧಾರಕ್ಕಾಗಿ ೪ ಗಣದ ವಿದ್ಯಾರ್ಥಿಗಳ ಊಟಕ್ಕಾಗಿಮತ್ತು ದೇವಾಲಯದಲ್ಲಿನ ದೇವತೆಯ ದೀಪಾಲಂಕಾರ ನೇವೇದ್ಯ	ಎ.ಆರ್.ಆಯ್.ಇ. ೧೯೮೭-೮೮ ನಂ. ಬಿ. ೬೨

೧	೨	೩	೪	೫	೬	೭	೮	೯
							ಮುಂತಾದವುಗಳನ್ನು ದಕ್ಷಿಣಾಯನ ಸಂಕ್ರಮಣದ ದಿನ ದಾನ ನೀಡಿದ ಬಗ್ಗೆ ತಿಳಿಸುತ್ತದೆ. ಇವುಗಳ ಜವಾಬ್ದಾರಿಯನ್ನು ಮೂಲಸಂಘ ಕೊಣ್ಣೂರುಗಣ ಮತ್ತು ಮೇಘಪಾಷಾಣ ಗಚ್ಛದ ಕುಂದ ಕುಂದನ್ವಯರಿಗೆ ವಹಿಸಲಾಗಿತ್ತೆಂದು ತಿಳಿಸುತ್ತದೆ.	
೪೧.	ಬೈಲೂರು	ಬಳ್ಳಾರಿ	ಬಳ್ಳಾರಿ	ಕರ್ನಾಟಕ	ಬಸವೇಶ್ವರ ದೇವಾಲಯದ ವರಾಂಡದಲ್ಲಿರುವ ಕಲ್ಲಿನಮೇಲೆ	ಕ್ರಿ.ಶ. ೧೧೩೧	ಮಹಾಮಂಡಳೇಶ್ವರ ಬಳ್ಳಾರೆಯ ಬೀವರಸ ಹಟ್ಟಣದ ಬೀರಗವುಡ ದೋಣಿಯ ಬೀಡಿನ ದೇವಾಸಿ ಪಂಡಿತರ ಕಾಲನ್ನು ತೊಳೆದು ಮಲ್ಲಿಕಾರ್ಜುನ ದೇವರಿಗೆ ಭೂಮಿಯನ್ನು ದಾನ ನೀಡಿದ ಉಲ್ಲೇಖವಿದೆ.	ಎಸ್.ಆಯ್.ಆಯ್. ix (i), ನಂ.೨೨೫
೪೨.	ತಿಳವಳ್ಳಿ	ಹಾನಗಲ್ಲ	ಧಾರವಾಡ	ಕರ್ನಾಟಕ		ಕ್ರಿ.ಶ. ೧೧೩೧	ಶ್ರೀ ಬಂಟೇಶ್ವರ ದೇವರ ನಿವೇದ್ಯಕ್ಕೆ ಚೈತ್ರಪವಿತ್ರಕ್ಕೆ ತಪೋಧನರ ಆಹಾರದಾನಕ್ಕೆ ದಾನವನ್ನು ಉಲ್ಲೇಖಿಸಿದೆ. ತಿಳವಳ್ಳಿಯಲ್ಲಿ ಶ್ರೀಮದನಾದಿಯಗ್ರಹಾರ ಇತ್ತೆಂದು ಸಹತಿಳಿದು ಬರುತ್ತದೆ.	ಕೆ.ಆಯ್. I ನಂ.೨೦
೧೪೨.	ಹುಣಸಿಕಟ್ಟಿ	ಕಲಘಟಗಿ	ಧಾರವಾಡ	ಕರ್ನಾಟಕ	ಮಲ್ಲಿಕಾಕರ್ಜುನ ದೇವಾಲಯ	ಕ್ರಿ.ಶ. ೧೧೩೧	ಅಪೂರ್ಣ, ಶಾಂತಿಗೌಡನ ಉಲ್ಲೇಖ	ಧಾ.ಜಿ.ಶಾ.ಸೂ ಪು.೨೬
೧೪೬.	ಬನ್ನಿಕೊಪ್ಪ	ಸಿಗ್ಗಾವ	ಹಾವೇರಿ	ಕರ್ನಾಟಕ	ಭೀಮನಗುಡಿ ಎದುರು	ಕ್ರಿ.ಶ. ೧೧೩೧	ದಂಡನಾಯಕ ಹೊಲಕೇಶಿ ದೇವನಿಗೆ ಬನ್ನಿಯೂರ ತೀರ್ಥದ ಭೀಮೇಶ್ವರ ದೇವಾಲಯಕ್ಕೆ ಭೂದಾನ.	ಧಾ.ಜಿ.ಶಾ.ಸೂ ಪು.೨೯
೧೫೭.	ಹಾವಣಗಿ	ಹಾನಗಲ್ಲ	ಹಾವೇರಿ	ಕರ್ನಾಟಕ	ಕೊಂಟೆಯಲ್ಲಿ	ಕ್ರಿ.ಶ. ೧೧೩೧	ಮಯೂರವರ್ಮನು ಬನವಾಸಿ ೧೨೦೦ನ್ನು ಆಳುವಾಗ ಸೋಮೆಗಾವುಂಡನಿಂದ ಮೂಲಸ್ಥಾನ ಕರಿದೇವರಿಗೆ ದತ್ತಿ	ಧಾ.ಜಿ.ಶಾ.ಸೂ ಪು.೬೯

೦	೧	೨	೩	೪	೫	೬	೭	೮
೧೬೧.	ಹಿರೇಕೆರೂರು	ಹಿರೇಕೆರೂರು	ಹಾವೇರಿ	ಕರ್ನಾಟಕ	ದುರ್ಗವ್ವನ ಕೆರೆ ಏರಿ	ಕ್ರಿ.ಶ. ೧೧೩೧	ಮಂಡಳಿಕ ಮಸಣರಸಾದಿಗಳಿಂದ ಹೆಗ್ಗೆರೆಗೆ ಸುಂಕದಾನ	ಧಾ.ಜಿ.ಶಾ.ಸೂ ಪು.೭೯
೪೩.	ಕುಕನೂರು	ಯಲಬುರ್ಗ	ಕೊಪ್ಪಳ	ಕರ್ನಾಟಕ	ಊರ ಮೂಲಸ್ಥಾನ ಕಲ್ಲೇಶ್ವರ ಗುಡಿಯಲ್ಲಿರುವ ಶಾಸನ	ಕ್ರಿ.ಶ. ೧೧೩೨	ಈ ಶಾಸನದಲ್ಲಿ ಕಲ್ಯಾಣ ಚಾಳುಕ್ಯ ಆರನೆಯ ವಿಕ್ರಮಾದಿತ್ಯನಿಂದ ದೇವಗಿರಿ ಯಾದವರ ಸಿಂಘಣನವರೆಗೆ (ಕ್ರಿ.ಶ.೧೧೦೭-೧೨೩೨) ಬೇರೆ ಬೇರೆ ಕಾಲದಲ್ಲಿ ಈ ದೇವಾಲಯಕ್ಕೆ ಬಿಟ್ಟ ದಾನಗಳನ್ನು ಸಂಗ್ರಹಿಸಿದೆ ರುದ್ರಾದಿತ್ಯ ಥೈಸಾಸನು ಶ್ರೀಮೂಲಸ್ಥಾನದೇವರ ನೈವೇದ್ಯಕ್ಕೆ ಭೂಮಿ ಬಿಟ್ಟಿದ್ದಾನೆ. ಮತ್ತೆ ಕುಕ್ಕನೂರ ಮಹಾಜನರು ಸಾವಿರ ಜನರು ಸೇರಿ ಮೂಲಸ್ಥಾನ ದೇವರ ನಂದಾ ದೀಪಕ್ಕೆ ಗಾಣವನ್ನು, ಗಂಗಾಧರಯ್ಯ ನಾಯಕನಮಗ ಶ್ರೀಪತಿನಾಯಕನ ಪುತ್ರ ನಾಗವರ್ಮಯ್ಯ ನಾಯಕನು ಭೂಮಿಯನ್ನು ದಾನವಾಗಿ ಬಿಡುತ್ತಾರೆ.	ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೨. ನಂ. ೩೮
೪೪.	ಕರಕಾಂತಪುರ	ಆಧೋನಿ	ಕರ್ನೂಲ	ಆಂಧ್ರ ಪ್ರದೇಶ		ಕ್ರಿ.ಶ. ೧೧೩೨	ಯುವರಾಜ ತೈಲಪದೇವನ ಆಶ್ರಿತನಾಗಿದ್ದ ಸಿಂಧವಾಡಿಯನ್ನು ಆಳುತ್ತಿದ್ದ ಮಹಾ ಮಂಡಳೇಶ್ವರ ಸಿಂಧವಂಶದ ಬಾಚರಸನ ವಂಶಾವಳಿಯನ್ನು ಹಾಗೂ ಶೌರ್ಯವನ್ನು ಸಾಹಿತ್ಯ ಗುಣವುಳ್ಳ, ಪದ್ಯಗಳಲ್ಲಿ ಬಣ್ಣಿಸಿದೆ. ಬಾಚರಸನು ಸ್ವಯಂಭು ಕರೆಕಂಠ ದೇವರಿಗೆ ಸಿಂಧವಾಡಿ-೧೦೦೦ದ ಅವದಾನಿ-೫ರ ಸಮೀಪದ ಗರುಜೆ-೭೦ ರ ಇಟ್ಟಿಗೆ ಎಂಬ ಗ್ರಾಮ ವನ್ನು, ಸೇವೆಗಾಗಿ ಸತ್ರಕ್ಕಾಗಿ ಅಲ್ಲಿನ ಆಚಾ ರ್ಯರು ಚಂದ್ರಮೌಳಿಪಂಡಿತರು, ವಾಮ ದೇವಪಂಡಿತರಿಗೆ ಸರ್ವನಮಸ್ಯವಾಗಿ ಬಿಟ್ಟು ದುದನ್ನು ತಿಳಿಸುತ್ತದೆ.	ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೫. ನಂ. ೨೭೬

೧	೨	೩	೪	೫	೬	೭	೮	೯
೪೬.	ಲಕ್ಷ್ಮೇಶ್ವರ	ಶಿರಹಟ್ಟಿ	ಧಾರವಾಡ	ಕರ್ನಾಟಕ	ಕರಿಬಸಪ್ಪನ ಮಠದ ಕಂಭದ ಮೇಲೆ	ಕ್ರಿ.ಶ. ೧೧೩೨	ಶ್ರೀ ಮಹಾಸ್ಥಾನ ಗೊಗ್ಗಿಯ ಬಸದಿಯ ಆಚಾರ್ಯ ಇಂದ್ರ ಕೀರ್ತಿ ಪಂಡಿತರಿಗೆ ಮಲ್ಲಿಯಣ, ಸಮಸ್ತ ದೇವಪುತ್ರರು ಲಕ್ಕಿ ಸೆಟ್ಟಿ ಮೊದಲಾದವರು ಮನೆಯನ್ನು ನಿರ್ಮಿಸಿ ಕೊಟ್ಟರು ಗೊಗ್ಗಿಯ ಬಸದಿಯ ಪೂಜಾರಿ ಹೇಮದೇವ ಬಾದ್ಯರಿಗೆ ಬಲ್ಲವರಸರ ಹಿರಿಯರಾಣಿ ದಾನ ನೀಡಿದುದನ್ನು ಸಹ ದಾಖಲಿಸಿದೆ.	ಎಸ್.ಆಯ್.ಆಯ್. XX, ನಂ.೧೦೨
೪೭.	ಚಿಲ್ಮಕುರು	ಕಮಲಾಪುರಂ	ಗುಂಡ್ಲಪೇಟ	ಆಂಧ್ರಪ್ರದೇಶ		ಕ್ರಿ.ಶ. ೧೧೩೨	ತ್ರೈಲೋಕ್ಯಮಲ್ಲ ಮಲ್ಲಿದೇವ ಮಹಾರಾಜ ಮುಳ್ಳಿ-೩೦೦ನ್ನು ಆಳುತ್ತಿದ್ದಾಗ ಚಿರ್ಮಕೂರಲಗವನ್ನು ಭೀಮರನ್ನು ಆಳುತ್ತಿದ್ದನು ಎಂದು ಸಿಂಗಯ್ಯ ಎಂಬುವವನು ಚಿರ್ಮಕೂರಲಗದಲ್ಲಿ ಒಂದು ಕೆರೆಯನ್ನು ಕಟ್ಟಿಸಿದನೆಂದು ಸಹ ತಿಳಿಸುತ್ತದೆ.	ಎಸ್.ಆಯ್.ಆಯ್ ix, (i) ನಂ.೨೨೭
೪೮.	ಕಲ್ಲೂರು	ಯಲಬುರ್ಗ	ಕೊಪ್ಪಳ	ಕರ್ನಾಟಕ	ಕಲ್ಲಿನಾಥ ದೇವಾಲಯದ ಹೊರ ಆವರಣದಲ್ಲಿ ಕಂಬದ ಮೇಲೆ ಬರೆದಿರುವ ಶಾಸನ	ಕ್ರಿ.ಶ. ೧೧೩೨	ಸಾಮಂತ ಆಚರಸನ ಮಗ ರಾಯಸಾಧರ ಪೆರ್ಮಾಡಿ ದೇವನ ಆಳ್ವಿಕೆಯಲ್ಲಿ ಕುಕ್ಕನೂರು-೩೦ ರೊಳಗಿನ ಕಲ್ಲೂರ ಸ್ವಯಂಭು ಕಲಿದೇವರಿಗೆ ಶ್ರೀ ಉಪೇಂದ್ರದೇವಿ ಸಬ್ಬಕ್ರತು ಸೋಮಯಾಜಿಯ ವಂಶಸ್ಥನಾದ ಸುಂಕ ವೆರ್ಗಡೆ ಮಹೇಶ್ವರಯ್ಯನು ದಾನ ನೀಡುತ್ತಾನೆ. ಎಂದು ದಾಖಲಿಸಿದೆ.	ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೨. ನಂ. ೧೬
೪೯.	ಅಥರ್ಗಾ	ಇಂಡಿ	ಬಿಜಾಪುರ	ಕರ್ನಾಟಕ		ಕ್ರಿ.ಶ. ೧೧೩೩	ತರ್ದವಾಡಿನಾಡ ಪೆರ್ಗ್ಗಡೆ ದಂಡನಾಯಕ ವೈಜನಾಥಯ್ಯ ತಡವಲಿಗೆಯ ಪ್ರಭು ದಂಡನಾಯಕ ಕಲಿದೇವಯ್ಯ ನೀಡಿದ ಭೂದಾನವನ್ನು ತಿಳಿಸುತ್ತದೆ.	ಎಸ್. ಆಯ್.ಆಯ್ ನಂ.೧೦೩

೧	೨	೩	೪	೫	೬	೭	೮	೯
೫೦.	ಮಲಘಾನ	ಸಿಂಧಗಿ	ಬಿಜಾಪುರ	ಕರ್ನಾಟಕ		ಕ್ರಿ.ಶ. ೧೧೩೩	ಶಿಲಾಹಾರ ಮನೆತನದ ಮಹಾಮಂಡಳೇಶ್ವರ ಕುಮಾರ ಸೋವರಸರು ಶ್ರೀಮತ್ಸರ್ವ್ವನ ಸದಗ್ರಹಾರ ಮಲ್ಲಿಗಾಣದ ಶ್ರೀ ಸ್ವಯಂಭು ದೇವರಿಗೆ ನೀಡಿದ ದಾನವನ್ನು ತಿಳಿಸುತ್ತದೆ.	ಎಸ್.ಆಯ್.ಆಯ್ XX, ನಂ.೧೦೪
೫೧.	ಹೊನ್ನಾಳಿ	ಹೊನ್ನಾಳಿ	ದಾವಣಗೆರೆ	ಕರ್ನಾಟತ	ಸಿದ್ದೇಶ್ವರ ದೇವಾಲಯದ ಹಿಂದೆ ಹೊನ್ನಾಳಿ ನಂ೫೦ರ ಹಿಂಭಾಗದಲ್ಲಿ ನೆಟ್ಟಿರುವಕಲ್ಲು	ಕ್ರಿ.ಶ. ೧೧೩೩	ಅಗ್ರಹಾರ ಸೂರಡಿಯ ಹೊನ್ನೆಯ ಮಗ ಬೀರಯ್ಯ ಅಗ್ನಿಪ್ರವೇಶ ಮಾಡಿದ ಉಲ್ಲೇಖವಿದೆ.	ಎಮ್.ಎ.ಆರ್. ನಂ.೧೯೪೨
೫೨.	ಕರಾಡಖೇಡ	ದೇಗೂರು	ನಾಂದೇಡ	ಮಹಾರಾಷ್ಟ್ರ		ಕ್ರಿ.ಶ. ೧೧೩೩	ಭೂಲೋಕಮಲ್ಲನ ಉತ್ತರದಿಕ್ಕಿನ ದಿಗ್ವಿಜಯವನ್ನು ತಿಳಿಸುವುದಲ್ಲಿದೆ ಇವನ ದಂಡನಾಯಕ ಶ್ರೀಧರಯ್ಯ ಅವರವಾಡಿ ೭೦೦ಹಾಗೂ ಬೋಧನ-೭೦೦ರ ಸಾಮಂತಿಕೆಯನ್ನಾಳುತ್ತಿದ್ದಾಗ ಸೋಮನಾಥ ದೇವಾಲಯದ ಖರ್ಚುವೆಚ್ಚಕ್ಕೆ ನೀಡಿದ ದಾನಗಳನ್ನು ತಿಳಿಸುತ್ತದೆ.	ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೬. ನಂ. ೭೪
೫೩.	ಪೆದ್ದತಂಬಳಂ	ಅಧೋನಿ	ಕರ್ನೂಲು	ಆಂಧ್ರಪ್ರದೇಶ	ಪೆದ್ದತುಂಬಳಂ ಗ್ರಾಮದಲ್ಲಿ ಪಾಳುಬಿದ್ದಿರುವ ಈಶ್ವರ ದೇವಾಲಯದ ಪ್ರಾಕಾರದಲ್ಲಿ ನಿಲ್ಲಿಸಿರುವ ಒಂದು ಕಲ್ಲಿನ ಮೇಲೆ	ಕ್ರಿ.ಶ. ೧೧೩೩	ಸಿಂಧವಾಡಿ-೧೦೦೦ದ ದೊರೆ ಮಹಾಮಂಡಳೇಶ್ವರ ತ್ರೈಲೋಕ್ಯಮಲ್ಲಿದೇವನು ತುಂಬಳದ ಪಂಚಲಿಂಗೇಶ್ವರ ದೇವರ ಸೇವೆಗೆ ನೀಡಿದ ದಾನವನ್ನು ತಿಳಿಸುತ್ತದೆ.	ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೫. ನಂ. ೩೦೧
೫೪.	ಗಂಗಾಪುರಂ	ಮೆಹಬೂಬ್ ನಗರ	ಮೆಹಬೂಬ್ ನಗರ	ಆಂಧ್ರಪ್ರದೇಶ	ಗಂಗಾಪುರಂ ಗ್ರಾಮದ ಉತ್ತರ ದಿಕ್ಕಿನಲ್ಲಿರುವ ಚೌಡಯ್ಯ ಚೆರುವು ಎಂಬಕೆರೆಯ ಏರಿಯ ಮೇಲೆ ನಿಲ್ಲಿಸಿರುವ ಕಲ್ಲಿನ ಮೇಲೆ	ಕ್ರಿ.ಶ. ೧೧೩೪	ಬಹುಶಃ ದೊರೆಯಮಗ ತೈಲಪದೇವನ ದಂಡನಾಯಕ ಜಯಾನಂದ ಭಟ್ಟರ ಸಾನಿಧ್ಯದಲ್ಲಿ ಕಂದೂರುನಾಡಿನ ಸುಂಕವೆರ್ಗ್ಗಡೆ ಬವ್ವರಸ ಮತ್ತು ಇತರ ಅಧಿಕಾರಿಗಳು ಸಮಸ್ತ ಸೆಟ್ಟಿ ಕಾರರೂ ಕಟ್ಟೆಯ ಸೋಮನಾಥ ದೇವರ ನಂದಾದೀವಿಗೆಗೆ ಧೂಪಕ್ಕೆ ವಡ್ಡರಾವುಳ ಮತ್ತು ಹೆಜ್ಜುಂಕದಲ್ಲಿ ತಿಂಗಳಿಗೆ ಇಷ್ಟೆಂದು ದತ್ತಿನೀಡಿರುವುದನ್ನು ಕರ್ತಾದಿದೇವ ಎಂಬುವ ವನು ಪಡೆದನೆಂದು ತಿಳಿಸುತ್ತದೆ.	ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೫. ನಂ. ೩೦೩

೦	೧	೨	೩	೪	೫	೬	೭	೮
೫೫.	ರಾಮದುರ್ಗ	ಆಲೂರು	ಕರ್ನೂಲು	ಆಂಧ್ರಪ್ರದೇಶ	ರಾಮದುರ್ಗ ಗ್ರಾಮದ ಭಿಮೇಶ್ವರ ದೇವಾಲಯದ ಪ್ರಕಾರದಲ್ಲಿ ಬಿದ್ದಿರುವ ಒಂದು ಕಲ್ಲಿನ ಮೇಲೆ	ಕ್ರಿ.ಶ. ೧೧೩೪	ಮಹಾಮಂಡಳೇಶ್ವರ ವೀರನೊಳಂಬ ಇರುಂಗೋಳ ಚೋಳ ಮಹಾರಾಜನು ಇಂದವಲಿಯ ಬಾಪುಟಸೆಟ್ಟಿ ಬಮ್ಮಿಕವ್ವೆಯರ ಮಗ ವಡ್ಡ ವ್ಯವಹಾರಿ ಬೀವಿಸೆಟ್ಟಿಯು ಪ್ರತಿಷ್ಠೆ ಮಾಡಿಸಿದ ಭೀಮೇಶ್ವರ ದೇವರ ಸೇವೆಗೆ ೬ ಮತ್ತರು ಭೂಮಿ, ಒಂದು ಹೂದೋಟ, ಒಂದುಗಾಣ ಒಂದು ಮನೆ ನಿವೇಶನಗಳನ್ನು ದತ್ತಿಯಾಗಿ ನೀಡಿದ್ದನ್ನು ಇಲ್ಲಿ ದಾಖಲಿಸಿದೆ. ಆ ದೇವಾಲಯದ ತಪೋಧನ ಕೇತರಾಸಿ ಮಾಧವರಾಸಿಗಳ ಆಹಾರ ವಸ್ತುಗಳಿಗೂ ದತ್ತಿಯನ್ನು ನೀಡಲಾಯಿತೆಂದು ಉಲ್ಲೇಖಿಸಿದೆ.	ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೫. ನಂ. ೩೩೧
೫೬.	ಮುರಹರಿ	ಸಿಂಧನೂರು	ರಾಯಚೂರು	ಕರ್ನಾಟಕ	ಮುರಹರಿ ದೇವಾಲಯದ ನವರಂಗದ ಗೋಡೆಗೆ ಆನಿಸಿರುವ ಶಾಸನ	ಕ್ರಿ.ಶ. ೧೧೩೪	ಮಹಾಮಂಡಳೇಶ್ವರ ಸಿಂಧಕುಲದ ಬಾಚರಸನಪೆರ್ಗಡೆ ಬೆನಿವಣ ಇವನ ಪತ್ನಿ ಚನ್ನಿಯಕ್ಕ ಮಗ ನಾಚಣನೆಂಬುವನಿದ್ದನೆಂದು ಮತ್ತು ಬಾಚರಸ ಮತ್ತು ಬೆನಿಮಯರು ಕೇಶವ ದೇವಾಲಯಕ್ಕೆ ಪೂಜಾರಿಗಳ ಜೀವನಕ್ಕೆ ದಾನ ನೀಡಿದರೆಂದು ದಾಖಲಿಸಿದೆ.	ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೭. ನಂ. ೬
೫೭.	ಏರಿಗೆ	ದೆಗ್ಲೂರು	ನಾಂದೇಡ	ಮಹಾರಾಷ್ಟ್ರ		ಕ್ರಿ.ಶ. ೧೧೩೫	ವೆಣ್ಣಮಯ್ಯ ಕಟ್ಟಿಸಿದ ಕೇಶವದೇವಾಲಯಕ್ಕೆ ಅಗ್ರಹಾರ ಏರಿಗೆಯ ಮಹಾಜನರು, ಪ್ರಭುಗಳು ಶಾಲೆಯ ಘಟಿಗಳು ಬ್ರಹ್ಮಪುರಿಯ ಮಹಾಜನರು ಏರಿಗೆ ತಡಗೂರು, ಸಿರಿಮಲಿಗೆ, ಬವರಗಾವೆಯ ಮೂಲಿಗೆ ಪ್ರಭುಗಳು ಸೇರಿ ದಾನ ನೀಡಿದ ವಿವರವನ್ನು ದಾಖಲಿಸಿದೆ.	ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೭. ನಂ. ೬೨
೫೮.	ಮಣ್ಣೂರು	ಇಂಡಿ	ಬಿಜಾಪುರ	ಕರ್ನಾಟಕ	ಭೀಮೇಶ್ವರ ದೇವಾಲಯದ ಎದುರಿಗೆ ಇರುವ ಕಲ್ಲಿನ ಮೇಲೆ	ಕ್ರಿ.ಶ. ೧೧೩೪	ಶಾಸನವುತ್ಕಟಿತಗೊಂಡಿದ್ದು ಗಾವುಂಡರ ಹೆಸರು ಹಾಳಾಗಿ ಹೋಗಿದೆ. ದಂಡನಾಯಕ ಮತ್ತು	ಎಸ್.ಆಯ್.ಆಯ್. XX, ನಂ.೧೦೫

೧	೨	೩	೪	೫	೬	೭	೮	೯
							ಮಣಿಯೂರ ಪ್ರಭು ಸ್ವಯಂಭು ಭಿಮೇಶ್ವರ ದೇವರಿಗೆ ಭೂಮಿಯನ್ನು ದತ್ತಿಯಾಗಿ ನೀಡಿದರೆಂದು ದಾಖಲಿಸಿದೆ.	
೫೯.	ನಾಡ	ಇಂಡಿ	ಬಿಜಾಪುರ	ಕರ್ನಾಟಕ	ಚವಡಿ ಗ್ರಾಮದ ಹತ್ತಿರ ನಿಂತಿರುವ ಒಂದು ಕಲ್ಲಿನ ಮೇಲೆ	ಕ್ರಿ.ಶ. ೧೧೩೪	ಚಂಡಿಮರಸರು ಪ್ರತಿಷ್ಠೆಮಾಡಿದ ಚಂಡೇಶ್ವರ ದೇವರಿಗೆ ಮುಂಮುರಿದಂಡಗಳು ಬಿಟ್ಟದಾನವನ್ನು ಉಲ್ಲೇಖಿಸುತ್ತದೆ.	ಎಸ್.ಆಯ್.ಆಯ್. XX, ನಂ.೧೧೬
೬೦.	ಕಲ್ಲೂರು	ಮಾನ್ವಿ	ರಾಯಚೂರು	ಕರ್ನಾಟಕ	ಕಲ್ಲೂರು ಗ್ರಾಮದ ಹನುಮಂತ ಗುಡಿಯ ಎಡಭಾಗದ ಗೋಡೆಯ ಮೇಲೆ	ಕ್ರಿ.ಶ. ೧೧೩೪	ಮುಂದುಗುಂದೂರು-೩೦೦ನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳುತ್ತಿದ್ದ ಮಹಾಮಂಡಳೇಶ್ವರ ಬೂಚಿದೇವರಸನನ್ನು ಈ ಶಾಸನವು ಮಾಹಿಷ್ಮತೀಪುರವರಾಧೀಶ್ವರ, ಅಹಿಹಯ ವಂಶೋದ್ಭವ, ಅತ್ಯುಗ್ರ ನರಶಿರೋದರ್ಪ್ಪಣಧ್ವಜ ಮಲೆಪರ ಘೋಷಣ, ಬಂಟರ ಬಾವ, ಕೇಶವದೇವರ ಪಾದಾಬ್ಜಭೃಂಗ ಮುಂತಾದ ವಿಶೇಷಣಗಳಿಂದ ಹೊಗಳಿವೆ.	ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೭. ನಂ. ೬೭
೧೨೭.	ಹೈದರಾಬಾದ	ಹೈದರಾಬಾದ	ಹೈದರಾಬಾದ	ಆಂಧ್ರಪ್ರದೇಶ		ಕ್ರಿ.ಶ. ೧೧೩೪	ಮೇಲ್ಭಾಗವು ಒಡೆದಿದ್ದು ಕಳೆದಿದೆ. ಇದು ರವಿಯರಸ ಮತ್ತು ಇತರರಿಂದ ಖರೀದಿಸಲ್ಪಟ್ಟ ಭೂಮಿಯ ದಾನದ ಬಗ್ಗೆ ತಿಳಿಸುತ್ತವೆ ಮತ್ತು ಮನ್ನೆಯ ಮಲ್ಲಿರೇವರಸ ನಿಂದ ಸೋಮನಾಥ ದೇವರ ಪೂಜೆ ಮತ್ತು ಅರ್ಪಣೆಗಾಗಿ ಹಣ ಮತ್ತು ಮನೆ (ನಿವೇಶನ) ದಾನ ನೀಡಿದ ಬಗ್ಗೆ ತಿಳಿಸುತ್ತದೆ. ಈ ದಾನದಲ್ಲಿ ಮಹಾಜನರು ಪ್ರಭುಗಳು ಮತ್ತು ಮೂಲಿಗರ ಪಾತ್ರವೂ ಇದೆ. ಇದರ ಮೊದಲಿನ ಭಾಗವು ಹಾಳಾಗಿದ್ದು ಈ ದೇವಾಲಯದ ನಿರ್ಮಾಪಕನೆಂದು ತಿಳಿಯಲಾಗಿರುವ ಮಾದಿರಾಜನ ವರ್ಣನೆ ಮಾಡುವ ಪದ ಪುಂಜಗಳನ್ನು ಹೊಂದಿದೆ.	ಎ.ಆರ್.ಇ.ಪಿ. ೧೯೬೦-೬೧ ನಂ. ಬಿ. ೨೩

೧	೨	೩	೪	೫	೬	೭	೮	೯
೧೩೦.	ಹೈದರಾಬಾದ	ಹೈದರಾಬಾದ	ಹೈದರಾಬಾದ	ಆಂಧ್ರಪ್ರದೇಶ		ಕ್ರಿ.ಶ. ೧೧೩೪	ಈ ಶಾಸನವು ಹಾಳಾಗಿದ್ದು ಇದು ಬಹುಶಃ ಸೋಮೇಶ್ವರ ದೇವರಿಗೆ ಮನ್ನೆಯ ಮಲ್ಲಿದೇವರಸ ಮಹಾಜನರು ಪ್ರಭುಗಳು ಮತ್ತು ಇತರರಿಂದ ಭೂಮಿ ಮತ್ತು ಹಣವನ್ನು ದಾನನೀಡಿದ ಬಗ್ಗೆ ತಿಳಿಸುತ್ತದೆ.	ಎ.ಪಿ.ಎ.ಆರ್. ಇ.ಪಿ. ೧೯೬೫ ನಂ. ೧೮೭
೬೧.	ಹಾವೇರಿ	ಹಾವೇರಿ	ಹಾವೇರಿ	ಕರ್ನಾಟಕ	Two pices of a slab in the Kallumandapa		ತೃಟಿತಗೊಂಡಿರುವ ಈ ಶಾಸನವು ಅಗ್ರಹಾರ ಪಾವರಿಯಲ್ಲಿ ಮಹಾಜನರು ಕೆರೆಯನ್ನು ನಿರ್ಮಿಸಿದನ್ನು ಉಲ್ಲೇಖಿಸುತ್ತದೆ. ಆಹವಮಲ್ಲನ ಕಾಲದಲ್ಲಿ ಈ ಸ್ಥಳವು ಅಗ್ರಹಾರವಾಗಿ ಮಾರ್ಪಟ್ಟಿತ್ತೆಂದು ಮತ್ತು ಬನವಾಸಿಯ ಪ್ರಾಂತ್ಯಾಧಿಕಾರಿಯಾದ ಕೂಮಾರ ಪದ್ಮನಾಭರಸನು ಈ ಕೆರೆಯನ್ನು ಜೀರ್ಣೋದ್ಧಾರಗೊಳಿಸಿ ದಾನವನ್ನು ಪರಿಷ್ಕರಿಸಿದನೆಂದು ದಾಖಲಿಸಿದೆ. ಕದಂಬ ವಂಶದ ಮಲ್ಲಿಕಾರ್ಜುನನು ನಾಲ್ಕುನೂರು ಮಹಾದಾನರಿಂದ ಪೂಜಿಸಲ್ಪಿಸಿದನಂತರ ಈ ಕೆರೆಯನ್ನು ದುರಸ್ತಿಗೊಳಿಸಿದನೆಂದು ಉಲ್ಲೇಖಿಸುತ್ತದೆ.	ಎಸ್.ಆಯ್.ಆಯ್. xviii, No. 136
೬೨.	ಕುರುಡಿ	ಮಾನ್ವಿ	ರಾಯಚೂರು	ಕರ್ನಾಟಕ	ಕುರುಡಿ ಗ್ರಾಮದ ಈಶ್ವರ ಗುಡಿಯ ಬಾಗಿಲ ಮುಂಭಾಗದ ಕಲ್ಲಿನ ಮೇಲೆ	ಕ್ರಿ.ಶ. ೧೧೩೪	ಈ ಶಾಸನವು ಸೋಮಭಟ್ಟೋಪಾಧ್ಯಾಯರ ಮಕ್ಕಳಾದ ನಾರಾಯಣ ಭಟ್ಟೋಪಾಧ್ಯಾಯರು ಅಗ್ರಹಾರ ರೂಢಿಯ ಮಹಾಜನರಿಗೆ ತಿಂಗಳಿಗೆ ಹೊನ್ನ ಗದ್ಯಾಣವನ್ನು ದಾನಮಾಡಿದ ವಿಷಯವನ್ನು ತಿಳಿಸುತ್ತದೆ.	ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೭. ನಂ. ೪೫
೬೩.	ಕೊಲಿಮಿ ಗುಂಡ್ಲ	ಕೋಯಿಲ ಕುಂಟ್ಲಾ	ಕರ್ನೂಲ	ಆಂಧ್ರ ಪ್ರದೇಶ	ಕೋಯಿಲ ಕುಂಟ್ಲಾ ಗ್ರಾಮದ ನಾಲ್ಕು ದೇವಾಲಯಗಳ ಪ್ರಾಂಗಣದಲ್ಲಿ ಬಿದ್ದಿರುವ ಒಂದು ಒಂದು ಕಲ್ಲಿನ ಮೇಲೆ	ಕ್ರಿ.ಶ. ೧೧೩೪	ನಂದ್ಯಾಲೆಯಿಂದ ಆಳುತ್ತಿದ್ದ ಮಹಾಮಂಡಳೇಶ್ವರ ವಂಕಣಚೋಳಮಹಾರಾಜನು ಕೋಲ್ಮಗುಡಿಯ ಪ್ರಭುಮುಪ್ಪಿರಟಿ ಎಂಬುವವನು ಮಾಡಿಸಿದ ಕೇಶವದೇವರ ಸೇವೆಗೆ ಪೂಜಾರಿ	ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೫. ನಂ. ೩೫೨

೧	೨	೩	೪	೫	೬	೭	೮	೯
							ವ್ಯಾಸಣ ಭಟ್ಟನಿಗೆ ದತ್ತಿ ನೀಡಿದುದನ್ನು ದಾಖಲಿಸಿದೆ. ಈ ಶಾಸನವನ್ನು ಬರೆದವನು ಕರಣಂ ದೇವರಾಜ ಕಂಡರಿಸಿದವನು ಕಾಸಿಗ ಬಮ್ಮೋಜ.	
೬೪.	ದೇವಗಿರಿ	ಹಾವೇರಿ	ಧಾರವಾಡ	ಕರ್ನಾಟಕ		ಕ್ರಿ.ಶ. ೧೧೩೪	ಈ ಶಾಸನವು ಕಂಕಣೇಶ್ವರ ದೇವರಿಗೆ ಕೇಚರವಂಶದ ಕಾಶಿಯಮ್ಮರಸನು ಮತ್ತು ಬಾಸವೂರು-೧೪೦ರ ಪ್ರಾಂತಾಧಿಕಾರಿಗಳು. ಭೂದಾನ ನೀಡಿದುದನ್ನು ಉಲ್ಲೇಖಿಸಿದೆ ಇವನು ಮಹೇಶ್ವರ ಪಂಥದ ಆರಾಧಕನಾಗಿದ್ದನು.	ಎಸ್.ಆಯ್.ಆಯ್. xvii, ನಂ.೧೩೭
೬೫.	ನಿಂಬರಗಿ	ಆಳಂದ	ಕಲ್ಬುರ್ಗಿ	ಕರ್ನಾಟಕ		ಕ್ರಿ.ಶ. ೧೧೩೪	ಈ ಶಾಸನದಲ್ಲಿ ಪ್ರಾರಂಭದಲ್ಲಿ ಚಾಲುಕ್ಯರ ವಂಶಾವಳಿಯನ್ನು ಹೇಳಿದ್ದು ಸೋಮೇಶ್ವರನ ಪತ್ನಿ ಬಮ್ಮರ್ದೇವಿಯ ಉಲ್ಲೇಖವಿದೆ.	ಕಲ್ಬುರ್ಗಿ ಜಿಲ್ಲೆಯ ಶಾಸನಗಳು. ನಂ.೩
೪೫.	ರಾಮದುರ್ಗ	ಆಲೂರು	ಕರ್ನೂಲ	ಆಂಧ್ರ ಪ್ರದೇಶ	ಹನುಮರದೊಣೆಯ ಸಮೀಪದಲ್ಲಿ ಬಿದ್ದಿರುವ ಒಂದು ಕಲ್ಲಿನ ಮೇಲೆ	ಕ್ರಿ.ಶ. ೧೧೩೪	ಸೌದೊರೆ ಗಂಗೋಡ ಗರುಡಸೆಟ್ಟಿಯ ಆಳ್ವಿಕೆಯಲ್ಲಿ ಗೋನೆಯನಾಯಕ ಎಂಬುವವನು ಮಾಚಿಕವ್ವನ ಬೆಟ್ಟದ ಕಲಿದೇವರ ಪ್ರತಿಷ್ಠೆ ಮಾಡಿ ಹನುಕನಹಾಳ ಮಲ್ಲಿಪಂಡಿತರಿಗೆ ಭೂಮಿಯನ್ನು ದತ್ತಿಯಾಗಿ ಕೊಟ್ಟನೆಂದು ದಾಖಲಿಸಿದೆ.	ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೫. ನಂ. ೩೨೬
೧೪೯.	ದೇವಗಿರಿ	ಸಿಗ್ಗಾವ	ಹಾವೇರಿ	ಕರ್ನಾಟಕ	ಮಲ್ಲಿಕಾರ್ಜುನ ದೇವರ ಗುಡಿ	ಕ್ರಿ.ಶ. ೧೧೩೪	ಅಪೂರ್ಣ ಕಲಿಯಮ್ಮ ರಸನಿಂದ ಕಂಕಾಳೇಶ್ವರ ದೇವರಿಗೆ ಭೂದಾನ.	ಪು.೧೮೩-೧೮೭
೬೬.	ಪೆದ್ದಚಪ್ಪಲಿ	ಕಾಮಾಪುರಂ	ಕಡಪಾ	ಆಂಧ್ರಪ್ರದೇಶ	ಪೆದ್ದ ಚಪ್ಪಲಿ ಗ್ರಾಮದ ಸಮೀಪದಲ್ಲಿರುವ ಒಂದು ಕಂಬದ ಮೇಲೆ	ಕ್ರಿ.ಶ. ೧೧೩೫	ಯುವರಾಜಕುಮಾರ ಅಹವಮಲ್ಲದೇವನು ಚಪ್ಪಳಿಯ ಉತ್ತರೇಶ್ವರ ದೇವರ ಸೇವೆಗೆ ಒಂದು ಕೆರೆಯನ್ನು ೨೦ ಮತ್ತರು ಹೊಲವನ್ನು ಒಂದು ತೋಟವನ್ನು ದತ್ತಿಯಾಗಿ ಕೊಟ್ಟುದನ್ನು ಇದರಲ್ಲಿ ದಾಖಲಿಸಿದೆ. ಪಾಶುಪತಾಚಾರ್ಯ	ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೫. ನಂ. ೩೭೩

೦	೧	೨	೩	೪	೫	೬	೭	೮
							ಅಗಸ್ತಿರಾವುಳ ಪಂಡಿತರಿಗೆ ಈ ದತ್ತಿಯನ್ನು ನೀಡಲಾಯಿತೆಂದು ಇಲ್ಲಿ ಹೇಳಿದೆ.	
೬೭.	ಸಿದ್ದಾಪುರ	ಧಾರವಾಡ	ಧಾರವಾಡ	ಕರ್ನಾಟಕ		ಕ್ರಿ.ಶ. ೧೧೩೫	ಮಹಾಮಂಡಳೇಶ್ವರ ಗೋವೆಯ ಕದಂಬ ಜಯಕೇಶಿಯ ಕಾಲದಲ್ಲಿ ಹೊಸವೊಳಲದ ಶ್ರೀಮೂಲಸ್ಥಾನ ದೇವರಿಗೆ ಮೂಲಿಗ ಹಳ್ಳಿ ಗಾವುಂಡನು ನೀಡಿದ ಭೂದಾನ ಮತ್ತು ಈತನ ಪುತ್ರ ಹುಲಿಯವ್ಮನ ಕಟ್ಟಿಸಿದ ನಂದಿ ಮಂಟಪದ ಉಲ್ಲೇಖವಿದೆ.	ಧಾ.ಜಿ.ಸೂ ನಂ.೫೯
೬೮.	ಔರಾದ	ದಕ್ಷಿಣ ಸೊಲ್ಲಾಪುರ	ಸೊಲ್ಲಾಪುರ	ಮಹಾರಾಷ್ಟ್ರ	ಔರಾದ ಗ್ರಾಮದ ಪ್ರವೇಶ ದ್ವಾರದ ಬಳಿಯ ಶಾಸನ	ಕ್ರಿ.ಶ. ೧೧೩೫	ಸಾಮಂತದೊರೆ ಬಿಜ್ಜಳದೇವನ ಅಧಿಕಾರಿ ಲಾಳ, ಚೋಳ, ಗೂರ್ಜರ, ಕೇರಳ ಮೊದಲಾದ ದೇಶಗಳ ರಾಜರನ್ನು ಸದೆಬಡಿದನಲ್ಲದೇ ಶಿಲಾಹಾರ ದೊರೆಗಂಡರಾದಿತ್ಯನನ್ನು ಸೋಲಿಸಿ ರಾಜರನ್ನೆಲ್ಲ ಹತ್ತಿಕ್ಕಿನದನೆಂದು ಅವನ ಪರಾಕ್ರಮವನ್ನು ಇಲ್ಲಿ ಕೊಂಡಾಡಲಾಗಿದೆ. ಬಿಜ್ಜಳನ ಪಾದಪದ್ಮೋಪಜೀವಿಯಾಗಿದ್ದ ದಂಡನಾಯಕ ವೈಜನಾಥಯ್ಯನ ವಂಶಾವಳಿ ಮತ್ತು ಈ ವೈಜರಸ ಅವರವಾಡಿಯಲ್ಲಿ ವೃಜೇಶ್ವರ ತ್ರಿಕೂಟ ದೇವಾಲಯವನ್ನು ಕಟ್ಟಿಸಿ ದಾನನೀಡಿದ ವಿವರನೂ ಇದೆ.	ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೬. ನಂ. ೧೩೭
೬೯.	ಉರುವಕೊಂಡ	ಗುತ್ತಿ	ಅನಂತ ಪುರ	ಆಂಧ್ರಪ್ರದೇಶ	ಉರುವಕೊಂಡ ಗ್ರಾಮದ ಕೆರೆದ-೦ ಏರಿಯ ಮೇಲೆ ನಿಲ್ಲಿಸಿರುವ ಒಂದು ಕಲ್ಲಿನ ಮೇಲೆ	ಕ್ರಿ.ಶ. ೧೧೩೫	ಮಹಾಪ್ರಧಾನಿ ದಂಡನಾಯಕ ಬಮ್ಮರ್ದೇವಯ್ಯ ಹೆಗ್ಗಡೆ ಗುತ್ತಿಯ ದಂಡನಾಯಕ ಸಂಬುದೇವ ಪಾಳೆಯ ಸಾವಸಿ ಆನಂದಭಟ್ಟ, ಸೈರಾಜಭಟ್ಟ, ಸೋಮಭಟ್ಟ, ಮಹಾಪ್ರಧಾನ ದಂಡನಾಯಕ ಕಾಳಿಮಯ್ಯನಾಯಕ ರೇಚರಸ ರಾಮದೇವನಾಯಕ, ಮಲ್ಲೆಯನಾಯಕ, ರಾಜಾಧ್ಯಕ್ಷ ಬಾಚರಸ ದಾಸಮರಸರು ಕೂಚಿ	ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೬. ನಂ. ೧೧೪

೧	೨	೩	೪	೫	೬	೭	೮	೯
							ಸೆಟ್ಟಿಯ ಜೊತೆಗೆ ಸೇರಿ ಜಕ್ಕೇಶ್ವರ ಕೇಶವ ದೇವರಿಗೆ ಭೂಮಿ ಹಾಗೂ ಒಂದು ಗಾಣವನ್ನು ದತ್ತಿಯಾಗಿ ನೀಡಿದುದನ್ನು ದಾಖಲಿಸಿದೆ.	
೭೦.	ಅರೆ	ಕರವೀರ	ಕೊಲ್ಹಾಪುರ	ಮಹಾರಾಷ್ಟ್ರ	ಅರೆ ಪಾರ್ಶ್ವನಾಥ ಬಸದಿಯಲ್ಲಿನ ಶಾಸನ	ಕ್ರಿ.ಶ. ೧೧೩೫	ಮಹಾಮಂಡಳೇಶ್ವರ ಗಂಡರಾದಿತ್ಯನ ಅಧಿಕಾರಿ ಮಹಾಸಾಮಂತ ನಿಂಬದೇವನ ಬಿರುದಾವಳಿಗಳು ಹಾಗೂ ಪರಾಕ್ರಮದ ವರ್ಣನೆ ಮತ್ತು ಕವಡೆಗಳ್ಳಗೊದ ಬಳಿಯ ಸಂತೆಯ ಮುದ್ದೊಗ್ಡೆಯಲ್ಲಿ ಕಟ್ಟಿಸಿದ ಪಾರ್ಶ್ವನಾಥ ಬಸದಿಗೆ ವಿವಿಧ ರೀತಿಯ ದಾನ ನೀಡಿದ ವಿವರವಿದೆ. ಇದು ಅಂದಿನ ಕಾಲದ ವ್ಯಾಪಾರ ಕ್ರಮವನ್ನು ತಿಳಿದುಕೊಳ್ಳಲು ಸಹಾಯಕಾರಿಯಾಗಿದೆಯಲ್ಲಿದೆ. ಅನೇಕ ವ್ಯಾಪಾರಿಗಳು ಸೇರಿ ಮೂಲಸಂಘ ದೇಸಿಗಣ ಪುಸ್ತಕ ಗಚ್ಚದ ಕೊಲ್ಹಾಪುರದ ರೂಪನಾರಾಯಣ ಬಸದಿಯಾಚಾರ್ಯರಪ್ಪ ಶೃತಕೀರ್ತಿ ದೇವರ ಸಮ್ಮುಖದಲ್ಲಿ ದಾನನೀಡಿದ ವಿವರವೂ ಇದೆ.	ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೬. ನಂ. ೨೬
೭೧.	ತಾಳಗುಂದ	ಶಿಕಾರಿಪುರ	ಶಿವಮೊಗ್ಗ	ಕರ್ನಾಟಕ	ತಾಳಗುಂದ ಕಸಬೆಯಲ್ಲಿ ಗಂಗಾಧರ ದೇವಾಲಯದ ಮುಂದೆ ಇರುವ ಕಲ್ಲು	ಕ್ರಿ.ಶ. ೧೧೩೫	ಗೋವರ ಗೊಳಜನ ಮಗ ಸೋಮಯನು ವೀರಮರಣ ಹೊಂದಿದುದನ್ನು ತಿಳಿಸುತ್ತದೆ.	ಎಂ.ಎ.ಆರ್ ನಂ.೧೯೨೭
೧೩೮.	ತಂಬೂರು	ಕಲಘಟಗಿ	ಧಾರವಾಡ	ಕರ್ನಾಟಕ	ಈಶ್ವರ ಗುಡಿ ವೀರಗಲ್ಲು	ಕ್ರಿ.ಶ. ೧೧೩೫	ಯುದ್ಧಮಲ್ಲ ಮಾಚನಾಯಕನ ವೀರ ಮರಣ.	ಧಾ.ಜಿ.ಶಾ.ಸೂ ಪು.೨೫
೧೫೦.	ಹಾವೇರಿ	ಸಿಗ್ಗಾವ	ಹಾವೇರಿ	ಕರ್ನಾಟಕ	ಕಲ್ಲುಮಂಟಪ	ಕ್ರಿ.ಶ ೧೧೩೫	ತೃಟಿತ ದಂಡನಾಯಕ ಕುಮಾರ ಪದ್ಮನಾಭರಸನ ವಿನಂತಿಯ ಮೇರೆಗೆ ಕದಂಬ ಮಲ್ಲಿಕಾರ್ಜುನ ದೇವನಿಂದ ಕೆರೆಗೆ ಪುನರ್ದತ್ತಿ.	ಧಾ.ಜಿ.ಶಾ.ಸೂ ಪು.೪೮
೧೫೬.	ಯಳವಟ್ಟಿ	ಹಾನಗಲ್ಲ	ಹಾವೇರಿ	ಕರ್ನಾಟಕ	ಗುರುಪಾದಪ್ಪ ಎಲಿಗಾರ ಮನೆ ಆವರಣ ವೀರಗಲ್ಲು	ಕ್ರಿ.ಶ. ೧೧೩೫	ಸಹಾನಿಕೇಶಿ ಯಲವಟ್ಟಿಯ ಮೇಲೆ ದಾಳಿ ಮಾಡಿದಾಗ ನಾಯಕನೊಬ್ಬನ ಮರಣ	ಧಾ.ಜಿ.ಶಾ.ಸೂ ಪು.೬೬

೧	೨	೩	೪	೫	೬	೭	೮	೯
೭೨.	ಹುಣಸಗಿ	ಸುರಪುರ	ಗುಲ್ಬರ್ಗಾ	ಕರ್ನಾಟಕ		ಕ್ರಿ.ಶ. ೧೧೩೬	ಈ ಶಾಸನದ ಮೇಲ್ಭಾಗ ಒಡೆದು ಹೋಗಿದ್ದು ಮಧ್ಯಭಾಗದ ಅಕ್ಷರಗಳು ಸಂಪೂರ್ಣ ಸವೆದಿವೆ. ಸರ್ವ ಸಮಸ್ಯದಗ್ರಹಾರ ವಿಕ್ರಮಪುರದ ಕೇಶವದೇವರಿಗೆ ಶ್ರೋತ್ರಿಯರು, ಉಪಾಧ್ಯಾಯರು, ಬ್ರಾಹ್ಮಣ ದೇವಿಕವ್ವೆಗೆ ಭೂದತ್ತಿ ಮತ್ತು ನಿವೇಶನಗಳನ್ನು ಬಿಟ್ಟುದುದನ್ನು ತಿಳಿಸುತ್ತದೆ. ತೈಲಪನ ಆಳ್ವಿಕೆಯಲ್ಲಿ ಅವನ ಹೆಗ್ಗಡೆ ನಲ್ಲಪಯ್ಯ ನಾಯಕ ಎಂಬುವವನು ರಾವಿತೊರೆಯ ಮಲ್ಲಿಕಾರ್ಜುನ ದೇವರ ಸೇವೆಗೆ ಹಲವು ದತ್ತಿಯನ್ನು ನೀಡಿದಂತೆ ದಾಖಲಿಸಿದೆ.	ಸುರಪುರ ತಾಲೂಕಿನ ಶಾಸನಗಳು ನಂ. ೧೫
೭೩.	ರಾಚೂರು	ಕಲ್ವಕುರ್ತಿ ಒಂದು ಕಲ್ಲಿನ ಮೇಲೆ	ಮೆಹಬೂಬ್ ನಗರ	ಆಂಧ್ರಪ್ರದೇಶ	ರಾಚೂರು ಗ್ರಾಮದ ಆಂಜನೇಯ ದೇವಾಲಯದ ಬಳಿ ಬಿದ್ದಿರುವ	ಕ್ರಿ.ಶ. ೧೧೩೬	ತೈಲಪನ ಆಳ್ವಿಕೆಯಲ್ಲಿ ಅವನ ಹೆಗ್ಗಡೆ ನಲ್ಲಪಯ್ಯ ನಾಯಕ ಎಂಬುವವನು ರಾವಿತೊರೆಯ ಮಲ್ಲಿಕಾರ್ಜುನ ದೇವರ ಸೇವೆಗೆ ಹಲವು ದತ್ತಿಯನ್ನು ನೀಡಿದಂತೆ ದಾಖಲಿಸಿವೆ.	ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೫. ನಂ. ೫೧೯
೭೪.	ಸೊಲ್ಲಾಪುರ ನಗರ	ಉತ್ತರ ಸೊಲ್ಲಾಪುರ	ಸೊಲ್ಲಾಪುರ	ಮಹಾರಾಷ್ಟ್ರ	ಬುಧವಾರ ಪೇಟೆಯ ಬಳಿ ದೊರೆತ ಶಾಸನ	ಕ್ರಿ.ಶ. ೧೧೩೬	ಮಹಾಮಂಡಳೇಶ್ವರ ಬಿಜ್ಜಲದೇವರಸ ಹಾನಗಲ್ಲ ಕೋಟೆಯ ಮೇಲೆ ದಾಳಿಮಾಡಿ ಮಾಂಡಲಿಕ ಮಸಣಯನನ್ನು ಸದೆಬಡಿದು ಕಪ್ಪವನ್ನು ಪಡೆದನೆಂದು ಮತ್ತು ತನ್ನ ಮಹಾಪ್ರಧಾನ ಕನ್ನಪ್ಪಯ್ಯನಾಯಕ ಸೊನ್ನಲಿಗೆಯಲ್ಲಿ ಕಟ್ಟಿಸಿದ ಶ್ರೀಕನ್ನೇಶ್ವರ, ಚಟ್ಟೇಶ್ವರ ಮಲ್ಲಿಕಾರ್ಜುನ ಎಂಬ ತ್ರಿಕೂಟ ಶಿವಾಲಯಕ್ಕೆ ಬಿಜ್ಜಳನು ದಾನ ನೀಡಿದ ವಿವರವೂ ಇದೆ.	ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೬. ನಂ. ೧೩೪

೧	೨	೩	೪	೫	೬	೭	೮	೯
೭೫.	ವೆಂಕಟಾಪುರ	ಧಾರವಾಡ	ಧಾರವಾಡ	ಕರ್ನಾಟಕ		ಕ್ರಿ.ಶ. ೧೧೩೬	ಗೋವೆಯ ಕದಂಬ ವಂಶದ ಎರಡನೆಯ ಜಯಕೇಶಿ ಹಾಗೂ ಆತನರಾಣಿ ಮೈಳಲ ಮಹಾದೇವಿಯರು ಆಳುವಾಗ ಪದ್ಮಲದೇವಿ ನೀಡಿದ ದಾನ ಕಾಳತ್ರಯದ ದೇವರಾಶಿ ಆಚಾರ್ಯರು ಕೆಸರುಕಲ್ಲಿನಿಂದ ಲಿಂಗಪ್ರತಿಷ್ಠೆ ಮಾಡಿದ ವಿಷಯವಿದೆ.	ಧಾ.ಜಿ.ಸೂ. ನಂ.೫೫
೭೬.	ಗದಗ	ಗದಗ	ಧಾರವಾಡ	ಕರ್ನಾಟಕ	ವೀರನಾರಾಯಣ ಗುಡಿಯ ಉತ್ತರ ದಿಕ್ಕಿನ ಪ್ರಾಕಾರದ ಗೋಡೆಯ ಮೇಲಿರುವ ಶಾಸನ	ಕ್ರಿ.ಶ. ೧೧೩೬	ಕಾಳಿಮಯ್ಯಗೇರಿಯ ಋಷಿಕೇಶದೇವರ ಪೂಜೆ ಮತ್ತು ನೈವೇದ್ಯಕ್ಕೆಂದು ಭೂದಾನ ಮತ್ತು ಹಣವನ್ನು ಚೌಡಯ್ಯ ದೇವನು ನೀಡಿದ್ದನೆಂದು ತಿಳಿಸುತ್ತದೆ. ಇದೇಸ್ಥಳದ ಮಹಣ್ಣ ಮತ್ತು ಅವನ ಪತ್ನಿಯಾದ ಮಾಳಿಯಕ್ಕ ಇವರು ಕೇಶವ ದೇವರಿಗೆ ಭೂದಾನ ನೀಡಿದುದನ್ನು ತಿಳಿಸುತ್ತದೆ ಇದಲ್ಲದೆ ಮದುವಣನು ಸಹ ಇದೇದೇವರಿಗೆ ಹಣವನ್ನು ದಾನ ನೀಡಿದ ಬಗ್ಗೆ ತಿಳಿಸುತ್ತದೆ.	ಆಸ್.ಆಯ್.ಆಯ್ xvii, ನಂ.೧೩೮
೭೭.	ಐಹೊಳೆ	ಹುನಗುಂದ	ಬಿಜಾಪುರ	ಕರ್ನಾಟಕ	ಜೋರ್ತಿಲಿಂಗ ದೇವಾಲಯದ ಬಳಿ ಇರುವ ಕಲ್ಲಿನ ಮಲೆ ಇರುವ ಶಾಸನ	ಕ್ರಿ.ಶ. ೧೧೩೬	ಅಯ್ಯಾವೊಳೆಯ ಅಬ್ಬು ಕಬ್ಬೆದೇವರಿಗೆ ಚಟ್ಟಿಮಯ್ಯ ಮತ್ತು ಮತ್ತೊಬ್ಬವ್ಯಕ್ತಿ ಸೇರಿ ದಾನ ನೀಡಿರುವುದನ್ನು ತಿಳಿಸುತ್ತದೆ. ಎರಣ್ಣರ ಬಮ್ಮಣ ಗೋವಿಯು ಸಹ ದಾನ ನೀಡಿದುದನ್ನು ತಿಳಿಸುತ್ತದೆ. ಅಲ್ಲದೆ ಐಹೊಳೆಯು ಮಹಾಕಾಶಿ ಎಂದು ಹೆಸರು ಪಡೆದಿತ್ತೆಂದು ಹೇಳಿದೆ.	ಆಸ್.ಆಯ್.ಆಯ್ XV, ನಂ.೮೫
೭೮.	ಮಾದಿನೂರು	ಕೊಪ್ಪಳ	ಕೊಪ್ಪಳ	ಕರ್ನಾಟಕ	ಮಾದಿನೂರು ಗ್ರಾಮದ ವೀರಭದ್ರ ದೇವಾಲಯದಲ್ಲಿರುವ ಶಾಸನ	ಕ್ರಿ.ಶ. ೧೧೩೬	ಈ ಶಾಸನವು ಮೂರು ಕಾಲಗಳಲ್ಲಿ ರಚಿತವಾಗಿದ್ದು ಭೂಲೋಕಮಲ್ಲನ ೧೧ನೇ ವರ್ಷದಲ್ಲಿ ಈ ಊರ ಮಹಾಜನರು ತಮ್ಮಾರ ನಡುವೆ ನಡುವೆ ಇಜ್ಜ ದೇವಾಲಯವನ್ನು ಜೀರ್ಣೋದ್ಧಾರ ಮಾಡಿ ಹಲವು ದಾನಗಳನ್ನು ನೀಡಿದರೆಂದು ತಿಳಿಸುತ್ತದೆ.	ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೨. ನಂ. ೨೬

೧	೨	೩	೪	೫	೬	೭	೮	೯
೭೯.	ಬೆಳವಟ್ಟಿ	ಹಾನಗಲ್ಲ	ಧಾರವಾಡ	ಕರ್ನಾಟತ	ಅದೇ ಗೋಡೆಯಲ್ಲಿರುವ ನಾಲ್ಕನೆಯ ಕಲ್ಲಿನ ಮೇಲೆ	ಕ್ರಿ.ಶ. ೧೧೩೬	ಕದಂಬವಂಶದ ಮಲ್ಲಿಕಾರ್ಜುನ ದೇವನು ಬನವಾಸಿ-೧೨೦೦೦ ಮತ್ತು ಹಾನಗಲ್ಲ ೫೦೦ನ್ನು ಆಳುತ್ತಿರುವಾಗ ದಂಡನಾಯಕ ಪದ್ಮನಾಭ ಯ್ಯನ ಅಧಿಕಾರಿಗಳಾದ ಸುಂಕವೆರ್ಗಡೆ ನಾರ ಣಯ್ಯ ನಾಯಕ ಮತ್ತು ಪೆರ್ಗ್ಗಡೆ ಅಪ್ಪಿಮಯ್ಯ ಇವರುಗಳು ತಮ್ಮ ತೆರಿಗೆ ಅದಾಯದಲ್ಲಿ ಗೋಕುಳೇಶ್ವರ ದೇವಾಲಯಕ್ಕೆ ಮತ್ತು ಬ್ರಾಹ್ಮಣರ ಆಹಾರಕ್ಕೆಂದು ನಾನ ನೀಡಿದು ದುನ್ನು ಉಲ್ಲೇಖಿಸುತ್ತದೆ.	ಎ.ಆರ್.ಐ.ಇ ನಂ.೧೯೪೬-೪೭
೮೦.	ಮಲ್ಲಾಬಾದ	ಜೇವರ್ಗಿ	ಕಲ್ಬುರ್ಗಿ	ಕರ್ನಾಟಕ		ಕ್ರಿ.ಶ. ೧೧೩೬	ಮಹಾಮಂಡಳೇಶ್ವರ ಎಳಮೇಲ ಸೋವಿ ದೇವರಸ ಹೆಗ್ಗಡ ಪಾವಣಯ್ಯರು ಎಳರಾಮೆ ತೀರ್ಥದ ರಾಮೇಶ್ವರ ದೇವರಿಗೆ ನೀಡಿದ ದಾನ ವನ್ನು ತಿಳಿಸುತ್ತದೆ.	ಕ.ಜಿ.ಶಾ. ನಂ.೪೮
೧೫೩.	ಬೆಳವತ್ತಿ	ಹಾನಗಲ್ಲ	ಹಾವೇರಿ	ಕರ್ನಾಟಕ		ಕ್ರಿ.ಶ. ೧೧೩೬	ದಂಡನಾಯಕ ಪದ್ಮನಾಭಯ್ಯನ ಅಧಿಕಾರಿಗಳಾದ ಸುಂಕವೆರ್ಗಡೆ ನಾರಣಯ್ಯ ನಾಯಕಾದಿಗಳಿಂದ ಗೋಕುಳೇಶ್ವರನಿಗೆ ದಾನ ತ್ರುಟಿತ ಅಸ್ಪಷ್ಟ.	ಧಾ.ಜಿ.ಶಾ.ಸೂ ಪು.೬೫
೧೩೯.	ತಂಬೂರು	ಕಲಘಟಗಿ	ಧಾರವಾಡ	ಕರ್ನಾಟಕ	ಕೋಟೆಯ ಕಂದಕ ವೀರಗಲ್ಲು ಈಗ ಕ.ವಿ.ವಿ.ಯ ಕನ್ನಡ ಸಂಶೋಧನ ಸಂಸ್ಥೆಯಸಂಗ್ರಹಾಲಯದಲ್ಲಿದೆ	ಕ್ರಿ.ಶ. ೧೧೩೬	ಬಿಜ್ಜಳ ದೇವನು ಹಾನಗಲ್ ಕೋಟೆಯನ್ನು ಮುತ್ತಿದಾಗ ಕೇತೆಯನಾಯಕ ಆನೆಯೊಡನೆ ಕಾದು ವೀರಮರಣ ಹೊಂದಿದ ಉಲ್ಲೇಖ.	ಧಾ.ಜಿ.ಶಾ.ಸೂ ಪು.೨೫
೧೩೧.	ಸಿಂಗನಹಳ್ಳಿ	ಧಾರವಾಡ	ಧಾರವಾಡ	ಕರ್ನಾಟಕ	ಕಲ್ಮೇಶ್ವರ ಗುಡಿ-ಎದುರು	ಕ್ರಿ.ಶ. ೧೧೩೬	ಜಯಕೇಶಿಯಿಂದ ಸೋಮನಾಥ ದೇವರಿಗೆ ಭೂದಾನ	ಧಾ.ಜಿ.ಶಾ.ಸೂ ಪು.೩

೦	೧	೨	೩	೪	೫	೬	೭	೮
೮೧.	ಬರದೂರು			ಕರ್ನಾಟಕ	ಕಲ್ಮೇಶ್ವರ ದೇವಾಲಯದ ಮುಂದಿರುವ ಕಲ್ಲಿನ ಮೇಲೆ		ಕಿಮುಳೆಯ ಬಲ್ಲೇಸ್ವರ ದೇವರಿಗೆ ಭೂದಾನ ನೀಡಿದ ಉಲ್ಲೇಖವಿದೆ.	ಎ.ಆರ್.ಐ.ಇ ನಂ.೧೯೪೫-೪೬
೮೨.	ಸಾಲೂರು	ಶಿಕಾರಿಪುರ	ಶಿವಮೊಗ್ಗ	ಕರ್ನಾಟಕ	ಸಾಲೂರಿನಲ್ಲಿ ಭದ್ರಪ್ಪಗೌಡರ ಗದ್ದೆಯಲ್ಲಿ ನಟ್ಟಿರುವ ಎರಡನೇ ಕಲ್ಲು	ಕ್ರಿ.ಶ. ೧೧೩೭	ಚಿಕ್ಕಕೇಸಿಮಯ್ಯಗಳ ಬ್ರಾಹ್ಮಿಣಿ ಜನ್ನಬ್ಬೆಯ ಮಗ ಸಂಕರಭಟ್ಟನ ಬ್ರಾಹ್ಮಿಣಿ ಬಿಜ್ಜಬ್ಬೆಯು ಚಂದೇಶ್ವರ ದೇವರಿಗೆ ನೀಡಿದ ದಾನವನ್ನು ಉಲ್ಲೇಖಿಸಿದೆ.	ಎಂ.ಎ.ಆರ್. ನಂ.೧೯೩೦
೮೩.	ಇಂಗಳೇಶ್ವರ	ಬಾಗೇವಾಡಿ	ಬಿಜಾಪುರ	ಕರ್ನಾಟಕ	ನಾರಾಯಣ ದೇವಾಲಯದ ಎಡಗಡೆ ಗೋಡೆಯ ಮೇಲಿರುವ ಶಾಸನ	ಕ್ರಿ.ಶ. ೧೧೩೭	ಡೊಂಕಣಕೇರಿಯ ನೂರು ಮಹಾಜನರು ಬ್ರಾಹ್ಮಣರ ಭೋಜನಕ್ಕೆಂದು ನೀಡಿದ ದಾನನ್ನು ತಿಳಿಸುತ್ತದೆ.	ಎಸ್.ಆಯ್.ಅಯ್. XV, ನಂ.೧೫
೮೪.	ಬಂಕಾಪುರ	ಬಂಕಾಪುರ	ಧಾರವಾಡ	ಕರ್ನಾಟಕ	ನಗರೇಶ್ವರ ದೇವಾಲಯದ ನವರಂಗದ ಬಲಗಡೆಯ ಕಂಬದ ಮೇಲಿರುವ ಶಾಸನ	ಕ್ರಿ.ಶ. ೧೧೩೭	ಬಂಕಾಪುರದ ನಕರೇಶ್ವರ ದೇವರ ಆಚಾರ್ಯ ಚಂದ್ರಭೂಷಣ ಪಂಡಿತರನ್ನು ಕರೆದು ಬಸವ ಗೌಂಡ, ಬೆಳೆಯರ ಸಂಕಣ ಅಂಡುರಕಾಶಿಯಣ ಗೇತಣ ಸಿಂಗಜ್ಜ ಮುಂತಾದ ವರುಸೇರಿ ನೀಡಿದದಾನವನ್ನು ತಿಳಿಸುತ್ತದೆ. ಇದೇ ದೇವರಿಗೆ ಬಂಮ್ಮ ಗಾವುಂಡನು ಸಹ ದಾನ ನೀಡಿದುದನ್ನು ತಿಳಿಸುತ್ತದೆ.	ಎಸ್.ಆಯ್.ಅಯ್. XVII, ನಂ.೧೫೯
೮೫.	ಸಿರಿವಾಳ	ಶರಪುರ	ಕಲ್ಬುರ್ಗಿ	ಕರ್ನಾಟಕ		ಕ್ರಿ.ಶ. ೧೧೩೭	ಮಹಾಮಂಡಳೇಶ್ವರ ಸೋವಿದೇವರಸರವ್ವೇ ಲೋಕಾದೇವಿಯರ ಮಹಾಪ್ರಧಾನ ಸಗರ-೫೦೦ರ ದಂಡನಾಯಕರ ಅಲ್ಲ ಹುಲಿಯ ರಸರು ಸೆಟ್ಟಿಯರು ವೆಣ್ಣರು, ಮುಂತಾದವರು ಶ್ರೀಮತ್ಕದಂಬೇಶ್ವರ ದೇವಾಲಯಕ್ಕೆ ದಾನ ಬಿಟ್ಟ ಉಲ್ಲೇಖವಿದೆ.	ಕ.ಜಿ.ಶಾ. ನಂ.೩೨
೮೬.	ಹರಸೂರು	ಕಲ್ಬುರ್ಗಿ	ಗುಲ್ಬರ್ಗ	ಕರ್ನಾಟಕ		ಕ್ರಿ.ಶ. ೧೧೩೭	ಈ ಶಾಸನವು ಶ್ರೀ ಜೋಗಮ ಪೆರ್ಮಾಡಿ ಬಿಜ್ಜಳರನ್ನ ಉಲ್ಲೇಖಿಸಿದೆ.	ಗು.ಜಿ.ಶಾ ನಂ.೮

೧	೨	೩	೪	೫	೬	೭	೮	೯
೮೭.	ಸೇಡಂ	ಕಲ್ಬುರ್ಗಿ	ಕಲ್ಬುರ್ಗಿ	ಕರ್ನಾಟಕ		ಕ್ರಿ.ಶ. ೧೧೩೭	ಶಾಸನದ ಪ್ರಾರಂಭದಲ್ಲಿ ಚಾಲುಕ್ಯರ ವಂಶಾವಳಿಯನ್ನು ಹೇಳಿದ್ದು ಹಿರಿಯ ದಂಡ ನಾಯಕ ಕಾಳಿಮಯ್ಯನ ಅಳಿಯ ದಂಡನಾಯಕ ಭೀಮರಸ ಮಹಾಜನಗಳು ಸೇರಿ ತೆಂಕಣ ಬಸದಿಯ ಆದಿಭಟ್ಟಾರಕದೇವನಿಗೆ ನೀಡಿದ ದಾನಗಳನ್ನು ತಿಳಿಸುತ್ತದೆ.	ಕ.ಜಿ.ಶಾ. ನಂ.೧೭
೮೮.	ಕುರುಡಿ	ಮಾನ್ವಿ	ರಾಯಚೂರು	ಕರ್ನಾಟಕ	ಕುರುಡಿ ಗ್ರಾಮದ ಗುಡಿಯಲ್ಲಿರುವ ಶಾಸನ	ಕ್ರಿ.ಶ. ೧೧೩೭	ಮಹಾಪ್ರಧಾನ ನಿಂಬಣಯ್ಯನ ಮಗಳು ದಾನ ನೀಡಿದ ವಿವರವನ್ನು ಕೊಡಲಾಗಿದೆ.	ರಾ.ಜಿ.ಶಾ. ನಂ.೪೪
೮೯.	ಅಣದೂರು	ತುಳಜಾಪುರ	ಉಸ್ಮಾನಾಬಾವ	ಮಹಾರಾಷ್ಟ್ರ		ಕ್ರಿ.ಶ. ೧೧೩೭	ಪಿರಿಯರಸಿ ಪಟ್ಟಮಹಾದೇವಿ ರಾಜಲದೇವಿಯ ಕೈ ಕೆಳಗಿನ ಅಧಿಕಾರಿ (ಹೆಸರಿದ್ದ ಭಾಗ ನಾಶವಾಗಿದೆ) ಹಾಗೂ ಹನ್ನಿಪಳ್ಳಿಯ ಹೆಗ್ಗಡೆ ಮಲ್ಲಿಯಣ್ಣನಾಯಕ ಮೊದಲಾದವರು ಸೇರಿ ಮಾಣಿಕೇಶ್ವರ ದೇವರ ನಂದಾದೀಪಕ್ಕೆ ದಾನ ನೀಡಿದ ವಿವರವಿದೆ.	ಮ.ಕ.ಶಾ ನಂ.೯
೯೦.	ಗಣಜೂರು	ಹಾವೇರಿ	ಧಾರವಾಡ	ಕರ್ನಾಟಕ	ಹನುಮಾನ ದೇವಾಲಯದ ಬಳಿ ಇರುವ ವೀರಗಲ್ಲು	ಕ್ರಿ.ಶ. ೧೧೩೭ -೩೮	ಮಹಾಮಂಡಳೇಶ್ವರ ಕದಂಬ ಮಲ್ಲಿಕಾರ್ಜುನ ಲೊಕ್ಕಿ ಗುಂಡಿಯನ್ನು ಮುತ್ತಿ ಲಗ್ಗೆ ಮಾಡುವಾಗ ಬಮ್ಮೆಯನಾಯಕ ಎಂಬುವವ ಮಡಿದನೆಂದು ತಿಳಿಸುತ್ತದೆ.	ಎಸ್.ಆಯ್.ಆಯ್ ನಂ.೧೪೦
೧೩೩.	ಗದಗ	ಗದಗ	ಗದಗ್	ಕರ್ನಾಟಕ		ಕ್ರಿ.ಶ. ೧೧೩೭	ಅಸ್ಪಷ್ಟ ಚೌಡೆಯ ದೇವನಿಂದ ಕಾಳಿಮಯ್ಯಗೇರಿಯ ಹೃಷಿಕೇಶ ದೇವರಿಗೆ ಭೂದಾನ	ಧಾ.ಜಿ.ಶಾ.ಸೂ ಪು.೯
೯೧.	ಮದನಬಾವಿ	ಧಾರವಾಡ	ಧಾರವಾಡ	ಕರ್ನಾಟಕ	ಹನುಮಾನ ದೇವಾಲಯದ ಬಳಿ ಇರುವ ವೀರಗಲ್ಲು	ಕ್ರಿ.ಶ. ೧೧೩೮	ಮಹಾಮಂಡಳೇಶ್ವರ ಜಯಕೇಶಿದೇವ ಪಟ್ಟಮಹಾದೇವಿ ಮೈಳಲ ಮಹಾದೇವಿ ಯುವರಾಜ ಪೆರ್ಮಾಡಿದೇವ ವಿಜಯಾದಿತ್ಯ ಕುಮಾರರ ಸಹಿತ ಭೋಗೂರುನಲ್ಲಿ ಆಳ್ವಿಕೆ ನಡೆಸುತ್ತಿದ್ದನೆಂದು ತಿಳಿಸುತ್ತದೆ.	ಎಸ್.ಆಯ್.ಆಯ್ XV, ನಂ.೧೬

೧	೨	೩	೪	೫	೬	೭	೮	೯
೯೨.	ನರಗುಂದ	ನರಗುಂದ	ಧಾರವಾಡ	ಕರ್ನಾಟಕ	ಶಂಕರಲಿಂಗ ದೇವಾಲಯದ ಗೋಡೆಯ ಮೇಲಿರುವ ಕಲ್ಲಿನ ಮೇಲೆ	ಕ್ರಿ.ಶ. ೧೧೩೭	ಭೂಲೋಕಮಲ್ಲನ ಅಧಿಕಾರಿಗಳಾದ ಕಾಳಿದಾಸ, ಮಹದೇವರಸ, ರುದ್ರದೇವರಸರ ಉಲ್ಲೇಖ ಬರುತ್ತದೆಯಲ್ಲದೆ ನರಗುಂದವು ಮಹಾ ಅಗ್ರಹಾರ ವಾಗಿತ್ತೆಂಬ ವಿಷಯವೂ ತಿಳಿದು ಬರುತ್ತದೆ.	ಕೆ.ಆಯ್. V ನಂ.೨೪
೯೩.	ಕುರ್ತಕೋಟಿ	ಗದಗ	ಧಾರವಾಡ	ಕರ್ನಾಟಕ	ನರಸಿಂಹ ಸ್ವಾಮಿ ದೇವಾಲಯದ ಎದುರಿಗಿರುವ ಕಲ್ಲಿನ ಮೇಲೆ	ಕ್ರಿ.ಶ. ೧೧೩೮	ಕಳಾರ ಬೊಪ್ಪನಾಯಕನು ತನ್ನ ಆದಾಯ ದಲ್ಲಿ ಬರುವ ಸುಂಕವನ್ನು ನರಸಿಂಹ ದೇವರ ಮುಂದೆ ಎರಡುನೂರು ದೀಪವನ್ನು ಉರಿಸುವ ಎಣ್ಣೆಗಾಗಿ ದಾನ ಬಿಡುತ್ತಾನೆ ಎಂದೂ ಕುರ್ತ ಕೋಟಿಯು ಒಂದು ಅಗ್ರಹಾರವಾಗಿತ್ತೆಂಬ ವಿಷಯವೂ ಸಹ ತಿಳಿದುಬರುತ್ತದೆ.	ಎಸ್.ಆಯ್.ಆಯ್. XV, ನಂ.೧೭
೯೪.	ಏರಿಗೆ	ದೆಗ್ಲೂರು	ನಾಂದೇಡ	ಮಹಾರಾಷ್ಟ್ರ		ಕ್ರಿ.ಶ. ೧೧೩೮	ಮಹಾಮಂಡಳೇಶ್ವರ ಎರೆಯಮರಸ ಶ್ರೀಮದ ಗ್ರಹಾರನದಕರೇಶ್ವರದಲ್ಲಿ ವೆಣ್ಣಮಯ್ಯ ನಾಯಕ ಕಟ್ಟಿಸಿದ ಶ್ರೀ ಕೇಶವ ದೇವಾಲಯಕ್ಕೆ ದಾನ ನೀಡಿದ ವಿವರವಿದೆ. ದಾನನೀಡುವಾಗ ದೇವಾಲಯದ ಸಮಸ್ತ ಆಗು ಹೋಗುಗಳು ಹಾಗೂ ಖರ್ಚು ವೆಚ್ಚಗಳನ್ನು ಗಮನದಲ್ಲಿಟ್ಟು ಕೊಂಡು ದಾನೀಡಲಾಗುತ್ತಿತ್ತೆಂಬ ಅಂಶ ತಿಳಿದುಬರುತ್ತದೆ.	ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೫. ನಂ. ೩೫೨
೯೫.	ಲಕ್ಷ್ಮೇಶ್ವರ	ಶಿರಹಟ್ಟಿ	ಧಾರವಾಡ	ಕರ್ನಾಟಕ		ಕ್ರಿ.ಶ. ೧೧೩೮	ಸಗರ ವಂಶದ ಜಯಕೇಶಿದೇವ ದಂಡನಾಯಕ ಚಿದ್ದಸನ ದಂಡನಾಯಕ ಮಹಾದೇವರಸ ರಾಜ ಧಾನಿ ಪುಲಿಗೆರೆಯ ಮಹಾಜನರು ಪಂಚಮಠ ಸ್ಥಾನಗಳ ಸೆಟ್ಟಿ ಪ್ರಮುಖರು ಶ್ರೀಸ್ವಯಂಭು ದಕ್ಷಿಣ ಸೋಮನಾಥ ದೇವರಿಗೆ ಅಲ್ಲಿಯ ಸ್ಥಾನಾಚಾರ್ಯ ಶ್ರೀ ಮಜ್ಞಾನ ಸೋಮೇಶ್ವರ ಪಂಡಿತರ ಕಾಲನ್ನು ತೊಳೆದು ದಾನ ನೀಡಿದು ದನ್ನು ತಿಳಿಸುತ್ತದೆ.	ಎಸ್.ಆಯ್.ಆಯ್ XX, ನಂ.೧೭

೧	೨	೩	೪	೫	೬	೭	೮	೯
೯೬.	ಅಣದೂರು	ಬೀದರ್	ಬೀದರ್	ಕರ್ನಾಟಕ		ಕ್ರಿ.ಶ. ೧೧೩೮	ಇಮ್ಮಡಿ ಜಗದೇಕಮಲ್ಲನು ಪಟ್ಟಂಧೋತ್ಸವ ಮಾಡಿಸಿಕೊಂಡ ಸಮಯದಲ್ಲಿ ಅಣಂದೂರಿನ ನಾರಾಣೇಶ್ವರ ದೇವಾಲಯಕ್ಕೆ ಕಳಶಾರೋಹಣವನ್ನು ಮಾಡಿ ಆ ದೇವರ ಸೇವೆಗೆ ಪೂಜೆಗೆ ಮತ್ತು ಬ್ರಾಹ್ಮಣರು ಹಾಗೂ ತಪೋಧನರಗೆ ಅನ್ನದಾನಕ್ಕೆ ಭೂದಾನ ಮಾಡಿದನೆಂದು ತಿಳಿಸಿದೆಯಲ್ಲದೆ ಮಹಾಮಂಡಳೇಶ್ವರ ಬದ್ದರಸನ ಮತ್ತು ಮಹಾಪ್ರಧಾನ ಗೋಪದೇವ ದಂಡನಾಯಕನ ವಂಶಾವಳಿಯನ್ನು ಸಹ ನೀಡಿದೆ.	ಮಾನವಿಕ ಕರ್ನಾಟಕ ನಂ.೩
೯೭.	ಮತ್ತೂರು	ಹಿರೆಕೆರೂರು	ಧಾರವಾಡ	ಕರ್ನಾಟಕ	ಕಲ್ಲೇಶ್ವರ ದೇವಾಲಯದ ಬಳಿ ಇರುವ ವೀರಗಲ್ಲು	ಕ್ರಿ.ಶ. ೧೧೩೮	ಕಮ್ಮನವಳ್ಳಿಯ ಜಕ್ಕಿಸೆಟ್ಟಿಯು ಮುತ್ತೂರಿನ ಮೇಲೆ ದಾಳಿಮಾಡಿದಾಗ ಕಮ್ಮಾರ ಮಾಚನು ಹೋರಾಡಿ ಮಡಿದ ವಿಷಯವನ್ನು ತಿಳಿಸುತ್ತದೆ. ಗೊಡ್ಡಿಗಡಿಯ ಜಕ್ಕಿಗಾವುಂಡ ಮತ್ತು ಕಂಕಗಾವುಂಡರು ಈ ಮಡಿದ ಮಾಚರ ಹಿರಿಯ ಸಹೋದರಿನಿಗೆ ೧೨ಕಮ್ಮ ಭೂಮಿ ಮತ್ತು ೫೦ಕಮ್ಮ ಹಕ್ಕಲು ಭೂಮಿ ದಾನ ನೀಡಿದುದನ್ನು ತಿಳಿಸುತ್ತದೆ.	ಕೆ. ಆಯ್. vi ನಂ.೨೬
೯೮.	ಕುಳಗೇರಿ	ಜೇವರ್ಗಿ	ಕಲ್ಬುರ್ಗಿ	ಕರ್ನಾಟಕ		ಕ್ರಿ.ಶ. ೧೧೩೮	ಕೊಂಡ ಕುಂದಾ ಚಾರ್ಯರ ಶಿಷ್ಯ ನರೇಂದ್ರ ಕೀರ್ತಿ ಮುನೀಂದ್ರರ ವಿಷಯವನ್ನು ಉಲ್ಲೇಖಿಸಿದೆ.	ಕ.ಜಿ.ಶಾ. ನಂ.೨೨
೧೫೨.	ಕೊಂಡೋಜಿ	ಹಾನಗಲ್ಲ	ಹಾವೇರಿ	ಕರ್ನಾಟಕ	ಈಶ್ವರ ದೇವಾಲಯ	ಕ್ರಿ.ಶ. ೧೧೩೮	ಮಲ್ಲಿಕಾರ್ಜುನ ದೇವರಿಂದ ಕೊಣ್ಣಂದೆಯ ಮಲ್ಲಿಕಾರ್ಜುನ ದೇವರಿಗೆ ಭೂದಾನ.	ಧಾ.ಜಿ.ಶಾ.ಸೂ ಪು.೬೦
೧೪೩.	ಅಂದಲಗಿ	ಸಿಗ್ಗಾವ	ಹಾವೇರಿ	ಕರ್ನಾಟಕ	ಬಸಪ್ಪ ಬೆಳಗಲನ ಮನೆ ಆವರಣ	ಕ್ರಿ.ಶ. ೧೧೩೮	ಉದ್ದರ ಹೋಮಿಸೆಟ್ಟಿಯಿಂದ ನಿರ್ಮಿತವಾದ ಹೋಬೇಶ್ವರ ದೇವಾಲಯಕ್ಕೆ ಕನಕಗಾವುಂಡಿ ಕಬ್ಬೆ ಮತ್ತು ಅರವತ್ತು ಒಕ್ಕಲು ಬಿಟ್ಟ ಭೂದಾನ.	ಧಾ.ಜಿ.ಶಾ.ಸೂ ಪು.೨೭

೧	೨	೩	೪	೫	೬	೭	೮	೯
೧೪೪.	ಬಂಕಾಪುರ	ಸಿಗ್ಗಾವ	ಹಾವೇರಿ	ಕರ್ನಾಟಕ	ನಗರೇಶ್ವರಗುಡಿ ಬಲಕಂಬ	ಕ್ರಿ.ಶ. ೧೧೩೮	ಕೆಲವು ಜನರಿಂದ ನಗರೇಶ್ವರ ದೇವಾಲಯಕ್ಕೆ ಭೂದಾನ.	ಧಾ.ಜಿ.ಶಾ.ಸೂ ಪು.೨೮
೧೪೫.	ಬಂಕಾಪುರ	ಸಿಗ್ಗಾವ	ಹಾವೇರಿ	ಕರ್ನಾಟಕ	ನಗರೇಶ್ವರಗುಡಿ ಬಲಕಂಬ	ಕ್ರಿ.ಶ. ೧೧೩೮	ಕಿರಿಯ ಬಂಕಾಪುರದ ಬೊಮ್ಮ ಗಾವುಂಡನಿಂದ ನಗರೇಶ್ವರ ದೇವಾಲಯಕ್ಕೆ ಗದ್ದೆ ದಾನ.	ಧಾ.ಜಿ.ಶಾ.ಸೂ ಪು.೨೮
೧೩೨.	ಎಲಿಶಿರೂರು	ಗದಗ	ಗದಗ್	ಕರ್ನಾಟಕ	ಚಾವಡಿ ಹತ್ತಿರ ವೀರಗಲ್ಲು	ಕ್ರಿ.ಶ. ೧೧೩೮	ತೃಟಿತ, ಮಹಾಮಂಡಳೇಶ್ವರ ಶೋಭನರಸ ಮತ್ತು ಮಹಾಪ್ರಧಾನ ಮಹಾದೇವಯ್ಯರು ನೀಡಿದ ದಾನಶಾಸನ.	ಧಾ.ಜಿ.ಶಾ.ಸೂ ಪು.೮
೯೯.	ಕಲ್ಮಾಲ	ರಾಯಚೂರು	ರಾಯಚೂರು	ಕರ್ನಾಟಕ	ಭೋಗೇಶ್ವರ ದೇವಾಲಯ ಮುಂದಿರುವ ತುಂಡುಶಾಸನ	ಕ್ರಿ.ಶ. ೧೧೩೯	ಇದು ಒಂದು ತುಂಡು ಶಾಸನವಾಗಿದ್ದು ಐನೂರ್ವರು ಸ್ವಾಮಿಗಳ ಉಲ್ಲೇಖವಿದ್ದು ದಾನನೀಡಿದಂತೆ ತಿಳಿದು ಬರುತ್ತದೆ.	ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೭. ನಂ. ೪೬
೧೦೦.	ಪೂಮೆಗಾಮ	ಹಾಸನ	ಹಾಸನ	ಕರ್ನಾಟಕ	ಕಲೇಶ್ವರ ದೇವಾಲಯದ ದಕ್ಷಿಣದ ಕಡೆಗೆ ನೆಟ್ಟಿರುವ ಕಲ್ಲು	ಕ್ರಿ.ಶ. ೧೧೩೯	ಸಹಾನಿ ಬಸವಯ್ಯನು ಪೂಮೆಗಾಮೆಯಲ್ಲಿ ದೇವಾಲಯವನ್ನು ಕಟ್ಟಿಸಿ ಕಲಿ ದೇವರ ಪೂಜೆ ನೈವೇದ್ಯ ಮತ್ತು ಮುನಿಗಳ ಆಹಾರಕ್ಕೆಂದು ಭೂದಾನ ನೀಡಿದುದನ್ನು ತಿಳಿಸುತ್ತದೆ.	
೧೦೧.	ಹಂದರಕಿ	ಚಿತ್ತಾಪುರ	ಗುಲ್ಬರ್ಗ	ಕರ್ನಾಟಕ		ಕ್ರಿ.ಶ. ೧೧೩೯	ಈ ಶಾಸನವನ್ನು ಬಾಚಲದೇವಿಯು ಬರೆಸಿದ್ದು ಮಹಾಮಂಡಳೇಶ್ವರ ಬಿಬ್ಬರಸನ ಬಗ್ಗೆ ತಿಳಿಸುತ್ತದೆ.	ಗು.ಜಿ.ಶಾ ನಂ.೪೧
೧೦೨.	ಏವೂರು	ಸುರಪುರ	ಗುಲ್ಬರ್ಗ	ಕರ್ನಾಟಕ		ಕ್ರಿ.ಶ. ೧೧೩೯	ಸಗರ ವೈನೂರುಂಬಾಡದ ದಂಡನಾಯಕ ಕಂಚರಸರು ಏಹೂರ ಶ್ರೀ ಸ್ವಯಂಭು ಸೋಮೇಶ್ವರ ದೇವರ ಅಂಗಭೋಗಕ್ಕೆ ಹೇಜ್ಜುಂಕದಾನವನ್ನು ನೀಡಿದುದನ್ನು ವಿವರಿಸುತ್ತದೆ.	ಸು.ತಾ.ಶಾ. ನಂ.೧೭
೧೪೦.	ತಂಬೂರು	ಕಲಘಟಗಿ	ಧಾರವಾಡ	ಕರ್ನಾಟಕ	ಊರ ಅಗಸಿ ವೀರಗಲ್ಲು	ಕ್ರಿ.ಶ. ೧೧೩೯	ಗೋಗ್ರಹಣ ಪ್ರಸಂಗದಲ್ಲಿ ವೀರನೊಬ್ಬನ ಮರಣ	ಧಾ.ಜಿ.ಶಾ.ಸೂ ಪು.೨೫

೧	೨	೩	೪	೫	೬	೭	೮	೯
೧೧೦.	ಜಕ್ಕಲಿ	ರೋಣ	ಧಾರವಾಡ	ಕರ್ನಾಟಕ	ವೀರಭದ್ರ ದೇವಾಲಯ ಮುಂಭಾಗದಲ್ಲಿರುವ ಕಲ್ಲಿನ ಮೇಲಿರುವ ಶಾಸನ	ಕ್ರಿ.ಶ. ೧೧೩೯	ಈ ಶಾಸನವು ಬಹಳ ತ್ರುಟಿತಗೊಂಡಿದ್ದು ಮಹಾದೇವ ದಂಡನಾಯಕನ ಹೆಸರನ್ನು ಉಲ್ಲೇಖಿಸುತ್ತದೆ.	ಎಸ್.ಆಯ್.ಆಯ್. XV, ನಂ.೧೮
೧೦೩.	ಮುದನೂರು			ಕರ್ನಾಟಕ	ರಾಮನಾಥ ದೇವಾಲಯದ ಒಂದನೆಯ ಕಂಬದ ಮೇಲ್ಭಾಗದಲ್ಲಿ		ಅಲ್ಲಲ್ಲಿ ಸವೆದಿರುವ ಈ ಶಾಸನದಲ್ಲಿ ಮುದನೂರು ಮಹಾಜನರು ರಾಮೇಶ್ವರ ದೇವಾಲಯದ ಅಂಗಭೋಗ ಇತ್ಯಾದಿ ಕಾರ್ಯಗಳಿಗಾಗಿ ನೀಡಿದ ದತ್ತಿಯ ವಿಷಯವನ್ನು ತಿಳಿಸುತ್ತದೆ.	ಮು.ಮ.ಯ. ಶಾಸನಗಳು ನಂ.೧೬
೧೦೪.	ಬಸವನಂದಿ ಹಳ್ಳಿ	ಉಡುಗಣಿ ಹೋಬಳಿ		ಕರ್ನಾಟಕ	ಬಸವನಂದಿಹಳ್ಳಿಗ್ರಾಮಕ್ಕೆ ಸೇರಿದ ಕಾಡಿನಲ್ಲಿ ಕೆರೆಯ ಒಳಭಾಗದಲ್ಲಿ ನೆಟ್ಟಕಲ್ಲು		ಶ್ರೀಮದನಾದಿಯಗ್ರಹಾರ ತಾಣಗುಂದೂರ ರಾಜಗುರು ಶಿವಶಕ್ತಿ ದೇವರ ಕಾಲನ್ನು ತೊಳೆದು ದಾನನೀಡಿದ ವಿವರವಿದೆ ಶಾಸನದ ೯,೧೦,೧೧ನೇ ಕಾಲುಗಳು ತಿಳಿಸಿಹೋಗಿದೆ.	ಎಂ.ಎ.ಆರ್. ೧೯೨೭
೧೫೮.	ಅಬ್ಬಲೂರು	ಹಿರೇಕೆರೂರು	ಹಾವೇರಿ	ಕರ್ನಾಟಕ	ಬಸವೇಶ್ವರ ದೇವಾಲಯ	ಕ್ರಿ.ಶ. ೧೧೪೪	ಬರ್ಮಗಾವುಂಡ ಮತ್ತು ದಂಡನಾಯಕ ಮಲ್ಲಿಭಾವರಸರಿಂದ ಬ್ರಹ್ಮೇಶ್ವರ ದೇವಾಲಯಕ್ಕೆ ಭೂಮಿ ಮತ್ತು ಸುಂಕದಾನ	ಧಾ.ಜಿ.ಶಾ.ಸೂ. ಪು.೨೩೨-೩೪
೧೩೭.	ಉಗ್ನಿಕೇರಿ	ಕಲಘಟಗಿ	ಧಾರವಾಡ	ಕರ್ನಾಟಕ	ಹನುಮಂತ ದೇವರಗುಡಿ	ಕ್ರಿ.ಶ. ೧೧೭೧	ಪಡೆವಳ ಉದಯಾದಿತ್ಯನು ಮೂಕೇಶ್ವರ ದೇವರಿಗೆ ನೀಡಿದ ಭೂದಾನ	ಧಾ.ಜಿ.ಶಾ.ಸೂ ಪು.೨೪
೧೦೫.	ಗೌಳ್ಳಿಹಳ್ಳಿ	ಖಾನಾಪುರ	ಬೆಳಗಾವಿ	ಕರ್ನಾಟಕ		ಕ್ರಿ.ಶ. ೧೬೯	ಮಹಾಮಂಡಳೇಶ್ವರ ಗೋವೆಯ ಕದಂಬ ಜಯಕೇಶಿ ಮತ್ತು ಅವರ ರಾಣಿ ಮೈಲಳ ಮಹಾದೇವಿ ಮಕ್ಕಳಾದ ಪೆರ್ಮಾಡಿ ವಿಜಯಾದಿತ್ಯರ ಉಲ್ಲೇಖವಿದ್ದು ಮೈಲಳಮಹಾದೇವಿ ವಿಕ್ರಮಾದಿತ್ಯVI ಮತ್ತು ಮಲಯಮತಿ ದೇವಿಯ ಮಗಳೆಂದು ತಿಳಿಸುತ್ತದೆ.	

೦	೧	೨	೩	೪	೫	೬	೭	೮
೧೦೬.	ಹೂಲಿ	ಸೌಂದತ್ತಿ	ಬೆಳಗಾವಿ	ಕರ್ನಾಟಕ			ಚಾಲುಕ್ಯದೊರೆ ಭೂಲೋಕಮಲ್ಲನ ಉಲ್ಲೇಖ ಕಂಡು ಬರುತ್ತದೆ.	ಕೆ.ಆಯ್. ನಂ.೨೨
೧೦೭.	ಶಿವಳ್ಳಿ	ತಾಣಗುಂದ ಹೋಬಳಿ			ಶಿವಳ್ಳಿ ಗ್ರಾಮದ ಹನುಮಂತ ದೇವರ ದೇವಾಲಯದ ಮುಂದೆ ನೆಟ್ಟ ಕಲ್ಲು		ಭೂಲೋಕಮಲ್ಲನ ಉಲ್ಲೇಖವಿದ್ದು ಉಳಿದ ವಿವರಗಳು ನಷ್ಟವಾಗಿವೆ.	ಎಸ್.ಎ.ಆರ್. ನಂ. ೧೯೨೭
೧೦೮.	ಕೊಟಲುಮಚಗಿ	ಗದಗ	ಧಾರವಾಡ	ಕರ್ನಾಟಕ	ಸೋಮೇಶ್ವರ ದೇವಾಲಯದ ಬಳಿ ಇರುವ ಕಲ್ಲಿನ ಮೇಲೆ ಇರುವ ಶಾಸನ		ಬೆಳವೊಲದ ಉಪವಿಭಾಗವಾದ ನೆರೆಯಂಗಲ್-೧೨ರಲ್ಲಿ ಬರುವ ಉವಂಚಿಗೆ ಒಂದು ಅಗ್ರಹಾರವಾಗಿತ್ತೆಂದು ತಿಳಿದು ಬರುತ್ತದೆ. ಅಲ್ಲದೆ ಚಾನುರ ವಂಶದ ಜೇವುಣನ ಮಕ್ಕಳಾದ ಪದ್ಮಣ ಮತ್ತು ಮಾಹಣಯ್ಯನ ಉಲ್ಲೇಖವಿದೆ.	ಎಸ್.ಆಯ್.ಆಯ್. xviii, ನಂ.೧೪೩
೧೦೯.	ಹಲ್ಲೂರು	ಬಾಗಲಕೋಟ	ಬಿಜಾಪುರ	ಕರ್ನಾಟಕ	ಮೆಲುಗುಡಿ ದೇವಾಲಯದ ಮುಂಭಾಗದ ಮೇಲೆ ಒಂದು ಕಲ್ಲಿನ ಮೇಲಿರುವ ಶಾಸನ		ದಂಡನಾಯಕ ತಿಕ್ಕಪಯ್ಯರಸ ರೆಡನೂರುನ್ನು ಸುಖದಿಂದ ಆಳುತ್ತಿರುವಾಗ ಮಹಾಪ್ರಧಾನ ದಂಡನಾಯಕ ಸೋಮರಸರ ಬಿನ್ನಹದಂತೆ ಬೆಳ್ವಲನಾಡ ಬಳಿಯ ಹಳ್ಳುರದ ಪೆರ್ಗ್ಗಡೆ ದೇವರಸರು ನಾಗೇಶ್ವರ ದೇವರ ಉಲ್ಲೇಖವಿದೆ ಉಳಿದ ವಿವರಗಳು ನಷ್ಟವಾಗಿವೆ. ಶಾಸನವು ಬಹಳ ತ್ರುಟಿತಗೊಂಡಿದ್ದು ಮಹಾದೇವ ದುಡನಾಯಕನ ಹೆಸರನ್ನು ಉಲ್ಲೇಖಿಸುತ್ತದೆ.	ಎಸ್.ಆಯ್.ಆಯ್. xv, ನಂ.೧೯
೧೧೦.	ಜಕ್ಕಲಿ	ರೋಣ	ಧಾರವಾಡ	ಕರ್ನಾಟಕ	ವೀರಭದ್ರ ದೇವಾಲಯ ಮುಂಭಾಗದಲ್ಲಿರುವ ಕಲ್ಲಿನ ಮೇಲಿರುವ ಶಾಸನ	ಕ್ರಿ.ಶ. ೧೧೩೯	ಈ ಶಾಸನವು ಬಹಳ ತ್ರುಟಿತಗೊಂಡಿದ್ದು ಮಹಾದೇವ ದಂಡನಾಯಕನ ಹೆಸರನ್ನು ಉಲ್ಲೇಖಿಸುತ್ತದೆ.	ಎಸ್.ಆಯ್.ಆಯ್. xv, ನಂ.೧೮

೧	೨	೩	೪	೫	೬	೭	೮	೯
೧೧೧.	ಬನವಾಸಿ	ಶಿರ್ಶಿ	ಉತ್ತರ ಕನ್ನಡ	ಕರ್ನಾಟಕ	ಮಧುಕೇಶ್ವರ ದೇವಾಲಯದ ಪ್ರಾಕಾರದಲ್ಲಿರುವ ತೃಟಿತ ಶಾಸನ		ಬಹುಶಃ ಕದಂಬ ವಂಶದ ಮಹಾಮಂಡಳೇಶ್ವರ ಹೆಸರನ್ನು ಸೂಚಿಸುತ್ತಿರಬಹುದು ಆದರೆ ಶಾಸನವು ಬಹಳ ತೃಟಿತಗೊಂಡಿದೆ	ಎಸ್.ಆಯ್.ಆಯ್. XX, ನಂ.೧೦೮
೧೧೨.	ಹಾವೇರಿ	ಹಾವೆರಿ	ಧಾರವಾಡ	ಕರ್ನಾಟಕ	ಪುರದ ಸಿದ್ದೇಶ್ವರ ದೇವಾಲಯ ದಲ್ಲಿ		ಈ ಶಾಸನವು ಮಹಾಮಂಡಳೇಶ್ವರ ಕದಂಬ ತೈಲಪನು ಬನವಾಸಿ-೧೨೦೦೦ ಸಾನ್ತಳಿಗೆ-೧೦೦೦ ಪಾನಂಗಲ್ಲು-೫೦೦ನ್ನು ಆಳುತ್ತಿದ್ದನೆಂದು ತಿಳಿಸುತ್ತದೆ. ಶಾಸನದ ಕೊನೆಯ ಭಾಗವೂ ಬಹಳ ತೃಟಿತಗೊಂಡಿದೆ.	ಎಸ್.ಆಯ್.ಆಯ್. xviii, ನಂ.೧೪೨
೧೧೩.	ಹಿತ್ತಲ ಗ್ರಾಮ	ಕಸಬಾ ಹೋಬಳಿ		ಕರ್ನಾಟಕ	ಹಿತ್ತಲ ಗ್ರಾಮದ ಊರ ಬಾ-ಗಿಲಲ್ಲಿ ನೆಟ್ಟ ವೀರಗಲ್ಲು		ತೃಟಿತ	ಎಸ್.ಐ.ಆರ್.೧೯೨೭ ನಂ.೧೩೧
೧೧೪.	ಶಿರಸಗಿ	ಸಿಂಧಗಿ	ವಿಜಾಪುರ	ಕರ್ನಾಟಕ			ಮಾಂಡಳಿಕ ಸಿಂಗರಸ ಆತನಮಡದಿ ಬಾಚಲದೇವಿಯರ ಗುಣದಾನ ಹಾಗೂ ಇವರ ಮಗನಾದ ಯಳಮೇಲದ ಶಿಲಾಹಾರ ಮಂಡಳೇಶ್ವರ ಸೋವಿದೇವನ ಸ್ತುತಿ ಇದರಲ್ಲಿದೆ ದೇವದಾಸ ಪಂಡಿತ ಈ ಶಾಸನ ಬರೆದಿದ್ದಾಗಿಯೂ ಅದರಲ್ಲಿ ಹೇಳಲಾಗಿದೆ.	ಸಂಯುಕ್ತ ಕರ್ನಾಟಕ ದಿನಪತ್ರಿಕೆ ೧೩/೧೨/೯೮
೧೧೫.	ನಿಟ್ಟೂರು	ತಾಡಿಪತ್ರಿ	ಅನಂತಪುರ	ಆಂಧ್ರಪ್ರದೇಶ	ನಿಟ್ಟೂರು ಗ್ರಾಮದ ನೀಲಕಂ ಠೇಶ್ವರ ದಾವಾಲಯದಲ್ಲಿರವ ಒಂದು ಕಲ್ಲಿನ ಮೇಲೆ		ತೇದಿಯಲ್ಲಿದ ಈ ಅಪೂರ್ಣ ಶಾಸನವು ಮಹಾಪ್ರಧಾನ ದಂಡನಾಯಕ ಕಾಳಿಮಯ್ಯ ಹಾಗೂ ಮಹಾಮಂಡಳೇಶ್ವರ ತ್ರೈಲೋಕ್ಯ ಮಲ್ಲ ಮಲ್ಲಿದೇವ ಮಹಾರಾಜನನ್ನು ಉಲ್ಲೇಖಿಸಿದೆ.	ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೬. ನಂ. ೬೩
೧೧೬.	ಕುಕೂನೂರು	ಯಮಬುರ್ಗ	ಕೊಪ್ಪಳ	ಕರ್ನಾಟಕ	ಕುಕನೂರು ಗ್ರಾಮದ ಮಲ್ಲಿ ಕಾರ್ಜುನ ದೇವಾಲಯದಲ್ಲಿಯ ಶಾಸನ		ಶ್ರೀಮಲ್ಲಿ ಕಾರ್ಜುನ ದೇವರಿಗೆ ಬಡವರ ಬೇಲಿಯಸೂಸೆ ಗಂಗಿಯಕ್ಕ ಒಂದು ಮನೆಯನ್ನು ಬಿಡುತ್ತಾಳೆ. ಮಂದರಸದಂಡಾನಾಥನು ಬೆಳ್ವಲ೩೦೦ನ್ನು ಆಳುತ್ತಿದ್ದಾಗ ಇವನ	ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೭. ನಂ. ೩೯

೧	೨	೩	೪	೫	೬	೭	೮	೯
							ಕೈಕೆಳಗಿನ ಅಧಿಕಾರಿ ಮೇದಿರಾಜದಂಡ ನಾಯಕನು ಮಲ್ಲಿಕಾರ್ಜುನ ದೇವರ ನೈವೇದ್ಯಕ್ಕೆ ಹೊನ್ನನ್ನು ದಾನ ಬಿಡುತ್ತಾನೆ ಎಂದು ದಾಖಲಿಸಿದೆ.	
೧೧೭.	ಹುನಗುಂದ	ಬಂಕಾಪುರ	ಧಾರವಾಡ	ಕರ್ನಾಟಕ	Broken slab on the south side of the local tank band		ಕದಂಬ ತೈಲಪನು ಬನವಾಸಿ-೧೨೦೦ ಸತ್ತಳಿಗೆ-೧೦೦೦ ಪಾನಂಗಲ್ಲು-೫೦೦ನ್ನು ಆಳುತ್ತಿದ್ದಾಗ ಬಮ್ಮಗಾವುಂಡನು ಕೆರೆಯ ರಿಪೇರಿಗಾಗಿ ದಾನ ನೀಡಿದುದನ್ನು ತಿಳಿಸುತ್ತದೆ.	ಎ.ಆರ್.ಐ.ಇ.ಬಿ. ೧೯೪೫-೪೬
೧೧೯.	ಹಳ್ಳೂರು	ಬಾಗಲಕೋಟೆ	ಬಿಜಾಪುರ	ಕರ್ನಾಟಕ	ಮೇಲ್ಗುಡಿ ದೇವಾಲಯದ -ಎದುರಿಗಿರುವ ಕಲ್ಲು ಫಲಕದ -ಮೇಲೆ		ಈ ಶಾಸನವು ಹಾಳಾಗಿದ್ದು ಬೆಳುವಲ ನಾಡಿನಲ್ಲಿರುವ ಹಳ್ಳಪುರದ ಪೆರ್ಗ್ಗಡೆಯ ಮಹಾಪ್ರಧಾನ ದಂಡನಾಯಕ ಸೋಮರಸನ ಅಣತಿಯ ಮೇಲೆಗೆ ನಾಗೇಶ್ವರ ದೇವತೆಯ ಪೂಜೆಗೆ ದಾನ ನೀಡಿದ ಬಗ್ಗೆ ತಿಳಿಸುತ್ತದೆ. ಆಗ ದಂಡನಾಯಕ ತಿಕ್ಕಪಯ್ಯನು ೨೦೬ ಪ್ರದೇಶ ಗಳನ್ನು ಆಳುತ್ತಿದ್ದನು.	ಎ.ಡಿ.ಆರ್ ೧೯೨೭ ನಂ.೨೫೭
೧೨೨.	ಕೊಂಡಗುಳಿ	ಸಿಂಧಗಿ	ಬಿಜಾಪುರ	ಕರ್ನಾಟಕ			ಇದು ಯಾಜ್ಞಾವಲ್ಕ್ಯ ಸಂಹಿತೆ ವ್ಯಾಕರಣ ಇತ್ಯಾದಿ ವಿಷಯಗಳನ್ನು ಕಲಿಸುವ ಬೇರೆ ಬೇರೆ ಶಿಕ್ಷಕರಿಗೆ ಅವರ ಜೀವನ ನಿರ್ವಹಣೆಗಾಗಿ ಕೇಸಿಮಯ್ಯ ದಂಡ ನಾಯಕ ಮತ್ತು ಗಣಪತಿ	ಎ.ಐ.ಆರ್.೧೯೬೩ -೬೪ ಅಫೆ ೩೫೮

೧	೨	೩	೪	೫	೬	೭	೮	೯
							ದಂಡನಾಯಕರು ಹಣ ದಾನವಾಗಿ ನೀಡಿ ಅದರ ಜವಾಬ್ದಾರಿಯನ್ನು ಕೊಂಡಗುಳಿ ಅಗ್ರಹಾರವ ಮಹಾಜನರಿಗೆ ವಹಿಸಲಾಗಿತ್ತು. ಇದರ ಜೊತೆ ಭಂಡಾರಿ ರಾಮದೇವನಾಯಕ ಮತ್ತು ಬ್ರಹ್ಮದೇವ ಭಟ್ಟರು ತಾಂಬೂಲದಾನಕ್ಕಾಗಿ ಹಣ ದಾನ ನೀಡಿದ ಬಗ್ಗೆ ಹಾಗೂ ಮಹಾಜನರು ಪುಷ್ಪದಾನಕ್ಕಾಗಿ ಒಂದು ಉದ್ಯಾನವನ ದಾನ ಮಾಡಿದ ಬಗ್ಗೆ ತಿಳಿಸುತ್ತದೆ.	
೧೨೩.	ಗೊರಟ	ಬಾಲ್ಕಿ	ಬೀದರ್	ಕರ್ನಾಟಕ	ಶಂಕರಪ್ಪ ಎಂಬುವವರ ಹೊಲದಲ್ಲಿರುವ ಶಿಲಾಫಲಕದ ಮೇಲಿದೆ		ಭೂಲೋಕಮಲ್ಲನ ಗುರುವಾದ ಭಾಸ್ಕರ ಭಟ್ಟೋಪಾಧ್ಯಯನು ದೇವರಿಗೆ ದಾನನೀಡಿದ ಬಗ್ಗೆ ತಿಳಿಸುತ್ತದೆ.	ಎ.ಐ.ಆರ್.೧೯೬೩ -೬೪ ಅಫೆ ೭೬೦
೧೨೪.	ದುಕ್ಕಿ	ಸಾಲುಪೇಟೆ	ನೆಲ್ಲೂರು	ಆಂಧ್ರ ಪ್ರದೇಶ	ಪಿರುಲ ಚೇರುವೂರಿನ ಹೊರಭಾಗದಲ್ಲಿರುವ ಸೋಮೇಶ್ವರ ಲಿಂಗ ದೇವಾಲಯದಲ್ಲಿನ ಧ್ವಜಸ್ತಂಭದ ಹತ್ತಿರವಿರುವ ೪ ಮುಖಗಳುಳ್ಳ ಕಂಭದ ಮೇಲಿದೆ		ಪಂಪನ ಗಂಧವಾರಣ ಎಂದು ಕರೆಯಲ್ಪಟ್ಟಿರುವ ಮಹಾಮಂಡಳೇಶ್ವರ ಸೋಮಪೆರ್ಮಾಡಿಯು ಬೊಳ್ನೆ-೭೦ ವಿಭಾಗದಲ್ಲಿರುವ ಬುಸವಾಡದ ಮೇಲಾಳಿಕೆ ಮತ್ತು ತೆರಿಗೆಗಳಾದ ಸೇಸೆ, ಕಿರುಕುಳ, ಕಾಣಿಕೆ ಮುಂತಾದವುಗಳನ್ನು ಅತಿಥಿಗಳು ಮತ್ತು ಋಷಿಗಳ ಪ್ರಾರ್ಥನೆ, ಊಟ, ಮತ್ತು ಪೂಜೆಗಾಗಿ ಬಾಲಚಂದ್ರ ದೇವನಿಗೆ ದಾನ ನೀಡಿದ ಬಗ್ಗೆ ತಿಳಿಸುತ್ತದೆ.	ಎ.ಐ.ಆರ್.೧೯೬೩ -೬೪ ಅಫೆ ೨೩೬
೧೨೫.	ರಾಜೋಳಿ	ಆಲಂಪುರ	ಮೆಹಬೂಬ್ ನಗರ	ಆಂಧ್ರಪ್ರದೇಶ	ರಾಮೇಶ್ವರ ದೇವಾಲಯದ ಎದುರಿನ ಶಿಲಾಫಲಕದ ಮೇಲೆ		ಆಯಿಜೆನಾಡುವಿನಲ್ಲಿರುವ ವಿನಯ ಸತ್ಯಾಶ್ರಯ ದೇವನ ದತ್ತಿಯಾದ ತೆರಿಗೆಯ ಆದಾಯವನ್ನು ಮಹಾಪ್ರಧಾನ ದಂಡನಾಯಕನಾದ ಬಾಣಸವೆರ್ಗ್ಗಡೆ ಶ್ರೀವತ್ಸ ದೇವರಸನ ಅಣತಿಯ ಮೇರೆಗೆ ಅಯಿಜೆನಾಡುವಿನ	ಎ.ಐ.ಆರ್.೧೯೬೩ -೬೪ ಅಫೆ ನಂ.೨೦೭

೧	೨	೩	೪	೫	೬	೭	೮	೯
							ಅಧಿಕಾರಿಯಾದ ಪೆರ್ಗ್ಗಡೆ ಸೂರಪ್ಪನು ಅಯಿಜೆ ನಾಡವಿನಲ್ಲಿರುವ ಪೊಲಸನೂರಿನ ಸಹಸ್ರಲಿಂಗ ದೇವ ದೇವಾಲಯಕ್ಕೆ ದಾನ ನೀಡಿದ ಬಗ್ಗೆ ತಿಳಿಸುತ್ತದೆ. ಜೊತೆಗೆ ಇದೇ ದೇವತೆಗೆ ಅಂಗಡಿ, ಎಣ್ಣೆ, ಮತ್ತಿತರ ಆದಾಯಗಳನ್ನು ದಾನ ನೀಡಿದ ಬಗ್ಗೆ ತಿಳಿಸುತ್ತದೆ.	
೧೨೮.	ನಿಟ್ಟೂರು	ಕಾಡಪತ್ರಿ	ಅನಂತಪುರ	ಆಂಧ್ರಪ್ರದೇಶ	ನೀಲಕಂಠೇಶ್ವರ ದೇವಾಲಯ ದಲ್ಲಿನ ಶಿಲಾಫಲಕದ ಮೇಲೆ		ದಿನಾಂಕ ನಮೂದಿಸಿದೇ ಅಪೂರ್ಣವಾಗಿರುವ ಈ ಶಾಸನವು ಚಾಲುಕ್ಯ ಭೂಲೋಕಮಲ್ಲಿನ ಮಹಾಪ್ರಧಾನ ದಂಡನಾಯಕ ಕಾಳಿಮಯ್ಯ ಮತ್ತು ಅವನ ಮಹಾಮಂಡಳೇಶ್ವರ ತ್ರೈಲೋಕ್ಯಮಲ್ಲ ಮಲ್ಲಿದೇವ ಮಹಾರಾಜನ ಬಗ್ಗೆ ಉಲ್ಲೇಖಿಸುತ್ತದೆ.	ಎ.ಆರ್.ಇ.ಪಿ. ೧೯೬೦-೬೧ ನಂ. ಬಿ. ೬೨೩
೧೨೯.	ದುಕ್ಕಿ	ಬಾಣಸವಾಡ	ನಿಜಾಮಾಬಾದ	ಆಂಧ್ರಪ್ರದೇಶ	ಚೆರುವುವಿನ ಸೋಮೇಶ್ವರಲಿಂಗ ದೇವಾಲಯದಿಂದ ದೂರದಲ್ಲಿರು ಧ್ವಜಸ್ತಂಭದ ಹತ್ತಿರ ನಿಲ್ಲಿಸಲಾಗಿ ರುವ ೪ ಮುಖಗಳುಳ್ಳ ಕಂಭದ ಮುಖಭಾಗದ ಮೇಲಿದೆ		ಬಾಲಚಂದ್ರದೇವನಿಗೆ ದೇವತೆಗಳಿಗೆ ಪೂಜೆ, ನೈವೇದ್ಯಕ್ಕಾಗಿ ಮತ್ತು ಅತಿಥಿಗಳು, ಋಷಿಗಳ ಊಟದ ನಿರ್ವಹಣೆಗಾಗಿ ಬೊಳ್ಳೆ-೭೦ ವಿಭಾಗ ದಲ್ಲಿನ ಮೇಲಾಳಿಕೆ ಮತ್ತು ತೆರಿಗೆಗಳಾದ ಸೇಸೆ, ಕಿರುಕುಳ, ಮುಂತಾದವುಗಳನ್ನು ಮಹಾಮಂಡ ಳೇಶ್ವರಸೋಮಪೆರ್ಮಾಡಿಯು ದಾನ ನೀಡಿದ ಬಗ್ಗೆ ತಿಳಿಸುತ್ತದೆ. ಸೋಮಪೆರ್ಮಾಡಿಯನ್ನು ಪಂಪನಗಂಧವಾರಣ ಎಂದು ಕರೆಯಲಾಗಿದೆ.	ಎ.ಆರ್.ಇ.ಪಿ. ೧೯೬೨-೬೩ ನಂ. ಬಿ. ೨೩೬
೧೪೧.	ದ್ಯಾವನಕೊಂಡ	ಕಲಘಟಗಿ	ಧಾರವಾಡ	ಕರ್ನಾಟಕ	ರೈತನೊಬ್ಬನ ಮನೆ- ಹಿತ್ತಲ		ತೃಟಿತ ಹುಲಿಗೋಡ ಶಾಂತಗಾವುಂಡನ ವರ್ಣನೆ	ಧಾ.ಜಿ.ಶಾ.ಸೂ ಪು.೨೫
೧೪೮.	ಹುನಗುಂದ	ಸಿಗ್ಗಾವ	ಹಾವೇರಿ	ಕರ್ನಾಟಕ	ಕೆರೆ ವಾಹಿಯ ದಕ್ಷಿಣಕ್ಕೆ		ತೃಟಿತ ಬೊಮ್ಮಗಾವುಂಡನಿಂದ ಕೆರೆಯ ಜೀರ್ಣೋದ್ಧಾರಕ್ಕೆ ಭೂದಾನ.	ಧಾ.ಜಿ.ಶಾ.ಸೂ ಪು.೩೨

೧	೨	೩	೪	೫	೬	೭	೮	೯
೧೫೧.	ಹಾವೇರಿ	ಸಿಗ್ಗಾವ	ಹಾವೇರಿ	ಕರ್ನಾಟಕ	ಪುರದಸಿದ್ದೇಶ್ವರ ಗುಡಿ		ಅತಿ ತೃಟಿತ ಹಾವೇರಿಯ ನಾನೂರು ಮಹಾಜನರಿಂದ ಸಿದ್ದೇಶ್ವರ ದೇವಾಲಯಕ್ಕೆ ದಾನ	ಧಾ.ಜಿ.ಶಾ.ಸೂ ಪು.೪೮
೧೫೪.	ಮಕರಳ್ಳಿ	ಹಾನಗಲ್ಲ	ಹಾವೇರಿ	ಕರ್ನಾಟಕ	ಕೆಂಗೆರೆ ತೂಬು		ತೃಟಿತ ಅಸ್ಪಷ್ಟ	ಧಾ.ಜಿ.ಶಾ.ಸೂ ಪು.೬೫
೧೫೫.	ಮತಂಗಿ	ಹಾನಗಲ್ಲ	ಹಾವೇರಿ	ಕರ್ನಾಟಕ	ಧರ್ಮಾನದಿ ದಂಡೆ ವೀರಗಲ್ಲು	ಕ್ರಿ.ಶ. ೧೨	ತೃಟಿತ ನಾಗೆಯ ಸಾಹಣಿಯ ವೀರಮರಣ	ಧಾ.ಜಿ.ಶಾ.ಸೂ ಪು.೬೬
೧೬೦.	ಬುರಡಿಕಟ್ಟಿ	ಹಿರೇಕೆರೂರು	ಹಾವೇರಿ	ಕರ್ನಾಟಕ	ಕಲ್ಲಪ್ಪ ದೇವಾಲಯ		ತೃಟಿತ ಪೂಜಾರಿಯ ಆಶನಕ್ಕೆ ಮತ್ತು ದೇವರಿಗೆ ಬಿಟ್ಟದಾನ	ಧಾ.ಜಿ.ಶಾ.ಸೂ ಪು.೭೪
೧೬೨.	ಸವಡಿ	ರೋಣ	ಧಾರವಾಡ	ಕರ್ನಾಟಕ	ಗ್ರಾಮದ ಚಾವಡಿಯ ಮುಂಭಾಗದಲ್ಲಿರುವ ಗೋಡೆಯ ಮೇಲೆ	ಕ್ರಿ.ಶ. ೧೦೮೩	ಈ ಶಾಸನವು ಆರನೆಯ ವಿಕ್ರಮಾದಿತ್ಯನ ಕಾಲಕ್ಕೆ ಸೇರಿದ್ದು ಆಗ ಭೂಲೋಕಮಲ್ಲನು ಕಿಸುಗಾಡು-೭೦, ಬಾಗಡಿಗೆ-೭೦, ನೆರೆಯಂಗಲ್-೧೨ ವಿಭಾಗಗಳನ್ನು ಆಳುತ್ತಿದ್ದನೆಂದು ತಿಳಿಸುತ್ತದೆ.	ಎಸ್.ಆಯ್.ಆಯ್. xi-i, 42

ಜೈನ ಆಚಾರ್ಯರು ಮತ್ತು ಪಂಡಿತರು

ಅ.ನಂ.	ಗ್ರಾಮ	ತಾಲೂಕು	ಜಿಲ್ಲೆ	ರಾಜ್ಯ	ಕಾಲ	ಪಂಡಿತ/ಅರ್ಚಕ	ಆಕರ
೧	೨	೩	೪	೫	೬	೭	೮
೧.	ಜಡಚೆರ್ಲ	ಮಹಬೂಬ-ನಗರ	ಮಹಬೂಬ-ನಗರ	ಆಂಧ್ರಪ್ರದೇಶ	ಕ್ರಿ.ಶ.೧೧೨೫	ಮೇಘಚಂದ್ರ ಸಿದ್ಧಾಂತದೇವ	ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೫, ನಂ.೫೦೮
೨.	ಸಿಂಧವಾಳ	ಬಳ್ಳಾರಿ	ಬಳ್ಳಾರಿ	ಕರ್ನಾಟಕ	ಕ್ರಿ.ಶ. ೧೧೩೦	ಕರಿಕಂಠಜೀಯ	ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೧, ನಂ.೬೪
೩.	ಲಕ್ಷ್ಮೇಶ್ವರ	ಶಿರಹಟ್ಟಿ	ಧಾರವಾಡ	ಕರ್ನಾಟಕ	ಕ್ರಿ.ಶ.೧೧೩೨	ಇಂದ್ರಕೀರ್ತಿ ಪಂಡಿತ	ಎಸ್.ಆಯ್.ಆಯ್., XX, ನಂ.೧೦೨.
೪.	ಅರೆ	ಕರವೀರ	ಕೊಲ್ಹಾಪುರ	ಮಹಾರಾಷ್ಟ್ರ	ಕ್ರಿ.ಶ.೧೧೩೫	ಶೃತಕೀರ್ತಿದೇವರು	ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೬, ನಂ.೨೬.
೫.	ಸೇಡಂ	ಕಲಬುರ್ಗಿ	ಕಲಬುರ್ಗಿ	ಕರ್ನಾಟಕ	ಕ್ರಿ.ಶ.೧೧೩೭	ಆದಿಭಟ್ಟಾರಕ ದೇವರು	ಕಲ್ಬುರ್ಗಿ ಜಿಲ್ಲೆಯ ಶಾಸನಗಳು, ನಂ.೧೭.

ಸ್ಥಾನಾಚಾರ್ಯ / ಪಂಡಿತರು

ಅ.ನಂ.	ಗ್ರಾಮ	ತಾಲೂಕು	ಜಿಲ್ಲೆ	ರಾಜ್ಯ	ಕಾಲ	ಆಚಾರ್ಯರು/ಪಂಡಿತರು	ಆಕರ
೧	೨	೩	೪	೫	೬	೭	೮
೧.	ಅಸುಂಡಿ	ರಾಣೆಬೆನ್ನೂರು	ಧಾರವಾಡ	ಕರ್ನಾಟಕ	ಕ್ರಿ.ಶ. ೧೧೨೭	ಶ್ರೀಮದುಸಿಂಗ ಪರಿಶಯ ಮಠದಾಚಾರ್ಯರು	ಎಸ್.ಆಯ್.ಆಯ್.-XVII, ೧೩೩
೨.	ಕಕ್ಕೇರಿ	ಸುರಪುರ	ಕಲ್ಬುರ್ಗಿ	ಕರ್ನಾಟಕ	ಕ್ರಿ.ಶ. ೧೧೨೭	ಸ್ಥಾನಾಚಾರ್ಯ ಬ್ರಹ್ಮರಾಶಿ ಪಂಡಿತ	ಸುರಪುರ ತಾಲೂಕಿನ ಶಾಸನಗಳು, ನಂ.೨೨
೩.	ಕಾಮಧೇನು	ಕಲಘಟಗಿ	ಧಾರವಾಡ	ಕರ್ನಾಟಕ	ಕ್ರಿ.ಶ. ೧೧೨೭	ಸ್ಥಾನಾಚಾರ್ಯ ದೇವರಾಶಿಪಂಡಿತ ತೇಜೋರಾಶಿ ಪಂಡಿತ	ಎಸ್. ಆಯ್.ಆಯ್., XX, ೧೧೧.
೪.	ತಿಳವಳ್ಳಿ	ಹಾನಗಲ್ಲ	ಹಾವೇರಿ	ಕರ್ನಾಟಕ	ಕ್ರಿ.ಶ. ೧೧೨೯	ಚಟ್ಟೋಪಾಧ್ಯಯ ವಾಸುದೇವಯ್ಯ ದೇವದಾಸ ಭಟ್ಟ	ಕೆ.ಆಯ್., V, ೨೩.
೫.	ಬನ್ನಿಕೊಪ್ಪ	ಶಿಗ್ಗಾಂವ	ಹಾವೇರಿ	ಕರ್ನಾಟಕ	ಕ್ರಿ.ಶ. ೧೧೩೦	ಅಮೃತರಾಶಿ ಪಂಡಿತ	ಎಸ್. ಆಯ್.ಆಯ್., XVII, ೧೩೫.
೬.	ಹಿರಿಯಾಳ	ರೋಣ	ಗದಗ	ಕರ್ನಾಟಕ	ಕ್ರಿ.ಶ. ೧೧೩೦	ಸೋಮೇಶ್ವರ ಪಂಡಿತ	ಎಸ್. ಆಯ್.ಆಯ್., XV, ೧೩
೭.	ಶ್ರವಣಬೆಳಗೊಳ	ಚ.ಪಟ್ಟಣ	ಹಾಸನ	ಕರ್ನಾಟಕ	ಕ್ರಿ.ಶ. ೧೧೩೦	ಸ್ಥಾನಾಚಾರ್ಯ ಜ್ಞಾನಸೋಮದೇವ	ಎ.ಕ., ನಂ.II, ೧೪೩
೮.	ಬೈಲೂರು			ಕರ್ನಾಟಕ	ಕ್ರಿ.ಶ. ೧೧೩೧	ದೇವರಾಶಿ ಪಂಡಿತ	ಎಸ್. ಆಯ್.ಆಯ್., IX (1), ೨೨೫
೯.	ಕರಕಂಠಪುರ	ಅಧೋನಿ	ಬಳ್ಳಾರಿ	ಕರ್ನಾಟಕ	ಕ್ರಿ.ಶ. ೧೧೩೨	ಚಂದ್ರಮೌಳಿ ಪಂಡಿತ ಶ್ರೀ ವಾಮದೇವ ಪಂಡಿತ	ಎಸ್. ಆಯ್.ಆಯ್., IX(1), ೨೨೬.
೧೦.	ಲಕ್ಷ್ಮೇಶ್ವರ	ಶಿರಹಟ್ಟಿ	ಧಾರವಾಡ	ಕರ್ನಾಟಕ	ಕ್ರಿ.ಶ. ೧೧೩೨	ಕೀರ್ತಿಪಂಡಿತ	ಎಸ್. ಆಯ್.ಆಯ್., ,೧೦೨.
೧೧.	ರಾಮದುರ್ಗ	ಆಲೂರು	ಬಳ್ಳಾರಿ	ಕರ್ನಾಟಕ	ಕ್ರಿ.ಶ. ೧೧೩೪	ಮಲ್ಲಿ ಪಂಡಿತಾಚಾರ್ಯ	ಎಸ್. ಆಯ್.ಆಯ್., IX (1), ೨೨೯.
೧೨.	ಸಿದ್ದಾಪುರ	ಧಾರವಾಡ	ಧಾರವಾಡ	ಕರ್ನಾಟಕ	ಕ್ರಿ.ಶ. ೧೧೩೫	ನಾಗರಾಸಿ ಪಂಡಿತ ದೇವರಾಸಿ ಪಂಡಿತ	ಎಸ್. ಆಯ್.ಆಯ್., XV,೧೪.
೧೩.	ನಿಂಬರಗಿ	ಆಳಂದ	ಕಲ್ಬುರ್ಗಿ	ಕರ್ನಾಟಕ	ಕ್ರಿ.ಶ. ೧೧೩೫	ಧ್ರುವೇಶ್ವರ ಪಂಡಿತ ನಾರಾಯಣ ಭಟ್ಟ	ಎ.ಇ., ೩೭.
೧೪.	ಹುಣಸಗಿ	ಸುರಪುರ	ಕಲ್ಬುರ್ಗಿ	ಕರ್ನಾಟಕ	ಕ್ರಿ.ಶ. ೧೧೩೬	ಉಪಾಧ್ಯಾಯರು ಚಂದ್ರಭಟ್ಟೋಪಾಧ್ಯಾಯ	ಸುರಪುರ ತಾಲೂಕಿನ ಶಾಸನಗಳು, ನಂ.೯೫.
೧೫.	ಬಂಕಾಪುರ	ಶಿಗ್ಗಾಂವ	ಹಾವೇರಿ	ಕರ್ನಾಟಕ	ಕ್ರಿ.ಶ. ೧೧೩೭	ಚಂದ್ರಭೂಷಣ ಪಂಡಿತ	ಎಸ್. ಆಯ್.ಆಯ್., XVIII, ೧೩೯.
೧೬.	ಲಕ್ಷ್ಮೇಶ್ವರ	ಶಿರಹಟ್ಟಿ	ಧಾರವಾಡ	ಕರ್ನಾಟಕ	ಕ್ರಿ.ಶ. ೧೧೩೮	ಜ್ಞಾನಸೋಮ ಪಂಡಿತದೇವ	ಎಸ್. ಆಯ್.ಆಯ್., XX, ೧೦೭.
೧೭.	ಔರಾದ	ದಕ್ಷಿಣ ಸೋಲಾಪುರ	ಸೋಲಾಪುರ	ಮಹಾರಾಷ್ಟ್ರ		ರಾಘವಭಟ್ಟ, ವೇದಶರ್ಮಭಟ್ಟ ನಾಗದೇವಭಟ್ಟ, ಸೋಮೇಶ್ವರ ದೇವಭಟ್ಟ, ಶಂಕರಭಟ್ಟ	ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪು-೬ ನಂ.೧೩೭.

ವೈಷ್ಣವ ದೇವಾಲಯಗಳು

ಅ.ನಂ.	ಕಾಲ	ಗ್ರಾಮ	ತಾಲೂಕು	ಜಿಲ್ಲೆ	ರಾಜ್ಯ	ದೇವಾಲಯ	ಪಂಡಿತ/ಅರ್ಚಕ	ದಾನ/ದತ್ತಿ ವಿವರ	ಆಕರ
೧	೨	೩	೪	೫	೬	೭	೮	೯	೧೦
೧.	ಕ್ರಿ.ಶ.೧೧೨೭	ರಾಯಭಾಗ	ರಾಯಭಾಗ	ಬೆಳಗಾಂವಿ	ಕರ್ನಾಟಕ	ಕೇಶವದೇವಾಲಯ	-	ದೇವರ ನಿವೇದ್ಯಕ್ಕೆ, ಪುರೋವೃದ್ಧಿಗೆ ತೋಟ ಭೂಮಿಯನ್ನು ದಾನವಾಗಿ ಬಿಟ್ಟರು	INK & K, ನಂ. ೬.
೨.	ಕ್ರಿ.ಶ.೧೧೨೮	ತಡಿಕೊಂಡ	ಭುವನಗಿರಿ	ನಲ್ಗೊಂಡ	ಆಂಧ್ರಪ್ರದೇಶ	ಕೇಶವ ದೇವಾಲಯ		ದೇವರ ನಂದಾದೀವಿಗೆಗೆ ನೈವೇದ್ಯಕ್ಕೆ ೧೨ ಮತ್ತರು ಭೂಮಿಯನ್ನು ದತ್ತಿಯಾಗಿ ಕೊಟ್ಟರು	ಕನ್ನಡವಿಶ್ವವಿದ್ಯಾಲಯ ಶಾಸನಸಂಪುಟ-೫ನಂ೫೨
೩.	ಕ್ರಿ.ಶ.೧೧೩೦	ತಿಳವಳ್ಳಿ	ಹಾನಗಲ್	ಧಾರವಾಡ	ಕರ್ನಾಟಕ	ಜನಾರ್ದನ ದೇವಾಲಯ		ಅಂಗಭೋಗ ಜೀರ್ಣೋದ್ಧಾರಕ್ಕೆ, ಪೂಜೆ ಪುನಸ್ಕಾರಕ್ಕೆ ದಾನ ಬಿಟ್ಟರು	ಕೆ ಆಯ್. ನಂ.I, ನಂ೧೯.
೪.	ಕ್ರಿ.ಶ.೧೧೩೪	ಮುಕ್ಕುಂದಿ	ಸಿಂಧನೂರು	ರಾಯಚೂರು		ಕೇಶವ ದೇವಾಲಯ	-	ದೇವಾಲಯದ ಅಂಗಭೋಗ ಮಂದಿರದ ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆ ಪೂಜಾರಿಗಳ ಜೀವಿತಕ್ಕೆ ೬ ಮತ್ತರು ಭೂಮಿ ದಾನ ನೀಡಿದ್ದಾರೆ	ಕನ್ನಡವಿಶ್ವವಿದ್ಯಾಲಯ ಶಾಸನಸಂಪುಟ-೭ ನಂ೬
೫.	ಕ್ರಿ.ಶ.೧೧೩೪	ಕೊಲಿಮಿ -ಗುಂಡ್ಲ	ಕೋಯಿಲ -ಕುಂಟಾ	ಕರ್ನೂಲ	ಆಂಧ್ರಪ್ರದೇಶ	ಕೇಶವದೇವಾಲಯ	ವ್ಯಾಸಣಭಟ್ಟ	ದೇವರಿಗೆ ೨ ಮತ್ತರುಭೂಮಿ ೧ ಹೂದೋಟ, ಒಂದು ಗಾಣವನ್ನು ದತ್ತಿಯಾಗಿ ಕೊಟ್ಟರು	ಕನ್ನಡವಿಶ್ವವಿದ್ಯಾಲಯ ಶಾಸನಸಂಪುಟ-೫ನಂ೩೬೨
೬.	ಕ್ರಿ.ಶ.೧೧೩೫	ಏರಿಗೆ	ದೆಗ್ಲೂರು	ನಾಂದೇಡ	ಮಹಾರಾಷ್ಟ್ರ	ಕೇಶವದೇವಾಲಯ	-	ದೇವರ ಪೂಜೆ ಪುನಸ್ಕಾರ, ಧೂಪದೀಪ, ನಿವೇದ್ಯಕ್ಕೆ, ಮಾಟ, ಕೂಟ, ಸುಣ್ಣಸೊತೆಗೆ ದಾನ ನೀಡಲಾಯಿತು	ಕನ್ನಡವಿಶ್ವವಿದ್ಯಾಲಯ ಶಾಸನಸಂಪುಟ-೬ ನಂ೬೨
೭.	ಕ್ರಿ.ಶ.೧೧೩೫	ಉರುವ -ಕೊಂಡ	ಗುತ್ತಿ	ಅನಂತಪುರ	ಆಂಧ್ರಪ್ರದೇಶ	ಕೇಶವದೇವಾಲಯ	-	ಭೂಮಿ ಹಾಗೂ ಒಂದು ಗಾಣವನ್ನು ದತ್ತಿಯಾಗಿ ನೀಡಲಾಯಿತು	ಕನ್ನಡವಿಶ್ವವಿದ್ಯಾಲಯ ಶಾಸನಸಂಪುಟ-೫ನಂ೧೪
೮.	ಕ್ರಿ.ಶ.೧೧೩೬	ಹುಣಸಗಿ	ಸುರಪುರ	ಕಲ್ಬುರ್ಗಿ	ಕರ್ನಾಟಕ	ಕೇಶವದೇವಾಲಯ	-	ಕೇಶವದೇವರಿಗೆ, ಶ್ರೋತ್ರಿಯರು, ಉಪಾಧ್ಯಾಯರು ಬ್ರಾಹ್ಮಣ ದೇವಿಕವ್ವೆಗೆ ಭೂದತ್ತಿ ಮತ್ತು ನಿವೇಶನಗಳನ್ನು ಬಿಟ್ಟರು	ಸುರಪುರ ತಾಲೂಕಿನ ಶಾಸನಗಳು, ನಂ.೧೫
೯.	ಕ್ರಿ.ಶ.೧೧೩೬	ಗದಗ	ಗದಗ	ಧಾರವಾಡ	ಕರ್ನಾಟಕ	ಕೇಶವದೇವಾಲಯ	-	ದೇವರ ಸೇವೆಗಾಗಿ ಭೂಮಿ ಮತ್ತು ಹಣವನ್ನು ದಾನವಾಗಿ ಬಿಡಲಾಯಿತು	ಎಸ್.ಆಯ್.ಆಯ್., XVIII, ನಂ.೧೩೮.
೧೦.	ಕ್ರಿ.ಶ.೧೧೩೮	ಕುರ್ತಕೋಟಿ	ಗದಗ	ಧಾರವಾಡ	ಕರ್ನಾಟಕ	ನರಸಿಂಹ ದೇವಾಲಯ	-	ದೇವರ ನಂದಾದೀವಿಗೆಗೆ ದಾನ ಬಿಟ್ಟದ್ದನ್ನು ದಾಖಲಿಸಲಾಗಿದೆ	ಎಸ್.ಆಯ್.ಆಯ್., XV, ನಂ.೧೭.
೧೧.	ಕ್ರಿ.ಶ.೧೧೩೮	ಏರಿಗೆ	ದೆಗ್ಲೂರು	ನಾಂದೇಡ	ಮಹಾರಾಷ್ಟ್ರ	ಕೇಶವದೇವಾಲಯ	-	ದೇವರ ಪೂಜೆ ಪುನಸ್ಕಾರ, ಧೂಪದೀಪ, ನಿವೇದ್ಯಕ್ಕೆ, ಪೂಜಿಸುವ ಬ್ರಾಹ್ಮಣನ ಗ್ರಾಸಕ್ಕೆ ಮಾಟ, ಕೂಟ, ಸುಣ್ಣಸೊತೆಗೆ ಹೊಲ ಮತ್ತು ನಿವೇಶನಗಳನ್ನು ದಾನ ನೀಡಲಾಯಿತು	ಕನ್ನಡವಿಶ್ವವಿದ್ಯಾಲಯ ಶಾಸನಸಂಪುಟ-೬ ನಂ೬೩
೧೨.	ಕ್ರಿ.ಶ.೧೧೩೮	ಅಣದೂರು	ಬೀದರ	ಬೀದರ	ಕರ್ನಾಟಕ	ನಾರಾಯಣ ದೇವಾಲಯ	-	ದೇವರ ಪೂಜೆ, ನೈವೇದ್ಯ ಜೀರ್ಣೋದ್ಧಾರ ನಿಮಿತ್ತವಾಗಿ ಭೂಮಿಯನ್ನು ದತ್ತಿ ಬಿಡಲಾಯಿತು	ಮಾನವಿಕ ಕರ್ನಾಟಕ, ಸಂ.೩, ಸಂ.೩, ಮೇ.೧೯೭೩.

ಜೈನ ಬಸದಿಗಳು/ಜಿನಾಲಯಗಳು

ಅ.ನಂ.	ಕಾಲ	ಗ್ರಾಮ	ತಾಲೂಕು	ಜಿಲ್ಲೆ	ರಾಜ್ಯ	ದೇವಾಲಯ	ಪಂಡಿತ/ಅರ್ಚಕ	ದಾನ/ದತ್ತಿ ವಿವರ	ಆಕರ
೧	೨	೩	೪	೫	೬	೭	೮	೯	೧೦
೧.	ಕ್ರಿ.ಶ.೧೧೨೫	ಜಡಚೆರ್ಲ	ಮಹಬೂಬ-ನಗರ	ಮಹಬೂಬ-ನಗರ	ಆಂಧ್ರಪ್ರದೇಶ	ಪಾರ್ಶ್ವನಾಥ ದೇವರ ಚೈತ್ಯಾಲಯ	ಮೇಘಚಂದ್ರ ಸಿದ್ದಾಂತದೇವ	ಚೈತ್ಯಾಲಯದ ರಂಗಭೋಗಕ್ಕೆ ಖಣ್ಡಸ್ಫುಟಿತ ಜೀರ್ಣೋದ್ಧಾರಕ್ಕೆ ಅನೇಕ ಸುಂಕಗಳನ್ನು ದತ್ತಿಯಾಗಿ ನೀಡಿದರು	ಕನ್ನಡವಿಶ್ವವಿದ್ಯಾಲಯ ಶಾಸನಸಂಪುಟ-೫ ನಂ.೫೧೮
೨.	ಕ್ರಿ.ಶ.೧೧೩೨	ಲಕ್ಷ್ಮೇಶ್ವರ	ಶಿರಹಟ್ಟಿ	ಧಾರವಾಡ	ಕರ್ನಾಟಕ	ಗೊಗ್ಗಿಯ ಬಸದಿ	ಇಂದ್ರಕೀರ್ತಿ ಪಂಡಿತ		ಎಸ್. ಆಯ್. ಆಯ್., XX, ನಂ.೧೦೩.
೩.	ಕ್ರಿ.ಶ.೧೧೩೫	ಅರೆ	ಕರವೀರ	ಕೊಲ್ಹಾಪುರ	ಮಹಾರಾಷ್ಟ್ರ	ಪಾರ್ಶ್ವನಾಥ ಬಸದಿ	ಶೃತಕೀರ್ತಿದೇವರು	ಪಾರ್ಶ್ವನಾಥ ಬಸದಿಗೆ ವಿವಿಧ ರೀತಿಯ ಸುಂಕಗಳನ್ನು ದಾನವಾಗಿ ನೀಡಿದರು	ಕನ್ನಡವಿಶ್ವವಿದ್ಯಾಲಯ ಶಾಸನಸಂಪುಟ-೬ ನಂ.೨೬
೪.	ಕ್ರಿ.ಶ.೧೧೩೭	ಸೇಡಂ	ಕಲಬುರ್ಗಿ	ಕಲಬುರ್ಗಿ	ಕರ್ನಾಟಕ	ತೆಂಕಣ ಬಸದಿ	ಆದಿಭಟ್ಟಾರಕ ದೇವರು	ಜೀವದಯಾಷ್ಟಮಿ, ನಂದಿಶ್ವರದಷ್ಟಮಿ, ಸಂಕ್ರಮಣ ಗ್ರಹಣಾದಿ ಪರ್ವ್ವದಿನದ ಮಹಾಪೂಜೆಗಳಿಗೆ ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆ ಭೂಮಿ ತೋಟವನ್ನು ದಾನ ಕೊಟ್ಟರು	ಕಲ್ಬುರ್ಗಿ ಜಿಲ್ಲೆಯ ಶಾಸನಗಳು, ನಂ.೧೭
೫.	ಕ್ರಿ.ಶ.೧೧೭೬	ಗೌಳಿಹಳ್ಳಿ	ಖಾನಾಪುರ	ಬೆಳಗಾಂವಿ	ಕರ್ನಾಟಕ	ಬಸದಿ	-	ದೇವರ ನಂದಾದೀವಿಗೆಗೆ ಗಾಣ ಮತ್ತು ಭೂಮಿ ಮನೆಗಳನ್ನು ದಾನ ಬಿಟ್ಟರು	ಕೆ. ಆಯ್., V, ನಂ.೩೩.

ಶೈವ ದೇವಾಲಯಗಳು

ಅ.ನಂ.	ಕಾಲ	ಗ್ರಾಮ	ತಾಲೂಕು	ಜಿಲ್ಲೆ	ರಾಜ್ಯ	ದೇವಾಲಯ	ಪಂಡಿತ/ಅರ್ಚಕ	ದಾನ/ದತ್ತಿ ವಿವರ	ಆಕರ
೧	೨	೩	೪	೫	೬	೭	೮	೯	೧೦
೧.	ಕ್ರಿ.ಶ.೧೧೨೭	ಕಡ್ಲೇವಾಡ	ಸಿಂದಗಿ	ಬಿಜಾಪುರ	ಕರ್ನಾಟಕ	ಸ್ವಯಂಭು ಸೋಮನಾಥ	ಗಂಗರಾಸಿದೇವ	ಹಿಂಚಗೇರಿಯ ಗ್ರಾಮದಿಂದ ಬರುವ ಆದಾಯವನ್ನು ಸ್ವಯಂಭು ಸೋಮನಾಥ ದೇವರ ಅಂಗಭೋಗಕ್ಕೆ ದೂಪದೀಪ ನೈವೇದ್ಯಕ್ಕೆ ದಾನವಾಗಿ ಬಿಟ್ಟರು	ಎಸ್.ಆಯ್.ಆಯ್., XVIII, ನಂ.೯೮.
೨.	ಕ್ರಿ.ಶ.೧೧೨೭	ಕಕ್ಕೇರಿ	ಸುರಪುರ		ಕರ್ನಾಟಕ	ರೇವೇಶ್ವರದೇವರು	ಬ್ರಹ್ಮರಾಸಿಪಂಡಿತ	ದೇವರ ಅಂಗಭೋಗ, ದೀಪಾರತಿ, ನೈವೇದ್ಯಗಳಿಗೆ ೨೬ ಮತ್ತರು ಭೂಮಿಯನ್ನು, ಗಾಣವನ್ನು ಹಲವು ಸುಂಕಗಳನ್ನು ದಾನಬಿಟ್ಟರು.	ಸುರಪುರತಾಲೂಕಿನ ಶಾಸನಗಳು, ನಂ.೨೨
೩.	ಕ್ರಿ.ಶ.೧೧೨೭	ಅಸುಂಡಿ	ರಾಣೆಬೆನ್ನೂರು	ಧಾರವಾಡ	ಕರ್ನಾಟಕ	ಕಲಿದೇವಸ್ವಾಮಿ	ಬ್ರಹ್ಮಸಿಂಗಿಪಂಡಿತ	ದೇವರ ಪೂಜೆ ಪುನಸ್ಕಾರಕ್ಕೆ, ನಂದಾದೀವಿಗೆಗೆ ಗದ್ದೆ ನಿವೇಶನಗಳನ್ನು ದಾನ ಬಿಟ್ಟರು	ಎಸ್.ಆಯ್.ಆಯ್., XVIII, ನಂ.೧೩೩.
೪.	ಕ್ರಿ.ಶ.೧೧೨೮	ನವಿಲೆ	ಲಿಂಗಸೂರು	ರಾಯಚೂರು	ಕರ್ನಾಟಕ	ಜಡೆಯಶಂಕರ	-	ದೇವರ ಅಂಗಭೋಗ, ರಂಗಭೋಗ, ನೈವೇದ್ಯ ಮತ್ತು ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆ ಕರಡಿಕಲ್ಲ ಬಳಿಯ ಒಂದು ಗ್ರಾಮವನ್ನು ದಾನವಾಗಿ ಬಿಟ್ಟರು	ಕನ್ನಡವಿಶ್ವವಿದ್ಯಾಲಯ ಶಾಸನಸಂಪುಟ-೬ ನಂ.೫
೫.	ಕ್ರಿ.ಶ.೧೧೨೮	ಇಂಗಳೇಶ್ವರ	ಬಾಗೇವಾಡಿ	ಬಿಜಾಪುರ	ಕರ್ನಾಟಕ	ನೀಲಕಂಠೇಶ್ವರ	-	ದೇವರ ಪೂಜೆ, ಅಂಗಭೋಗ, ನಿವೇದ್ಯಕ್ಕೆ ಪುರಾಣಖಂಡಿಕ, ಚೈತ್ರಪವಿತ್ರಕ್ಕೆ, ನಂದಾದೀವಿಗೆಗೆ ಭೂಮಿ, ಹೂದೋಟ, ಗಾಣವನ್ನು ದಾನವಾಗಿ ಕೊಟ್ಟರು	ಎಸ್.ಆಯ್.ಆಯ್., XV, ನಂ.೧೨.
೬.	ಕ್ರಿ.ಶ.೧೧೨೮	ನಾಗವಂದ	ಹಿರೇಕೆರೂರು	ಧಾರವಾಡ	ಕರ್ನಾಟಕ	ಬ್ರಹ್ಮೇಶ್ವರದೇವರು	-	ಬ್ರಹ್ಮೇಶ್ವರದೇವರ ನಂದಾದೀವಿಗೆಗೆ ಹಂದರ ಹಣವನ್ನು ದಾನ ನೀಡಲಾಯಿತು	ಕೆ. ಆಯ್., VI, ನಂ.೨೫.
೭.	ಕ್ರಿ.ಶ.೧೧೨೮	ಲಕ್ಷ್ಮೇಶ್ವರ	ಶಿರಹಟ್ಟಿ	ಧಾರವಾಡ	ಕರ್ನಾಟಕ	ಸೋಮನಾಥ	-	ಸೋಮನಾಥ ದೇವರ ಘಳಿಗೆಗೆ ಭೂಮಿಯನ್ನು ದಾನ ನೀಡಿದರು	ಎಸ್.ಆಯ್.ಆಯ್., XX, ನಂ.೯೯.
೮.	ಕ್ರಿ.ಶ.೧೧೨೮	ಸನಿಗರಂ	ಕರೀಂನಗರ	ಕರೀಂನಗರ	ಆಂಧ್ರಪ್ರದೇಶ	ಕೊಮ್ಮೇಶ್ವರ	ಲೋಕಾಭರಣ ಪಂಡಿತ	ದೇವರ ಸೇವೆಗೆ, ತಪೋಧನರ ಆಹಾರದಾನಕ್ಕೆ ಒಂದು ರಾಟಣ, ಗಾಣ ಮತ್ತು ಭೂಮಿಯನ್ನು ದತ್ತಿಯಾಗಿ ಕೊಟ್ಟರು	ಆ.ಕ.ಶಾ. ನಂ.೪೧೧.
೯.	ಕ್ರಿ.ಶ.೧೧೨೯	ಬಿಜಾಪುರ	ಬಿಜಾಪುರ	ಬಿಜಾಪುರ	ಕರ್ನಾಟಕ	ಮೂಲಸ್ಥಾನ	-	ದೇವರಿಗೆ ಭೂಮಿಯನ್ನು ದಾನ ಬಿಡಲಾಯಿತು	ಎಸ್.ಆಯ್.ಆಯ್., XX, ನಂ.೧೦೦.

೧೦.	ಕ್ರಿ.ಶ.೧೧೨೯	ಕಾಮಧೇನು	ಕಲಘಟಗಿ	ಧಾರವಾಡ	ಕರ್ನಾಟಕ	ಕಲಿದೇವಸ್ವಾಮಿ	ದೇವರಾಸಿಪಣ್ಡಿತರ ಪುತ್ರ ತೇಜೋರಾಸಿ ಪಂಡಿತ	ದೇವರ ನನ್ದಾದೀವಿಗೆಗೆ, ರಂಗಭೋಗಕ್ಕೆ ಶ್ರೀಖಣ್ಡಕ್ಕೆ ಧೂಪಕ್ಕೆ ಭೂಮಿ, ಗಾಣ, ಹಣವನ್ನು ದಾನವಾಗಿ ಬಿಟ್ಟರು	ಎಸ್.ಆಯ್.ಆಯ್., XX, ನಂ.೧೧೧.
೧೧.	ಕ್ರಿ.ಶ.೧೧೨೯	ನಾರಂಗವಾಡಿ	ನಾರಂಗವಾಡಿ	ಉಸ್ಮಾನಾಬಾದ	ಮಹಾರಾಷ್ಟ್ರ	ಭೋಗೇಶ್ವರ	ಶ್ರೀಗುರುದೇವ	ದೇವಾಲಯದ ಧೂಪ, ದೀಪ, ನೈವೇದ್ಯ ಪಂಚಮಹಾಶಬ್ದ ಖಂಡಸ್ಫುಟಿತ ಜೀರ್ಣೋದ್ಧಾರ ನವಕರ್ಮ ಪೂಜೆಗೆ ಗದ್ದೆ, ತೋಟ, ಹಲವು ಸುಂಕಗಳನ್ನು ದತ್ತಿಯಾಗಿ ನೀಡಿದರು	ಕನ್ನಡವಿಶ್ವವಿದ್ಯಾಲಯ ಶಾಸನಸಂಪುಟ-೨,ನಂ.೧೫
೧೨.	ಕ್ರಿ.ಶ.೧೧೨೯	ಕುಕನೂರು	ಕೊಪ್ಪಳ	ಯಲಬುರ್ಗಾ	ಕರ್ನಾಟಕ	ಗಣೇಶ್ವರದೇವಾಲಯ	-	ದೇವಾಲಯದ ಸತ್ರಕ್ಕೆ ಭೂದಾನ ನೀಡಿದುದನ್ನು ತಿಳಿಸುತ್ತದೆ	ಕನ್ನಡವಿಶ್ವವಿದ್ಯಾಲಯ ಶಾಸನಸಂಪುಟ-೨,ನಂ.೫೩
೧೩.	ಕ್ರಿ.ಶ.೧೧೨೯	ಮುದನೂರು	ಸುರಪುರ	ಕಲಬುರ್ಗಿ	ಕರ್ನಾಟಕ	ಮಾರ್ಕಂಡೇಶ್ವರ	-	ದೇವರಪೂಜೆ ಅಂಗಭೋಗ, ನೈವೇದ್ಯಗಳಿಗಾಗಿ ಭೂಮಿಯನ್ನು, ಗಾಣವನ್ನು, ಬಿಲ್ಕೊಡೆ, ಸೆಟ್ಟಿದೆರೆ ವಡ್ಡರಾವುಳ, ಎತ್ತಿನೊಕ್ಕ, ಸಾರಿಗೆಯ ಬೀರವಣ ಸೇಸೆ ಇತ್ಯಾದಿಗಳನ್ನು ದತ್ತಿಯಾಗಿ ನೀಡಲಾಯಿತು	ಸುರಪುರತಾಲೂಕಿನಶಾಸನಗಳು, ನಂ.೭೬
೧೪.	ಕ್ರಿ.ಶ.೧೧೩೦	ಕರಾಡಖೇಡ	ದೇಗೂರು	ನಾಂದೇಡ	ಮಹಾರಾಷ್ಟ್ರ	ಸೋಮನಾಥ	ಜ್ಞಾನೇಶ್ವರಪಂಡಿತ	ಸೋಮನಾಥದೇವರಿಗೆ ಗುಕ್ಕವ್ವೆ, ಹಿಪ್ಪಳಗಾವೆ ಬೋವಿಗಾವೆಯನ್ನು ಸರ್ವನಮಸ್ಯವಾಗಿ ಕೊಟ್ಟರು	ಕನ್ನಡವಿಶ್ವವಿದ್ಯಾಲಯ ಶಾಸನಸಂಪುಟ-೬,ನಂ.೭೩
೧೫.	ಕ್ರಿ.ಶ.೧೧೩೧	ಬೈಲೂರು	ಬಳ್ಳಾರಿ	ಬಳ್ಳಾರಿ	ಕರ್ನಾಟಕ	ಮಲ್ಲಿಕಾರ್ಜುನ	ದೇವರಾಸಿಪಂಡಿತ	ದೇವರಿಗೆ ಭೂಮಿಯನ್ನು ದತ್ತಿಯಾಗಿ ನೀಡಿದುದನ್ನು ದಾಖಲಿಸಿದೆ	ಎಸ್.ಆಯ್.ಆಯ್., IX (I), ನಂ.೨೨೫.
೧೬.	ಕ್ರಿ.ಶ.೧೧೩೧	ತಿಳವಳ್ಳಿ	ಹಾನಗಲ್	ಧಾರವಾಡ	ಕರ್ನಾಟಕ	ಬಂಟೇಶ್ವರ	-	ದೇವರ ನಿವೇದ್ಯಕ್ಕೆ, ಚೈತ್ರಪವಿತ್ರಕ್ಕೆ, ತಪೋಧನರ ಆಹಾರದಾನಕ್ಕೆ ಭೂಮಿಯನ್ನು ದಾನ ಕೊಟ್ಟರು	ಕೆ.ಆಯ್., I, ನಂ.೨೦.
೧೭.	ಕ್ರಿ.ಶ.೧೧೩೨	ಕುಕನೂರು	ಯಲಬುರ್ಗಾ	ಕೊಪ್ಪಳ	ಕರ್ನಾಟಕ	ಮೂಲಸ್ಥಾನದೇವರು	-	ದೇವರ ನೈವೇದ್ಯಕ್ಕೆ ಗದ್ದೆ, ನಂದಾದೀವಿಗೆಗೆ ಗಾಣವನ್ನು ದಾನವಾಗಿ ನೀಡಿದುದನ್ನು ತಿಳಿಸಿದೆ	ಕನ್ನಡವಿಶ್ವವಿದ್ಯಾಲಯ ಶಾಸನಸಂಪುಟ-೨,ನಂ.೩೮
೧೮.	ಕ್ರಿ.ಶ.೧೧೩೨	ಕರಕಾಂತಪುರ	ಅಧೋನಿ	ಕರ್ನೂಲ	ಆಂಧ್ರಪ್ರದೇಶ	ಕರೆಕಂಠ	ಚಂದ್ರಮೌಳಿ -ಪಂಡಿತ, ವಾಮದೇವ -ಪಂಡಿತ	ಗರುಜೆ-೭೦ರ ಇಟ್ಟಿಗೆ ಗ್ರಾಮವನ್ನು ದೇವರ ಸೇವೆಗಾಗಿ, ಸತ್ರಕ್ಕಾಗಿ ದಾನಬಿಟ್ಟುದುದನ್ನು ಇದು ದಾಖಲಿಸಿದೆ	ಕನ್ನಡವಿಶ್ವವಿದ್ಯಾಲಯ ಶಾಸನಸಂಪುಟ-೫,ನಂ.೨೬
೧೯.	ಕ್ರಿ.ಶ.೧೧೩೪	ರಾಮದುರ್ಗ	ಆಲೂರು	ಕರ್ನೂಲ	ಆಂಧ್ರಪ್ರದೇಶ	ಕಲಿದೇವರು	-	ದೇವರ ಪೂಜೆ, ಪುನಸ್ಕಾರಕ್ಕೆ ಭೂಮಿ, ಗಾಣ ನಿವೇಶನ, ಹೂದೋಟಗಳನ್ನು ದಾನಬಿಟ್ಟರು	ಕನ್ನಡವಿಶ್ವವಿದ್ಯಾಲಯ ಶಾಸನಸಂಪುಟ-೫,ನಂ.೩೯
೨೦.	ಕ್ರಿ.ಶ.೧೧೩೨	ಕಲ್ಲೂರು	ಯಲಬುರ್ಗಾ	ಕೊಪ್ಪಳ	ಕರ್ನಾಟಕ	ಕಲಿದೇವ	-	ದಾನದ ವಿವರಗಳು ನಷ್ಟವಾಗಿವೆ	ಕನ್ನಡವಿಶ್ವವಿದ್ಯಾಲಯ ಶಾಸನಸಂಪುಟ-೨,ನಂ.೧೬
೨೧.	ಕ್ರಿ.ಶ.೧೧೩೩	ಮಲಘಾಣ	ಸಿಂಧಗಿ	ಬಿಜಾಪುರ	ಕರ್ನಾಟಕ	ಸ್ವಯಂಭುದೇವ	-	ದೇವರಂಗಭೋಗಕ್ಕೆ, ನಿವೇದ್ಯಕ್ಕೆ ಸುಂಕದ ಹಣವನ್ನು ದಾನವಾಗಿ ನೀಡಲಾಯಿತು	ಎಸ್.ಆಯ್.ಆಯ್., XX, ನಂ.೧೦೪.

೨೩.	ಕ್ರಿ.ಶ.೧೧೩೩	ಕರಾಡಖೇಡ	ದೇಗೂರು	ನಾಂದೇಡ	ಮಹಾರಾಷ್ಟ್ರ	ಸ್ವಯಂಭು ಸೋಮನಾಥ ದೇವಾಲಯ	-	ದೇವಾಲಯದ ಖರ್ಚುವೆಚ್ಚಕ್ಕೆ ವಿವಿಧ ರೀತಿಯ ದಾನಗಳನ್ನು ನೀಡಿದ್ದನ್ನು ಹೇಳುತ್ತದೆ	ಮ.ಕ.ಶಾ. ನಂ.೭೪.
೨೪.	ಕ್ರಿ.ಶ.೧೧೩೩	ಪೆದ್ದತುಂಬಳಂ	ಅಧೋನಿ	ಕರ್ನೂಲು	ಆಂಧ್ರಪ್ರದೇಶ	ಪಂಚಲಿಂಗೇಶ್ವರ	-	ದೇವರ ಸೇವೆಗೆ ತಳವೃತ್ತಿಯಾಗಿ ದೇಗುಲದ ಪಶ್ಚಿಮದ ಪುರದ ಕೇರಿ ೨ ಗಾಣ ಅಚ್ಚಿನ ಟಂಕಶಾಲೆಯಲ್ಲಿ ದಳಕ್ಕೆ ೨ ವೀಸಗಳನ್ನು ದತ್ತಿಯಾಗಿ ಕೊಟ್ಟುದುದನ್ನು ದಾಖಲಿಸಿದೆ	ಕನ್ನಡವಿಶ್ವವಿದ್ಯಾಲಯ ಶಾಸನಸಂಪುಟ-೭,ನಂ.೩೧೧
೨೫.	ಕ್ರಿ.ಶ.೧೧೩೪	ಗಂಗಾಪುರಂ	ಮೆಹೆಬೂಬ್-ನಗರ	ಮೆಹೆಬೂಬ್-ನಗರ	ಆಂಧ್ರಪ್ರದೇಶ	ಸೋಮನಾಥ	-	ಸೋಮನಾಥದೇವರ ನಂದಾದೀವಿಗೆಗೆ ಧೂಪಕ್ಕೆ ವಡ್ಡರಾವುಳ ಮತ್ತು ಹೆಜ್ಜುಂಕದಲ್ಲಿ ತಿಂಗಳಿಗೆ ಇಷ್ಟೆಂದು ದತ್ತಿ ನೀಡಿರುವುದನ್ನು ದಾಖಲಿಸಿದೆ	ಕನ್ನಡವಿಶ್ವವಿದ್ಯಾಲಯ ಶಾಸನಸಂಪುಟ-೫,ನಂ.೫೧೩
೨೬.	ಕ್ರಿ.ಶ.೧೧೩೪	ರಾಮದುರ್ಗ	ಆಲೂರು	ಕರ್ನೂಲು	ಆಂಧ್ರಪ್ರದೇಶ	ಭೀಮೇಶ್ವರ	ಕೇತರಾಸಿ ಮಾಧವರಾಸಿ	ದೇವರಸೇವೆಗೆ ೬ ಮತ್ತರು ಭೂಮಿ, ೧ ಹೂದೋಟ, ೧ ಗಾಣ, ೧ ಮನೆ ನಿವೇಶನವನ್ನು ದತ್ತಿಯಾಗಿ ನೀಡಿದ್ದನ್ನು ದಾಖಲಿಸಿದೆ	ಕನ್ನಡವಿಶ್ವವಿದ್ಯಾಲಯ ಶಾಸನಸಂಪುಟ-೫,ನಂ.೧೩೧
೨೭.	ಕ್ರಿ.ಶ.೧೧೩೪	ಮಣ್ಣೂರು	ಇಂಡಿ	ಬಿಜಾಪುರ	ಕರ್ನಾಟಕ	ಸ್ವಯಂಭು ಭೀಮೇಶ್ವರದೇವ	-	ದೇವರ ಸೇವೆಗಾಗಿ ಭೂಮಿ, ನಿವೇಶನವನ್ನು ದತ್ತಿಯಾಗಿ ನೀಡಿದುದನ್ನು ತಿಳಿಸುತ್ತದೆ	ಎಸ್.ಆಯ್.ಆಯ್., XX, ನಂ.೧೦೫.
೨೮.	ಕ್ರಿ.ಶ.೧೧೩೪	ನಾಡ	ಇಂಡಿ	ಬಿಜಾಪುರ	ಕರ್ನಾಟಕ	ಚಂಡೇಶ್ವರ	-	ದೇವಾಲಯದ ಖಂಡಸ್ಫುಟಿತ ಜೀರ್ಣೋದ್ಧಾರ ಪೂಜೆ, ಪುನಸ್ಕಾರ, ನೈವೇದ್ಯಕ್ಕಾಗಿ ಭೂಮಿ, ಗಾಣ, ತೋಟವನ್ನು ದಾನವಾಗಿ ನೀಡಿದ್ದರ ಉಲ್ಲೇಖ	ಎಸ್.ಆಯ್.ಆಯ್., XX, ನಂ.೧೦೬.
೨೯.	ಕ್ರಿ.ಶ.೧೧೩೪	ಕಲ್ಲೂರು	ಮಾನ್ವಿ	ರಾಯಚೂರು	ಕರ್ನಾಟಕ	ಮಾರಟೇಶ್ವರ	-	ದೇವರ ಸೇವೆಗೆ ೧೨ ಮತ್ತರು ಭೂಮಿಯನ್ನು ದಾನ ನೀಡಿದ ಉಲ್ಲೇಖವಿದೆ	ಕನ್ನಡವಿಶ್ವವಿದ್ಯಾಲಯ ಶಾಸನಸಂಪುಟ-೭,ನಂ.೬೭
೩೦.	ಕ್ರಿ.ಶ.೧೧೩೪	ನಿಂಬರಗಿ	ಆಳಂದ	ಕಲ್ಬುರ್ಗಿ	ಕರ್ನಾಟಕ	ಕಲಿದೇವೇಶ್ವರ	-	ದೇವರಂಗಭೋಗ, ಪೂಜಾನಿವೇದ್ಯ, ತಪೋಧನರ ಆಹಾರದಾನಕ್ಕೆ ದಾನ ನೀಡಿದ ವಿವರಗಳಿವೆ	ಕಲ್ಬುರ್ಗಿ ಜಿಲ್ಲೆಯ ಶಾಸನಗಳು, ನಂ.೩
೩೧.	ಕ್ರಿ.ಶ.೧೧೩೫	ಪೆದ್ದಚೆಪ್ಪಲಿ	ಕಾಮಾಪುರಂ	ಕಡಪಾ	ಆಂಧ್ರಪ್ರದೇಶ	ಉತ್ತರೇಶ್ವರ	-	ದೇವರಸೇವೆಗೆ ಒಂದು ಕೆರೆಯನ್ನು ೨೦ ಮತ್ತರು ಹೊಲ, ೧ ತೋಟವನ್ನು ದತ್ತಿಯಾಗಿ ಕೊಟ್ಟ ವಿವಗಳನ್ನು ಇದರಲ್ಲಿ ದಾಖಲಿಸಿದೆ	ಕನ್ನಡವಿಶ್ವವಿದ್ಯಾಲಯ ಶಾಸನಸಂಪುಟ-೫,ನಂ.೩೭೩
೩೨.	ಕ್ರಿ.ಶ.೧೧೩೫	ಸಿದ್ದಾಪುರ	ಧಾರಾವಾಡ	ಧಾರವಾಡ	ಕರ್ನಾಟಕ	ಮೂಲಸ್ಥಾನ	ದೇವರಾಸಿಯ ಮಗ ನಾಗರಾಸಿ ಪಂಡಿತ	ಮೂಲಸ್ಥಾನದೇವರಿಗೆ ಮೂಲಿಗ ಹಳ್ಳಗಾವುಂಡ ನೀಡಿದ ಭೂದಾನದ ವಿವರಣೆಯಿದೆ	ಎಸ್.ಆಯ್.ಆಯ್., XV, ನಂ.೧೪.
೩೩.	ಕ್ರಿ.ಶ.೧೧೩೫	ಔರಾದ	ದ.ಸೊಲ್ಲಾಪುರ	ಸೊಲ್ಲಾಪುರ	ಮಹಾರಾಷ್ಟ್ರ	ವಜ್ರೇಶ್ವರ	-	ದೇವರಂಗಭೋಗಕ್ಕೆ, ನಿವೇದ್ಯಕ್ಕೆ ಮನೆನಿವೇಶನ ಗಾಣ, ಭೂಮಿಯನ್ನು ದಾನ ನೀಡಿದ ವಿವರವಿದೆ	ಕನ್ನಡವಿಶ್ವವಿದ್ಯಾಲಯ ಶಾಸನಸಂಪುಟ-೬,ನಂ.೧೩೭
೩೪.	ಕ್ರಿ.ಶ.೧೧೩೫	ಉರುವಕೊಂಡ	ಗುತ್ತಿ	ಅನಂತಪುರ	ಆಂಧ್ರಪ್ರದೇಶ	ಜಕ್ಕೇಶ್ವರ	-	ದೇವರಿಗೆ ಭೂಮಿ ಹಾಗೂ ೧ ಗಾಣವನ್ನು ದತ್ತಿಯಾಗಿ ನೀಡಿದುದನ್ನು ದಾಖಲಿಸಿದೆ	ಎಸ್.ಆಯ್.ಆಯ್., IX (I), ನಂ.೨೩೨.

೩೫.	ಕ್ರಿ.ಶ.೧೧೩೬	ರಾಚೂರು	ಕಲ್ವಿಕುರ್ತಿ	ಮೆಹಬೂಬ್-ನಗರ	ಆಂಧ್ರಪ್ರದೇಶ	ಮಲ್ಲಿಕಾರ್ಜುನ	-	ದೇವರ ಸೇವೆಗೆ ಕೆಲವು ದತ್ತಿಯನ್ನು ಕೊಟ್ಟಂತೆ ಇದರಲ್ಲಿ ದಾಖಲಿಸಿದೆ	ಕನ್ನಡವಿಶ್ವವಿದ್ಯಾಲಯ ಶಾಸನಸಂಪುಟ-೫,ನಂ೫೦
೩೬.	ಕ್ರಿ.ಶ.೧೧೩೬	ಸೊಲ್ಲಾಪುರ	ಸೊಲ್ಲಾಪುರ	ಸೊಲ್ಲಾಪುರ	ಮಹಾರಾಷ್ಟ್ರ	ಕನ್ನೇಶ್ವರ, ಚಟ್ಟೇಶ್ವರ ಮಲ್ಲಿಕಾರ್ಜುನ(ತ್ರಿಕೂಟ)	-	ದೇವಾಲಯಕ್ಕೆ ನೂರು ಮತ್ತರು ಭೂಮಿಯನ್ನು ದಾನಮಾಡಿದ ವಿವರವಿದೆ.	ಕನ್ನಡವಿಶ್ವವಿದ್ಯಾಲಯ ಶಾಸನಸಂಪುಟ-೬,ನಂ೩೪
೩೭.	ಕ್ರಿ.ಶ.೧೧೩೬	ಮಾದಿನೂರು	ಕೊಪ್ಪಳ	ಕೊಪ್ಪಳ	ಕರ್ನಾಟಕ	ತ್ರೈಪುರುಷ	-	ದೇವಾಲಯವನ್ನು ಜೀರ್ಣೋದ್ಧಾರ ಮಾಡಿ ತೋಟ, ಗದ್ದೆಯನ್ನು ದಾನ ನೀಡಿದ ವಿವರವಿದೆ	ಕನ್ನಡವಿಶ್ವವಿದ್ಯಾಲಯ ಶಾಸನಸಂಪುಟ-೨,ನಂ.೩
೩೮.	ಕ್ರಿ.ಶ.೧೧೩೭	ಸಾಲೂರು	ತಾಳಗುಂದ	ಶಿವಮೊಗ್ಗ	ಕರ್ನಾಟಕ	ಚಂದೇಶ್ವರ	-	ದೇವಾಲಯಕ್ಕೆ ದಾನ ನೀಡಿದ ವಿವರ ಬಂದಿದೆ	ಎಂ.ಎ.ಆರ್., ೧೯೩೦, ಬಿ.ಎನ್.ಜಿ,೧೯೩೪
೩೯.	ಕ್ರಿ.ಶ.೧೧೩೭	ಬಂಕಾಪುರ	ಬಂಕಾಪುರ	ಧಾರವಾಡ	ಕರ್ನಾಟಕ	ನಕರೇಶ್ವರ	ಚಂದ್ರಭೂಷಣ ಪಂಡಿತ	ದೇವಾಲಯಕ್ಕೆ ಭೂದಾನ ಮಾಡಿದ ವಿವರವಿದೆ	ಎಸ್.ಆಯ್.ಆಯ್., XVIII, ನಂ.೧೩೯.
೪೦.	ಕ್ರಿ.ಶ.೧೧೩೭	ಸಿರಿವಾಳ	ಶಹಪುರ	ಕಲ್ಬುರ್ಗಿ	ಕರ್ನಾಟಕ	ಕದಂಬೇಶ್ವರ	-	ದೇವಾಲಯದ ಜೀರ್ಣೋದ್ಧಾರ, ಪೂಜೆ, ನೈವೇದ್ಯ, ಧೂಪ, ದೀಪಕ್ಕೆ, ಚೈತ್ರಪವಿತ್ರಕ್ಕೆ ದಾನ ನೀಡಿದ ವಿವರವಿದೆ	ಕಲಬುರ್ಗಿ ಜಿಲ್ಲೆಯ ಶಾಸನಗಳು, ನಂ೩೭
೪೧.	ಕ್ರಿ.ಶ.೧೧೩೭	ಕುರುಡಿ	ಮಾನ್ವಿ	ರಾಯಚೂರು	ಕರ್ನಾಟಕ	ಶಂಕರೇಶ್ವರ ಮತ್ತು ನಾಗೇಶ್ವರ	-	ದೇವಾಲಯಕ್ಕೆ ಭೂಮಿಯನ್ನು ದಾನ ನೀಡಿದ ವಿವರವಿದೆ	ಕನ್ನಡವಿಶ್ವವಿದ್ಯಾಲಯ ಶಾಸನಸಂಪುಟ-೭,ನಂ೪೪
೪೨.	ಕ್ರಿ.ಶ.೧೧೩೭	ಅಣದೂರ	ತುಳಜಾಪುರ	ಉಸ್ಮಾನಾಬಾದ	ಕರ್ನಾಟಕ	ಮಾಣಿಕೇಶ್ವರ	-	ದೇವರ ನಂದಾದೀಪಕ್ಕೆ ದಾನ ನೀಡಿದ ವಿವರವಿದೆ	ಕನ್ನಡವಿಶ್ವವಿದ್ಯಾಲಯ ಶಾಸನಸಂಪುಟ-೫,ನಂ೯
೪೩.	ಕ್ರಿ.ಶ.೧೧೩೮	ಮದನಭಾವಿ	ಧಾರವಾಡ	ಧಾರವಾಡ	ಕರ್ನಾಟಕ	ಸ್ವಯಂಭುಕಲಿದೇವ	-	ದೇವಾಲಯಕ್ಕೆ ಭೂಮಿಯನ್ನು ದಾನ ನೀಡಿದ ವಿವರವಿದೆ	ಎಸ್.ಆಯ್.ಆಯ್., XV, ನಂ.೧೬.
೪೪.	ಕ್ರಿ.ಶ.೧೧೩೮	ನರಗುಂದ	ನರಗುಂದ	ಧಾರವಾಡ	ಕರ್ನಾಟಕ	ಶಂಕರದೇವ	-	ದೇವಾಲಯಕ್ಕೆ ಹಣ ದಾನ ನೀಡಿದ ಉಲ್ಲೇಖ	ಕೆ.ಆಯ್., V, ನಂ.೨೪.
೪೫.	ಕ್ರಿ.ಶ.೧೧೩೮	ಲಕ್ಷ್ಮೇಶ್ವರ	ಶಿರಹಟ್ಟಿ	ಧಾರವಾಡ	ಕರ್ನಾಟಕ	ಸೋಮನಾಥದೇವ	ಶ್ರೀಮಜ್ಞಾನಸೋ-ಮನಾಥಪಂಡಿತ	ದೇವರಂಗಭೋಗಕ್ಕೆ ಹಲವು ಸುಂಕಗಳನ್ನು ದಾನ ನೀಡಿದ ಉಲ್ಲೇಖವಿದೆ	ಎಸ್.ಆಯ್.ಆಯ್., XX, ನಂ.೧೦೭.
೪೬.	ಕ್ರಿ.ಶ.೧೧೩೯	ಪೊಮೆಗಾಮೆ	ಹಾಸನ	ಹಾಸನ	ಕರ್ನಾಟಕ	ಕಲಿದೇವ	ಕ್ರಿಯಾಸಕ್ತಿಪಂಡಿತ	ದೇವಾಲಯ ಮತ್ತು ತಪೋಧನರ ಆಹಾರದಾನಕ್ಕೆ ದಾನ ನೀಡಿದ ವಿವರವಿದೆ	ಎ.ಕ., VIII, ಹಾ, ನಂ.೮೮.
೪೭.	ಕ್ರಿ.ಶ.೧೧೩೯	ಏವೂರು	ಸುರಪುರ	ಕಲ್ಬುರ್ಗಿ	ಕರ್ನಾಟಕ	ಸೋಮೇಶ್ವರ	-	ದೇವರ ಅಂಗಭೋಗಕ್ಕೆ ಹೆರ್ಜುಂಕ ದಾನವನ್ನು ನೀಡಿದುದನ್ನು ವಿವರಿಸುತ್ತದೆ	ಸುರಪುರತಾಲೂಕಿನಶಾಸನಗಳು, ನಂ೧೭
೪೮.	-	ಹುಲ್ಲೂರು	ಬಾಗಲಕೋಟ	ಬಿಜಾಪುರ	ಕರ್ನಾಟಕ	ನಾಗೇಶ್ವರ	-	ದೇವರಂಗಭೋಗಕ್ಕೆ ದಾನ ನೀಡಿದ ಉಲ್ಲೇಖ ಆದರೆ ವಿವರಗಳು ನಷ್ಟವಾಗಿವೆ	ಎಸ್.ಆಯ್.ಆಯ್., XV, ನಂ.೧೯.
೪೯.	-	ಹಾವೇರಿ	ಹಾವೇರಿ	ಧಾರವಾಡ	ಕರ್ನಾಟಕ	ಸಿದ್ದೇಶ್ವರ	-	ದೇವರಿಗೆ ದಾನ ನೀಡಿದ ಉಲ್ಲೇಖವಿದೆ ಆದರೆ ವಿವರಗಳು ನಷ್ಟವಾಗಿವೆ	ಎಸ್.ಆಯ್.ಆಯ್., XVIII, ನಂ.೧೪೨.
೫೦.	-	ಶಿರಸಗಿ	ಸಿಂಧಗಿ	ಬಿಜಾಪುರ	ಕರ್ನಾಟಕ	ಸ್ವಯಂಭು ಕೇದಾರೇಶ್ವರ	-	ದೇವಾಲಯದ ವಿದ್ವಾಂಸರಿಗೆ ದಾನ ನಿಡಿದ ಕುರಿತು ಇದರಲ್ಲಿ ಉಲ್ಲೇಖವಿದೆ	ಸಂಯುಕ್ತ ಕರ್ನಾಟಕ, ದಿ.೧೩-೧೨-೧೯೯೮.
೫೧.	-	ಕುಕನೂರು	ಯಲಬುರ್ಗಾ	ಕೊಪ್ಪಳ	ಕರ್ನಾಟಕ	ಮಲ್ಲಿಕಾರ್ಜುನದೇವ	-	ದೇವಾಲಯಕ್ಕೆ ಒಂದು ಮನೆ, ಅಂಗಡಿ ಹಾಗೂ ಹಣವನ್ನು ದಾನ ಬಿಟ್ಟ ವಿವರವಿದೆ	ಕನ್ನಡವಿಶ್ವವಿದ್ಯಾಲಯ ಶಾಸನಸಂಪುಟ-೨,ನಂ೩೯

ಅಗ್ರಹಾರ/ಘಟಿಕಾಸ್ಥಾನ/ಬ್ರಹ್ಮಪುರಿ/ಮಠಗಳು

ಅ.ನಂ.	ಗ್ರಾಮ	ತಾಲೂಕು	ಜಿಲ್ಲೆ	ರಾಜ್ಯ	ಕಾಲ	ಅಗ್ರಹಾರಗಳು	ಆಕರ
೧	೨	೩	೪	೫	೬	೭	೮
೧.	ತಿಳವಳ್ಳಿ	ಹಾನಗಲ್ಲ	ಧಾರವಾಡ	ಕರ್ನಾಟಕ	ಕ್ರಿ.ಶ.೧೧೨೯	ಶ್ರೀಮದಗ್ರಹಾರ	ಕೆ.ಆಯ್., V, ನಂ.೨೩.
					ಕ್ರಿ.ಶ.೧೧೩೦		ಕೆ.ಆಯ್., I, ನಂ.೧೯.
					ಕ್ರಿ.ಶ.೧೧೩೧		ಕೆ.ಆಯ್., I, ನಂ.೨೦.
೨.	ಕುಕನೂರು	ಕೊಪ್ಪಳ	ಕೊಪ್ಪಳ	ಕರ್ನಾಟಕ	ಕ್ರಿ.ಶ.೧೧೨೯	ಶ್ರೀಮನ್ಮಹಾಗ್ರಹಾರ	ಕನ್ನಡವಿಶ್ವವಿದ್ಯಾಲಯ ಶಾಸನಸಂಪುಟ-೨,ನಂ.೫೩
					ಕ್ರಿ.ಶ.೧೧೩೨		ಕನ್ನಡವಿಶ್ವವಿದ್ಯಾಲಯ ಶಾಸನಸಂಪುಟ-೨, ನಂ.೩೮
					--		ಕನ್ನಡವಿಶ್ವವಿದ್ಯಾಲಯ ಶಾಸನಸಂಪುಟ-೨, ನಂ.೩೯
೩.	ಮುದನೂರು	ಸುರಪುರ	ಕಲ್ಬುರ್ಗಿ	ಕರ್ನಾಟಕ	ಕ್ರಿ.ಶ.೧೧೨೯	ಶ್ರೀಮದಗ್ರಹಾರ	ಸುರಪುರತಾಲೂಕಿನಶಾಸನಗಳು,ನಂ.೬೭
೪.	ಮಲಘಾಣ	ಸಿಂದಗಿ	ಬಿಜಾಪುರ	ಕರ್ನಾಟಕ	ಕ್ರಿ.ಶ.೧೧೩೩	ಶ್ರೀಮತ್ಸರ್ವನಮಸ್ಯದಗ್ರಹಾರ	ಎಸ್.ಆಯ್.ಆಯ್., XX, ನಂ.೧೦೪.
೫.	ಹೊನ್ನಾಳಿ	ಹೊನ್ನಾಳಿ	ದಾವಣಗೇರಿ	ಕರ್ನಾಟಕ	ಕ್ರಿ.ಶ.೧೧೩೩	ಅಗ್ರಹಾರ	ಎಂ.ಎ.ಆರ್., ೧೯೪೨, ನಂ.1೬೭.
೬.	ಕಲ್ಲೂರು	ಯಲಬುರ್ಗ	ಕೊಪ್ಪಳ	ಕರ್ನಾಟಕ	ಕ್ರಿ.ಶ.೧೧೩೪	ಸರ್ವನಮಸ್ಯದಗ್ರಹಾರ	ಕನ್ನಡವಿಶ್ವವಿದ್ಯಾಲಯ ಶಾಸನಸಂಪುಟ-೭ ನಂ.೬೭
೭.	ಹಾವೇರಿ	ಹಾವೇರಿ	ಧಾರವಾಡ	ಕರ್ನಾಟಕ	ಕ್ರಿ.ಶ.೧೧೩೪	ಶ್ರೀಮದಗ್ರಹಾರ	ಎಸ್.ಆಯ್.ಆಯ್., XVIII, ನಂ.೧೩೬.
							ಎಸ್.ಆಯ್.ಆಯ್., XVIII, ನಂ.೧೪೨.
೮.	ಕಲ್ಲೂರು	ಯಲಬುರ್ಗ	ಕೊಪ್ಪಳ	ಕರ್ನಾಟಕ	ಕ್ರಿ.ಶ.೧೧೩೪	ಸರ್ವನಮಸ್ಯದಗ್ರಹಾರ	ಕನ್ನಡವಿಶ್ವವಿದ್ಯಾಲಯ ಶಾಸನಸಂಪುಟ-೭ನಂ.೬೭
೯.	ಏರಿಗೆ	ದೇಗ್ಲೂರು	ನಾಂದೇಡ	ಮಹಾರಾಷ್ಟ್ರ	ಕ್ರಿ.ಶ.೧೧೩೫	ಶ್ರೀಮದಗ್ರಹಾರ	ಕನ್ನಡವಿಶ್ವವಿದ್ಯಾಲಯ ಶಾಸನಸಂಪುಟ-೬ನಂ.೬೨
					ಕ್ರಿ.ಶ.೧೧೩೮		ಕನ್ನಡವಿಶ್ವವಿದ್ಯಾಲಯ ಶಾಸನಸಂಪುಟ-೬ನಂ.೬೩
೧೦.	ಹುಣಸಗಿ	ಸುರಪುರ	ಕಲ್ಬುರ್ಗಿ	ಕರ್ನಾಟಕ	ಕ್ರಿ.ಶ.೧೧೩೬	ಸರ್ವನಮಸ್ಯದಗ್ರಹಾರ	ಸುರಪುರತಾಲೂಕಿನಶಾಸನಗಳು, ನಂ.೧೫
೧೧.	ಗದಗ	ಗದಗ	ಧಾರವಾಡ	ಕರ್ನಾಟಕ	ಕ್ರಿ.ಶ.೧೧೩೬	ರಾಮದತ್ತಿಮಹಾಗ್ರಹಾರ	ಎಸ್.ಆಯ್.ಆಯ್., XVIII, ನಂ.೧೩೮.
೧೨.	ಮಾದಿನೂರು	ಕೊಪ್ಪಳ	ಕೊಪ್ಪಳ	ಕರ್ನಾಟಕ	ಕ್ರಿ.ಶ.೧೧೩೬	ಅಗ್ರಹಾರ	ಕನ್ನಡವಿಶ್ವವಿದ್ಯಾಲಯ ಶಾಸನಸಂಪುಟ-೨ನಂ.೨೬
೧೩.	ಸಾಲೂರು	ತಾಳಗುಂದ	ಶಿವಮೊಗ್ಗ	ಕರ್ನಾಟಕ	ಕ್ರಿ.ಶ.೧೧೩೭	ಶ್ರೀಮನ್ಮಹಾಗ್ರಹಾರ	ಎಂ.ಎ.ಆರ್., ೧೯೩೦, ನಂ.೮೦.
೧೪.	ಕುರಡಿ	ಮಾನ್ವಿ	ರಾಯಚೂರು	ಕರ್ನಾಟಕ	ಕ್ರಿ.ಶ.೧೧೩೭	ಸರ್ವನಮಸ್ಯದಗ್ರಹಾರ	ಕನ್ನಡವಿಶ್ವವಿದ್ಯಾಲಯ ಶಾಸನಸಂಪುಟ-೭ ನಂ.೪೪
೧೫.	ನರಗುಂದ	ನರಗುಂದ	ಧಾರವಾಡ	ಕರ್ನಾಟಕ	ಕ್ರಿ.ಶ.೧೧೩೮	ಶ್ರೀಮನ್ಮಹಾಗ್ರಹಾರ	ಕೆ.ಆಯ್., V, ನಂ.೨೪.
೧೬.	ಬಸವನಂದಿಹಳ್ಳಿ	ಉಡುಗಣಿ		ಕರ್ನಾಟಕ	ಕ್ರಿ.ಶ.೧೧೪೨	-	ಎಂ.ಎ.ಆರ್., ೧೯೨೭, ನಂ.೧೬೦.
೧೭.	ಸಿರಸಗಿ	ಸಿರಸಗಿ	ಬಿಜಾಪುರ		-	ಅಗ್ರಹಾರ	ಸಂಯುಕ್ತ ಕರ್ನಾಟಕ, ದಿ.೧೩-೧೨-೧೯೯೮.

ಘಟಿಕಾಸ್ಥಾನಗಳು

೧.	ರಾಯಬಾಗ	ರಾಯಬಾಗ	ಬೆಳಗಾಂವಿ	ಕರ್ನಾಟಕ	ಕ್ರಿ.ಶ.೧೧೨೭	ಘಟಿಕಾಸ್ಥಾನ	ಪಿ.ಎನ್.ಕೆ. ಮತ್ತು ಕೆ., ನಂ.೬.
೨.	ಕರಾಡಖೇಡ	ದೇಗ್ಲೂರು	ನಾಂದೇಡ	ಮಹಾರಾಷ್ಟ್ರ	ಕ್ರಿ.ಶ.೧೧೩೦	ಘಟಿಕಾಸ್ಥಾನ	ಕನ್ನಡವಿಶ್ವವಿದ್ಯಾಲಯ ಶಾಸನಸಂಪುಟ-೫ ನಂ.೬೨

ಬ್ರಹ್ಮಪುರಿಗಳು

೧.	ಏರಿಗೆ	ದೇಗ್ಲೂರು	ನಾಂದೇಡ	ಮಹಾರಾಷ್ಟ್ರ	ಕ್ರಿ.ಶ.೧೧೩೫	ಬ್ರಹ್ಮಪುರಿ	ಕನ್ನಡವಿಶ್ವವಿದ್ಯಾಲಯ ಶಾಸನಸಂಪುಟ-೬ ನಂ.೬೨
೨.	ನಿಂಬರಗಿ	ಆಳಂದ	ಕಲ್ಬುರ್ಗಿ	ಕರ್ನಾಟಕ	ಕ್ರಿ.ಶ.೧೧೩೪	ಬ್ರಹ್ಮಪುರಿ	ಕಲಬುರ್ಗಿ ಜಿಲ್ಲೆಯ ಶಾಸನಗಳು, ನಂ.೩

ಮಠಗಳು

೧.	ಹಂದರ್ಕಿ	ಚಿತಾಪುರ	ಗುಲಬರ್ಗ	ಕರ್ನಾಟಕ	ಕ್ರಿ.ಶ.೧೧೧೮	ಮಠ	ಎ.ಪಿ.ಜೆ.ಎಸ್-೯, ನಂ.೧೮-೧೯.
೨.	ಪಟಾನ್‌ಚೇರು	ಸಂಗಾರೆಡ್ಡಿ	ಮೇದಿಕ್	ಆಂಧ್ರಪ್ರದೇಶ	ಕ್ರಿ.ಶ.೧೧೨೭	ಪಂಚಮಠ	ಕನ್ನಡವಿಶ್ವವಿದ್ಯಾಲಯ ಶಾಸನಸಂಪುಟ-೫ ನಂ.೬೦೪
೩.	ನಿಂಬರಗಿ	ಆಳಂದ	ಕಲ್ಬುರ್ಗಿ	ಕರ್ನಾಟಕ	ಕ್ರಿ.ಶ.೧೧೩೪	ಮಠ	ಕಲಬುರ್ಗಿ ಜಿಲ್ಲೆಯ ಶಾಸನಗಳು, ನಂ.೩
೪.	ಏರಿಗೆ	ದೇಗ್ಲೂರು	ನಾಂದೇಡ	ಮಹಾರಾಷ್ಟ್ರ	ಕ್ರಿ.ಶ.೧೧೩೮	ಸಂಜೆಮಠ	ಕನ್ನಡವಿಶ್ವವಿದ್ಯಾಲಯ ಶಾಸನಸಂಪುಟ-೬ ನಂ.೬೩
೫.	ಲಕ್ಷ್ಮೇಶ್ವರ	ಶಿರಹಟ್ಟಿ	ಧಾರವಾಡ	ಕರ್ನಾಟಕ	ಕ್ರಿ.ಶ.೧೧೩೮	ಪಂಚಮಠ	ಎಸ್.ಆಯ್.ಆಯ್., XX, ನಂ.೧೦೭.

ಗ್ರಂಥಋಣ Bibliography

ಶಾಸನ ಸಂಪುಟಗಳು

೧. ಹಿರೇಮಠ, ಬಿ.ಆರ್. ಮತ್ತು ಗೋಗಿ ಹನುಮಾಕ್ಷಿ, : ಮುದನೂರು ಯಡ್ರಾಮಿ ಶಾಸನಗಳು,

೨. ಕಲಬುರ್ಗಿ, ಎಂ.ಎಂ., ೧೯೭೬, : ಬಿಜಾಪುರ ಜಿಲ್ಲೆಯ ಶಾಸನಸೂಚಿ, ಧಾರವಾಡ.

೩. ಕಲಬುರ್ಗಿ, ಎಂ.ಎಂ., ೧೯೭೫, : ಧಾರವಾಡ ಜಿಲ್ಲೆಯ ಶಾಸನಸೂಚಿ, ಧಾರವಾಡ.

೪. ಕಲಬುರ್ಗಿ, ಎಂ.ಎಂ., ೧೯೭೬, : ಧಾರವಾಡ ತಾಲೂಕಿನ ಶಾಸನಗಳು, ಧಾರವಾಡ.

೫. ದೇವರಕೊಂಡಾರೆಡ್ಡಿ(ಸಂ.),೧೯೯೮ : ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೧, (ಬಳ್ಳಾರಿ ಜಿಲ್ಲೆ), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೬. ದೇವರಕೊಂಡಾರೆಡ್ಡಿ(ಸಂ.),೧೯೯೯, : ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೨, (ಕೊಪ್ಪಳ ಜಿಲ್ಲೆ), ಹಂಪಿ.

೭. ಗಣೇಶ, ಕೆ.ಆರ್.(ಸಂ.), ೨೦೦೧, ಮತ್ತು ಶೇಷಶಾಸ್ತ್ರಿ, ಆರ್., : ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೫, (ಆಂಧ್ರಪ್ರದೇಶದ ಕನ್ನಡ ಶಾಸನಗಳು, ಭಾಗ.೧-೨.), ಹಂಪಿ.

೮. ಉಪಾಧ್ಯ, ಜಿ.ಎಸ್.(ಸಂ.),೨೦೦೧, : ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೬, (ಮಹಾರಾಷ್ಟ್ರದ ಕನ್ನಡ ಶಾಸನಗಳು), ಹಂಪಿ.

೯. ದೇವರಕೊಂಡಾರೆಡ್ಡಿ(ಸಂ.), ೨೦೦೩, : ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೭, (ರಾಯಚೂರು ಜಿಲ್ಲೆ), ಹಂಪಿ.

೧೦. ರಿತ್ತಿ ಶ್ರೀನಿವಾಸ, ೨೦೦೦, : ಕೊಲ್ಲಾಪುರ ಜಿಲ್ಲೆಯ ಶಾಸನಗಳು, ಹಂಪಿ.

೧೨. ಗೋಗಿ ಹನುಮಾಕ್ಷಿ, ೧೯೯೬, : ಕಲಬುರ್ಗಿ ಜಿಲ್ಲೆಯ ಶಾಸನಗಳು, ಹುಬ್ಬಳ್ಳಿ.

Epigraphical Volumes :

1. Annual Report on South Indian Epigraphy.
2. Annual Report on Indian Epigraphy.
3. Epigraphia Carnatika Vol-
4. Epigraphia Indica Vol - 36.
5. Hydrabad Archaeological Series.
6. Ritti, S.H. and Shelke, G.C., (Ed.) Inscription from Nanded District.
7. Ritti S. H. and Anand Kumbar., (Ed.) Inscription from Sholapur District.
10. Progress Report of the KRI, (For 1953-57).
11. Karnataka Inscriptions, Vol. I-V.
12. South Indian Inscriptions, Vol. IX, P.1-2; XV; XVIII; XX.

ಕನ್ನಡ ಗ್ರಂಥಗಳು:

೧. ಅಣ್ಣಿಗೇರಿ, ಎಂ.ಎಂ. ಮತ್ತು ಮೇವುಂಡಿ ಮಲ್ಲಾರಿ, ೧೯೬೧ : *ಶಾಸನ ಸಾಹಿತ್ಯ ಸಂಚಯ*, ಕೆ.ಆರ್.ಆಯ್., ಧಾರವಾಡ.

೨. ಅಪರ್ಣ, ಕೂ.ಸ., ೧೯೯೯, : *ದೇವಾಲಯ ವಾಸ್ತುಶಿಲ್ಪ ಪರಿಚಯ*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩. ಕಪಟರಾಳ ಕೃಷ್ಣರಾಯ, ೧೯೫೫, : *ಲಾಕುಳಶೈವರ ಇತಿಹಾಸ*, ಕನ್ನಡ ಸಂಶೋಧನ ಸಂಸ್ಥೆ, ಕ.ವಿ.ವಿ. ಧಾರವಾಡ.

೪. ಕಲಬುರ್ಗಿ, ಎಂ.ಎಂ., ೧೯೮೦, : *ಸಮಾಧಿ, ಬಲಿದಾನ, ವೀರಮರಣ ಸ್ಮಾರಕಗಳು*, ಐ.ಬಿ.ಎಚ್., ಪ್ರಕಾಶನ, ಬೆಂಗಳೂರು.

೫. ಕಲಬುರ್ಗಿ, ಎಂ.ಎಂ., ೧೯೯೮, : *ಕಲ್ಯಾಣ ಚಾಲುಕ್ಯ ಚಕ್ರವರ್ತಿ ಸರ್ವಜ್ಞ ಸೋಮೇಶ್ವರ ವಿರಚಿತ ಮಾನಸೋಲ್ಲಾಸ*,ಪ್ರಸಾರಾಂಗ, ಕ.ವಿ.ವಿ., ಧಾರವಾಡ.

೬. ಕಲಬುರ್ಗಿ, ಎಂ.ಎಂ., ೧೯೯೯, : *ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು*,ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೭. ಕೃಷ್ಣರಾವ್, ಎಂ.ವಿ. ಮತ್ತು ಕೇಶವಭಟ್ಟ, ಎಂ., ೧೯೭೦, : *ಕರ್ನಾಟಕ ಇತಿಹಾಸ ದರ್ಶನ*, ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ, ಚಾಮರಾಜಪೇಟ.

೮. ಕೃಷ್ಣರಾವ್, ಜಿ.ಎಸ್.(ಅನು),೧೯೯೫, : *ದಕ್ಷಿಣ ಭಾರತದ ಇತಿಹಾಸ*, ಬೆಂಗಳೂರು.

೯. ಕೆಂಪಣ್ಣವರ, ಟಿ.ಜೆ.(ಸಂ.),೧೯೯೦, : *ಜೈನ ಕ್ಷೇತ್ರಗಳ ಐತಿಹ್ಯ*, ಬಿ.ಬಿ.ಕರ್ಣವಾಡಿ, ಹಾರೋಗೇರಿ.

೧೦. ಕೊಪ್ಪಾ, ಎಸ್.ಕೆ., ೧೯೯೦, : *ತರ್ದವಾಡಿ ನಾಡು: ಒಂದು ಅಧ್ಯಯನ*, ಪ್ರತಿಭಾ ಪ್ರಕಾಶನ, ಇಂಡಿ.

೧೧. ಖಂಡೋಬರಾವ್, ಎಚ್., ೨೦೦೨, : *ನಾಣ್ಯ ಕರ್ನಾಟಕ*, ಮಗರ ಪಬ್ಲಿಕೇಶನ್ಸ್, ಶಿವಮೊಗ್ಗ.

೧೨. ಗುರವ, ಆರ್.ಎನ್., ೧೯೭೯, : *ತರ್ದವಾಡಿ ನಾಡು*, ಕ.ವಿ.ವಿ., ಧಾರವಾಡ.

೧೩. ಗೋಪಾಲ, ಬಾ.ರಾ., ೧೯೭೬, : *ಕನ್ನಡ ನಾಡಿನ ಐತಿಹಾಸಿಕ ಮಹಾಪುರುಷರು*, ಕ.ವಿ.ವಿ., ಧಾರವಾಡ.

೧೪. ಗೋಪಾಲರಾವ್, ಎಚ್.ಎಸ್.,೧೯೯೩,: *ಶಾಸನಗಳ ಹಿನ್ನೆಲೆಯಲ್ಲಿ ಕಲ್ಯಾಣ ಚಾಲುಕ್ಯರ ದೇವಾಲಯಗಳು: ಒಂದು ಸಾಂಸ್ಕೃತಿಕ ಅಧ್ಯಯನ*, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು.

೧೫. ಚನ್ನಕ್ಕ ಎಲಿಗಾರ, ೧೯೮೭, : *ಪ್ರಾಚೀನ ಕರ್ನಾಟಕದ ರಾಣಿಯರು*,ಚನ್ನಗಂಗಾ ಪ್ರಕಾಶನ, ಧಾರವಾಡ.

೧೬. ಚನ್ನಕ್ಕ ಎಲಿಗಾರ, ೧೯೯೦, : *ಶಾಸನಗಳಲ್ಲಿ ಕರ್ನಾಟಕ ಸ್ತ್ರೀ ಸಮಾಜ*, ಪ್ರಸಾರಾಂಗ, ಕ.ವಿ.ವಿ., ಧಾರವಾಡ.

೧೭. ಚನ್ನಕ್ಕ ಎಲಿಗಾರ, ೧೯೯೮, : *ಹಾನಗಲ್ಲ ಕದಂಬರು*, ಚನ್ನಗಂಗಾ ಪ್ರಕಾಶನ, ಧಾರವಾಡ.

೧೮. ಚನ್ನಕ್ಕ ಪಾವಟೆ, ೧೯೯೫, : ಸಂಸ್ಕೃತಿ ಸಂಶೋಧನೆ, ಚನ್ನಗಂಗಾ ಪ್ರಕಾಶನ, ಧಾರವಾಡ.

೧೯. ಚಿದಾನಂದಮೂರ್ತಿ, ಎಂ., ೧೯೬೬, : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೨೦. ಚಿದಾನಂದಮೂರ್ತಿ, ಎಂ., ೧೯೭೫, : ವೀರಗಲ್ಲುಗಳು ಮತ್ತು ಮಾಸ್ತಿಗಲ್ಲುಗಳು, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು.

೨೧. ಚಿಂಚೋಳಿ, ಸು.ರಾ., ೨೦೦೨, : ಪ್ರಾಕ್ತನ ಶಾಸ್ತ್ರದ ಹಿನ್ನೆಲೆಯಲ್ಲಿ ಬಿಜಾಪುರ ಜಿಲ್ಲೆಯಲ್ಲಿರುವ ಕಲ್ಯಾಣ ಚಾಲುಕ್ಯರ ಕಾಲದ ವಾಸ್ತುಶಿಲ್ಪಕಲೆಯ ಅಧ್ಯಯನ, (ಅಪ್ರಕಟಿತ ಪಿ.ಎಚ್‌ಡಿ. ಮಹಾಪ್ರಬಂಧ), ಕ.ವಿ.ವಿ., ಧಾರವಾಡ.

೨೨. ಜ್ಯೋತಿ ಹೊಸೂರು (ಸಂ.), ೧೯೮೨, : ಬೆಳುವಲ, ಡಾ. ಬೆಟಗೇರಿ ಕೃಷ್ಣಶರ್ಮ ಸಂಭಾವನಾ ಗ್ರಂಥ, ಕಾಲಗತಿ ಪ್ರಕಾಶನ, ರಾಯಭಾಗ.

೨೩. ತಿಪ್ಪೇರುದ್ರಸ್ವಾಮಿ, ೧೯೬೮, : ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಡಿ.ವಿ.ಕೆ. ಮೂರ್ತಿ ಪ್ರಕಾಶಕರು, ಮೈಸೂರು.

೨೪. ದಿವಾಕರ, ಆರ್.ಆರ್., ೧೯೭೦, : ಕರ್ನಾಟಕದ ಪರಂಪರೆ, ಸಂ.೧, ಬೆಂಗಳೂರು.

೨೫. ದೇಸಾಯಿ, ಎಚ್.ಆರ್., ೨೦೦೨ : ಕಲ್ಯಾಣ ಚಾಲುಕ್ಯರ ಕಾಲದ ಶಿಕ್ಷಣ ಪದ್ಧತಿ, (ಅಪ್ರಕಟಿತ ಪಿ.ಎಚ್‌ಡಿ. ಮಹಾಪ್ರಬಂಧ), ಕ.ವಿ.ವಿ., ಧಾರವಾಡ.

೨೬. ದೇಸಾಯಿ, ಪಿ.ಬಿ., ೧೯೫೬, : ಶಾಸನ ಪರಿಚಯ (ಸಂ.), ಧಾರವಾಡ.

೨೭. ದೇಸಾಯಿ, ಪಿ.ಬಿ., ೧೯೮೩, : ಕರ್ನಾಟಕದ ಕಲಚೂರಿಯರು, ಆಲೂರು ವೆಂಕಟರಾವ್ ಪ್ರತಿಷ್ಠಾನ, ಧಾರವಾಡ.

೨೮. ನರಸಿಂಹಮೂರ್ತಿ, ಎ.ವ್ಹಿ., ೧೯೭೧, : ಕರ್ನಾಟಕದ ಸೇವುಣರ ಇತಿಹಾಸ, ಮೈಸೂರು.

೨೯. ನರಸಿಂಹಾಚಾರ್ಯ, ಆರ್., ೧೯೭೨-೧೯೭೪, : ಕರ್ನಾಟಕ ಕವಿಚರಿತೆ, ಸಂ.೧-೨, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೩೦. ನರಸಿಂಹಾಚಾರ್ಯ, ಆರ್., ೧೯೭೫, : ಶಾಸನ ಪದ್ಯಮಂಜರಿ, ಬೆಂಗಳೂರು.

೩೧. ನಂದೀಮಠ, ಎಸ್.ಸಿ., ೧೯೭೫, : ಕರ್ನಾಟಕದ ಧರ್ಮಗಳು, ಕನ್ನಡ ನಾಡಿನ ಚರಿತ್ರೆ, ಭಾಗ-೨, ಬೆಂಗಳೂರು.

೩೨. ನಾಗೇಗೌಡ, ಎಚ್.ಎಲ್., ೧೯೬೪, : ಪ್ರವಾಸಿ ಕಂಡ ಇಂಡಿಯಾ, ಭಾಗ ೧-೨, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೩೩. ನಾಗಯ್ಯ, ಜೆ.ಎಂ., ೧೯೯೨, : ಆರನೆಯ ವಿಕ್ರಮಾದಿತ್ಯನ ಶಾಸನಗಳು ಒಂದು ಅಧ್ಯಯನ, ವೀರಶೈವ ಅಧ್ಯಯನ ಅಕಾಡೆಮಿ, ಶ್ರೀ ನಾಗನೂರು ರುದ್ರಾಕ್ಷಿಮಠ, ಬೆಳಗಾವಿ.

೩೪. ನಾರಾಯಣ, ಕೆ.ವಿ., ೧೯೯೮, : *ಸ್ಥಳನಾಮಗಳು: ಪರಿವರ್ತನೆ ಮತ್ತು ಪ್ರಭಾವ*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೫. ನೀರ್ಪಾಜೆ ಭೀಮ ಭಟ್ಟ, ೧೯೯೮, : *ಮಹಾಕವಿ ಬಿಲ್ಹಣನ ವಿಕ್ರಮಾಂಕದೇವ ಚರಿತಂ*, ಅಭ್ಯುದಯ ಪ್ರಕಾಶನ, ಕನ್ಯಾನ.

೩೬. ನೀಲತ್ತಹಳ್ಳಿ ಕಸ್ತೂರಿ, ೨೦೦೦, : *ಕರ್ನಾಟಕದಲ್ಲಿ ಕೆರೆ ನೀರಾವರಿ*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೭. ಪಂಚಮುಖಿ, ಆರ್.ಎಸ್., ೧೯೬೬, : *ಕರ್ನಾಟಕ ಇತಿಹಾಸ*, ಕರ್ನಾಟಕ ಇತಿಹಾಸ ಸಂಶೋಧನ ಮಂಡಲ, ಧಾರವಾಡ.

೩೮. ಪಾಟೀಲ, ಎಸ್.ಪಿ., ೧೯೯೨, : *ಜೈನ ಹಬ್ಬಗಳು*, ವೈಶಾಲಿ ಪ್ರಕಾಶನ, ಧಾರವಾಡ.

೩೯. ಪಾಟೀಲ, ಎಸ್.ಪಿ., ೧೯೭೯, : *ಜೈನಸಂಸ್ಕೃತಿಯ ಹಬ್ಬಗಳು*, ವೈಶಾಲಿ ಪ್ರಕಾಶನ, ಧಾರವಾಡ.

೪೦. ಪಾಟೀಲ ಭೋಜರಾಜ, ೧೯೯೫, : *ನಾಗರಖಂಡ-೭೦: ಒಂದು ಅಧ್ಯಯನ*, ಮಲೆನಾಡು ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ಮುರುಘರಾಜೇಂದ್ರ ಮಠ, ಆನಂದಪುರಂ.

೪೧. ಮಲ್ಲಿಕಾರ್ಜುನ, ೧೯೪೭, : *ಸೂಕ್ತಿಸುಧಾರ್ಣವಂ*, (ಸಂ.) ಎನ್. ಅನಂತರಂಗಾಚಾರ್, ಮೈಸೂರು ಸರಕಾರ, ಮೈಸೂರು.

೪೨. ಮಲ್ಲಾಪುರ, ಬಿ.ವ್ಹಿ., ೧೯೭೮, : *ನಯಸೇನ ಮತ್ತು ಅವನ ಕೃತಿಗಳು*, ಕನ್ನಡ ಅಧ್ಯಯನ ಪೀಠ, ಪಠ್ಯಪುಸ್ತಕ ನಿರ್ದೇಶನಾಲಯ, ಕ.ವಿ.ವಿ., ಧಾರವಾಡ.

೪೩. ಮಹದೇವ, ಸಿ., ವಾಸುದೇವನ್, ಸಿ.ಎಸ್.ಮತ್ತು ರಮೇಶ ನಾಯ್ಕ, ೧೯೯೯, : *ಕರ್ನಾಟಕ ದೇವಾಲಯ ಕೋಶ, ಹಾವೇರಿ ಜಿಲ್ಲೆ*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪೪. ಮರಿಯಪ್ಪ ಭಟ್ಟ (ಸಂ.), ೧೯೫೫, : *ರಾಜಾದಿತ್ಯನ ವ್ಯವಹಾರ ಗಣಿತ*, ಮದ್ರಾಸ್.

೪೫. ಮಿರ್ಜಿ ಅಣ್ಣಾರಾಯ, ೧೯೬೯, : *ಜೈನಧರ್ಮ*, ಮೈಸೂರು.

೪೬. ಮೇವುಂಡಿ ಮಲ್ಲಾರಿ, ೧೯೭೪, : *ಕನ್ನಡ ಶಾಸನ ಕವಿಗಳು*, ಸಮಾಜ ಪುಸ್ತಕಾಲಯ, ಧಾರವಾಡ.

೪೭. ರಮೇಶ, ಕೋ.ವ್ಯಾ., ೧೯೭೭, : *ಕರ್ನಾಟಕ ಶಾಸನಕಲೆ- ಕೆಲವು ಸಂಶೋಧನೆಗಳು*, ಮೈಸೂರು.

೪೮. ರಘುನಾಥಭಟ್ಟ, ಎಚ್.ಆರ್., ೧೯೭೭, : *ಕರ್ನಾಟಕ ಶಾಸನಕಲೆ- ಕೆಲವು ಸಂಶೋಧನೆಗಳು*, ಮೈಸೂರು.

೪೯. ರಾಜಶೇಖರ, ಎಸ್., ೧೯೮೮, : *ಕರ್ನಾಟಕದ ಕಲೆ ಮತ್ತು ವಾಸ್ತುಶಿಲ್ಪ*, ಸುಜಾತ ಪಬ್ಲಿಕೇಶನ್ಸ್, ಧಾರವಾಡ.

೫೦. ರಾಮಚಂದ್ರರಾವ್, ಎಸ್.ಕೆ., ೧೯೬೬, : *ಮೂರ್ತಿಶಿಲ್ಪ ನೆಲೆ ಮತ್ತು ಹಿನ್ನೆಲೆ*, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೫೧. ರಾಜಾರಾಮ ಹೆಗಡೆ ಮತ್ತು ಅಶೋಕ ಶೆಟ್ಟರ, ೨೦೦೦, : *ಮಲೆಕರ್ನಾಟಕದ ಅರಸುಮನೆತನಗಳು*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೫೨. ರಿತ್ತಿ ಶ್ರೀನಿವಾಸ, ೧೯೬೯, : ಮುಳಗುಂದ ನಾಡು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೫೩. ವಸು, ಎಂ.ವಿ., ೨೦೦೧ : ದಕ್ಷಿಣ ಕರ್ನಾಟಕದ ಅರಸುಮನೆತನಗಳು,ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೫೪. ಶಿರೂರ, ಬಿ.ವ್ಹಿ., ೧೯೭೭, : *ಯಲಬುರ್ಗಿಯ ಸಿಂಧರು*, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೫೫. ಶಿವಾನಂದ, ವಿ., ೧೯೭೮, : *ಕಲಬುರ್ಗಿ ಜಿಲ್ಲೆಯ ಶಿಲಾಶಾಸನಗಳು*, ಪ್ರಸಾರಾಂಗ, ಕ.ವಿ.ವಿ., ಧಾರವಾಡ.

೫೬. ಶ್ರೀನಿವಾಸ ಸಿರನೂರಕರ್, ೨೦೦೫, : ವಿಜ್ಞಾನೇಶ್ವರ-ಮಿತಾಕ್ಷರ, ಪ್ರಸಾರಾಂಗ, ಗುಲ್ಬರ್ಗ ವಿಶ್ವವಿದ್ಯಾಲಯ, ಗುಲಬರ್ಗಾ.

೫೭. ಷೇಕ್ ಅಲಿ, ಬಿ.(ಸಂ.), ೧೯೯೭, : *ಕರ್ನಾಟಕ ಚರಿತ್ರೆ*, ಸಂ.೨, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೫೮. ಷೇಕ್ ಅಲಿ, ಬಿ. ಮತ್ತು ರಂಗಸ್ವಾಮಯ್ಯ, ಜಿ.ಆರ್., ೧೯೯೪, : *ದಕ್ಷಿಣ ಭಾರತದ ಇತಿಹಾಸ*, ಅನಂತ ಪ್ರಕಾಶನ, ಮೈಸೂರು.

೫೯. ಸುರೇಶ, ಕೆ.ಎಂ. ಮತ್ತು ಇತರರು, ೨೦೦೧, : *ಕರ್ನಾಟಕ ದೇವಾಲಯ ಕೋಶ* (ಕೊಪ್ಪಳ ಜಿಲ್ಲೆ) ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೬೦. ಸುರೇಶ, ಕೆ.ಎಂ. ಮತ್ತು ಇತರರು, ೧೯೯೯, : *ಕರ್ನಾಟಕ ದೇವಾಲಯ ಕೋಶ* (ಬಳ್ಳಾರಿ ಜಿಲ್ಲೆ) ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೬೧. ಹಂಪ ನಾಗರಾಜಯ್ಯ, ೧೯೯೭, : *ಚಂದ್ರಕೊಡೆ*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೬೨. ಹಂಪ ನಾಗರಾಜಯ್ಯ, ೨೦೦೩, : *ಯಾಪನೀಯ ಸಂಘ*, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೬೩. ಹಾಜವಗೋಳ ಧನವಂತ, ೨೦೦೪, : ಮುಳಗುಂದ ನಾಡು: *ಒಂದು ಅಧ್ಯಯನ*, ಧಾರವಾಡ.

೬೪. ಹಿರೇಮಠ, ಎಸ್.ಎಸ್., ೨೦೦೪, : *ಕಾಳಾಮುಖ ದರ್ಶನ*, ಸಮತಾ ಪ್ರಕಾಶನ, ಹರಪನಹಳ್ಳಿ.

೬೫. ಹಿರೇಮಠ, ಎಸ್.ಎಸ್., ೨೦೦೩, : *ಪಾಶುಪತ ದರ್ಶನ*, ಸಮತಾ ಪ್ರಕಾಶನ, ಹರಪನಹಳ್ಳಿ.

೬೬. ಹಿರೇಮಠ, ಸಿ.ಬಿ., ೧೯೯೫, : *ಕುರುಗೋಡ ಸಿಂಧರು: ಒಂದು ಅಧ್ಯಯನ*, ಸಂಗಣ್ಣನವರು ಅಗಡಿ ಸಂಸ್ಕೃತಿ ಪ್ರತಿಷ್ಠಾನ, ಕೊಪ್ಪಳ.

೬೭. ಹಿರೇಮಠ, ಬಿ.ಆರ್., ೧೯೭೬, : *ವೀರಗಲ್ಲುಗಳು*, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೬೮. ಹಿರೇಮಠ, ಬಿ.ಆರ್., ೧೯೮೬, : *ಶಾಸನಗಳಲ್ಲಿ ಕರ್ನಾಟಕದ ವರ್ತಕರು*, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೬೯. ಹಿರೇಮಠ, ಆರ್.ಸಿ. ಮತ್ತು ಕಲಬುರ್ಗಿ, ಎಂ.ಎಂ., ೧೯೭೪, : *ಕನ್ನಡ ಶಾಸನ ಸಂಪದ*, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೭೦. ಹೆರಂಜೆ ಕೃಷ್ಣಭಟ್ಟ ಮತ್ತು ಶೆಟ್ಟಿ ಎಸ್.ಡಿ., ೨೦೦೦, : ತುಳು ಕರ್ನಾಟಕ ಅರಸುಮನೆತನಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಕನ್ನಡ ನಿಯತಕಾಲಿಕೆಗಳು ಮತ್ತು ಪತ್ರಿಕೆಗಳು :

೧. ಕರ್ನಾಟಕ ಭಾರತಿ
೨. ಸಾಧನೆ
೩. ಮಾನವಿಕ ಕರ್ನಾಟಕ
೪. ವಿದ್ಯಾರ್ಥಿ ಭಾರತಿ
೫. ಸಾಹಿತ್ಯಪರಿಷತ್ ಪತ್ರಿಕೆ
೭. ಜಯಕರ್ನಾಟಕ
೮. ಪ್ರಬುದ್ಧ ಕರ್ನಾಟಕ
೯. ಅಂಕಣ
೧೦. ಬಸವಪಥ

ನಿಘಂಟುಗಳು:

೧. ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು, ಸಂ.೧-೪, ಬೆಂಗಳೂರು : ಕ.ಸಾ.ಪ., ೧೯೭೧-೧೯೭೯.

೨. ಕವಲಿ ಜೆ.ಎ., : ಸಚಿತ್ರ ಕನ್ನಡ ಕಸ್ತೂರಿ ಕೋಶ, ಧಾರವಾಡ : ರಾಮಾಶ್ರಯ ಬುಕ್ ಡಿಪೋ, ೧೯೫೭.

೩. ಮರಿಯಪ್ಪಭಟ್ಟ,ಎಂ.(ಸಂ.), : ಕಿಟ್ಟೆಲ್ಲರ ಕನ್ನಡ-ಇಂಗ್ಲೀಷ್ ನಿಘಂಟು, ಮದ್ರಾಸ್ : ಮದ್ರಾಸ್ ವಿಶ್ವವಿದ್ಯಾಲಯ, ೧೯೭೦.

೪. ಮೈಸೂರು ವಿಶ್ವವಿದ್ಯಾಲಯದ ಇಂಗ್ಲೀಷ್-ಕನ್ನಡ ನಿಘಂಟು. ಮೈಸೂರು : ಮೈಸೂರು ವಿಶ್ವವಿದ್ಯಾಲಯ, ೧೯೬೫.

೫. ವೆಂಕಟಾಚಲಶಾಸ್ತ್ರಿ (ಟಿ.ವಿ.) : ಶ್ರೀವತ್ಸ ನಿಘಂಟು. ಮೈಸೂರು : ಶಾರದಾ ಮಂದಿರ, ೧೯೭೧.

೬. ಸಂಕ್ಷಿಪ್ತ ಕನ್ನಡ ನಿಘಂಟು : ಕನ್ನಡ-ಕನ್ನಡ. ಬೆಂಗಳೂರು : ಕನ್ನಡ ಸಾಹಿತ್ಯ ಪರಿಷತ್ತು, ೧೯೭೫.

English Books :

1. Altekar, A.S., 1965, : *Education in Ancient India,* Nand Kishore and Brothers, Varanasi.
2. Altekar, A.S., 1958, : *State and Government in Ancient India,* Motilal Banarasidas Publishers and Book Sellers, New Delhi.
3. Appadorai, A., 1936, : *Economic Conditions of South India,* (1000-1500). University of Madras, Madras.
4. Basavarahj, K.R., 1966, : *Administrative System Under the Chalukyas of Kalyana,*
5. Bilhana, 1965, : *Vikramankadeva Charitam,* Tr.by. Sures Chandra Banerhji and Amal Kumar Gupta. Calcutta: Sambodhi.
6. Deret, J. 1957, : *The Hoysalas,* Oxford.
7. Desai Dinakar, 1951, : *Mahamandaleshvaras Under the Chalukyas of Kalyani,* Indian Historical Research Institute, Bombay.
8. Desai, P.B., 1970, : *History of Karnataka,* Karnatak University, Dharwad.
9. Desai, P.B., 1957, : *Jainism in South India and Some Jaina Epigraphs,* Gulabchand Hirachand Doshi, Jaina Samskriti Samrakshaka Sangha, Sholapur.
10. Dikshit, G.S., 1964, : *Local Self Government in Medieval Karnataka,* Karnatak University, Dharwad.
11. Fleet, J.F., 1896, : *The Dynasties of the Kanarese Districts,* Bombay.
12. Ganguly Dilipkumar, 1979, : *Aspects of Ancient Indian Administration,* Abhinav, New Delhi.
13. Gerard Foekema, 2003, : *Chalukya Architecture,* Munshiram Manoharlal Publishers, Pvt. Ltd.
14. Ghatapandi, 1977, : *Taxation in Ancient and Medieval Karnatka,* (Unpublished Ph.D. Thesis), K.U.Dharwad.

15. Gopal, B.R., 1981, : *The Chalukyas of Kalyana and the Kalachuries,* Karnatak University, Dharwad.

16. Gopal, B.R., 1982, : *Minor Dynasties of South India: Karnataka,* New Era, Madras.

17. Gurav, R.N., 1969, : *The Kadambas of Goa and Their Inscriptions,* (Unpublished Ph.D. Thesis) K.U.Dharwad.

18. Gururajachar, S., 1974, : *Some Aspects of Economic and Social Life in Karnataka*, Prasaranga, University of Mysore, Mysore.

19. Hiremath, V.R., 1990, : *Religious Conditions During the Period of The Chalukyas of Kalyana,* (Unpublished Ph.D. Thesis), K.U.Dharwad.

20. Ismile, K., 1984, : *Karnataka Temples Their Role in Socio-Economic Life,* New Delhi.

21. Joshi, M.N. & Bebballi, B.S., 2004, : *Manasollasa and Ayurveda,* New Bharatiya book Corporation, New Delhi.

22. Joshi, M.N., 2003, : *Art and Science in Manasollasa*, New Bharatiya book Corporation, New Delhi.

23. Kamat Jyotsna, 1972, : *Studies in Social Life in Karnataka, 10th to 14th Century,*

24. Katkar, E.N., 1982, : *Art and Architecture of the Chalukyas of Kalyana,* (Unpublished Ph.D. Thesis), K.U.Dharwad.

25. Krishnamurari, 1977, : *The Chalukyas of Kalyani,* (973-1200 A.D.), Bombay.

26. Kulkarni, V.S., 1979, : *Historical and Cultural Studies of the Region Around Basavakalyana: Based on Inscriptions,* (Unpublished Ph.D. Thesis), K.U.Dharwad.

27. Kuppuswamy, G.R., 1975, : *Economic Condition in Karnataka,* (973-1336 A.D.), Karnatak University, Dharwad.

28. Mahalingam, T.V., 1967, : *South Indian Polity,* University of Madras, Madras.

29. Murari, K., 1977, : *The Chalukyas of Kalyani,* (From 973-1200 A.D.), Concept Publishing Company, Delhi.

30. Murarilal Nagar (Ed.), 1966, : *Vikramankabhyudayam,* Baroda.

31. Nagaraj Rao, M.S. (Ed.), 1983, : *The Chalukyas of Kalyana,* (Seminar Papers), Mythic Society, Bangalore.

32. Narasimhamurthy, A.V., 1971, : *Sevunas of Devagiri,* Rao and Raghavan, Mysore.

33. Narasimhamurthy, A.V., 1975, : *The Coins of Karnataka,* Geeta Book House, Mysore.

34. Patil, C.B., 1992, : *Temples of Raichur and Bellary Districts,* Directorate of Archaeology and Museums, Mysore.

35. Pattar Iranna, 1990, : *Education in Ancient Karnataka,* (From Early Times to the end of the Chalukyas of Kalyana), (Unpublished Ph.D. Thesis), K.U.Dharwad.

36. Ramarao, M., 1974, : *Karnataka Andhra Relations* (220-1323 A.D.), Dharwad.

37. Ramesh, K.V., 1970, : *History of South Canara,* Karnatak University, Dharwad.

38. Rice, B.L., 1909, : *Mysore and Coorg from the Inscriptions,* London.

39. Ritti Shrinivas, 1973, : *Seunas-The Yadavas of Devagiri,* Karnatak University, Dharwad.

40. Sastri, K.A.N., 1958, : *A History of South India,* Vol.I, Oxford University Press, London.

41. Shama Sastry, R., 1926, : *Abhilashitartha Chintamani of Someswara Deva,* Part-I & II, Government Branch Press, Mysore.

42. Shantakumari, S.L., 1986, : *History of the Agraharas in Karnataka,* New Era Publications, Madras.

43. Sharma, M., 1972, : *Iconography and Sculpture of the Chalukya and Kakatiya Temples,* New Delhi.

44. Settar, S. (Ed.), 1976, : *Archaeological Survey of Mysore Annual Reports: A Study,* Vol.II & III, Dharwad.

45. Shrigondekar, G.K. (Ed.), 1961, : *Manasollasa of King Bholokamalla Somesvara,* Vol-I, Baroda.

46. Shrigondekar, G.K. (Ed.), 1961, : *Manasollasa of King Somesvara,* Vol-III, Oriental Institute, Baroda.

47. Yajadani, G., 1982, : *The Early History of the Deccan,* Motilal Banarasi, Oriental Books Reprint Corporation, New Delhi.

English Chronicles and Journals :

1. Andhrpradesh Government Archaeological Series, No.3.
2. Annual Report of the Mysore Archaeological Department.
3. Indian Antiquary
4. Indian Historical Quarterly.
5. Indian Historical Review.
6. Journal of Indian History.
7. Journal of Oriental Historical Research Society.
8. Journal of the Bombay Branch of the Royal Asiatic Society.
9. Journal of the Karnatak University, Humanities.
10. Journal of the University of Bombay.
11. Mysore Archaeological Reports.
12. Quarterly Journal of the Mythic Society.
13. The Journal of Karnatak University, Social Sciences.